ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೨೭-೨

ಶ್ರೀತ್ರಿಪುರಾರಹಸ್ಯ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದ, ವಿವರಣೆಗಳೊಡನೆ.)

ಮಾಹಾತ್ಮ್ಯಖಂಡ

(ಅಧ್ಯಾಯ ೧-೨೦)

ಅನುವಾದಕ

ಆಸ್ಥಾನ ಮಹಾವಿದ್ವಾನ್,

ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,

ಸಾಹಿತ್ಯವಿದ್ವಾನ್

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

೧೯೪೬

ಶ್ರೀ ಜಯಚಾಮರಾಜೇಂದ್ರಗ್ರಂಥರತ್ನಮಾಲಾ

ಪುಷ್ಪರತ್ನಸಂಖ್ಯಾ ೨೭-೨

ಶ್ರೀತ್ರಿಪುರಾರಹಸ್ಯ

(ಸಂಸ್ಕೃತಮೂಲ, ಕನ್ನಡದಲ್ಲಿ ಅರ್ಥಾನುವಾದ, ವಿವರಣೆಗಳೊಡನೆ.)

ಮಾಹಾತ್ಮ್ಯಖಂಡ

(ಅಧ್ಯಾಯ ೧-೨೦)

ಅನುವಾದಕ

ಆಸ್ಥಾನ ಮಹಾವಿದ್ವಾನ್,

ಎಡತೊರೆ ಚಂದ್ರಶೇಖರಶಾಸ್ತ್ರೀ, ಎಂ.ಎ.,

ಸಾಹಿತ್ಯವಿದ್ವಾನ್

ಮೈಸೂರು

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್

೧೯೪೭

Printed by T. S. Raghavachar, Manager,
Sree Panchacharya Electric Press
Sayaji Rao Road, Mysore

For The Palace Mysore.

ಮುನ್ನುಡಿ

॥ ಶ್ರೀಗಣೇಶಶಾರದಾಗುರುಭ್ಯೋ ನಮಃ ॥

ಬೆಳಕು ಕತ್ತಲೆಯನ್ನು ನಿವಾರಿಸುತ್ತದೆ. ಕತ್ತಲೆಯಲ್ಲಿರುವವರು ಬೆಳಕನ್ನು ಅಪೇಕ್ಷಿಸುವುದು ಸ್ವಾಭಾವಿಕವೂ ಅನಿವಾರ್ಯವೂ ಆಗಿದೆ. ಏಕೆಂದರೆ ಪದಾರ್ಥಗಳನ್ನು ತಿಳಿಯಲು ಕತ್ತಲೆಯು ಅಡ್ಡಿಯಾಗಿರುತ್ತದೆ. ಬೆಳಕು ತಿಳಿವಳಿಕೆಗೆ ಸಹಾಯ ಮಾಡುತ್ತದೆ. ತಿಳಿವಳಿಕೆಯು ಅಜ್ಞಾನವೆಂಬ ಕತ್ತಲೆಯನ್ನು ನಿವಾರಿಸುತ್ತದೆ. ಆದುದರಿಂದಲೇ ವಿವೇಕಿಗಳು "ತಮಸೋ ಮಾ ಜ್ಯೋತಿರ್ಗಮಯ" ಎಂದರೆ, ನನ್ನನ್ನು ಕತ್ತಲೆಯಿಂದ ಬೆಳಕಿಗೆ ನಡೆಯಿಸು, ಅಜ್ಞಾನದಿಂದ ತಿಳಿವಳಿಕೆಯ ತನಿಬೆಳಕಿಗೆ ನನ್ನನ್ನು ನಡೆಯಿಸು, ಎಂದು ಅಂತರಾತ್ಮನಲ್ಲಿ ಪರಮಾತ್ಮನನ್ನು ಕುರಿತು ಪ್ರಾರ್ಥಿಸುತ್ತಿರುತ್ತಾರೆ. ಈ ಜಿಜ್ಞಾಸೆಯೇ, ಈ ತತ್ವಜ್ಞಾನದ ವಿಷಯದಲ್ಲಿ ಮಾನವರಿಗೆ ಇರುವ ಬಯಕೆಯೇ, ಉತ್ತಮಧರ್ಮವು. ಈ ಅಂಶವನ್ನು "ಅಯಂ ಹಿ ಪರಮೋ ಧರ್ಮಃ ಯದ್ಯೋಗೇನಾತ್ಮದರ್ಶನಂ" ಎಂದರೆ ಯೋಗಾಭ್ಯಾಸದಿಂದ ಆತ್ಮತತ್ವದ ಸ್ವರೂಪವನ್ನು ತಿಳಿಯುವುದು ಮಾನವನು ಮಾಡಬೇಕಾಗಿರುವ ಉತ್ತಮಧರ್ಮವಾಗಿದೆ, ಎಂಬ ಸೂಕ್ತಿಯಲ್ಲಿ ಹೇಳಿದೆ. ತ್ರಿಪುರಾರಹಸ್ಯವು ಆತ್ಮ ದರ್ಶನಕ್ಕೆ ಉತ್ತಮಸಾಧನವಾದ ಗ್ರಂಥವಾಗಿರುತ್ತದೆ. ಇದರಲ್ಲಿ ಆತ್ಮಸ್ವರೂಪವನ್ನು, ಎಲ್ಲರಲ್ಲೂ ತೋರಿಬರುತ್ತಿರುವ ಚಿತ್‌ಜ್ಯೋತಿಯ ಸ್ವರೂಪವನ್ನು, ಸಚ್ಚಿದಾನಂದ ಸ್ವಭಾವವನ್ನು, ಚೆನ್ನಾಗಿ ವಿವರಿಸಿರುತ್ತದೆ. ಇದರ ವ್ಯಾಸಂಗದಿಂದ ಮಾನವನ ಮೊದಲನೆಯದೂ ಉತ್ತಮವೂ ಆದ ಬಯಕೆಯು, ಮನೋರಥವು, ಪೂರ್ಣವಾಗುತ್ತದೆ. ತ್ರಿಪುರಾತತ್ವವು ಈ ಸಚ್ಚಿದಾನಂದ ಚಿತ್‌ಜ್ಯೋತೀರೂಪವಾದುದೆಂದು ವಿವರಿಸಿದೆ.

ಇಂತಹ ಪುರುಷಾರ್ಥಸಾಧನೆಗೆ ಬೇಕಾದ ಗ್ರಂಥವನ್ನು ಜನಸಾಮಾನ್ಯದ ಉಪಯೋಗಕ್ಕೆ ದೊರೆಯುವಂತೆ ಮಾಡಿ, ಜನತೆಯ ಸಂಸ್ಕೃತಿಯನ್ನು ಮೇಲ್ಪಡಿಸಿ

ಸಹಾಯಮಾಡಲು, ಕನ್ನಡ ಅರ್ಥಾನುವಾದದೊಡನೆ ಮುದ್ರಿಸಿ ಪ್ರಕಟಿಸಬೇಕೆಂದು ನಮ್ಮನ್ನಾಳುತ್ತಿರುವ ಮಹಾಪ್ರಭುಗಳಾದ **ಶ್ರೀಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಜಿ.ಸಿ.ಬಿ., ಜಿ.ಸಿ.ಎಸ್.ಐ.,** ಮಹಾಸ್ವಾಮಿಯವರು ಮಾಡಿರುವ ಉದಾರವಾದ ಅಪ್ಪಣೆಯಂತೆ, ಪ್ರಕಟಿಸಲಾಗಿದೆ. ಈ ಮಹೋಪಕಾರಕ್ಕಾಗಿ ಆ ಮಹಾನುಭಾವರನ್ನು ಮನಃಪೂರ್ವಕವಾಗಿ ವಂದಿಸಿ, ಅವರ ಘನತರವಾದ ಈ ಸದುದ್ದೇಶವು ನೆರವೇರುತ್ತಿರಲೆಂದು ಸಕಲ ಚಿದ್ರೂಪಿಣಿಯಾಗಿರುವ ತ್ರಿಪುರಾ ಪರಮೇಶ್ವರಿಯನ್ನು ಭಕ್ತಿಪೂರ್ವಕವಾಗಿ ಪ್ರಾರ್ಥಿಸುತ್ತಿರುತ್ತೇನೆ.

ಶ್ರೀ ವ್ಯಯಸಂವತ್ಸರದ
ಚೈತ್ರ ಶುಕ್ಲ ಪೂರ್ಣಿಮಾ
ಬುಧವಾರ, 16—4—1946

ಎಡತೊರೆ ದೇವಯ್ಯದೀಕ್ಷಿತರ ಮಗ
ಚಂದ್ರಶೇಖರಶಾಸ್ತ್ರೀ

ಶ್ರೀತ್ರಿಪುರಾರಹಸ್ಯದ ಮಾಹಾತ್ಮ್ಯಖಂಡದಲ್ಲಿರುವ ವಿಷಯಗಳ ಸೂಚಿಕೆ

ಅಧ್ಯಾಯ | ವಿಷಯ | ಪುಟಸಂಖ್ಯಾ

ಅಧ್ಯಾಯ	ವಿಷಯ	ಪುಟಸಂಖ್ಯಾ

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ಪ್ರಥಮೋಽಧ್ಯಾಯಃ ॥

ಮೊದಲನೆಯ ಅಧ್ಯಾಯವು

ಓಂ ನಮಃ ಕಾರಣಾನಂದ ಹೃದ್ಬೀಜಾಕಾಶ ಗಾತ್ರಿಣೇ ।
ಯಲ್ಲೀಲಾ ಲೇಶ ಲಸಿತಾ ಲೋಕಾ ಲೋಕಾಂಡ ರೇಣವಃ ॥೧॥

॥ ಶ್ರೀಗಣೇಶಶಾರದಾಗುರುಭ್ಯೋ ನಮಃ ॥

ಗಣೇಶಂ ವಿಘ್ನನಾಶಾಯ ವಾಣೀಂ ವಾಗರ್ಥಬುದ್ಧಯೇ ।
ಗುರುಂ ಗೂಢಾರ್ಥಭಾನಾರ್ಥಂ ಪ್ರಣಮಾಮಿ ಸದಾ ಮುದಾ ॥

ನಾನು ಪ್ರಾರಂಭಿಸಿರುವ ಒಳ್ಳೆಯ ಕೆಲಸಕ್ಕೆ ಶ್ರೇಯಾಂಸಿ ಬಹುವಿಘ್ನಾನಿ, ಎಂಬಂತೆ ಬರಬಹುದಾದ ಅಡ್ಡಿಗಳ ಪರಿಹಾರಕ್ಕೋಸ್ಕರ ಗಣಪತಿಯನ್ನೂ, ಮೂಲದಲ್ಲಿರುವ ಪದವಾಕ್ಯಗಳ ಸರಿಯಾದ ಅರ್ಥದ ತಿಳಿವಳಿಕೆಗಾಗಿ ವಿದ್ಯಾಭಿಮಾನಿ ದೇವತೆಯಾದ ಸರಸ್ವತಿಯನ್ನೂ, ಈ ಗ್ರಂಥದಲ್ಲಿರಬಹುದಾದ ರಹಸ್ಯವಾದ ಅರ್ಥಗಳೂ ಸ್ಫುರಿಸುವಂತಾಗಲೆಂದು ಗುರುದೇವನನ್ನೂ, ಸಂತೋಷಭಕ್ತಿಗಳೊಡನೆ ಯಾವಾಗಲೂ ನಮಸ್ಕರಿಸುತ್ತಿರುತ್ತೇನೆ.

ಅಧ್ಯಾಯ ಸಾರಾಂಶ—ದಕ್ಷಿಣ ದಿಕ್ಕಿನಲ್ಲಿರುವ ಮಲಯಪರ್ವತದ ವರ್ಣನೆಯು, ಅಲ್ಲಿನ ತಪೋವನದಲ್ಲಿ ಪರಶುರಾಮನ ಆಶ್ರಮವು. ಆಶ್ರಮದಲ್ಲಿ ಕುಳಿತಿರುವ ಪರಶುರಾಮನನ್ನು ಅವನ ಪ್ರಿಯಶಿಷ್ಯನಾದ ಸುಮೇಧನು, ಸ್ಥಿರಸುಖವು ಯಾವ ಕೆಲಸವನ್ನು ಮಾಡುವುದರಿಂದ ಉಂಟಾಗುತ್ತದೆ? ಎಂದು ಪ್ರಶ್ನಿಸುವುದು. ಹಾಗೆ ಶ್ರೇಯಸ್ಸಾಧನವನ್ನು ತಿಳಿಯಲಿಚ್ಛೆಯಿಂದ ಕೇಳಿದ ಪರಶುರಾಮನಿಗೆ ಅವನ ಗುರುವಾದ ದತ್ತಾತ್ರೇಯನ ಮಾತಿನ ಸ್ಮರಣೆಯು ಬರುವುದು. ಅನಂತರದಲ್ಲಿ ಸುಮೇಧನಿಗೆ ಪರಶುರಾಮನು ತ್ರಿಪುರಾರಹಸ್ಯದ ದೀಕ್ಷೆಯನ್ನು ಕೊಡುವುದು. ದೀಕ್ಷಾಬದ್ಧನಾದ ಸುಮೇಧನು ಭ್ರಾಮರೀದೇವಿಯಿರುವ ಶ್ರೀಶೈಲಕ್ಕೆ ಹೋಗಿ ಅಲ್ಲಿ ಆಶ್ರಮವನ್ನು ಕಟ್ಟಿಕೊಂಡು ಹಣ್ಣುಹಂಪಲುಗಳನ್ನೇ ತಿನ್ನುತ್ತಾ ತಪಸ್ಸನ್ನು ಮಾಡುತ್ತಾ ವಾಸಮಾಡುವುದು. ಅನಂತರದಲ್ಲಿ ಸ್ವಪ್ನದಲ್ಲಿ ಬಾಲಾಂಬಿಕೆಯ

ಯದಕ್ಷರಂ ಪರಂ ಬ್ರಹ್ಮ ಜಗನ್ಮಾಲಾ ಮಣಿಪ್ರಭಂ ।
ಸರ್ವಂ ಸರ್ವಾತ್ಮಕಂ ಸರ್ವಸಾರಂ ಸರ್ವಪದಾಶ್ರಯಂ ॥೨॥

ಯದೇವಾಶೇಷ ಸಂಸಾರದಲಬೀಜ ಶಿವಾತ್ಮಕಂ ।
ಶಿವರೂಪಂ ಶಕ್ತಿರೂಪಂ ಬ್ರಹ್ಮರೂಪಸ್ವರೂಪಕಂ ॥೩॥

ತ್ರಿಪುರಾಂ ಪರಮೇಶಾನೀಂ ಮಹಾಪ್ರಲಯಸಾಕ್ಷಿಣೀಂ ।
ದಗ್ಧಕಾಮೋಜ್ಜೀವನಾಯ ಸುಧಾಸಾರಾಂ ನಮಾಮ್ಯಹಂ ॥೪॥

ಸ್ತೋತ್ರದಿಂದ ಆ ದೇವಿಯು ಮೆಚ್ಚಿ ಅವನಿಗೆ ವರದಾನಮಾಡುವುದು. ಗುರು ಸಮೀಪಕ್ಕೆ ಹೋಗೆಂದು ಅಪ್ಪಣೆಮಾಡುವುದು. ಅನಂತರದಲ್ಲಿ ಎಚ್ಚೆತ್ತ ಸುಮೇಧನು ಸ್ವಪ್ನವಿಷಯದಲ್ಲಿ ಅಪನಂಬಿಕೆಪಡುವುದು. ಆಗ ಆಕಾಶವಾಣಿಯು ಸ್ವಪ್ನವೃತ್ತಾಂತ ವನ್ನು ನಿಜವೆಂದು ಹೇಳುವುದು. ಸಂತೋಷಗೊಂಡ ಗುರುವು ರಹಸ್ಯದಿಂದ ಕೂಡಿದ ಶ್ರೀವಿದ್ಯಾದೀಕ್ಷೆಯನ್ನು ಅವನಿಗೆ ಕೊಡುವುದು. ಗುರುವು ಶಿಷ್ಯನನ್ನು ದೇವೀಮಾಹಾತ್ಮ್ಯೆಯನ್ನು ಗ್ರಂಥರೂಪದಿಂದ ಬರೆ, ಎಂದು ಅಪ್ಪಣೆಮಾಡುವುದು. ಅನಂತರದಲ್ಲಿ ಹಾರೀತಾಯನನು ಹಾಲಾಸ್ಯನಗರದಲ್ಲಿರುವ ಶ್ರೀ ಮೀನಾಕ್ಷಿಯ ಸಮೀಪಕ್ಕೆ ಹೋಗುವುದು. ಅಲ್ಲಿ ನಿಯಮಬದ್ಧನಾಗಿ ಅಂಬಿಕಾಸೇವಾತತ್ಪರನಾದ ಅವನಿಗೆ ಮನಸ್ಸಿನಲ್ಲಿ ನಾರದರ ದರ್ಶನವಾಗುವುದು. ಸಮಾಧಿಗತನಾದ ನಾನು ಹೇಗೆ ನಿನ್ನನ್ನು ಹೃದಯ ಮಧ್ಯದಲ್ಲಿ ನೋಡಿದೆನೆಂದು ನಾರದನನ್ನು ಕುರಿತು ಸುಮೇಧನ ಪ್ರಶ್ನೆ, ನಗುತ್ತಾ ನಾರದನು ಉತ್ತರವನ್ನು ಹೇಳಲು ಪ್ರಾರಂಭಿಸುವುದು.

ಈ ಬ್ರಹ್ಮಾಂಡರೇಣುಗಳು ಯಾವ ಪರಶಿವನ ಅಲ್ಪವಾದ ಲೀಲೆಯಿಂದ ಉದ್ಭವಿಸುವುವೋ, ಅಂತಹ ಪ್ರಸಿದ್ಧನಾದ ಸಕಲಕ್ಕೂ ಕಾರಣನಾದ ಜೀವರ ದಹರಾ ಕಾಶದಲ್ಲಿ ಉಪಲಭ್ಯಮಾನವಾದ ಸ್ವರೂಪವುಳ್ಳ, ಆನಂದಸ್ವರೂಪನೂ, ನಿರ್ವಿಕಾರನೂ ಮತ್ತು ಪ್ರಣವಸ್ವರೂಪನೂ ಆದ ಪರಮೇಶ್ವರನಿಗೆ ನಮಸ್ಕಾರವು. ॥೧॥

ಜಗತ್ತು ಎಂಬ ಮಣಿಗಳಿಂದ ಆಗಿರುವ ಮಾಲೆಯಲ್ಲಿ ಪದಕಮಣಿಯಂತೆ ಕಾಂತಿವಿಶಿಷ್ಟನೂ, ಅಕ್ಷರನೂ, ಸರ್ವಸ್ವರೂಪನೂ, ಎಲ್ಲಕ್ಕೂ ಸ್ವರೂಪವನ್ನು ಕೊಡು ವವನೂ, ಎಲ್ಲದರ ಸಾರಭೂತನೂ, ಸಕಲ ಸ್ಥಾನಗಳಿಗೂ ಆಶ್ರಯಭೂತನೂ ಆದ ಪರಬ್ರಹ್ಮಸ್ವರೂಪಳಾದ ದೇವಿಯನ್ನು ನಮಸ್ಕರಿಸುತ್ತೇನೆ. ॥೨॥

ಯಾವಳು ಸಂಸಾರವೆಂಬ ದಳಕ್ಕೆ ಬೀಜಳಾಗಿ ಮಂಗಳರೂಪಳಾಗಿರುವಳೋ, ಯಾವಳು ಶಿವರೂಪಳೂ, ಶಕ್ತಿರೂಪಳೂ, ಬ್ರಹ್ಮಸ್ವರೂಪಳೂ ಆಗಿರುವಳೋ

ಅಸ್ತಿ ದಕ್ಷಿಣ ದಿಗ್ಭಾಗೇ ಮಲಯಾದ್ರಿರ್ಮಹೋಚ್ಛ್ರಯಃ ।
ಶೃಂಗ ಸಂಘಾತ ಸಂಕ್ರಾಂತ ಸಪ್ತಸಪ್ತಿ ಮಹಾಪಥಃ ॥೫॥

ಅನೇಕ ಶೃಂಗ ಲೀಲಾಽತ್ತ ಮಹಾಪುರುಷ ವೈಭವಃ ।
ಸ್ವಾಂಗವ್ಯಾಪ್ತಿ ಪರಾಕ್ಷಿಪ್ತ ಮಹಾಮೇರು ಮಹೀತ್ವಕಃ ॥೬॥

ನಾನಾವೃಕ್ಷಾಂಕುರಪ್ರಾಂತ ವಿಶ್ರಾಂತ ಘನಮಂಡಲಃ ।
ಮೃದುಪ್ರವಾಲವಿಲಸಚ್ಛವಿ ಕ್ಷಿಪ್ತಾರುಣಪ್ರಭಃ ॥೭॥

ಅಮರೀ ಮೃದುಗೀತಾತ್ತ ಭೃಂಗೀರವ ಸಮಶ್ರುತಿಃ ।
ಶ್ರೀಗಂಧ ಗಂಧ ಸಂರಂಭ ಜಿತನಾಕ್ಯಂಗ ಸೌರಭಃ ॥೮॥

ಅಂತಹ ಮಹಾಪ್ರಲಯಕ್ಕೆ ಸಾಕ್ಷಿಣಿಯೂ ಪರಮೇಶ್ವರಿಯೂ, ಆಗಿರುವ, ರುದ್ರನಿಂದ ದಹಿಸಲ್ಪಟ್ಟ ಕಾಮನ ಪುನಃ ಉಜ್ಜೀವನದಲ್ಲಿ ಅಮೃತದಂತೆ ಜೀವಪ್ರದಳೂ ಆದ, ತ್ರಿಪುರಾಂಬಿಕೆಯನ್ನು ನಾನು ನಮಸ್ಕರಿಸುತ್ತೇನೆ. ||೩-೪||

ಬಹಳ ಎತ್ತರವಾಗಿರುವ ತನ್ನ ಶಿಖರಗಳ ಸಮೂಹದಿಂದ ಸೂರ್ಯನ ಮಾರ್ಗವನ್ನೂ ವ್ಯಾಪಿಸಿರುವ, ಬಹು ಎತ್ತರವಾದ ಶಿಖರಗಳುಳ್ಳ ಮಲಯ ಪರ್ವತವು ದಕ್ಷಿಣದಿಕ್ಕಿನಲ್ಲಿರುತ್ತದೆ. ||೫||

ಬಹು ಶಿಖರಗಳಿಂದ ಕೂಡಿರುವ, ಮಹಾಪುರುಷನ ಮಾಹಾತ್ಮ್ಯವನ್ನು ನೋಡಿದವರಿಗೆ ತೋರಿಸುತ್ತಿರುವ, ತನ್ನ ಶರೀರದ ಸಂಪೂರ್ಣವಾದ ವ್ಯಾಪ್ತಿಯಿಂದ ಮಹಾ ಮೇರುಪರ್ವತದ ಭೂಮಿಯನ್ನೂ ತಿರಸ್ಕರಿಸುತ್ತಿರುವ ಮಲಯಾದ್ರಿಯು ಉನ್ನತವಾಗಿರುತ್ತದೆ. ||೬||

ಅನೇಕವಾದ ಮರಗಳ ಬುಡದಲ್ಲಿ ಯಾವಾಗಲೂ ಆಶ್ರಯಿಸಿರುವ ಮೇಘ ಸಮೂಹಗಳನ್ನುಳ್ಳ, ಮೃದುವಾಗಿರುವ ಚಿಗುರಿನ ಸೊಗಸಾದ ಕಾಂತಿಯಿಂದ ತಿರಸ್ಕರಿಸಲ್ಪಟ್ಟ ಅರುಣನ ಕಾಂತಿಯುಳ್ಳ, ಮಲಯ ಪರ್ವತವು ಕಂಗೊಳಿಸುತ್ತದೆ. ಎಂದರೆ ಮಲಯ ಪರ್ವತದಲ್ಲಿ ಎಲ್ಲ ಕಡೆಯಲ್ಲಿಯೂ ದೊಡ್ಡ ವೃಕ್ಷಗಳು ಬೆಳದಿವೆ. ಅವುಗಳೆಲ್ಲವೂ ಚಿಗುರಿ ನೋಡಲು ಪರ್ವತ ಪ್ರದೇಶವೆಲ್ಲವೂ ಕೆಂಪುಚ್ಛಾಯೆಯಿಂದ ಕೂಡಿರುವಂತಿದೆ. ||೭||

ದೇವಕನ್ಯೆಯರ ಮೃದುವಾದ ಗಾನದಿಂದಲೂ, ಮತ್ತು ದುಂಬಿಗಳ ಧ್ವನಿ ಎಂಬ ಹೊಂದಿಕೆಯುಳ್ಳ ಶ್ರುತಿಯಿಂದಲೂ ಕೂಡಿರುವ, ಪರ್ವತದ ಎಲ್ಲೆಡೆಯಲ್ಲೂ

ಏಲಾಲತಾ ಪರಿಮಲ ವಿಲಸದ್ಬಾಲ ಮಾರುತಃ ।
ಅನೇಕಪದ್ಮಿನೀ ಫುಲ್ಲ ಪದ್ಮಸಂಸ್ಥಿತ ಹಂಸಕಃ ॥೯॥

ಪ್ರಾವೃಡ್ ಜಲದ ಸಂಸ್ಪರ್ಧಿ ಗಂಧಸಿಂಧುರ ಮಂಡಲಃ ।
ಭಿನ್ನ ಸಿಂಧುರ ದಾನೋದ್ಯದ್ವಾಸನಾ ಭರಿತಾಂ ತರಃ ॥೧೦॥

ಸಿಂಹ ವ್ಯಾಘ್ರ ವರಾಹೌಘ ಶೋಭಾಲಸ ದಧಿತ್ಯಕಃ ।
ವಿಸ್ತೀರ್ಣ ವನಖಂಡಾಂತ ರಾಶ್ರಮೋದ್ಯದುಪತ್ಯಕಃ ॥೧೧॥

ತಾಪಸಾಂತೇವಾಸಿ ವೇದಘೋಷ ಘುಂಘುಮಿತಾಂತರಃ ।
ಹುತಗವ್ಯ ಘೃತಾಮೋದ ಪರಿಬೃಂಹಿತ ಮಾರುತಃ ॥೧೨॥

ಶ್ರೀಗಂಧದ ಮರಗಳು ಬೆಳದಿರುತ್ತವೆ. ಅವುಗಳಿಂದ ಸುಗಂಧವು ಹೊರಹೊರಡುತ್ತಿದೆ. ಆ ಸುವಾಸನೆಯಿಂದ ಮಲಯ ಪರ್ವತವು ದೇವಕನ್ಯೆಯರ ಅಂಗದಸೌರಭವನ್ನು ಅಲ್ಲಗಳೆಯುತ್ತಾ ಪ್ರಕಾಶಿಸುತ್ತಿದೆ. ॥೮॥

ಪರ್ವತದಲ್ಲಿ ಏಲಕ್ಕಿಗಿಡಗಳು ಬೆಳೆದು ಎಲ್ಲೆಡೆಯಲ್ಲಿಯೂ ಸುಗಂಧವನ್ನು ಬೀರುತ್ತವೆ. ಆ ಸುಗಂಧದಿಂದ ಯುಕ್ತವಾದ ವಾಯುವು ನಿದಾನವಾಗಿ ಬೀಸುತ್ತಾ ಮನಸ್ಸಿಗೆ ಆಹ್ಲಾದಕರವಾಗಿದೆ. ಮತ್ತು ಪದ್ಮಸರೋವರಗಳಲ್ಲಿ ಪದ್ಮಗಳೆಲ್ಲವೂ ಅರಳಿಕಂಗೊಳಿಸುತ್ತವೆ. ಅವುಗಳ ಸಮೀಪದಲ್ಲಿ ಹಂಸಗಳು ಕ್ರೀಡಿಸುತ್ತವೆ. ಇವುಗಳಿಂದ ಕೂಡಿರುವ ಮಲಯ ಪರ್ವತವು ದಕ್ಷಿಣದಿಕ್ಕಿನಲ್ಲಿ ಇರುತ್ತದೆ. ॥೯॥

ಮಲಯ ಪರ್ವತದಲ್ಲಿ ವರ್ಷಋತುವಿನ ಮೇಘದಂತೆ ಮದಿಸಿದ ಸಲಗಗಳಿಂದ ಕೂಡಿದ ಆನೆಗಳ ಸಮೂಹವು ಎಲ್ಲೆಲ್ಲಿಯೂ ಗುಂಪು ಗುಂಪಾಗಿರುತ್ತದೆ. ಅಂತಹ ಸಲಗಗಳ ಗಂಡಸ್ಥಲದಿಂದ ಹರಿಯುವ ಮದೋದಕದ ಸೌರಭ್ಯದಿಂದ ಪರ್ವತಗಳ ಮಧ್ಯಪ್ರದೇಶಗಳೆಲ್ಲವೂ ವ್ಯಾಪಿಸಿರುತ್ತದೆ. ॥೧೦॥

ಮಲಯಾದ್ರಿಯ ಮೇಲುಭಾಗದಲ್ಲಿ ಸಿಂಹಗಳೂ, ಹುಲಿಗಳೂ, ಮತ್ತು ಕಾಡುಹಂದಿಗಳೂ, ಗುಂಪು ಗುಂಪಾಗಿ ಯಾವಾಗಲೂ ಇರುತ್ತವೆ. ಕೆಳಭಾಗದಲ್ಲಿ ವಿಶಾಲವಾದ ಕಾಡುಗಳೂ ಅವುಗಳಲ್ಲಿ ಋಷಿಗಳ ಆಶ್ರಮಗಳೂ ಇವೆ. ॥೧೧॥

ಋಷ್ಯಾಶ್ರಮಗಳಲ್ಲಿ ಋಷಿ ಶಿಷ್ಯರು ಯಾವಾಗಲೂ ವೇದಘೋಷವನ್ನು ಮಾಡುತ್ತಿರುವರು. ಅವರ ಧ್ವನಿಯು ಎಲ್ಲೆಡೆಯಲ್ಲಿಯೂ ಪ್ರಸರಿಸಿರುವುದರಿಂದ

ವಾಯುಕಂಪಿತ ಶಾಖಾಗ್ರ ಬದ್ಧ ಚೀರ ಪತಾಕಕಃ ।
ಕ್ವಚಿತ್ತು ತರುಮೂಲೇಷು ಸುಖಾಸನ ಸಮಾಶ್ರಯಾಃ ॥೧೩॥

ತಪಸ್ವಿನೋ ಧ್ಯಾನಪರಾ ಶ್ಚಿತ್ರಾರ್ಪಿತ ನರಾ ಇವ ।
ಕ್ವಚಿದ್ಬ್ರಹ್ಮ ಪರಂ ಜಪ್ಯಂ ಜಪಂತೋ ಬ್ರಹ್ಮವಾದಿನಃ ॥೧೪॥

ಕ್ವಚಿದಗ್ನೀನ್ಹ್ವಯಮಾನಾ ನಿತ್ಯ ನೈಮಿತ್ತಿಕ ಕ್ರಮೈಃ ।
ಕ್ವಚಿದಧ್ಯಾಪಯಾಮಾಸು ರ್ವೇದಾನ್ವಿಪ್ರಾರ್ಭಕಾ ನ್ಬುಧಾಃ ॥೧೫॥

ಕ್ವಚಿತ್ಸಭಾಯಾಂ ಶಾಸ್ತ್ರೇಷು ಮೀಮಾಂಸಂತೇ ಪರಸ್ಪರಂ ।
ಕ್ವಚಿತ್ಪ್ರವಚನಂ ಚಕ್ರುಃ ಪುರಾಣಾನಾಂ ಕಥಾವಿಧಃ ॥೧೬॥

ಪ್ರತಿಧ್ವನಿತವಾಗುತ್ತಿರುತ್ತದೆ. ಆಶ್ರಮಸ್ಥರಾದ ಋಷಿಗಳು ಯಾವಾಗಲೂ ಹವನ ಹೋಮಾದಿಗಳನ್ನು ಮಾಡುತ್ತಿರುವುದರಿಂದ ಮಾರುತವು ಹೋಮದ್ರವ್ಯಗಳ ಪರಿಮಳಗಳಿಂದ ಕೂಡಿ ಬೀಸುತ್ತಿರುತ್ತದೆ. ಪರ್ವತದಲ್ಲೆಲ್ಲಾ ಆಶ್ರಮಗಳೂ, ಆಶ್ರಮಗಳಲ್ಲಿ ಋಷಿಗಳೂ, ವಾಸವಾಗಿರುವುದರಿಂದ ಸ್ನಾನಾದಿಗಳನ್ನು ಮಾಡಿ ಮಡಿಗಾಗಿ ಒಣಗಲು ನಾರುಮಡಿಗಳನ್ನು ಮರದ ಕೊಂಬೆಗಳಿಗೆ ಕಟ್ಟಿರುತ್ತಾರೆ. ಅವು ಗಾಳಿಯಿಂದ ಅಲ್ಲಾಡಿಸಲ್ಪಟ್ಟು ಬಾವುಟಗಳಂತೆ ಕಂಗೊಳಿಸುತ್ತವೆ. ॥೧೨॥

ಒಂದುಕಡೆ ಮರಗಳ ಬುಡದಲ್ಲಿ ದೇವರಧ್ಯಾನಾಸಕ್ತರಾದ ತಪಸ್ವಿಗಳು ಸುಖಾಸೀನರಾಗಿ ಧ್ಯಾನಮಾಡುತ್ತಾ ಚಿತ್ರಗಳಲ್ಲಿ ಬರೆದಿರುವ ಮನುಷ್ಯರಂತೆ ಶೋಭಿಸುತ್ತಾ ಇರುತ್ತಾರೆ. ॥೧೩॥

ಒಂದುಕಡೆ ವೇದಾಂತಿಗಳು ಪರಬ್ರಹ್ಮಸಂಬಂಧವಾದ ಮಂತ್ರಗಳ ಜಪಗಳನ್ನು ಮಾಡುತ್ತಿದಾರೆ. ಒಂದುಕಡೆ ಋಷಿಗಳು ನಿತ್ಯನೈಮಿತ್ತಿಕ ಕರ್ಮಗಳಲ್ಲಿ ಅಗ್ನಿಯನ್ನು ಆಹ್ವಾನಿಸುತ್ತಿದಾರೆ. ಇನ್ನೊಂದುಕಡೆ ಪಂಡಿತರು ಬ್ರಾಹ್ಮಣ ಕುಮಾರರಿಗೆ ವೇದಾಧ್ಯಯನ ಮಾಡಿಸುತ್ತಿದಾರೆ. ಮತ್ತೊಂದುಕಡೆ ವಿದ್ವಾಂಸರು ಸಭೆಯಲ್ಲಿ ಶಾಸ್ತ್ರಗಳ ವಿಷಯಗಳನ್ನು ಪರಸ್ಪರವಾಗಿ ಚರ್ಚಿಸುತ್ತಿದಾರೆ. ಮಗುದೊಂದುಕಡೆ ಕಥೆಯನ್ನು ಬಲ್ಲ ಪೌರಾಣಿಕರು ಇತರರಿಗೆ ಪುರಾಣವನ್ನು ಹೇಳುತ್ತಿದಾರೆ. ॥೧೪-೧೫-೧೬॥

ಏವಂ ವಿಧೇಽದ್ರಿ ಪ್ರವರೇ ಸರ್ವರ್ತುಗುಣಭೂಷಿತೇ ।
ಪ್ರತ್ಯಗ್ಭಾಗೇ ವಿವಿಕ್ತಾಯಾಂ ಭುವಿ ಕಾಸಾರ ರೋಧಸಿ ॥೧೭॥

ತೃಣಪರ್ಣಚಯೋಽದಂ ಚತ್ಕುಟೀ ಮಧ್ಯ ಮಹೀತಲೇ ।
ವಿಷ್ಟರೇ ಸುಖಮಾಸೀನಃ ಕಾರ್ಷ್ಣ ಸಾರಂಗಸಂಭವೇ ॥೧೮॥

ಕರ್ಪೂರ ಗೌರ ಸರ್ವಾಂಗಃ ಸ್ವಚ್ಛ ವಸ್ತ್ರೋಪವೀತಕಃ ।
ಭಸ್ಮೋದ್ಧೂಲಿತ ಸರ್ವಾಂಗಃ ಕಾಲಶೋಭಿ ತ್ರಿಪುಂಡ್ರಕಃ ॥೧೯॥

ಕೃತನಿತ್ಯಕ್ರಿಯಃ ಶಾಂತೋ ಜಾಮದಗ್ನ್ಯಃ ಶುಭೇಕ್ಷಣಃ ।
ಯಃ ಸಾಕ್ಷಾದ್ದೇವದೇವಸ್ಯ ವಿಷ್ಣೋರಂಶ ಸಮುದ್ಭವಃ ॥೨೦॥

ರಾಮಃ ಸರ್ವಜನಾ ರಾಮಃ ಸಾಕ್ಷಾತ್ಪಶುಪತೇಃ ಪ್ರಿಯಃ ।
ವಿಷ್ಣೋ ರ್ದತ್ತಾತ್ರೇಯಮೂರ್ತೇಃ ಸೇವಾ ಲಬ್ಧಾತ್ಮವೈಭವಃ ॥೨೧॥

ತಂ ಕದಾಚಿನ್ಮುನಿವರಂ ಪ್ರಸನ್ನೇಂದ್ರಿಯ ಮಾನಸಂ ।
ಪ್ರಿಯಶಿಷ್ಯಃ ಸುಮೇಧಾ ಹ್ವಃ ಸದಾ ಸೇವನ ತತ್ಪರಃ ॥೨೨॥

ಈ ಪ್ರಕಾರವಾಗಿ ಎಲ್ಲ ಕಾಲದಲ್ಲಿಯೂ ಎಲ್ಲ ಋತುಧರ್ಮಗಳಿಂದ ಕೂಡಿದ ಮಲಯ ಪರ್ವತದ ಪೂರ್ವಭಾಗದಲ್ಲಿ ನಿರ್ಜನವಾದ ಪ್ರದೇಶದಲ್ಲಿ ಪದ್ಮಸರೋವರದ ದಡದಲ್ಲಿ ॥೧೭॥

ಕರ್ಪೂರದಂತೆ ಬೆಳ್ಳಗಿರುವ ಅವಯವಗಳುಳ್ಳವನೂ, ಶುಭ್ರವಾದ ವಸ್ತ್ರಗಳನ್ನೂ ಮತ್ತು ಶುಭ್ರವಾದ ಯಜ್ಞೋಪವೀತವನ್ನೂ ಧರಿಸಿರುವ, ಭಸ್ಮವನ್ನು ಸಕಲ ಅಂಗಗಳಿಗೂ, ಲೇಪಿಸಿಕೊಂಡಿರುವ ತ್ರಿಕಾಲದಲ್ಲಿಯೂ ಪ್ರಕಾಶಿಸುವ ತ್ರಿಪುಂಡ್ರವುಳ್ಳ, ನಿತ್ಯಕರ್ಮಗಳನ್ನೂ ಮಾಡಿದ್ದರಿಂದ ಶಾಂತನೂ, ನೋಡಲು ಮನೋಹರನೂ, ದೇವದೇವನಾದ ವಿಷ್ಣುವಿನ ಅಂಶದಿಂದ ಉತ್ಪನ್ನನೂ, ಸಕಲ ಜನರಿಗೂ ಆನಂದದಾಯಕನೂ, ಈಶ್ವರಭಕ್ತನೂ, ವಿಷ್ಣುವಿನ ಅವತಾರನೂ ಆದ ದತ್ತಾತ್ರೇಯಗುರುವಿನ ಉಪದೇಶದಿಂದ ಆತ್ಮಜ್ಞಾನವನ್ನು ಪಡೆದ, ಜಮದಗ್ನಿ ಪುತ್ರನಾದ ಪರಶುರಾಮನು ತೃಣ ಮತ್ತು ಎಲೆಗಳಿಂದ ಕಟ್ಟಿರುವ ಆಶ್ರಮದಲ್ಲಿ ಕೃಷ್ಣಾಜಿನದಮೇಲೆ ಕುಳಿತು ನೋಡುವವರಿಗೆ ನೇತ್ರಾನಂದಕರನಾಗಿರುತ್ತಾನೆ. ॥೧೮-೧೯-೨೦-೨೧॥

ಈ ರೀತಿಯಾಗಿ ಸುಖಾಸೀನನಾಗಿರುವ ಪ್ರಸನ್ನವಾದ ಇಂದ್ರಿಯಗಳೂ,

ಪಪ್ರಚ್ಛ ಪ್ರಾಂಜಲಿರ್ಭೂತ್ವಾ ಭಕ್ತಿಶ್ರದ್ಧಾ ಸಮನ್ವಿತಃ ।
ರಾಮ ದೀನದಯಾಸಿಂಧೋ ಭಕ್ತಾನುಗ್ರಹ ವಿಗ್ರಹ ॥೨೩॥

ಪುರೈಕದಾ ಮಯಾ ಪೃಷ್ಟೋ ಭವಾನ್ಭೂರಿ ವಿಭಾವನಃ ।
ಕಿಂ ದೀನಮಾನುಷಾದೀನಾಂ ಸಂಸಾರಕ್ಲೇಶಭಾಗಿನಾಂ ॥೨೪॥

ಪರಂ ಶ್ರೇಯೋವಹಂ ಪುಣ್ಯಂ ಸರ್ವೋತ್ತಮ ಮುತಂ ಭವೇತ್ ।
ಯಸ್ಮಾದಭ್ಯಧಿಕಂ ನೈವ ಕಿಂಚಿಚ್ಛ್ರೇಯಃ ಸುಸಾಧನಂ ॥೨೫॥

ಏತನ್ಮೇ ಬ್ರೂಹಿ ವಿಪ್ರೇಂದ್ರ ಶ್ರೋತವ್ಯಂ ಯದಿ ಮೇ ಭವೇತ್ ।
ಅಪಿ ಗೋಪ್ಯಂ ವದಂತೀಹ ಗುರವೋ ದೀನವತ್ಸಲಾಃ ॥೨೬॥

ಏವಂ ಮಯಾಽಪಿ ಸಂಪೃಷ್ಟೋ ಭವಾನೀಷತ್ ಸ್ಮಿತಾನನಃ ।
ವದಾಮಿ ಕಾಲಕ್ರಮತಃ ಪ್ರೋಕ್ತವಾನಿತಿ ಭಾರ್ಗವ ॥೨೭॥

ಮನಸ್ಸು ಉಳ್ಳ ಋಷಿಶ್ರೇಷ್ಠನಾದ ಪರಶುರಾಮನನ್ನು ಯಾವಾಗಲೂ ಗುರುಸೇವೆಯಲ್ಲೇ ಆಸಕ್ತನಾದ, ಸುಮೇಧನೆಂದು ಹೆಸರುಳ್ಳ ಪರಶುರಾಮನ ಪ್ರಿಯಶಿಷ್ಯನು ಅಂಜಲಿಬದ್ಧನಾಗಿ ಮುಂದೆ ಹೇಳುವಂತೆ ಪ್ರಶ್ನಿಸಿದನು. ||೨೨||

ದೀನರಾದವರಿಗೆ ದಯಾಸಮುದ್ರನಾದ, ಭಕ್ತರಿಗೆ ಒಳ್ಳೆಯದನ್ನು ಮಾಡುವ ಓ ರಾಮನೇ, ಹಿಂದೊಂದು ಸಲ ನಾನು ನಿನ್ನನ್ನು ಕೇಳಿದೆನು. ||೨೩||

ಸಂಸಾರವೆಂಬ ದುಃಖದಲ್ಲಿ ತೊಳಲುತ್ತಿರುವ ದುಃಖಿತರಾದ ಮನುಷ್ಯರೇ ಮೊದಲಾದ ಪ್ರಾಣಿಗಳಿಗೆ ಯಾವುದು ಪುಣ್ಯಸ್ವರೂಪವೂ, ಶ್ರೇಷ್ಠವೂ, ಎಲ್ಲಕ್ಕಿಂತಲೂ ಉತ್ತಮವಾದ ಶ್ರೇಯಸ್ಸನ್ನು ಕೊಡುವುದೂ ಆಗುವುದು? ಯಾವುದಕ್ಕಿಂತಲೂ ಸುಲಭವಾಗಿ ಸಾಧಿಸಲರ್ಹವಾದ ಬೇರೊಂದು ಶ್ರೇಯಸ್ಸು ಇಲ್ಲವೋ ಅಂತಹ, ದೀನವತ್ಸಲರಾದ ಗುರುಗಳು ಗೋಪ್ಯವಾದುದೆಂದು ಹೇಳುವ, ಪರತತ್ವವನ್ನು ಎಲೈ ಬ್ರಾಹ್ಮಣೋತ್ತಮನೇ, ನಾನು ಕೇಳಿ ತಿಳಿದುಕೊಳ್ಳಲು ಅರ್ಹನಾಗಿದ್ದರೆ ನನಗಾಗಿ ಹೇಳುವವನಾಗು. ||೨೪-೨೫-೨೬||

ಈ ಪ್ರಕಾರವಾದ ನನ್ನ ಮಾತನ್ನು ಕೇಳಿ ಓ ಭಾರ್ಗವನೇ, ನೀನು ನಗುತ್ತಾ ಕಾಲಕ್ರಮದಲ್ಲಿ ಹೇಳುತ್ತೇನೆಂದು ಹೇಳಿದೆ. ||೨೭||

ತಸ್ಯಾದ್ಯ ಷೋಡಶ ಸಮಾ ವ್ಯತೀಯು ಸ್ತ್ರುಟಿ ಲೇಶವತ್ ।
ಸ ಏವಾರ್ಥೋ ಮಮ ಸ್ವಾಂತೇ ಪರಿವರ್ತತ್ಯಹರ್ನಿಶಂ ॥೨೮॥

ವದ ಮೇ ತತ್ಸುಕೃಪಯಾ ಮಯ್ಯನನ್ಯ ಶರಣ್ಯಕೇ ।
ಇತಿ ತದ್ವಚನಂ ಶ್ರುತ್ವಾ ಭಾರ್ಗವಃ ಪರಿಚಿಂತಯನ್ ॥೨೯॥

ಸಸ್ಮಾರ ತತ್ಪುರಾ ಪ್ರೋಕ್ತಂ ದತ್ತಾತ್ರೇಯೇಣ ವಿಷ್ಣುನಾ ।
ತ್ರಿಪುರಾಯಾ ರಹಸ್ಯಂ ಯತ್ಸಾಕ್ಷಾಚ್ಛಿವಮುಖಾ ಚ್ಚ್ಯುತಂ ॥೩೦॥

ವಿಶುದ್ಧ ಹೃದಿ ಸಂನ್ಯಸ್ತಂ ತತ್ಕಾಲೇನ ಶಿವಾಜ್ಞಯಾ ।
ಮಯಿ ಸಂಕ್ರಾಮ್ಯ ಸರ್ವಸ್ವಂ ಭಕ್ತಿ ಜ್ಞಾನೋಪ ಬೃಂಹಿತಂ ॥೩೧॥

ಮಾಹಾತ್ಮ್ಯ ವೈರಾಗ್ಯ ಯುತಮಿತಿ ಹಾಸೈರ್ವಿಚಿತ್ರಿತಂ ।
ನ ದೇಯ ಮೇತತ್ಕಸ್ಮೈ ಚಿತ್ತಂ ತ್ರ ಸರ್ವಸ್ವ ಮುತ್ತಮಂ ॥೩೨॥

ಹಾಗೆ ನೀನು ಹೇಳಿ ಹದಿನಾರು ವರ್ಷಗಳು ಸ್ವಲ್ಪಹೊತ್ತಿನಂತೆ ಕಳೆದು ಹೋದುವು. ಹಗಲೂ ರಾತ್ರೇ ಅದೇ ವಿಷಯವು ನನ್ನ ಹೃದಯದಲ್ಲಿ ಯಾವಾಗಲೂ ತಿರುಗುತ್ತಿರುತ್ತದೆ. ॥೨೮॥

ನಿನ್ನನ್ನೇ ಶರಣುಹೊಂದಿರುವ ಬೇರೆ ರಕ್ಷಕರಿಲ್ಲದ ನನಗೆ ದಯೆಯಿಂದ ಕಾಲಕ್ರಮದಲ್ಲಿ ಹೇಳುತ್ತೇನೆಂದು ಹೇಳಿದುದನ್ನು ಹೇಳುವವನಾಗು. ಹೀಗೆಂದು ಹೇಳಿದ ಸುಮೇಧನ ಮಾತನ್ನು ಕೇಳಿ ಪರಶುರಾಮನು ಯೋಚಿಸಿದವನಾಗಿ ಹಿಂದೆ ದತ್ತಾತ್ರೇಯನು ಹೇಳಿದ ಶಿವನಿಂದ ಉಪದೇಶಿಸಲ್ಪಟ್ಟ ತ್ರಿಪುರಾದೇವಿಯ ರಹಸ್ಯವನ್ನು ಜ್ಞಾಪಿಸಿಕೊಂಡನು. ॥೨೯-೩೦॥

ಪರಶಿವನ ಅಪ್ಪಣೆಯಂತೆ ಪರಿಶುದ್ಧವಾದ ಮನಸ್ಸುಳ್ಳ ನನಗೆ ದತ್ತಾತ್ರೇಯನು ಇತಿಹಾಸಗಳಿಂದ ಕೂಡಿರುವ, ಮಹಿಮೆ ಮತ್ತು ವೈರಾಗ್ಯಯುಕ್ತವಾದ, ಭಕ್ತಿ ಮತ್ತು ಜ್ಞಾನದಿಂದ ಕೂಡಿರುವ, ತ್ರಿಪುರಾರಹಸ್ಯವನ್ನು ಉಪದೇಶಿಸಿದನು. ॥೩೧॥

ಎಲೈ ಪರಶುರಾಮನೇ, ಈ ಶ್ರೇಷ್ಠವಾದ ತಂತ್ರಸರ್ವಸ್ವವನ್ನು ಯಾವನೋ ಒಬ್ಬ ಗೊತ್ತಿಲ್ಲದ ಅಪರಿಚಯಸ್ಥನಿಗೆ ಉಪದೇಶಿಸಕೂಡದು. ನಾಸ್ತಿಕನಿಗಾಗಲೀ ಮೂರ್ಖನಿಗಾಗಲೀ, ಈ ತ್ರಿಪುರಾರಹಸ್ಯದ ಲೇಶವನ್ನೂ ಹೇಳಕೂಡದು. ಅಲ್ಲದೆ

ನಾಸ್ತಿಕಾಯ ಶಠಾಯಾಪಿ ನಾಮ್ನಾ ಭಾಗ್ಯೈಕ ಲೇಶತಃ ।
ಭಕ್ತಾನಾಮಪಿ ಚಾನ್ಯೇಷಾಂ ವಕ್ತವ್ಯಂ ನ ಪುರಸ್ತ್ವಯಾ ॥೩೩॥

ಕಾರಣಾತ್ಪರಮೇಶಸ್ಯ ವಾಕ್ಯಾರ್ಥಸ್ಯಾಪಿ ಗೌರವಾತ್ ।
ಏಕಸ್ತವ ಮಹಾಭಕ್ತಃ ಸುಮೇಧಾ ಹಾರಿತಾಯನಃ ॥೩೪॥

ಶಿಷ್ಯಸ್ತಸ್ಮೈ ಸುಭಕ್ತಾಯ ವದ ಕಾಲೇನ ಭಾರ್ಗವ ।
ಸ ಚೈತತ್ಸಮುಪಾಕರ್ಣ್ಯ ಗ್ರಂಥತೋಽನು ವಿಧಾಸ್ಯತಿ ॥೩೫॥

ಸಂಹಿತಾಂ ಪಾವನೀಂ ಧನ್ಯಾಂ ತಂತ್ರಸಾರ ಸಮನ್ವಯಾಂ ।
ಗ್ರಂಥರೂಪಾಂ ವಿಧಾಯಾಥ ಶಿಷ್ಯಾನಧ್ಯಾಪಯಿಷ್ಯತಿ ॥೩೬॥

ಇತಿ ಸ್ಮೃತ್ವಾ ಗುರುವಚಃ ಶಿಷ್ಯಂ ದೃಷ್ಟ್ವಾ ಕೃತಾಂಜಲಿಂ ।
ನಿಯತ್ಯಾ ಭಗವಚ್ಛಕ್ತೇರನುಲ್ಲಂಘ್ಯ ಸ್ಥಿತಿಂ ಚಿರಂ ॥೩೭॥
ಚಿಂತಯಿತ್ವಾ ಸುನಿಶ್ಚಿತ್ಯ ತಂ ಪ್ರಾಹ ಪುರತಃ ಸ್ಥಿತಂ ।

ತ್ರಿಪುರಾದೇವಿಯ ಭಕ್ತರಲ್ಲದ ಅನ್ಯರೆದುರಿಗೂ ಈ ತ್ರಿಪುರಾರಹಸ್ಯವನ್ನು ಹೇಳ ಕೂಡದು. ||೩೨-೩೩||

ಪರಶಿವನ ಸಂಬಂಧೀವಾಕ್ಯಾರ್ಥವೆಂಬ ದೊಡ್ಡದಾದ ಕಾರಣದಿಂದ ದೇವಿಯ ಭಕ್ತರಲ್ಲದ ಅನ್ಯರಿಗೆ ಈ ತಂತ್ರವನ್ನು ಹೇಳಬಾರದು. ಬಹುಕಾಲದನಂತರ ಪರಶುರಾಮನೇ, ನಿನ್ನಲ್ಲಿಗೆ ಸುಮೇಧನೆಂಬ ಮಹಾ ಭಕ್ತನಾದ ಶಿಷ್ಯನು ಬರುವನು. ಅವನಿಗೆ ಈ ರಹಸ್ಯವನ್ನು ಉಪದೇಶಿಸು. ಅವನು ಸುಪವಿತ್ರವೂ ಧನ್ಯವೂ ಆದ ಈ ರಹಸ್ಯದ ಸಾರದಿಂದ ಕೂಡಿದ ಸಂಹಿತೆಯನ್ನು ಗ್ರಂಥರೂಪದಲ್ಲಿ ಬರೆಯುವನು. ಮತ್ತು ಶಿಷ್ಯರಿಗೆ ಪಾಠಮಾಡಿಸುವನು. ||೩೪-೩೫-೩೬||

ಪರಶುರಾಮನು ಈ ಪ್ರಕಾರವಾಗಿ ದತ್ತಾತ್ರೇಯ ಗುರುವು ಹಿಂದೆ ಹೇಳಿದ ಮಾತನ್ನು ಸ್ಮರಿಸಿ, ಅಂಜಲಿಬದ್ಧನಾಗಿ ಎದುರಿಗೆ ನಿಂತಿರುವ ಶಿಷ್ಯನನ್ನು ನೋಡಿದನು. ವಿಧಿಯಿಂದಲೂ ಮೀರಲಾಗದ ಭಗವತಿಯ ಶಕ್ತಿಯ ಪುರಾತನವಾದ ಸ್ಥಿತಿಯನ್ನು ಯೋಚಿಸಿ ನಿಶ್ಚಯಿಸಿದವನಾಗಿ ಎದುರಿಗೆ ನಿಂತಿರುವ ಶಿಷ್ಯನಿಗೆ ಹೇಳಿದನು. ||೩೭||

ವತ್ಸ ಕಾಲಂ ಪ್ರತೀಕ್ಷಸ್ವ ಸರ್ವಂ ಕಾಲೇನ ಜಾಯತೇ ॥೩೮॥

ಶ್ವಃ ಪುಷ್ಯೇ ಶುಭವೇಲಾಯಾ ಮುತ್ತರೋಪಕ್ರಮಂ ಭವೇತ್ ।
ಏವಂ ಸ್ಥಿತೇ ಸಮಭವತ್ಸಂಧ್ಯಾ ಮೃದುಕರೋ ರವಿಃ ॥೩೯॥

ಅನ್ವಾಸ್ಯ ಪಶ್ಚಿಮಾಂ ಸಂಧ್ಯಾಂ ತೌ ಜಪ್ಯಂ ಜೇಪತುಃ ಪರಂ ।
ಧ್ಯಾಯನ್ ಹೃದಿ ಸ್ವಾತ್ಮಶಕ್ತಿಂ ರಾತ್ರೌ ಸುಷ್ವುಪತುಃ ಸುಖಂ ॥೪೦॥

ಅಥ ಪ್ರಾತಃ ಸಮುತ್ಥಾಯ ಕೃತಾಹ್ನಿಕ ವಿಧಿಂ ಗುರುಂ ।
ದಂಡವತ್ಪ್ರಣಿಪತ್ಯಾಥ ಬದ್ಧಾಂಜಲಿ ಪುಟೋ ನತಃ ॥೪೧॥

ಉಪತಸ್ಥೇ ಸಮುಚಿತೇ ಕಾಲೇ ಪರಮಶೋಭನೇ ।
ಅಥ ತಂ ರಾಮ ಆಹೂಯ ವತ್ಸೇತಿ ಮಧುರಸ್ವರಂ ॥೪೨॥

ಪುಷ್ಪಾಂಜಲಿಂ ಪ್ರಯೋಜ್ಯಾಗ್ರಸ್ಥಿತ ಹೈಮಾಸನೇ ಶುಭೇ ।
ಯಾ ಬಾಲಾ ತ್ರಿಪುರಾ ಪ್ರೋಕ್ತಾ ಲಲಿತಾ ಶ್ರೀ ಕುಮಾರಿಕಾ ॥೪೩॥
ತಸ್ಯಾ ವಪು ರ್ವಾಙ್ಮಯಂ ಯತ್ತಚ್ಛಿಷ್ಯಾಯ ಪ್ರದತ್ತವಾನ್ ।

ಎಲೌ ವತ್ಸನೇ, ತಕ್ಕ ಕಾಲವನ್ನು ಎದುರುನೋಡು. ಎಲ್ಲವೂ ಕಾಲಾನುಗತವಾಗಿ ಆಗುತ್ತದೆ. ನಾಳೆ ಪುಷ್ಯನಕ್ಷತ್ರಯುಕ್ತವಾದ ಶುಭಸಮಯದಲ್ಲಿ ನಿನ್ನ ಪ್ರಶ್ನೆಗೆ ಉತ್ತರವನ್ನು ಹೇಳುತ್ತೇನೆ, ಎಂದು ಹೇಳಿದನು. ॥೩೮॥

ಹೀಗಿರಲು ಸಂಧ್ಯಾಕಾಲವು ಪ್ರಾಪ್ತವಾಯಿತು ಸೂರ್ಯನು ಅಸ್ತನಾಗತೊಡಗಿದನು. ಆ ಸಮಯದಲ್ಲಿ ಸಾಯಂ ಸಂಧ್ಯೆಯನ್ನು ಇಬ್ಬರೂ ಮಾಡಿ ಪವಿತ್ರವಾದ ಗಾಯತ್ರಿಯನ್ನು ಜಪಿಸಿದರು. (ಸ್ತೋತ್ರಮಾಡಿದರು) ॥೩೯॥

ಪರಶುರಾಮ ಮತ್ತು ಸುಮೇಧರು ತಮ್ಮ ಆತ್ಮಶಕ್ತಿಯನ್ನು ಮನದಲ್ಲಿ ಧ್ಯಾನಿಸುತ್ತಾ ರಾತ್ರಿಯಲ್ಲಿ ಸುಖದಿಂದ ನಿದ್ರಿಸಿದರು. ॥೪೦॥

ಸುಮೇಧನು ಪ್ರಾತಃಕಾಲದಲ್ಲಿ ಎದ್ದು ಸ್ನಾನಾದಿಗಳನ್ನು ಮಾಡಿದವನಾಗಿ ಸ್ನಾನಾಹ್ನಿಕಾದಿಗಳನ್ನು ಮಾಡಿರುವ ಗುರುವಿನ ಸಮೀಪಕ್ಕೆ ಹೋಗಿ ನಮಸ್ಕಾರ ಮಾಡಿದವನಾಗಿ ಅಂಜಲಿಬದ್ಧನಾಗಿ ನಮ್ರಭಾವದಿಂದ ನಿಂತನು. ॥೪೧॥

ಪರಮ ಮಂಗಳಕರವಾದ ಯೋಗ್ಯಸಮಯವು ಪ್ರಾಪ್ತವಾಗಲು ಪರಶುರಾಮನು ಪ್ರೀತಿಯಿಂದ ಮಧುರಸ್ವರದಿಂದ ಶಿಷ್ಯನನ್ನು, ವತ್ಸ, ಎಂದು ಕರೆದು

ಸಾಂಗಂ ಪೀಠಂ ಸಮಭ್ಯರ್ಚ್ಯ ನಾನಾವಿಭವಹೇತುಭಿಃ ॥೪೪॥

ಪ್ರಜಪ್ತ ದಿವ್ಯಕಲಶ ತೋಯೈಃ ಸಂಸ್ನಾಪ್ಯ ಮಾರ್ಗತಃ ।
ಪಾಶತ್ರಯಮಪಿ ಛಿತ್ವಾ ಚಾಧಿವಾಸ್ಯ ನಿಶಾಂ ತತಃ ॥೪೫॥

ಗ್ರಾಹಯಾಮಾಸ ತದ್ರೂಪ ಮಾಧಾರತ್ರಯ ಶೋಭಿತಂ ।
ದ್ವಾದಶಾದ್ಯಂ ತುರ್ಯಮಧ್ಯ ಮವಸಾನ ಚತುರ್ದಶಂ ॥೪೬॥

ತ್ರಿಧಾ ಸ್ಥಿತಂ ಚ ತದ್ರೂಪಂ ತಥಾ ಚರ್ಯಾಕ್ರಮಂ ಶುಭಂ ।
ಆಚಾರಕ್ರಮ ಮುದ್ರಾದಿ ರಹಸ್ಯಮಖಿಲಂ ಕ್ರಮಾತ್ ॥೪೭॥

ಮೂರ್ಧಹೃನ್ಮೂಲ ದೇಶೇಷು ಪ್ರಸಾದವಿನಿಯೋಜನಂ ।
ಸ್ವಾತ್ಮಾಗ್ನಾವಾಹುತಿಂ ತತ್ವ ತ್ರಯಾಣಾಂ ಕ್ರಮಶೋಽಬ್ರವೀತ್ ॥೪೮॥

ಅನಂತರ ಎದುರಿನಲ್ಲಿ ಸ್ವರ್ಣಾಸನದಲ್ಲಿರುವ ದೇವಿಗೆ ಪುಷ್ಪವನ್ನು ಅರ್ಪಿಸಿ, ಲಲಿತೆಯೆಂದೂ, ಶ್ರೀ ಕುಮಾರಿಯೆಂದೂ, ಬಾಲೆಯೆಂದೂ ಹೇಳಲ್ಪಡುವ ಆ ತ್ರಿಪುರಾದೇವಿಯ ವಾಗ್ರೂಪವಾದ ಶರೀರವನ್ನು (ಮಂತ್ರವನ್ನು) ಶಿಷ್ಯನಿಗೆ ಉಪದೇಶಿಸಿದನು. ॥೪೨-೪೩॥

ಅನೇಕ ಪೂಜಾದ್ರವ್ಯಗಳಿಂದ ಅಂಗಸಹಿತವಾದ ಪೀಠವನ್ನು ಪೂಜಿಸಿ, ಕ್ರಮವಾಗಿ ಜಪಾದಿಗಳಿಂದ ಪರಿಶುದ್ಧವಾದ ಕಲಶೋದಕದಿಂದ ಸ್ನಾನಮಾಡಿಸಿ, ಮೂರು ಪಾಶಗಳನ್ನು ಭೇದಿಸಿ, ರಾತ್ರಿಯೆಲ್ಲ ಅಧಿವಾಸಮಾಡಿ, ಪ್ರಥಮದಲ್ಲಿ ಹನ್ನೆರಡು ಪ್ರಕಾರವಾಗಿಯೂ, ಮಧ್ಯಭಾಗದಲ್ಲಿ ನಾಲ್ಕುಪ್ರಕಾರವಾಗಿಯೂ, ಅಂತ್ಯದಲ್ಲಿ ಹದಿನಾಲ್ಕು ಪ್ರಕಾರವಾಗಿಯೂ, ಮೂರು ಆಧಾರಗಳಿಂದ ಶೋಭಿತವಾದ ಆ ದೇವಿಯ ಉಪಾಸನಾ ರಹಸ್ಯದ ಪ್ರಕಾರವನ್ನು ಗ್ರಹಿಸುವಂತೆ ಮಾಡಿದನು. ॥೪೪-೪೫-೪೬॥

ಮೂರು ಪ್ರಕಾರವಾಗಿರುವ ಆ ತ್ರಿಪುರಾದೇವಿಯ ಸ್ವರೂಪವನ್ನೂ ಪೂಜೆಯ ಕ್ರಮವನ್ನೂ, ಉಪಚಾರಕ್ರಮವನ್ನೂ ಮತ್ತು ಮುದ್ರೆಯೇ ಮೊದಲಾದ ಸಕಲ ರಹಸ್ಯವನ್ನೂ ತಲೆ, ಹೃದಯ ಮತ್ತು ಮೂಲಪ್ರದೇಶಗಳಲ್ಲಿ ಪ್ರಸಾದವನ್ನು ವಿನಿಯೋಗಿಸುವ ಕ್ರಮವನ್ನೂ, ಆತ್ಮಾಗ್ನಿಯಲ್ಲಿ ತತ್ತ್ವತ್ರಯಗಳ ಆಹುತಿಯನ್ನೂ ಸಹ ಕ್ರಮವಾಗಿ ಉಪದೇಶಿಸಿದನು. ॥೪೭-೪೮॥

ಇತಿ ಪ್ರೋಚ್ಯ ಸಮಾದಿಶ್ಯ ತತ್ಸಾಧನ ವಿಧೌ ತತಃ ।
ವತ್ಸೈತದ್ಬ್ರಹ್ಮ ಪರಮಂ ಸ್ವಾದಯಸ್ವಾ ವಿಲಂಬಿತಂ ॥೪೯॥

ತತಃ ಪೂರ್ಣಪದಂ ತುಭ್ಯಂ ದದಾಮ್ಯಚಿರಕಾಲತಃ ।
ಇತಿ ಸಂಪ್ರಾಪ್ತ ಸರ್ವಸ್ವ ರಹಸ್ಯೋ ಹಾರಿತಾಯನಃ ॥೫೦॥

ತ್ರಿಃ ಪರಿಕ್ರಮ್ಯ ನತ್ವಾ ತಂ ಶ್ರೀಶೈಲಂ ಪ್ರಾವಿಶತ್ ದ್ರುತಂ ।
ತತ್ರ ಶ್ರೀ ಭ್ರಾಮರೀ ದೇವೀ ನಿತ್ಯಸನ್ನಿಹಿತಾ ಸ್ಥಿತಾ ॥೫೧॥

ತಸ್ಯಾಃ ಸಂಮುಖತಃ ಸ್ವಚ್ಛಾಂ ವಾತಾತಪ ಸಹಾಂ ಕುಟೀಂ ।
ನಿರ್ಮಾಯ ತತ್ರ ಕಾಲೇನ ಸಾಧನಂ ಸಮುಪಾಕ್ರಮತ್ ॥೫೨॥

ಏವಂ ಸಾಧಯತಸ್ತಸ್ಯ ಫಲಾಹಾರಸ್ಯ ಯೋಗಿನಃ ।
ಭಕ್ತಿಶ್ರದ್ಧಾ ನಿರ್ಭರಸ್ಯ ನಿಯತೇಂದ್ರಿಯ ಚೇತಸಃ ॥೫೩॥

ಪ್ರಸನ್ನಚಿತ್ತಸ್ಯ ಸದಾ ಧ್ಯಾನತತ್ಪರ ಚೇತಸಃ ।
ವಿಶ್ವಸ್ತ ಗುರುವಾಕ್ಯಸ್ಯ ನವಪಂಚ ತ್ರಿಮಾಸಕಾಃ ॥೫೪॥

ಹೀಗೆ ಹೇಳಿ, ಅದನ್ನು ಸಾಧಿಸುವ ಕ್ರಮದಲ್ಲಿ ವತ್ಸನೇ, ಈ ಪರಬ್ರಹ್ಮಪದವನ್ನು ಜಾಗ್ರತೆಯಾಗಿ ಸಾಧಿಸು. ಅನಂತರದಲ್ಲಿ ಪೂರ್ಣಪದವಿಯನ್ನು ನಿನಗೆ ಜಾಗ್ರತೆಯಲ್ಲಿ ಕೊಡುತ್ತೇನೆಂದು ಅಪ್ಪಣೆಮಾಡಿದನು. ॥೪೯॥

ಈ ಪ್ರಕಾರವಾಗಿ ಹಾರಿತಾಯನನು ಸಕಲ ರಹಸ್ಯವನ್ನೂ ತಿಳಿದು ಪರಶುರಾಮನನ್ನು ಮೂರು ಬಾರಿ ಪ್ರದಕ್ಷಿಣೆಮಾಡಿ, ನಮಸ್ಕಾರಮಾಡಿ ಜಾಗ್ರತೆಯಾಗಿ ಶ್ರೀಶೈಲಕ್ಕೆ ಹೋದನು. ॥೫೦॥

ಶ್ರೀಶೈಲದಲ್ಲಿ ಭ್ರಾಮರೀದೇವಿಯು ಯಾವಾಗಲೂ ಪ್ರತ್ಯಕ್ಷವಾಗಿ ವಾಸವಾಗಿರುತ್ತಾಳೆ. ಆ ದೇವಿಯ ಎದುರಿನಲ್ಲಿಯೇ ಪರಿಶುದ್ಧವೂ ಮತ್ತು ಗಾಳಿ ಬಿಸಿಲನ್ನು ತಡೆಯಲು ಯೋಗ್ಯವೂ ಆದ ಗುಡಿಸಲನ್ನು ನಿರ್ಮಿಸಿದನು. ಆ ಗುಡಿಸಲಿನಲ್ಲಿ ಪರಶುರಾಮನು ಉಪದೇಶಿಸಿದ ಪ್ರಕಾರ ಶ್ರೀ ವಿದ್ಯೆಯನ್ನು ಸಾಧಿಸಲು ಮೊದಲು ಮಾಡಿದನು. ॥೫೧-೫೨॥

ಸಾಧನೆಯ ಕಾಲದಲ್ಲಿ ಅವನು ಹಣ್ಣುಹಂಪಲುಗಳನ್ನು ತಿಂದು ತಪಸ್ಸನ್ನು ಮಾಡುತ್ತಿದ್ದನು. ಯೋಗಿಯೂ, ಭಕ್ತಿಶ್ರದ್ಧೆಯಿಂದ ಕೂಡಿದವನೂ, ಇಂದ್ರಿಯಗಳನ್ನು

ಯಯುಃ ಕ್ಷಣಮಿವಾತ್ಯರ್ಥಂ ಸಂಸಿದ್ಧಂ ತಸ್ಯ ಸಾಧನಂ ।
ಪ್ರಸನ್ನ ದೇಹ ಕರಣಃ ಸುಸ್ವರಃ ಶುಭಲೋಚನಃ ॥೫೫॥

ಲಘು ಗಾತ್ರಾಶನೋ ದೃ(ಹೃ)ಷ್ಟ್ಯಃ ಪುಷ್ಟಾಷ್ಟಾವಯವಃ ಶುಭಃ ।
ಅಥ ಸ್ವಪ್ನೇ ತಸ್ಯ ರಾತ್ರೌ ಬಾಲಾ ಶ್ರೀ ಪರಮೇಶ್ವರೀ ॥೫೬॥

ಸರ್ವಾವಯವ ಶೋಭಾಢ್ಯಾ ತರುಣಾರುಣ ಸಚ್ಛವಿಃ ।
ಅಕ್ಷಮಾಲಾ ಪುಸ್ತಕಾಭೀ ವರಶೋಭಿ ಚತುರ್ಭುಜಾ ॥೫೭॥

ತ್ರಿನೇತ್ರ ಚಂದ್ರಶಕಲ ವಿಲಸನ್ಮುಕುಟೋಜ್ವಲಾ ।
ಕೋಟಿ ಮನ್ಮಥ ಲಾವಣ್ಯಾ ಕುಮಾರೀ ದಶವಾರ್ಷಿಕೀ ॥೫೮॥
ಪ್ರಾದುರಾಸೀ ಜ್ಜಗನ್ಮಾತಾ ಲೀಲಾಸ್ವೀಕೃತ ವಿಗ್ರಹಾ ।

ಮತ್ತು ಮನಸ್ಸನ್ನೂ ಜಯಿಸಿದವನೂ, ಪ್ರಸನ್ನವಾದ ಚಿತ್ತವುಳ್ಳವನೂ, ಯಾವಾಗಲೂ ದೇವಿಯ ಧ್ಯಾನದಲ್ಲೇ ಆಸಕ್ತನಾಗಿರುವವನೂ, ಆಗಿ ಗುರುವಿನ ಅಪ್ಪಣೆಯನ್ನು ನಂಬಿ ತಪಸ್ಸನ್ನು ಮಾಡುತ್ತಿದ್ದನು. ಹೀಗೆ ತಪಸ್ಸನ್ನು ಮಾಡುತ್ತಾ ಒಂದು ವರ್ಷ ಐದು ತಿಂಗಳುಗಳನ್ನು ಸುಲಭವಾಗಿ ಕಳೆದನು. ಇಂತು ನಿಯಮಬದ್ಧ ನಾಗಿ ತಪಸ್ಸನ್ನು ಗುರೂಪದೇಶದಂತೆ ಮಾಡಿದ್ದರಿಂದ ತಪಸ್ಸಿಗೆ ಯೋಗ್ಯವಾದ ಸಿದ್ಧಿ ಯನ್ನು ಪಡೆದನು. ॥೫೩-೫೪॥

ಸ್ವಚ್ಛವಾದ ಶರೀರ ಮತ್ತು ಇಂದ್ರಿಯಗಳಿಂದ ಕೂಡಿದವನೂ, ಮಧುರವಾಗಿ ಮಾತನಾಡುವವನೂ, ಕಾಂತಿಯುಕ್ತವಾದ ಕಣ್ಣುಳ್ಳವನೂ, ಮಿತವಾದ ಭೋಜನ ದಿಂದ ಹಗುರವಾದ ದೇಹವುಳ್ಳವನೂ ಪುಷ್ಟವಾದ ಎಂಟು ಅವಯವಗಳಿಂದ ಕೂಡಿ ದವನೂ, ಮಂಗಳಕರನೂ ಆದ ಸುಮೇಧನು ತಪಸ್ಸಿದ್ಧಿಯನ್ನು ಪಡೆದನು. ॥೫೫॥

ಹೀಗೆ ತಪಸ್ಸನ್ನು ಮಾಡುತ್ತಿದ್ದ ಸುಮೇಧನಿಗೆ ಒಂದು ರಾತ್ರಿ ಸ್ವಪ್ನದಲ್ಲಿ ಲಲಿತಾಂಬಿಕೆಯು ಪ್ರತ್ಯಕ್ಷಳಾದಳು. ಆ ದೇವಿಯು ಹೇಗಿದ್ದಳೆಂದರೆ, ಸಕಲವಾದ ಅವಳ ಅವಯವಗಳೂ ಕಾಂತಿಯಿಂದ ಯುಕ್ತವಾಗಿದ್ದವು. ಅವಳು ಪ್ರಬುದ್ಧನಾದ ಅರುಣನಂತೆ ರಕ್ತವರ್ಣದಿಂದ ಶೋಭಿಸುತ್ತಿದ್ದಳು. ಜಪಸರ ಮತ್ತು ಪುಸ್ತಕಗಳನ್ನು ಹಿಡಿದು ಅಭಯ ಮತ್ತು ವರದ ಎಂಬ ನಾಲ್ಕು ಕೈಗಳುಳ್ಳವಳಾಗಿ ಪ್ರಕಾಶಿಸುತ್ತಿದ್ದಳು. ತ್ರಿನೇತ್ರದಿಂದಲೂ ಬಾಲಚಂದ್ರನ ಕಿರಣಗಳಿಂದ ಕೂಡಿ ಆ ದೇವಿಯ ಕಿರೀಟವು

ತಾಂ ದೃಷ್ಟ್ವಾ ಸ್ವಪ್ನಸಮಯೇ ಪ್ರಸನ್ನೋ ಹಾರಿತಾಯನಃ ॥೫೯॥

ದಂಡವತ್ಪ್ರಣಿಪತ್ಯಾಥ ಹರ್ಷಗದ್ಗದ ಸುಸ್ವರಃ ।
ಕೃತಾಂಜಲಿ ಪುಟೋ ಭೂತ್ವಾ ಸಂಸ್ತೋತು ಮುಪಚಕ್ರಮೇ ॥೬೦॥

ಜಯ ಶ್ರೀ ತ್ರಿಪುರೇ ಮಾತರ್ಜಯ ಬಾಲಾಂಬಿಕೇ ಪರೇ ।
ಜಯ ಭಕ್ತಪ್ರಿಯೇ ನಿತ್ಯಂ ಜಯ ಕಾರುಣ್ಯವಿಗ್ರಹೇ ॥೬೧॥

ಲೋಕೇ ತ್ರಿತ್ರಿಕ್ರಮೋಲ್ಲಾಸಿ ವಸ್ತುಪೂರ್ವಸ್ಥಿತಿರ್ಯತಃ ।
ತ್ರಿಪುರೇತಿ ತತಃ ಪ್ರೋಕ್ತಾ ಬ್ರಹ್ಮಾದೀನಾಂ ಪರಾಶ್ರಯಾ ॥೬೨॥

ಮಹಿಮ್ನಸ್ತೇ ಲೇಶಂ ಹರಿಹರಭವಾದ್ಯಾ ಅಪಿ ಪರಂ ।
ನ ವಕ್ತುಂ ಜ್ಞಾತುಂ ವಾ ಪ್ರಭವ ಇಹ ದೇವಾದಿ ಗುರವಃ ।

ಜಾಜ್ವಲ್ಯಮಾನವಾಗಿದ್ದಿತು. ಅವಳು ಅನೇಕ ಮನ್ಮಥರಿಗೆ ಸದೃಶವಾದ ಲಾವಣ್ಯಾದಿಗಳಿಂದ ಕೂಡಿದವಳೂ ಮತ್ತು ಹತ್ತು ವರ್ಷದ ಬಾಲಿಕೆಯಾಗಿದ್ದಳು. ಭಕ್ತಾನುಗ್ರಹವೆಂಬ ಕ್ರಿಡಾರ್ಥವಾಗಿ ಶರೀರವನ್ನು ಧರಿಸಿ ಲೋಕಮಾತೆಯು ಪ್ರತ್ಯಕ್ಷಳಾದಳು. ॥೫೬-೫೭-೫೮॥

ಸ್ವಪ್ನಕಾಲದಲ್ಲಿ ಆ ದೇವಿಯನ್ನು ನೋಡಿ ಪ್ರಸನ್ನನಾದ ಹಾರಿತಾಯನನು ಆ ದೇವಿಗೆ ದಂಡದಂತೆ ನಮಸ್ಕರಿಸಿ ಸಂತೋಷದಿಂದ ಗದ್ಗದ ಸ್ವರವುಳ್ಳವನಾಗಿ ಅಂಜಲಿಬದ್ಧನಾಗಿ ಸ್ತೋತ್ರಮಾಡಲು ಮೊದಲುಮಾಡಿದನು. ॥೫೯-೬೦॥

ಓ ತ್ರಿಪುರಾದೇವಿಯೇ, ನಿನಗೆ ಜಯವಾಗಲಿ, ಓ ತಾಯಿ ನಿನಗೆ ಜಯವು. ಪರಸ್ವರೂಪಳೂ ಬಾಲೆಯೂ ಆದ ನಿನಗೆ ಜಯವು. ಭಕ್ತರ ಪ್ರೀತಿಪಾತ್ರಳೇ, ನಿನಗೆ ಜಯವು. ದಯೆಯೇ ಶರೀರವಾಗುಳ್ಳವಳೇ, ನಿನಗೆ ಜಯವು. ಲೋಕದಲ್ಲಿ ಯಾವ ನೀನು ಮೂರು ಬಾರಿ ಮೂರು ಪ್ರಕಾರವಾಗಿ ವಸ್ತುಗಳ ಮೊದಲ ಸ್ಥಿತಿಯನ್ನು ತೋರಿಸಿದೆ. ಆದಕಾರಣವೇ ನಿನ್ನನ್ನು ತ್ರಿಪುರಾದೇವಿಯೆಂದು ಹೇಳುತ್ತಾರೆ. ನೀನು ಬ್ರಹ್ಮನೇ ಮೊದಲಾದ ದೇವತೆಗಳಿಗೆ ಮುಖ್ಯಾಶ್ರಯಳು. ॥೬೧-೬೨॥

ಹರಿಹರಬ್ರಹ್ಮರೇ ಮೊದಲಾದ ದೇವತೆಗಳೂ, ಗುರುಗಳೂ, ಸ್ವಲ್ಪವಾದರೂ ನಿನ್ನ ಮಹಿಮೆಯನ್ನು ತಿಳಿಯಲು ಸಮರ್ಥರಲ್ಲವು. ತಿಳಿಯಲೇ ಅಸಮರ್ಥರಾಗಿರುವಲ್ಲಿ ಮಹಿಮೆಯನ್ನು ಹೇಳಲು ಹೇಗೆ ಸಮರ್ಥರಾಗುವರು.

ತಥಾ ಭೂತಾ ದೇವೀ ಕ ಇಹ ಭುವನೇಷು ಸ್ತುತಿಪಥಂ ।
ಸಮೀಹೇ ದಾರೋಢುಂ ತವಚರಣಸೇವಾ ವಿರಹಿತಃ ॥೬೩॥

ಪದಾಂಭೋ(ಜೇ)ಜಭಕ್ತಿಸ್ತವ ಭವತಿ ಚಿಂತಾಮಣಿಗಣೋ ।
ನ ತಚ್ಚಿತ್ರಂ ದೇವಿ ಪ್ರಭವತಿ ಸಮೀಹಾಧಿಕ ಫಲಂ ।

ಅತ ಸ್ತ್ವತ್ಪಾದಾಬ್ಜ ಪ್ರಣಿಹಿತ ಸಮಸ್ತೇಂದ್ರಿಯವತಾಂ ।
ಫಲಂ ನ ಪ್ರಾಪ್ಯಂ ಕಿಂ ವದ ಪರಶಿವೇ ಸುಂದರಿ ಪರೇ ॥೬೪॥

ತ್ವಮೇವಾದೌ ಸೃಷ್ಟೇಃ ಸಹಜಸುಖ ಪೀಯೂಷ ಜಲಧಿಃ ।
ನಿತಾಂತಂ ವಿಶ್ರಾಂತಾ ವಪುಷಿ ವಿಮಲೇ ನಿಶ್ಚಲತರೇ ।

ನ ಖಂ ವಾಯುಸ್ತೇಜಃ ಸಲಿಲಮಪಿ ಭೂಮಿರ್ಘಟಪಟೌ ।
ನ ಚ ಜ್ಞಾನಾಜ್ಞಾನೇ ವಚನವಿಷಯೋ ವಾ ಸ್ಥಿತಮಭೂತ್ ॥೬೫॥

ಹಾಗೆ ಹರಿಹರಾದಿಗಳೇ ನಿನ್ನ ಮಹಿಮೆಯನ್ನು ತಿಳಿಯಲಾಗಲೀ, ಹೇಳಲಾಗಲೀ ಅಸಮರ್ಥರಾಗಿರುವಾಗ ಓ ಜನನಿಯೇ, ನರರ ಪಾಡೇನು? ಈ ಪ್ರಪಂಚದಲ್ಲಿರುವವರಲ್ಲಿ ನಿನ್ನ ಚರಣಸೇವೆಮಾಡದಿರುವವರು ಹೇಗೆತಾನೇ ಜನರ ಗೌರವವನ್ನು ಪಡೆಯಲು ಸಮರ್ಥರಾಗುವರು? ॥೬೩॥

ಓ ದೇವಿಯೇ, ನಿನ್ನ ಚರಣಕಮಲಗಳ ಭಕ್ತಿಯೆಂಬುದು ಚಿಂತಾಮಣಿಗಳ ಸಮೂಹವೇ ಆಗಿರುತ್ತದೆ. ಆ ಭಕ್ತಿಯು ಭಕ್ತರ ಅಪೇಕ್ಷೆಗಿಂತಲೂ ಹೆಚ್ಚಾದ ಫಲವನ್ನು ಕೊಡುತ್ತದೆಂಬುದೇನೂ ಆಶ್ಚರ್ಯವಲ್ಲ.

ಆ ಕಾರಣದಿಂದ ಓ ಸುಂದರಿಯೂ, ಸರ್ವೋತ್ಕೃಷ್ಟಳೂ, ಆದ ಪರಶಿವೆಯೇ, ನಿನ್ನ ಪಾದಕಮಲಗಳ ಸೇವೆಯಲ್ಲೇ ತಮ್ಮ ಇಂದ್ರಿಯ, ಶರೀರ, ಎಲ್ಲವನ್ನೂ ವಿನಿಯೋಗಿಸಿರುವವರಿಗೆ ಪ್ರಾಪ್ತವಾಗದ ಫಲವೂ ಇದೆಯೇ? ಎಂಬುದನ್ನು ಹೇಳುವವಳಾಗು. ॥೬೪॥

ಸೃಷ್ಟಿಗಿಂತಲೂ ಮೊದಲು ನೀನೇ ಸಹಜವಾದ ಸುಖವೆಂಬ ಅಮೃತಸಾಗರವಾಗಿದ್ದೆ. ಚಂಚಲವಲ್ಲದ ಸ್ವಚ್ಛವಾದ ಶರೀರದಲ್ಲಿ ಸ್ಥೂಲ, ಸೂಕ್ಷ್ಮ, ಕಾರಣ,ಶರೀರಗಳಲ್ಲಿ ಎಚ್ಚರ, ಕನಸು, ನಿದ್ರೆ, ಗಳಲ್ಲಿ ಯಾವಾಗಲೂ ತೋರುತ್ತಾ ಇರುತ್ತಿದ್ದೆ. ಆಗ ಆಕಾಶವಾಗಲೀ, ವಾಯುವಾಗಲೀ, ತೇಜಸ್ಸಾಗಲೀ, ನೀರಾಗಲೀ, ಭೂಮಿಯಾಗಲೀ,

ತ್ವಮೇ ನ್ಯೈಕಾ ಸೇಯಂ ನಿರವಧಿ ಮಹಾಶಕ್ತಿಭರಿತಾ ।
ಸ್ಥಿತಾ ಸಂವಿದ್ರೂಪಾ ಸಕಲಜಗತಾ ಮಾದಿಸಮಯೇ ।

ಜಗನ್ಮಾಲಾ ಜಾಲಾಂಕುರ ಗಣ ಸುಬೀಜೈಕವಪುಷಾ ।
ಪರಾನಂದಾಕಾರಾ ಪರಮಶಿವ ಜೀವಸ್ಥಿತಿ ಕರೀ ॥೬೬॥

ತತಃ ಸಂವಿದ್ರೂಪಾ ತವ ಸಕಲಮೇತದ್ವಿಲಸಿತಂ ।
ವಿಭಾತಂ ಸದ್ರೂಪಂ ತದಿತರ ವಪುಶ್ಚಾಪಿ ಸಹಸಾ ।

ಯಥಾಂಭೋಧೌ ಭಂಗಾಃ ಘಟ ಕಲಶ ಕುಂಡಾ ಇವ ಮೃದಿ ।
ಪ್ರಭಾ ಭಾನೋರ್ಯದ್ವತ್ಕನಕ ಶಕಲಂ ಭೂಷಣಗಣಾಃ ॥೬೭॥

ಘಟಪಟಾದಿಗಳಾಗಲೀ, ಜ್ಞಾನ ಮತ್ತು ಅಜ್ಞಾನವಾಗಲೀ, ವಚನವಾಗಲೀ, ವಿಷಯವಾಗಲೀ ಇರಲಿಲ್ಲ. ||೬೫||

ಸಮಸ್ತವಾದ ಪ್ರಪಂಚಗಳ ಉತ್ಪತ್ತಿಗಿಂತಲೂ, ಮೊದಲು ಓ ದೇವಿಯೇ, ಅಪರಿಮಿತವಾದ ಶಕ್ತಿಯಿಂದ ಭರಿತಳಾಗಿ ಜ್ಞಾನಸ್ವರೂಪಳಾಗಿ ನೀನೊಬ್ಬಳೇ ಇದ್ದೆ. ಜಗತ್ತುಗಳ ಮಾಲೆಗಳ ಸಮೂಹಗಳೆಂಬ ಅಂಕುರಗಳ ಸಮೂಹಗಳಿಗೆ ಬೀಜವಾದ ಶರೀರ ಉಳ್ಳವಳಾಗಿ ಓ ದೇವಿಯೇ, ಶ್ರೇಷ್ಠವೂ ಮತ್ತು ಮಂಗಳಕರವೂ ಆದ ಜೀವರುಗಳಿಗೆ ಸ್ಥಿತಿಯನ್ನು ಕೊಡುತ್ತಾ ಕಾಪಾಡುವವಳಾಗಿ ಶ್ರೇಷ್ಠವಾದ, ಆನಂದ ಸ್ವರೂಪಳಾಗಿಯೂ ಇದ್ದೆ. ||೬೬||

ಅನಂತರದಲ್ಲಿ ಜ್ಞಾನಸ್ವರೂಪಳಾದ ನಿನ್ನ ಸದ್ರೂಪವು ಪ್ರಕಾಶವಾಯಿತು. ತತ್‌ಕ್ಷಣವೇ ಅದಕ್ಕಿಂತ ಭಿನ್ನವಾದ ದೇಹಗಳೂ ಮತ್ತು ಸಕಲವಾದ ಈ ಚರಾಚರ ಜಗತ್ತೂ ಪ್ರಕಾಶಗೊಳಿಸಲ್ಪಟ್ಟವು. ಸಮುದ್ರದಲ್ಲಿ ಅಲೆಗಳಂತೆಯೂ, ಮಣ್ಣಿನಲ್ಲಿ ಘಟ ಕಲಶಗಳಂತೆಯೂ, ನಿನ್ನಿಂದ ಸಕಲ ಜಗತ್ತೂ ಉತ್ಪನ್ನವಾಯಿತು. ಕಿರಣಗಳು ಹೇಗೆ ಸೂರ್ಯನಿಂದ ಹೊರಹೊಮ್ಮುತ್ತವೋ ಒಡವೆಗಳ ಸಮೂಹವೂ ಹೇಗೆ ಚಿನ್ನದ ಚೂರುಗಳಿಂದ ಆಗುತ್ತವೋ, ಅಂತೆಯೇ ಸಕಲ ಜಗತ್ತೂ ನಿನ್ನ ಸಂಬಂಧವುಳ್ಳದ್ದಾಗಿ ಉಂಟಾಗಿರುತ್ತದೆ. ||೬೭||

ಅತಸ್ತ್ವದ್ರೂಪಾನ್ನೋ ಪೃಥಗಿಹ ಭವೇತ್ಕಿಂಚಿದಪಿ ವಾ ।
ಸದಾ ಸರ್ವಾತ್ಮತ್ವಾದ್ವಿಲಸಸಿ ಮಹಾಕಾಶವಪುಷಾ ।
ತಥಾ ಭೂತಾಯಾಸ್ತೇ ಪರಿಮಿತಕರಾಂ ಕ್ಷ್ಮಾದಿ ವಪುಷಾ ।
ವಿಲಾಸೋ ಭಕ್ತೇಷು ಪ್ರಭವತಿ ಕೃಪಾ ಯಂತ್ರಣವಶಾತ್ ॥೬೮॥

ತವಾಪ್ಯೇತದ್ರೂಪಂ ಶಿವಗುರು ಪದಾಂಭೋಜ ವಿಲಸತ್ ।
ಸುಭಕ್ತಿಪ್ರೋನ್ಮೀಲ ದ್ವಿಮಲ ನಯನಾನಾಂ ವಿಧಿವಶಾತ್ ।
ಕದಾಚಿತ್ಕೇಷಾಂ ಚಿದ್ಭವತಿ ಪುರತೋ ಭಾಗ್ಯವಶತಃ ।
ಪರಂ ಯತ್ತದ್ರೂಪಂ ಕಥಮಿಹ ಭವೇದಂಬ ಸುಲಭಂ ॥೬೯॥

ನಮಸ್ತೇ ಬಾಲಾಂಬ ತ್ರಿಪುರಹರಸೌಭಾಗ್ಯ ನಿಲಯೇ ।
ನಮಸ್ತೇ ಭಕ್ತೇಹಾ ಸಮಧಿಕ ಫಲೋತ್ಪಾದ ಚತುರೇ ।

ಆದಕಾರಣ ಓ ದೇವಿಯೇ, ನಿನ್ನ ಸ್ವರೂಪಕ್ಕಿಂತಲೂ ಭಿನ್ನವಾದುದು ಈ ಜಗತ್ತಿನಲ್ಲಿ ಮತ್ತೊಂದು ಪದಾರ್ಥವಿರುವುದಿಲ್ಲ. ನೀನು ಯಾವಾಗಲೂ ಸಕಲಾತ್ಮಳಾಗಿ ಮಹಾಕಾಶವೆಂಬ ಶರೀರದಿಂದ ಪ್ರಕಾಶಿಸುತ್ತೀಯೆ. ಹಾಗೆ ಇರುವ ಮಿತವಾದ ಕೈಕಾಲೇ ಮೊದಲಾದ ಶರೀರಗಳಿಂದ ಕೂಡಿದ ಭಕ್ತರ ವಿಷಯಕವಾದ ನಿನ್ನ ವಿಲಾಸವು ಭಕ್ತರ ವಿಷಯದಲ್ಲಿ ನೀನು ಅನುಸರಿಸುವ ಕೃಪೆಯ ವಶದಿಂದಲೇ ಆದುದಾಗಿದೆ. ॥೬೮॥

ಓ ದೇವಿಯೇ, ನಿನ್ನ ಈ ರೂಪದ ನೋಟವೂ ಕೂಡ ಸ್ಥಿರವಾದ ಭಕ್ತಿಯಿಂದ ಚೆನ್ನಾಗಿ ತೆರೆದ ಸ್ವಚ್ಛನೇತ್ರಗಳುಳ್ಳ ಎಂದರೆ ದೇವಿಯ ಸೇವೆಯಿಂದ ದಿವ್ಯದೃಷ್ಟಿಯನ್ನು ಪಡೆದಿರುವವರಿಗೆ ಅದೃಷ್ಟವಶದಿಂದ ಶಿವಗುರುವಿನ ಉಪದೇಶದಿಂದಲೇ ಲಭಿಸೀತು. ಈ ನಿನ್ನ ರೂಪವು ಯಾವಾಗಲೋ ಯಾರೋ ಕೆಲವರಿಗೆ ಭಾಗ್ಯದಿಂದ ನೋಡಲು ಲಭಿಸಿದೆ. ಈ ರೀತಿಯಾದ ನಿನ್ನ ರೂಪವೂ, ಹೇಗೆತಾನೇ ಸುಲಭವಾಗಿ ಪ್ರಾಪ್ತವಾದೀತು ? ॥೬೯॥

ಭಕ್ತರ ಅಜ್ಞಾನವೆಂಬ ಸಮುದ್ರವನ್ನು ಪಾನಮಾಡುವುದರಲ್ಲಿ ಅಗಸ್ತ್ಯಸ್ವರೂಪವಾಗಿರುವ ಪಾದವುಳ್ಳ ಓ ದೇವಿಯೇ, ನಿನಗೆ ನಮಸ್ಕಾರವು ಭಕ್ತರ ದುಃಖವೆಂಬ ಪರ್ವತವನ್ನು ನಾಶಮಾಡುವುದರಲ್ಲಿ ವಜ್ರಾಯುಧದಂತಿರುವ ಕೃಪೆಯಿಂದ ಕೂಡಿದ

ನಮಸ್ತೇ ದೈನ್ಯಾದ್ರಿ ಪ್ರವಿದಲನ ವಜ್ರಾಯಿತ ಕೃಪೇ ।
ನಮಸ್ತೇ ಮೋಹಾಂಭೋನಿಧಿ ಕವಲನಾಗಸ್ತ್ಯ ಚರಣೇ ॥೭೦॥

ಇತಿ ಸ್ಮೃತ್ವಾ ಮಹಾದೇವೀಂ ಪ್ರೇಮವಿಹ್ವಲಿತಾಂತರಃ ।
ದಂಡವತ್ಪತಿತೋ ಭೂಮೌ ತಸ್ಯಾಶ್ಚರಣಸನ್ನಿಧೌ ॥೭೧॥

ಆನಂದಾಶ್ರು ಕಲಾರುದ್ಧ ನೇತ್ರಃ ಪುಲಕಿತಾಂಗಕಃ ।
ಭಕ್ತಿ ನಿರ್ಭರಿತಸ್ವಾಂತೋ ನಾಶಕ್ನೋತ್ಕಿಮಪೀಹಿತುಂ ॥೭೨॥

ಯದಾ ಸ ವಕ್ತುಂ ದ್ರಷ್ಟುಂ ವಾ ಕಿಂಚಿತ್ಕರ್ತುಮನೀಶ್ವರಃ ।
ಪ್ರೇಮವಾರಿಧಿ ನಿರ್ಮಗ್ನಸ್ತದಾ ಸಾ ತ್ರಿಪುರಾಂಬಿಕಾ ॥೭೩॥

ಪ್ರಾಹ ಗಂಭೀರಾಮೃತೌಘ ವರ್ಷಿಣ್ಯಾ ಸುಸ್ಮಿತಾನನಾ ।
ವಾಚಾ ವತ್ಸೇ ತ್ಯುಪಾಮಂತ್ರ್ಯ ಮೂರ್ಧ್ನಿ ಹಸ್ತಾಂಬುಜಂ ನ್ಯಧಾತ್ ॥೭೪॥

ವಳೇ, ನಿನಗೆ ನಮಸ್ಕಾರವು. ಭಕ್ತರ ಇಚ್ಛೆಗಿಂತಲೂ ಹೆಚ್ಚಾದ ಫಲವನ್ನು ಕೊಡುವುದರಲ್ಲಿ ಚತುರಳಾದ ದೇವಿಯೇ, ನಿನಗೆ ನಮಸ್ಕಾರವು. ತ್ರಿಪುರಹರನ ಸೌಭಾಗ್ಯದ ನಿಧಿಯೇ, ನಿನಗೆ ನಮಸ್ಕಾರವು. ಓ ಬಾಲಾಂಬಿಕೆಯೇ, ನಿನಗೆ ನಮಸ್ಕಾರವು. ||೭೦||

ಹೀಗೆ ದೇವಿಯನ್ನು ಸುಮೇಧನು ಸ್ತೋತ್ರಮಾಡಿ ಪ್ರೇಮದಿಂದ ಕೂಡಿದ ಮನಸ್ಸುಳ್ಳವನಾಗಿ ದಂಡದಂತೆ ಭೂಮಿಯಲ್ಲಿ ದೇವಿಯ ಪಾದದ ಸಮೀಪದಲ್ಲಿ ನಮಸ್ಕರಿಸಿದನು. ||೭೧||

ದೇವಿಯ ದರ್ಶನದಿಂದುಂಟಾದ ಆನಂದದಿಂದ ಅಶ್ರುಪೂರ್ಣವಾದ ಕಣ್ಣುಗಳುಳ್ಳವನಾಗಿ ರೋಮಾಂಚದಿಂದ ಕೂಡಿ, ಭಕ್ತಿಯಿಂದ ಭರಿತವಾದ ಹೃದಯವುಳ್ಳ ಸುಮೇಧನು ದೇವಿಯನ್ನು ಏನನ್ನು ಆಶಿಸಿ ಕೇಳಲೂ ಅಸಮರ್ಥನಾದನು. ||೭೨||

ಆ ಸುಮೇಧನು ಪ್ರೇಮಸಮುದ್ರದಲ್ಲಿ ಮುಳುಗಿ ಏನನ್ನಾದರೂ ಹೇಳಲಾಗಲೀ, ನೋಡಲಾಗಲೀ, ಅಸಮರ್ಥನಾದುದನ್ನು ನೋಡಿದ ತ್ರಿಪುರಾಂಬಿಕೆಯು ಮುಗುಳು ನಗೆ ನಗುತ್ತಾ ಗಂಭೀರವಾಗಿ ಅಮೃತ ವರ್ಷದಂತೆ ಆಹ್ಲಾದಕವೂ, ಇಂಪೂ, ಆದ ಮಾತಿನಿಂದ ಮಗುವೇ, ಎಂದು ಕೂಗಿ ಅವನ ತಲೆಯಲ್ಲಿ ತನ್ನ ಕರಕಮಲವನ್ನು ಇರಿಸಿದಳು. ||೭೩-೭೪||

ಸ ತು ಪೂರ್ವಂ ದರ್ಶನೇನ ಮಗ್ನ ಆನಂದಸಾಗರೇ ।
ಪುನಸ್ತಸ್ಯಾಃ ಕರಸ್ಪರ್ಶಾ ದ್ಬ್ರಹ್ಮಾನಂದ ಮಯೋಽಭವತ್ ॥೭೫॥

ಉವಾಚ ಸಾ ಜಗನ್ಮಾತಾ ಸುಮೇಧೋತ್ತಿಷ್ಠ ಮಾ ಚಿರಂ ।
ಗಚ್ಛ ಶೀಘ್ರಂ ಗುರೋಃ ಪಾರ್ಶ್ವೇ ಸಿದ್ಧೋಽಸೀಪ್ಸಿತ ಲಾಭತಃ ॥೭೬॥

ಇತ್ಯುಕ್ತ್ವಾಽಂತರ್ಹಿತಾ ಸದ್ಯೋ ಮನೋರಥ ಮನುಷ್ಯವತ್ ।
ಸೋಽಪಿ ಪ್ರಬುದ್ಧ ಸ್ತತ್ಕಾಲೇ ಕಿಮೇತದಿತಿ ಚಿಂತಯನ್ ॥೭೭॥

ನಾತಿಸ್ವಸ್ಥಮನಾಃ ಸ್ವಪ್ನೇ ಭೂಯೋ ಭೂಯೋ ವಿಚಿಂತಯನ್ ।
ತಾಂ ಮೂರ್ತಿಂ ಸುಂದರೀಂ ವಾಚಂ ಪೀಯೂಷರಸಸೋದರೀಂ ॥೭೮॥

ಆ ಸುಮೇಧನು ಮೊದಲೇ ದೇವಿಯ ದಿವ್ಯರೂಪದದರ್ಶನ ಲಾಭದಿಂದಲೇ ಆನಂದಾಂಬುಧಿಯಲ್ಲಿ ಮುಳುಗಿದ್ದನು. ದೇವಿಯ ಕರಸ್ಪರ್ಶವಾಗಲು ಅವನು ಬ್ರಹ್ಮಾನಂದಸ್ವರೂಪನೇ ಆದನು. ॥೭೫॥

ಅನಂತರದಲ್ಲಿ ಜಗನ್ಮಾತೆಯು, ಸುಮೇಧನೇ, ಬೇಗನೆ ಏಳು, ತಡಮಾಡ ಬೇಡ, ನೀನು ಅಪೇಕ್ಷಿಸಿದಂತೆ ಸಿದ್ಧಿಯನ್ನು ಪಡೆದಿರುವೆ. ಜಾಗ್ರತೆಯಾಗಿ ಗುರುವಿನ ಸಮೀಪಕ್ಕೆ ಹೋಗು, ಎಂದು ಹೇಳಿದಳು! ॥೭೬॥

ಹೀಗೆಂದು ದೇವಿಯು ಹೇಳಿ, ತತ್ಕ್ಷಣವೇ ಮನುಷ್ಯನ ಮನೋರಥದಂತೆ ಅಂತರ್ಧಾನಳಾದಳು.

ಆ ಸುಮೇಧನೂ ಕೂಡ ನಿದ್ದೆಯಿಂದ ಎಚ್ಚೆತ್ತು ಇದೇನು? ಎಂದು ಯೋಚಿಸ ತೊಡಗಿದನು. ॥೭೭॥

ಸ್ವಪ್ನದಲ್ಲಾದ ಅನುಭವದಿಂದ ಸುಮೇಧನು ಕದಡಲ್ಪಟ್ಟ ಮನಸ್ಸುಳ್ಳವನಾಗಿ ಆ ದೇವಿಯ ಸುಂದರವಾದ ಮೂರ್ತಿಯನ್ನೂ, ಅವಳ ಅಮೃತಸದೃಶವಾದ ಮಾತನ್ನೂ ಮತ್ತೆ ಮತ್ತೆ ಯೋಚಿಸುತ್ತಾ, ಸಮಯವನ್ನು ಕಲ್ಪಸ್ವರೂಪವನ್ನಾಗಿ ತಿಳಿಯುತ್ತಾ, ಸ್ನಾನಕ್ಕಾಗಿ ನದಿಗೆ ಹೋದನು. ॥೭೮॥

ವೇಲಾಂ ಕಲ್ಪಾತ್ಮಿಕಾಂ ಜ್ಞಾತ್ವಾ ಸ್ನಾನಾಯೋಗಾತ್ಸರಿದ್ವರೇ ।
ತದೇವ ಚಿಂತಯಾನಃ ಸ ವಿಸ್ಮೃತಾಹ್ನಿಕ ಸತ್ಕ್ರಿಯಃ ॥೭೯॥

ಸ್ಮಯನ್ನುವಾಚ ಸ್ವಾತ್ಮಾನ ಮೇತತ್ಕಿಮ್ಮೇ ಸಮೀಕ್ಷಿತಂ ।
ಸತ್ಯಂ ವಾ ಯದಿ ವಾಽಸತ್ಯಂ ನ ವೇದ್ಮ್ಯೈತಸ್ಯ ಕಾರಣಂ ॥೮೦॥

ವಿಶ್ವಸ್ಯ ಗುರುಸಾನ್ನಿಧ್ಯಂ ಗತ್ವಾ ಕಿಂ ಪ್ರಬ್ರವೀಮ್ಯಹಂ ।
ಸ್ವಪ್ನಸ್ಯ ಭ್ರಾಂತಿರೂಪತ್ವಾ ದವಿಶ್ವಾಸ್ಯೋ ಮನೀಷಿಣಾಂ ॥೮೧॥

ನ ಗಚ್ಛಾಮಿ ಕಥಂ ದೇವ್ಯಾ ವಚನಾಚ್ಛೃದ್ಧಯಾ ಖಲಃ ।
ಅಹೋ ವಿಷಮಮಾಭಾತಿ ಕಾಲಸ್ಯ ಗತಿರುಲ್ಬಣಾ ॥೮೨॥

ತಥಾಽಪಿ ನೈವ ಗಚ್ಛಾಮಿ ತತ್ಪರಾ ಕ್ಷಂತು ಮರ್ಹತಿ ।
ಇತಿ ನಿಶ್ಚಿತ್ಯ ನಿತ್ಯಾರ್ಥೇ ಪ್ರವೃತ್ತೇ ತು ಸುಮೇಧಸಿ ॥೮೩॥

ಆಹಾಽಶರೀರವಾಣ್ಯೇನಂ ಶೃಣು ವತ್ಸೇತಿ ಬ(ವ)ಲ್ಗುನಾ ।
ವಚಸಾಂ ತ್ವಮವಿಶ್ವಾಸಂ ತ್ಯಜ ಸತ್ಯಂ ನ ತನ್ಮೃಷಾ ॥೮೪॥

ಆ ಸ್ವಪ್ನ ವಿಷಯವನ್ನೇ ಯೋಚಿಸುತ್ತಾ ಸುಮೇಧನು ಆಹ್ನಿಕಾದಿ ಕೆಲಸಗಳನ್ನು ಮರೆತವನಾಗಿ ನಗುತ್ತಾ ತನ್ನಲ್ಲಿ ತಾನೇ ಇದೇನನ್ನು ನಾನು ನೋಡಿದೆ? ಸತ್ಯವೋ, ಅಸತ್ಯವಾದುದೋ ಗೊತ್ತಿಲ್ಲವಲ್ಲ. ಈ ರೀತಿಯಾಗಿ ಆಗಲು ಕಾರಣವೇನೆಂಬುದನ್ನು ನಾನು ತಿಳಿಯಲಿಲ್ಲ. ॥೭೯-೮೦॥

ಸ್ವಪ್ನವು ಭ್ರಾಂತಿರೂಪವಾದುದು. ಆದಕಾರಣ ಜ್ಞಾನಿಗಳು ಸ್ವಪ್ನವನ್ನು ನಂಬುವುದಿಲ್ಲ. ನಾನು ಈ ಸ್ವಪ್ನವನ್ನು ನಂಬಿ ಗುರುವಿನ ಸಮೀಪಕ್ಕೆ ಹೋಗಿ ಏನನ್ನು ಹೇಳಲಿ? ॥೮೧॥

ದೇವಿಯ ಆಜ್ಞೆಯಾಗಿರುತ್ತದೆ. ಆ ಆಜ್ಞೆಗೆ ವಿರುದ್ಧವಾಗಿ ಹೇಗೆ ಹೋಗದಿರಲಿ? ಅಯ್ಯೋ ಇದೇನು ಪ್ರಕಟವಾಗಿ ಕಾಲಗತಿಯು ವಿಷಮವಾಗಿ ತೋರುತ್ತಿದೆಯಲ್ಲಾ! ॥೮೨॥

ಆದಾಗ್ಯೂ ನಾನು ಹೋಗುವುದಿಲ್ಲ. ಆ ದೇವಿಯು ನನ್ನನ್ನು ಕ್ಷಮಿಸಲಿ, ಎಂಬುದಾಗಿ ನಿಶ್ಚಯಿಸಿ ತನ್ನ ನಿತ್ಯಕರ್ಮಗಳನ್ನು ಸುಮೇಧನು ಮಾಡಲು ಪ್ರಾರಂಭಿಸಿದನು. ಆಗ ಅಶರೀರವಾಣಿಯು ಸುಮೇಧನನ್ನು ಕುರಿತು ಎಲೌ ವತ್ಸನೇ, ಕೇಳು.

ಇತಿ ಶ್ರುತ್ವಾಽಥ ವಚನಮಾಕಾಶೇ ನಿರ್ಜನಾಲಯೇ।
ಪ್ರಸನ್ನಚಿತ್ತಃ ಸಾಷ್ಟಾಂಗಂ ನನಾಮ ಭುವಿ ಸಾದರಃ ॥೮೫॥

ಅಥ ಶೀಘ್ರಂ ರಾಮಶಯಂ ಗತ್ವಾ ತತ್ಪಾದಪಂಕಜಂ।
ಮೂರ್ಧ್ನಾ ಸಂಸ್ಪೃಶ್ಯ ತದ್ವೃತ್ತಂ ಯಥಾ ವತ್ಸ ನ್ಯವೇದಯತ್॥೮೬॥

ತಚ್ಛ್ರುತ್ವಾ ಭಾರ್ಗವೋ ರಾಮಃ ಪ್ರಾಹ ಶಿಷ್ಯಂ ಸುವಿಸ್ಮಿತಃ।
ಧನ್ಯಸ್ತ್ವಂ ವತ್ಸ ತೇ ಸ್ವಪ್ನೇ ದೃಷ್ಟಾ ಸಾ ತ್ರಿಪುರಾ ಪರಾ ॥೮೭॥

ನಾನ್ಯಸ್ತ್ವತ್ತೋ ಧನ್ಯತರಃ ಪ್ರಸನ್ನಾ ಯಸ್ಯ ಸಾ ಪರಾ।
ಮಯಾಽಪಿ ಸರ್ವಮೇ ತತ್ತೇ ವೃತ್ತಂ ಸಮವಲೋಕಿತಂ ॥೮೮॥

ಯೋಗದೃಷ್ಟ್ಯಾಽಥ ತೇ ಸರ್ವಂ ಸಮ್ಯಕ್ಸಂಪದ್ಯತೇಽಧುನಾ।
ಇತ್ಯುಕ್ತ್ವಾ ಸು ಶುಭೇಕಾಲೇ ಸಾಂಗೋಪಾಂಗಾಂ ಸವಿಸ್ತರಾಂ ॥೮೯॥
ಶ್ರೀವಿದ್ಯಾಂ ಕ್ರಮಮಾರ್ಗೇಣ ದೀಕ್ಷಯಾಮಾಸ ಯೋಗಿರಾಟ್।

ದೇವಿಯ ಮಾತುಗಳಲ್ಲಿ ಅಪನಂಬಿಕೆಪಡಬೇಡ. ಅದು ಸತ್ಯವೇ ಹೊರತು ಸುಳ್ಳಲ್ಲ. ಎಂದು ಹೇಳಿತು. ॥೮೩-೮೪॥

ಈಪ್ರಕಾರವಾಗಿ ಯಾರೂ ಇಲ್ಲದ ನಿರ್ಜನವಾದ ಆಕಾಶದಲ್ಲಿನ ಮಾತನ್ನು ಕೇಳಿ ಸಂತೋಷಗೊಂಡವನಾಗಿ ಭೂಮಿಯಲ್ಲಿ ಪ್ರೀತಿಯಿಂದ ಸಾಷ್ಟಾಂಗ ನಮಸ್ಕಾರವನ್ನು ಮಾಡಿದನು. ॥೮೫॥

ಅನಂತರದಲ್ಲಿ ಸುಮೇಧನು ಪರಶುರಾಮನ ಸಮೀಪಕ್ಕೆ ಜಾಗ್ರತೆಯಾಗಿ ಹೋಗಿ ಅವನ ಅಡಿದಾವರೆಗಳಲ್ಲಿ ನಮಸ್ಕರಿಸಿ ತನ್ನಾಶ್ರಮದಲ್ಲಿ ನಡೆದ ಸಕಲ ವಿಷಯಗಳನ್ನೂ ಕ್ರಮವಾಗಿ ಹೇಳಿದನು. ॥೮೬॥

ಶಿಷ್ಯನಾದ ಸುಮೇಧನ ಮಾತನ್ನು ಕೇಳಿ ಪರಶುರಾಮನು ನಗುತ್ತಾ ಎಲೌ ವತ್ಸನೇ, ನೀನು ಧನ್ಯನು! ಅದರಿಂದ ನಿನಗೆ ಸ್ವಪ್ನದಲ್ಲಿ ಆ ಉತ್ಕೃಷ್ಟಳಾದ ತ್ರಿಪುರಾ ದೇವಿಯು ಕಾಣಿಸಿಕೊಂಡಳು. ನಿನಗಿಂತಲೂ ಧನ್ಯರು ಬೇರೊಬ್ಬರಿಲ್ಲ. ನಿನಗೆ ಆ ಉತ್ಕೃಷ್ಟಳಾದ ದೇವಿಯು ಒಲಿದಳು. ನಾನೂ ಈ ನಡೆದ ಸಕಲ ವೃತ್ತಾಂತವನ್ನೂ ನೋಡಿದೆನು. ॥೮೭-೮೮॥

ನಿನಗೆ ಸಕಲವೂ ಈಗ ಯೋಗದೃಷ್ಟಿಯಿಂದಲೇ ಉಂಟಾಗುತ್ತದೆ. ಹೀಗೆಂದು ಹೇಳಿ, ಮಂಗಳಕರವಾದ ಮುಹೂರ್ತದಲ್ಲಿ ಸುಮೇಧನಿಗೆ ಪರಶುರಾಮನು ಅಂಗ

ಪ್ರಾಪ್ತ ದೀಕ್ಷಸ್ಯ ತಸ್ಯಾಥೋ ದತ್ತಾತ್ರೇಯಾಚ್ಛ್ರುತಂ ಪುರಾ ॥೯೦॥

ಇತಿಹಾಸಂ ತಂತ್ರಸಾರಂ ಪುಣ್ಯಂ ಭಾಗವತೋತ್ತಮಂ ।
ಸಾಕ್ಷಾಚ್ಛಿವೋಕ್ತಂ ತ್ರಿಪುರಾರಹಸ್ಯ ಮುಪದಿಷ್ಟವಾನ್ ॥೯೧॥

ವತ್ಸೈತತ್ಪರಮಂ ಗೋಪ್ಯಂ ರಕ್ಷಣೀಯಂ ಪ್ರಯತ್ನತಃ ।
ನ್ಯಸ್ತಂ ಮಯಿ ಶ್ರೀಗುರುಣಾ ತದಾಜ್ಞಾವಶತಸ್ತ್ವಯಿ ॥೯೨॥

ಸಂಕ್ರಾಮಿತಮಭಕ್ತೇಷು ನಾಸ್ತಿಕೇಷು ನ ವಕ್ಷ್ಯಸಿ ।
ಆರಾಧ್ಯ ತ್ರಿಪುರೇಶಾನೀಂ ತತ್ಪ್ರಸಾದ ಮವಾಪ್ಯಚ ॥೯೩॥

ನಿಬಧ್ಯ ಗ್ರಂಥರೂಪೇಣ ಸಚ್ಛಿಷ್ಯೇಷು ನಿಯೋಜಯ ।
ಏವಮಾಜ್ಞಾ ಮಮ ಗುರೋಃ ತತ್ಸತ್ಯಂ ಸ್ಯಾನ್ನಚಾನ್ಯಥಾ ॥೯೪॥

ಮತ್ತು ಉಪಾಂಗಗಳಿಂದ ಕೂಡಿ ವಿಸ್ತಾರವಾದ ಶ್ರೀವಿದ್ಯೆಯನ್ನು ವಿಧಿವತ್ತಾಗಿ ಉಪದೇಶಿಸಿದನು. ||೮೯||

ದೀಕ್ಷಾಬದ್ಧನಾದ ಅವನಿಗೆ ಪರಶುರಾಮನು, ದತ್ತಾತ್ರೇಯನು ಪೂರ್ವದಲ್ಲಿ ತನಗೆ ಹೇಳಿದ್ದ, ಪುಣ್ಯಕರವೂ, ಭಾಗವತದಲ್ಲಿ ಶ್ರೇಷ್ಠವೂ, ತಂತ್ರಗಳ ಸಾರಗಳಿಂದ ಕೂಡಿದುದೂ, ಶಿವನು ತಾನೇ ಸ್ವಂತವಾಗಿ ಉಪದೇಶಿಸಿದುದೂ, ಅತ್ಯುತ್ತಮವಾದ ಇತಿಹಾಸವೂ ಆದ ತ್ರಿಪುರಾದೇವಿಯ ರಹಸ್ಯವನ್ನು ಉಪದೇಶಿಸಿದನು. ||೯೦-೯೧||

ಎಲೌ ಪ್ರಿಯನಾದ ಸುಮೇಧನೇ, ಈ ಶ್ರೇಷ್ಠವಾದ ಶ್ರೀವಿದ್ಯೆಯನ್ನು ಪ್ರಯತ್ನ ಪೂರ್ವಕವಾಗಿ ಗೋಪ್ಯವಾಗಿರುವಂತೆ ಕಾಪಾಡಬೇಕು. ನನಗೆ ನನ್ನ ಗುರುವಾದ ದತ್ತಾತ್ರೇಯನ ಅಪ್ಪಣೆಯಾಗಿತ್ತು. ಅದರಂತೆಯೇ ನಾನು ನಿನಗೆ ಶ್ರೀವಿದ್ಯೆಯನ್ನು ಉಪದೇಶಿಸಿದೆನು. ಭಕ್ತರಲ್ಲದ ನಾಸ್ತಿಕರಿಗೆ ಈ ತ್ರಿಪುರಾರಹಸ್ಯವನ್ನು ಹೇಳಕೂಡದು. ನೀನು ಶ್ರೀದೇವಿಯನ್ನು ಉಕ್ತಕ್ರಮದಲ್ಲಿ ಪೂಜಿಸಿ ಆ ಮಾತೆಯ ಅನುಗ್ರಹವನ್ನು ಪಡೆದನಂತರ ಇದನ್ನು ಗ್ರಂಥರೂಪದಲ್ಲಿ ಬರೆದು ಯೋಗ್ಯರಾದ ಶಿಷ್ಯರಿಗೆ ಹೇಳಿ ಕೊಡು. ಈ ಪ್ರಕಾರ ನನ್ನ ಗುರುಗಳು ನನಗೆ ಅಪ್ಪಣೆಮಾಡಿರುತ್ತಾರೆ. ಆ ಗುರುವಿನ ಮಾತು ಸತ್ಯವಾಗುವುದಲ್ಲದೇ ಬೇರೆಯಾಗುವುದಿಲ್ಲ. ಹೀಗೆಂಬುದಾಗಿ ಹೇಳಿ ನಮಸ್ಕರಿಸಿದ ಶಿಷ್ಯನಿಗೆ ಆಶೀರ್ವಾದವನ್ನು ಮಾಡಿದನು. ||೯೨-೯೩-೯೪||

ಇತ್ಯುಕ್ತ್ವಾ ಪ್ರಣತಂ ಶಿಷ್ಯಮಾಶೀರ್ಭಿರನುಯೋಜಯತ್ ।
ಅಥ ನತ್ವಾ ಗುರುಂ ರಾಮಂ ಪರಿಕ್ರಮ್ಯ ಪ್ರದಕ್ಷಿಣಂ ॥೯೫॥

ಜಗಾಮ ಹಾಲಾಸ್ಯಪುರೇ ಯತ್ರ ಶ್ರೀ ಮೀನಲೋಚನಾ ।
ಪರಾಂಬಾ ರಾಜತೇ ಸಾಕ್ಷಾತ್ಸುಂದರೇಶ್ವರ ವಲ್ಲಭಾ ॥೯೬॥

ಸುವರ್ಣಪದ್ಮಿನೀ ತೀರೇ ವೇಗವತ್ಯ ವಿದೂರತಃ ।
ತಪಃ ಪರಮಮಾತಿಷ್ಠದುದ್ದಿಶ್ಯ ಶ್ರೀಪರಾಂಬಿಕಾಂ ॥೯೭॥

ಧ್ಯಾನನಿಷ್ಠೋ ಮಹಾಭಾಗೋ ನಿಯಮೈರನ್ವಿತೋ ಯಮೈಃ ।
ಕಾಲೇ ಕಾಲೇ ಪೂಜಯನ್ ತಾಂ ನಿಯತೇಂದ್ರಿಯಮಾನಸಃ ॥೯೮॥

ತಾಂ ಧ್ಯಾಯನ್ ಲಲಿತಾಂ ನಿತ್ಯಂ ಭಕ್ತಿಭಾವ ಸಮೃದ್ಧಿಮಾನ್ ।
ಪೂಜಯಾಮಾಸ ಪರಮಾಮೇವಂ ತಸ್ಯ ಸುಮೇಧಸಃ ॥೯೯॥

ಅತಿಕ್ರಾಂತಾಃ ಸಮಾಃ ಪಂಚ ಲಲಿತಾಂ ಧ್ಯಾಯತೋಽನ್ವಹಂ ।
ಅಥೈಕದಾ ಧ್ಯಾನನಿಷ್ಠೋ ದೃಷ್ಟ್ವಾಽಂತಃ ಪುರುಷಂ ಶಿವಂ ॥೧೦೦॥

ಅನಂತರದಲ್ಲಿ ಸುಮೇಧನು ಗುರುವಾದ ಪರಶುರಾಮನಿಗೆ ಪ್ರದಕ್ಷಿಣೆ ನಮಸ್ಕಾರವನ್ನು ಮಾಡಿ, ಪರಾಂಬಿಕೆಯಾದ, ಸುಂದರೇಶ್ವರನ ಪತ್ನಿಯಾದ ಮೀನಲೋಚನೆಯು ಪ್ರಕಾಶಿಸುತ್ತಿರುವ ಹಾಲಾಸ್ಯಪುರಕ್ಕೆ ಹೋದನು. ॥೯೫-೯೬॥

ಆ ವೇಗವತೀ ಸಮೀಪದಲ್ಲಿ ಪದ್ಮಸರೋವರದ ದಡದಲ್ಲಿ ಶ್ರೀಪರಾಂಬಿಕೆಯನ್ನುದ್ದೇಶಿಸಿ ಸುಮೇಧನು ಶ್ರೇಷ್ಠವಾದ ತಪಸ್ಸನ್ನು ಮಾಡಿದನು. ॥೯೭॥

ಲಲಿತಾಂಬಿಕೆಯ ಧ್ಯಾನದಲ್ಲಿ ನಿರತನೂ, ಮಹಾಭಾಗನೂ ಆದ ಸುಮೇಧನು ಯಮನಿಯಮಾದಿಗಳಿಂದ ಕೂಡಿ, ಇಂದ್ರಿಯಗಳನ್ನು ಜಯಿಸಿ ಯುಕ್ತವಾದ ಕಾಲಗಳಲ್ಲಿ ಆ ದೇವಿಯನ್ನು ಅರ್ಚಿಸುತ್ತಿದ್ದನು. ಪ್ರತಿದಿವಸವೂ ಲಲಿತಾದೇವಿಯನ್ನು ಭಕ್ತಿಯಿಂದ ಕೂಡಿ, ಧ್ಯಾನಿಸುತ್ತಾ ಪರಾದೇವಿಯಾದ ಅವಳನ್ನು ಪೂಜಿಸಿದನು. ಹೀಗೆ ಲಲಿತಾಂಬಿಕೆಯನ್ನು ಯಾವಾಗಲೂ ಆ ಸುಮೇಧನು ಧ್ಯಾನಿಸುತ್ತಾ ಇರಲು ಐದುವರ್ಷಗಳ ಕಾಲ ಕಳೆದುಹೋಯಿತು. ॥೯೮-೯೯॥

ಹೀಗಿರಲೊಂದುದಿವಸ ಧ್ಯಾನಾಸಕ್ತನಾದ ಸುಮೇಧನು ಹೃದಯದಲ್ಲಿ ಕರ್ಪೂರದಂತೆ ಗೌರವರ್ಣವಿಶಿಷ್ಟನೂ, ಜಟಾಧಾರಿಯೂ, ಭಸ್ಮವನ್ನು ಲೇಪಿಸಿ

ಕರ್ಪೂರ ಗೌರಂ ಜಟಿಲಂ ಭಸ್ಮೋದ್ಧೂಲಿತ ವಿಗ್ರಹಂ ।
ಕರೇಣ ವಾದಯನ್ವೀಣಾಂ ಪುರತಃ ಸಮುವಸ್ಥಿತಂ ॥೧೦೧॥

ಕಿಮೇತದಿತಿ ಸಾಶ್ಚರ್ಯ ಮುನ್ಮೀಲ್ಯ ನಯನೇ ತದಾ ।
ಪುರಃ ಸ್ಥಿತಂ ನಾರದಂ ತಮುನ್ವೀಕ್ಷ್ಯೋತ್ಥಾಯ ವಿಸ್ಮಿತಃ ॥೧೦೨॥

ವಿಷ್ಟರಂ ಪ್ರತಿಪಾದ್ಯಾಥ ಪ್ರಣಿಪತ್ಯ ಕೃತಾಂಜಲಿಃ ।
ಉವಾಚಮಧುರಂ ವಾಕ್ಯಂ ವಿನೀತೋ ಹೃಷ್ಟಮಾನಸಃ ॥೧೦೩॥

ದೇವರ್ಷೇ ಸ್ವಾಗತಂ ತೇಽಸ್ತು ಕ್ಷಂತವ್ಯಾ ಮದಪಾಕೃತಿಃ ।
ಮಯಾ ಧ್ಯಾನಸ್ಥಿತೇನೇಹ ಪುರಸ್ತ್ವಂ ನಾವಲೋಕಿತಃ ॥೧೦೪॥

ಸತಾಂ ಸಮಾಗಮೋ ಲೋಕೇ ಭೂರ್ಯಭ್ಯುದಯಕಾರಣಂ ।
ಕೃತಾರ್ಥೋಽಹಂ ಭವದ್ಭಿರ್ಯದನುಗ್ರಹ ವಿಲೋಕಿತಃ ॥೧೦೫॥

ಈಪ್ಸಿತಂ ಮೇ ಸು ಸಂಪನ್ನಂ ಭವದ್ದರ್ಶನ ಮಾತ್ರತಃ ।
ತಥಾಽಪಿ ಮೇ ಮುನಿಶ್ರೇಷ್ಠ ಪ್ರಷ್ಟವ್ಯ ಮುವಶಿಷ್ಯತೇ ॥೧೦೬॥

ಕೊಂಡಿರುವವನೂ, ಕೈಯಲ್ಲಿ ವೀಣೆಯನ್ನು ಹಿಡಿದು ನಾದಮಾಡುತ್ತಿರುವವನೂ ಆದ ಶಿವನನ್ನು ಎದುರುಗಡೆಯಲ್ಲಿ ಕಂಡನು. ॥೧೦೧॥

ಇದೇನು? ಆಶ್ಚರ್ಯ! ಹೀಗೆ ಕಂಡಿತಲ್ಲಾ! ಎಂದು ಸುಮೇಧನು ಕಣ್ಣು ಬಿಟ್ಟು ನೋಡಿದನು. ಎದುರಿಗೆ ನಾರದಮಹರ್ಷಿಯು ನಿಂತಿದ್ದನು. ಹಾಗೆ ನಿಂತಿರುವ ನಾರದನನ್ನು ನೋಡಿ, ತತ್ಕ್ಷಣ ಆಸನವನ್ನು ಕೊಟ್ಟು ಕುಳ್ಳಿರಿಸಿ ನಮಸ್ಕರಿಸಿ, ಅಂಜಲಿಬದ್ಧನಾಗಿ ಸಂತೋಷದಿಂದ ನಮ್ರನಾಗಿ ಮಧುರವಾಗಿ ಮಾತನಾಡಿದನು. ॥೧೦೨-೧೦೩॥

ಓ ದೇವರ್ಷಿಯಾದ ನಾರದನೇ, ನಿನಗೆ ಸುಖಾಗಮನವು. ನನ್ನ ಅಪಚಾರವನ್ನು ಕ್ಷಮಿಸಬೇಕು. ನಾನು ಧ್ಯಾನನಿಷ್ಠನಾಗಿದ್ದೆ. ಆ ಕಾರಣ ಎದುರಿಗೆ ನಿಂತಿದ್ದ ನಿನ್ನನ್ನು ನೋಡಲಾರದವನಾದೆ. ಸತ್ಪುರುಷರು ಎಲ್ಲಾದರೂ ಬಂದರೆಂದರೆ ಯಾರಲ್ಲಿಗೆ ಬರುವರೋ ಅವರ ಅತಿಶಯವಾದ ಅಭ್ಯುದಯಕ್ಕಾಗಿಯೇ. ನೀವು ಕೃಪೆಯಿಂದ ನನ್ನಲ್ಲಿಗೆ ಬಂದುದಕ್ಕಾಗಿ ನಾನು ಕೃತಾರ್ಥನು. ॥೧೦೩-೧೦೪॥

ಓ ಋಷಿಶ್ರೇಷ್ಠನೇ, ನಿನ್ನ ದರ್ಶನ ಒಂದರಿಂದಲೇ ನನ್ನ ಇಚ್ಛೆಗಳೆಲ್ಲವೂ ಪರಿಪೂರ್ಣವಾದವು. ಆದರೆ ನಿನ್ನನ್ನು ಒಂದು ಪ್ರಶ್ನೆ ಮಾಡಬೇಕಾಗಿದೆ. ॥೧೦೫॥

ಪೃಚ್ಛಾಮಿ ಕಿಂಚಿತ್ತ್ವಾ ಬ್ರಹ್ಮನ್ ಮಹಾನ್ಸಂದೇಹ ಆಸ್ಥಿತಃ ।
ತ್ವಂ ಬಹಿಃ ಸಂಸ್ಥಿತೋಽಪೀಹ ಕಥಂ ಮೇಽಂತಃ ಸಮೀಕ್ಷಿತಃ ॥೧೦೭॥

ಏತಸ್ಯ ಕಾರಣಂ ಬ್ರೂಹಿ ಯದಿ ಶ್ರೋತವ್ಯ ಮಸ್ತಿ ಮೇ ।
ಸಾಧವ ಸ್ಸಮಭಾವೇನ ಸಂಸ್ಥಿತಾ ದೀನವತ್ಸಲಾಃ ॥೧೦೮॥

ಇತಿಪೃಷ್ಟ ಸ್ತದಾ ತೇನ ಲೋಕಾನುಗ್ರಹ ತತ್ಪರಃ ।
ನಾರದಃ ಪ್ರಹಸನ್ವಾಕ್ಯ ಮುವಾಚಾಽಖಿಲ ದರ್ಶನಃ ॥೧೦೯॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ನಾರದಾಭಿಗಮನಂ ನಾಮ ಪ್ರಥಮೋಽಧ್ಯಾಯಃ

ಓ ಬ್ರಹ್ಮಋಷಿಯೇ, ಸ್ವಲ್ಪವನ್ನು ಕೇಳುತ್ತೇನೆ. ನನಗೊಂದು ದೊಡ್ಡ ಸಂದೇಹವುಂಟಾಗಿದೆ. ನೀನು ಹೊರಗೆ ನಿಂತಿದ್ದೆ. ಆದರೆ ನಾನು ನಿನ್ನನ್ನು ನನ್ನ ಹೃದಯದಲ್ಲಿ ನೋಡಿದೆ. ಇದಕ್ಕೆ ಕಾರಣವೇನು ? ಎನ್ನುವುದು ನನಗೆ ತಿಳಿಯದಾಗಿದೆ. ಸಾಧುಗಳಾದವರು ಸಮಭಾವವುಳ್ಳವರು. ಮತ್ತು ದೀನರಲ್ಲಿ ಪ್ರೀತಿಯುಳ್ಳವರು. ನನಗೆ ಈ ವಿಷಯವನ್ನು ಕೇಳಲರ್ಹವಾದುದೇ ಆದರೆ ಕೃಪೆಮಾಡಿ ಹೇಳಿ ನನ್ನ ಸಂದೇಹವನ್ನು ನಿವಾರಣೆಮಾಡುವವನಾಗು. ||೧೦೭-೧೦೮||

ಹೀಗೆ ಹಾರಿತಾಯನನು ಪ್ರಶ್ನಿಸಲು, ಯಾವಾಗಲೂ ಪ್ರಪಂಚಕ್ಕೆ ಅನುಗ್ರಹ ಮಾಡುವುದರಲ್ಲೇ ಆಸಕ್ತನಾದ ಸಕಲವನ್ನೂ ನೋಡಲು ಸಾಮರ್ಥ್ಯವುಳ್ಳ ನಾರದನು ನಕ್ಕು ಹೇಳಿದನು. ||೧೦೯||

ಇಲ್ಲಿಗೆ ಇತಿಹಾಸಗಳಲ್ಲಿ ಶ್ರೇಷ್ಠವಾದ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ
ಹನ್ನೆರಡು ಸಹಸ್ರ ಸಂಹಿತೆಯಲ್ಲಿ ನಾರದನ ಬರುವಿಕೆಯೆಂಬ
ಮೊದಲನೆಯ ಅಧ್ಯಾಯವು ಮುಗಿಯಿತು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ದ್ವಿತೀಯೋಽಧ್ಯಾಯಃ ||

ಎರಡನೆಯ ಅಧ್ಯಾಯವು

ಹಾರಿತಾಯನ ವತ್ಸೈತತ್ತ್ವಯಾ ಪ್ರೋಕ್ತಂ ಮಹಾಽದ್ಭುತಂ ।
ಅಂತಃ ಸಮೀಕ್ಷಿತ ಇತಿ ವಿದುಷೋ ವಾಽತಿಬಾಲವತ್ ॥೧॥

ನೂನಂ ಮಯಾ ಪರ್ಯಟತಾ ದೃಷ್ಟಾ ಭುವನ ಪಙ್ಕ್ತಯಃ ।
ವಿದ್ವಾಂಸೋ ಮಂದಮತಯಃ ಸ್ತ್ರಿಯಃ ಶೂದ್ರಾಶ್ಚ ಪಾಮರಾಃ ॥೨॥

ಬಹುಧಾ ತೈ ರಹಂ ಪೃಷ್ಟೋ ನೈವ ಮದ್ಯಾವಧಿ ಕ್ವಚಿತ್ ।
ನಾಮ್ನಾ ಸುಮೇಧಾ ವಿದ್ವಾಂ ಸ್ತ್ವಂ ಪ್ರಶ್ನಾರ್ಥಂ ವದ ಮೇ ಸ್ಫುಟಂ ॥೩॥

ಪ್ರೀತಿಪಾತ್ರನಾದ ಎಲೌ ಹಾರಿತಾಯನನೇ, ನೀನು ಹೃದಯಾಂತರಾಳದಲ್ಲಿ ನನ್ನನ್ನು ನೋಡಿದೆನೆಂದು ಮಹಾಶ್ಚರ್ಯಕರವಾದ ವಿಷಯವನ್ನು ಬಾಲನಂತಲ್ಲದೇ ಜ್ಞಾನಿಯಂತೆ ಹೇಳಿದೆ. ||೧||

ಸಂಚರಿಸುತ್ತಿರುವ ನಾನು ಸಕಲಲೋಕಗಳನ್ನೂ ನೋಡಿದೆನು. ಆ ಲೋಕಗಳನ್ನು ನೋಡುವ ನನ್ನನ್ನು ವಿದ್ವಾಂಸರು ಮೂರ್ಖರು, ಗಂಡಸರು, ಹೆಂಗಸರು, ಶೂದ್ರರು, ಮತ್ತು ಪಾಮರರು ಎಲ್ಲರೂ ಅನೇಕವಿಧವಾಗಿ ಏನೇನನ್ನೋ ಕೇಳಿದರು. ಆದರೆ ಈ ನೀನು ಪ್ರಶ್ನಿಸಿದಂತೆ ಯಾರೂ ಕೇಳಲಿಲ್ಲ. ||೨||

ಸುಮೇಧನೆಂಬ ಹೆಸರಿಗೆ ತಕ್ಕಂತೆ ನೀನು ವಿದ್ವಾಂಸನಾಗಿರುವೆ. ಒಳಗೆ ನೋಡಿದೆನು. ಎಂದು ನೀನು ಹೇಳಿದ ಶುಭವಚನವನ್ನು ನನಗೆ ಸ್ಪಷ್ಟವಾಗಿ ವಿವರಿಸಿ ಹೇಳು. ||೩||

ಅಂತಃ ಸಮೀಕ್ಷಿತ ಇತಿ ಯತ್ತ್ವಯೋಕ್ತಂ ವಚಃ ಶುಭಂ ।
ಕಿಮಂತಸ್ತತ್ರ ಕಿಂ ಬಾಹ್ಯಂ ಕಸ್ಮಾತ್ ಕಸ್ಯ ಕಿಮಾತ್ಮಕಂ ॥೪॥

ಅಂತಃ ಶರೀರ ಇತಿ ತು ನಾತ್ರ ವಕ್ತುಂ ಕ್ಷಮಂ ಭವೇತ್ ।
ದೃಷ್ಟೋಽಹಂ ದೇಶಸಂಸ್ಥಾನೋ ಮಹಾಕಾಶೇನ ಸಂವೃತಃ ॥೫॥

ಅಸಂಖ್ಯಾತ ಪ್ರಮಾಣಂ ತತ್ ಸಪ್ತ ವೈತಸ್ತಿಕಂ ತ್ವಿದಂ ।
ಶರೀರಂ ತವ ತತ್ರಾಪಿ ದೃಷ್ಟ್ವಾ ತ್ವಂ ಕುತ್ರ ಸಂಸ್ಥಿತಃ ॥೬॥

ಬಾಹ್ಯಾದಂತಸ್ತ್ವಯಾ ದೃಷ್ಟೋಽಥವಾಽಂತಃ ಸಂಸ್ಥಿತೇನ ವಾ ।
ಬಾಹ್ಯೇಂದ್ರಿಯೈರಾಂತರಂ ತ್ವ ಮೌದರಂ ನ ಸಮೀಕ್ಷಸೇ ॥೭॥

ಯದ್ಯಾಂತರೇಣ ಸಂದೃಷ್ಟ ಸ್ತ್ವಯಾಽಹಂ ತತ್ರ ಮೇ ಶೃಣು ।
ಆತ್ಮಾ ಪರ್ಯನುಯೋಜ್ಯಃ ಸ್ಯಾತ್ತವ ತತ್ರ ತ್ವಯಾ ಸಖೇ ॥೮॥

ಯಾವುದರಿಂದ ಯಾವುದಕ್ಕೆ ಯಾವುದು ಒಳಗೆ? ಯಾವುದು ಹೊರಗೆ? ಅದು ಯಾವಸ್ವರೂಪವಾಗಿರುವುದು? ಶರೀರದಲ್ಲಿ ಒಳಗೆ ಎಂದು ಇಲ್ಲಿ ಹೇಳಲಾಗುವುದಿಲ್ಲ. ||೪||

ಭೂಮಿಯ ಮೇಲೆ ನಿಂತು ಮಹಾಕಾಶದಿಂದ ಕೂಡಿದ ನನ್ನನ್ನು ನೀನು ನೋಡಿದೆ. ||೫||

ಅನೇಕವಾದ ಪ್ರಮಾಣಗಳಿಂದ ಈ ನಿನ್ನ ದೇಹವು ಏಳಡಿ ಉದ್ದ ಸಪ್ತವೈತಸ್ತಿಕ, ವಾದುದೆಂದು ಸಿದ್ಧವಾಗಿದೆ. ಅಲ್ಲೂ ಕೂಡ ನೋಡಿದ ನೀನು ಎಲ್ಲಿದ್ದೆ? ||೬||

ಹೊರಗಿನ ಅವಯವದಿಂದ ನೀನು ಒಳಗೆ ನೋಡಿದೆಯೋ? ಅಥವಾ ಒಳಗಿರುವ ನೀನು ಒಳಗೆ ನೋಡಿದೆಯೋ? ಹೊರಗಿನಿಂದ ಒಳಗೆ ನೋಡಲಾರೆ. ಏಕೆಂದರೆ ಬಾಹ್ಯೇಂದ್ರಿಯಗಳಿಂದ ಉದರಸಂಬಂಧವಾದ ಒಳಗಿನದನ್ನು ನೀನು ನೋಡಲಾರೆ. ||೭||

ಹಾಗಾದರೆ ಒಳಗಿರುವ ನೀನೇ ನೋಡಿದೆನೆಂದು ಹೇಳುವೆಯೋ, ಹಾಗಾದರೆ ಕೇಳು. ಎಲೌ ಸ್ನೇಹಿತನೇ, ಒಳಗಡೆ ನೀನು ನಿನ್ನ ಆತ್ಮಸಂಬಂಧವನ್ನು ಚೆನ್ನಾಗಿ ಪಡೆದಿರಬೇಕು. ||೮||

ತ್ವಂ ಬಹಿರ್ದೃಷ್ಟ ಇತ್ಯೇತದತ್ರಾಪಿ ಶೃಣು ಮದ್ವಚಃ ।
ಕಸ್ಯ ಬಾಹ್ಯಂ ಕೇನ ದೃಷ್ಟಂ ಕಥಂ ಕಿಂ ತತ್ರ ಕಾರಣಂ ॥೯॥

ಇಂದ್ರಿಯಂ ದೇಹತುಲ್ಯತ್ವಾಜ್ಜಡಂ ಸ್ವಸ್ಮಿನ್ಹಿ ಸಂಸ್ಥಿತಂ ।
ಬಹಿರ್ಗತಂ ಕಥಂ ತೇನ ದೃಷ್ಟಂ ಸ್ಯಾದಿತಿ ತದ್ವದ ॥೧೦॥

ಸರ್ವಂ ಬಹಿರ್ಗತಂ ತತ್ರ ಸಂಸ್ಥಿತಂ ನೇಕ್ಷಿತಂ ಕುತಃ ।
ದೃಷ್ಟಶ್ಚೇದಿಂದ್ರಿಯೈರ್ಣಾಹಂ ಕಿಂ ಜಾತಂ ತವ ತದ್ವದ ॥೧೧॥

ಆಗತೋಽಹಮುಬ್ಜಯೋನೇಃ ಸದನಾತ್ತ್ವಂ ಸಮೀಕ್ಷಿತುಂ ।
ತತ್ರಾಭೂತ್ತವ ಯಾ ವಾರ್ತಾ ತಾಂ ವದಾಮಿ ಸಖೇ ಶೃಣು ॥೧೨॥

ಸಭಾಯಾಂ ಬ್ರಹ್ಮಣಃ ಸ್ಥಾನೇ ಮಾರ್ಕಂಡೇಯೋ ಮಹಾನೃಷಿಃ ।
ಪಿತಾಮಹಂ ಸಮಾಸೀನಂ ದೇವಾದ್ಯೈಃ ಸಮುಪಸ್ಥಿತಂ ॥೧೩॥
ನತ್ವಾ ಪಪ್ರಚ್ಛ ಸರ್ವೇಷಾಂ ಶೃಣ್ವತಾಂ ವಿನಯಾನ್ವಿತಃ ।

ಹೊರಗಿನದನ್ನು ನೋಡಿದೆನೆಂದು ಹೇಳುವೆಯೋ? ಹಾಗಾದರೆ ನನ್ನ ಮಾತನ್ನು ಕೇಳು. ಯಾರ ಬಾಹ್ಯವನ್ನು ಯಾರು ನೋಡಿದರು? ಹೇಗೆ? ಹಾಗೆ ನೋಡಲು ಕಾರಣವೇನು? ॥೯॥

ಇಂದ್ರಿಯವು ದೇಹಕ್ಕೆ ಸಮಾನವಾದುದರಿಂದ ಜಡವು. ಮತ್ತು ಅದು ತನ್ನಲ್ಲೇ ಇರುವುದು. ಅದು ಹೊರಗಿರುವುದನ್ನು ಹೇಗೆ ನೋಡುವುದು? ಅದನ್ನಾದರೂ ಹೇಳು. ॥೧೦॥

ಅಲ್ಲೇ ಹೊರಗಿರುವ ಸಕಲವನ್ನೂ ಏಕೆ ನೋಡಲಿಲ್ಲ? ಒಂದುವೇಳೆ ಇಂದ್ರಿಯಗಳೇ ನನ್ನನ್ನು ನೋಡಿದ್ದರೆ ನಿನಗಾದದ್ದಾದರೂ ಏನು? ಹೇಳುವವನಾಗು.॥೧೧॥

ನಾನು ಆ ಬ್ರಹ್ಮಲೋಕದಿಂದ ನಿನ್ನನ್ನು ನೋಡಲು ಬಂದೆನು. ಅಲ್ಲಾದ ನಿನ್ನ ವಿಷಯಕವಾದ ಸಂಭಾಷಣೆಯನ್ನು ಎಲೌ ಸ್ನೇಹಿತನೇ, ಹೇಳುವೆನು ಕೇಳು. ॥೧೨॥

ಒಂದು ದಿವಸ ಬ್ರಹ್ಮಲೋಕದಲ್ಲಿ ಸಭೆಯಲ್ಲಿ ಬ್ರಹ್ಮನು ದೇವತೆಗಳೊಂದಿಗೆ ಕುಳಿತಿರುವಾಗ ಮಹಾಋಷಿಯಾದ ಮಾರ್ಕಂಡೇಯನು ಪಿತಾಮಹನನ್ನು ನಮಸ್ಕರಿಸಿ ವಿನಯದಿಂದ ಕೂಡಿ ಎಲ್ಲರೂ ಕೇಳುತ್ತಿರುವಾಗ ಹೀಗೆ ಪ್ರಶ್ನೆಮಾಡಿದನು. ॥೧೩॥

ಭಗವನ್ ತ್ವಂ ಸಮಸ್ತಜ್ಞಃ ಸರ್ವಲೋಕ ಪಿತಾಮಹಃ ॥೧೪॥

ನಾಜ್ಞಾತಂ ತವ ಕಿಂಚಿತ್ಸ್ಯಾತ್ಸರ್ವಕರ್ತಾ ಭವಾನ್ ಯತಃ ।
ಅಹಂ ತ್ವತ್ಕೃಪಯಾ ದೇವ ಚಿರಜೀವಿತ್ವಮಾಪ್ತವಾನ್ ॥೧೫॥

ಸಾಕ್ಷಾಚ್ಛಿವಾರಾಧನತೋ ಜಿತಂ ಮೃತ್ಯುಪದಂ ಮಯಾ ।
ಸರ್ವ ಶಾಸ್ತ್ರಾಣಿ ದೃಷ್ಟಾನಿ ಸೇತಿಹಾಸಾಗಮಾನಿ ಚ ॥೧೬॥

ಪುರಾಣಾನ್ಯಪಿ ಸರ್ವಾಣಿ ವಿದ್ಯಾಶ್ಚಾಖಿಲ ಗೋಚರಾಃ ।
ಕಿಂ ತತ್ರ ಸಾರಂ ಶ್ರೋತವ್ಯಂ ಯದಿ ಮೇ ಸ್ಯಾತ್ಸುನಿಶ್ಚಿತಂ ॥೧೭॥

ಭವಾನ್ ವದತು ತನ್ಮೇಽತ್ರ ಸಂದೇಹೋ ಮೇ ಮಹಾನಯಂ ।
ಅತ್ರ ಪೃಷ್ಟಾ ಮಯಾ ದೇವಾ ಋಷಯಃ ಸಿದ್ಧಯೋಗಿನಃ ॥೧೮॥

ವದಂತಿ ಸ್ವಸ್ವಾಭಿಮತಂ ಭಕ್ತಿಶ್ರದ್ಧಾ ವಶೇನ ತೇ ।
ಸರ್ವಾನಭಿಜ್ಞಾಸ್ತೇ ಯಸ್ಮಾತ್ಪ್ರೋಚುಃ ಸ್ವಸ್ವೋಚಿತಂ ವಚಃ॥೧೯॥

ಪೂಜ್ಯನೇ, ನೀನು ಎಲ್ಲವನ್ನೂ ಅರಿತಿರುವೆ. ನೀನು ಸಕಲ ಲೋಕಕ್ಕೂ ಪಿತಾಮಹನು. ನಿನಗೆ ಗೊತ್ತಿಲ್ಲದಿರುವುದು ಈ ಬ್ರಹ್ಮಾಂಡದಲ್ಲಿ ಯಾವುದೂ ಇರುವುದಿಲ್ಲ. ಏಕೆಂದರೆ ನೀನೇ ಸಕಲವನ್ನೂ, ಸೃಷ್ಟಿಸಿರುವವನು. ನಿನ್ನ ಅನುಗ್ರಹದಿಂದಲೇ ನಾನು ಚಿರಜೀವಿಯಾದುದು. ॥೧೪-೧೫॥

ನಾನು ಶಿವನನ್ನು ಪೂಜಿಸಿ ಸಾಕ್ಷಾತ್ತಾದ ಮೃತ್ಯುವನ್ನೂ ಜಯಿಸಿದೆನು. ಇತಿಹಾಸವನ್ನೂ, ಆಗಮವನ್ನೂ, ಸಕಲ ಶಾಸ್ತ್ರಗಳನ್ನೂ, ಸಕಲ ಪುರಾಣಗಳನ್ನೂ, ಸಕಲ ವಿಧ ಗ್ರಂಥಗಳನ್ನೂ ನಾನು ಓದಿದೆನು. ಅವುಗಳಲ್ಲಿ ಸಾರಭೂತವಾದುದು ಯಾವುದು? ನನಗೆ ಕೇಳಲರ್ಹತೆಯಿದ್ದರೆ ನೀನು ಹೇಳುವವನಾಗು. ಆ ವಿಷಯದಲ್ಲಿ ನನಗೆ ದೊಡ್ಡ ಸಂದೇಹವುಂಟಾಗಿದೆ. ಆ ಸಂದೇಹವನ್ನು ಪರಿಹರಿಸುವವನಾಗು.॥೧೬-೧೭॥

ಈ ವಿಷಯದಲ್ಲಿ ನಾನು ದೇವತೆಗಳನ್ನೂ, ಋಷಿಗಳನ್ನೂ ಸಿದ್ಧರಾದ ಯೋಗಿಗಳನ್ನೂ, ಕೇಳಿದೆನು. ಆದರೆ ಅವರು ತಮಗೆ ಯಾವಯಾವುದರಲ್ಲಿ ಭಕ್ತಿ ಮತ್ತು ಶ್ರದ್ಧೆಯಿರುತ್ತದೋ ಅಂತಹ ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಸುತ್ತಾರೆ.

ತ್ವಂ ಲೋಕಕರ್ತಾ ಸರ್ವಜ್ಞಃ ಸರ್ವಾತ್ಮಾ ಸರ್ವದರ್ಶನಃ ।
ವದ ತನ್ಮೇ ದಯಾಸಿಂಧೋ ಯಥಾ ಪೃಷ್ಟೋ ಮಯಾ ಪ್ರಭೋ ॥೨೦॥

ಮಾರ್ಕಂಡೇಯ ವಚಃ ಶ್ರುತ್ವಾ ಬ್ರಹ್ಮಾ ಲೋಕ ಪಿತಾಮಹಃ ।
ಕ್ಷಣಂ ಧ್ಯಾತ್ವಾ ಸುಮನಸಾ ನನಾಮ ಭುವಿ ದಂಡವತ್ ॥೨೧॥

ಸಂಸ್ಮಾರಿತಃ ಪರಾಶಕ್ತೇಃ ಪ್ರಭಾವಂ ತೇನ ಹರ್ಷತಃ ।
ಪುಲಕಾಂಗ ರುಹೋ ನೇತ್ರೇ ಪೂರ್ಣಾನಂದಾಶ್ರು ನಿರ್ಭರಃ ॥೨೨॥

ಕೃತಾಂಜಲಿಃ ಪ್ರಣಮ್ಯಾಥೋ ತ್ರಿಪುರಾಂ ಸರ್ವಕಾರಣಂ ।
ವಕ್ತುಂ ಸಮುಪ ಚಕ್ರಾಮ ಸಂಬೋಧ್ಯ ಮುನಿಪುಂಗವಂ ॥೨೩॥

ಶೃಣು ಮದ್ವಚನಂ ಬ್ರಹ್ಮನ್ ಸತ್ಯಂ ತೇ ಕಥಯಾಮ್ಯಹಂ ।
ಸಭಾಸದ್ಭಿಃ ಸಮೇತಸ್ತ್ವಂ ಶ್ರದ್ಧಸ್ವಾತ್ರ ಮಯೋದಿತೇ ॥೨೪॥

ಅವರು ಎಲ್ಲವನ್ನೂ ತಿಳಿದವರಲ್ಲ. ಆದುದರಿಂದ ಅವರು ತಮಗೆ ತೋಚಿದಂತೆ ಹೇಳುತ್ತಾರೆ. ನೀನಾದರೋ ಸರ್ವಜ್ಞನು. ಸರ್ವಾತ್ಮನು. ಎಲ್ಲವನ್ನೂ ತಿಳಿದವನು ಮತ್ತು ಕೃಪಾಶಾಲಿಯು, ಆದುದರಿಂದ ಒ ಪ್ರಭುವೇ, ನಾನು ಕೇಳಿದುದನ್ನು ನನಗೆ ತಿಳಿಸುವವನಾಗು. ॥೧೮-೧೯-೨೦॥

ಸಕಲ ಲೋಕಗಳಿಗೂ ಪಿತಾಮಹನಾದ ಬ್ರಹ್ಮನು ಹೀಗೆ ಹೇಳಿದ ಮಾರ್ಕಂಡೇಯನ ಮಾತನ್ನು ಕೇಳಿ, ಸ್ವಲ್ಪಕಾಲ ಶುದ್ಧವಾದ ಮನಸ್ಸಿನಿಂದ ಧ್ಯಾನಿಸುತ್ತಿದ್ದು ಅನಂತರದಲ್ಲಿ ದಂಡದಂತೆ ನಮಸ್ಕರಿಸಿದನು. ॥೨೧॥

ಬ್ರಹ್ಮನು ಪರಾಶಕ್ತಿಯಾದ ತ್ರಿಪುರಾಂಬಿಕೆಯ ಮಹಿಮೆಯನ್ನು ಸ್ಮರಿಸಿಕೊಂಡುದರಿಂದುಂಟಾದ ಸಂತೋಷದಿಂದ ರೋಮಾಂಚಿತನಾಗಿ ಕಣ್ಣುಗಳಲ್ಲಿ ಆನಂದಾಶ್ರುಭರಿತನಾದನು. ಅನಂತರದಲ್ಲಿ ಸಕಲಕ್ಕೂ ಕಾರಣಳಾದ ತ್ರಿಪುರಾಂಬಿಕೆಯನ್ನು ಅಂಜಲಿಬದ್ಧನಾಗಿ ನಮಸ್ಕರಿಸಿದನು. ಆಮೇಲೆ ಮುನಿಶ್ರೇಷ್ಠನಾದ ಮಾರ್ಕಂಡೇಯನನ್ನು ಉದ್ದೇಶಿಸಿ ಹೇಳಲು ಮೊದಲಿಟ್ಟನು. ॥೨೨-೨೩॥

ಎಲೌ ಬ್ರಹ್ಮಋಷಿಯೇ, ಸತ್ಯವಾದುದನ್ನು ಹೇಳುತ್ತೇನೆ. ಈ ಸಭಿಕರೊಡನೆ ಕೂಡಿ, ನನ್ನ ಮಾತನ್ನು ಶ್ರದ್ಧೆಯಿಂದ ಕೇಳುವವನಾಗು. ॥೨೪॥

ಅಶ್ರದ್ಧಧಾನಾ ಯೇ ಕೇಚಿತ್ತೇಷಾಂ ನಾತ್ರ ಭವೇತ್ ಸ್ಥಿತಿಃ ।
ಯಾ ಸರ್ವಜಗತಾಂ ಹೇತು ರ್ಯಯಾ ಸರ್ವಮಿದಂ ತತಂ ॥೨೫॥

ಯಸ್ಯಾ ಮತ್ಯೇತಿ ಸರ್ವಂ ಸಾ ತ್ರಿಪುರಾ ಸರ್ವತೋಽಧಿಕಾ ।
ಯಯಾ ವಿರಹಿತಂ ಸರ್ವಂ ವಂಧ್ಯಾಽಽತ್ಮಜಸಮಂ ಭವೇತ್ ॥೨೬॥

ಯಸ್ಯಾಃ ಪ್ರಸಾದ ಲೇಶೇನ ಸರ್ವಂ ಸ್ವಾತ್ಮನಿ ಸಂಸ್ಥಿತಂ ।
ಪ್ರತ್ಯಣುಕ್ಷಣ ಭಾಗೇಷು ಯಾ ಪೂರ್ಣಾ ತ್ರಿಪುರಾ ಹಿ ಸಾ ॥೨೭॥

ಯಾ ವಿಚಿತ್ರ ತನುಪ್ರಾಣ ಕರಣಾನಿ ಪ್ರತಿಕ್ಷಣಂ ।
ಭುವನಾನಿ ಪ್ರಭಿನ್ನಾನಿ ಸ್ವಾತ್ಮನಾಽಽಚ್ಛಾದಯತ್ಯಜಾ ॥೨೮॥

ಯಸ್ಯಾಃ ಪರ್ಯಂತ ಮಧ್ಯಾದಿಭಾಗಂ ನಾಹಂ ಹರಿರ್ಹರಃ ।
ಜಾನೀಮೋ ವಯಮೇತಸ್ಯಾಶ್ಚರಣಾಂಬುಜ ರೇಣವಃ ॥೨೯॥

ಯಾರಿಗೆ ವಿಶ್ವಾಸವಿಲ್ಲವೋ ಅಂತಹವರಿಗೆ ಇಲ್ಲಿ ಅವಕಾಶವಿಲ್ಲವು. ಯಾವಳು ಸಕಲ ಲೋಕಗಳಿಗೂ ಕಾರಣಸ್ವರೂಪಳೋ ಯಾವಾಕೆಯಿಂದ ಈ ಎಲ್ಲವೂ ರಚಿಸಲ್ಪಟ್ಟಿರುವುದೋ, ॥೨೫॥

ಎಲ್ಲವನ್ನೂ ಯಾವಳು ಮೀರಿರುತ್ತಾಳೋ ಆ ತ್ರಿಪುರಾಂಬಿಕೆಯು ಎಲ್ಲಕ್ಕಿಂತಲೂ ಹೆಚ್ಚಾದವಳು. ಅವಳಿಂದ ಬಿಡಲ್ಪಟ್ಟ (ಅವಳ ಸಂಬಂಧವಿಲ್ಲದ) ಎಲ್ಲವೂ ಕೂಡ ಬಂಜೆಯ ಪುತ್ರನಿಗೆ ಸಮಾನವಾದುದು. ಎಂದರೆ ಆ ದೇವಿಗಿಂತ ಭಿನ್ನವಾದುದು ಯಾವುದೂ ಇಲ್ಲವೇ ಇಲ್ಲವು. ॥೨೬॥

ಆ ದೇವಿಯ ಅಲ್ಪವಾದ ಕೃಪೆಯಿಂದಲೇ ಈ ಸಕಲವೂ ಆ ದೇವಿಯಲ್ಲಿ ಇರುತ್ತದೆ. ಪ್ರತಿಯೊಂದು ಅಣು ಮತ್ತು ಕ್ಷಣಗಳಲ್ಲಿ ಪೂರ್ಣವಾದವಳು ಯಾವಳುಂಟೋ ಅವಳೇ ತ್ರಿಪುರಾಂಬಿಕೆಯು. ॥೨೭॥

ಪ್ರತಿಯೊಂದು ನಿಮಿಷದಲ್ಲೂ ವಿಚಿತ್ರವಾದ ಶರೀರ ಪ್ರಾಣ ಮತ್ತು ಇಂದ್ರಿಯಗಳುಳ್ಳ ಪ್ರತಿಕ್ಷಣದಲ್ಲೂ ಭಿನ್ನವಾಗುತ್ತಿರುವ ಈ ಸಕಲ ಪ್ರಪಂಚವನ್ನೂ ಆದಿಶೂನ್ಯಳಾದ ಅಂಬಿಕೆಯು (ತಾನೇ ರಕ್ಷಿಸುತ್ತಾಳೆ) ತನ್ನಲ್ಲಿ ಅಡಗಿಸಿಕೊಂಡಿರುತ್ತಾಳೆ. ॥೨೮॥

ಆ ದೇವಿಯ ಆದಿ, ಅಂತ್ಯ ಮತ್ತು ಮಧ್ಯವನ್ನಾಗಲೀ, ನಾನಾಗಲೀ, ವಿಷ್ಣುವಾಗಲೀ, ಈಶ್ವರನಾಗಲೀ ತಿಳಿದಿಲ್ಲ. ನಾವಾದರೋ ಆ ಮಾತೆಯ ಪಾದಕಮಲದಲ್ಲಿ ರೇಣುಗಳು. ॥೨೯॥

ಸೃಷ್ಟಿಃ ಸ್ಥಿತಿಃ ಸಂಹೃತಿಶ್ಚ ತಿರೋಧಾನ ಮನುಗ್ರಹಃ ।
ಕ್ರಿಯತೇ ಸರ್ವದಾಽಸ್ಮಾಸು ಸ್ಥಿತಯಾ ಪರಯಾ ಯಯಾ ॥೩೦॥

ಸಾ ಸರ್ವದೇವೀ ಸರ್ವೇಶೀ ಸರ್ವಕಾರಣ ಕಾರಣಂ ।
ತ್ರಿಪುರಾ ಸುಂದರೀ ಪ್ರೋಕ್ತಾ ಸ್ವತಂತ್ರಾ ಚಿದ್ವಿಲಾಸಿನೀ ॥೩೧॥

ಅನೇಕರೂಪಾ ಸಾ ಶಕ್ತಿರ್ಜಾತಾ ಭಕ್ತ ಕೃಪಾವಶಾತ್ ।
ಸರ್ವಶ್ರೇಷ್ಠಾ ಸರ್ವಮಾತಾ ತ್ರಿಪುರಾ ವಾಕ್ಸಮಾಶ್ರಯಾ ॥೩೨॥

ತನ್ಮೂರ್ತಿಸ್ಸರ್ವತೋತ್ಕೃಷ್ಟಾ ತತ್ಸಿದ್ಧಾಂತಃ ಪರೋ ಮತಃ ।
ಸೈವ ಸರ್ವೇಶ್ವರೀ ಸರ್ವಪೂಜ್ಯಾ ಶೃಣು ಮುನೀಶ್ವರ ॥೩೩॥

ತದ್ರಹಸ್ಯಂ ಮಹಾಪುಣ್ಯಂ ಶಿವವಕ್ತ್ರೈಕಗೋಚರಂ ।
ಆದಿನಾಥಾಚ್ಛಕ್ತಿ ಮುಖಾತ್ಸದಾಶಿವತುರೀಯಕಾತ್ ॥೩೪॥
ರುದ್ರಾದ್ವಿಷ್ಣೋರ್ಮಯಾ ಲಬ್ಧಂ ನಾನ್ಯೋ ಜಾನಾತಿ ಕಶ್ಚನ ।

ಯಾವ ಪರಾಶಕ್ತಿಸ್ವರೂಪಳಾದ ದೇವಿಯು ಹರಿಹರಬ್ರಹ್ಮರಾದ ನಮ್ಮಲ್ಲಿದ್ದು ಕೊಂಡು ಸೃಷ್ಟಿಯನ್ನೂ ಸೃಷ್ಟಿಸಿದುವುಗಳ ರಕ್ಷಣೆಯನ್ನೂ ಮತ್ತು ನಾಶವನ್ನೂ ತಿರೋಧಾನ, ಅನುಗ್ರಹಗಳನ್ನೂ ಮಾಡುತ್ತಾಳೋ ॥೩೦॥

ಆ ಸರ್ವಾತ್ಮಕಳೂ; ಸರ್ವೇಶ್ವರಿಯೂ, ಎಲ್ಲಕ್ಕೂ ಕಾರಣಳೂ ಆದ ಆ ತ್ರಿಪುರಾಂಬಿಕೆಯು ಸುಂದರಿಯೆಂದೂ ಸ್ವತಂತ್ರಳೆಂದೂ, ಹೇಳಲ್ಪಡುತ್ತಾಳೆ. ॥೩೧॥

ಭಕ್ತರುಗಳಲ್ಲಿರುವ ದಯೆಗೆ ವಶೀಭೂತಳೂ, ಶಕ್ತಿಸ್ವರೂಪಳೂ ಆದ ಆ ದೇವಿಯು ಅನೇಕ ರೂಪಗಳಿಂದ ಪ್ರಕಟವಾಗಿರುತ್ತಾಳೆ. ಆ ತ್ರಿಪುರಾಂಬಿಕೆಯು ಸಕಲ ಲೋಕಗಳಿಗೂ, ಎಲ್ಲಕ್ಕೂ ಮಾತೆಯೂ, ಸರ್ವಶ್ರೇಷ್ಠಳೂ ಮತ್ತು ಸ್ತೋತ್ರ ಪ್ರಿಯಳೂ ಆಗಿದಾಳೆ. ॥೩೨॥

ಆ ದೇವಿಯ ಮೂರ್ತಿಯು ಎಲ್ಲಕ್ಕಿಂತಲೂ ಶ್ರೇಷ್ಠವಾದುದು. ಆ ಅಂಬಿಕೆಯ ಸಿದ್ಧಾಂತವನ್ನು ಜ್ಞಾನಿಗಳು ಶ್ರೇಷ್ಠವನ್ನಾಗಿ ತಿಳಿಯುತ್ತಾರೆ. ಎಲೌ ಮುನಿಶ್ರೇಷ್ಠನೇ, ಆ ದೇವಿಯೇ ಸಕಲೇಶ್ವರಿಯೂ ಮತ್ತು ಸಕಲರಿಂದಲೂ ಪೂಜಿಸಲು ಯೋಗ್ಯಳೂ ಆದವಳು. ॥೩೩॥

ಮಹಾಪುಣ್ಯಕರವಾದ ರಹಸ್ಯವನ್ನು ಪರಶಿವನೊಬ್ಬನೇ ತಿಳಿದಿರುವವನು. ಆದಿಪ್ರಭುವೂ, ಶಕ್ತಿದೇವತಾಯುಕ್ತನೂ, ಸದಾಶಿವಚತುರ್ಥನೂ ಆದ ರುದ್ರನಿಂದ

ಮರ್ತ್ಯೇ ಲೋಕೇ ಮಹಾವಿಷ್ಣೋರಂಶೋ ದತ್ತಗುರುಃ ಸ್ಮೃತಃ॥೩೫॥

ತೇನ ಶ್ರೀಕಂಠಮುಖತಃ ಶ್ರುತಂ ಸ್ವಾಂಶೇ ಸಮಾಕ್ಷಿಪತ್ ।
ಭಾರ್ಗವಃ ಸೋಽಪಿ ಗುರ್ವಾಜ್ಞಾವಶೇನ ಪ್ರೋಕ್ತವಾನ್ ತತಃ ॥೩೬॥

ಸುಮೇಧಸೇ ಸುಶಿಷ್ಯಾಯ ಸ ಸಂಪ್ರತಿ ಮಹೀತಲೇ ।
ಚಿಕೀರ್ಷುಃ ಗ್ರಂಥರೂಪೇಣ ಹಾಲಾಸ್ಯಂ ಸಮುಪಸ್ಥಿತಃ ॥೩೭॥

ತ್ರಿಪುರಾ ಧ್ಯಾನನಿರತಃ ಶ್ರೀಗುರೋ ರಾಜ್ಞಯಾ ಬುಧಃ ।
ಇತ್ಯುಕ್ತಂ ದೇವದೇವೇನ ಬ್ರಹ್ಮಣಾ ಬ್ರಾಹ್ಮಣಂ ಪ್ರತಿ ॥೩೮॥

ತತ್ತ್ವಾಂ ದ್ರಷ್ಟುಮಿಹ ಪ್ರಾಪ್ತಃ ಸತ್ಯಮೇತದ್ಬ್ರವೀಮಿ ತೇ ।
ಇತಿ ಸರ್ವಂ ಮಯಾ ಪ್ರೋಕ್ತಂ ಯಥಾವೃತ್ತಂ ಸಮಾಗಮೇ ॥೩೯॥

ವಿಷ್ಣುವೂ ವಿಷ್ಣುವಿನಿಂದ ನಾನೂ ತಿಳಿದಿರುತ್ತೇನೆ. ನಾವುಗಳಲ್ಲದೇ ಮತ್ತೊಬ್ಬರೂ, ಆ ರಹಸ್ಯವನ್ನು ತಿಳಿದವರಿಲ್ಲವು. ||೩೪||

ಭೂಲೋಕದಲ್ಲಿ, ಮಹಾವಿಷ್ಣುವಿನ ಅಂಶಸಂಭೂತನಾದ ದತ್ತಗುರುವು ತಿಳಿದಿರುತ್ತಾನೆ. ಅವನ ಅನುಗ್ರಹದಿಂದ ವಿಷ್ಣ್ವಂಶಸಂಭೂತನಾದ ಪರಶುರಾಮನೂ ಉಪದೇಶ ಹೊಂದಿರುತ್ತಾನೆ. ಪರಶುರಾಮನೂ ಸಹ ತನ್ನ ಗುರುವಿನ ಅಪ್ಪಣೆಯಂತೆ ಯೋಗ್ಯಶಿಷ್ಯನಾದ ಸುಮೇಧನಿಗೆ ಉಪದೇಶಿಸಿರುತ್ತಾನೆ. ||೩೫-೩೬||

ಆ ಸುಮೇಧನು ತ್ರಿಪುರಾರಹಸ್ಯವನ್ನು ಗ್ರಂಥರೂಪದಿಂದ ಬರೆಯುಬೇಕೆಂಬ ಅಭಿಲಾಷೆಯಿಂದ ಈಗ ಹಾಲಾಸ್ಯಪುರಕ್ಕೆ ಶ್ರೀದೇವಿಯ ಸಮೀಪಕ್ಕೆ ಬಂದು ಗುರುವಿನ ಆಜ್ಞೆಯಿಂದ ದೇವಿಯ ಧ್ಯಾನದಲ್ಲಿರುತ್ತಾನೆ. ||೩೭||

ಹೀಗೆಂದು ದೇವದೇವನಾದ ಬ್ರಹ್ಮನು ಮಾರ್ಕಂಡೇಯನಿಗೆ ಹೇಳಿದನು. ಆದಕಾರಣ ನಿನ್ನನ್ನು ನೋಡಲು ಇಲ್ಲಿಗೆ ಬಂದಿರುತ್ತೇನೆ. ನಾನು ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ. ನಾನು ನಿನ್ನಲ್ಲಿಗೆ ಬರಲು ಕಾರಣವೆಲ್ಲವನ್ನೂ ತಿಳಿಸಿರುತ್ತೇನೆ. ||೩೮-೩೯||

ಉತ್ತರಂ ವದ ಮತ್ಪ್ರಶ್ನೇ ಯತ್ ಜ್ಞಾತಂ ಹಾರಿತಾಯನ ।
ಇತಿ ನಾರದವಾಕ್ಯಂ ಸ ಶ್ರುತ್ವಾ ಸಂಚಿಂತ್ಯ ಸರ್ವತಃ ॥೪೦॥

ನೋತ್ತರಂ ಜ್ಞಾತವಾನ್ವಕ್ತುಂ ಲಜ್ಜಿತೋ ಮುನಿಮಬ್ರವೀತ್ ।
ಮಹರ್ಷೇಽತ್ರ ನ ಜಾನಾಮಿ ಕಿಂಚಿದಪ್ಯುತ್ತರಂ ತವ ॥೪೧॥

ಭವಾನ್ಸರ್ವಂ ವದತು ಮೇ ಯದತ್ರಾನಂತರಂ ಶಿವಂ ।
ಭವತೋಕ್ತಂ ಯಥಾ ತದ್ವತ್ ಗುರುಣಾಽಹಂ ಪ್ರಚೋದಿತಃ ॥೪೨॥

ಗ್ರಂಥತಃ ಕುರು ವತ್ಸೇತಿ ತ್ರಿಪುರಾಯಾ ರಹಸ್ಯಕಂ ।
ಶ್ರುತಂ ಗುರುಮುಖಾತ್ಸರ್ವಂ ಧ್ಯಾನನಿಷ್ಠೇನ ತನ್ಮಯಾ ॥೪೩॥

ವಿಸ್ಮೃತಂ ಮಂದಬುದ್ಧಿತ್ವಾದ್ದಯಾಂ ಕುರು ಮಯಿ ಪ್ರಭೋ ।
ಇತ್ಯುಕ್ತ್ವಾ ತಸ್ಯ ಚರಣೌ ಪ್ರಣಿಪತ್ಯಾನ್ವಯಾಚತ ॥೪೪॥
ನಾರದೋಽಥ ಚಿರಂ ತತ್ರ ಧ್ಯಾತ್ವಾ ಸರ್ವಮಚೇಷ್ಟತ ।

ಎಲೌ ಹಾರೀತಾಯನನೇ, ನನ್ನ ಪ್ರಶ್ನೆಗೆ ನಿನಗೆ ತೋರಿದ ಉತ್ತರವನ್ನು ಹೇಳು. ಹೀಗೆಂದು ಹೇಳಿದ ಮಾತನ್ನು ಕೇಳಿ ಹಾರಿತಾಯನನು ಚೆನ್ನಾಗಿ ಯೋಚಿಸಿ ಏನುತ್ತರವೂ ತೋಚದಿರಲು ನಾಚಿಕೆಯಿಂದ ನಾರದನನ್ನು ಕುರಿತು ಹೀಗೆ ಹೇಳಿದನು. ॥೪೦॥

ಓ ಮಹರ್ಷಿಯೇ, ನಿನಗೆ ನಾನೇನೂ ಉತ್ತರವನ್ನು ಹೇಳಲು ಸಮರ್ಥನಲ್ಲ. ನೀನೇ ನನಗೆ ಶುಭಕರವಾದ ಸಕಲವನ್ನೂ ಹೇಳುವವನಾಗು. ॥೪೧॥

ನೀನು ಹೇಳಿದಂತೆಯೇ ಗುರುವಾದ ಪರಶುರಾಮನೂ ಸಹ ಎಲೌ ವತ್ಸನೇ, ತ್ರಿಪುರಾರಹಸ್ಯವನ್ನು ಗ್ರಂಥರೂಪದಲ್ಲಿ ಬರೆ ಎಂಬುದಾಗಿ ಅಪ್ಪಣೆಮಾಡಿದನು. ಅನಂತರದಲ್ಲಿ ಗುರುವು ಸಕಲವನ್ನೂ ಸಹ ಹೇಳಿದನು. ನಾನೂ ಧ್ಯಾನತತ್ಪರನಾಗಿ ಗುರುವಿನ ಎಲ್ಲ ಮಾತನ್ನೂ ಕೇಳಿದೆ. ಅಲ್ಪ ಬುದ್ಧಿಶಾಲಿಯಾದ ನಾನು ಎಲ್ಲವನ್ನೂ ಮರೆತುಬಿಟ್ಟೆನು. ಹೇ ಸರ್ವಸಮರ್ಥನೇ, ನನ್ನಲ್ಲಿ ದಯೆಯಿಡು. ಎಂದು ಅವನ ಪಾದಗಳಲ್ಲಿ ನಮಸ್ಕರಿಸಿ ಅಂಗಲಾಚಿದನು. ॥೪೨-೪೩-೪೪॥

ಪ್ರಾರ್ಥನೆಯಂತೆ ನಾರದನು ಧ್ಯಾನಾದಿ ಸಕಲ ಕ್ರಿಯೆಗಳನ್ನೂ ಆಗ ಉಪದೇಶಮಾಡಿದನು. ಅನಂತರದಲ್ಲಿ ಮಹರ್ಷಿಯಾದ ನಾರದನ ಧ್ಯಾನದಿಂದ ಕರೆಯು

ಅಥ ಧ್ಯಾನಾಹೂತೋ ಬ್ರಹ್ಮಾ ನಾರದೇನ ಮಹರ್ಷಿಣಾ ॥೪೫॥

ಆಜಗಾಮ ಕ್ಷಣಾತ್ತತ್ರ ಕೃಪಯಾ ಭಾವಿ ಗೌರವಾತ್ ।
ಪ್ರಾಪ್ತಂ ತತ್ರ ವಿಧಾತಾರಂ ಜ್ವಲಂತ ಮಿವ ಪಾವಕಂ ॥೪೬॥

ನವವಿದ್ರುಮ ಸಂಕಾಶಂ ಚತುರ್ವಕ್ತ್ರಂ ಚತುರ್ಭುಜಂ ।
ಕಮಂಡಲುಂ ಚಾಕ್ಷಮಾಲಾ ಮಭಯಂ ವರಮೇವ ಚ ॥೪೭॥

ದಧಾನಂ ಶ್ವೇತವಸನಂ ಸ್ವಚ್ಛಯಜ್ಞೋಪವೀತಕಂ ।
ತೇಜೋರಾಶಿಂ ಸಮೀಕ್ಷ್ಯಾಥ ನಾರದಃ ಸಹಸೋತ್ಥಿತಃ ॥೪೮॥

ಸುಮೇಧಸಾಽಪ್ಯನುಗತೋ ದಂಡವತ್ಪ್ರಣನಾಮ ತಂ ।
ಸಂಪೂಜ್ಯಾರ್ಘ್ಯಾಸನಾದ್ಯೈಸ್ತಂ ಕೃತಾಂಜಲಿರವಸ್ಥಿತಃ ॥೪೯॥

ದೃಷ್ಟ್ವಾಽಽಹ ನಾರದಂ ಬ್ರಹ್ಮಾ ವತ್ಸ ಕಿಂ ತೇ ಸ್ಮೃತೋಽಸ್ಮ್ಯಹಂ ।
ಕಿಂ ಕರ್ತವ್ಯಂ ಮಯಾ ತೇಽದ್ಯ ವದ ಯತ್ಪ್ರಾರ್ಥಿತಂ ತ್ವಯಾ ॥೫೦॥

ಲ್ಪಟ್ಟವನಾಗಿ ಬ್ರಹ್ಮನು ದಯೆಯಿಂದ ಮುಂದೆ ಸಂಭವಿಸುವ ಕಾರ್ಯಗೌರವದೃಷ್ಟಿಯಿಂದ ಆ ಕೂಡಲೇ ಅಲ್ಲಿಗೆ ಬಂದನು. ॥೪೫॥

ನೂತನವಾದ ಹವಳಕ್ಕೆ ಸಮಾನವಾದ ನಾಲ್ಕು ಮುಖಗಳುಳ್ಳವನೂ, ಮತ್ತು ನಾಲ್ಕು ಭುಜಗಳಿಂದ ಕೂಡಿದವನೂ, ಕಮಂಡಲುವನ್ನೂ ಅಕ್ಷಮಾಲಿಕೆಯನ್ನೂ, ಅಭಯಮುದ್ರೆಯನ್ನೂ, ವರಪ್ರದಾನಮುದ್ರೆಯನ್ನೂ ಧರಿಸಿರುವವನೂ, ಸ್ವಚ್ಛವಾದ ಬಿಳಿಯ ವಸ್ತ್ರವನ್ನು ಧರಿಸಿರುವವನೂ, ಮತ್ತು ನಿರ್ಮಲವಾದ ಯಜ್ಞೋಪವೀತವನ್ನು ಧರಿಸಿರುವವನೂ, ಉರಿಯುತ್ತಿರುವ ಅಗ್ನಿಯಂತೆ ತೇಜೋವಂತನೂ, ಆಗಿ ಬ್ರಹ್ಮನು ಆ ಸ್ಥಳಕ್ಕೆ ಬಂದನು. ॥೪೬-೪೭॥

ತೇಜೋವಂತನಾದ ಬ್ರಹ್ಮನು ಬಂದುದನ್ನು ನೋಡಿ ನಾರದನು ಜಾಗ್ರತೆಯಾಗಿ ಸುಮೇಧನೊಡನೆ ಎದ್ದು, ಅವನಿಗೆ ನಮಸ್ಕಾರಮಾಡಿದನು. ಅನಂತರದಲ್ಲಿ ನಾರದನು ಬ್ರಹ್ಮನನ್ನು ಆಸನದಲ್ಲಿ ಕುಳ್ಳಿರಿಸಿ, ಅರ್ಘ್ಯಾದಿಗಳಿಂದ ಅವನನ್ನು ಅರ್ಚಿಸಿ ಅಂಜಲಿಬದ್ಧನಾಗಿ ನಿಂತನು. ॥೪೮-೪೯॥

ಹೀಗೆ ಅಂಜಲಿಬದ್ಧನಾಗಿ ನಿಂತಿರುವ ನಾರದನನ್ನು ಕುರಿತು ಬ್ರಹ್ಮನು

ಇತಿ ಶ್ರುತ್ವಾಽಥ ವಚನಂ ನಾರದಃ ಪ್ರತ್ಯುವಾಚ ತಂ ।
ಭಗವನ್ ತ್ವತ್ಪ್ರಸಾದೇನ ಪರಿಪೂರ್ಣಮನೋರಥಃ ॥೫೧॥

ಭವತೋಕ್ತಂ ಪುರಾ ವಾಕ್ಯಂ ಮಾರ್ಕಂಡೇಯಾಯ ಧೀಮತೇ ।
ತ್ರಿಪುರಾಯಾ ರಹಸ್ಯಸ್ಯ ಮಾಹಾತ್ಮ್ಯಮತಿ ಚಿತ್ರಿತಂ ॥೫೨॥

ತತ ಏವಂ ಸುಮೇಧಾಖ್ಯಂ ತದ್ರಹಸ್ಯ ಕವಿಂ ಮುನಿಂ ।
ಪಶ್ಯಾಮಿತ್ಯಾಗತೋಽತ್ರಾಹಂ ಹೃಷ್ಟೋಽಯಂ ಹಾರಿತಾಯನಃ॥೫೩॥

ಭವದ್ವಾಕ್ಯಂ ಸತ್ಯಮಸ್ತು ಕವಿರ್ಭೂಯಾದಯಂ ಕವಿಃ ।
ಪರಂ ಭವಂತಂ ಪೃಚ್ಛಾಮಿ ಕಿಂಚಿನ್ಮೇ ಮನಸಿ ಸ್ಥಿತಂ ॥೫೪॥

ತ್ರಿಪುರಾ ಪರಮೇಶಾನೀ ಸಾಕ್ಷಾತ್ಪರಶಿವಾತ್ಮಿಕಾ ।
ತತ್ಕೇನ ಪುಣ್ಯಪಾಕೇನ ಪ್ರಾಪ್ತಮೇತೇನ ಸೇವನಂ ॥೫೫॥

ವತ್ಸನೇ, ಏತಕ್ಕಾಗಿ ನನ್ನನ್ನು ಸ್ಮರಿಸಿದೆ? ನನ್ನಿಂದ ನಿನಗಾಗಬೇಕಾದುದೇನು? ಏನನ್ನು ನನ್ನಿಂದ ಇಚ್ಛಿಸುತ್ತಿರುವೆ? ॥೫೦॥

ಬ್ರಹ್ಮನ ಮಾತನ್ನು ಕೇಳಿದ ನಾರದನು ಅವನನ್ನು ಕುರಿತು ಮುಂದೆ ಹೇಳುವಂತೆ ಉತ್ತರವನ್ನು ಹೇಳಿದನು. ಓ ಪೂಜ್ಯನೇ, ನಿನ್ನ ಅನುಗ್ರಹದಿಂದ ನಾನು ನನ್ನ ಕೋರಿಕೆಗಳು ನೆರವೇರಿದಷ್ಟು ತೃಪ್ತನಾಗಿರುತ್ತೇನೆ. ॥೫೧॥

ಓ ಬುದ್ಧಿಶಾಲಿಯೇ, ಹಿಂದೆ ನೀನು ಮಾರ್ಕಂಡೇಯನಿಗೆ ಅತ್ಯಾಶ್ಚರ್ಯಕರವಾದ ತ್ರಿಪುರಾರಹಸ್ಯದ ಮಹಿಮೆಯನ್ನು ಹೇಳಿದೆ. ॥೫೨॥

ಅನಂತರದಲ್ಲಿ ಸುಮೇಧನೆಂಬ ತ್ರಿಪುರಾರಹಸ್ಯವನ್ನು ಗ್ರಂಥರೂಪದಲ್ಲಿ ಬರೆಯುವ ಈ ಕವಿಯನ್ನು ನೋಡಲು ಇಲ್ಲಿಗೆ ಬಂದೆ. ಇಲ್ಲಿ ಹಾರಿತಾಯನನನ್ನು ನೋಡಿದೆನು. ॥೫೩॥

ನಿನ್ನ ಮಾತು ನಿಜವಾಗಲಿ. ಈ ಹರಿತಾಯನನು ಕವಿಯಾಗಲಿ. ಆದರೆ ನಾನು (ನಾರದನು) ನನ್ನ ಮನಸ್ಸಿನಲ್ಲಿರುವ ಕೆಲವು ವಿಷಯಗಳನ್ನು ನಿನ್ನನ್ನು ಕೇಳುತ್ತೇನೆ. ॥೫೪॥

ಪರಮೇಶ್ವರಿಯೂ, ಪ್ರತ್ಯಕ್ಷನಾದ ಪರಶಿವಸ್ವರೂಪಳೂ, ಆದ ತ್ರಿಪುರಾದೇವಿಯ ಪೂಜೆಯನ್ನೂ ಯಾವ ಪುಣ್ಯವಿಶೇಷದಿಂದ ಈ ಹಾರಿತಾಯನನು ಪಡೆದನು? ॥೫೫॥

ತದ್ರಹಸ್ಯಾ ಚಾರ್ಯ ಏಷಃ ಸರ್ವೋಽಪಾಸಕ ಪೂಜ್ಯತಾಂ ।
ಕಥಂ ಪ್ರಾಪ್ತೋಽತ್ರ ನೈವಾಸ್ತಿ ಸಾಧಾರಣಫಲಾದಿದಂ ॥೪೬॥

ಏತನ್ಮೇ ಸಂಶಯಂ ದೇವ ಛೇತ್ತುಮರ್ಹಸ್ಯಶೇಷತಃ ।
ಗೋಪ್ಯಮಪ್ಯೇತದಿಚ್ಛಾಮಿ ಶ್ರೋತುಂ ತತ್ಕೃಪಯಾ ವದ ॥೪೭॥

ಏತಚ್ಛ್ರುತ್ವಾ ನಾರದೋಕ್ತಂ ಧ್ಯಾತ್ವಾ ಕಿಂಚಿದುವಾಚ ಹ ।
ಶ್ರುಣು ನಾರದ ಯತ್ಪೃಷ್ಟ ಮಸ್ಯ ಪುಣ್ಯಂ ಪುರಾ ಕೃತಂ ॥೪೮॥

ಪುರಾಽಯಂ ಬ್ರಾಹ್ಮಣಃ ಕಶ್ಚಿದಲರ್ಕ ಇತಿ ವಿಶ್ರುತಃ ।
ಸುಮಂತು ತನಯಃ ಪ್ರತ್ಯಗ್ವಾಹಿನೀ ಯಾ ಸರಸ್ವತೀ ॥೪೯॥

ತಸ್ಯಾಸ್ತೀರೇ ಸುರುಚಿರೇ ನಿವಾಸೇ ನಿವಸನ್ ದ್ವಿಜಃ ।
ಚಾರುರೂಪಾ ತಸ್ಯ ಭಾರ್ಯಾ ಸತೀ ಭರ್ತೃಪರಾಯಣಾ ॥೫೦॥

ಈ ಆಚಾರ್ಯನಾದ ಹಾರಿತಾಯನನಿಗೆ ತ್ರಿಪುರಾರಹಸ್ಯವನ್ನು ತಿಳಿದಿರುವವರಲ್ಲಿ ಎಲ್ಲರಿಗಿಂತಲೂ ಅಧಿಕವಾದ ಪೂಜಾಸ್ಥಾನವು ಹೇಗೆ ಪ್ರಾಪ್ತವಾಯಿತು? ಈ ಸ್ಥಾನವಾದರೋ ಸಾಮಾನ್ಯವಾದ ಫಲದಿಂದ ಸಿಕ್ಕುವುದಿಲ್ಲ. ॥೪೬॥

ಇದೇ ನನಗುಂಟಾಗಿರುವ ಸಂಶಯು. ಓ ದೇವನೇ, ಈ ನನ್ನ ಸಂದೇಹವನ್ನು ನಿವಾರಿಸುವವನಾಗು. ರಹಸ್ಯವಾದರೂ ಇದನ್ನು ತಿಳಿಯಬೇಕೆಂಬ ಕುತೂಹಲವು ನನಗಿರುತ್ತದೆ. ಆದಕಾರಣ ಪ್ರಭುವೇ, ಕೃಪೆಯಿಂದ ಹೇಳುವವನಾಗು. ॥೪೭॥

ಬ್ರಹ್ಮನು ನಾರದನ ಮಾತನ್ನು ಕೇಳಿ ಸ್ವಲ್ಪಕಾಲ ಧ್ಯಾನಿಸಿದ ನಂತರ ಅವನನ್ನು ಕುರಿತು ಹೇಳತೊಡಗಿದನು. ಎಲೌ ನಾರದನೇ, ಯಾವ ಪುಣ್ಯವನ್ನು ಇವನು ಮಾಡಿದ್ದರಿಂದ ಇವನಿಗೆ ದೇವಿಯ ರಹಸ್ಯವನ್ನು ತಿಳಿಯುವುದರಲ್ಲಿ ಈ ಸ್ಥಾನವು ದೊರೆಯಿತೆಂಬುದನ್ನು ಕೇಳು. ॥೪೮॥

ಹಿಂದೆ ಇವನೊಬ್ಬ ಬ್ರಾಹ್ಮಣನಾಗಿದ್ದನು. ಇವನ ಹೆಸರು ಅಲರ್ಕನೆಂಬುದಾಗಿತ್ತು. ಇವನು ಸುಮಂತುವಿನ ಪುತ್ರನು. ಇವನು ಪಶ್ಚಿಮಕ್ಕೆ ಹರಿಯುವ ಸರಸ್ವತೀನದೀ ತೀರದಲ್ಲಿ ಮನೋಹರವಾದ ಜಾಗದಲ್ಲಿ ವಾಸಿಸುತ್ತಿದ್ದನು. ॥೪೯॥

ಇವನ ಹೆಂಡತಿಯು ಸುಂದರಳು. ಮತ್ತು ಪತಿಭಕ್ತಿಪರಾಯಣಳು. ಈ ಸುಮೇಧನು, ಸುಮಂತುವಿನ ಪ್ರೀತಿಪಾತ್ರನಾದ ಪುತ್ರನು. ಇವನಿಗೆ ಐದು ವರ್ಷ

ಅಯಂ ತಸ್ಯ ಸುತೋ ಬಾಲಃ ಪಂಚವರ್ಷಃ ಪ್ರಿಯಃ ಪಿತುಃ ।
ಸುಮಂತುರನ್ವಹಂ ದುರ್ಗಾಪೂಜೋಪಾಸನ ತತ್ಪರಃ ॥೬೧॥

ಮಹಾಭಕ್ತೋ ದೃಢಮತಿಃ ಸದಾ ದುರ್ಗಾ ಪರಾಯಣಃ ।
ಅಯಿೀತ್ಯೇವಂ ಸ್ವ(ಸ್ಯ)ಭಾರ್ಯಾಂ ಆಹ್ವಯತ್ಯನು ವಾಸರಂ ॥೬೨॥

ಅಲರ್ಕ ಏಷ ತಚ್ಛ್ರುತ್ವಾ ಸಮಭ್ಯಸ್ಯ ಚ ಮಾತರಂ ।
ಬಾಲಭಾವಾದಾಹ್ವಯತಿ ಐ ಐ ಇತಿ ಮುಹುರ್ಮುಹುಃ ॥೬೩॥

ಅಥ ರೋಗೇಣಾಭಿಭೂತೋ ಬಾಲೋ ಮಾತೃಪ್ರಿಯಃ ಸದಾ ।
ಐ ಐ ಇತಿ ವದನ್ಧ್ಯಾಯನ್ಮಾತರಂ ಪ್ರಾಪ ಪಂಚತಾಂ ॥೬೪॥

ತ್ರೈಪುರೇಮಂತ್ರರಾಜೇ ತದಾದ್ಯಂ ಬೀಜಮಬಿಂದುಕಂ ।
ಪ್ರೋಕ್ತಂ ವಾಗ್ಭವಮಿತ್ಯೇತತ್ ವಾಗ್ಯಸ್ಮಾದ್ಭವತಿ ದ್ರುತಂ ॥೬೫॥

ವಯಸ್ಸಾಗಿತ್ತು. ಪ್ರತಿ ದಿನವೂ ಸುಮಂತನು ದುರ್ಗಾಪೂಜೆಯಲ್ಲಿ ಆಸಕ್ತನಾಗಿದ್ದನು. ಅವನು ದುರ್ಗಾದೇವಿಯ ಮಹಾಭಕ್ತನೂ, ಮತ್ತು ದೃಢವಾದ ಮನಸ್ಸುಳ್ಳವನೂ, ಯಾವಾಗಲೂ ದುರ್ಗಾದೇವಿಯಲ್ಲೇ ಆಸಕ್ತನೂ ಆಗಿರುತ್ತಿದ್ದನು. ಹೀಗೆ ದುರ್ಗಾದೇವಿಯಲ್ಲಿ ಮಹಾಭಕ್ತಿಯಿಂದ ಆ ಸುಮಂತುವು ತನ್ನ ಪತ್ನಿಯನ್ನು ಕರೆಯುವಾಗ ಅಯೀ ಎಂದು ಸಂಬೋಧಿಸುತ್ತಿದ್ದನು. ॥೬೦-೬೧-೬೨॥

ಮಗನಾದ ಅಲರ್ಕನೂ ಇದನ್ನು ಕೇಳಿ ಹಾಗೆಯೇ ಅಭ್ಯಾಸಮಾಡಿಕೊಂಡು ಬಾಲನಾದುದರಿಂದ ತಾಯಿಯನ್ನು ಆಗಾಗ್ಯೆ ಐ, ಐ, ಎಂದು ಕೂಗುತ್ತಿದ್ದನು. ॥೬೩॥

ಹೀಗಿರಲು ಒಂದುಬಾರಿ ಅಲರ್ಕನಿಗೆ ಖಾಯಿಲೆಬಂದಿತು. ಆ ಕಾಲದಲ್ಲಿ ತಾಯಿಗೆ ಪ್ರಿಯನಾದ ಇವನು ತಾಯಿಯನ್ನು ಐ ಐ ಎಂದು ಕರೆಯುತ್ತಾ ತಾಯಿಯನ್ನೇ ಧ್ಯಾನಿಸುತ್ತಾ ಪ್ರಾಣಗಳನ್ನು ಬಿಟ್ಟನು. ॥೬೪॥

ಐ ಎಂಬುದು ತ್ರಿಪುರಾಸಂಬಂಧವಾದ ಶ್ರೇಷ್ಠವಾದ ಮಂತ್ರದ ಮೊದಲನೆಯ ಬಿಂದುಶೂನ್ಯವಾದ ಬೀಜಾಕ್ಷರವು, ವಿದ್ಯೆಯನ್ನು ಕೊಡತಕ್ಕದ್ದು. ಅದರಿಂದಲೇ ವಿದ್ಯೆಯು ಜಾಗ್ರತೆ ಬರುತ್ತದೆ, ಎಂದು ಜ್ಞಾನಿಗಳು ತಿಳಿಯುತ್ತಾರೆ. ॥೬೫॥

ನಿರಂತರಂ ತದಾವೃತ್ತ್ಯಾ ಗತಃ ಕಾಲೋಽಸ್ಯ ಭೂಯಸಾ ।
ಅಂತೇ ತದೇವ ಪ್ರವದನ್ ದೇಹನ್ಯಾಸ ಮುಪಾಪ್ತವಾನ್ ॥೬೬॥

ತತ್ಪುಣ್ಯಸ್ಯ ಪ್ರಭಾವೇನ ಶ್ರೀಬಾಲಾ ತ್ರಿಪುರಾ ಪರಾ ।
ಮಹಾಯೋಗಿಭಿರಪ್ಯೇಷಾ ಪ್ರಾರ್ಥ್ಯತೇ ದರ್ಶನೇಚ್ಛಯಾ ॥೬೭॥

ಸಾ ಪ್ರಸನ್ನಾಽಚಿರೇಣಾಸ್ಯ ಪ್ರತ್ಯಕ್ಷಾಽಭವದಂಬಿಕಾ ।
ಅನುಗ್ರಹಂ ಕೃತವತೀ ಸ್ತೋತ್ರೇಣಾನೇನ ಸಂಸ್ತುತಾ ॥೬೮॥

ವಿಚಿತ್ರಾರ್ಥ ಪದಾಢ್ಯೇನ ಚ್ಛಂದೋಬದ್ಧಾತ್ಮನಾ ತದಾ ।
ನ ಶಕ್ತಿರಸ್ಯ ಪದ್ಯಾನಾ ಮಾಸೀದ್ವಿವೇಚಿತುಂ ತದಾ ॥೬೯॥

ತದ್ಬೀಜ ಜಪಮಾಹಾತ್ಮ್ಯಾದ್ದೇವತಾ ದರ್ಶನೇನ ಚ ।
ಅನುಪಸ್ಥಿತಮೇವಾಸ್ಯ ಸ್ತೋತ್ರಮತ್ಯಂತ ವಿಸ್ಮೃತಂ ॥೭೦॥

ಎಡೆಬಿಡದೇ ಆ ಬೀಜಾಕ್ಷರವನ್ನು ಇವನು ಬಹುಕಾಲ ಜಪಿಸಿದನು. ಕಡೆಯಲ್ಲಿ ಅದನ್ನೇ ಹೇಳುತ್ತಾ ದೇಹವನ್ನು ಬಿಟ್ಟು ಮೃತನಾದನು. ಮಹಾಮಹಿಮಳೂ, ಬಾಲೆಯೂ, ಪರಾಸ್ವರೂಪಳೂ, ಆದ ಆ ತ್ರಿಪುರಾಂಬಿಕೆಯನ್ನು ನೋಡಲು ಯೋಗಿಶ್ರೇಷ್ಠರು ಯಾವಾಗಲೂ ತಪಸ್ಸನ್ನು ಮಾಡುತ್ತಿರುತ್ತಾರೆ. ಅಂತಹ ದೇವಿಯು ಬೀಜಾಕ್ಷರಜಪದಿಂದುಂಟಾದ ಪುಣ್ಯದ ಪ್ರಭಾವದಿಂದ ಇವನಲ್ಲಿ ಅನುಗ್ರಹವನ್ನು ಮಾಡಲು ಜಾಗ್ರತೆಯಾಗಿ ದರ್ಶನವಿತ್ತಳು. ||೬೬-೬೭||

ಆಕಾಶದಲ್ಲಿ ಇವನು ದೇವಿಯನ್ನು ಆಶ್ಚರ್ಯಕರವಾದ ಅರ್ಥಗಳನ್ನು ಕೊಡುವ ಪದಗಳಿಂದ ಕೂಡಿದ ಚ್ಛಂದಸ್ಸಿನಿಂದ ಹೀಗೆ ಸ್ತೋತ್ರಮಾಡಿದನು. ಆದರಿಂದ ತೃಪ್ತಿಗೊಂಡ ದೇವಿಯು ಇವನಿಗೆ ಅನುಗ್ರಹಿಸಿದಳು. ||೬೮||

ಆ ಕಾಲದಲ್ಲಿ ಇವನಿಗೆ ಪದ್ಯಗಳನ್ನು ವಿವೇಚಿಸುವಷ್ಟು ಶಕ್ತಿಯಿರಲಿಲ್ಲ. ತ್ರಿಪುರಾದೇವಿಯ ಮಂತ್ರದ ಬೀಜಾಕ್ಷರಗಳನ್ನು ಜಪಿಸುವುದರಿಂದುಂಟಾದ ಮಹಿಮೆಯಿಂದಲೂ, ದೇವತಾದರ್ಶನದಿಂದಲೂ, ಆ ಸ್ತೋತ್ರವು ಉಪಸ್ಥಿತವಾಯಿತು. ಆ ಮೇಲೆ ಮರೆತುಹೋಯಿತು. ||೬೯-೭೦||

ಅಜ್ಞಾನೇನ ಯತೋ ಜಪ್ತಂ ಪುರಾ ಬೀಜಮ ಬಿಂದುಕಂ ।
ಅತಃ ಸರ್ವಂ ವಿಸ್ಮರತಿ ಧಾರಣಾ ವಿರಹಾದಯಂ ॥೭೧॥

ತಥಾಽಪಿ ಭಾವಿಕಾರ್ಯಸ್ಯ ಗೌರವಾದ್ವಚನಾನ್ಮಮ ।
ಸರ್ವಂ ಪ್ರತಿಸ್ಫುರತ್ವೇನ ಮದೃಷ್ಟಂ ಚಾಽಶ್ರುತಂ ತಥಾ ॥೭೨॥

ಭೂತಂ ಸ್ಥಿತಂ ಭವಿಷ್ಯಚ್ಚ ಗುರ್ವನುಕ್ತ ಮನೀಕ್ಷಿತಂ ।
ಛಂದೋವ್ಯಾಕರಣಂ ಚಾರ್ವರ್ಥಃ ಕಾವ್ಯರೂಪಕಲಕ್ಷಣಂ ॥೭೩॥

ಸರ್ವಂ ಭಾಸತು ತಥ್ಯೇನ ಕಲ್ಪಾಂತರ ಗತಾ ಅಪಿ ।
ಲೋಕಾಂತರ ಮಾನಸಾಶ್ಚ ವ್ಯಕ್ತಾವ್ಯಕ್ತಾ ಅತೀಂದ್ರಿಯಾಃ ॥೭೪॥

ಪ್ರತಿಭಾಸಂತು ಚಿತ್ತೇಽಸ್ಯ ನ ಮೃಷೋಕ್ತಂ ಭವೇತ್ ಕ್ವಚಿತ್ ।
ಕರ್ತಾ ಸ್ಯಾ ದೇಷ ತ್ರಿಪುರಾ ರಹಸ್ಯಸ್ಯ ಮಹಾಮತಿಃ ॥೭೫॥

ಹಿಂದೆ ಇವನು ತಿಳಿವಳಿಕೆಯಿಲ್ಲದೇ ಬಿಂದುಶೂನ್ಯವಾದ ಬೀಜಾಕ್ಷರವನ್ನು ಜಪಿಸಿದನು. ಆದಕಾರಣ ಎಲ್ಲವನ್ನೂ ಕೂಡ ಇವನು ಧಾರಣಾಶಕ್ತಿಯಿಲ್ಲದೇ ಮರೆತು ಬಿಡುತ್ತಾನೆ. ॥೭೧॥

ಆದಾಗ್ಯೂ ಕೂಡ ಮುಂದೆ ಆಗಬೇಕಾದ ಕಾರ್ಯಗೌರವದಿಂದಲೂ, ನನ್ನ ಮಾತಿನಿಂದಲೂ, ನೋಡಿರುವುದು, ಕೇಳಿರುವುದು, ಇರುವುದು, ಮುಂದಾಗುವುದು, ಗುರುವು ಹೇಳದಿರುವುದು, ನೋಡದಿರುವುದು, ಛಂದಸ್ಸುವ್ಯಾಕರಣ, ಕಾವ್ಯ, ರೂಪ ಕಾದ್ಯಲಂಕಾರಗಳ ಲಕ್ಷಣ, ಮತ್ತು ಸುಂದರವಾದ ಅರ್ಥ ಇವು ಎಲ್ಲವೂ ಕೂಡ ಸ್ಫುರಿಸುತ್ತವೆ ! ॥೭೨-೭೩॥

ಸ್ಫುಟವಾದ ವಿಷಯಗಳು ಅಸ್ಫುಟವಾದವುಗಳೂ, ಇಂದ್ರಿಯ ಗೋಚರವಲ್ಲದ ವುಗಳು ಬೇರೆ ಲೋಕಗಳ ವಿಷಯಗಳೂ, ಎಲ್ಲವೂ ಅನೇಕ ಕಲ್ಪಗಳು ಮುಗಿದಿದ್ದರೂ ಕೂಡ, ಯಥಾವತ್ತಾಗಿ ಹೊಳೆಯಲಿ. ಸುಳ್ಳಾದ ವಿಷಯಗಳಾವುವೂ ಯಾವಾ ಗಲೂ ಇವನ ಮನಸ್ಸಿಗೆ ಹೊಳೆಯದಿರಲಿ. ಮಹಾಬುದ್ಧಿಶಾಲಿಯಾದ ಇವನು ತ್ರಿಪುರಾರಹಸ್ಯದ ಕರ್ತೃವಾಗಲಿ. ॥೭೪-೭೫॥

ಪುರಾ ಸ್ಥಿತಮಿದಂ ಸರ್ವಮಗ್ರಂಥಾ ತ್ಮತಯಾಽಧುನಾ ।
ಹಾರಿತಾಯನ ನಿಬದ್ಧಂ ಗ್ರಂಥರೂಪಂ ಭವಿಷ್ಯತಿ ॥೨೬॥

ಇತಿಹಾಸಮಿದಂ ಶ್ರೇಷ್ಠಂ ವಿಚಿತ್ರಾರ್ಥ ಕಥಾ ಯುತಂ ।
ಶೃಣ್ವತಾಂ ಪಠತಾಂ ಭಕ್ತ್ಯಾ ತುಷ್ಟಾಸ್ಯಾತ್ತ್ರಿಪುರಾಽಂಬಿಕಾ ॥೨೭॥

ಪಠತ್ವಶೇಷ ಶಾಸ್ತ್ರಾಣಿ ಶೃಣೋತ್ವಖಿಲ ಸತ್ಕಥಾಃ ।
ನ ಯಾವದೇತತ್ಪಠಿತಂ ಶ್ರುತಂ ವಾ ಭುವಿ ಜಾಯತೇ ॥೨೮॥

ತಾವತ್ತೇನ ಶ್ರುತಂ ನೈವ ಪಠಿತಂ ವಾ ಭವಿಷ್ಯತಿ ।
ಕಿಂ ಬಹೂಕ್ತೇನ ದೇವರ್ಷೇ ಸರ್ವಸಾರಮಿದಂ ಭವೇತ್ ॥೨೯॥

ಏತತ್ಸಮ್ಯಗ್ವಿದಿತ್ವಾ ತು ನಾವಶಿಷ್ಯತೇ (ಷ್ಯೇತ) ಕಿಂಚನ ।
ಯಾವದೇ ತನ್ನ ಜಾನಾತಿ ತಾವನ್ನಸ್ಯಾತ್ಸುಪೂರ್ಣತಾ ॥೩೦॥

ಹಿಂದೆ ತ್ರಿಪುರಾರಹಸ್ಯವೆಲ್ಲವೂ ಗ್ರಂಥರೂಪವಾಗಿರಲಿಲ್ಲ. ಈಗ ಅದನ್ನು ಹಾರಿತಾಯನನು ಶ್ಲೋಕರೂಪವಾಗಿಮಾಡುತ್ತಾನಾದ್ದರಿಂದ ಗ್ರಂಥರೂಪವಾಗುತ್ತದೆ.॥೨೬॥

ಈ ಅತ್ಯುತ್ತಮವಾದ ಇತಿಹಾಸವು ಆಶ್ಚರ್ಯಕರವಾದ ಅರ್ಥಗಳಿಂದ ಕೂಡಿದ ಕಥೆಯುಳ್ಳದ್ದು. ಇದನ್ನು ಭಕ್ತಿಯಿಂದ ಓದಿದರೆ ಅಥವಾ ಕೇಳಿದರೆ ತ್ರಿಪುರಾಂಬಿಕೆಯು ಪ್ರೀತಳಾಗುತ್ತಾಳೆ. ॥೨೭॥

ಈ ಪ್ರಪಂಚದಲ್ಲಿ ಜನರು ಅನೇಕ ಶಾಸ್ತ್ರಗಳನ್ನೇ ಓದಲಿ, ಅನೇಕ ಸತ್ಕಥೆಗಳನ್ನೇ ಕೇಳಲಿ, ಅವರು ಈ ದೇವಿಯ ಚರಿತ್ರೆಯನ್ನು ಎಲ್ಲಿಯ ವರೆಗೆ ಕೇಳುವುದಿಲ್ಲವೋ, ಓದುವುದಿಲ್ಲವೋ ಅಲ್ಲಿಯ ವರೆಗೆ ಓದಿದ ಮತ್ತು ಕೇಳಿದ ಎಲ್ಲವೂ ಕೂಡ ನಿಷ್ಫಲವಾಗುತ್ತದೆ. ॥೨೮॥

ಓ ದೇವರ್ಷಿಯೇ, ಹೆಚ್ಚು ಹೇಳುವುದರಿಂದೇನುಫಲ? ಇದು ಎಲ್ಲದರ ಸಾರವು. ಈ ಇತಿಹಾಸವನ್ನು ಚೆನ್ನಾಗಿ ತಿಳಿದರೆ ಬೇರೆ ಯಾವುದೂ ತಿಳಿಯುವ ವಿದ್ಯೆಯು ಉಳಿಯುವುದಿಲ್ಲ. ಲೋಕದಲ್ಲಿ ಎಲ್ಲಿಯ ವರೆವಿಗೆ ಜನರು ಇದನ್ನು ತಿಳಿಯುವುದಿಲ್ಲವೋ ಅವರು ಎಷ್ಟು ವಿದ್ಯಾಪರಿಪೂರ್ಣರಾಗಿದ್ದರೂ ಅವರ ವಿದ್ಯೆಯು ಪೂರ್ಣವಾಗಿರುವುದಿಲ್ಲವು. ॥೨೯-೩೦॥

ಸುಮೇಧಃ ಶೃಣು ಮದ್ವಾಕ್ಯಂ ತವ ಸರ್ವಂ ಸ್ಫುರಿಷ್ಯತಿ ।
ಆರಭ್ಯ ರಾಮವಚನಾ ತ್ತ್ರಿಪುರಾ ಸ್ವಪ್ನದರ್ಶನಂ ॥೬೧॥

ಕರ್ತವ್ಯಂ ಕ್ರಮಶಃ ಸರ್ವಂ ಜ್ಞಾತಂ ತವ ಭವಿಷ್ಯತಿ ।
ಷಟ್ತ್ರಿಂಶದ್ದಿವಸೈರೇತತ್ಕರ್ತವ್ಯಂ ಭವತಾ ಭವೇತ್ ॥೬೨॥

ಅಧ್ಯಾಯಾನಾಂ ಚತುಷ್ಕಂ ಸ್ಯಾತ್ಪ್ರತ್ಯಹಂ ಕುರ್ವತಸ್ತವ ।
ಸಹಸ್ರಾಣಾಂ ದ್ವಾದಶಕಂ ಖಂಡಂ ತ್ರಿತಯಮೇವ ಚ ॥೬೩॥

ಆದ್ಯೋ ಮಾಹಾತ್ಮ್ಯಖಂಡಃ ಸ್ಯಾತ್ ಜ್ಞಾನಖಂಡಸ್ತಥಾ ಪರಃ ।
ಚರ್ಯಾಖಂಡ ಸ್ತೃತೀಯಃ ಸ್ಯಾದೇವ ಮೇತದ್ಭವಿಷ್ಯತಿ ॥೬೪॥

ಕೃತ್ವೈತ ದಾದೌ ದೇವರ್ಷೇ ಕರ್ತವ್ಯಂ ಪರಮಾದ್ಭುತಂ ।
ವತ್ಸ ನಾರದ ಭಕ್ತ್ಯೈತ ಚ್ಛ್ರೋತವ್ಯಂ ವೈ ತ್ವಯಾ ಭವೇತ್ ॥೬೫॥

ವಕ್ತಾಯಮಾದ್ಯಃ ಶ್ರೋತಾ ತ್ವಂ ನಾರದೇತ್ಥಂ ಭವಿಷ್ಯತಿ ।
ಇತ್ಥಮುಕ್ತ್ವಾ ಜಗತ್ಕರ್ತಾ ತಾಭ್ಯಾಂ ತತ್ರ ಪ್ರಪೂಜಿತಃ ॥೬೬॥

ಎಲೌ ಸುಮೇಧನೇ, ನನ್ನ ಮಾತನ್ನು ಕೇಳು. ನಿನಗೆ ಪರಶುರಾಮನ ಮಾತಿನಿಂದ ಹಿಡಿದು ಸ್ವಪ್ನದಲ್ಲಿ ಅಂಬಿಕೆಯು ದರ್ಶನದ ವರೆವಿಗೂ ಎಲ್ಲವೂ ಸ್ಫುರಿಸುತ್ತದೆ. ॥೬೧॥

ಸುಮೇಧನೇ, ಎಲ್ಲವೂ ಕ್ರಮವಾಗಿ ಜ್ಞಾಪಕಕ್ಕೆ ಬರುತ್ತದೆ. ನೀನು ಈ ಗ್ರಂಥವನ್ನು ಪ್ರತಿದಿವಸವೂ ನಾಲ್ಕು ಅಧ್ಯಾಯದಂತೆ ಮೂವತ್ತಾರು ದಿವಸಗಳಲ್ಲಿ ರಚಿಸು. ಇದು ಹನ್ನೆರಡು ಸಾವಿರ (೧೨೦೦೦) ಗ್ರಂಥದಿಂದಲೂ, ಮೂರು ಖಂಡ ಗಳಿಂದಲೂ ಕೂಡಿದ್ದಾಗಿ ಇರಲಿ. ಮೊದಲನೆಯದನ್ನು ಮಾಹಾತ್ಮ್ಯಖಂಡವೆಂದೂ, ಎರಡನೆಯದನ್ನು ಜ್ಞಾನಖಂಡವೆಂದೂ, ಮೂರನೆಯದನ್ನು ಚರ್ಯಾಖಂಡವೆಂದೂ, ರಚಿಸುವವನಾಗು. ॥೬೨-೬೩-೬೪॥

ದೇವರ್ಷಿಯೇ, ಈ ಗ್ರಂಥವನ್ನು ಸುಮೇಧನು ಮೊದಲುಮಾಡುವನು. ಅನಂತರದಲ್ಲಿ ನೀನು ಭಕ್ತಿಯಿಂದ ಪರಮಾಶ್ಚರ್ಯಯುಕ್ತವಾದ ಇದನ್ನು ಕೇಳುವ ವನಾಗು. ॥೬೫॥

ನಾರದನೇ, ಈ ಸುಮೇಧನು ಮೊದಲನೆಯ ಹೇಳತಕ್ಕವನೂ, ನೀನು

ತದೈವಾಂತರ್ಹಿತೋ ಬ್ರಹ್ಮಾ ನಾರದೋಽಪಿ ಸಭಾಜಿತಃ ।
ಸುಮೇಧಸಾ ಯಯೌ ವೀಣಾಂ ರಣಯನ್ನೀಪ್ಸಿತಾಂ ದಿಶಂ ॥೮೭॥

ಅಥ ಕ್ಷಣಂ ಸ್ಥಿತಸ್ತೂಷ್ಣೀಂ ವಿಮನಾ ಹಾರಿತಾಯನಃ ।
ತತ್ಸಂಗ ವಿರಹಾದೀಷತ್ಕಲುಷೀಕೃತ ಮಾನಸಃ ॥೮೮॥

ಅಥ ವೇಗವತೀಂ ಗತ್ವಾ ಸ್ನಾತ್ವಾ ಕೃತವಿಧಿರ್ಮುನಿಃ ।
ಸುಂದರೇಶಂ ಸುಮೀನಾಕ್ಷೀಮಭ್ಯರ್ಚ್ಯ ಗಣಪಂ ಗುರುಂ ॥೮೯॥

ಸ್ಮೃತ್ವಾ ಗ್ರಂಥಸ್ಯ ಕರಣ ಮುಪಚಕ್ರಾಮ ಸ ದ್ವಿಜಃ ।
ಓಂ ನಮಃ ಕರಣಾನಂದೇ ತ್ಯಾರಭ್ಯ ಕ್ರಮಶಃ ಕೃತಂ ॥೯೦॥

ಕೇಳುವುದರಲ್ಲಿ ಮೊದಲನೆಯವನೂ, ಆಗುವಿರಿ. ಹೀಗೆಂದು ಬ್ರಹ್ಮನು ಹೇಳಲು ಸುಮೇಧ ಮತ್ತು ನಾರದರು ಆ ಬ್ರಹ್ಮನನ್ನು ಬಹುಪ್ರಕಾರವಾಗಿ ಸೇವಿಸಿದರು.||೮೬||

ಆ ಕೂಡಲೇ ಬ್ರಹ್ಮನು ಅಂತರ್ಧಾನನಾದನು. ನಾರದನೂ ಸಹ ಸುಮೇಧ ನಿಂದ ಪೂಜಿಸಲ್ಪಟ್ಟು ವೀಣಾವಾದನವನ್ನು ಮಾಡುತ್ತಾ ಮನಬಂದತ್ತ ನಡೆದನು. ||೮೭||

ಅನಂತರದಲ್ಲಿ ಹಾರಿತಾಯನನು ಆ ಸತ್ಪುರುಷರ ಸಹವಾಸದ ವಿರಹ ವುಂಟಾದ್ದರಿಂದ ಸ್ವಲ್ಪ ವ್ಯಾಕುಲಗೊಂಡ ಮನಸ್ಸಿನಿಂದ ಕೊಂಚಕಾಲದ ವರೆವಿಗೂ ಸುಮ್ಮನೇ ನಿಂತಿದ್ದನು. ||೮೮||

ಅನಂತರದಲ್ಲಿ ಆ ಋಷಿಯು ವೇಗವತೀನದಿಗೆ ಹೋಗಿ ಸ್ನಾನಮಾಡಿ ಅಹ್ನಿಕಗಳನ್ನು ಮುಗಿಸಿದನು. ಆ ಬಳಿಕ ಸುಂದರೇಶನನ್ನೂ ಮೀನಾಕ್ಷಿಯನ್ನೂ, ಗಣಪತಿಯನ್ನೂ, ಗುರುವನ್ನೂ ಪೂಜಿಸಿದನು. ||೮೯||

ಗ್ರಂಥರಚನೆಯ ಕೆಲಸವನ್ನು ಆ ಬ್ರಾಹ್ಮಣನು ಸ್ಮರಿಸಿಕೊಂಡು ಗ್ರಂಥವನ್ನು ಬರೆಯಲು ಮೊದಲುಮಾಡಿದನು. "ಓಂ ನಮಃ ಕರಣಾನಂದ" ಎಂದು ಮುಂತಾಗಿ ರಚಿಸಿದನು. ||೯೦||

ಸಮಾಪ್ತಿ ಮಕರೋದಂತೇ ಸಾ ಭವೇತ್ರಿಪುರ್ಯೈವ ಹ್ರೀಂ ।
ಶಿವಶಕ್ತಿ ಪ್ರಣವಯೋರ್ಮಧ್ಯೇ ಗ್ರಂಥಸ್ತು ತನ್ಮಯಃ ॥೯೧॥
ಏವಂ ವಿಧಸ್ತೇನ ಕೃತೋ ಬ್ರಹ್ಮಣೋಕ್ತಂ ಯಥಾ ಪುರಾ ।

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ನಾರದಾಭಿಗಮನಂ ನಾಮ ದ್ವಿತೀಯೋಽಧ್ಯಾಯಃ

ಕಡೆಯಲ್ಲಿ " ಸಾಭವೇತ್ರಿಪುರ್ಯೈವ ಹ್ರೀಂ " ಎಂಬುದಾಗಿ ಮುಗಿಸಿದನು. ಶಿವಶಕ್ತಿ ರೂಪ ಪ್ರಣವಗಳ ಮಧ್ಯದಲ್ಲಿರುವ ಗ್ರಂಥವು ಶಿವಶಕ್ತಿಪ್ರಣವಮಯವಾಗಿರುತ್ತದೆ. ಬ್ರಹ್ಮನು ಹಿಂದೆ ಹೇಳಿದಂತೆ ಹಾರಿತಾಯನನು ತ್ರಿಪುರಾರಹಸ್ಯಗ್ರಂಥವನ್ನು ಆ ರೀತಿಯಲ್ಲಿ ರಚಿಸಿದನು. ॥೯೧॥

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ನಾರದನ ಆಗಮನವನ್ನು ತಿಳಿಸಿರುವ ಎರಡನೆಯ ಅಧ್ಯಾಯವು ಮುಗಿಯಿತು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ತೃತೀಯೋಽಧ್ಯಾಯಃ ||

ಮೂರನೆಯ ಅಧ್ಯಾಯವು

ಆದಿನಾಥೋ ಮಹೇಶಾನಃ ಸರ್ವಕಾರಣಕಾರಣಂ ।
ಸರ್ವಕರ್ತಾ ವಿಜಯತೇ ಸರ್ವಾತ್ಮಕತಯಾ ಸ್ಥಿತಃ ॥೧॥

ಶ್ರೀವಿಷ್ಣೋರಂಶಯೋಗೀಶೋ ದತ್ತಾತ್ರೇಯೋ ಮಹಾಮುನಿಃ ।
ಗೂಢಚರ್ಯಾಂ ಚರನ್ಲೋಕೇ ಭಕ್ತವತ್ಸಲ ಏಧತೇ ॥೨॥

ಜಮದಗ್ನ್ಯರಣೇರ್ಜಾತಃ ಕ್ಷತ್ರೇಂಧನ ಮಹಾನಲಃ ।
ರಾಮೋಽಭ್ಯುದೇತಿ ಭಕ್ತಾಂತ ರಜ್ಞಾನಧ್ವಾಂತ ನಾಶಕಃ ॥೩॥

ಏವಂ ಧ್ಯಾತ್ವಾ ಗುರೂನ್ ಸ್ವರ್ಣ ಪದ್ಮಿನೀರೋಧಸಿ ಸ್ಥಿತಃ ।
ಪಿತಾಮಹೋಕ್ತ ವಿಧಿನಾ ಷಟ್ತ್ರಿಂಶದ್ದಿವಸೈಃ ಕೃತಂ ॥೪॥

ಸಕಲ ಕಾರಣಗಳಿಗೂ ಕಾರಣರೂಪನೂ, ಮಹೇಶನೂ, ಎಲ್ಲವನ್ನೂ ಸೃಷ್ಟಿಸುವವನೂ ಆದ ಆದಿನಾಥನು ಸರ್ವಸ್ವರೂಪನಾಗಿ ಉತ್ಕರ್ಷದಿಂದ ಇರುತ್ತಾನೆ. ||೧||

ವಿಷ್ಣುವಿನ ಅಂಶದಿಂದ್ಭವಿಸಿ ಯೋಗಿಗಳೊಳಗೆ ಶ್ರೇಷ್ಠನಾದ ಮಹಾಮುನಿಯಾದ ದತ್ತಾತ್ರೇಯನು ಭಕ್ತರಲ್ಲಿ ಪ್ರೀತಿಯುಳ್ಳವನಾಗಿ ಗೂಢವಾದ ಆಚಾರವುಳ್ಳವನಾಗಿ ಲೋಕದಲ್ಲಿ ಸರ್ವೋತ್ಕರ್ಷದಿಂದ ಇರುತ್ತಾನೆ. ||೨||

ಜಮದಗ್ನಿಯೆಂಬ ಅರಣಿಯಿಂದ ಉತ್ಪನ್ನನಾಗಿರುವ, ಕ್ಷತ್ರಿಯರೆಂಬ ಸಮಿತ್ತಿಗೆ ಮಹಾ ಅಗ್ನಿಯಾಗಿರುವ, ಭಕ್ತರ ಒಳಗಿನ ಅಜ್ಞಾನದ ಕತ್ತಲೆಯನ್ನು ನಾಶಪಡಿಸುವ ಪರಶುರಾಮನು ವೃದ್ಧಿಹೊಂದುತ್ತಲಿರುತ್ತಾನೆ. ||೩||

ಈ ಪ್ರಕಾರವಾಗಿ ಗುರುಗಳನ್ನು ಧ್ಯಾನಿಸಿದನು. ಅನಂತರದಲ್ಲಿ ಕಮಲ ಸರೋವರದ ದಡದಲ್ಲಿ ಬ್ರಹ್ಮನು ಹೇಳಿದಂತೆ ಹಾರಿತಾಯನನು ಭಗವತೀಸಂಬಂಧ

ಇತಿಹಾಸಂ ಭಾಗವತಂ ತಂತ್ರಸಾರಮಖಂಡಿತಂ ।
ವೈರಾಗ್ಯ ಭಕ್ತಿಮಾಹಾತ್ಮ್ಯ ಕ್ರಿಯಾಜ್ಞಾನ ಸಮನ್ವಿತಂ ॥೫॥

ನಾನಾಖ್ಯಾನ ಕಥಾಚಿತ್ರಂ ತ್ರಿಪುರಾಯಾ ರಹಸ್ಯಕಂ ।
ಪಠತಾಂ ಪಾಪಶಮನಂ ಶೃಣ್ವತಾಂ ಕ್ಲೇಶನಾಶನಂ ॥೬॥

ವಿಚಾರಿತಂ ಸ್ವಾತ್ಮಲಾಭಜನನಂ ಮೋಕ್ಷಸಾಧನಂ ।
ಪೂಜಿತಂ ತ್ರಿಪುರಾಭಕ್ತಿಕರಂ ದೃಷ್ಟಂ ಶುಭೋದಯಂ ॥೭॥

ವಿದ್ಯಾಪ್ರದಂ ಸುಲಿಖಿತಂ ಸೇವಿತಂ ವಾಂಛಿತಾರ್ಥದಂ ।
ಯತ್ರ ಶ್ರೀತ್ರಿಪುರಾದೇವ್ಯಾಃ ಕಥಾ ವಿಭವ ಕೀರ್ತನಂ ॥೮॥

ಜ್ಞಾನ ವೈರಾಗ್ಯಭಕ್ತ್ಯಾಢ್ಯಂ ನಾರದಾದ್ಯೈಃ ಶ್ರುತಂ ಚ ಯತ್ ।
ತತ್ರ ಕಿಂ ದುರ್ಲಭತರಂ ಚಿಂತಾಮಣಿರಿವ ಸ್ಥಿತಂ ॥೯॥

ವಾದ ತಂತ್ರಶಾಸ್ತ್ರಸಾರದಿಂದ ಕೂಡಿರುವ, ವಿಚ್ಛೇದವಾಗದಿರುವ, ವೈರಾಗ್ಯ ಭಕ್ತಿ ಪ್ರದವಾದ ಮಾಹಾತ್ಮ್ಯಕ್ರಿಯಾಜ್ಞಾನಖಂಡಗಳಿಂದ ಕೂಡಿರುವ, ಅನೇಕ ಕಥೆಗಳಿಂದ ಆಶ್ಚರ್ಯಕರವಾಗಿರುವ ತ್ರಿಪುರಾರಹಸ್ಯವೆಂಬ ಇತಿಹಾಸವನ್ನು ಮೂವತ್ತಾರು ದಿನ ಗಳಲ್ಲಿ ರಚಿಸಿದನು. ॥೪-೫॥

ಈ ತ್ರಿಪುರಾರಹಸ್ಯವು ಓದುವವರಿಗೆ ಪಾಪಶಮನವನ್ನೂ, ಕೇಳುವವರಿಗೆ ಕಷ್ಟನಾಶನವನ್ನೂ, ವಿಚಾರಶೀಲರಿಗೆ ಆತ್ಮಜ್ಞಾನವನ್ನೂ ಕೊಡುವ, ಮೋಕ್ಷಕ್ಕೆ ಕಾರಣವಾಗಿರುವ, ಪೂಜಿಸುವವರಿಗೆ ತ್ರಿಪುರಾಂಬಿಕೆಯಲ್ಲಿ ಭಕ್ತಿಯನ್ನುಂಟುಮಾಡುವ ನೋಡತಕ್ಕವರಿಗೆ ಮಂಗಳವನ್ನುಂಟುಮಾಡುವ ಗ್ರಂಥವಾಗಿದೆ. ॥೬-೭॥

ತ್ರಿಪುರಾರಹಸ್ಯವನ್ನು ಚೆನ್ನಾಗಿ ಬರೆದರೆ ವಿದ್ಯಾಪ್ರದವಾಗುತ್ತದೆ. ಸೇವಿಸಿದರೆ ಇಷ್ಟಾರ್ಥಗಳು ಕೈಗೂಡುತ್ತವೆ. ಎಲ್ಲಿ ಶ್ರೀತ್ರಿಪುರಾದೇವಿಯ ಕಥೆಯು ಮತ್ತು ಮಾಹಾತ್ಮ್ಯವೂ ಗಾನಮಾಡಲ್ಪಡುತ್ತವೋ ಅಲ್ಲಿ ದುರ್ಲಭವಾದುದು ಯಾವುದೂ ಇರುವುದಿಲ್ಲ. ಸಕಲ ಇಚ್ಛೆಗಳೂ ಪೂರೈಸುತ್ತವೆ. ಈ ರಹಸ್ಯವು ಜ್ಞಾನ, ವೈರಾಗ್ಯ ಮತ್ತು ಭಕ್ತಿಯಿಂದ ಕೂಡಿರುವುದರಿಂದ, ನಾರದನೇ ಮೊದಲಾದ ಪ್ರಮುಖರು ಇದನ್ನು ಕೇಳುತ್ತಾರೆ. ಇದು ಲೋಕದಲ್ಲಿ ಚಿಂತಾಮಣಿಯಂತೆ ಭಕ್ತರ ಎಲ್ಲ ಕೋರಿಕೆಗಳನ್ನೂ ಸಲ್ಲಿಸುತ್ತಾ ಪ್ರಕಾಶಮಾನವಾಗಿರುತ್ತದೆ. ॥೮-೯॥

ಏತಸ್ಮಿನ್ನಂತರೇ ತತ್ರ ಪ್ರಾಪ್ತೋ ದೇವರ್ಷಿಸತ್ತಮಃ ।
ವಲ್ಲಕೀಂ ನಾದಯನ್ರಮ್ಯಾಮಾನಂದಾಪ್ಲುತ ಮಾನಸಃ ॥೧೦॥

ಸುಮೇಧಾ ಅಪಿ ತಂ ದೃಷ್ಟ್ವಾ ಸಹಸೋತ್ಥಾಯ ಸುಸ್ಮಿತಃ ।
ಸಂಪೂಜ್ಯಾಸನ ಪಾದ್ಯಾದ್ಯೈಃ ಕೃತಾಂಜಲಿ ರಭಾಷತ ॥೧೧॥

ದೇವರ್ಷೇ ತ್ವತ್ಪ್ರಸಾದೇನ ಜಾತಂ ಸಮ್ಯಗ್ಯಥಾರ್ಥತಃ ।
ಪ್ರಗುಣಾಂ ಜನಯೋಗೇನ ಪ್ರಜ್ಞಾಚಕ್ಷುರಿವಾಖಿಲಂ ॥೧೨॥

ಪಿತಾಮಹೋಕ್ತಂ ಸಂಪನ್ನಂ ರಚಿತಂ ತದ್ರಹಸ್ಯಕಂ ।
ಆಜ್ಞಾಪಯಾಗ್ರೇ ಶಿಷ್ಯಂ ಮಾಂ ಭವತಃ ಕಿಂ ಕರೋಮ್ಯಹಂ ॥೧೩॥

ಅದ್ಯ ಸರ್ವಾಣಿ ಶಾಸ್ತ್ರಾಣಿ ಛಂದಾಂಸಿ ವಿವಿಧಾನಿ ಚ ।
ಸರ್ವೇ ಲೋಕಾ ದಿಶಃ ಕಾಲಾಃ ಸೇಂದ್ರಿಯಾಶ್ಚ ನಿರಿಂದ್ರಿಯಾಃ॥೧೪॥

ಇಷ್ಟರಲ್ಲಿ ದೇವರ್ಷಿಗಳಲ್ಲಿ ಶ್ರೇಷ್ಠನಾದ ನಾರದನು ಮನೋಹರವಾದ ವೀಣೆಯನ್ನು ನುಡಿಸುತ್ತಾ ಆನಂದದಿಂದ ಕೂಡಿದವನಾಗಿ ಸುಮೇಧನು ಇದ್ದಕಡೆಗೆ ಬಂದನು. ॥೧೦॥

ಸುಮೇಧನು ನಾರದನು ಬಂದದ್ದನ್ನು ನೋಡಿ, ಕೂಡಲೇ ಎದ್ದು ನಗೆಮುಖದಿಂದ ನಾರದನನ್ನು ಸ್ವಾಗತಿಸಿದನು. ಆಸನದಲ್ಲಿ ಕುಳ್ಳಿರಿಸಿ ಪಾದ್ಯವೇ ಮೊದಲಾದ ಪೂಜಾಸಾಮಗ್ರಿಗಳಿಂದ ಸತ್ಕರಿಸಿ, ಅಂಜಲಿಬದ್ಧನಾಗಿ ಹೇಳಿದನು. ॥೧೧॥

ಓ ದೇವರ್ಷಿಯೇ, ನಿನ್ನ ಅನುಗ್ರಹರೂಪವಾದ ಹೆಚ್ಚಾದ ಗುಣವಿಶಿಷ್ಟವಾದ ಅಂಜನದ ಪ್ರಯೋಗದಿಂದ ಜ್ಞಾನನೇತ್ರವಿಕಾಸವಾಗಲು ಸಕಲವೂ ಯಥಾರ್ಥವಾಗಿ ಚೆನ್ನಾಗಿ ಗೊತ್ತಾಯಿತು. ॥೧೨॥

ಓ ನಾರದನೇ, ಬ್ರಹ್ಮನು ಹೇಳಿದಂತೆ ತ್ರಿಪುರಾರಹಸ್ಯವನ್ನು ಸಂಪೂರ್ಣವಾಗಿ ರಚಿಸಿದ್ದಾಯಿತು. ಇಲ್ಲಿಂದ ಮುಂದೆ ನಾನು ನಿನಗೆ ಯಾವ ಸೇವೆಯನ್ನು ಮಾಡಬೇಕೆಂಬುದನ್ನು ಈ ನಿನ್ನ ಶಿಷ್ಯನಿಗೆ ಆಜ್ಞಾಪಿಸು. ॥೧೩॥

ಈಗ ನನಗೆ ಸಕಲ ಶಾಸ್ತ್ರಗಳೂ ಅನೇಕ ಛಂದಸ್ಸುಗಳೂ, ಸಕಲ ಲೋಕಗಳೂ, ದಿಕ್ಕುಗಳೂ, ಕಾಲಗಳೂ, ಇಂದ್ರಿಯಸಹಿತವಾದುವೂ, ಇಂದ್ರಿಯಶೂನ್ಯ

ಜ್ಞಾತಾಃ ಕರಸ್ಥಿತಸ್ವಚ್ಛ ವೈಕ್ರಾಂತಮಣಿ ಖಂಡವತ್ ।
ನಮಸ್ತೇ ಬ್ರಹ್ಮಪುತ್ರಾಯ ನಾರದಾಯ ಮಹಾತ್ಮನೇ ॥೧೫॥

ಯತ್ಕೃಪಾ ಯೋಗತಃ ಸಮ್ಯಕ್ ಜ್ಞಾತಂ ಸರ್ವಂ ಪರಾಪರಂ ।
ಇತ್ಯುಕ್ತ್ವಾ ಪದಯೋಸ್ತಸ್ಯ ದಂಡವನ್ನಿಪಪಾತ ಹ ॥೧೬॥

ಅಥ ತಂ ನಾರದೋತ್ಥಾಪ್ಯ ವಕ್ಷಸಾಽಽಪೀಡ್ಯ ತಂ ಮುನಿಂ ।
ಆಸನೇ ಸನ್ನಿವೇಶ್ಯಾಥೋ ಮಧುರಂ ವಾಕ್ಯಮಬ್ರವೀತ್ ॥೧೭॥

ಹಾರಿತಾಯನ ಧನ್ಯೋಽಸಿ ತ್ವತ್ಸಮೋ ನೈವ ವಿದ್ಯತೇ ।
ಯಸ್ಯೈವಂ ತ್ರಿಪುರಾಪಾದಭಕ್ತ್ಯಾ ಸಂಪತ್ತಿರುದ್ಗತಾ ॥೧೮॥

ಯತ್ತ್ವಯಾ ತ್ರಿಪುರಾದೇವ್ಯಾ ರಹಸ್ಯಂ ರಚಿತಂ ಶುಭಂ ।
ತಚ್ಛುಶ್ರೂಷು ರಹಂ ಪ್ರಾಪ್ತಸ್ತ್ವಚ್ಛಯಂ ಬ್ರಹ್ಮವಾಕ್ಯತಃ ॥೧೯॥
ಶ್ರದ್ಧಾವತೋ ಮಮಾಗ್ರೇ ತತ್ಸರ್ವಂ ವದ ಸುವಿಸ್ತೃತಂ ।

ವಾದುವೂ ಎಲ್ಲವೂ ಕೈಯ್ಯಲ್ಲಿರುವ ವೈಕ್ರಾಂತಮಣಿಯಂತೆ ಗೊತ್ತಾಯಿತು. ಬ್ರಹ್ಮಪುತ್ರನೂ, ಮಹಾತ್ಮನೂ, ಆದ ನಾರದನೇ, ನಿನಗೆ ನಮಸ್ಕಾರವು. ನಿನ್ನ ದಯೆಯಿಂದ ಸಕಲ ಪರಾಪರವಸ್ತುಜ್ಞಾನವು ನನಗೆ ಚೆನ್ನಾಗಿ ಉಂಟಾಯಿತು. ಹೀಗೆಂದು ಹೇಳಿ ಸುಮೇಧನು ನಾರದನ ಪಾದಗಳಿಗೆ ನಮಸ್ಕರಿಸಿದನು. ||೧೪-೧೫-೧೬||

ಅನಂತರದಲ್ಲಿ ಆ ನಾರದನು ಅವನನ್ನು ಎಬ್ಬಿಸಿ, ಎದೆಯಿಂದಾಲಿಂಗಿಸಿಕೊಂಡು ಆಸನದಲ್ಲಿ ಕುಳ್ಳಿರಿಸಿದನು. ಅನಂತರದಲ್ಲಿ ಕೆಳಗೆ ಹೇಳುವ ರೀತಿಯಲ್ಲಿ ಮೃದುಮಧುರವಾಗಿ ಹೇಳತೊಡಗಿದನು. ||೧೭||

ಎಲೌ ಹಾರಿತಾಯನನೇ, ಆ ಮಾತೆಯ ಚರಣಸೇವೆಯಿಂದ ನಿನಗೆ ಅತುಲವಾದ ಸಂಪತ್ತಿಯುಂಟಾಯಿತು. ಲೋಕದಲ್ಲಿ ನಿನಗೆ ಸಮಾನರಾರೂ ಇರುವುದಿಲ್ಲ. ನೀನು ಧನ್ಯನು! ||೧೮||

ನೀನು ಮಂಗಳಕರವಾದ ತ್ರಿಪುರಾರಹಸ್ಯವನ್ನು ಬರೆದಿರುವೆ. ಅದನ್ನು ಕೇಳಬೇಕೆಂಬ ಇಚ್ಛೆಯಿಂದ ಬ್ರಹ್ಮನ ಅಪ್ಪಣೆಯಂತೆ ನಿನ್ನಲ್ಲಿಗೆ ಬಂದಿರುತ್ತೇನೆ. ಶ್ರದ್ಧೆಯಿಂದ ಕೂಡಿದವನಾದ ನನ್ನೆದುರಿಗೆ ನೀನು ತ್ರಿಪುರಾರಹಸ್ಯವನ್ನು ವಿಸ್ತಾರವಾಗಿ ಹೇಳುವವನಾಗು. ||೧೯||

ಇತಿ ತದ್ವಾಕ್ಯಮಾಕರ್ಣ್ಯ ಪ್ರಾಂಜಲಿರ್ಹೃಷ್ಟಮಾನಸಃ ॥೨೦॥

ಆನಂದಾಶ್ರು ಕಲಾಪೂರ್ಣ ವಿಕಸನ್ನೇತ್ರಪಂಕಜಃ ।
ತ್ರಿಪುರಾ ಸ್ಮೃತಿ ಸಂಜಾತ ರೋಮಾಂಚದ್ವಿಗುಣಾಂಗಕಃ ॥೨೧॥

ಅವದನ್ನಾರದಂ ವಾಕ್ಯಂ ಮಧು ನಿಷ್ಯಂದ ಸುಂದರಂ ।
ಉಪಪನ್ನಂ ತನ್ವೈವೇದಂ ಬ್ರಹ್ಮಪುತ್ರ ಮಹಾಮುನೇ ॥೨೨॥

ಯಚ್ಛಿಷ್ಯ ಭೂತಾನ್ಮತ್ತಸ್ತ್ವಂ ಶುಶ್ರೂಷಸ್ಯಖಿಲಂ ವಿದನ್ ।
ನೈಸರ್ಗಿಕಃ ಸ್ವಭಾವೋಽಯಂ ಸತಾಂ ಸುಮಹತಾಂ ಭವೇತ್ ॥೨೩॥

ಅಮತ್ಸರಾ ಅವರತೋಽಪ್ಯಲ್ಪಂ ಶೃಣ್ವಂತಿ ಸಜ್ಜನಾಃ ।
ನೈತಚ್ಚಿತ್ರಂ ಪರಾದೇವ್ಯಾಶ್ಚಾರಿತ್ರ್ಯ ಮಮೃತೋಪಮಂ ॥೨೪॥

ನ ತು ದ್ರಾಕ್ಷಾಫಲೇ ಭೇದೋ ಲೋಷ್ಟಸ್ಥೇ ಮಣಿಪಾತ್ರಗೇ ।
ಸಮಂ ಸ್ವಭಾವಮಧುರಂ ನ ಪಾತ್ರಾದ್ಭಿದ್ಯತೇ ರಸಃ ॥೨೫॥

ಈ ರೀತಿಯಾದ ನಾರದನ ಮಾತನ್ನು ಕೇಳಿ ಸಂತೋಷದಿಂದುಂಟಾದ ಕಣ್ಣೀರಿನಿಂದ ಕೂಡಿ ಅರಳಿದ ಕಣ್ಣುಳ್ಳ, ತ್ರಿಪುರಾಂಬಿಕೆಯ ಸ್ಮರಣೆಯುಂಟಾಗಲು ರೋಮಾಂಚದಿಂದ ಉಬ್ಬಿದ ದೇಹವುಳ್ಳ, ಸಂತುಷ್ಟಾಂತರಂಗದಿಂದ ಅಂಜಲಿಬದ್ಧನಾಗಿ ನಾರದನನ್ನು ಕುರಿತು ಮೃದುಮಧುರವಾದ ಮಾತುಗಳನ್ನು ಹೇಳಿದನು. ॥೨೦-೨೧॥

ಬ್ರಹ್ಮಪುತ್ರನೂ, ಮಹಾಮುನಿಯೂ, ಆದ ನಾರದಮುನಿಯೇ ಈ ನಾನು ತ್ರಿಪುರಾರಹಸ್ಯವನ್ನು ಗ್ರಂಥರೂಪವಾಗಿ ಬರೆದೆನೆಂಬುದು ನಿನ್ನ ಅನುಗ್ರಹದಿಂದಲೇ ಆದುದು. ನಿನಗೆ ಎಲ್ಲವೂ ಗೊತ್ತಿದೆ. ಆದರೂ ಕೂಡ ಶಿಷ್ಯಸಮಾನನಾದ ನನ್ನಿಂದಲೇ ನೀನು ಕೇಳಲಿಚ್ಛಿಸುತ್ತಿರುವೆ. ಮಹಾತ್ಮರಾದ ಸತ್ಪುರುಷರ ಈ ರೀತಿಯಾದ ನಡವಳಿಕೆಯು ಸ್ವಭಾವಜನ್ಯವಾದುದು. ॥೨೨-೨೩॥

ಸತ್ಪುರುಷರು ಸಕಲವನ್ನೂ ತಿಳಿದಿದ್ದರೂ ಅಸೂಯೆಯಿಲ್ಲದೇ ಅಲ್ಪವಾದುದಾದರೂ ತ್ರಿಪುರಾಂಬಿಕೆಯ ಅಮೃತಕ್ಕೆ ಸಮಾನವಾದ ಚರಿತ್ರೆಯನ್ನು ಕೇಳುತ್ತಾರೆಂದರೆ ಅದು ಆಶ್ಚರ್ಯಕರವೇನೂ ಅಲ್ಲವು. ॥೨೪॥

ಮಣ್ಣಿನ ಪಾತ್ರೆಯಲ್ಲೇ ಇರಲೀ ಅಥವಾ ರತ್ನದ ಪಾತ್ರೆಯಲ್ಲೇ ಇರಲಿ ದ್ರಾಕ್ಷಾಫಲದಲ್ಲಿ ಭೇದವುಂಟಾಗಲಾರದು. ಸ್ವಭಾವವಾಗಿ ಮಧುರವಾದ ರಸವು ಬೇರೆ ಬೇರೆ ಪಾತ್ರೆಯಲ್ಲಿದ್ದರೆ ಭಿನ್ನವಾಗುವುದಿಲ್ಲ. ಒಂದೇಸಮನಾಗಿರುತ್ತದೆ. ॥೨೫॥

ತವಾಜ್ಞಾಂ ಶಿರಸಾ ಧೃತ್ವಾ ವಿಧಾತ್ರಾಜ್ಞಾ ಮನುಸ್ಮರನ್ ।
ವದಾಮ್ಯತಿ ವಿಚಿತ್ರಂ ತದ್ರಹಸ್ಯಂ ಪರಮಾದ್ಭುತಂ ॥೨೬॥

ಆವಯೋಃ ಸಂವಾದರೂಪಂ ಸಮಾಹಿತಮತಿಃ ಶೃಣು ।
ಆಸೀದ್ಬ್ರಹ್ಮಸುತಃ ಶ್ರೀಮಾನ್ ಭೃಗುರ್ಮುನಿಗಣೇಡಿತಃ ॥೨೭॥

ತತ್ಪುತ್ರಶ್ಚ್ಯವನಃ ಸಾಕ್ಷಾದ್ಬ್ರಹ್ಮಣಾ ಸದೃಶೋ ಭುವಿ ।
ಸುಕನ್ಯಾ ಯಸ್ಯ ಚಾರಿತ್ರ್ಯಾತ್ಪಿತ್ರಾ ದತ್ತಾ ಮಹಾತ್ಮನೇ ॥೨೮॥

ಯೇನ ಸೋಮಗ್ರಹೋ ದತ್ತೋ ಜಿತ್ವಾಽಶ್ವಿಭ್ಯಾಂ ಶತಕ್ರತುಂ ।
ಋಚೀಕಸ್ತಸ್ಯ ತನಯೋ ಮಹಾತ್ಮಾ ಚ್ಯವನೋಪಮಃ ॥೨೯॥

ತಸ್ಮೈ ದತ್ತಾ ಸ್ವತನಯಾ ಗಾಧಿನಾ ಪುತ್ರಮಿಚ್ಛತಾ ।
ಸೇವಯಾ ತೋಷಿತಃ ಸೋಽಪಿ ವರಂ ಪತ್ನ್ಯೈ ಪ್ರದತ್ತವಾನ್ ॥೩೦॥
ಸಾ ವವ್ರೇ ಭ್ರಾತರಂ ಪುತ್ರಂ ಕ್ಷತ್ರಂ ಬ್ರಹ್ಮಕುಲೋತ್ತರಂ ।

ಓ ನಾರದನೇ, ನಿನ್ನ ಅಪ್ಪಣೆಯನ್ನು ಶಿರಸ್ಸಿನಿಂದ ಧರಿಸಿಕೊಂಡು ಬ್ರಹ್ಮನ ಆಜ್ಞೆಯನ್ನು ಜ್ಞಾಪಿಸಿಕೊಂಡು ಅನೇಕ ವಿಚಿತ್ರಗಳಿಂದ ಕೂಡಿದ ಆ ತ್ರಿಪುರಾ ದೇವಿಯ ರಹಸ್ಯವನ್ನು ನಮ್ಮಿಬ್ಬರ ಸಂಭಾಷಣೆಯ ಮೂಲಕ ಹೇಳುತ್ತೇನೆ. ನೆಟ್ಟ ಮನಸ್ಸಿನಿಂದ ಕೇಳುವವನಾಗು. ॥೨೬॥

ಬ್ರಹ್ಮಪುತ್ರನಾದ ತೇಜೋವಂತನಾದ ಋಷಿಗಳ ಸಮೂಹದಲ್ಲಿ ಪ್ರಸಿದ್ಧನಾದ ಭೃಗುಮುನಿಯು ಇದ್ದನು. ಅವನಿಗೆ ಬ್ರಹ್ಮನಿಗೆ ಸಮಾನನಾದ ಚ್ಯವನನೆಂಬ ಮಗನಿದ್ದನು. ॥೨೭॥

ಆ ಚ್ಯವನನ ಸುಚಾರಿತ್ರ್ಯದಿಂದ ಸಂತೋಷಗೊಂಡಿದ್ದ ಸುಕನ್ಯೆಯನ್ನು ಅವಳ ತಂದೆಯು ಅವನಿಗೆ ಮದುವೆಮಾಡಿಕೊಟ್ಟನು. ಅವನು ಇಂದ್ರನನ್ನು ಜಯಿಸಿ ಸೋಮ ಗ್ರಹದ ಯಜ್ಞಭಾಗವನ್ನೂ ಅಶ್ವಿನೀದೇವತೆಗಳಿಗೆ ಕೊಟ್ಟನು. ಅವನಿಗೆ ಮಹಾತ್ಮನೂ ತಂದೆಗೆ ಸಮಾನನೂ ಆದ ಋಚೀಕನೆಂಬ ಮಗನು ಹುಟ್ಟಿದನು. ॥೨೮-೨೯॥

ಮಗನನ್ನು ಪಡೆಯಬೇಕೆಂಬ ಅಭಿಲಾಷೆಯಿಂದ ಕೂಡಿದ ಗಾಧಿಯು ಆ ಋಚೀಕನಿಗೆ ತನ್ನ ಮಗಳನ್ನು ಕೊಟ್ಟನು. ಆ ಋಚೀಕನ ಪತ್ನಿಯೂ ತನ್ನ ಪತಿಯನ್ನು ಸೇವೆಯಿಂದ ಸಂತೋಷಪಡಿಸಿದಳು. ಆಗ ಸಂತೋಷಗೊಂಡ

ಅಥ ಸರ್ವಂ ಕ್ಷತ್ರವೀರ್ಯಂ ಬ್ರಹ್ಮವೀರ್ಯಂ ಸ ವೀರ್ಯವಾನ್ ॥೩೧॥

ಆಕ್ಷಿಪ್ಯ ನಿರ್ಮಮೇ ತತ್ರ ಪಾಯಸದ್ವಯ ಮುತ್ತಮಂ ।
ತತ್ಪುಂಸವನ ಯುಗ್ಮಂ ಸ ಹುತ್ವಾಽಗ್ನೇಃ ಸಂಭೃತಂ ತದಾ ॥೩೨॥

ಏಕಂ ಪತ್ನ್ಯೈ ಪರಂ ತಸ್ಯಾ ಮಾತ್ರೇ ದತ್ತಂ ಮಹಾತ್ಮನಾ ।
ಅಥ ಗಾಧಿ ಮಹಾರಾಜ್ಞೋ ಮಹಿಷೀ ವಿಪರೀತತಃ ॥೩೩॥

ಕನ್ಯಾಯಾ ಅಧಿಕಂ ಮತ್ವಾ ಭುಭುಜೇಽಲಕ್ಷಿತಾ ತಯಾ ।
ಕನ್ಯಯಾ ವಂಚಯಿತ್ವಾ ತಾಂ ತಜ್ಜ್ಞಾತ್ವಾ ಮುನಿರಬ್ರವೀತ್ ॥೩೪॥

ಕಿಂ ಕೃತಂ ಹೇ ವರಾರೋಹೇ ಹತಂ ಕಾರ್ಯಂ ತವಾಧುನಾ ।
ವಂಚಿತಾಽಸಿ ಜನನ್ಯಾ ತ್ವಂ ಚರುವ್ಯತ್ಯಯ ಹೇತುತಃ ॥೩೫॥

ಋಚೀಕನು ಪತ್ನಿಗೆ ವರವನ್ನು ಕೊಟ್ಟನು. ಆ ಋಚೀಕನ ಪತ್ನಿಯು ವರರೂಪವಾಗಿ ಕ್ಷತ್ರಿಯನಾದ ತಮ್ಮನನ್ನೂ ತನಗೊಬ್ಬ ಬ್ರಾಹ್ಮಣರ ಕುಲದಲ್ಲಿ ಶ್ರೇಷ್ಠನಾದ ಪುತ್ರನನ್ನೂ ಅಪೇಕ್ಷಿಸಿದಳು. ॥೩೦॥

ಅನಂತರದಲ್ಲಿ ವೀರ್ಯವಂತನಾದ ಆ ಋಚೀಕನು ಬ್ರಹ್ಮವೀರ್ಯವನ್ನೂ ಕ್ಷತ್ರಿಯ ವೀರ್ಯವನ್ನೂ ಬೇರೆ ಬೇರೆ ಸೇರಿಸಿ ಎರಡು ಶ್ರೇಷ್ಠವಾದ ಪಾಯಸಗಳನ್ನು ಮಾಡಿದನು. ಅನಂತರದಲ್ಲಿ ಪುಂಸವನದ ವೇಳೆಯಲ್ಲಿ ಅಗ್ನಿಯಲ್ಲಿ ಹೋಮಮಾಡಿ, ಒಂದನ್ನು ತನ್ನ ಪತ್ನಿಗೂ ಮತ್ತೊಂದನ್ನು ಪತ್ನಿಯ ತಾಯಿಗೂ ಕೊಟ್ಟನು. ॥೩೧-೩೨॥

ಗಾಧಿಮಹಾರಾಜನ ಪತ್ನಿಯು ವಿಪರೀತ ಬುದ್ಧಿಯಿಂದ ತನಗಿಂತಲೂ ತನ್ನ ಮಗಳದ್ದು ಹೆಚ್ಚು ಫಲಯುಕ್ತವಾದುದು ಎಂದು ಶಂಕಿಸಿ ಮಗಳನ್ನು ವಂಚಿಸಿ ಅವಳ ಚರುವನ್ನು ತಿಂದಳು. ಈ ರೀತಿಯಾಗಿ ತನ್ನ ಪತ್ನಿಯು ವಂಚಿಸಲ್ಪಟ್ಟುದನ್ನು ತಿಳಿದ ಋಷಿಯು ಅವಳನ್ನು ಕುರಿತು ಹೇಳಿದನು,. ॥೩೩-೩೪॥

ಎಲೌ ಮಂಗಳಾಂಗಿಯೇ ಇದೇನು? ಕೆಟ್ಟಕೆಲಸವಾಗಿಹೋಯಿತು! ನಿನ್ನ ತಾಯಿಯು ನಿನ್ನನ್ನು ವಂಚಿಸಿದಳು. ನಿನಗಾಗಿ ನಿಯಮಿತವಾಗಿದ್ದ ಚರುವನ್ನು ಅವಳು ತಿಂದಳು. ನೀನು ಬೇರೆಯದನ್ನು ತಿಂದೆ. ॥೩೫॥

ಭವಿತಾ ತನಯೋ ಭದ್ರೇ ಕಾಲಾಂತಕ ಸಮೋ ನೃಪಃ ।
ಭ್ರಾತಾ ಸಾಕ್ಷಾದ್ಬ್ರಹ್ಮಮಯೋ ದೈವಮತ್ರ ಪರಾಯಣಂ ॥೩೬॥

ತಚ್ಛ್ರುತ್ವಾ ಘೋರ ಸಂಕಾಶಂ ವಚನಂ ಸಾಽನ್ವತಪ್ಯತ ।
ಪ್ರಾರ್ಥಯಾಮಾಸ ಭರ್ತಾರಂ ನತ್ವಾ ಸಾಧ್ವೀ ಪುನಃ ಪುನಃ ॥೩೭॥

ಬ್ರಹ್ಮನ್ನನುಗ್ರಹೋ ಮೇಽಸ್ತು ಕ್ಷಂತವ್ಯಾ ಮದಪಾಕೃತಿಃ ।
ಬ್ರಾಹ್ಮಣಸ್ಯ ಸುಶಾಂತಸ್ಯ ತವಪಾಣಿ ಗೃಹೀತ್ಯಹಂ ॥೩೮॥

ನ ಭೂಯಾ ದೀದೃಶಃ ಪುತ್ರಃ ಪ್ರಸಾದಂ ಕುರು ಸರ್ವಥಾ ।
ತಚ್ಛ್ರುತ್ವಾಽಹ ಮಹಾಭಾಗಃ ಶ್ರೂಯತಾಂ ಮದ್ವಚಃ ಶಿವೇ ॥೩೯॥

ಪಾಯಸಂ ಮಂತ್ರಸಂಭೂತ ಮಮೋಘಂ ತತ್ಕಥಂ ಭವೇತ್ ।
ನ ತದ್ವ್ಯರ್ಥಂ ಭವೇದದ್ಯ ಕಿಂತು ಮದ್ವಚನಂ ಶೃಣು ॥೪೦॥

ಎಲೌ ಶೋಭನಳೇ, ಯಮನಿಗೆ ಸದೃಶನಾದ ಕ್ಷತ್ರಿಯ ಪುತ್ರನು ನಿನ್ನ ಉದರದಲ್ಲಿ ಜನಿಸುವನು. ನಿನ್ನ ತಮ್ಮನಾದರೋ ಸಾಕ್ಷಾದ್ಬ್ರಹ್ಮಣಶ್ರೇಷ್ಠನಾಗುವನು. ಈರೀತಿಯಾಗಿರುವುದರಿಂದ ದೇವರೇ ರಕ್ಷಿಸಬೇಕು! ॥೩೬॥

ಈರೀತಿಯಾದ ಪತಿಯ ಮಾತನ್ನು ಕೇಳಿದ ಗಾಧಿ ಪುತ್ರಿಯು ಬಹಳವಾಗಿ ದುಃಖಗೊಂಡವಳಾಗಿ ಗಂಡನನ್ನು ನಮಸ್ಕರಿಸಿ ಅನೇಕ ವಿಧವಾಗಿ ಪ್ರಾರ್ಥಿಸತೊಡಗಿದಳು. ॥೩೭॥

ಸುಶಾಂತನಾದ (ಕಾಮಕ್ರೋಧಾದಿಗಳನ್ನು ಜಯಿಸಿದ) ಬ್ರಾಹ್ಮಣನಾಗಿರುವ ನಿನ್ನ ಪತ್ನಿಯು ನಾನು. ಓ ಋಷಿಶ್ರೇಷ್ಠನೇ, ನನ್ನ ಅಪರಾಧವನ್ನು ಕ್ಷಮಿಸು. ನನಗೆ ಅನುಗ್ರಹ ಮಾಡು. ನನಗೆ ಈರೀತಿಯಾದ ಮಗನು ಆಗದಿರಲಿ. ನನ್ನಲ್ಲಿ ದಯೆಯಿಡು. ಎಂದು ಹಲುಬಿದಳು. ॥೩೮॥

ಪತ್ನಿಯ ಮಾತನ್ನು ಕೇಳಿದ ಮಹಾತ್ಮನಾದ ಋಷಿಯು, ಎಲೌ ಭದ್ರೆಯೇ, ನನ್ನ ಮಾತನ್ನು ಕೇಳು. ಪಾಯಸವು ಮಂತ್ರದಿಂದ ಪೂತವಾದುದು. ಅದು ಎಂದಿಗೂ ನಿನ್ನ ಇಚ್ಛೆಯಂತೆ ವ್ಯತ್ಯಸ್ತ ಆಗುವುದಿಲ್ಲ. ॥೩೯॥

ಮಂತ್ರಪೂತವಾದುದರಿಂದ ಎಲೌ ಮಂಗಳಾಂಗಿಯೇ, ಪಾಯಸವು ವ್ಯರ್ಥವಾಗುವುದಿಲ್ಲ. ಆದರೂ ನನ್ನ ಮಾತನ್ನು ಕೇಳು. ನಿನ್ನ ಮಗನು ಶಾಂತ

ಶಾಂತಸ್ತವ ಸುತೋ ಭೂಯಾ ತ್ತತ್ಸುತ ಸ್ತಾದೃಶೋ ಭವೇತ್ ।
ಸರ್ವ ಕ್ಷತ್ರಾಂತ ಕೃತ್ಸಾಕ್ಷಾ ದ್ವಿಷ್ಣೋರಂಶೋ ಮಹಾಬಲಃ ॥೪೧॥

ಬ್ರಾಹ್ಮಣೋ ಭವಿತಾ ಸೋಽಪಿ ಕ್ಷತ್ರವೀರ್ಯೇಣ ಸಂಭೃತಃ ।
ಇತಿ ಶ್ರುತ್ವಾ ಭೃಗುವಚೋಽಪ್ರಸನ್ನಾ ಸಾಽಭವತ್ತದಾ ॥೪೨॥

ಅಥ ಕಾಲೇನ ಸುಷುವೇ ಜಮದಗ್ನಿಂ ಸುತಂ ಸತೀ ।
ಸಃ ಬ್ರಾಹ್ಮಣಃ ಸುಶಾಂತಾತ್ಮಾ ಬ್ರಹ್ಮಭೂತಃ ಶುಚಿವ್ರತಃ ॥೪೩॥

ತಸ್ಯ ಕಾಲೇನ ಸಂಜಾತೋ ರೇಣುಕಾಯಾಂ ಶುಭೇಕ್ಷಣಃ ।
ಕ್ಷತ್ರ ನೀಹಾರ ಮಿಹಿರೋ ಮಹಾಬಲ ಪರಾಕ್ರಮಃ ॥೪೪॥

ಸ ಕದಾಚಿತ್ಪಿತೃವಧ ಕ್ರೋಧಾ ತ್ಸಂತೋಷ್ಯ ಶಂಕರಂ ।
ಪ್ರಾಪ್ತವಾನ್ಪರಶುಂ ತಸ್ಮಾದಮೋಘಂ ಚಾಪಮೇವ ಚ ॥೪೫॥

ಗುಣವುಳ್ಳವನೂ, ಮಗನ ಪುತ್ರನು ಕ್ಷತ್ರವೀರ್ಯವುಳ್ಳವನಾಗಿಯೂ ಆಗುವನು. ನಿನ್ನ ಮಗನ ಮಗನು ವಿಷ್ಣುವಿನ ಅಂಶದಿಂದುತ್ಪನ್ನನಾಗುತ್ತಾನೆ. ಮತ್ತು ಮಹಾ ಪರಾಕ್ರಮವುಳ್ಳವನಾಗಿ ಸಕಲ ಕ್ಷತ್ರಿಯರನ್ನೂ ನಾಶಮಾಡುತ್ತಾನೆ. ಅವನು ಬ್ರಾಹ್ಮಣನಾಗಿದ್ದರೂ ಕ್ಷತ್ರಿಯ ವೀರ್ಯದಿಂದ ಕೂಡಿರುತ್ತಾನೆ. ಈರೀತಿಯಾದ ಗಂಡನ ಮಾತನ್ನು ಕೇಳಿ ಅವಳು ಬಹಳವಾಗಿ ಅಶಾಂತಳಾದಳು. ||೪೦-೪೧-೪೨||

ಆ ಸತಿಯು ಉಕ್ತಕಾಲದಲ್ಲಿ ಜಮದಗ್ನಿಯನ್ನು ಮಗನನ್ನಾಗಿ ಪಡೆದಳು. ಅವನು ಶಾಂತಾತ್ಮನಾಗಿ ಬ್ರಹ್ಮಜ್ಞಾನಿಯಾಗಿ ಶುಚಿಯಾದ ಉಕ್ತವಾದ ನಿಯಮ ಲಕ್ಷಣಗಳಿಂದ ಕೂಡಿ ಇದ್ದನು. ||೪೩||

ಆ ಜಮದಗ್ನಿಗೆ ಕಾಲಕ್ರಮದಲ್ಲಿ ರೇಣುಕೆಯಲ್ಲಿ ಮಹಾ ಬಲಶಾಲಿಯಾದ ಕ್ಷತ್ರಿಯರೆಂಬ ಹಿಮಕ್ಕೆ ಸೂರ್ಯನಂತಿರುವ ಮಂಗಳಕರವಾದ ದೃಷ್ಟಿಯುಳ್ಳ ಪರಶುರಾಮನು ಜನಿಸಿದನು. ||೪೪||

ಒಂದು ಬಾರಿ ತನ್ನ ತಂದೆಯ ಕೊಲೆಯಾದುದರಿಂದ ಕೋಪಗೊಂಡು ಕ್ಷತ್ರಿಯರನ್ನೆಲ್ಲರನ್ನೂ ನಾಶಮಾಡಬೇಕೆಂಬ ಉದ್ದೇಶದಿಂದ ಈಶ್ವರನನ್ನು ಕುರಿತು ಘೋರವಾದ ತಪಸ್ಸನ್ನು ಮಾಡಿದನು. ಅವನ ತಪಸ್ಸಿಗೆ ಮೆಚ್ಚಿ ಈಶ್ವರನು ಅವನಿಗೆ

ತ್ರಿಃ ಸಪ್ತಕೃತ್ವಃ ಪೃಥಿವೀಂ ನಿಃ ಕ್ಷತ್ರಾಂ ಕರವಾಣ್ಯಹಂ ।
ಇತಿ ತತ್ರ ಪ್ರತಿಜ್ಞಾಯ ಪಿತೃಘಾತ ಸುಮನ್ಯುನಾ ॥೪೬॥

ಆದಾಯ ಪರಶುಂ ದಿವ್ಯಂ ಕ್ಷತ್ರಾಣಾಂ ಕುಲನಾಶನಃ ।
ನಿಃ ಕ್ಷತ್ರಾಂ ಪೃಥಿವೀಂ ಕೃತ್ವಾ ಕಶ್ಯಪಾಯಾಽಖಿಲಾಂ ಭುವಾಂ ॥೪೭॥

ದತ್ವಾ ಪ್ರತ್ಯಕ್ಸಮುದ್ರಾತ್ತು ಭೂಮಿಂ ಜಿತ್ವಾ ಮಹೌಜಸಾ ।
ಸಂಪ್ರಾರ್ಥಿತೋಽ ಋಷಿವರ್ಯೈ ರ್ವಿರತಃ ಕ್ಷತ್ರಘಾತನಾತ್ ॥೪೮॥

ತಪ ಆತಿಷ್ಠದುಗ್ರಂ ಸಃ ಪ್ರಕೃತ್ಯಾ ಚಂಡ ಕೋಪನಃ ।
ಕ್ರೋಧಂ ಶಾಂತ್ಯನಲೇ ಹುತ್ವಾ ತಪಸೈವಾತಿ ಭೂಯಸಾ ॥೪೯॥
ಜಿತಾಃ ಸಮಸ್ತಪುಣ್ಯಾನಾಂ ಲೋಕಾಃ ತೇನ ಮಹಾತ್ಮನಾ ।

ಒಂದು ಕೊಡಲಿಯನ್ನೂ ಮತ್ತು ಶ್ರೇಷ್ಠವಾದ ಧನುಸ್ಸನ್ನೂ ಅನುಗ್ರಹಿಸಿದನು. ||೪೫||

ಇಪ್ಪತ್ತೊಂದು ಬಾರಿ ಭೂಮಿಯನ್ನು ಸುತ್ತಿ ಕ್ಷತ್ರಿಯರೇ ಇಲ್ಲದಂತೆ ಮಾಡುತ್ತೇನೆಂದು, ತಂದೆಗೆ ಸಂಭವಿಸಿದ ದುರ್ಮರಣದಿಂದ ಕೋಪಗೊಂಡ ಪರಶುರಾಮನು ಪ್ರತಿಜ್ಞೆಮಾಡಿದನು. ಕ್ಷತ್ರಿಯರ ವಂಶಕ್ಕೆ ಯಮಸ್ವರೂಪನಾದ ಪರಶುರಾಮನು ತನ್ನ ಗಂಡುಗೊಡಲಿಯನ್ನು ತೆಗೆದುಕೊಂಡು ಕ್ಷತ್ರಿಯರನ್ನೆಲ್ಲರನ್ನೂ ನಾಶಮಾಡಿದನು. ||೪೬||

ಅನಂತರದಲ್ಲಿ ಸಕಲ ಭೂಮಿಯನ್ನೂ ಕಶ್ಯಪರಿಗೆ ಕೊಟ್ಟುಬಿಟ್ಟನು. ಆಮೇಲೆ ಪಶ್ಚಿಮ ಸಮುದ್ರದಿಂದಾಚೆಯಿರುವ ಭೂಮಿಯನ್ನು ತನ್ನ ತೇಜಸ್ಸಿನಿಂದ ಜಯಿಸಿದನು. ಋಷಿಗಳು ಬಹುವಾಗಿ ಪ್ರಾರ್ಥಿಸಿದ್ದರಿಂದ ಕ್ಷತ್ರಿಯರನ್ನು ನಾಶಮಾಡುವುದನ್ನು ನಿಲ್ಲಿಸಿದನು. ||೪೭-೪೮||

ಸ್ವಭಾವವಾಗಿ ಬಹಳ ಕೋಪಿಷ್ಠನಾದ ಆ ಪರಶುರಾಮನು ಘೋರವಾದ ತಪಸ್ಸನ್ನು ಮಾಡಿದನು. ಶಾಂತಿಯೆಂಬ ಅಗ್ನಿಯಲ್ಲಿ ಕೋಪವನ್ನು ಹೋಮಮಾಡಿ ಬಹಳವಾಗಿ ತಪಸ್ಸನ್ನು ಮಾಡಿದನು. ಆದರಿಂದ ಮಹಾತ್ಮನಾದ ಪರಶುರಾಮನು ಸಕಲ ಪುಣ್ಯಲೋಕಗಳನ್ನೂ ಜಯಿಸಿದನು. ||೪೯||

ಅಥ ಕಾಲೇನ ಮಹತಾ ರಾಮಃ ಸತ್ಯಪರಾಕ್ರಮಃ ॥೫೦॥

ರಾವಣಸ್ಯ ನಿಧಾರ್ಥಾಯ ಸ್ವಾಂಶೇನಾಽವತತಾರ ಹ ।
ತೇನ ಮೈಥಿಲ ಭೂಪಾಲ ಗೃಹವಿನ್ಯಸ್ತ ಶಾಂಕರಂ ॥೫೧॥

ಧನುಃ ಸಮಾರೋಪ್ಯ ತದಾ ವೀರ್ಯಶುಲ್ಕಾ ಮುಪಾವಹತ್ ।
ಆರೋಪ್ಯಮಾಣಂ ತದ್ಭಗ್ನಂ ಧನುಃ ಶೈವಂ ಮಹೋಲ್ಬಣಂ ॥೫೨॥

ತತ್ಕರ್ಮ ಸರ್ವಲೋಕಾನಾಂ ಶ್ಲಾಘ್ಯಮಾಸೀತ್ ಮಹಾದ್ಭುತಂ ।
ಏತಚ್ಛ್ರುತ್ವಾ ಜಾಮದಗ್ನ್ಯೋ ವೈಮಾನಿಕ ಮುಖಾತ್ತದಾ ॥೫೩॥

ಅಸಹನ್ ಕ್ಷತ್ರಿಯಾಣಾಂ ತಚ್ಛ್ಲಾಘನಾಂ ಭಾರ್ಗವಸ್ತದಾ ।
ಗಾಢಾನಲ ಸುಸಂಪರ್ಕ ಜಾತೋತ್ಸೇಕ ಪಯೋ ಯಥಾ ॥೫೪॥

ಕ್ರೋಧಾರುಣಿತ ನೇತ್ರಾಂತ ರಾಗಾಗ್ನಿ ಜ್ವಾಲಯಾ ಜಗತ್ ।
ದಹನ್ನಿವ ಕ್ರೋಧಮೂರ್ತಿಃ ಪ್ರಲಯಾಗ್ನಿರಿವ ಜ್ವಲನ್ ॥೫೫॥

ಅನಂತರದಲ್ಲಿ ಬಹುಕಾಲ ಕಳೆಯಲು ಸತ್ಯವಂತನೂ, ಪರಾಕ್ರಮಿಯೂ, ಮಹಾಪುರುಷನೂ ಆದ ರಾಮನು ರಾವಣನ ಸಂಹಾರಕ್ಕಾಗಿ ವಿಷ್ಣ್ವಂಶದಿಂದ ಅವತಾರವನ್ನು ಮಾಡಿದನು. ॥೫೦॥

ಆ ರಾಮನು ಮಿಥಿಲಾನಗರದಲ್ಲಿ ಪಣವಾಗಿ ಇಟ್ಟಿದ್ದ ಶಾಂಕರಧನುಸ್ಸಿಗೆ ಹೆದೆಯೇರಿಸಿ ಸೀತೆಯನ್ನು ಮದುವೆಯಾದನು. ॥೫೧॥

ಆ ಮಹಾಭಯಂಕರವಾದ ಶೈವಧನುಸ್ಸಿಗೆ ಹೆದೆಯೇರಿಸಲು ಬಗ್ಗಿಸಿದಾಗ ಅದು ಮುರಿದು ಹೋಯಿತು. ಈ ರೀತಿ ಶೈವಧನುಸ್ಸು ಮುರಿದುದು ಮಹಾಶ್ಚರ್ಯ ಕರವಾಗಿ ಸಕಲ ಪ್ರಪಂಚದಲ್ಲೂ ಹರಡಿ ಹೊಗಳಲ್ಪಟ್ಟಿತು. ॥೫೨॥

ದೇವಗಂಧರ್ವಚಾರಣರು ರಾಮನ ಈ ಮಹಾಕೆಲಸವನ್ನು ಹೊಗಳುತ್ತಾ ಹೋಗುತ್ತಿರಲು ಅದನ್ನು ಪರಶುರಾಮನು ಕೇಳಿದನು. ಅನಂತರದಲ್ಲಿ ಪರಶುರಾಮನು ಅಡಗಿಸಲ್ಪಟ್ಟಿದ್ದ ಕ್ಷಾತ್ರತೇಜಸ್ಸು ಕೆರಳಲು ಕ್ಷತ್ರಿಯನಾದ ರಾಮನ ಈ ಬಗೆಯ ಕೀರ್ತಿಯನ್ನು ಸಹಿಸಲಾರದವನಾದನು. ॥೫೩॥

ಹೆಚ್ಚಾದ ಅಗ್ನಿಯ ಉರಿಯಿಂದ ಮೇಲಕ್ಕೆ ಉಕ್ಕಿಬಂದ ನೀರಿನಂತೆ ಕೋಪ ದಿಂದ ಕೆಂಪಾದ ಕಣ್ಣಿನ ಒಳಭಾಗದ ಕೆಂಪೆಂಬ ಅಗ್ನಿಯ ಉರಿಯಿಂದ ಪ್ರಪಂಚ

ಆಃ ಕ್ಷತ್ರಬಂಧೋ ರದ್ಯಾಹ ಮುಪನೇಷ್ಯಾಮಿ ವೈ ಮದಂ ।
ಅರೋಪ್ಯ ಪರಶುಂ ಸ್ಕಂಧೇ ವಾಮೇನಾದಾಯ ವೈಷ್ಣವಂ ॥೫೬॥

ಚಾಪಂ ವದನ್ನಿತಿ ತತಃ ಪ್ರಚಚಾಲ ನಿಜಾಲಯಾತ್ ।
ದೇವರ್ಷಯೋಽಥ ತಂ ದೃಷ್ಟ್ವಾ ಭಾರ್ಗವಂ ಮನ್ಯುನಾಽಽವೃತಂ॥೫೭॥

ಊಚುರದ್ಯ ಪುನಃ ಕ್ಷೋಣೀಂ ಕ್ಷತ್ರಹೀನಾಂ ಕರಿಷ್ಯತಿ ।
ಕ್ರೋಧೇನ ತಸ್ಯ ಮಹತಾ ಚಕಂಪೇ ವಸುಧಾ ಭೃಶಂ ॥೫೮॥

ಹತಪ್ರಭೋ ದಿವಾನಾಥೋ ಧೂಲೀ ಧೂಸರಿತಂ ನಭಃ ।
ವೇಲಾಽತಿ ಲಂಘಿನೋ ಜಾತಾಃ ಸಮುದ್ರಾಃ ಪ್ರಲಯೇ ಯಥಾ॥೫೯॥

ವನ್ನು ಸುಡುತ್ತಾನೋ ಎಂಬಂತೆ ಕೋಪವೇರಿದ ಶರೀರವುಳ್ಳವನಾಗಿ ಪ್ರಲಯಾಗ್ನಿಯಂತೆ ಉರಿಯುತ್ತಾ ಎಂದರೆ ಬಹಳ ಕೋಪದಿಂದ ಹೀಗೆಂದುಕೊಂಡನು.||೫೪-೫೫||

ಆಹ ಇರಲಿ. ಆ ನೀಚಕ್ಷತ್ರಿಯನ ದುರ್ಮದವನ್ನು ಈಗ ಅಡಗಿಸುವೆನು. ಎಂಬುದಾಗಿ ನಿಶ್ಚಯವನ್ನೂ ಮಾಡಿ, ಹೆಗಲಿಗೆ ಗಂಡುಕೊಡಲಿಯನ್ನೇರಿಸಿ ಎಡಗೈಯ್ಯಲ್ಲಿ ವೈಷ್ಣವಧನುಸ್ಸನ್ನು ತೆಗೆದುಕೊಂಡು ತನ್ನ ಆಶ್ರಮದಿಂದ ಹೊರಟನು. ||೫೬||

ಈ ರೀತಿಯಾಗಿ ಕೋಪದಿಂದ ಹುಂಕರಿಸುತ್ತಿರುವ ಪರಶುರಾಮನನ್ನು ನೋಡಿ ದೇವರ್ಷಿಗಳು, ಈಗ ಮತ್ತೆ ಇವನು ಭೂಮಿಯನ್ನು ಕ್ಷತ್ರಿಯಶೂನ್ಯವನ್ನಾಗಿ ಮಾಡುವನು. ಎಂದು ಹೆದರಿದರು. ||೫೭||

ಬಹು ಕೋಪದಿಂದ ಕೂಡಿದ ಪರಶುರಾಮನನ್ನು ನೋಡಿ ಭೂಮಿಯು ನಡುಗ ತೊಡಗಿತು. ಸೂರ್ಯನು ತೇಜೋಹೀನನಾದನು. ಆಕಾಶವು ಧೂಳಿನಿಂದ ತುಂಬಿ ಮಲಿನವಾಯಿತು. ಪ್ರಲಯದಲ್ಲಿ ಹೇಗೋ ಹಾಗೆ ಸಮುದ್ರಗಳು ಎಲ್ಲೆಯನ್ನು ಉಲ್ಲಂಘಿಸಿದವು. ||೫೮-೫೯||

ಹೀಗೆ ಭಯಂಕರವಾದ ಕೋಪದಿಂದ ಯುಕ್ತನಾಗಿ ಪರಶುರಾಮನು ತನ್ನ ಆಶ್ರಮದಿಂದ ಹೊರಟು ಬಂದನು. ಬರುತ್ತಾ ಮಾರ್ಗದಲ್ಲಿ ವಿವಾಹವೇ ಮೊದಲಾದ ಮಂಗಳ ಕಾರ್ಯಗಳನ್ನು ಮುಗಿಸಿ ಸೇನೆಯೊಡನೆ ಬರುತ್ತಿರುವ ರಾಘವ ರಾಮನನ್ನು ಕಂಡನು. ||೬೦||

ಏವಂ ಸ ನಿರ್ಗತಃ ಸ್ಥಾನಾನ್ಮಾರ್ಗೇ ಸೇನಾ ಸಮಾವೃತಂ ।
ರಾಘವಂ ರಾಮಮಾಸಾದ್ಯ ಕೃತವೈವಾಹಿಕೋತ್ಸವಂ ॥೬೦॥

ರೇ ರಾಮ ಕ್ಷತ್ರಬಂಧೋ ತ್ವಂ ವಿರ್ಯ್ಯೋತ್ಸಿಕ್ತೋಽತಿಮಂದಧೀಃ ।
ತ್ವಯಾ ಕೃತಮಕರ್ತವ್ಯ ಮಜ್ಞಾತ್ವಾ ಶೂರಮಾನಿನಾ ॥೬೧॥

ಅದ್ಯ ಯಾವನ್ನ ಶ್ರುತಃ ಕಿಮಹಂ ಕ್ಷತ್ರ ಕುಲಾಂತಕಃ ।
ರಾಮೋಽಸ್ಮೀತಿ ಮದಾದ್ಯನ್ಮಾ ಮವಜ್ಞಾಯ ಕೃತಂ ಹ್ಯಗಃ ॥೬೨॥

ನಾದ್ಯಾಪಿ ಪರಶೋರ್ಧಾರಾ ಕುಂಠಿತಾ ಕ್ಷತ್ರಘಾತಿನಃ ।
ಯತ್ತ್ವಯಾಽದ್ಯ ಕೃತಂ ಕರ್ಮ ಫಲಂ ತಸ್ಯ ಭುಜಿಷ್ಯಸಿ ॥೬೩॥

ಅದ್ಯ ಮೇ ಪರಶೋರ್ಧಾರಾ ಪಾರಣಂ ಪ್ರವಿಧಾಸ್ಯತಿ ।
ಬಹುಕಾಲೇನ ತೇ ಕಂಠಚ್ಛೇದೋಷ್ಣರುಧಿರೇಣ ವೈ ॥೬೪॥

ಕ್ಷಮಾಂ ಖಲೇಷು ನೋ ಕುರ್ಯಾದುಪೇಕ್ಷೇ(ಕ್ಷಾಂ)ವಾಽಽಮಯಾಗಮೇ।
ಕಾಲೇನ ತಸ್ಯೈವ ಭವೇದಹೇಃ ಕ್ಷೀರಮಿವಾಂತಕಂ ॥೬೫॥

ಎಲೈ ನೀಚ ಕ್ಷತ್ರಿಯನಾದ ರಾಮನೇ, ಪರಾಕ್ರಮದಿಂದ ಹೆಚ್ಚಿದವನಾಗಿ ಬಹು ಮೂಢನಾಗಿರುವೆ. ನೀನು ಮಾಡಬಾರದ ಕೆಲಸವನ್ನು ಮಾಡಿ ನಾನೇ ಶೂರನೆಂದು ತಿಳಿದಿರುವೆ. ನಿನ್ನ ಕ್ಷತ್ರಿಯ ಕುಲಕ್ಕೆ ಯಮಸದೃಶನಾದ ನಾನು ಇರುವೆನೆಂದು ಇಲ್ಲಿಯುವರೆವಿಗೂ ನಿನಗೆ ಗೊತ್ತಿರಲಿಲ್ಲವೋ ? ॥೬೧॥

ಪರಶುರಾಮನು ನಾನಿರುವೆನೆಂದೂ ತಿಳಿಯದೆ ದುರ್ಮದದಿಂದ ತಿರಸ್ಕಾರ ಪೂರ್ವಕವಾಗಿ ತಪ್ಪುಮಾಡಿರುವೆ. ಈಗಲೂ ಕ್ಷತ್ರಿಯರನ್ನು ಕೊಲ್ಲುವ ಕೊಡಲಿಯ ಅಲಗು ಮೊಂಡಾಗಿಲ್ಲ. ಅದರಿಂದ ನೀನು ಈಗ ಮಾಡಿರುವ ಕೆಲಸಕ್ಕೆ ತಕ್ಕ ಶಿಕ್ಷೆಯನ್ನು ಅನುಭವಿಸು. ॥೬೨-೬೩॥

ಬಹುಕಾಲಕ್ಕೆ ನನ್ನ ಪರಶುವಿಗೆ ನಿನ್ನ ರಕ್ತವನ್ನು ಕುಡಿಯುವುದರಿಂದ ಹೊರಬರುವ ಬಿಸಿರಕ್ತ ಪಾನಮಾಡುವುದರಿಂದ ಪಾರಣೆಯಾಗುತ್ತದೆ. ॥೬೪॥

ದುಷ್ಟರ ವಿಷಯದಲ್ಲಿ ಕ್ಷಮೆಯನ್ನು ಯಾವಾಗಲೂ ಮಾಡಬಾರದು. ಮೊದಲಿನಲ್ಲಿ ಉಪೇಕ್ಷೆ ಮಾಡಿದರೆ ರೋಗವು ಕಾಲಕ್ರಮದಲ್ಲಿ, ಹಾವಿಗೆ ಹಾಲೆರೆದಂತೆ

ಕಥಂ ಸಹೇತ ಶಾಂತೋಽಪಿ ಗುರೋರಪಮತಿಂ ಕೃತಾಂ ।
ಸಮರ್ಥೋ ಮಾದೃಶಸ್ತತ್ರ ಪಾದಾಕ್ರಾಂತ ಇವಾನಲಃ ॥೬೬॥

ಮಯಿ ಜೀವತಿ ಚಾಪಸ್ಯ ಗುರೋಃ ಕೈಲಾಸವಾಸಿನಃ ।
ಕ್ಷತ್ರಿಯಾಪಸದೇನಾಭೂದ್ಬಾಲೇನ ಪರಿಭಾವನಂ ॥೬೭॥

ಅಃ ಕಾಲಸ್ಯ ವ್ಯತ್ಯಯತಾ ನಾತ್ರ ಕ್ಷಾಂತಿರ್ಗುಣಾವಹಾ ।
ಜಾಮದಗ್ನ್ಯೇ ವದತ್ಯೇವಂ ರಾಮೋ ರಾಜೀವ ಲೋಚನಃ ॥೬೮॥

ಪಾದಯೋಃ ಪ್ರಣಿಪತ್ಯಾಥ ಸಭಾಜನಮಕಲ್ಪಯತ್ ।
ಸಾಂತ್ವಪೂರ್ವಂ ಕ್ಷಮಸ್ವೇತಿ ಭೂಯೋ ರಾಮಃ ಕೃತಾಂಜಲಿಃ ॥೬೯॥

ಬ್ರಹ್ಮಣ್ಯೋ ನಮ್ರಭಾವೇನ ಕ್ಷಮಾಪನ ಮಥಾಕರೋತ್ ।
ಯದಾ ನ ಕ್ಷಮತೇ ಸೋಽಪಿ ಭೂಯೋಽಧಿಕ್ಷೇಪ ತತ್ಪರಃ ॥೭೦॥

ಹೇಗೆ ಮೃತ್ಯುಸ್ವರೂಪವಾಗುವುದೋ ಹಾಗೆಯೇ ದುಷ್ಟರ ವಿಷಯದಲ್ಲಿ ತೋರುವ ಕ್ಷಮಾಗುಣವೂ ಕಡೆಯಲ್ಲಿ ಅಂತಕವಾಗುವುದು. ॥೬೫॥

ಕಾಲುಗಳಿಂದ ತುಳಿದ ಬೆಂಕಿಯು ಸುಡುವಂತೆ ಗುರುವಿಗಾದ ತಿರಸ್ಕಾರವನ್ನು ಶಾಂತನಾದರೂ ಹೇಗೆ ಸಹಿಸುತ್ತಾನೆ. ಅದರಲ್ಲೂ ನನ್ನಂತಹ ಪರಾಕ್ರಮಿಯಾದವನು ಸಹಿಸುವುದೆಂತು ? ॥೬೬॥

ನಾನು ಜೀವಂತನಾಗಿರುತ್ತೇನೆ. ನನ್ನೆದುರಿನಲ್ಲೇ ಗುರುವಾದ ಶೈವಚಾಪಕ್ಕೆ ದುಷ್ಟ ಕ್ಷತ್ರಿಯ ಬಾಲಕನಿಂದ ತಿರಸ್ಕಾರವುಂಟಾಯಿತು ! ಹುಂ ! ಕಾಲದ ವ್ಯತ್ಯಾಸವು ಹೇಗೆ ಬಂದಿತು ! ಈ ವಿಷಯದಲ್ಲಿ ಸಮಾಧಾನವು ಗುಣಕಾರಿಯಲ್ಲ. ಇದಕ್ಕೆ ತಕ ಶಿಕ್ಷೆಯಾಗಲೇಬೇಕು. ॥೬೭॥

ಈ ಪ್ರಕಾರವಾಗಿ ಪರಶುರಾಮನು ಹೇಳುತ್ತಿರಲು ಕಮಲನೇತ್ರನಾದ ದಾಶರಥಿ ರಾಮನು ಅವನ ಪಾದಗಳಿಗೆ ನಮಸ್ಕಾರ ಮಾಡಿ ಉಪಚರಿಸಿದನು. ಸಮಾಧಾನದಿಂದ ರಾಮನು ಅಂಜಲಿಬದ್ಧನಾಗಿ ವಿನಯಯುಕ್ತನಾಗಿ ಕ್ಷಮಿಸೆಂದು ಹೇಳುತ್ತಾ ಕ್ಷಮಾಯಾಚನೆಯನ್ನು ಮಾಡಿದನು. ॥೬೮-೬೯॥

ಹೀಗೆ ಕ್ಷಮಾಪ್ರಾರ್ಥನೆ ಮಾಡಿದರೂ ಪರಶುರಾಮನು ಕ್ಷಮಿಸದೇ ಇನ್ನೂ ಹೆಚ್ಚಾಗಿ ತಿರಸ್ಕಾರನುಡಿಗಳನ್ನಾಡಲು ಮೊದಲಿಟ್ಟನು. ಆಗ ದಾಶರಥಿರಾಮನು

ತದೈಷ ಕ್ರೋಧ ತಾಮ್ರಾಕ್ಷೋ ವಾಕ್ಯಮೇತದುವಾಚ ಹ ।
ರಾಮ ತ್ವಂ ಬ್ರಾಹ್ಮಣೋಽಸೀತಿ ಯುಜ್ಯತೇ ಕ್ಷಾಂತಿರತ್ರ ಮೇ ॥೨೧॥

ರಾಘವಾಣಾಂ ಬ್ರಾಹ್ಮಣೇಷು ಶಸ್ತ್ರಧಾರಾ ಸುಕುಂಠಿತಾ ।
ಅಯಂ ಕಂಠಃ ಕುಠಾರೇಣ ಛಿದ್ಯತಾಂ ಮೇ ಯಥಾಸುಖಂ ॥೨೨॥

ಸರ್ವಥಾ ಬ್ರಾಹ್ಮಣಾ ಗಾವಃ ಪೂಜ್ಯಾ ನೋ ರಘುಜನ್ಮನಾಂ ।
ಇತಿ ಬ್ರುವತಿ ಕಾಕುತ್ಸ್ಥೇ ಜಾಮದಗ್ನ್ಯೇ ಜ್ವಲನ್ನಿವ ॥೨೩॥

ತೋಯಸಂಪೃಕ್ತಾಜ್ಯಹೋಮಾದ್ಧವ್ಯವಾಡಿವ ಸಂಬಭೌ ।
ಅಥಾವದದ್ರಾಘವಂ ತಂ ರಾಮಂ ರಘುಕುಲೋದ್ವಹಂ ॥೨೪॥

ಕ್ಷತ್ರಾಧಮಾತಿಧೃಷ್ಟೋಽಸಿ ಜ್ಞಾತಃ ಕಿಂ ಬ್ರಾಹ್ಮಣಸ್ತ್ವಯಾ ।
ಸಾಕ್ಷಾನ್ಮೃತ್ಯುಂ ಕ್ಷತ್ರಿಯಾಣಾಂ ನ ಜಾನಾಸಿ ಕುತಃ ಖಲ ॥೨೫॥

ಕೋಪದಿಂದ ಕಣ್ಣುಗಳನ್ನು ಕೆಂಪಗೆ ಮಾಡಿಕೊಂಡು ಈ ಪ್ರಕಾರವಾಗಿ ಹೇಳತೊಡಗಿದನು. ॥೨೦॥

ಎಲೌ ಪರಶುರಾಮನೇ, ನೀನು ಬ್ರಾಹ್ಮಣನು. ಆದಕಾರಣ ನಿನ್ನ ವಿಷಯದಲ್ಲಿ ನನಗೆ ಶಾಂತಿಯೇ ಯುಕ್ತವಾದುದು. ಏಕೆಂದರೆ ರಘುವಂಶೋತ್ಪನ್ನರ ಶಸ್ತ್ರಗಳ ಅಲಗು ಬ್ರಾಹ್ಮಣರ ವಿಷಯದಲ್ಲಿ ಮೊಂಡಾದುದು. ಇದೋ ನನ್ನ ಕುತ್ತಿಗೆ ಸಿದ್ಧವಾಗಿದೆ. ನಿನ್ನ ಮನಬಂದಂತೆ ಕೊಡಲಿಯಿಂದ ಕಡಿ. ರಾಘವರಾದ ನಮಗೆ ಬ್ರಾಹ್ಮಣರು ಮತ್ತು ಗೋವುಗಳು ಯಾವಾಗಲೂ ಪೂಜನೀಯರು. ಇದರಲ್ಲಿ ಭಿನ್ನಾಭಿಪ್ರಾಯವೇ ಇಲ್ಲ. ॥೨೧-೨೨॥

ಹೀಗೆ ರಾಮನು ಹೇಳಲು ಪರಶುರಾಮನು ನೀರಿನಿಂದ ಕೂಡಿದ ಆಜ್ಯವನ್ನು ಹೋಮಮಾಡಿದರೆ ಹೇಗೆ ಅಗ್ನಿಯು ಹೆಚ್ಚಾಗಿ ಚಟಪಟಗುಟ್ಟುತ್ತಾ ಉರಿಯುತ್ತದೋ ಹಾಗೆಯೇ ಇನ್ನೂ ಹೆಚ್ಚಾಗಿ ಕೋಪಗೊಂಡನು. ॥೨೩॥

ರಘುವಿನ ಕುಲದಲ್ಲಿ ಹುಟ್ಟಿರುವ ಆ ರಾಮುನನ್ನು ಕುರಿತು ಪರಶುರಾಮನು, ಎಲೈ ಕ್ಷತ್ರಿಯಾಧಮನೇ, ನೀನು ಬಹಳ ದುಷ್ಟನು. ನನ್ನನ್ನು ಸಾಮಾನ್ಯ ಬ್ರಾಹ್ಮಣನೆಂದು ತಿಳಿದೆಯೋ? ಪಾಪ, ಕ್ಷತ್ರಿಯರೆಲ್ಲರಿಗೂ ಪ್ರತ್ಯಕ್ಷವಾದ ಮೃತ್ಯುವೇ ನಾನೆಂಬುದು ನಿನಗೆ ಗೊತ್ತಿಲ್ಲವೇನೋ? ಎಂದು ಹೇಳಿದನು. ॥೨೪-೨೫॥

ಅಥಾವದದ್ರಘುವರೋ ವೇದ್ಮಿ ತ್ವಾಂ ರೇಣುಕಾಸುತಂ ।
ನಾಹಂ ನೃಪಸ್ತಥಾ ಭೂತೋ ಯೇ ಹತಾ ಬ್ರಹ್ಮಬಂಧುನಾ ॥೨೬॥

ನ ಚಾಹಂ ರೇಣುಕಾತುಲ್ಯಃ ಸ್ಥಿತೋಽಸ್ಮಿ ಪುರತಸ್ತವ ।
ಬ್ರಾಹ್ಮಣ್ಯಂ ವಾ ಕ್ಷತ್ರಭಾವಂ ಸಂತ್ಯಜಾಽನ್ಯ ತರತ್ ದ್ರುತಂ ॥೨೭॥

ಕಾಕುತ್ಸ್ಥ ಏವಂ ವದತಿ ರುಷಾ ಧಿಗ್ಧಿಗಿತಿ ಬ್ರುವನ್ ।
ಸ್ವಕರೇ ಸಂಸ್ಥಿತಂ ಚಾಪಂ ವೈಷ್ಣವಂ ಪ್ರದದೌ ದ್ರುತಂ ॥೨೮॥

ತಸ್ಮೈ ಪ್ರೋವಾಚ ಸಂಕ್ರುದ್ಧಃ ಕತ್ಥನಂ ಕಿಂ ವೃಥಾ ತವ ।
ಮಾಹೇಶ್ವರಂ ಜೀರ್ಣಧನುರ್ಭಗ್ನಂ ದೈವೇನ ತತ್ ತ್ವಯಾ ॥೨೯॥

ಇದಂ ವೈಷ್ಣವಮಾರೋಪ್ಯ ಮತ್ಸಮಕ್ಷಂ ಸ್ಥಿರೀಭವ ।
ತತೋ ಮಯಾ ದ್ವಂದ್ವಯುದ್ಧೇ ವಿಮದಸ್ತ್ವಂ ಭವಿಷ್ಯಸಿ ॥೩೦॥

ಆಮೇಲೆ ರಘುಪುಂಗವನು ಪರಶುರಾಮುನನ್ನು ಕುರಿತು ನೀನು ರೇಣುಕಾ ಪುತ್ರನೆಂದು ತಿಳಿದಿದ್ದೇನೆ. ನನ್ನನ್ನು ಬ್ರಹ್ಮಬಂಧುವಾದ ನಿನ್ನಿಂದ ಹತರಾದ ಕ್ಷತ್ರಿಯರು ಎಂದು ತಿಳಿದೆಯೋ? ನಿನ್ನೆದುರಿಗಿರುವ ನಾನು ನಿನ್ನ ತಾಯಿಗೆ ಸಮಾನನೆಂದು ತಿಳಿಯಬೇಡ. ಬ್ರಾಹ್ಮಣ್ಯವನ್ನಾಗಲೀ, ಕ್ಷಾತ್ರವನ್ನಾಗಲೀ, ಜಾಗ್ರತೆಯಾಗಿ ಒಂದನ್ನು ತ್ಯಜಿಸು. ಇನ್ನು ಮುಂದೆ ಎರಡನ್ನೂ ಇಟ್ಟುಕೊಂಡಿರಲಾರೆ. ||೨೬-೨೭||

ರಾಮನು ಹೀಗೆ ಹೇಳಲು ಕೋಪದಿಂದ ಪರಶುರಾಮನು, ಎಲೈ ರಾಮನೇ, ನಿನಗೆ ಧಿಕ್ಕಾರವು. ಧಿಕ್ಕಾರವು! ಎಂದು ಹೇಳುತ್ತಾ, ತನ್ನಲ್ಲಿದ್ದ ವೈಷ್ಣವಧನುಸ್ಸನ್ನು ಜಾಗ್ರತೆಯಾಗಿ ರಾಮನಿಗೆ ಕೊಟ್ಟನು. ಅನಂತರದಲ್ಲಿ ಪರಶುರಾಮನು ಮತ್ತೂ ಕೋಪಗೊಂಡು ರಾಮನನ್ನು ಕುರಿತು, ವ್ಯರ್ಥವಾಗಿ ಜಂಬಕೊಚ್ಚುವುದರಿಂದೇನು ಫಲ? ಅದೃಷ್ಟಬಲದಿಂದ ಪುರಾತನವಾದ ಶೈವಧನುಸ್ಸನ್ನು ಮುರಿದೆ! ಇದೋ ಈ ನನ್ನ ವೈಷ್ಣವಧನುಸ್ಸಿಗೆ ಹೆದೆಯೇರಿಸು. ಅನಂತರ ನನ್ನೆದುರಿಗೆ ಧೈರ್ಯದಿಂದ ನಿಲ್ಲು. ನಿನ್ನ ಅಹಂಕಾರವನ್ನು ದ್ವಂದ್ವಯುದ್ಧದಲ್ಲಿ ಅಡಗಿಸುತ್ತೇನೆ. ||೨೮-೨೯-೩೦||

ಏವಮುಕ್ತೋ ರಘುವರಃ ಶ್ರುತ್ವಾ ವಾಕ್ಯಂ ಧನುರ್ವರಂ ।
ಆದಾಯ ಲೀಲಯಾ ಮೌರ್ವೀ ಮಾರೋಪ್ಯ ನಿಮಿಷಾರ್ಧತಃ ॥೮೧॥

ನಿಷಂಗಾತ್ಸಾಯಕಂ ತೀಕ್ಷ್ಣಂ ಸಂಧಾಯಾಽಽಕರ್ಣಪೂರಿತಂ ।
ಪ್ರದರ್ಶ್ಯ ಭಾರ್ಗವಾ ಯಾಥೋ ರುಷಾ ಪ್ರೋವಾಚ ರಾಘವಃ ॥೮೨॥

ರಾಮ ಶೀಘ್ರಂ ವದಾಮೋಘ ಬಾಣಃ ಕ್ವ ವಿನಿಪಾತ್ಯತಾಂ ।
ಉಪೇಕ್ಷಣೀಯ ಸ್ತ್ವಂ ಯಸ್ಮಾದ್ಬ್ರಾಹ್ಮಣೋ ಭಾರ್ಗವೋದ್ಭವಃ॥೮೩॥

ವಿಶ್ವಾಮಿತ್ರಸ್ಯ ಸಂಬಂಧಾ ದಾತತಾಯ್ಯಪಿ ಮೇ ಗುರುಃ ।
ಪ್ರದರ್ಶ್ಯ ಲಕ್ಷ್ಯಂ ಬಾಣಸ್ಯ ಜೀವ ನಾಽಽಶು ಯಥಾ ಗತಃ ॥೮೪॥

ಅನೋಘೋಽಯಂ ಮಹಾಬಾಣೋ ಜೀವಿತಾಂತ ಕರಸ್ತವ ।
ಶ್ರುತ್ವಾ ರಾಘವ ಸಂಪ್ರೋಕ್ತಂ ದೃಷ್ಟ್ವಾಽದ್ಭುತಪರಾಕ್ರಮಂ ॥೮೫॥

ಮತ್ವಾಽತಿಮಾನುಷಂ ಸಾಕ್ಷಾತ್ಪರಮಾತ್ಮಾನ ಮವ್ಯಯಂ ।
ಪ್ರಣಮ್ಯ ದಂಡವದ್ಭೂಮೌ ಸ್ತುತ್ವಾ ಪ್ರೋವಾಚ ಭಾರ್ಗವಃ ॥೮೬॥

ಪರಶುರಾಮನ ಮಾತನ್ನು ಕೇಳಿ ರಾಮನು ಧನುಸ್ಸನ್ನು ತೆಗೆದುಕೊಂಡು ಅರ್ಧನಿಮಿಷಕಾಲದಲ್ಲಿ ಲೀಲೆಯಿಂದ ಬಗ್ಗಿಸಿ ಹೆದೆಯೇರಿಸಿದನು. ಆಮೇಲೆ ಬತ್ತಳಿಕೆ ಯಿಂದ ತೀಕ್ಷ್ಣವಾದ ಬಾಣವನ್ನು ತೆಗೆದು ಬಿಲ್ಲಿಗೆ ಸೇರಿಸಿ ಆಕರ್ಣಾಂತವಾಗಿ ಎಳೆದು ಪರಶುರಾಮನಿಗೆ ತನ್ನ ಕೆಲಸವನ್ನು ತೋರಿಸಿದನು. ಅನಂತರದಲ್ಲಿ ಕೋಪ ದಿಂದ ರಾಮನು ಪರಶುರಾಮನನ್ನು ಕುರಿತು ಹೀಗೆ ಹೇಳಿದನು. ||೮೧-೮೨||

ಪರಶುರಾಮನೇ, ಜಾಗ್ರತೆಯಾಗಿ ಈ ಶ್ರೇಷ್ಠವಾದ ಬಾಣವು ಎಲ್ಲಿ ಬೀಳಬೇ ಕೆಂಬುದನ್ನು ಹೇಳು. ನೀನು ಬ್ರಾಹ್ಮಣನು ಆದಕಾರಣ ನಿನ್ನ ಮೇಲೆ ಈ ಬಾಣ ಪ್ರಯೋಗವಾಗಲಾರದು. ಅಲ್ಲದೇ ನೀನು ವಿಶ್ವಾಮಿತ್ರನ ಸಂಬಂಧಿಯು. ಆದಕಾರಣ ನೀನು ಪಾಪಿಯಾದ ದುಷ್ಟನಾದರೂ ನನಗೆ ಗುರುವು. ||೮೩||

ಪ್ರಾಣಿಗಳನ್ನು ಕೊಲ್ಲುವ ಆ ಬಾಣದಿಂದ ನಿನ್ನ ಪ್ರಾಣವು ಹೋಗದಿರುವಂತೆ ಜಾಗ್ರತೆಯಾಗಿ ಈ ಮಹಾಬಾಣಕ್ಕೆ ಲಕ್ಷ್ಯವನ್ನು ತೋರಿಸು. ಏಕೆಂದರೆ ಇದು ಅಮೋಘವಾದುದು. ಹಾಗೆ ಮಾಡಿ ಹಿಂತಿರುಗಿ ಬದುಕು. ||೮೪||

ಪರಶುರಾಮನು ರಾಮನು ಹೇಳಿದುದನ್ನು ಕೇಳಿ ಅವನ ಅದ್ಭುತವಾದ

ಜಾನಾಮಿ ತ್ವಾಂ ಪರಾತ್ಮಾನಂ ಪುರುಷಂ ಪ್ರಕೃತೇಃ ಪರಂ ।
ಜಗದ್ರಕ್ಷಾ ವಿಧಾನಾರ್ಥಂ ಜಾತೋ ನಟ ನರೋಪಮಃ ॥೮೭॥

ಆಸಾದಿತಾ ಮಯಾ ಪುಣ್ಯಲೋಕಾ ಬಹುತಪೋಗಣೈಃ ।
ತತ್ಸರ್ವಂ ಶರಲಕ್ಷ್ಯಾರ್ಥಂ ಧತ್ವಾ ಜೀವಾಮಿ ರಾಘವ ॥೮೮॥

ತಥಾಽಸ್ತ್ವಿತಿ ವದನ್ರಾಮೋ ನಿಪಾತ್ಯ ಶರಮುಲ್ಬಣಂ ।
ಬ್ರಹ್ಮಣ್ಯೋ ಭಾರ್ಗವಂ ಪ್ರಾಹ ನಮಸ್ತೇ ರಾಮ ಭಾರ್ಗವ ॥೮೯॥

ಕ್ಷಂತವ್ಯಂ ಮೇ ದುರುಕ್ತಂ ಯತ್ ಬ್ರಾಹ್ಮಣೋ ಮೇ ಸದಾಗುರುಃ ।
ಇತಿ ತಸ್ಯ ವಚಃ ಶ್ರುತ್ವಾ ಭಾರ್ಗವೋ ಲಜ್ಜಯಾಽನ್ವಿತಃ ॥೯೦॥
ನತ್ವಾ ಪ್ರದಕ್ಷಿಣೀ ಕೃತ್ಯ ಜಗಾಮ ಸ ಯಥಾಗತಂ ।

ಪರಾಕ್ರಮವನ್ನು ನೋಡಿ, ಇವನು ಸಾಮಾನ್ಯನಲ್ಲವು! ಇವನು ನಾಶರಹಿತನಾದ ಪರಮಾತ್ಮನೇ. ಎಂದು ತಿಳಿದು ಭೂಮಿಯಲ್ಲಿ ದಂಡದಂತೆ ನಮಸ್ಕರಿಸಿ ಹೇಳಿದನು. ||೮೫-೮೬||

ರಾಮನೇ, ನೀನು ಪರಸ್ವರೂಪನೆಂದೂ, ಪ್ರಕೃತಿಗಿಂತಲೂ ಶ್ರೇಷ್ಠನಾದ ಪುರುಷನೆಂದೂ, ಜಗತ್ತಿನ ರಕ್ಷಣೆಗೋಸ್ಕರ, ನಟನಂತೆ, ನರನಿಗೆ ಸಮಾನನಾಗಿ ಜನಿಸಿರುವೆ. ನಾನು ಅನೇಕವಾದ ತಪಸ್ಸಿನಿಂದ ಪುಣ್ಯಲೋಕಗಳನ್ನು ಸಂಪಾದಿಸಿದ್ದೇನೆ. ಆ ಎಲ್ಲ ಪುಣ್ಯಲೋಕಗಳನ್ನೂ ಬಾಣಕ್ಕೆ ಲಕ್ಷ್ಯವನ್ನಾಗಿ ಕೊಟ್ಟು ನಾನು ಜೀವಿಸುತ್ತೇನೆ. ಎಂದು ಹೇಳಿದನು. ||೮೭-೮೮||

ರಾಮನು ಹಾಗೆಯೇ ಆಗಲೆಂದು ಉಗ್ರವಾದ ತನ್ನ ಬಾಣವನ್ನು ಪ್ರಯೋಗ ಮಾಡಿದನು. ಅನಂತರದಲ್ಲಿ ಪರಶುರಾಮನನ್ನು ಕುರಿತು, ಓ ಭಾರ್ಗವನೇ, ನಿನಗೆ ನಮಸ್ಕಾರವು. ನಾನಾಡಿದ ಕೋಪದ ನುಡಿಗಳನ್ನು ಕ್ಷಮಿಸು. ನನಗೆ ಯಾವಾಗಲೂ ಬ್ರಾಹ್ಮಣನಾದವನು ಗುರುವು! ||೮೯||

ಈ ರೀತಿಯಾದ ರಾಮನ ಮಾತನ್ನು ಕೇಳಿ ಪರಶುರಾಮನು ನಾಚಿಕೆಯಿಂದ ಕೂಡಿ, ರಾಮನಿಗೆ ಪ್ರದಕ್ಷಿಣೆ ನಮಸ್ಕಾರವನ್ನು ಮಾಡಿ, ತಾನು ಬಂದಂತೆ ಹೊರಟು ಹೋದನು. ||೯೦||

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ
ತೃತೀಯೋಽಧ್ಯಾಯಃ

ಇಲ್ಲಿಗೆ ಇತಿಹಾಸಗಳಲ್ಲಿ ಶ್ರೇಷ್ಠವಾದ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಮೂರನೆಯ ಅಧ್ಯಾಯವು ಮುಗಿಯಿತು.

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ಚತುರ್ಥೋಽಧ್ಯಾಯಃ ॥

ನಾಲ್ಕನೆಯ ಅಧ್ಯಾಯವು

ಅಥ ಮಾರ್ಗೇ ಜಾಮದಗ್ನ್ಯೋಽತ್ಯಂತ ನಿರ್ವೇದ ಮಾಪ್ತವಾನ್ ।
ಪರಿಭಾವಿತ ಏವಂ ಸ ಚಿಂತಯಾನೋ ಜಗಾಮ ಹ ॥೧॥

ನೂನಂ ಮಯಾ ಕಶ್ಯಪಾಯ ದತ್ವಾ ಕ್ಷೋಣೀಂ ಪ್ರತಿಶ್ರುತಂ ।
ನಾಽತಃ ಪರಂ ಹೇತಿಹಸ್ತಃ ಕ್ರುಧ್ಯಾಮಿ ನೃಪಜನ್ಮಸು ॥೨॥

ಅಹೋ ಮೇ ಚಿತ್ತಸಂಮೋಹಃ ಕಿಂ ವದಾಮೀದೃಶೋಽಭವಂ ।
ಕ್ರೋಧೇನಾಽತ್ಯಂತ ರಿಪುಣಾ ಪಾತಿತೋ ಮೋಹಖಾತಕೇ ॥೩॥

ಕ್ರೋಧ ಏವ ತಪೋಮೃತ್ಯುಃ ಕ್ರೋಧಾನ್ನಶ್ಯತಿ ವೈ ತಪಃ ।
ಕ್ರುದ್ಧಸ್ಯ ದೂರತೋ ಯಾತಿ ವಿಚಾರಃ ಸತ್ತ್ವಬುದ್ಧಿಜಃ ॥೪॥

ಅನಂತರದಲ್ಲಿ ಪರಶುರಾಮನು ಹೋಗುತ್ತಾ ದಾರಿಯಲ್ಲಿ ಬಹುವಾದ ಪಶ್ಚಾತ್ತಾಪದ ದುಃಖವನ್ನು ಹೊಂದಿದನು. ॥೧॥

ನಾನು ಕಶ್ಯಪನಿಗೆ ಭೂಮಿಯನ್ನು ದಾನವಾಗಿ ಕೊಟ್ಟಾಗ ಇಲ್ಲಿಂದ ಮುಂದೆ ಶಸ್ತ್ರ ಹಿಡಿದು ಕ್ಷತ್ರಿಯರ ವಿಷಯದಲ್ಲಿ ಕೋಪಿಸಿ ಯುದ್ಧಮಾಡುವುದಿಲ್ಲವೆಂದು ಪ್ರತಿಜ್ಞೆಮಾಡಿದೆನು. ॥೨॥

ಅಯ್ಯೋ ಇದೇನು ? ಚಿತ್ತಭ್ರಮೆಯು ನನ್ನನ್ನಾವರಿಸಿತು ! ಇದೇನು ನಾನು ಹೀಗಾದೆನಲ್ಲಾ ! ದೊಡ್ಡ ಶತ್ರುವಾದ ಕೋಪವು ನನ್ನನ್ನು ಅಜ್ಞಾನದ ಹಳ್ಳದಲ್ಲಿ ಕೆಡವಿತು. ॥೩॥

ಕೋಪವೆಂಬುದು ತಪಸ್ಸಿಗೆ ಮೃತ್ಯುರೂಪವಾದುದು. ಕೋಪದಿಂದ ತಪಸ್ಸು ನಾಶವಾಗುತ್ತದೆ. ಕೋಪಗೊಂಡವನ ಹತ್ತಿರ ಸತ್ತ್ವಬುದ್ಧಿಯಿಂದ ಉತ್ಪನ್ನವಾದ ವಿಚಾರಸರಣಿಯು ಸುಳಿಯುವುದಿಲ್ಲ. ॥೪॥

ತಸ್ಯ ಸ್ಪರ್ಶೋಽಪಿ ನ ಭವೇದ್ವಿಟಂ ದೃಷ್ಟ್ವಾ ಸತೀ ಯಥಾ ।
ಕಥಂ ಕ್ರುದ್ಧೇ ವಿಚಾರಃ ಸ್ಯಾಚ್ಛ್ವಿತ್ರೇ ಸೌಂದರ್ಯವತ್ಕಿಲ ॥೫॥

ಕ್ರುದ್ಧೋ ನ ಕುರ್ಯಾತ್ಕಿಂ ಕರ್ಮ ಗರ್ಹ್ಯಂ ಘೋರಂ ಪಿಶಾಚವತ್ ।
ನಾಂತರಂ ಲೇಶತೋಽಪ್ಯಸ್ತಿ ಪಿಶಾಚ ಕ್ರುದ್ಧಯೋರ್ಭುವಿ ॥೬॥

ಉಭಯೋ ರೀಕ್ಷಿತಂ ಪುತ್ರ ಪ್ರಿಯಾದಿ ಪರಿಪೀಡನಂ ।
ಕ್ರುದ್ಧೋ ನ ಹನ್ಯಾತ್ಕಂ ಕೋ ವಾ ಕ್ರುದ್ಧೋ ಹಂತಿ ಗುರೂನಪಿ॥೭॥

ಕ್ರೋಧ ಏವ ಮಹಾನ್ ಶತ್ರು ರೀದೃಗ್ಯೇನ ಕೃತಸ್ತ್ವಹಂ ।
ಕ್ರೋಧಾನ್ಮಯಾ ಪುರಾ ಕ್ಷತ್ರ ಸ್ತನಂಧಯ ಗಣಾ ಹತಾಃ ॥೮॥

ಆಚ್ಛಿದ್ಯಾಚ್ಛಿದ್ಯ ಜನನೀ ಹಸ್ತಾಭ್ಯಾಂ ಪುಕ್ಕಸೋ ಯಥಾ ।
ಅಹೋ ಮೇ ನಿರ್ದಯಂ ಸ್ವಾಂತಂ ಕಿಂ ಕೃತಂ ಕ್ಷತ್ರಪೋತಕೈಃ ॥೯॥

ವಿಟಪುರುಷನನ್ನು ನೋಡಿದರೆ ಪತಿವ್ರತಾಸ್ತ್ರೀಯು ಹೇಗೆ ದೂರವಾಗುವಳೋ, ಹಾಗೆ ಕೋಪಿಷ್ಠನಾದ ನನಗೆ ಸದ್ಬುದ್ಧಿಯ ಸಂಬಂಧ ಉಂಟಾಗುವುದಿಲ್ಲ. ತೊನ್ನುರೋಗದಿಂದ ಕೂಡಿದ ಮನುಷ್ಯನಲ್ಲಿ ಸೌಂದರ್ಯವು ಹೇಗೆ ಇರುವುದಿಲ್ಲವೋ ಹಾಗೆ ಕೋಪಿಷ್ಠನಲ್ಲಿ ವಿಚಾರಬುದ್ಧಿಯು ಇರುವುದಿಲ್ಲ. ||೫||

ಕೋಪವುಳ್ಳವನು ಪಿಶಾಚಿಯಂತೆ ನಿಂದ್ಯವಾದುದೇ ಆಗಲೀ ಭಯಂಕರವಾದುದೇ ಆಗಲೀ, ಎಂತಹ ಕರ್ಮವನ್ನು ಮಾಡಲೂ ಹೇಸುವುದಿಲ್ಲ. ಪ್ರಪಂಚದಲ್ಲಿ ಪಿಶಾಚಿಗೂ ಮತ್ತು ಕೋಪಿಷ್ಠನಿಗೂ ಏನೂ ವ್ಯತ್ಯಾಸವಿರುವುದಿಲ್ಲವು. ||೬||

ಇಬ್ಬರಲ್ಲಿಯೂ ಮಕ್ಕಳು ಮತ್ತು ಪ್ರಿಯರಾದವರನ್ನು ಹಿಂಸಿಸುವುದು ಕಾಣಬರುತ್ತದೆ. ಕೋಪಗೊಂಡವನು ಯಾರನ್ನಾದರೂ ಕೊಂದುಹಾಕಲು ಹಿಂಜರಿಯುವುದಿಲ್ಲ. ಅವನು ಗುರುಹಿರಿಯರನ್ನೂ ಕೊಲ್ಲಲು ಹಿಂದು ಮುಂದು ನೋಡುವುದಿಲ್ಲ. ||೭||

ಕೋಪವೇ ನನ್ನನ್ನು ಹೀಗೆ ಮಾಡಿದುದು. ಕೋಪವೆಂಬುದು ದೊಡ್ಡ ಶತ್ರುವು. ಹಿಂದೆ ನಾನು ಇದೇ ಕೋಪದಿಂದ ಕ್ಷತ್ರಿಯರ ಎಳೆಯ ಮಕ್ಕಳನ್ನು ಪುಕ್ಕಸರಂತೆ ತಾಯಿಯರ ಕೈಯಿಂದ ಸೆಳೆದುಕೊಂಡು ಕೊಂದೆ. ಅಯ್ಯೋ, ನನ್ನ ಹೃದಯವು ಅದೆಷ್ಟು ನಿಷ್ಕರುಣವಾಗಿತ್ತು. ನನಗೆ ಆ ಕ್ಷತ್ರಿಯ ಮಕ್ಕಳು ಏನು ತಪ್ಪುಮಾಡಿದ್ದರು ? ||೮-೯||

ಹಿಂಸಿತಾಃ ಕೋಟಿಶೋ ಬಾಲಾಃ ಸದೃಶಾ ಅದೃಶಾ ಅಪಿ ।
ನೂನಂ ಕ್ರೋಧೋ ಯೇನ ನೈವ ಜಿತಸ್ತಸ್ಯ ಕಥಂ ತಪಃ ॥೧೦॥

ಪ್ರವೃದ್ಧ ಶತ್ರೋ ರ್ನೃಪತೇ ರಾಜ್ಯ ಸೌಖ್ಯಂ ಯಥಾ ತಥಾ ।
ಕೇನ ಮೇ ನಿಹತಸ್ತಾತಃ ಕೇ ಹತಾ ನೃಪರಾಶಯಃ ॥೧೧॥

ಪುರುಷಾದೇನೇವ ಮಯಾ ಕೃತಂ ಕರ್ಮ ಸುಗರ್ಹಿತಂ ।
ಅಭಿಮಾನಃ ಕ್ರೋಧಮೂಲೋ ಯಸ್ಮಾದ್ಧೇತು ವಶಾದಹಂ ॥೧೨॥

ನಿಗೀರ್ಣಃ ಕ್ರೋಧ ಸರ್ಪೇಣ ಪ್ರಬಲಾಜಗರಾತ್ಮನಾ ।
ಏವಂ ಚಿಂತಯತಾ ತೇನ ಮಾರ್ಗೇ ಕಶ್ಚನ ಪೂರುಷಃ ॥೧೩॥

ದೃಷ್ಟ ಸ್ತೇಜೋ ರಾಶಿಮಯೋ ಜ್ವಲದಗ್ನಿ ಗಿರಿರ್ಯಥಾ ।
ಪುಷ್ಯ ಸುಂದರ ಸರ್ವಾಂಗಃ ಫುಲ್ಲ ಪಂಕಜಲೋಚನಃ ॥೧೪॥

ಅನೇಕ ಬಾಲಬಾಲೆಯರನ್ನು ಅವರು ಕಣ್ಣಿಗೆ ಕಾಣಲಿ, ಅಥವಾ ಕಾಣದಿರಲಿ ನಾನು ಹಿಂಸಿಸಿದೆ. ಯಾವನು ಕೋಪವನ್ನು ಜಯಿಸಲಾರನೋ ಅವನ ತಪಸ್ಸು ಹೆಚ್ಚುತ್ತಿರುವ ಶತ್ರುವನ್ನು ಪಡೆದಿರುವ ರಾಜನ ರಾಜ್ಯಸುಖಕ್ಕೆ ಸಮಾನವಾದುದು. ಎಂದರೆ ಎಂದೋ ಒಂದು ದಿವಸ ಹಾಳಾಗುತ್ತದೆ. ಯಾವನೋ ಒಬ್ಬನು ನನ್ನ ತಂದೆಯನ್ನು ಕೊಂದನು. ಆದರೆ ನಾನು ರಾಜಸಮೂಹವನ್ನೇ ಕೊಂದೆ. ॥೧೦-೧೧॥

ಮನುಷ್ಯರನ್ನು ತಿನ್ನುವ ರಾಕ್ಷಸಾಧಮನಂತೆ ನಾನು ಮಾಡಿದ ಕೆಲಸ ನಿಂದ್ಯವಾದುದು. ಮನುಷ್ಯನಿಗೆ ಅಭಿಮಾನವೆಂಬುದು ಕೋಪಕ್ಕೆ ಕಾರಣವಾದುದು. ಆ ಕಾರಣದಿಂದಲೇ ನಾನು ಮಹಾಬಲಶಾಲಿಯಾದ ಅಜಗರರೂಪವಾದ ಕೋಪವೆಂಬ ಸರ್ಪದ ಬಾಯಿಗೆ ಸಿಕ್ಕಿ ಹಾಳಾದೆನು. ॥೧೨॥

ಹೀಗೆ ಯೋಚಿಸುತ್ತಾ ಹೋಗುತ್ತಿದ್ದ ಪರಶುರಾಮನಿಗೆ ದಾರಿಯಲ್ಲಿ ಬಹು ತೇಜಶ್ಶಾಲಿಯಾದ, ಉರಿಯುತ್ತಿರುವ ಬೆಟ್ಟದಂತಿರುವ, ಸಕಲ ಅಂಗಗಳೂ ಚೆನ್ನಾಗಿ ಬೆಳೆದು ಗುಂಡಗೆ ಸುಂದರವಾಗಿರುವ, ಅರಳಿದ ತಾವರೆಯಂತೆ, ವಿಶಾಲವಾದ ನೇತ್ರದಿಂದ ಕೂಡಿರುವ, ವಿರಕ್ತನೂ, ಶಾಂತನೂ, ವಿಲಕ್ಷಣನೂ, ಆದ ಒಬ್ಬ ಪುರುಷನನ್ನು ನೋಡಿದನು. ॥೧೩-೧೪॥

ಮಲಿನಾಂಗೋ ಮುಕ್ತಕೇಶಃ ಉನ್ಮತ್ತಚರಿತೋಽಪಿ ಯಃ ।
ಮಹಾಪುರುಷವದ್ದೃಷ್ಟೋ ಮಹಾತ್ಮಾ ಮುನಿರಾಟ್ ಕವಿಃ ॥೧೫॥

ದೃಷ್ಟ್ವೈವಂ ಭಾರ್ಗವೋ ವಿಪ್ರಂ ತ್ಯಕ್ತಲಿಂಗಾಶ್ರಮಾದಿಕಂ ।
ದಿಗಂಬರಂ ಪಂಕದಿಗ್ಧಂ ಗಂಧ ಸಿಂಧುರವತ್ಸ್ಥಿತಂ ॥೧೬॥

ತಂ ದೃಷ್ಟ್ವಾ ಜಾಮದಗ್ನ್ಯೋಽಥ ಪರಂ ಸಂಶಯ ಮಾಗತಃ ।
ಕೋಽಯಂ ವಿಲಕ್ಷಣಾಚಾರಃ ಸದಸಲ್ಲಿಂಗ ಸಂಯುತಃ ॥೧೭॥

ಕಿಂ ಮಹಾಪುರುಷೋ ವಾಽಥಾಽಪ್ರಮತ್ತೋ ವಾಽಪಿ ಕಶ್ಚನ ।
ಅತ್ರ ಬುದ್ಧಿರ್ನಾಂತಮೇತಿ ಯಥಾ ವೇಷಾಂತರೇ ನಟೇ ॥೧೮॥

ಪ್ರಮತ್ತಶ್ಚೇತ್ಕಥಮಯಂ ತೇಜೋ ರಾಶಿಪದಂ ಭವೇತ್ ।
ಭೂಯಃ ಪಶ್ಯಾಮ್ಯಯಂ ಮಾರ್ಗಂ ದೂಷಯತ್ಯಪಿ ನೋ ಸತಾಂ ॥೧೯॥

ಆ ಮನುಷ್ಯನು ಕೊಳೆಯಾದ ಅವಯವಗಳಿಂದ ಕೂಡಿ ತಲೆಗೂದಲನ್ನು ಬಿಟ್ಟುಕೊಂಡು ಹುಚ್ಚರಂತೆ ನಡೆವಳಿಕೆಯುಳ್ಳವನಾಗಿ ಮುನೀಶ್ವರನೂ, ವಿದ್ವಾಂಸನೂ ಮಹಾತ್ಮನೂ ಆಗಿ ಮಹಾಪುರುಷನಂತೆ ಕಂಡನು. ॥೧೫॥

ಆ ಮನುಷ್ಯನು ದಿಗಂಬರನಾಗಿ ಮೈಮೇಲೆ ದೂಳು ಕವಿದುಕೊಂಡಿದ್ದರೂ ಶ್ರೀಗಂಧದಂತೆ ಪರಿಮಳವನ್ನು ಬೀರುವ ಮದ್ದಾನೆಯಂತೆ ಮತ್ತು ಬ್ರಹ್ಮಚರ್ಯಾದಿ ಆಶ್ರಮಗಳ ಸಕಲ ಚಿಹ್ನೆಗಳನ್ನೂ ಬಿಟ್ಟು, ನೋಡಲು ವಿಚಿತ್ರವಾಗಿದ್ದನು. ಅಂತಹ ವನನ್ನು ಪರಶುರಾಮನು ನೋಡಿದನು. ॥೧೬॥

ಆರೀತಿಯಾದ ಮನುಷ್ಯನನ್ನು ನೋಡಿದ ಪರಶುರಾಮನಿಗೆ ತುಂಬಾ ಸಂದೇಹವಾಯಿತು. ಇವನಾರು? ಈ ರೀತಿಯಾದ ಒಂದಕೊಂದು ಸಂಬಂಧವಿಲ್ಲದ ಆಚಾರ ಉಳ್ಳವನು ಮತ್ತು ಸದಸತ್ತಿನ ಒಳ್ಳೆಯ ಮತ್ತು ಅಲ್ಲದ ಚಿಹ್ನೆಗಳಿಂದ ಕೂಡಿ ರುತ್ತಾನೆ. ಇವನೇನಾದರೂ ಮಹಾಪುರುಷನೋ? ಅಥವಾ ಜ್ಞಾನಿಯೋ? ಇವರಲ್ಲಿ ಯಾವನೋ ಒಬ್ಬನಾಗಿರಬೇಕು. ॥೧೭॥

ಇವನ ವಿಷಯದಲ್ಲಿ ವಿಚಾರ ಮಾಡಿದರೆ ಬುದ್ಧಿಯು ಎಂದಿಗೂ, ಬೇರೆ ವೇಷವನ್ನು ಧರಿಸಿರುವ ನಟನಲ್ಲಿ ಹೇಗೋ ಹಾಗೆ, ಒಂದು ತೀರ್ಮಾನಕ್ಕೆ ಬರುವುದಿಲ್ಲ. ಇವನು ಒಂದುವೇಳೆ ಪ್ರಮತ್ತನಾದರೆ ಇಷ್ಟು ತೇಜೋವಂತನು

ತಸ್ಮಾದಯಂ ಕೋಽಪಿ ಮಹಾಪುರುಷೋ ಗೂಹಿತಾಕೃತಿಃ ।
ಪರೀಕ್ಷಣೀಯಃ ಕಿಂಚಿನ್ಮೇ ಯತ್ನೇನೇತ್ಯಭಿಚಿಂತಯನ್ ॥೨೦॥

ತಮುವಾಚ ಹಸನ್ ರಾಮಃ ಕಸ್ತ್ವಂ ಪುರುಷ ಸತ್ತಮ ।
ಮಹಾಪುರುಷವದ್ಭಾಸಿ ಸ್ಥಿತಿಸ್ತೇ ಕೀದೃಶೀ ವದ ॥೨೧॥

ಇತಿ ತದ್ವಾಕ್ಯಮಾಕರ್ಣ್ಯ ಪಲಾಯನಪರೋಽಭವತ್ ।
ಕ್ಷಿಪನ್ಪಾಷಾಣಖಂಡಾಂಶ್ಚ ಹಸನ್ನುಚ್ಚೈರ್ಮುಹುರ್ಮುಹುಃ ॥೨೨॥

ವಿಪ್ರಲಾಪಂ ತಥಾ ಕುರ್ವನ್ ಬಹುಧೋನ್ಮತ್ತಚೇಷ್ಟಿತಃ ।
ಏವಂ ವಿಧಂ ಭಾರ್ಗವಸ್ತಂ ಕರೇ ಜಗ್ರಾಹ ಸತ್ವರಃ ॥೨೩॥

ಗೃಹೀತ್ವಾ ಚಿಂತಯಾಮಾಸ ನಾಯಂ ಮೇ ವಿದಿತೋಽಭವತ್ ।
ಭೂಯ ಏವಂ ಪರೀಕ್ಷ್ಯಾಥ ವ್ರಜಾಮ್ಯಹ ಮಭೀಪ್ಸಿತಂ ॥೨೪॥

ಹೇಗಾಗುವನು ? ಏನಾದರೂ ಆಗಲಿ ಸತ್ಪುರುಷರಿಗೆ ತಕ್ಕ ಮಾರ್ಗವನ್ನು ದೂಷಿಸದೆ ಇರುವ ಶಾಂತನಾದ ಇವನು ಒಬ್ಬ ಮಹಾಪುರುಷನೇ ಸರಿ. ||೧೮-೧೯||

ಇವನೊಬ್ಬ ತನ್ನ ಆಕಾರಗಳನ್ನು ಮುಚ್ಚಿಕೊಂಡಿರುವ ಮಹಾಪುರುಷನು. ಆದಕಾರಣ ಹೇಗಾದರೂ ಪ್ರಯತ್ನಪೂರ್ವಕವಾಗಿ ಇವನನ್ನು ಪರೀಕ್ಷಿಸಬೇಕು. ಎಂಬುದಾಗಿ ಯೋಚಿಸಿದನು. ||೨೦||

ಪರಶುರಾಮನು ನಗುತ್ತಾ ಆ ಮನುಷ್ಯನನ್ನು ಕುರಿತು ಓ ಪುರುಷಶ್ರೇಷ್ಠನೇ, ನೀನು ಯಾರು? ಮಹಾಪುರುಷನಂತೆ ತೋರುತ್ತಿರುವೆಯಲ್ಲ? ಇದೇನು ನಿನ್ನ ಸ್ಥಿತಿಯು? ಇದೆಲ್ಲವನ್ನೂ ಹೇಳುವವನಾಗು. ಎಂದು ಕೇಳಿದನು. ||೨೧||

ಈ ರೀತಿಯಾದ ಪರಶುರಾಮನ ಮಾತನ್ನು ಕೇಳಿ ಅವನು ಓಡಲು ಪ್ರಾರಂಭಿಸಿದನು. ಮತ್ತು ಗಟ್ಟಿಯಾಗಿ ಮತ್ತೆ ಮತ್ತೆ ನಗುತ್ತಾ ಕಲ್ಲುಚೂರುಗಳನ್ನು ಎಸೆಯುತ್ತಾ, ಹುಚ್ಚು ಹುಚ್ಚಾಗಿ ಮಾತಾಡುತ್ತಿದ್ದನು. ||೨೨||

ಹೀಗಾಡುತ್ತಿರುವ ಅವನನ್ನು ಪರಶುರಾಮನು ಕೈಯಿಂದ ಜಾಗ್ರತೆ ಹಿಡಿದು ಕೊಂಡನು. ಹಿಡಿದುಕೊಂಡು ಇವನು ನನ್ನ ಅಭಿಪ್ರಾಯವನ್ನು ತಿಳಿಯಲಿಲ್ಲ. ಇನ್ನೊಂದು ಸಲ ಇವನನ್ನು ಪರೀಕ್ಷಿಸಿ ಆಮೇಲೆ ಮನಬಂದಂತೆ ಹೋಗುವೆನು. ಎಂದು ಯೋಚಿಸಿದನು. ||೨೩-೨೪||

ಇತಿ ನಿಶ್ಚಿತ್ಯ ಭೂಯಸ್ತ ಮಧಿಕ್ಷೇಪ್ತುಂ ಪ್ರಚಕ್ರಮೇ ।
ಅಧಿಕ್ಷಿಪ್ತೋಽಪಿ ಬಹುಧಾ ಪರಿಭೂತೋಽಪಿ ನ ಸ್ಥಿತೇಃ ॥೨೫॥

ಪ್ರಚ್ಯುತೋ ಮುಖ ವೈವರ್ಣ್ಯ ಮಪೀಷನ್ನೋಪಲಕ್ಷಿತಂ ।
ಮಹಾಪುರುಷ ಏವೇತಿ ತದಾ ನಿಶ್ಚಿತ್ಯ ಭಾರ್ಗವಃ ॥೨೬॥

ತತ್ಪದಯೋರ್ನಿಪತಿತಃ ಪ್ರಾರ್ಥಯಾಮಾಸ ತಂ ಮುನಿಂ ।
ಅಥ ಸೋಽಪಿ ಪ್ರಸನ್ನಾತ್ಮಾ ಜಾಮದಗ್ನ್ಯೇಽನು ಕಂಪಯನ್ ॥೨೭॥

ಬಭಾಷೇ ಸಸ್ಮಿತಂ ವಾಕ್ಯಂ ಬಹು ಸಂದರ್ಭಗುಂಫಿತಂ ।
ಕಸ್ತ್ವ ಮಿತ್ಯಹಮಾಪೃಷ್ಟ ಸ್ತ್ವಯಾ ತಚ್ಛೃಣು ಭಾರ್ಗವ ॥೨೮॥

ತ್ವ ಮಿತ್ಯವಗತೇ ಪ್ರಶ್ನಃ ಪಿಷ್ಟ ಪೇಷಣ ವದ್ವೃಥಾ ।
ತ್ವಯಾ ನಾವಗತ ಶ್ಚೇತ್ತ್ವಮಿತಿ ವಾಕ್ಯಾನ್ಯನ್ನಿರರ್ಥಿಕಾ ॥೨೯॥

ಹೀಗೆ ನಿಶ್ಚಯಿಸಿ ಭಾರ್ಗವನು ಅವನನ್ನು ಬೈಯ್ಯಲು ಪ್ರಾರಂಭಿಸಿದನು. ಎಷ್ಟೇ ಬೈದರೂ ಎಷ್ಟೇ ಮೂದಲಿಸಿದರೂ ಅವನ ಇರುವಿಕೆಯಲ್ಲಿ ಯಾವ ವಿಧವಾದ ಭಾವವ್ಯತ್ಯಾಸವೂ ಉಂಟಾಗಲಿಲ್ಲ. ॥೨೫॥

ಆಗ ಪರಶುರಾಮನು ನಿಜವಾಗಿಯೂ ಇವನು ಮಹಾಪುರುಷನೇ ಸರಿ. ಎಂಬುದಾಗಿ ನಿಶ್ಚಯಿಸಿ ಅವನ ಕಾಲುಗಳಿಗೆ ನಮಸ್ಕರಿಸಿ ಆ ಋಷಿಯನ್ನು ಭಕ್ತಿಯಿಂದ ಪ್ರಾರ್ಥನೆ ಮಾಡಿದನು. ॥೨೬॥

ಅನಂತರದಲ್ಲಿ ಆ ಪುರುಷನೂ ಸಹ ಪರಶುರಾಮನ ವಿಷಯದಲ್ಲಿ ಪ್ರಸನ್ನನಾಗಿ ದಯೆಯಿಂದ ಅನೇಕ ತತ್ವಾರ್ಥದ ಸಂದರ್ಭಗಳಿಂದ ಕೂಡಿದ ಮಾತುಗಳನ್ನು ನಗುತ್ತಾ ಹೇಳಿದನು. ॥೨೭॥

ಎಲೌ ಭಾರ್ಗವನೇ, ನೀನು ಯಾರು ? ಎಂದು ಕೇಳಿದೆಯಲ್ಲವೇ ? ಕೇಳುವವನಿಗೆ 'ತ್ವಂ' ಎಂಬ ಪದಾರ್ಥವು ಗೊತ್ತಿದ್ದರೆ, ನಾನು ಯಾರು ? ಎಂಬ ಪ್ರಶ್ನೆಯು ಹಿಟ್ಟನ್ನು ಪುನಃ ಅರೆದಂತೆ ವ್ಯರ್ಥವಾಗುವುದು ? ನೀನು ಎಂಬ ಪದಾರ್ಥವು ಗೊತ್ತಿಲ್ಲದಿದ್ದರೆ ಆಗಲೂ ಆ ವಾಕ್ಯವು ಅರ್ಥಶೂನ್ಯವಾಗುವುದು. ॥೨೮-೨೯॥

ಕೇನಚಿದ್ವಪುಷಾ ಜ್ಞಾತ ಇತಿ ಚೇತ್ತದ್ವದಸ್ವ ಮೇ ॥೩೦॥

ನ ಜ್ಞಾತಸ್ತೇ ಚಿದಾತ್ಮಾ ತದಜ್ಞೇಯತ್ವಾತ್ತಥಾ ವಿಧಃ ।
ಅನ್ನಂ ಚೇದಂ ತ್ವಯಾ ದೃಷ್ಟಂ ಸಾಕ್ಷಾದೇವ ನ ಸಂಶಯಃ ॥೩೧॥

ಯಸ್ಮಾತ್ಪರ್ಯನುಯೋಗಸ್ತೇ ಸಂಜ್ಞಾಯಾಂ ಸುವ್ಯವಸ್ಥಿತಃ ।
ಜ್ಞಾತಾ ಸಾ ನ ಸ್ವತಃ ಸಿದ್ಧಾ ಕಲ್ಪಿತಾ ಬಹುಧಾಽಪಿ ಸಾ ॥೩೨॥

ನ ಸಂಸ್ಥಿತಾ ಸಾಽಪ್ಯೇಕತ್ರ ಸಂಘಾತಸ್ಯಾಽಶ್ರಯ ತ್ವತಃ ।
ತಸ್ಮಾದಹಂ ತ್ವಯಾ ರಾಮ ಸಮ್ಯಕ್ಪೃಷ್ಟೋ ವದಾಮಿ ತೇ ॥೩೩॥

ಏವಂ ತದ್ವಚನಂ ಶ್ರುತ್ವಾ ಸ್ತಬ್ಧವಾಗ್ಬುದ್ಧಿ ಪೌರುಷಃ ।
ಲಜ್ಜಿತಃ ಪ್ರಾಹ ಯೋಗೀಶಂ ನತ್ವಾ ಪ್ರಾರ್ಥನಪೂರ್ವಕಂ ॥೩೪॥

ಯಾವುದೋ ಒಂದು ಶರೀರ ನೀನು ಎಂದು ತಿಳಿಯಲ್ಪಟ್ಟಿತು. ಎಂದರೆ ಅದನ್ನು ಕೇಳು. ಅಜ್ಞೇಯನು ಚಿದ್ರೂಪನಾದ ಆತ್ಮನು. ನಿನಗೆ ಆತ್ಮಜ್ಞಾನವಿಲ್ಲವಾದುದರಿಂದ ನಿನಗೆ ಆ ಪದಾರ್ಥವು ತಿಳಿದಂತಾಗಲಿಲ್ಲ. ||೩೦||

ಅನ್ನಮಯಶರೀರವನ್ನು ನೀನು ನೋಡಿದೆ. ಇದರಲ್ಲಿ ಯಾವ ವಿಧವಾದ ಸಂದೇಹವೂ ಇರುವುದಿಲ್ಲ. ಆದಕಾರಣ ನಿನ್ನ ಪ್ರಶ್ನೆಯು ಶರೀರದ ಹೆಸರನ್ನು ಕೇಳುವುದಾಗಿದೆ. ಆ ಸಂಜ್ಞೆಯು ತಾನಾಗಿಯೇ ತಿಳಿಯಲ್ಪಟ್ಟಿಲ್ಲ. ಮತ್ತೇನೆಂದರೆ ಅದು ಅನೇಕ ವಿಧವಾಗಿ ಕಲ್ಪಿಸಲ್ಪಟ್ಟದ್ದಾಗಿದೆ. ||೩೧-೩೨||

ಆ ಸಂಜ್ಞೆಯು ಒಂದು ಕಡೆಯಲ್ಲಿಲ್ಲ. ಏಕೆಂದರೆ ಅದು ದೇಹವನ್ನು ಆಶ್ರಯ ಮಾಡಿಕೊಂಡಿದೆ. ಆದಕಾರಣ ಎಲೌ ರಾಮನೇ, ನಿನ್ನ ಸಂದೇಹವೇನೆಂಬುದನ್ನು ಸರಿಯಾಗಿ ಕೇಳಿದರೆ ಎಲ್ಲವನ್ನೂ ಹೇಳುತ್ತೇನೆ. ||೩೩||

ಈ ರೀತಿಯಾದ ಮಹರ್ಷಿಯ ಮಾತನ್ನು ಕೇಳಿ ವಾಙ್ಮೂಢನಾಗಿ ಏನನ್ನು ಹೇಳಬೇಕೆಂದು ತೋರದೇ ಲಜ್ಜೆಯುಳ್ಳವನಾಗಿ ಆ ಯೋಗಿಶ್ರೇಷ್ಠನಿಗೆ ನಮಸ್ಕರಿಸಿ ಪ್ರಾರ್ಥನೆಮಾಡುತ್ತಾ ಹೀಗೆ ಹೇಳಿದನು. ||೩೪||

ಮಹಾಪುರುಷ ನ ಜ್ಞಾತ ಮುತ್ತರಂ ತತ್ರ ತತ್ತ್ವಯಾ ।
ಜ್ಞಾತ್ವಾಽಹಂ ಬೋಧನೀಯೋ ನ್ಯೈ ಶಿಷ್ಯಭೂತಮಕಲ್ಮಷಂ ॥೩೫॥

ಇತ್ಯುಕ್ತ ಸ್ತೇನ ರಾಮೇಣ ಸೋಽನುಕಂಪಿತಮಾನಸಃ ।
ವಕ್ತುಂ ಸ್ವವೃತ್ತಮಾರೇಭೇ ಗಿರಾ ಮಧುರಯಾ ತದಾ ॥೩೬॥

ಭಾರ್ಗವಾಽಽಂಗಿರಸ ತ್ವಂ ಮಾಂ ಜಾನೀ ಹ್ಯವರಜಂ ಗುರೋಃ ।
ಸಂವರ್ತ ಇತಿ ವಿಖ್ಯಾತಂ ತ್ರಿಲೋಕ್ಯಾಂ ಪ್ರಥಿತಂ ಗುಣೈಃ ॥೩೭॥

ಸ್ಥಿತಿಂ ವಕ್ಷ್ಯಾಮಿ ಮೇ ರಾಮ ಶೃಣು ಸಂಯತಮಾನಸಃ ।
ಪುರಾ ಮೇ ಗುರುಣಾ ಭ್ರಾತ್ರಾ ವಿದ್ವೇಷಸ್ಸಮಜಾಯತ ॥೩೮॥

ತೇನಾಽಹಂ ಪ್ರಾಪ್ತ ನಿರ್ವೇದಃ ಪ್ರಾಪ್ತ ಏತಾಂ ಸ್ಥಿತಿಂ ಕಿಲ ।
ದತ್ತಾತ್ರೇಯೇಣ ಗುರುಣಾ ಸುಸಮ್ಯಗನುಬೋಧಿತಃ ॥೩೯॥

ಓ ಮಹಾಪುರುಷನೇ, ನೀನು ಹೇಳಿದ ತತ್ವವು ನನಗೆ ಸರಿಯಾಗಿ ತಿಳಿಯಲಿಲ್ಲವು. ನಾನು ನಿಷ್ಕಲ್ಮಷನಾಗಿರುವ ನಿನ್ನ ಶಿಷ್ಯನು. ನನಗೆ ಮತ್ತೆ ಬೋಧಿಸಿ ಸಕಲವನ್ನೂ ತಿಳಿಯಪಡಿಸುವವನಾಗು. ||೩೫||

ರಾಮನು ಹೀಗೆ ಹೇಳಲು ಆ ಪುರುಷನು ಅವನಲ್ಲಿ ದಯೆಯುಳ್ಳವನಾಗಿ ತನ್ನ ಸಮಾಚಾರವನ್ನು ಮಧುರವಾದ ನುಡಿಗಳಿಂದ ಹೇಳಲು ಪ್ರಾರಂಭಿಸಿದನು. ||೩೬||

ಎಲೈ ಭಾರ್ಗವರಾಮನೇ, ನಾನು ಅಂಗಿರಸಗೋತ್ರೋತ್ಪನ್ನನು. ನನ್ನ ಅಣ್ಣನೇ ಗುರುವಾಗಿದ್ದನು. ಸಂವರ್ತನೆಂಬುದು ನನ್ನ ಹೆಸರು ನಾನು ನನ್ನ ಶ್ರೇಷ್ಠವಾದ ಸದ್ಗುಣಾಚರಣೆಗಳಿಂದ ಮೂರು ಲೋಕಗಳಲ್ಲೂ ಪ್ರಸಿದ್ಧನಾಗಿರುತ್ತೇನೆ. ||೩೭||

ನನ್ನ ವಿಷಯವನ್ನು ಎಲೌ ಭಾರ್ಗವರಾಮನೇ, ಹೇಳುವೆನು. ಏಕಾಗ್ರಚಿತ್ತನಾಗಿ ಕೇಳು. ಹಿಂದೊಂದುಸಲ ನನಗೂ ಗುರುವಾದ ನನ್ನ ಸಹೋದರನಿಗೂ ವೈರವುಂಟಾಯಿತು. ||೩೮||

ಆದರಿಂದ ನನಗೆ ಬಹು ವ್ಯಸನವಾಗಿ ವೈರಾಗ್ಯವು ಉಂಟಾಯಿತು. ಆ ಕಾರಣದಿಂದ ನನ್ನ ಸ್ಥಿತಿಯು ಹೀಗಾಯಿತು. ಅನಂತರದಲ್ಲಿ ಗುರುವಾದ ದತ್ತಾತ್ರೇಯನು ನನ್ನನ್ನು ಈ ರೀತಿಯಾದ ಅಜ್ಞಾನಕೂಪದಿಂದ ಮೇಲಕ್ಕೆತ್ತಿದನು. ||೩೯||

ಆತ್ಮಾನಮಖಿಲಂ ಮತ್ವಾ ತದ್ವಿಲಾಸ ಮಿಮಂ ತಥಾ ।
ಅಭಯಂ ಮಾರ್ಗಮಾಶ್ರಿತ್ಯ ಶಂಕೋನ್ಮೇಷಣವರ್ಜಿತಃ ॥೪೦॥

ಸಂಚರಾಮ್ಯಚಲಸ್ಥಾನಃ ಸೂತ್ರಪಾಂಚಾಲಿಕಾ ಯಥಾ ।
ಇತ್ಯಾಕರ್ಣ್ಯ ತದ್ವಾಕ್ಯಂ ಪ್ರಾಹ ಪ್ರಾಂಜಲಿರಾಸ್ಥಿತಃ ॥೪೧॥

ರಾಮಃ ಪ್ರಾಹ ಮುನಿಂ ವಾಕ್ಯಂ ಸಂಪ್ರಾರ್ಥನ ಗಿರಾ ತದಾ ।
ಮಹಾಪುರುಷ ಮಾಂ ದೀನಂ ಸಂಸಾರಭಯಪೀಡಿತಂ ॥೪೨॥

ಅನುಗೃಹ್ಯ ಶುಭಂ ಮಾರ್ಗಮಧಿರೋಹಯ ನಿರ್ಭಯಂ ।
ಇತ್ಯುಕ್ತಃ ಸ ಪುನಃ ಪ್ರಾಹ ದಯಾರ್ದ್ರಹೃದಯೋ ಮುನಿಃ ॥೪೩॥

ಶೃಣು ವತ್ಸ ಮಯಾ ಪ್ರೋಕ್ತಂ ಸಾರಂ ಸರ್ವಾರ್ಥ ಸಂಗ್ರಹಂ ।

ಸಕಲವೂ ಆತ್ಮಸ್ವರೂಪವಾದುದು. ಆತ್ಮನಿಗಿಂತಲೂ ಭಿನ್ನವಾದುದು ಬೇರೊಂದಿಲ್ಲ. ಈ ಎಲ್ಲ ಪ್ರಪಂಚವೂ ಅವನ ಲೀಲೆಯು. ಎಂದು ತಿಳಿದು, ಸಂಶಯ, ರಾಗ, ಭಯಗಳಿಂದ ಬಿಡಲ್ಪಟ್ಟ ಶುದ್ಧವಾದ ಮಾರ್ಗವನ್ನು ಆಶ್ರಯಿಸಿ, ಸಂದೇಹದ ಉನ್ಮೇಷಣಗಳಿಲ್ಲದವನಾಗಿ ನಿಶ್ಚಲವಾದ ಸ್ಥಾನವನ್ನು ಪಡೆದಿರುತ್ತೇನೆ. ಅಲ್ಲಿಂದ ಚ್ಯುತನಾಗುವುದಿಲ್ಲ. ಅಲ್ಲಿಂದಲೇ ಎಲ್ಲ ಕಡೆಯಲ್ಲೂ ಸಂಚರಿಸುತ್ತೇನೆ. ಸೂತ್ರದಿಂದ ಬಿಗಿಯಲ್ಪಟ್ಟ ಬೊಂಬೆಯು ಹೇಗೆ ಸೂತ್ರಚ್ಯುತವಾಗದೇ ಆಟವನ್ನು ತೋರಿಸುತ್ತದೆಯೋ ಹಾಗೆ ನಾನೂ ವ್ಯವಹರಿಸುತ್ತಿದೇನೆ. ॥೪೦॥

ಪರಶುರಾಮನು ಆ ಸಂವರ್ತಮುನಿಯ ಮಾತನ್ನು ಅಂಜಲಿಬದ್ಧನಾಗಿದ್ದು ಕೊಂಡು ಕೇಳಿದನು. ಅನಂತರ ಪ್ರಾರ್ಥನೆ ಮಾಡುತ್ತಾ ಹೇಳತೊಡಗಿದನು. ಓ ಮಹಾತ್ಮನೇ, ಸಂಸಾರವೆಂಬ ಭಯದಿಂದ ದುಃಖಿತನಾದುದರಿಂದಲೇ ದೀನನಾದ ನನ್ನನ್ನು ಅನುಗ್ರಹಿಸುವವನಾಗು. ನನಗೆ ನಿರ್ಭಯವಾದ ಮಾರ್ಗವನ್ನು ತೋರಿಸಿ ಈ ಸಂಸಾರಭಯದಿಂದ ಮುಕ್ತನನ್ನಾಗಿ ಮಾಡು. ॥೪೧-೪೨॥

ಪರಶುರಾಮನು ಹೀಗೆ ಹೇಳಲು ದಯಾಯುಕ್ತನಾಗಿ ಆ ಋಷಿಯು, ಎಲೌ ಪ್ರೀತಿಪಾತ್ರನೇ, ಸಕಲ ತತ್ವಾರ್ಥಗಳ ಸಂಗ್ರಹವಾದ ಸಾರಭೂತವಾದುದನ್ನು ಹೇಳುತ್ತೇನೆ, ಕೇಳುವವನಾಗು. ॥೪೩॥

ಯಸ್ಮಿನ್ಮಾರ್ಗೇ ತ್ವಮಾಸೀನಃ ಸ ಭೀಮೋ ಬಹ್ವನರ್ಥದಃ ॥೪೪॥

ಯಥಾ ಕಶ್ಚಿ ತ್ಕ್ವಚಿದ್ಗಚ್ಛನ್ನಭಯಂ ದೈವಮೋಹಿತಃ ।
ಮಾರ್ಗಂ ದಸ್ಯು ಸಮಾಕೀರ್ಣ ಮಾಶ್ರಿತೋ ಯಾತಿ ನಿರ್ಭಯಃ॥೪೫॥

ಅಜ್ಞಾನಾದಥ ತನ್ಮಾರ್ಗೇ ಕ್ಲಿಶ್ಯನ್ಬಿಭ್ಯನ್ಪದೇಪದೇ ।
ಕ್ಷೇಮಪ್ರಾಪ್ತ್ಯಾಶಯಾ ಯಾತಿ ತಥಾ ಸಂಸೃತಿ ವರ್ತ್ಮ(ನಿ)ಸು ॥೪೬॥

ಅಥ ಕೇನಾಪಿ ಮಾರ್ಗಜ್ಞಪುಂಗವೇನ ಪ್ರಬೋಧಿತಃ ।
ಸುಮಾರ್ಗಮಾಶ್ರಿತೋ ಯಾತಿ ದುರ್ಮಾರ್ಗಸ್ಥಾನ್ಹಸನ್ಯಥಾ ॥೪೭॥

ತಥಾಽಹಂ ನಾಥ ಸಂಪ್ರೋಕ್ತ ಸುಮಾರ್ಗಸ್ಥೋಽತಿ ನಿರ್ವೃತಃ ।
ಹಸನ್ನನ್ಯಾನ್ಕುಮಾರ್ಗಸ್ಥಾಂಶ್ಚಿರಂ ಗಚ್ಛಾಮಿ ಸರ್ವತಃ ॥೪೮॥

ನೀನು ಯಾವ ಮಾರ್ಗದಲ್ಲಿ ಸಂಚರಿಸುತ್ತಿರುವೆಯೋ ಅದು ಭಯಂಕರವೂ ಮತ್ತು ಅನರ್ಥಕಾರಿಯೂ ಆಗಿರುತ್ತದೆ. ಯಾವನೊಬ್ಬನು ಅಜ್ಞಾನದಿಂದ ದೈವಮೋಹಿತನಾಗಿ ಗೊತ್ತುಗುರಿಯಿಲ್ಲದೆ, ಎಲ್ಲೋ ಹೋಗುತ್ತಾ ನಿರ್ಭಯನಾಗಿರುವಂತೆ ನಿನ್ನ ಮಾರ್ಗವಿದೆ. ಏಕೆಂದರೆ ಪರಿಚಯವಿಲ್ಲದ ಮಾರ್ಗದಲ್ಲಿ ತೊಂದರೆ ಭಯಗಳ ಸಂಭವವೇ ಇದ್ದರೂ ನಿರ್ಭಯನಂತಿರುವುದು ಅಜ್ಞಾನದ ಫಲವಾಗಿದೆ. ||೪೪||

ಅವನು ಕಳ್ಳರಿಂದ ತುಂಬಿರುವ ಮಾರ್ಗದಲ್ಲಿ ನಿರ್ಭಯನಾಗಿ ಹೋಗುತ್ತಿರುತ್ತಾನೆ. ಅಜ್ಞಾನದಿಂದ ಆ ಮಾರ್ಗದಲ್ಲಿ ಹೆಜ್ಜೆಹೆಜ್ಜೆಗೂ ಕಷ್ಟಗಳನ್ನನುಭವಿಸುತ್ತಾ ಹೆದರುತ್ತಾ ನನಗೆ ಮಂಗಳವಾದೀತೆಂಬ ಆಸೆಯಿಂದ ಹೇಗೆ ಹೋಗುತ್ತಾನೋ ಹಾಗೆಯೇ ಸಂಸಾರ ಮಾರ್ಗದಲ್ಲಿ ನಡೆಯುವುದೂ ಆಗಿರುತ್ತದೆ. ||೪೬||

ಅನಂತರದಲ್ಲಿ ಆ ಮನುಷ್ಯನು ಸುಮಾರ್ಗವನ್ನು ತಿಳಿದ ಯಾವನೋ ಒಬ್ಬ ಮಹಾಪುರುಷನ ಸುಮಾರ್ಗದಲ್ಲಿ ಹೋಗುವಂತೆ ಎಚ್ಚರಿಸಲ್ಪಡಲು ಆಗ ಅವನು ಸುಮಾರ್ಗದಲ್ಲಿ ನಡೆಯುತ್ತಾ ಕೆಟ್ಟಮಾರ್ಗವನ್ನು ಆಶ್ರಯಿಸಿರುವವರನ್ನು ಹೇಗೆ ಹಾಸ್ಯಮಾಡುತ್ತಾನೋ ಹಾಗೆ ನಾನೂ ಸಹ ಗುರುವಿನಿಂದ ಪ್ರಬೋಧಿತನಾಗಿ ಸುಮಾರ್ಗದಲ್ಲಿ ನಡೆಯುತ್ತಾ ಸುಖವಾಗಿರುತ್ತೇನೆ. ಅಲ್ಲದೇ ಕೆಟ್ಟಮಾರ್ಗದಲ್ಲಿರುವವರನ್ನು ಹಾಸ್ಯಮಾಡುತ್ತೇನೆ. ||೪೭-೪೮||

ತತ್ರ ಸಂಸೃತಿಮಾರ್ಗಸ್ತು ವಿಪರೀತೋ ವಿಷೂಚಿಕಃ ।
ತತ್ರಾಽತಿಕ್ಲೇಶ ಭಾಜೋಽಪಿ ನ ಜಾನಂತಿ ವಿಮೋಹಿತಾಃ ॥೪೯॥

ವಿಶ್ರಬ್ಧಾಃ ಕ್ಲೇಶಜಾಲೇಷು ಸುಖಬುದ್ಧ್ಯಾಽತಿ ಪಾಮರಾಃ ।
ಯೇ ತೇಷಾಂ ದುರ್ಲಭೋ ಮಾರ್ಗೋಽಯೋಽಸ್ಮದ್ವಿಧನಿಷೇವಿತಃ ॥೫೦॥

ತಸ್ಮಾತ್ಸ್ವಮಾರ್ಗ ಸಂಸ್ಥಾನಂ ಜ್ಞಾತ್ವಾ ತತ್ರ ವಿರಕ್ತಧೀಃ ।
ಗುರೂಪದಿಷ್ಟಮಾರ್ಗೇಣ ಸ್ವಾತ್ಮಶಕ್ತಿಂ ಮಹೇಶ್ವರೀಂ ॥೫೧॥

ತ್ರಿಪುರಾಂ ಸಮ್ಯಗಾರಾಧ್ಯ ತತ್ಕೃಪಾ ಲೇಶಮಾಶ್ರಿತಃ ।
ಉಪಲಭ್ಯ ಸ್ವಾತ್ಮಭಾವಂ ಸರ್ವಸಾಮ್ಯಾಶ್ರಯಾತ್ಮಕಂ ॥೫೨॥

ಇತರತ್ತಚ್ಛಕ್ತಿ ಮಯಮಾಭಾಸೈಕ ರಸ ಸ್ಥಿತಿಂ ।
ಜ್ಞಾತ್ವಾ ಸರ್ವಂ ಸ್ವಾತ್ಮಮಯಂ ಶಕ್ತಿ ಚಕ್ರಾತ್ಮನಃ ಪರಾಂ ॥೫೩॥

ಜಗದ್ಗುರು ಸಮಾಪತ್ತಿಂ ಪ್ರಾಪ್ಯ ನಿರ್ಭಯ ಸಂಶಯಃ ।
ಜಾಮದಗ್ನ್ಯ ಯಥೇಚ್ಛಂ ತ್ವಂ ಚರಾಹಮಿವ ನಿಶ್ಚಲಃ ॥೫೪॥

ಸಂಸಾರಮಾರ್ಗವಾದರೋ ವಿಪರೀತವೂ ದುಃಖದಾಯಕವಾದುದೂ ಆಗಿದೆ. ಪ್ರಾಣಿಯು ಹೆಚ್ಚು ದುಃಖವನ್ನು ಅನುಭವಿಸಿದರೂ ಅಜ್ಞಾನದಿಂದ ಆ ಮಾರ್ಗವು ದುಷ್ಟವಾದುದು ಎಂದು ತಿಳಿಯುವುದಿಲ್ಲ. ॥೪೯॥

ಅತಿ ಪಾಮರರಾದ ಜನರು ಸುಖವುಂಟಾಗುತ್ತದೆಂಬ ನಂಬಿಕೆಯಿಂದ ಕ್ಲೇಶಪರಂಪರೆಯಲ್ಲಿ ತೊಳಲುತ್ತಾರೆ. ಅವರಿಗೆ ನಾವುಗಳು ಸೇವಿಸುತ್ತಿರುವ ಮಾರ್ಗವು ದುರ್ಲಭವಾದುದು. ॥೫೦॥

ಆದಕಾರಣ ತನ್ನ ಮಾರ್ಗದ ಇರುವಿಕೆಯನ್ನು ತಿಳಿದು ಆ ಸಂಸಾರಮಾರ್ಗದಲ್ಲಿ ವಿರಕ್ತನಾಗಿ ಗುರುವು ಉಪದೇಶಿಸಿರುವ ಕ್ರಮದಲ್ಲಿ ಆತ್ಮಶಕ್ತಿಸ್ವರೂಪಳೂ ಮಹೇಶ್ವರಿಯೂ ಆದ ತ್ರಿಪುರಾದೇವಿಯನ್ನು ಚೆನ್ನಾಗಿ ಪೂಜಿಸು. ಅನಂತರದಲ್ಲಿ ಆ ದೇವಿಯ ಕೃಪಾಲೇಶದಿಂದ ಎಲ್ಲರಲ್ಲಿಯೂ ಸಮಾನಭಾವವುಳ್ಳ ಆತ್ಮಭಾವವನ್ನು ಹೊಂದುವವನಾಗು. ॥೫೧-೫೨॥

ಅದಕ್ಕಿಂತಲೂ ಭಿನ್ನವಾದ ಸಕಲವನ್ನೂ ಆಭಾಸಮಾತ್ರಸ್ಥಿತಿಯುಳ್ಳ ಶಕ್ತಿಸ್ವರೂಪವನ್ನಾಗಿ ತಿಳಿ. ದೇವಿಯ ಪ್ರಸಾದದಿಂದ ಸಕಲವನ್ನೂ ಆತ್ಮಸ್ವರೂಪ

ಸ್ವಾತ್ಮಾನಂ ಸರ್ವಭಾವಸ್ಥಂ ಸ್ವಾತ್ಮಸ್ಥಂ ಸರ್ವಭಾವಕಂ ।
ಪಿಂಡಾಹಂ ಭಾವ ಮುನ್ಮೂಲ್ಯ ವೇತ್ತೃಭಾವಾಸನಸ್ಥಿತಃ ॥೫೫॥

ವೇದ್ಯಂ ಸ್ವದೇಹಂ ಸಂಬುಧ್ಯ ಸದಾವೇತ್ರ್ರಭಿಲಕ್ಷಕಃ ।
ಯಶ್ಚರೇತ್ತಸ್ಯ ನೋ ಕಾರ್ಯಂ ವಿದ್ಯತೇ ಸಂಸೃತೇಃ ಪಥಿ ॥೫೬॥

ದೋಷಂ ವಿಭಾವಯೇದಾದೌ ಭೂಯಃ ಸಂಸೃತಿ ವರ್ತ್ಮನಿ ।
ತೇನ ತತ್ರಾಶು ವೈರಾಗ್ಯಂ ತತಸ್ಸನ್ಮಾರ್ಗಲಕ್ಷಣಂ ॥೫೭॥

ಏತನ್ಮಯೋಕ್ತಂ ಸಂಕ್ಷೇಪಾತ್ಸಾರಂ ಮರ್ತ್ಯಃ ಸದಾಽಭ್ಯಸನ್ ।
ಅಚಿರೇಣೈವ ಸಂಯಾತಿ ಶುಭಂ ಮಾರ್ಗಂ ಪರಾತ್ಪರಂ ॥೫೮॥

ಏವಮುಕ್ತಂ ತಸ್ಯ ವಚೋ ದುರ್ವಿಭಾವ್ಯಮತೀಂದ್ರಿಯಂ ।
ಮತ್ವಾಽಥ ಭಾರ್ಗವಃ ಪ್ರಾಹ ಭೂಯಃ ಕಲುಷಿತಾಂತರಃ ॥೫೯॥

ವನ್ನಾಗಿ ತಿಳಿದು ಶ್ರೇಷ್ಠವಾದ ಗುರುವಿನ ಆಶ್ರಯವನ್ನು ಹೊಂದಿ ಭಯವೂ ಸಂಶಯವೂ ಇಲ್ಲದೆ, ಎಲೈ ಪರಶುರಾಮನೇ, ನಿನ್ನ ಇಷ್ಟಾನುಸಾರವಾಗಿ ನನ್ನಂತೆಯೇ ವಿಕಾರಶೂನ್ಯನಾಗಿ ಸಂಚರಿಸು. ॥೫೩-೫೪॥

ಜ್ಞಾನಿಯಾಗಿ ಅಹಂಭಾವವನ್ನು ಕಿತ್ತೊಗೆದು ಸಕಲವನ್ನೂ ಆತ್ಮಸ್ವರೂಪವನ್ನಾಗಿ ತಿಳಿಯಬೇಕು. ಜ್ಞಾನದಲ್ಲೇ ದೃಷ್ಟಿಯಿಟ್ಟು ಚೆನ್ನಾಗಿ ಎಚ್ಚೆತ್ತು ವೇತ್ತೃವಾದ ಆತ್ಮವನ್ನು ತಿಳಿದು ಯಾವನು ಸನ್ಮಾರ್ಗದಲ್ಲಿ ನಡೆಯುವನೋ ಅವನಿಗೆ ಸಂಸಾರ ಮಾರ್ಗದಲ್ಲಿ ಮಾಡಬೇಕಾದುದೇನೂ ಇಲ್ಲವು. ಸಂಸಾರಮಾರ್ಗದಲ್ಲಿರುವ ದೋಷಗಳನ್ನು ಮೊದಲು ತಿಳಿಯಬೇಕು. ಅದರಿಂದ ಆ ಮಾರ್ಗದಲ್ಲಿ ಸನ್ಮಾರ್ಗಲಕ್ಷಣವಾದ ವೈರಾಗ್ಯವು ಜಾಗ್ರತೆಯಾಗಿ ಉಂಟಾಗುತ್ತದೆ. ॥೫೫-೫೬-೫೭॥

ನಾನು ಸಂಕ್ಷೇಪವಾದ ಸಾರಭೂತವಾದುದನ್ನು ಹೇಳಿದೆನು. ಇದನ್ನು ಯಾವಾಗಲೂ ಅನುಷ್ಠಿಸುವ ಮನುಜನು ಜಾಗ್ರತೆಯಾಗಿ ಅತ್ಯುತ್ತಮವಾದ ಮಂಗಳಕರವಾದ ಮಾರ್ಗವನ್ನು ಪಡೆಯುತ್ತಾನೆ. ॥೫೮॥

ಈ ರೀತಿಯಾಗಿ ಹೇಳಿದ ಸಂವರ್ತನ ಮಾತನ್ನು ಕೇಳಿ ಪರಶುರಾಮನು ಇದು ಅತೀಂದ್ರಿಯವಾಗಿರುವುದರಿಂದ ತಿಳಿಯಲಸಾಧ್ಯವಾದುದು. ಎಂದು ತಿಳಿದನು. ಅನಂತರದಲ್ಲಿ ಅವನು ಆ ಮಾತುಗಳು ಸರಿಯಾಗಿ ತಿಳಿಯದಿದ್ದುದರಿಂದ ಕಲ್ಮಷಯುಕ್ತವಾದ ಮನಸ್ಸಿನಿಂದ ಸಂವರ್ತನನ್ನು ಕುರಿತು ಮತ್ತೆ ಕೇಳತೊಡಗಿದನು. ॥೫೯॥

ಮಹಾಪುರುಷ ಯತ್ಪ್ರೋಕ್ತಂ ತ್ವಯಾ ಸಾರತರಂ ವಚಃ ।
ತಸ್ಯಾತಿ ಗಹನತ್ವಾದ್ವೈ ನ ಸಮ್ಯಗ್ವಿದಿತಂ ಮಯಾ ॥೬೦॥

ಸಾರ ಸಂಕ್ಷೇಪವಚನಾತ್ ತನ್ಮೇ ಸಂದೇಹ ಆತತಃ ।
ವಿಸ್ತರೇಣ ಸುಕೃಪಯಾ ಯಥಾಜ್ಞಾತಂ ಮಯಾ ಭವೇತ್ ॥೬೧॥

ತಥಾ ಮೇ ವದ ಸರ್ವಜ್ಞ ರಕ್ಷ ಮಾಂ ಶರಣಾಗತಂ ।
ಇತಿ ತದ್ವಚನಂ ಶ್ರುತ್ವಾ ಸಂವರ್ತೋ ಧ್ಯಾನ ಮಾಸ್ಥಿತಃ ॥೬೨॥

ಜ್ಞಾತ್ವಾ ತಸ್ಯಾಖಿಲಂ ಭಾವೀ ಪ್ರೋವಾಚ ಮಧುರಂ ವಚಃ ।
ಶೃಣು ರಾಮ ಮಯೋಕ್ತಂ ತ್ವಂ ನಾಯಂ ಮಾರ್ಗೋಽತಿ ಗೋಚರಃ ॥೬೩॥

ಮಲೀಮಸಧಿಯಾಂ ಪುಂಸಾಂ ನ ಸುಜ್ಞೇಯಮಿದಂ ಭವೇತ್ ।
ಊರ್ಧ್ವಮಾರ್ಗಸ್ಥಿತೇಃ ಸೂಕ್ಷ್ಮಭಾವಾತ್ಕಲುಷಿತಾತ್ಮನಾಂ ॥೬೪॥

ಓ ಮಹಾತ್ಮನೇ, ನೀನು ಹೇಳಿದ ಸಾರಭೂತವಾದ ಮಾತು ತಿಳಿಯಲು ಕಷ್ಟವಾದುದರಿಂದ ನಾನು ಅದನ್ನು ಚೆನ್ನಾಗಿ ತಿಳಿಯಲಾರದವನಾದೆ. ॥೬೦॥

ನೀನು ಹೇಳಿದುದು ಸಾರಭೂತವೂ ಸಂಕ್ಷೇಪವೂ ಆದುದರಿಂದ ನನಗೆ ಸಂದೇಹವು ಉಂಟಾಯಿತು. ನನ್ನಲ್ಲಿ ದಯೆಯುಳ್ಳವನಾಗಿ ಸಕಲವನ್ನೂ ತಿಳಿದಿರುವ ಓ ಸಂವರ್ತನೇ, ನನಗೆ ತಿಳಿಯುವಂತೆ ಮತ್ತೊಮ್ಮೆ ಹೇಳಿ ಶರಣಾಗತನಾಗಿರುವ ನನ್ನನ್ನು ರಕ್ಷಿಸು. ॥೬೧॥

ಹೀಗೆ ಪರಶುರಾಮನು ಹೇಳಲು ಆ ಮಾತನ್ನು ಕೇಳಿ ಸಂವರ್ತನು ಸ್ವಲ್ಪ ಕಾಲ ಧ್ಯಾನಮಗ್ನನಾದನು. ಸಂವರ್ತನು ಅನಂತರ ಅವನ ಸಕಲ ಭವಿಷ್ಯವನ್ನೂ ಧ್ಯಾನದಿಂದ ಅರಿತು ಮಧುರವಾಗಿ ಹೇಳತೊಡಗಿದನು. ॥೬೨॥

ಪರಶುರಾಮನೇ, ನನ್ನ ಮಾತನ್ನು ಕೇಳು. ನಾನು ಹೇಳಿದ ಈ ಮಾರ್ಗವು ಅಸಾಧ್ಯವಾದುದೇನೂ ಅಲ್ಲ. ಯಾರ ಮನಸ್ಸು ಪರಿಶುದ್ಧವಾಗಿರುವುದಿಲ್ಲವೋ ಅಂತಹವರು ಇದನ್ನು ಸುಲಭವಾಗಿ ಅರಿಯಲಾರರು. ॥೬೩॥

ಸ್ವಚ್ಛವಲ್ಲದ ಅಂತರಂಗಉಳ್ಳವರಿಗೆ ಪ್ರಚಲಿತದಲ್ಲಿರುವ ಮಾರ್ಗಕ್ಕಿಂತಲೂ ಮೇಲ್ಪಡುವ ಮಾರ್ಗದ ರೀತಿಯನ್ನು ಸೂಕ್ಷ್ಮವಾಗಲ್ಲದೇ ಹೆಚ್ಚಾಗಿ ಹೇಳಲು ಸುಲಭ ವಲ್ಲವು. ಏತಕ್ಕೆಂದರೆ ಆ ಮಾರ್ಗವು ನಡೆವಳಿಕೆಯಿಂದ ತಿಳಿದುಕೊಳ್ಳಬೇಕಾದುದು.

ನೀತಿ ಸುಜ್ಞೇಯ ಮೇತದ್ವೈ ವಕ್ತುಂ ನ ಸುಲಭಂ ತಥಾ ।
ಅತಿಲೌಕಿಕ ವೃತ್ತಿತ್ವಾತ್ ದುರ್ಲಭಂ ಚೈತದುಚ್ಯತೇ ॥೬೫॥

ತ್ರಿಪುರಾಂಬಾ ಪಾದಸೇವಾಮಂತರಾ ನೈವ ಲಭ್ಯತೇ ।
ಸಾಽಪಿ ಶ್ರೀ ಗುರುನಾಥಸ್ಯ ಕೃಪಾದ್ವಾರೈವ ನಾನ್ಯಥಾ ॥೬೬॥

ತತ್ಕಾರಣಂ ತು ಸತ್ಸಂಗಸ್ಸರ್ವಂ ತನ್ಮೂಲಕಂ ಯತಃ ।
ತಸ್ಮಾದ್ದತ್ತಾತ್ರೇಯ ಗುರೋಃ ಸಮೀಪಂ ವ್ರಜ ಭಾರ್ಗವ ॥೬೭॥

ತಂ ಸಮಾರಾಧ್ಯ ಸಂತೋಷ್ಯ ವಾಂಛಿತಂ ಪ್ರಾಪ್ಸ್ಯಸಿ ದ್ರುತಂ ।
ವಿನಾ ಗುರೋ ರಾಶ್ರಯತಃ ಶುಭಂ ವಿಂದೇತ ವೈ ಕಥಂ ॥೬೮॥

ಮಾರ್ಗಚ್ಯುತಸ್ಯ ಗಹನೇ ರಾತ್ರೌ ಸೂರ್ಯಂ ವಿನಾ ಯಥಾ ।
ವಿನಾ ಸದ್ಗುರು ಸೇವಾಯಾ ನ ಸುಖಂ ವಿಂದತೇ ಕ್ವಚಿತ್ ॥೬೯॥

ಇದು ಲೋಕವ್ಯವಹಾರಕ್ಕಿಂತಲೂ ಭಿನ್ನವಾದುದರಿಂದ ಸುಲಭವಾಗಿ ಪಡೆಯಲಸಾಧ್ಯವಾದುದು. ॥೬೪-೬೫॥

ಆ ಮಾರ್ಗವನ್ನು ಪಡೆಯಲು ತ್ರಿಪುರಾದೇವಿಯ ಪಾದಸೇವೆಯು ಅವಶ್ಯಕವು. ಆ ದೇವಿಯ ಪಾದಸೇವೆ ಹೊರತಾಗಿ ಅದು ಲಭ್ಯವಲ್ಲವು. ಆ ದೇವಿಯ ಪಾದಸೇವೆಯೂ ಕೂಡ ಗುರುನಾಥನ ಅನುಗ್ರಹಮಾತ್ರದಿಂದಲೇ ಸಾಧ್ಯವು. ಬೇರೆ ರೀತಿಯಿಂದ ದೇವಿಯ ಪಾದಸೇವೆಯೂ ಅಸಾಧ್ಯವಾದುದು. ॥೬೬॥

ಬೇರೆ ವಿಧದಲ್ಲಿ ತ್ರಿಪುರಾದೇವಿಯ ಪಾದಸೇವೆಯು ಪ್ರಾಪ್ತವಾಗದಿರಲು, ಅದರ ಕಾರಣವಾದರೋ ಸತ್ಪುರುಷರ ಸಹವಾಸದಿಂದಲೇ ಎಲ್ಲವೂ ಲಭಿಸುವುದು. ಆ ಮೂಲಕವೇ ಸಕಲ ಕೆಲಸಗಳೂ ಸಾಧ್ಯವೆಂಬುದೇ ಆಗಿರುತ್ತದೆ. ಆದಕಾರಣ ಎಲೌ ಪರಶುರಾಮನೇ, ದತ್ತಾತ್ರೇಯ ಗುರುವಿನ ಸಮೀಪಕ್ಕೆ ಹೋಗು. ॥೬೭॥

ಆ ಗುರುವಿನ ಸೇವೆಯನ್ನು ಚೆನ್ನಾಗಿ ಮಾಡಿ ಅವರ ಮನಸ್ಸನ್ನು ತೃಪ್ತಿಪಡಿಸಿ ಅದರಿಂದ ಜಾಗ್ರತೆಯಾಗಿ ನಿನ್ನ ಇಚ್ಛಿತವನ್ನು ಹೊಂದುವೆ. ಗುರುವನ್ನು ಆಶ್ರಯಿಸದೇ ಶುಭವನ್ನು ಮನುಷ್ಯನಾದವನು ಹೇಗೆ ಪಡೆಯಬಲ್ಲನು? ॥೬೮॥

ಅಂಧಕಾರದಿಂದ ತುಂಬಿದ ರಾತ್ರಿಯಲ್ಲಿ ಯಾವನಾದರೊಬ್ಬ ದಾರಿತಪ್ಪಿದ ದಾರಿಗನಿಗೆ ಸೂರ್ಯನಲ್ಲದೇ ಬೇರೊಬ್ಬನು ಹೇಗೆ ಮಾರ್ಗದರ್ಶನಾಗಲಾರನೋ

ಅಂಧಸ್ಯಾಂಜನಕರ್ತೇವ ವಿನಾಽನ್ಯತ್ರ ಗುರೋರ್ಗತಿಃ ।
ಸಾಕ್ಷಾತ್ಸದಾಶಿವೋ ದೇವಃ ಶಿಷ್ಯಲೋಕಾನು ಕಂಪಿತಃ ॥೭೦॥

ಮನುಷ್ಯರೂಪಮಾಸ್ಥಾಯ ಸದಾ ಪರ್ಯಟತಿ ಪ್ರಭುಃ ।
ವಿನಾ ಶ್ರೀಗುರುಪಾದಾಬ್ಜ ಸಂಶ್ರಯಂ ಕಃ ಸಮೀಹಿತಂ ॥೭೧॥

ಲಭೇತ ತ್ರಿಷು ಲೋಕೇಷು ಸಮೃದ್ಧೋಽಪಿ ಧನಾದಿಭಿಃ ।
ತಸ್ಮಾದಿತಸ್ತ್ವಂ ಗಚ್ಛಾಶು ತಸ್ಯ ಪಾದಾಂತಿಕಂ ಗುರೋಃ ॥೭೨॥

ಆರಾಧಯ ಸುಭಕ್ತ್ಯಾ ತಮಕೈತವ ಧಿಯಾ ತತಃ ।
ಪ್ರಸನ್ನೇಽಥ ಗುರೌ ಕಿಂ ಸ್ಯಾದ್ದುರ್ಲಭಂ ಭುವನತ್ರಯೇ ॥೭೩॥

ಸ ಆಸ್ತೇ ಸಂಪ್ರತಿ ಗಿರೌ ಗಂಧಮಾದನ ಸಂಜ್ಞಿತೇ ।
ಆಶ್ರಮೇ ಪುಣ್ಯಭೂಮಿಷ್ಠೇ ಸಿದ್ಧಯೋಗಿ ಸುಸೇವಿತೇ ॥೭೪॥

ಹಾಗೆಯೇ ಸಂಸಾರಮಾರ್ಗದಲ್ಲಿ ತೊಳಲುತ್ತಾ ದುಃಖಿಯಾದವನಿಗೆ ಸದ್ಗುರುವಿನ ಸೇವೆಯಿಂದಲ್ಲದೇ ಬೇರೆ ಯಾವುದರಿಂದಲೂ ಸುಖವಾಗಲಾರದು. ॥೬೯॥

ಕುರುಡನಿಗೆ ಅಂಜನಮಾಡುವವನು ಹೇಗೆ ಗತಿಯೋ ಹಾಗೆ ಸಂಸಾರಿಗೆ ಗುರುವೇ ಗತಿಯು. ಪ್ರತ್ಯಕ್ಷನಾದ ಪರಶಿವನೇ ಮನುಷ್ಯರೂಪವನ್ನು ತಾಳಿ ಶಿಷ್ಯ ಸಮೂಹದ ವಿಷಯದಲ್ಲಿ ದಯೆಯುಳ್ಳವನಾಗಿ ದೇವನು ದತ್ತಾತ್ರೇಯನಾಗಿ ಸಂಚರಿಸುತ್ತಿದಾನೆ. ॥೭೦॥

ಮೂರುಲೋಕದಲ್ಲೂ ಯಾವನಾದರೊಬ್ಬನು ಎಷ್ಟೇ ಐಶ್ವರ್ಯವುಳ್ಳವನಾದರೂ ಕೂಡ ಗುರುಚರಣದ ಆಶ್ರಯವಿಲ್ಲದೇ ತನ್ನ ಅಭೀಷ್ಟವನ್ನು ಪಡೆಯಲಾರನು. ಆದಕಾರಣ ಜಾಗ್ರತೆಯಾಗಿ ಗುರುವಿನ ಚರಣಸಮೀಪಕ್ಕೆ ಹೋಗು. ॥೭೧-೭೨॥

ಅನಂತರದಲ್ಲಿ ನಿಷ್ಕಪಟಬುದ್ಧಿಯಿಂದ ಗುರುವನ್ನು ಸೇವಿಸು. ನಿನ್ನ ಸೇವೆಯಿಂದ ಗುರುವು ಪ್ರಸನ್ನನಾದುದೇ ಆದರೆ ಆಗ ಮೂರುಲೋಕದಲ್ಲೂ ದುಃಸಾಧ್ಯವಾದುದು ಯಾವುದೂ ಉಳಿಯುವುದಿಲ್ಲ. ॥೭೩॥

ಆ ಪ್ರಸಿದ್ಧನಾದ ದತ್ತಗುರುವು ಸಿದ್ಧರಿಂದಲೂ, ಯೋಗಿಗಳಿಂದಲೂ ಸೇವಿಸಲ್ಪಡುತ್ತಾ ಪುಣ್ಯಕರವಾದ ಆಶ್ರಮದಲ್ಲಿ ಗಂಧಮಾದನ ಪರ್ವತದ ಸಮೀಪದಲ್ಲಿ ಇರುವ ಆಶ್ರಮದಲ್ಲಿ ವಾಸವಾಗಿರುತ್ತಾನೆ. ॥೭೪॥

ವ್ರಜಾಮ್ಯಹಂ ಶುಭಂ ತೇಽಸ್ತು ಯಥಾಽಭಿಲಷಿತಾಂ ಗತಿಂ ।
ಇತ್ಯುಕ್ತ್ವಾ ಪಶ್ಯತಸ್ತಸ್ಯ ಜಗಾಮಾಕಾಶಮಾರ್ಗತಃ ॥೭೫॥

ವಾತನುನ್ನಾಭ್ರಪಟಲಮಿವ ದೂರಂ ನಿಮೇಷತಃ ।
ಪ್ರಾಗುತ್ತರಾಂತರದಿಶಂ ಯಯೌ ದೃಗ್ಗೋಚರಾತಿಗಃ ॥೭೬॥

ತತಸ್ಸಂವರ್ತವಾಕ್ಯಸ್ಯ ಶ್ರುತಿಜಾತತ್ವರಾಽನ್ವಿತಃ ।
ಗಂತುಂ ಮನೋ ದಧೇ ತತ್ರ ಯತ್ರ ದತ್ತಗುರುಃ ಸ್ಥಿತಃ ॥೭೭॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ
ಚತುರ್ಥೋಽಧ್ಯಾಯಃ

ನಿನಗೆ ಮಂಗಳವಾಗಲಿ, ನಿನ್ನ ಅಪೇಕ್ಷೆಯು ಸಿದ್ಧಿಸಲಿ. ನಾನು ಹೋಗುತ್ತೇನೆ. ಎಂದು ಹೇಳಿ ಪರುಶುರಾಮನು ನೋಡುತ್ತಿರುವಂತೆಯೇ ಆಕಾಶಮಾರ್ಗದಿಂದ ಸಂವರ್ತನು ಹೊರಟುಹೋದನು. ॥೭೫॥

ಒಂದೇ ಒಂದು ನಿಮಿಷದಲ್ಲಿ ಸಂವರ್ತನು ಈಶಾನ್ಯದಿಕ್ಕಿನಲ್ಲಿ ಬಹುದೂರ ಕಣ್ಣಿಗೆ ಕಾಣಿಸದೆ, ಗಾಳಿಯಿಂದ ತಳ್ಳಲ್ಪಟ್ಟ ಮೇಘಸಮೂಹದಂತೆ, ಹೊರಟು ಹೋದನು. ॥೭೬॥

ಅನಂತರದಲ್ಲಿ ಪರಶುರಾಮನು ಸಂವರ್ತನ ಮಾತಿನಂತೆ ಜಾಗ್ರತೆಯಾಗಿ ದತ್ತಗುರುವಿನ ಸಮೀಪಕ್ಕೆ ಹೋಗಲು ನಿಶ್ಚಯಿಸಿದನು. ॥೭೭॥

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಸಂವರ್ತನ ಬುದ್ಧಿವಾದವನ್ನು ತಿಳಿಸುವ ನಾಲ್ಕನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ಪಂಚಮೋಽಧ್ಯಾಯಃ ||

ಐದನೆಯ ಅಧ್ಯಾಯವು

ಅಥೋತ್ತರಾಶಾಽಭಿಮುಖೋ ಜಗಾಮ ಭೃಗುವಂಶಜಃ ।
ದತ್ತಾತ್ರೇಯಾಶ್ರಮಂ ಗಂತುಂ ಸತ್ವರೋ ಜಾತಸಂಭ್ರಮಃ ॥೧॥

ಚಿಂತಯನ್ ಸ್ವಾತ್ಮನಿ ತದಾ ಮಾರ್ಗೇ ವ್ಯವಹೃತೇಃ ಸ್ಥಿತಿಂ ।
ನೂನ ಮದ್ಯಾವಧಿ ಮಯಾ ಮುಖ್ಯಂ ಚಿಂತ್ಯಂ ನ ಚಿಂತಿತಂ ॥೨॥

ಪ್ರವಾಹಪತಿತೋ ಮರ್ತ್ಯ ಇವ ತದ್ವಶತಾಂ ಗತಃ ।
ಯದ್ವದಂಧಾನುಗೋಽಂಧಃ ಸ್ಯಾದವಿಜ್ಞಾತ ಗತಿಕ್ರಮಃ ॥೩॥

ಅಗ್ರಗಸ್ಯ ಫಲಂ ಭುಂಕ್ತೇ ತಥೇಮೇ ಸರ್ವತೋ ಜನಾಃ ।
ಅವಿದಿತ್ವೈವ ಪರ್ಯಂತಂ ಕುರ್ವಂತಿ ಕೃತಕರ್ಮಣಃ ॥೪॥
ವಿ(ಂ)ದಂತಿ ತಸ್ಯ ಚ ಫಲಮನ್ಯದೇವಾಽಸಮೀಹಿತಂ ।

ಪರಶುರಾಮನು ದತ್ತಾತ್ರೇಯನ ಆಶ್ರಮಕ್ಕೆ ಹೋಗಲು ತ್ವರೆಯಾಗಿ ಸಂಭ್ರಮದಿಂದ ಕೂಡಿ ಉತ್ತರದಿಕ್ಕಿಗೆ ಹೊರಟನು. ॥೧॥

ಪರಶುರಾಮನು ಮಾರ್ಗದಲ್ಲಿ ಹೋಗುತ್ತಾ ತನ್ನಲ್ಲೇ ಲೋಕವ್ಯವಹಾರವನ್ನು ಯೋಚಿಸತೊಡಗಿದನು. ಇಲ್ಲಿಯವರೆವಿಗೂ ನಾನು ಮುಖ್ಯವಾಗಿ ಯೋಚಿಸಬೇಕಾದುದನ್ನು ಯೋಚಿಸಲಿಲ್ಲ. ॥೨॥

ಪ್ರವಾಹದಲ್ಲಿ ಬಿದ್ದು ಅದಕ್ಕೆ ಅಧೀನನಾಗಿ ಹೋಗುವವನಂತೆ ಮತ್ತು ದಾರಿಯನ್ನರಿಯದ ಕುರುಡನು ಕುರುಡನನ್ನು ಅನುಸರಿಸಿ ॥೩॥

ಹೋಗಿ ಮುಂದೆ ಹೋಗುವವನಿಗೆ ಆಗುವ ಫಲವನ್ನು ಅವನೂ ಹೇಗೆ ಅನುಭವಿಸುತ್ತಾನೋ ಹಾಗೆಯೇ ಈ ಸಮಸ್ತ ಜನಗಳೂ ತಿಳಿಯದೇ ಒಬ್ಬರು ಮಾಡಿದ

ದೃಷ್ಟ್ವಾ ಕ್ವಚಿತ್ಫಲ ಲವಸಂಭವಂ ದೈವತಂತ್ರಜಂ ॥೫॥

ಬುಧ್ವಾಽನ್ಯ ಕರ್ಮಜಂ ತಚ್ಚ ಮೋಹಿತಾಃ ಫಲ ತರ್ಷಯಾ ।
ಫಲಲೇಶಾ ಭಾಸಲುಬ್ಧಾ ಆಪದಂ ಪ್ರಾಪ್ನುವಂತಿ ಹಿ ॥೬॥

ಯಥಾ ಚಾಮಿಷಲೋಭೇನ ಝುಷೋ ಬಡಿಶವೇಧಿತಃ ।
ಕಸ್ಯ ಕಿಂ ತತ್ಸುಖಂ ಜಾತಂ ಹತ ಸಂಸಾರವರ್ತ್ಮನಿ ॥೭॥

ಆಕ್ರಿಮಿ ಶ್ವಪಚಾಸ್ಸರ್ವೇ ಸುಖಾರ್ಥಂ ಸತತೋದ್ಯತಾಃ ।
ಯತ್ಸುಖಂ ವಿಟ್‌ಕ್ರಿಮೇರ್ಜಿಹ್ವಾ ಮೈಥುನೋತ್ಥಂ ತು ಯಾದೃಶಂ ॥೮॥
ತದೇವ ತಾದೃಶಂ ಲೋಕತ್ರಯ ರಾಜಸ್ಯ ನೇತರತ್ ।

ಕೆಲಸವನ್ನು ತಾವು ಮಾಡುತ್ತಾರೆ. ಅದರಿಂದ ಸಂಭವಿಸಿದ ವಿರುದ್ಧ ಫಲವನ್ನು ಬೇರೆಯದೆಂದು ತಿಳಿಯುತ್ತಾರೆ. ||೪||

ಅದೃಷ್ಟವಶದಿಂದ ಜನರು ಎಲ್ಲೋ ಸ್ವಲ್ಪ ಪ್ರಯೋಜನವಾದುದನ್ನು ನೋಡಿ ಇದು ದೈವೇಚ್ಛೆಯಿಂದಾದುದೆಂದು ತಿಳಿಯದೇ ಮತ್ತಾವುದೋ ಕೆಲಸದಿಂದಾಯಿತೆಂದು ಭಾವಿಸಿ ಫಲದ ಆಸೆಯಿಂದ ಮೋಹಗೊಳ್ಳುತ್ತಾರೆ. ಅನಂತರದಲ್ಲಿ ತೋರುವ ಅಲ್ಪ ಫಲಕ್ಕೆ ಆಸೆಪಟ್ಟು, ಮೀನು ಮಾಂಸದ ಆಸೆಯಿಂದ ಹೇಗೆ ಗಾಳಕ್ಕೆ ಸಿಕ್ಕಿ ತೊಂದರೆ ಪಡುವುದೋ ಹಾಗೆ, ಕಷ್ಟವನ್ನೇ ಹೊಂದುತ್ತಾರೆ. ||೫-೬||

ಈ ದುಷ್ಟ ಸಂಸಾರಮಾರ್ಗದಲ್ಲಿ ಸಂಚರಿಸುವವನಿಗೆ ಎಂತಹ ಸುಖತಾನೇ ಉಂಟಾದೀತು? ಯಾವ ಪ್ರಕಾರವಾದ ಸುಖವೂ ಇಲ್ಲ. ಆದರೂ ಕ್ರಿಮಿಕೀಟವೇ ಮೊದಲಾದ ಪ್ರಾಣಿಗಳಿಂದಲೂ ನೀಚ ಜಾತಿಯವರಿಂದಲೂ ಪ್ರಾರಂಭಿಸಿ ಸಕಲರೂ ಸುಖವನ್ನು ಪಡೆಯಲು ಯಾವಾಗಲೂ ಶ್ರಮಿಸುತ್ತಿರುತ್ತಾರೆ. ||೭||

ಮಲಮೂತ್ರಾದಿಗಳಲ್ಲಿರುವ ಕ್ರಿಮಿಗೆ ಜಿಹ್ವಾತೃಪ್ತಿಪಡಿಸುವುದರಿಂದಲೂ ಮತ್ತು ಮೈಥುನದಿಂದಲೂ ಯಾವಸುಖವು ಲಭಿಸುತ್ತದೋ ಮೂರುಲೋಕಗಳಿಗೂ ರಾಜನಾದವನ ಶರೀರದ ಸುಖವೂ ಅದೇ ಅಲ್ಲದೇ ಬೇರೆಯಲ್ಲವು. ||೮||

ಸರ್ವಂ ಹಿ ಭೌತಿಕೋತ್ಥಸ್ಯ ದೇಹಸ್ಯಾರ್ಥಂ ಸಮೀಹಿತಂ ॥೯॥

ಸ ದೇಹೋ ಮಲಮೂತ್ರಾಸೃಙ್ಮಾಂಸಸ್ನಾಯ್ವಸ್ಥಿ ಸಂಕುಲಃ ।
ಮುಹುರ್ನಿಂದ್ಯಃ ಸದಾ ದುಃಖಹೇತು ರತ್ಯಂತ ಕುತ್ಸಿತಃ ॥೧೦॥

ಏತತ್ಸಂಬಂಧಿನಸ್ಸರ್ವೇ ಪುತ್ರಮಿತ್ರ ಕಲತ್ರಕಾಃ ।
ಇಮಂ ನಶ್ವರಮತ್ಯಂತ ಭೀಭತ್ಸಮತಿ ದುಸ್ಸಹಂ ॥೧೧॥

ದೇಹಮಾತ್ಮಧಿಯಾ ದೃಷ್ಟ್ವಾ ಕರೋತ್ಯಪಿ ವಿನಿಂದಿತಂ ।
ಕೋ ನಾಮ ಗುಣಲೇಶೋಽತ್ರ ವರ್ತತೇ ಹತದೇಹಕೇ ॥೧೨॥

ಸರ್ವೈಃ ಸುವಿದಿತಂ ಲೋಕೇ ಜನೈಃ ಪಾಮರ ಪಂಡಿತೈಃ ।
ಸದಾ ಸ್ರವದ್ದ್ವಾರಯುತ ಮಮೇಧ್ಯಾ ಶುಚಿ ಗಂಧಿನಂ ॥೧೩॥

ವಿಣ್ಮೂತ್ರ ಕಫ ನಿಷ್ಯಂದಂ ಲೋಮತ್ವಗ ಸೃಗಾತತಂ ।
ಮತ್ವಾ ಪ್ರಿಯತಮಂ ದೇಹಮತ್ಯುತ್ತಮ ತಮಂ ಜನಃ ॥೧೪॥
ಸುಗಂಧಿ ಗಂಧಕುಸುಮೈಃ ಮಂಡಯತ್ಯತಿ ಸುಂದರೈಃ ।

ಎಲ್ಲವೂ ಸಹ ಪಾಂಚಭೌತಿಕವಾದ ಈ ದೇಹಕ್ಕಾಗಿ ಅಪೇಕ್ಷಿತವಾದುದು. ಆ ದೇಹವಾದರೋ ಮಲ, ಮೂತ್ರ, ರಕ್ತ, ಮಾಂಸ, ಮಾಂಸಖಂಡ ಮತ್ತು ಮೂಳೆಗಳಿಂದ ಕೂಡಿರುವುದು. ಅದು ಕುತ್ಸಿತವಾಗಿ ದುಃಖಕ್ಕೆ ಕಾರಣಭೂತವಾಗಿರುವುದರಿಂದ ಯಾವಾಗಲೂ ನಿಂದನೀಯವಾದುದು. ॥೯-೧೦॥

ಮಕ್ಕಳು, ಸ್ನೇಹಿತರು, ಹೆಂಡಿತಿ ಎಲ್ಲರೂ ಸಹ ಈ ನಿಂದ್ಯವಾದ ಶರೀರಕ್ಕೆ ಸಂಬಂಧಿಸಿರುವರು. ಲೋಕದಲ್ಲಿ ಜನರು ಸ್ಥಿರವಲ್ಲದ ಬಹು ಭಯಂಕರವಾದ ಮತ್ತು ದುಃಖಕ್ಕೆ ಕಾರಣಭೂತವಾದ ಈ ಶರೀರವನ್ನು ಆತ್ಮಬುದ್ಧಿಯಿಂದ ತಿಳಿಯುತ್ತಾರೆ. ಇದು ಅತಿ ನಿಂದಿತವಾದುದು. ॥೧೧॥

ದುಷ್ಟವಾದ ಈ ಶರೀರದಲ್ಲಿ ಸ್ವಲ್ಪವಾದರೂ ಗುಣವಿಲ್ಲವೆಂಬುದನ್ನು ಪಾಮರ ಪಂಡಿತರಾದ ಲೋಕದಲ್ಲಿರುವ ಸಕಲರೂ ಚೆನ್ನಾಗಿ ಅರಿತಿರುತ್ತಾರೆ. ॥೧೨॥

ಯಾವಾಗಲೂ ನೀರು ದ್ರವಿಸುತ್ತಿರುವ ದ್ವಾರಗಳಿಂದ ಕೂಡಿರುವ, ಅಮೇಧ್ಯವೇ ಮೊದಲಾದ ಅಶುದ್ಧವಾದ ವಾಸನೆಗಳುಳ್ಳ, ಸುರಿಯುತ್ತಿರುವ ಮಲ ಮೂತ್ರ ಕಫಗಳಿಂದ ಯಾವಾಗಲೂ ಕೂಡಿರುವ, ರೋಮ ಚರ್ಮ ರಕ್ತಗಳಿಂದ

ಅವೇತ್ಯ ಮಂಡಿತಂ ದೇಹಂ ಪ್ರಮೋದಮುಪಯಾತಿ ಚ ॥೧೫॥

ವಿಸ್ಮೃತ್ಯ ನಿತ್ಯ ಪ್ರವಹನ್ಮೂತ್ರ ವಿಟ್‌ಶ್ಲೇಷ್ಮ ಸಂಘಕಂ ।
ಪುಷ್ಟಂ ರಸಾಧಿಕ್ಯವಶಾತ್ಪ್ರತಿಕ್ಷಣಂ ವಿಕಾರಿಣಂ ॥೧೬॥

ಸ ಏವ ದೇಹೋ ಜರಸಾ ವ್ಯಾಪ್ತೋ ರೋಗದೂಷಿತಃ ।
ವ್ರಣಾದಿ ಪ್ರವಹನ್ಮಜ್ಜಾ ದುರ್ಗಂಧ ಪ್ರಸರೋದ್ಯತಃ ॥೧೭॥

ಚೈತನ್ಯ ಕಲಯಾ ಹೀನೋ ಜಲಕ್ಲಿನ್ನೋಽತ್ಯಮಂಗಲಃ ।
ಕ್ರಿಮಿರಾಶಿ ಮಯಶ್ಚಾನ್ಯೈರ್ಭಕ್ಷಿತೋ ವಿಣ್ಮಯೋಽಶುಚಿಃ ॥೧೮॥

ಏವಂ ಭೂತದಶಾಯುಕ್ತಂ ಪಶ್ಯನ್ನಪ್ಯನ್ಯದೇಹಕಂ ।
ಮತ್ವಾ ಸ್ವದೇಹ ಮಜರಾಮರ ಮತ್ಯಂತಮೂಢಧೀಃ ॥೧೯॥

ಏವಂ ಪಿಥೇಽತಿ ಬೀಭತ್ಸೇ ನಾರೀದೇಹೇ ನೃದೇಹಕೇ ।
ಪರಸ್ಪರಸ್ಯ ಸೌಂದರ್ಯಂ ದೃಷ್ಟ್ವಾಽತ್ಯಂತ ಸುಮೋಹಿತಾಃ ॥೨೦॥

ಕೂಡಿದ ಈ ದೇಹವನ್ನು ಜನಗಳು ಶ್ರೇಷ್ಠವೂ ಮತ್ತು ಪ್ರೀತಿಪಾತ್ರವೂ ಆದುದು ಎಂದು ತಿಳಿದು, ಬಹು ಸುಂದರವಾದ ವಾಸನೆಯಿಂದ ಕೂಡಿರುವ ಹೂಗಳಿಂದಲೂ ಸುಗಂಧಗಳಿಂದಲೂ ಅದನ್ನು ಅಲಂಕರಿಸುತ್ತಾ ಸಂತೋಷಪಡುತ್ತಾರೆ. ||೧೩-೧೪||

ದೇಹವು ಯಾವಾಗಲೂ ಸುರಿಯುತ್ತಿರುವ ಮಲಮೂತ್ರ ಶ್ಲೇಷ್ಮಗಳ ಸಮೂಹವೆಂಬುದನ್ನು ಜನರು ಮರೆತುಬಿಡುತ್ತಾರೆ. ಆದರೆ ರಸಾಧಿಕ್ಯದಿಂದ ಪುಷ್ಟವಾದ ಮತ್ತು ಯಾವಾಗಲೂ ವಿಕಾರಿಯಾದ ಆ ದೇಹವನ್ನು ಅಲಂಕೃತವಾಗಿ ಮನೋಹರವಾಗಿದೆಯೆಂದು ತಿಳಿದು ಸಂತೋಷಿಸುತ್ತಾರೆ. ||೧೫-೧೬||

ಅದೇ ದೇಹವು ಮುಪ್ಪಿನಿಂದ ಕೂಡಿ ರೋಗವುಳ್ಳದ್ದೂ ಗಾಯಗಳಿಂದ ಸುರಿಯುತ್ತಿರುವ ಕೊಬ್ಬಿನ ದುರ್ಗಂಧದಿಂದ ಕೂಡಿರುವುದೂ ಆಗಿ ಚೈತನ್ಯಶೂನ್ಯವಾಗಿ ನೀರುಸುರಿಯುತ್ತಾ ಅತ್ಯಂತ ಅಮಂಗಲವಾಗಿ ಕ್ರಿಮಿಕೀಟಗಳಿಂದ ಕೂಡಿದುದೂ, ಮಲಮಯವೂ ಅಪರಿಶುದ್ಧವೂ ಆಗಿ ಅಸಹ್ಯಕರವಾಗಿರುತ್ತದೆ. ||೧೭-೧೮||

ಹೀಗೆ ಮತ್ತೊಬ್ಬರ ಶರೀರವು ಮುಪ್ಪಿನಿಂದ ವ್ಯಥೆಪಡುವುದನ್ನು ಪ್ರತಿಯೊಬ್ಬರೂ ಪ್ರತಿದಿವಸವೂ ನೋಡುತ್ತಾರೆ. ಆದರೆ ತಮ್ಮ ದೇಹವನ್ನು ಮಾತ್ರ ಇದಕ್ಕೆ ಮುಪ್ಪೇ ಬರುವುದಿಲ್ಲವೆಂದೂ ಇದು ನಾಶವೇ ಆಗುವುದಿಲ್ಲವೆಂದೂ ಮಂದ

ವಿಚಾರಣೀಯಂ ಸೌಂದರ್ಯಂ ಕಿಂ ತತ್ರಾऽಸ್ತಿ ಸುಸೂಕ್ಷ್ಮಕಂ ।
ಮಲಾಸೃಗಸ್ಥಿ ಸಂಘಾತಮೃತೇ ತತ್ಪ್ರತಿಪಾದ್ಯತಾಂ ॥೨೧॥

ಅಹೋऽತಿಮುಗ್ಧ ದೃಷ್ಟೀನಾಂ ಕುಣಪೇऽತ್ಯಂತಗರ್ಹಿತೇ ।
ನಶ್ವರೇ ದುಃಖದೇ ಚಾऽತಿ ಭಯದೇ ಕ್ಷಣಿಕೇऽಶುಚೌ ॥೨೨॥

ಸೌಂದರ್ಯಂ ಭಾತಿ ಯೇನೇಮೇ ಮೋಹಿತಾಃ ಪ್ರಾರ್ಥಯಂತಿ ಯಂ ।
ಯತ್ಸ್ತ್ರೀಗಾತ್ರಂ ಚಾರುತರಂ ಕಾಮಿನಾಂ ಪ್ರೀತಿವರ್ಧನಂ ॥೨೩॥

ಪುರುಷಾಂಗಾದ್ವಿಶೇಷಃ ಕಸ್ತತ್ರ ಸ್ಯಾದಪ್ಯಣೋರ್ಮಿತಃ ।
ಮಾಂಸಪಿಂಡೌ ಸ್ತನೌ ತೌ ಚ ಸ್ಫೋಟೆ ದುರ್ಮಾಂಸ ಸಂಹಿತೌ॥೨೪॥
ದುರ್ವ್ರಣ ಸ್ಫೋಟ ಸಂಯೋಗೇ ತಯೋಃ ಸೌಂದರ್ಯಮೀಕ್ಷಿತಂ ।

ಬುದ್ಧಿಯಿಂದ ಜನರು ತಿಳಿದು, ಇದೇ ರೀತಿಯಾಗಿ ಭಯಂಕರವಾದ ಸ್ತ್ರೀಶರೀರವನ್ನು ನೋಡಿ ಪರಸ್ಪರ ಸೌಂದರ್ಯಭ್ರಮದಿಂದ ಮುಗ್ಧರಾಗುತ್ತಾರೆ. ||೧೯-೨೦||

ಆ ದೇಹದಲ್ಲಿ ಎಲ್ಲಿ ಸೌಂದರ್ಯವಿರುತ್ತದೆಯೆಂಬುದನ್ನು ವಿಚಾರಮಾಡಬೇಕು. ದೇಹವು ಮಲಮೂತ್ರ, ರಕ್ತ, ಮಾಂಸಗಳ ಸಮೂಹವಾದುದು. ಆದರಲ್ಲಿ ಮಲಮೂತ್ರಗಳಿಲ್ಲದೇ ಸೌಂದರ್ಯವು ಸೂಕ್ಷ್ಮವಾಗಿ ಎಲ್ಲಿರುತ್ತದೆ? ||೨೧||

ಹೆಚ್ಚಾದ ಮುಗ್ಧವಾದ ದೃಷ್ಟಿಯುಳ್ಳ ಈ ಮನುಷ್ಯರು ಅತಿನಿಂದನೀಯವಾದ ಚೈತನ್ಯರಹಿತವಾದ, ನಶ್ವರವಾದ, ದುಃಖಕರವಾದ, ಕೊಂಚಕಾಲವಿದ್ದು ನಾಶವಾಗುವ ಅತಿಭಯಂಕರವಾದ ಈ ಅಶುಚಿಯಾದ ಶರೀರದಲ್ಲಿ, ||೨೨||

ಸೌಂದರ್ಯವನ್ನು ಕಾಣುತ್ತಾರೆ! ಕಾಮುಕರಿಗೆ ಸಂತೋಷವನ್ನುಂಟು ಮಾಡುವ ಮನೋಹರವಾದ ಯಾವ ಸ್ತ್ರೀಶರೀರವುಂಟೋ, ಯಾವ ಶರೀರವನ್ನು ನೋಡಿ ಇವರೆಲ್ಲರೂ ಮೋಹಗೊಳ್ಳುತ್ತಾರೋ, ಯಾವುದನ್ನು ಇವರೆಲ್ಲರೂ ಅಪೇಕ್ಷಿಸುತ್ತಾರೋ, ಅಂತಹ ಹೆಂಗುಸಿನ ಶರೀರದಲ್ಲಿ ಪುರುಷನ ಅವಯವಗಳಿಗಿಂತಲೂ, ಅತಿಶಯವಾದುದೇನಿದೆ? ||೨೩||

ಆ ಸ್ತನಗಳಾದರೋ ಹೊರಹೊರಟಿರುವ ದುರ್ಮಾಂಸದಿಂದ ಕೂಡಿರುವ ಮಾಂಸಖಂಡಗಳು! ಆ ಹೊರಹೊರಟಿರುವ ಕೆಟ್ಟದಾದ ಗಾಯಗಳ ಸಂಬಂಧದಲ್ಲಿ ಈ ನರರು ಸೌಂದರ್ಯಾನುಭವವನ್ನು ಮಾಡುತ್ತಾರೆ. ||೨೪||

ದೇಹೇತ್ಯಂತಾ ಶುಚಿಮಯೇ ಯೇ ಪ್ರೀತಿಮಭಿಯಾಂತ್ಯಹೋ॥೨೫॥

ಧಿಗಸ್ತು ತಾನ್ಕೃಮಿಪ್ರಾಯಾ ನಮೇಧ್ಯ ರಮಣಾನ್ನರಾನ್ ।
ಅವಿಚಾರಸ್ಯ ಮಾಹಾತ್ಮ್ಯಂ ಕಿಂ ವದಾಮ್ಯಹಮೀದೃಶಂ ॥೨೬॥

ಪಶ್ಯನ್ನಪಿ ಮಹಾದೋಷಂ ಗುಣಮೇವಾಭಿಮನ್ಯತೇ ।
ಏವಂ ಕುದೇಹಾಭಿಮತೇಃ ಕಾಮಕ್ರೋಧಾ ದಯೋಽಪ್ಯರಂ ॥೨೭॥

ಭವಂತಿ ಯೇನ ವಿಹತಾ ಭ್ರಮಂತ್ಯುಲ್ಕಾ ಮುಖಾ ಇವ ।
ನ ಕುತ್ರ ಚಿತ್ಸ್ಥಿತಿಂ ಯಾಂತಿ ಭ್ರಮವಾಯುಸ್ಥ ತೂಲವತ್ ॥೨೮॥

ಪ್ರಾಯೋ ಜನಾ ಮಂದಧಿಯೋ ಜಿಹ್ವೋಪಸ್ಥಾ ಪರಾಯಣಾಃ ।
ನ ವಿದಂತ್ಯತಿಸಾನ್ನಿಧ್ಯ ಸ್ಥಿತಂ ಮೃತ್ಯುಂ ಭಯಂಕರಂ ॥೨೯॥

ಯಾರು ಹೀಗೆ ಬಹಳ ಕೊಳಕಾದ ಈ ದೇಹದಲ್ಲಿ ಸಂತೋಷಪಡುತ್ತಾರೋ ಅಂತಹ ಕೃಮಿಸದೃಶರಾದ ಅಮೇಧ್ಯದಲ್ಲಿ ರಮಿಸುವ ಮನುಷ್ಯರಿಗೆ ಧಿಕ್ಕಾರವಿರಲಿ! ||೨೫||

ವಿಚಾರಮಾಡದಿರುವಿಕೆಯ ಈ ಪ್ರಕಾರವಾದ ಮಾಹಾತ್ಮ್ಯೆಯನ್ನು ಎಷ್ಟು ಹೇಳಲು ಸಾಧ್ಯ? ಅವರು ಮಹಾದೋಷವೆಂದರಿತಿದ್ದರೂ ಇದು ದೋಷಕಾರಿಯಲ್ಲ, ಸದ್ಗುಣಗಳಿಂದ ಕೂಡಿ ನೋಡಲು ಯೋಗ್ಯವಾದುದು ಎಂದು ತಿಳಿಯುತ್ತಾರೆ.||೨೬||

ಈ ಕೆಟ್ಟ ದೇಹದಲ್ಲಿನ ಅಭಿಮಾನಕ್ಕೆ ಕಾಮಕ್ರೋಧವೇ ಮೊದಲಾದುವು ಕಾರಣಗಳು. ಆ ಕಾಮಕ್ರೋಧಗಳಿಗೆ ಸಿಕ್ಕಿ ನರರು ಕೊಳ್ಳಿಯ ಜ್ವಾಲೆಯಂತಿರುವ ದುಃಖದಲ್ಲಿ, ತೊಳಲುತ್ತಾರೆ. ಅವರು ಎಲ್ಲಿಯೂ ಸ್ಥಿರವಾಗಿ ನಿಲ್ಲಲಾರರು. ಹೇಗೆಂದರೆ, ಸುಂಟರಗಾಳಿಗೆ ಸಿಕ್ಕಿದ ಹತ್ತಿಯು ಹೇಗೆ ಸುತ್ತುತ್ತದೋ ಹಾಗೆ ಕಾಮಕ್ರೋಧಗಳಿಗೆ ಸಿಕ್ಕಿದ ನರರು ಸಂಸಾರದುಃಖದಲ್ಲಿ ಅಲೆಯುತ್ತಾರೆ. ||೨೭-೨೮||

ಮೂಢರಾದ ಜನರು ಯಾವಾಗಲೂ ಕಾಮುಕರಾಗಿ ಕಾಮತೃಪ್ತಿಗಾಗಿ ಪ್ರಯತ್ನಪಡುತ್ತಾ ಅತಿ ಸಮೀಪದಲ್ಲಿ ಒದಗಿ ಬಂದಿರುವ ಭಯಂಕರವಾದ ಮೃತ್ಯುವನ್ನೂ ತಿಳಿಯಲಾರರು! ||೨೯||

ಈಹಂತೇ ಚಾತಿ ದೀರ್ಘಾರ್ಥ ಸಿದ್ಧಿಮುಪ್ಯಲ್ಪ ಜೀವಿತಾಃ ।
ಸ್ವಾರ್ಥಸಿದ್ಧ್ಯೈ ಪರಾನ್ಘ್ನಂತಿ ಕಾಮಕ್ರೋಧ ಹತಾಽಽಶಯಾಃ ॥೩೦॥

ಕಾಮಕ್ರೋಧ ಹತಾ ಮರ್ತ್ಯಾಃ ಸುಖಸಿದ್ಧ್ಯೈ ಸದೋದ್ಯತಾಃ ।
ನ ಕ್ವಚಿತ್ಸುಖಮಾಯಾಂತಿ ಕ್ಷಣಂ ಕಿಂಚಿದಪಿ ಧ್ರುವಂ ॥೩೧॥

ದುರಂತಾ ಶಾಗಾಧವಹ್ನಿ ಜ್ವಾಲಾ ಪ್ಲುಷ್ಟಾತ್ಮನಾಂ ನೃಣಾಂ ।
ಕುತೋ ವೈರಾಗ್ಯಪಾಟೀರ ಪಂಕಲೇಪನಜಂ ಸುಖಂ ॥೩೨॥

ಧನ್ಯಾಸ್ತತೋ ಹಿ ತಿರ್ಯಂಚಃ ಸಂಶಾಂತಮನಸಃ ಸುಖಂ ।
ಕ್ಷುದ್ರಾ ನಿವೃತ್ತಿ ಮಾತ್ರಾರ್ಥಾ ಸ್ತತ್ಕಾಲಾರ್ಥ ಕೃತೋದ್ಯಮಾಃ ॥೩೩॥
ಅಸಂಗ್ರಹ ಪರಾ ನಿತ್ಯಂ ಶಯಾನಾಃ ಸ್ವಸ್ಥಮಾನಸಾಃ ।

ಮನುಷ್ಯರು ತಾವು ದೀರ್ಘಕಾಲ ಬದುಕಿರಲಾರೆವು. ತಮ್ಮ ಆಯುಸ್ಸು ಮಿತವಾದುದೆಂದು ತಿಳಿದಿದ್ದರೂ ತಮ್ಮ ಕೆಲಸಗಳಲ್ಲಿ ಶಾಶ್ವತವಾದ ಫಲಗಳನ್ನು ಅಪೇಕ್ಷಿಸುತ್ತಾರೆ. ತಮ್ಮ ತಮ್ಮ ಸ್ವಾರ್ಥಕ್ಕಾಗಿ ಕಾಮಕ್ರೋಧಗಳಿಗೆ ವಶೀಭೂತ ರಾಗಿ ಬುದ್ಧಿಯಿಲ್ಲದವರಾಗಿ ಇನ್ನೊಬ್ಬರನ್ನು ಕೊಲ್ಲುತ್ತಾರೆ. ॥೩೦॥

ಕಾಮಕ್ರೋಧಗಳಿಗೆ ವಶೀಭೂತರಾದ ಮನುಜರು ಸುಖಕ್ಕಾಗಿ ಯಾವಾ ಗಲೂ ಶ್ರಮಿಸುತ್ತಾರೆ. ಆದರೆ ಅವರು ಕೊಂಚವಾದರೂ ಸುಖವನ್ನು ಹೊಂದ ಲಾರರು. ಇದು ನಿಶ್ಚಯವಾದುದು. ॥೩೧॥

ಕೆಟ್ಟ ಅಸೆಯೆಂಬ ಜ್ವಾಲೆಯಿಂದ ವ್ಯಾಪೃತವಾದ ಮನಸ್ಸುಳ್ಳ ಮನುಷ್ಯರಿಗೆ ವೈರಾಗ್ಯವೆಂಬ ಪಾಟೀರವೆಂಬ ಗಂಧದ ಲೇಪನದಿಂದುಂಟಾದ ಸುಖತಾನೇ ಎಲ್ಲಿ ಯದು ? ॥೩೨॥

ಈ ಮನುಜರಿಗಿಂತಲೂ ಪ್ರಾಣಿಗಳು ಶಾಂತವಾದ ಮನಸ್ಸಿನಿಂದ ಕೂಡಿ ಸುಖಿ ಗಳಾಗಿರುತ್ತವೆ. ಅವು ಸಂಗ್ರಹಬುದ್ಧಿಯಿಲ್ಲದವು. ಹಸಿವುಂಟಾದಾಗ ಮಾತ್ರ ಹಸಿವು ತೀರಲು ಎಷ್ಟು ಕೆಲಸಬೇಕೋ ಅಷ್ಟನ್ನು ಮಾಡಿ ತೃಪ್ತಿಗೊಂಡು ಶಾಂತವಾಗಿ ಯಾವಾ ಗಲೂ ಮಲಗಿರುತ್ತವೆ. ಆ ಪ್ರಾಣಿಗಳು ನರರಿಗಿಂತಲೂ ಧನ್ಯವಾದವುಗಳು. ॥೩೩॥

ಅಹೋ ಧಿಕ್ಕಾಮವಶತಾಂ ಸದಾ ಸಂತಾಪಕಾರಿಣೀಂ ॥೩೪॥

ದುಷ್ಪೂರಾಂ ಸರ್ವತೋಽಪಾಯೈಃ ಚಿರಕಾಲಾರ್ಥ ಸಾಧನೈಃ ।
ಲೋಕೇ ಯಾವದ್ಧನಂ ಧಾನ್ಯಂ ಪಶವಃ ಸ್ತ್ರಿಯ ಏವಚ ॥೩೫॥

ನ ತಸ್ಯ ತಾವತ್ಪ್ರಾಪ್ತ್ಯಾಽಪಿ ಕ್ಷಣಂ ನಿಶ್ಚಿಂತತಾ ಭವೇತ್ ।
ಅಹೋ ಮಹಾದುಃಖಿತಾಸ್ತೇ ಯೇಷಾಂ ಕಾಮಹತಂ ಮನಃ ॥೩೬॥

ಸರ್ವ ಸಂಪತ್ಸಮೃದ್ಧಾನಾಮಪಿ ಸಾಮ್ರಾಜ್ಯ ಮೃಚ್ಛತಾಂ ।
ಧನಮೇವ ಹಿ ದುಃಖಾನಾಂ ಮೂಲಂ ನಿತ್ಯಭಯಾವಹಂ ॥೩೭॥

ದುಃಖೇನ ಪ್ರಾಪ್ಯತೇ ಲೋಕೈಃ ಕಾಯಕ್ಲೇಶಾದಿಭಿಶ್ಚಿರಂ ।
ತದ್ಧನಪ್ರಾಪ್ತಿಮಾತ್ರೇಣ ಮಿತ್ರಾಣ್ಯಪಿ ಚ ಶತ್ರವಃ ॥೩೮॥

ಆತ್ಮಭೂತಾತ್ಮಜೋಽಪ್ಯಸ್ಮೈ ದ್ರುಹ್ಯತಿ ಪ್ರೇಯಸೀ ಪ್ರಿಯಾ ।
ಮಾತುಃ ಪಿತುಃ ಪ್ರಿಯಾನ್ಮಿತ್ರಾಚ್ಛಂಕತೇ ಕರಟೋ ಯಥಾ ॥೩೯॥
ಮೃತ್ಯುಮಸ್ಯ ಪ್ರಾರ್ಥಯಂತಿ ಪುತ್ರದಾರಾದಯಃ ಪ್ರಿಯಾಃ ।

ಅನೇಕ ಕಾಲಗಳಿಂದಲೂ ಮಾಡಿದ ಅರ್ಥಸಾಧನಗಳಿಂದಲೂ, ಸಕಲ ಉಪಾಯಗಳಿಂದಲೂ, ತೃಪ್ತಿಗೊಳ್ಳಲಸಾಧ್ಯವೂ, ಯಾವಾಗಲೂ ಸಂತಾಪಕಾರಿಯೂ ಆದ ಕಾಮಾಧೀನತೆಗೆ ಧಿಕ್ಕಾರವು. ||೩೪||

ಪ್ರಪಂಚದಲ್ಲಿರುವ ಸಕಲ ಧನಧಾನ್ಯಪಶುಗಳು ಮತ್ತು ಸ್ತ್ರೀಯರು ಸಿಕ್ಕಿದರೂ ಮನುಷ್ಯನು ಕ್ಷಣಕಾಲವೂ ಚಿಂತಾಶೂನ್ಯನಾಗಿರಲಾರನು. ||೩೫||

ಸಕಲ ಸಂಪತ್ತಿನಿಂದ ಕೂಡಿಯೂ ಸಾಮ್ರಾಜ್ಯವನ್ನು ಹೊಂದಿಯೂ ಯಾರ ಮನಸ್ಸು ಕಾಮಪೀಡಿತವಾಗಿರುವುದೋ ಅವರು ದುಃಖಿಗಳು. ||೩೬||

ಧನವು ಸಕಲ ದುಃಖಗಳಿಗೂ ಕಾರಣವಾದುದು. ಯಾವಾಗಲೂ ಭಯಕಾರಿಯೂ, ಅಂತಹ ಧನವನ್ನು ಜನರು ಬಹಳಕಾಲ ಶರೀರಶ್ರಮದಿಂದ ಬಹು ಕಷ್ಟದಿಂದ ಪಡೆಯುತ್ತಾರೆ. ||೩೭||

ಬಹು ಕಷ್ಟಗಳನ್ನನುಭವಿಸಿ ಹಣಸಂಪಾದಿಸಿದ್ದರಿಂದಲೇ ಮಿತ್ರರೂ ಶತ್ರುಗಳಾಗುತ್ತಾರೆ. ತನ್ನ ಪ್ರತಿರೂಪನಾದ ಮಗ, ತಾನು, ತನ್ನ ಪ್ರೀತಿಗೆ ಸರ್ವಸ್ವಳೆಂದು ತಿಳಿದಿದ್ದ ಹೆಂಡತಿ, ತಂದೆ, ತಾಯಿ, ಪ್ರಿಯನಾದ ಸ್ನೇಹಿತ, ಎಲ್ಲರೂ ಸಹ ಇವನಿಗೆ

ತಸ್ಮಾದ್ಧನೇನಾತ್ಮಮೃತ್ಯು ಸಮೇನ ಕಿಮು ವೈ ಸುಖಂ ॥೪೦॥

ತಥಾಽಪ್ಯವಿದ್ವಾನ್ಸತತ ಮೋಹತೇ ಮುಗ್ಧ ಏವ ತು ।
ಏವಂ ಭೂತ ಧನೇನೇಹ ಕುಟುಂಬಾನಾಂ ತು ರಕ್ಷಣಂ ॥೪೧॥

ಕ್ರಿಯತೇ ಬಹ್ವನರ್ಥಾಯ ಮಹಾಯಾಸೇನ ಸರ್ವದಾ ।
ಕುಟುಂಬಂ ಪುತ್ರದಾರಾದಿ ತದ್ವೃದ್ಧ್ಯಭಿನಿವೇಶತಃ ॥೪೨॥

ಮನ್ಯತೇ ಪುತ್ರದಾರಾದ್ಯಾ ಇತ್ಯೇವಮಭಿಮಾನಯುನ್ ।
ಅಭಿಮಾನಮೃತೇ ಕಿಂಚಿತ್ಸಂಬಂಧೋಽಪಿ ನ ಲಭ್ಯತೇ ॥೪೩॥

ತಚ್ಚಾಂತೇ ಬಹುಶೋಕಾಯ ಯಥಾಕೋಶಕೃತಃ ಕ್ರಿಯಾ ।
ಚಿರಂ ಸಂಯೋಗಿನಾಂ ಚಾಽಪಿ ಸ್ಯಾದೇವಾಂತೇ ವಿಯೋಗತಾ ॥೪೪॥
ಲೋಕೇಽವಶ್ಯಂ ಯುಗ್ಮಭೂತಾಃ ಶೋಚಂತ್ಯೇಕ ವಿಯೋಗತಃ ।

ಸಾವನ್ನು ಕಾಗೆಯಂತೆ ಹಾರೈಸುತ್ತಾರೆ. ಎಲ್ಲರೂ ಇವನಿಗೆ ಬೇಕಾದವರೇ, ಇವನ ಹೆಂಡಿರು ಮಕ್ಕಳೇ, ಹಣವನ್ನು ಕಂಡದ್ದೇ ಆದರೆ ಎಲ್ಲರೂ ವಿರೋಧಿಗಳೇ ಆಗುತ್ತಾರೆ. ॥೩೮-೩೯॥

ಆದಕಾರಣ ತನ್ನ ಸಾವಿಗೆ ಸಮಾನವಾದ ಆಧನದಿಂದ ಮನುಷ್ಯನಿಗೆ ಏನು ಸುಖವು ದೊರಕುವುದು? ಆದರೂ ಅಜ್ಞಾನಿಯಾದ ಮನುಜನು ಧನದಲ್ಲಿ ಮೋಹಗೊಂಡು ಯಾವಾಗಲೂ ಆ ಹಣವನ್ನೇ ಅಪೇಕ್ಷಿಸುತ್ತಾನೆ. ॥೪೦॥

ಮನುಷ್ಯನು ಈ ಪ್ರಕಾರವಾದ ಹಣದಿಂದ ಅನೇಕ ಅನರ್ಥಗಳಿಗಾಗಿ ಹೆಂಡಿತಿ ಮಕ್ಕಳುಗಳಿಂದ ಕೂಡಿದ ಕುಟುಂಬವನ್ನು ಇವರು ನನ್ನ ಹೆಂಡಿತಿ ಮಕ್ಕಳು ಎಂಬ ಅಭಿಮಾನವುಳ್ಳವನಾಗಿ ವ್ಯರ್ಥವಾದ ಅಭಿನಿವೇಶದಿಂದ ಬಹು ಕಷ್ಟಗಳನ್ನು ಅನುಭವಿಸಿಯೂ ರಕ್ಷಿಸುತ್ತಾನೆ. ॥೪೧-೪೨॥

ಅಭಿಮಾನ ಹೋದನಂತರ ಸ್ವಲ್ಪವೂ ಸಂಬಂಧವು ಉಳಿದಿರಲಾರದು. ಆ ಸಂಬಂಧವೂ ಕೂಡ ಹಣಕ್ಕಾಗಿ ಮಾಡಲ್ಪಡುವ ಕೆಲಸದಂತೆ ಕಡೆಯಲ್ಲಿ ದುಃಖದಾಯಕವಾಗುತ್ತದೆ. ॥೪೩॥

ಬಹುಕಾಲದಿಂದ ಸಂಬಂಧವುಳ್ಳವರಾಗಿದ್ದರೂ ದಂಪತಿಗಳಿಗೆ ಕಡೆಯಲ್ಲಿ ವಿಯೋಗ ಉಂಟಾಗಿಯೇ ಆಗುತ್ತದೆ. ಪ್ರಪಂಚದಲ್ಲಿ ಜೊತೆಯಲ್ಲಿರತಕ್ಕವರು ಒಬ್ಬರ ವಿಯೋಗದಿಂದ ಮತ್ತೊಬ್ಬರು ದುಃಖಿಸುತ್ತಾರೆ. ॥೪೪॥

ಏವಂ ವಿಯೋಗಪರ್ಯಂತಂ ಸಂಯೋಗಪ್ರೀತಿಸಂಯುತಾಃ ॥೪೫॥

ಶೋಚಂತ್ಯತಿತರಾಮಂತ್ಯೇ ಸಂಯೋಗಫಲಮೀದೃಶಂ ।
ಫಲವ್ಯತ್ಯಯ ಏವಾಸ್ತಿ ಸಂಯೋಗಸ್ಯ ತು ಸರ್ವದಾ ॥೪೬॥

ಅವಿಚಾರ್ಯೈವ ಪರ್ಯಂತಂ ದಾರಾದ್ಯೈಃ ಸಂಯುತಾ ನರಾಃ ।
ನಿಶ್ಚಿತ್ಯ ಸ್ಥಿರಸಂಯೋಗಂ ಮೂಢಾಃ ಕೌಟುಂಬಿನೋ ನರಾಃ ॥೪೭॥

ಸದಾ ಕುಟುಂಬೈಕ ರತಾಃ ಶೋಚಂತ್ಯಂತೇಽತಿ ದುಃಖಿತಾಃ ।
ಏಷ ಏವ ಮಹಾದೋಷೋ ಧನೇಷ್ವಿಹ ಜನೇಷು ಚ ॥೪೮॥

ಅಸ್ಥೈರ್ಯಂ ಸರ್ವ ಸುಗುಣ ಘಸ್ಮರಂ ದುರ್ನಿವಾರಣಂ ।
ಏತೇನಾಸ್ತಂಗತಾಸ್ಸರ್ವೇ ಗುಣಾ ನಿಶ್ಶೇಷಿತಾ ಅತಃ ॥೪೯॥
ಸಂಗೋ ನೈವ ವಿಧೇಯಃ ಸ್ಯಾಜ್ಜಾತು ಸ್ವಕ್ಷೇಮ ಮಿಚ್ಛತಾ ।

ಈ ಪ್ರಕಾರವಾಗಿ ವಿಯೋಗವುಂಟಾಗುವವರೆಗೂ ಜೊತೆಯಲ್ಲಿ ಪ್ರೀತಿಯಾಗಿದ್ದು ಕಡೆಯಲ್ಲಿ ಬಹು ದುಃಖಪಡುತ್ತಾರೆ. ಸಂಬಂಧದಿಂದುಂಟಾಗುವ ಫಲವು ಈ ಪ್ರಕಾರವಾದುದು. ಸಂಬಂಧದ ಫಲವಾದರೋ ಯಾವಾಗಲೂ ಕಡೆಯಲ್ಲಿ ವಿರುದ್ಧವಾದುದೇ ಸರಿ. ॥೪೫-೪೬॥

ಆದರೂ ಮನುಜರು ವಿಚಾರಮಾಡದೇ ಕೊನೆಯವರೆವಿಗೂ ಹೆಂಡಿತಿ ಮಕ್ಕಳೇ ಮೊದಲಾದವರೊಡನೆ ಕೂಡಿ ಇರುತ್ತಾರೆ. ಮೂಢರಾದ ಕುಟುಂಬಿಗಳಾದ ಮನುಷ್ಯರು ತಮ್ಮಲ್ಲಿರುವ ಸಂಬಂಧವು ಸ್ಥಿರವಾದುದೆಂದು ನಿಶ್ಚಯಿಸಿ ಕುಟುಂಬದ ಆಗುಹೋಗುಗಳಲ್ಲೇ ಮಗ್ನರಾಗಿ ಕಡೆಗೆ ಬಹು ದುಃಖಕ್ಕೆ ಒಳಗಾಗುತ್ತಾರೆ. ॥೪೭॥

ಈ ಪ್ರಪಂಚದಲ್ಲಿ ಧನಗಳಲ್ಲೂ ಮತ್ತು ಜನಗಳಲ್ಲೂ ಇರುವ ಚಂಚಲತೆ ಮತ್ತು ಸಕಲ ಸದ್ಗುಣಗಳ ನಾಶವೂ ನಿವಾರಿಸಲಸಾಧ್ಯವಾದುದು. ಇದೇ ದೊಡ್ಡದಾದ ದೋಷವು. ಇದು ಸಂಬಂಧದಿಂದುಂಟಾದುದು. ॥೪೮॥

ಈ ಸಂಬಂಧದಿಂದ ಸಕಲ ಸದ್ಗುಣಗಳೂ ನಾಶವಾಗುವು. ಆದುದರಿಂದ ತನ್ನ ಕ್ಷೇಮವನ್ನಿಚ್ಛಿಸುವವನು ಎಂದಿಗೂ ಮತ್ತೊಬ್ಬರಲ್ಲಿ ಇಂತಹ ಅಭಿಮಾನದ ಸಂಬಂಧವನ್ನು ಬಯಸಬಾರದು. ಬೆಳೆಸಲೂ ಬಾರದು. ॥೪೯॥

ಸರ್ವಂ ಭಯೇನ ಸಂವ್ಯಾಪ್ತಂ ಮೃತ್ಯುನಾಽತಿ ಬಲೀಯಸಾ ॥೫೦॥

ಧನಂ ಗೃಹಂ ತಥಾ ದಾರಾಃ ಸ್ವರ್ಗಾದ್ಯಮಪಿ ಕರ್ಮಜಂ ।
ತಸ್ಮಾನ್ನೇಚ್ಛೇತ ಕಿಮಪಿ ಮೃತ್ಯುಗ್ರಸ್ತಂ ಚ ಶೋಕದಂ ॥೫೧॥

ಅಭಯಂ ಸರ್ವದೇಚ್ಛೇತ ನ ಶೋಚತಿ ಯತೋ ಜನಃ ।
ವ್ರಜಾಮಿ ತಂ ಮಹಾತ್ಮಾನಂ ದತ್ತಾತ್ರೇಯಗುರುಂ ಮುನಿಂ ॥೫೨॥

ಶರಣಂ ಕ್ಷೇಮಮನ್ವಿಚ್ಛನ್ನಾತ್ಮನಸ್ಸರ್ವತೋ ಭಯಂ ।
ಏವಂ ಮಾರ್ಗೇ ಚಿಂತಯಾನಃ ಪರ್ವತೇಂದ್ರಮವೈಕ್ಷತ ॥೫೩॥

ಪುರೋಭಾಗೇ ರೋಚಮಾನ ಶೃಂಗಾಕ್ರಾಂತ ವಿಹಾಯಸಂ ।
ಶೃಂಗ ಸಂಘಾತ ವಿಶ್ರಾಂತ ಬಲಾಹಕ ಕದಂಬಕಂ ॥೫೪॥
ಅಮರೀಗಣ ಸಂಗೀತ ನಾದಘುಂಘುಮಿತಾಂತರಂ ।

ಬಹು ಶಕ್ತಿಶಾಲಿಯಾದ ಮೃತ್ಯುಭಯದಿಂದ ಈ ಸಕಲವೂ ವ್ಯಾಪ್ತವಾಗಿರುತ್ತದೆ. ಹಣ ಮನೆ ಹೆಂಡಿತಿ ಮತ್ತು ಸ್ವರ್ಗವೇ ಮೊದಲಾದುವನ್ನು ಅವರವರ ಕರ್ಮಕ್ಕೆ ಅನುಸಾರವಾಗಿ ಪಡೆಯುತ್ತಿರುತ್ತಾರೆ. ಸಕಲವೂ ದುಃಖಕರವೂ ಮೃತ್ಯುವಿನಿಂದ ಕೂಡಿರುವುದೂ ಆದುದರಿಂದ ಈ ಯಾವುದನ್ನೂ ಅಪೇಕ್ಷಿಸಬಾರದು. ಆದುದರಿಂದ ॥೫೦-೫೧॥

ಅಭಯತತ್ತ್ವದಿಂದ ರಕ್ಷಣೆಯನ್ನು ಎಲ್ಲರೂ ಎಲ್ಲ ಕಾಲದಲ್ಲಿಯೂ ಅಪೇಕ್ಷಿಸಬೇಕು. ಆತ್ಮನ ಕ್ಷೇಮವನ್ನೂ ಎಲ್ಲ ರೀತಿಯಿಂದಲೂ ಅಭಯವನ್ನೂ ಅಪೇಕ್ಷಿಸುವವನಾಗಿ, ಯಾವನ ಸಹವಾಸದಿಂದ ಜನವು ದುಃಖಿಸುವುದಿಲ್ಲವೋ ಅಂತಹ ಮಹಾತ್ಮನಾದ ದತ್ತಾತ್ರೇಯಗುರುವಿನ ಸಮೀಪಕ್ಕೆ ಹೋಗುತ್ತೇನೆ. ॥೫೨॥

ಹೀಗೆ ಪರಶುರಾಮನು ದಾರಿಯಲ್ಲಿ ಯೋಚಿಸುತ್ತಾ ಬರುತ್ತಿರಲು ಎದುರುಗಡೆಯಲ್ಲಿ ಆಕಾಶವನ್ನು ಮುಟ್ಟುವಷ್ಟು ಎತ್ತರವಾದ ತನ್ನ ಶಿಖರಗಳಿಂದ ಕಂಗೊಳಿಸುತ್ತಿರುವ ಪರ್ವತಶ್ರೇಷ್ಠವನ್ನು ನೋಡಿದನು. ॥೫೩॥

ದೇವತೆಗಳ ಸಮೂಹವು ಯಾವ ಪರ್ವತಗಳ ಶಿಖರಗಳ ಸಮೂಹದಲ್ಲಿ ಯಾವಾಗಲೂ ನೆಲಸಿದೆಯೋ? ಯಾವ ಪರ್ವತಮಧ್ಯಭಾಗವು ದೇವತಾಸ್ತ್ರೀಯರ ಸಂಗೀತದಿಂದ ಯಾವಾಗಲೂ ಪ್ರತಿಧ್ವನಿತವಾಗುತ್ತಿದೆಯೋ, ಎಲ್ಲಿ ನರ್ತನ ಮಾಡುತ್ತಿರುವ ಅಪ್ಸರಸ್ತ್ರೀಯರ ಕಾಲ್ಕಡಗಗಳ ಧ್ವನಿಯ ಝೇಂಕಾರವು ಕೇಳಿಬರುತ್ತದೋ,

ನೃತ್ಯದಪ್ಸರಸಾಂ ಶ್ರೇಣೀನೂಪುರಾರಾವ ಝೋಂಕೃತಂ ॥೫೫॥

ದೋಲಲೋಲಾ ವ್ಯಗ್ರಸಿದ್ಧ ಪುರಂಧ್ರೀಗಣ ಸುಂದರಂ।
ಮೈರೇಯು ಕ್ಷೀವ ಯಕ್ಷಸ್ತ್ರೀ ಸಂಕ್ರೀಡದ್ಗುಹ್ಯಕಾವೃತಂ ॥೫೬॥

ಕದಂಬಕುಸುಮೋದಂ ಚ ತ್ಸೌರಭಾ ಭರಿತಾಂತರಂ।
ಸೌಗಂಧಿಕ ಸುಗಂಧಾಢ್ಯಂ ಮುಂದಗಂಧವಹಸ್ಥಲಂ ॥೫೭॥

ಪದ್ಮಿನೀ ಪದ್ಮ ಸಂರಾಜದ್ಧಂಸ ಚಕ್ರಾಂಗ ಸಾರಸಂ।
ಭೃಂಗೀ ನಿಕರ ಝುಂಕಾರ ಪರಿಬೃಂಹಿತ ಕುಂಜಕಂ ॥೫೮॥

ಏವಂ ಶೋಭಾಮವೇಕ್ಷನ್ಸ ಪ್ರಾಪ್ತವಾನಂತಿಕಂ ಗಿರೇಃ।
ಗಂಧಮಾದನ ಸಂಜ್ಞಸ್ಯ ಗೀರ್ವಾಣಾ ವಸತೇಸ್ತದಾ ॥೫೯॥

ಯಾವ ಪರ್ವತವು ಉಯ್ಯಾಲೆ ಆಡುವುದರಲ್ಲಿ ತೊಡಗಿರುವ ದೇವಗಂಧರ್ವ ಸ್ತ್ರೀಯರಿಂದ ಕೂಡಿ ಸುಂದರವಾಗಿರುವುದೋ, ಅಂತಹ ಪರ್ವತರಾಜನಾದ ಗಂಧ ಮಾದನಪರ್ವತವನ್ನು ಪರಶುರಾಮನು ಎದುರಿಗೆ ಕಂಡನು. ॥೫೪-೫೫॥

ಎಲ್ಲಿ ಮದ್ಯಮತ್ತರಾದ ಯಕ್ಷಸ್ತ್ರೀಯರ ಕ್ರೀಡೆಗಳಿಂದ ಕೂಡಿದ ಗುಹೆಗಳು ಇವೆಯೋ, ಯಾವ ಪರ್ವತದ ಮಧ್ಯಪ್ರದೇಶವು ಈಚಲ ಹೂಗಳಿಂದ ಹೊರಡುವ ಸೌರಭದಿಂದ ತುಂಬಿದೆಯೋ, ಯಾವ ಪರ್ವತವು ಸುಗಂಧಯುಕ್ತವಾದ ಹೂಗಳಿಂದ ಪ್ರಸರಿಸುತ್ತಿರುವ ಸುಗಂಧದಿಂದ ಕೂಡಿರುವುದೋ, ಎಲ್ಲಿ ಮಂದಮಾರುತವು ಯಾವಾಗಲೂ ಬೀಸುವುದೋ, ॥೫೬-೫೭॥

ಕಮಲಗಳ ಸುತ್ತಲೂ ವಿಹರಿಸುತ್ತಿರುವ ಹಂಸ, ಚಕ್ರವಾಕ, ಮತ್ತು ಸಾರ ಸಪಕ್ಷಿಗಳಿಂದ ಕೂಡಿ ಪ್ರಕಾಶಿಸುತ್ತಿರುವ ಪದ್ಮಸರೋವರಗಳು ಯಾವ ಪರ್ವತದಲ್ಲಿ ವೆಯೋ, ಎಲ್ಲಿ ಹೆಣ್ಣುದುಂಬಿಗಳ ಝೇಂಕಾರದಿಂದ ಪ್ರತಿಧ್ವನಿತವಾಗುತ್ತಿರುವ ಕುಂಜ ವನಗಳು ರಂಜಿಸುತ್ತಿರುವವೋ, ಅಂತಹ ಶ್ರೇಷ್ಠಪರ್ವತವನ್ನು ಪರಶುರಾಮನು ಎದುರಿಗೆ ನೋಡಿದನು. ॥೫೮॥

ಈ ರೀತಿಯಾದ ಪರ್ವತದ ಸೌಂದರ್ಯವನ್ನು ಪರಶುರಾಮನು ನೋಡುತ್ತಾ ದೇವತೆಗಳಿಗೆ ಆವಾಸಸ್ಥಾನವಾದ ಗಂಧಮಾದನ ಎಂದು ಹೆಸರುಳ್ಳ ಆ ಪರ್ವತದ ಸಮೀಪಕ್ಕೆ ಬಂದನು. ॥೫೯॥

ಅತ್ರಾಸ್ತೇ ಸ ಮಹಾಯೋಗೀ ಯಸ್ಸಂವರ್ತೇನ ವರ್ಣಿತಃ ।
ದೀನಾನ್ ಜನಾನುದ್ದಿಧೀರ್ಷುರ್ಭವಪಂಕಾಬ್ಧಿ ವಿಪ್ಲುತಾನ್ ॥೬೦॥

ಇತಿ ಚಿಂತಯತಸ್ತಸ್ಯ ದೃಷ್ಟಿಗೋಚರಿತಾಽಭವತ್ ।
ಪರ್ಣಶಾಲಾ ತಸ್ಯಮುನೇರ್ಯದ್ದರ್ಶನ ಪಿಪಾಸಿತಃ ॥೬೧॥

ನನು ಶಾಲಾ ತಸ್ಯ ಭವೇದಾಂಗಿರಸ ಗುರೋರ್ಮುನೇಃ ।
ನೂನಂ ಮಮಾಲ್ಪಭಾಗ್ಯಸ್ಯ ದೈವಮದ್ಯ ಪ್ರಫುಲ್ಲಿತಂ ॥೬೨॥

ಅಹೋ ಜನಾನಾಂ ಕಾಲೇನ ಭಾಗ್ಯಮಭ್ಯುದಿತಂ ಭವೇತ್ ।
ಅದ್ಯಾಹಂ ಸಂಪ್ರಪಶ್ಯಾಮಿ ತತ್ಪಾದ ಸರಸೀರುಹಂ ॥೬೩॥

ಸಂಸಾರ ದಾವ ತಾಪಘ್ನ ಮಮೃತಾಂಭೋಧಿ ವರ್ಷಣಂ ।
ಸ ಏವಂ ಚಿಂತಯನ್ ರಾಮಃ ಶಾಲಾದ್ವಾರಮುಪಾಗತಃ ॥೬೪॥
ದೃಷ್ಟವಾನ್ ದ್ವಾರದೇಶಸ್ಥಂ ಬ್ರಾಹ್ಮಣಂ ಧ್ಯಾನತತ್ಪರಂ ।

ಸಂವರ್ತಮುನಿಯಿಂದ ವರ್ಣಿತನಾದ ಆ ಮಹಾಯೋಗಿಯೂ, ಪ್ರಸಿದ್ಧನೂ ಆದ ದತ್ತಾತ್ರೇಯ ಮುನಿಯು ಸಂಸಾರವೆಂಬ ಕೆಸರಿನ ಸಮುದ್ರದಲ್ಲಿ ಬಿದ್ದು ತೊಳಲುತ್ತಿರುವ ದೀನರಾದ ಜನರನ್ನು ಉದ್ಧಾರಮಾಡಬೇಕೆಂಬ ಉದ್ದೇಶದಿಂದ ಈ ಪರ್ವತ ಪ್ರದೇಶದಲ್ಲಿ ವಾಸಿಸುತ್ತಿದಾನೆ. ॥೬೦॥

ಹೀಗೆಂದು ಯೋಚಿಸುತ್ತಿರುವ ಆ ಪರಶುರಾಮನಿಗೆ ಅವನು ಯಾರ ದರ್ಶನಕ್ಕಾಗಿ ತವಕಪಡುತ್ತಿದ್ದನೋ ಆ ದತ್ತಾತ್ರೇಯಮುನಿಯ ಆಶ್ರಮವು ಕಂಡಿತು. ॥೬೧॥

ಈ ಎದುರಿಗೆ ಕಾಣುತ್ತಿರುವ ಪರ್ಣಶಾಲೆಯು ಆ ಅಂಗಿರಸ ಗುರುವಾದ ದತ್ತಾತ್ರೇಯ ಮುನಿಯ ಆಶ್ರಮವಿರಬಹುದು. ಓಹೋ ! ಅಲ್ಪಭಾಗ್ಯಶಾಲಿಯಾದ ನನ್ನ ಭಾಗ್ಯವು ಈಗ ಎದ್ದು ಮೆರೆಯಿತು. ಪ್ರಪಂಚದಲ್ಲಿ ಕಾಲಕ್ರಮದಲ್ಲಿ ಅವರವರ ಭಾಗ್ಯವು ತಪ್ಪದೆ ಫಲಕಾರಿಯಾಗುತ್ತದೆ. ॥೬೨॥

ಸಂಸಾರವೆಂಬ ಕಾಡುಗಿಚ್ಚಿನ ಜ್ವಾಲೆಯ ತಾಪವನ್ನು ನಾಶಮಾಡುವ, ಅಮೃತವನ್ನು ಸುರಿದಂತೆ ಸಂತೋಷವನ್ನುಂಟುಮಾಡುವ ಆ ದತ್ತಾತ್ರೇಯನ ಪಾದ ಕಮಲಗಳನ್ನು ಈ ದಿವಸ ನೋಡುತ್ತೇನೆಂದು ಯೋಚಿಸುವವನಾಗಿ ಪರಶುರಾಮನು

ತದ್ಧ್ಯಾನ ಭಂಗ ಭೀತ್ಯಾಽಥ ಸಂಸ್ಥಿತೋ ದೂರತಃ ಕ್ಷಣಂ ॥೬೫॥

ಉನ್ಮೀಲಿತಾ ಕ್ಷಮಥ ತಮುಪಲಕ್ಷ್ಯೋಪಸಂಸೃತಃ ।
ವಂದಿತ್ವಾ ತಸ್ಯ ಚರಣೌ ಪ್ರಷ್ಟುಂ ಸಮುಪಚಕ್ರಮೇ ॥೬೬॥

ಭೋ ಬ್ರಹ್ಮನ್ನಾಶ್ರಮಃ ಕಸ್ಯ ಭವತ್ಯಯಮತಿಪ್ರಿಯಃ ।
ದರ್ಶನಾದೇವ ಸರ್ವೇಷಾ ಮತಿ ವಿಶ್ರಾಂತಿದಾಯಕಃ ॥೬೭॥

ಅತ್ರ ದತ್ತಾತ್ರೇಯ ಗುರೋರಾಶ್ರಮಃ ಕುತ್ರ ವಿದ್ಯತೇ ।
ಕೃಪಯಾ ಬ್ರೂಹಿ ಯೋಗೇಂದ್ರ ದ್ರುತಂ ಮೇ ದೀನವತ್ಸಲ ॥೬೮॥

ಇತಿ ತದ್ವಚನಂ ಶ್ರುತ್ವಾ ಬ್ರಾಹ್ಮಣಃ ಶಾಂತಮಾನಸಃ ।
ವಾಕ್ಯಂ ಮಧುರಸಾಸಾರ ಮಾಹ ಸ ಸ್ಮಿತಪೂರ್ವಕಂ ॥೬೯॥

ಪರ್ಣಶಾಲೆಯ ಬಾಗಿಲಿಗೆ ಬಂದನು. ಅಲ್ಲಿ ಒಬ್ಬ ಬ್ರಾಹ್ಮಣನು ಧ್ಯಾನಾಸಕ್ತನಾಗಿ ಕುಳಿತಿರುವುದನ್ನು ನೋಡಿದನು. ॥೬೩-೬೪॥

ಆ ಬ್ರಾಹ್ಮಣನ ಧ್ಯಾನವು ನಾನು ಸಮೀಪಕ್ಕೆ ಹೋಗುವುದರಿಂದ ಭಗ್ನವಾದೀತು ಎಂಬ ಭಯದಿಂದ ಪರಶುರಾಮನು ದೂರದಲ್ಲೇ ಕ್ಷಣಕಾಲ ನಿಂತಿದ್ದನು. ಸ್ವಲ್ಪಕಾಲದ ನಂತರದಲ್ಲಿ ಆ ಬ್ರಾಹ್ಮಣನು ಧ್ಯಾನದಿಂದ ಬಹಿರ್ಮುಖನಾಗಿ ಕಣ್ಣು ತೆರೆದು ನನ್ನನ್ನು ನೋಡಿದನು. ಪರಶುರಾಮನು ಸಮೀಪಕ್ಕೆ ಹೋಗಿ ಅವನ ಪಾದಗಳಿಗೆ ನಮಸ್ಕರಿಸಿ ಅವನನ್ನು ಪ್ರಶ್ನಿಸಲು ಮೊದಲುಮಾಡಿದನು. ॥೬೫-೬೬॥

ಓ ಬ್ರಾಹ್ಮಣನೇ, ನೋಡಿದ ಮಾತ್ರದಿಂದಲೇ ಎಲ್ಲರಿಗೂ ವಿಶ್ರಾಂತಿಯನ್ನು ಕೊಡುವುದೂ ಬಹು ಪ್ರಿಯವಾದುದೂ ಆದ ಈ ಆಶ್ರಮವು ಯಾರದು? ಮತ್ತು ಇಲ್ಲಿ ಗುರುವಾದ ದತ್ತಾತ್ರೇಯ ಮುನಿಯ ಆಶ್ರಮವು ಎಲ್ಲಿರುವುದು? ಓ ಯೋಗಿಗಳಲ್ಲಿ ಶ್ರೇಷ್ಠನೇ, ದೀನರಲ್ಲಿ ಪ್ರೀತಿಯುಳ್ಳವನೇ, ಕೃಪೆಮಾಡಿ ನನಗೆ ಹೇಳುವವನಾಗು. ॥೬೭-೬೮॥

ಹೀಗೆ ಹೇಳಿದ ಪರಶುರಾಮನ ಮಾತನ್ನು ಕೇಳಿದ ಆ ಬ್ರಾಹ್ಮಣನು ಶಾಂತಮನಸ್ಕನಾಗಿ ನಗುತ್ತಾ ಮಧುರವಾದ ರಸದ ಸಾರದಂತಿರುವ ಮಾತುಗಳನ್ನು ಹೇಳಿದನು. ॥೬೯॥

ಅಯಮೇವಾಶ್ರಮಸ್ತಸ್ಯ ಯೋಗಿರಾಜಸ್ಯ ಸದ್ಗುರೋಃ ।
ಕಿಮೀಹಿತಂ ತವ ವದ ಕಸ್ತ್ವಂ ಕಸ್ಮಾದಿಹಾಗತಃ ॥೨೦॥

ಅಥ ತದ್ವಾಕ್ಯಮಾಕರ್ಣ್ಯ ರಾಮಃ ಪ್ರಾಹ ಕೃತಾಂಜಲಿಃ ।
ಭೃಗುವಂಶಪ್ರಸೂತೋಽಹಂ ಜಾಮದಗ್ನ್ಯೋ ಮಹಾಮುನೇ ॥೨೧॥

ರಾಮೋ ನಾಮ ಜನೈಃ ಖ್ಯಾತಃ ಕೇನ ಚಿದ್ಧೇತುನಾಽತ್ರ ತು ।
ಪ್ರಾಪ್ತಃ ಸಂವರ್ತಮುನಿನಾ ನೋದಿತೋಽತಿ ಕೃಪಾವತಾ ॥೨೨॥

ಏತತ್ಕ್ಷಣಂ ದ್ರಷ್ಟುಮೇವ ಗುರೋಶ್ಚರಣಮೀಹಿತಂ ।
ಮನೋ ಮೇ ತ್ವರತೇ ಬ್ರಹ್ಮನ್ ತತ್ಪಾದಾವಭಿವಂದಿತುಂ ॥೨೩॥

ತತಸ್ಸರ್ವಂ ಸುವಿದಿತಂ ಭವೇದ್ವೈ ಭವತೋ ನನು ।
ಭ್ರಮನ್ ಮರುಸ್ಥಲಾರಣ್ಯೇ ದಾವಸಂಗಾತಿ ತರ್ಷಿತಃ ॥೨೪॥

ಸುಶೀತ ಜಲಲಾಭಾನ್ಯ ದ್ಯಥಾ ನೋ ನಂದಯೇತ್ತು ತಂ ।
ತಥಾ ಮಮ ಗುರೋಃ ಪಾದದರ್ಶನಾನ್ಯನ್ನರೋಚತೇ ॥೨೫॥

ಎಲೌ ಮುನಿಯೇ, ಯೋಗಿಶ್ರೇಷ್ಠನೂ ಸದ್ಗುರುವೂ ಆದ ಆ ದತ್ತಗುರುವಿನ ಆಶ್ರಮವು ಇದೇ ಆಗಿದೆ. ಅಲ್ಲಿ ನಿನಗೇನಾಗಬೇಕು ? ಯಾರು ನೀನು ? ಎಲ್ಲಿಂದ ಬರುತ್ತಿರುವೆ ? ಅದನ್ನು ಹೇಳು. ಎಂಬುದಾಗಿ ಕೇಳಿದನು. ॥೨೦॥

ಆ ಬ್ರಾಹ್ಮಣನ ಮಾತನ್ನು ಕೇಳಿ ಪರಶುರಾಮನು ಅಂಜಲಿಬದ್ಧನಾಗಿ ಅವನನ್ನು ಕುರಿತು, ಎಲೌ ಮಹಾಮುನಿಯೇ, ನಾನು ಭೃಗುವಂಶೀಯನು, ಪ್ರಖ್ಯಾತನಾದ ಜಮದಗ್ನಿಪುತ್ರನಾದ ಪರಶುರಾಮನು ನಾನೇ. ಸಂವರ್ತಋಷಿಯ ಅನುಜ್ಞೆಯಪ್ರಕಾರ ಯಾವುದೋ ಒಂದು ನಿಮಿತ್ತದಿಂದ ಇಲ್ಲಿಗೆ ನಾನು ಬಂದಿರುತ್ತೇನೆ. ॥೨೧-೨೨॥

ಈ ಕ್ಷಣದಲ್ಲಿಯೇ ಗುರುವಿನ ಚರಣದರ್ಶನವನ್ನು ಮಾಡಬೇಕಾಗಿದೆ. ಓ ಬ್ರಾಹ್ಮಣನೇ, ಸದ್ಗುರುವಿನ ಪಾದಕಮಲಗಳಿಗೆ ವಂದಿಸಲು ನನ್ನ ಮನಸ್ಸು ಆತುರಪಡುತ್ತಿದೆ. ಉಳಿದದ್ದೆಲ್ಲವೂ ಆಗ ನಿನಗೂ ತಿಳಿಯುವುದೇ ಆಗಿರುತ್ತದೆ ಎಂದು ಹೇಳಿದನು. ॥೨೩॥

ಮರಳುಕಾಡೆಂಬ ಆರಣ್ಯದಲ್ಲಿ ತಿರುಗುತ್ತಾ ಬಿಸಿಲೆಂಬ ಕಾಡ್ಗಿಚ್ಚಿನ ಸಂಬಂಧದಿಂದ ಬಹುವಾಗಿ ಬಾಯಾರಿಕೆಗೊಂಡವನಿಗೆ ಶೀತಲವಾದ ನೀರಿನ ಹೊರತಾಗಿ

ಅಥ ತದ್ವಾಕ್ಯಮಾಕರ್ಣ್ಯ ಪ್ರಹಸ್ಯ ಮಧುರಂ ವಚಃ ॥೭೬॥

ರಾಮ ಜಾನಾಮಿ ತೇ ಸರ್ವ ಮತ್ರಾಗಮನ ಕಾರಣಂ ।
ಗುರೋ ರ್ಮಹಾತ್ಮನ ಸ್ಸೇವಾಮಹಿಮ ವಶತಃ ಸ್ಫುಟಂ ॥೭೭॥

ಗಚ್ಛಾಂತರಾಸ್ತೇ ಮುನಿರಾಟ್ ಸರ್ವಲೋಕ ಸುಹೃತ್ತಮಃ ।
ಇತ್ಯುಕ್ತಸ್ತೇನ ಮುನಿನಾ ಶಾಲಾಽಂತಃ ಪ್ರವಿವೇಶ ಹ ॥೭೮॥

ತತ್ರಾಸೀನ ಮಾಸನಾಗ್ರ್ಯೇಽವಧೂತ ಕುಲನಾಯಕಂ ।
ಉಪಾಸಿತಂ ಯೋಗೀಮುಖ್ಯೈರವದಾತ ಗುಣಾಶಯೈಃ ॥೭೯॥

ದಂಡವತ್ತತ್ಪದಾಬ್ಜಾಗ್ರೇ ಪ್ರಣಿಪತ್ಯ ಕೃತಾಂಜಲಿಃ ।
ಆಸ್ಥಿತೋ ನಾತಿದೂರೇ ಸ ಪಶ್ಯನ್ ತತ್ಸ್ಥಿತಿ ಚೇಷ್ಟಿತಂ ॥೮೦॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ಪರಶುರಾಮ
ದತ್ತಗುರುಸಮಾಗಮೋ ನಾಮ ಪಂಚಮೋಽಧ್ಯಾಯಃ

ಬೇರಾವುದರಿಂದಲೂ ಹೇಗೆ ಆಗ ಸಂತೋಷವಾಗುವುದಿಲ್ಲವೋ ಹಾಗೆ ನನಗೆ ಗುರುವಿನ ಪಾದದರ್ಶನ ಹೊರತು ಮತ್ತಾವುದೂ ಈಗ ರುಚಿಸುವುದಿಲ್ಲ. ||೭೪-೭೫||

ಅನಂತರದಲ್ಲಿ ಆ ಬ್ರಾಹ್ಮಣನು ನಕ್ಕು ಮಧುರವಾದ ಮಾತನ್ನು ಹೇಳಿದನು. ಎಲೌ ರಾಮನೇ, ಮಹಾತ್ಮನಾದ ಗುರುವಿನ ಚರಣಸೇವೆಯನ್ನು ನಾನು ಮಾಡುತ್ತಿರುವೆನಾದಕಾರಣ ಆ ಗುರುಚರಣ ಮಹಿಮೆಯಿಂದ ನೀನು ಇಲ್ಲಿಗೆ ಬಂದಿರುವುದರ ಕಾರಣಗಳೆಲ್ಲವನ್ನೂ ಸ್ಪಷ್ಟವಾಗಿ ಅರಿತಿರುತ್ತೇನೆ. ಸಕಲ ಜಗತ್ತಿನ ಸ್ನೇಹಿತನಾದ ಮುನಿಶ್ರೇಷ್ಠನಾದ ದತ್ತಗುರುವು ಆಶ್ರಮದೊಳಗಿರುತ್ತಾನೆ. ಒಳಗೆ ಹೋಗು. ||೭೬-೭೭||

ಈ ಪ್ರಕಾರವಾಗಿ ಆ ಋಷಿಯು ಹೇಳಿದ ಮಾತನ್ನು ಕೇಳಿ ಪರಶುರಾಮನು ಪರ್ಣಶಾಲೆಯ ಒಳಕ್ಕೆ ಪ್ರವೇಶಮಾಡಿದನು. ಅಲ್ಲಿ ಶ್ರೇಷ್ಠವಾದುದೊಂದು ಆಸನದಲ್ಲಿ ಕುಳಿತಿರುವ, ಅವಧೂತಸಂನ್ಯಾಸಿಗಳಲ್ಲಿ ಶ್ರೇಷ್ಠನಾದ, ಉತ್ತಮ ಗುಣಶಾಲಿಗಳಾದ ಯೋಗಿಶ್ರೇಷ್ಠರಿಂದ ಸೇವಿಸಲ್ಪಡುತ್ತಿರುವ, ದತ್ತಗುರುವನ್ನು ನೋಡಿದನು. ತತ್ಕ್ಷಣ

ಆ ಋಷಿಶ್ರೇಷ್ಠನ ಪಾದಕಮಲಗಳಿಗೆ ನಮಸ್ಕರಿಸಿ ಅಂಜಲಿಬದ್ಧನಾಗಿ ಆ ಮುನಿಯು ಕುಳಿತಿರುವ ಭಂಗಿಯನ್ನು ನೋಡುತ್ತಾ ಸ್ವಲ್ಪ ದೂರದಲ್ಲಿ ನಿಂತನು. ||೭೮-೭೯-೮೦||

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ
ಪರಶುರಾಮನಿಗೆ ದತ್ತಗುರುದರ್ಶನವನ್ನು ತಿಳಿಸುವ
ಐದನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ಷಷ್ಠೋಽಧ್ಯಾಯಃ॥

ಆರನೆಯ ಅಧ್ಯಾಯವು

ತಂ ದದರ್ಶ ಮಹಾತ್ಮಾನಂ ತೇಜೋರಾಶಿಮನುತ್ತಮಂ ।
ತಮಾಲಕೋಮಲದಲ ನೀಲನಾಲತನುಚ್ಛವಿಂ ॥೧॥

ಫುಲ್ಲರಾಜೀವನಯನಂ ರಾಕೇಂದುಪ್ರತಿಮಾನನಂ ।
ನವವಿದ್ರುಮಸಾಮಂತದಂತಚ್ಛದ ವಿರಾಜಿತಂ ॥೨॥

ಮಂದಸ್ಮಿತಾತಿಸೌಂದರ್ಯ ಪ್ರಭಾಪೂರ್ಣ ದಿಗಂತರಂ ।
ಪ್ರೌಢಮುಕ್ತಾ ಪಂಕ್ತಿಶೋಭಾಪರೀಭಾವಿ ದ್ವಿಜಾವಲಿಂ ॥೩॥

ಪೂರ್ಣಗಂಡಾ ಭೋಗರಾಜನ್ನಾಸಾ ವಂಶಲಸನ್ಮುಖಂ ।
ಕಂಬುಗ್ರೀವಂ ದೀರ್ಘಬಾಹುದ್ವಯ ಶೋಭಾವಿರಾಜಿತಂ ॥೪॥

ಯಾವನ ಶರೀರ ಕಾಂತಿಯು ಹೊಂಗೆಹೂವಿನ ಮೃದುವಾದ ದಲದಿಂದ ಕೂಡಿರುವ ಕಪ್ಪಾದ ನಾಲದಂತಿದೆಯೋ, ಯಾವನ ಕಣ್ಣುಗಳು ಅರಳಿರುವ ಕಮಲದಂತೆ ವಿಶಾಲವಾಗಿವೆಯೋ, ಯಾವನ ಮುಖವು ಪೂರ್ಣಿಮಾ ಚಂದ್ರನಿಗೆ ಸದೃಶವಾದ ಕಾಂತಿಯಿಂದ ಕೂಡಿದೆಯೋ, ಯಾವನ ತುಟಿಗಳು ಹೊಸದಾದ ಹವಳಕ್ಕೆ ಸಮಾನವಾಗಿ ಪ್ರಕಾಶಿಸುತ್ತಿವೆಯೋ, ಅಂತಹ ಮಹಾಮಹಿಮನೂ, ತೇಜಸ್ವಿಯೂ, ಅತ್ಯಂತ ಶ್ರೇಷ್ಠನೂ ಆದ ದತ್ತಾತ್ರೇಯನನ್ನು ಪರಶುರಾಮನು ನೋಡಿದನು. ॥೧-೨॥

ಯಾವನ ಮುಗುಳು ನಗೆಯ ಶುಭ್ರಕಾಂತಿಯ ಸೌಂದರ್ಯವು ದಿಕ್ಕುಗಳನ್ನು ಪ್ರಕಾಶಗೊಳಿಸುವುದೋ, ಯಾವನಿಗೆ ದೊಡ್ಡಮುತ್ತಿನ ಸಾಲಿನ ಕಾಂತಿಯನ್ನು ಅಲ್ಲಗಳೆಯುವ ದಂತಪಂಕ್ತಿಯಿದೆಯೋ, ಯಾವನ ಮುಖವು ತುಂಬಿದ ಕಪೋಲಗಳಿಂದಲೂ ಪ್ರಕಾಶಮಾನವಾದ ನಾಸಾದಂಡದಿಂದಲೂ ಕಂಗೊಳಿಸುತ್ತಿರುವುದೋ,

ನವಪ್ರವಾಲಲಾಲಿತ್ಯ ಯುತಪಾಣಿ ತಲಾಂಚಿತಂ ।
ವಿಶಾಲಪೃಥುಲೋರಸ್ಕಂ ತನುತ್ರಿವಳಿಕೋದರಂ ॥೫॥

ಕರಿನಾಸೋರುಸುಭಗಂ ತೂಣೀಸೋದರಜಾಧಿಕಂ ।
ಪಂಕೇರುಹಾತಿಸುಭಗಂ ಪಾದಪಂಕೇರುಹಾನ್ವಿತಂ ॥೬॥

ಸೌಂದರ್ಯಕಂಪವುಮಲಂ ತಾರುಣ್ಯಶ್ರೀನಿಷೇವಿತಂ ।
ದರ್ಶನಾದೇವ ನಾರೀಣಾಂ ಕೋಟಿಮನ್ಮಥ ದೀಪನಂ ॥೭॥

ಏವಂ ಭೂತಂ ಸಮಾಲೋಕ್ಯ ಸ್ತ್ರಿಯಾ ಲಕ್ಷ್ಮೀಸಮಾನಯಾ ।
ಕಯಾಚಿದತಿತಾರುಣ್ಯ ಲಾವಣ್ಯಲಸದಂಗಯಾ ॥೮॥

ಮದಿರಾಮದಸಂರಕ್ತ ಘೂರ್ಣನೇತ್ರಾಂಬು ಜಾತಯಾ ।
ಆಲಿಂಗಿತಪುರೋಭಾಗ ನ್ಯಸ್ತ ಮೈರೇಯ ಕುಂಭಕಂ ॥೯॥
ಯತಿವೇಷಧರಂ ಮಿಶ್ರಲಿಂಗಿನಂ ಶಂಕಿತೋಽಭವತ್ ।

ಅಂತಹ ಮೂರು ರೇಖೆಗಳಿಂದ ಯುಕ್ತವಾದ ಕತ್ತುಳ್ಳವನೂ, ನೀಳವಾದ ತೋಳುಗಳ ಕಾಂತಿಯಿಂದ ಪ್ರಕಾಶಿತನೂ ಆದ ದತ್ತಾತ್ರೇಯನನ್ನು ಪರಶುರಾಮನು ನೋಡಿದನು. ||೩-೪||

ಅಲ್ಲದೆ ನೂತನವಾದ ಚಿಗುರಿಗೆ ಸಮಾನವಾದ ಕೆಂಪಿನಿಂದ ಕೂಡಿರುವ ಪಾಣಿತಲದಿಂದ ಯುಕ್ತನೂ, ಉನ್ನತವೂ ಮತ್ತು ವಿಶಾಲವೂ ಆದ ಎದೆಯಿಂದ ಕೂಡಿರುವವನೂ, ಸೂಕ್ಷ್ಮವಾಗಿಯೂ ಮತ್ತು ತ್ರಿವಳಿಯಿಂದಲೂ ಕೂಡಿರುವ ಉದರವುಳ್ಳವನೂ, ಆನೆಯ ಸೊಂಡಲಿಗೆ ಸಮಾನವಾದ ತೊಡೆಯುಳ್ಳವನೂ ಮತ್ತು ಕಮಲದಂತೆ ಕಾಂತಿಯುಕ್ತವಾದ ಪಾದಕಮಲದಿಂದ ಕೂಡಿರುವವನೂ ಆದ ದತ್ತಾತ್ರೇಯನನ್ನು ಪರಶುರಾಮನು ನೋಡಿದನು. ||೫-೬||

ದರ್ಶನಮಾತ್ರದಿಂದಲೇ ಸ್ತ್ರೀಯರಿಗೆ ಕಾಮೋದ್ದೀಪಕನೂ ಅತಿ ಸೌಂದರ್ಯ ಮೂರ್ತಿಯೂ ಯೌವನಶಾಲಿಯೂ ಆದ ದತ್ತಾತ್ರೇಯನನ್ನು ನೋಡಿದನು. ||೭||

ಯೌವನದ ಲಾವಣ್ಯದಿಂದ ಪ್ರಕಾಶಿಸುತ್ತಿರುವ ಅವಯುವಗಳಿಂದ ಕೂಡಿರುವ, ಮದ್ಯಪಾನದ ಮದದಿಂದ ಕೆಂಪಾಗಿ ಸುತ್ತಲೂ ತಿರುಗುತ್ತಿರುವ ನೇತ್ರಕಮಲದಿಂದ ಕೂಡಿರುವ, ಯಾವಳೋ ಒಬ್ಬ ಅಂಗನೆಯಿಂದ ಆಲಿಂಗಿತನಾಗಿ ಎದುರಿಗೆ ಇರುವ

ಕಿಮೇತದದ್ಭುತಂ ವೃತ್ತಂ ಮುನೇರಸ್ಯ ಮಹಾತ್ಮನಃ ॥೧೦॥

ವಿಷಸಂಪೃಕ್ತ ಮಾಧ್ವೀಕಮಿವ ಪಶ್ಯಾಮಿ ಚೇಷ್ಟಿತಂ ।
ಅಹೋ ಮಹಾತ್ಮನಾಂ ಲೋಕೇ ಗತಿರತ್ಯಂತಚಿತ್ರಿತಾ ॥೧೧॥

ಕ್ವಚಿದ್ಬಾಹ್ಯಸಮಾಚೀನಾ ಕ್ವಚಿದಾಂತರ ಸೌಭಗಾ ।
ಅಚಿಂತ್ಯವೃತ್ತಯೋ ಲೋಕೇ ಯೋಗಿನಃ ಖಲು ಮಾದೃಶಂ ॥೧೨॥

ನ ಹ್ಯಸಾರಂ ಸ ಸಂವರ್ತೋ ಮಹ್ಯಮಾದಿಶತಿ ಕ್ವಚಿತ್ ।
ದ್ವಾರೇಽಪ್ಯೇಷ ಮಹಾಶಾಂತಃ ಸಂಶ್ರಯೇತ್ಪ್ರಾಕೃತಂ ಕಥಂ ॥೧೩॥

ಅತ್ರಾಪಿ ಪರಿತಃ ಸರ್ವೇ ನಿಷಣ್ಣಾಃ ಸಾತ್ವಿಕರ್ಷಭಾಃ ।
ತಸ್ಮಾನ್ನೈತದ್ಯಥಾ ದೃಶ್ಯ ಮನ್ಯದೇವಾಸ್ತಿ ಕಿಂಚನ ॥೧೪॥

ಹೆಂಡದ ಗಡಿಗೆಯನ್ನೂ ಯತಿವೇಷವನ್ನೂ ಧರಿಸಿ ವಿರುದ್ಧವಾದ ಚಿನ್ಹೆಗಳಿಂದ ಯುಕ್ತನಾಗಿರುವ ದತ್ತಮುನಿಯನ್ನು ಪರಶುರಾಮನು ನೋಡಿ ಶಂಕೆಗೊಂಡನು. ॥೮-೯॥

ಇದೇನು ಈ ಮಹಾತ್ಮನಾದ ಋಷಿಯ ಸಮಾಚಾರವು ವಿಚಿತ್ರವಾಗಿರುವುದು ? ಇವನ ನಡೆವಳಿಕೆಯು ವಿಷಯುಕ್ತವಾದ ಮಧು (ದ್ರಾಕ್ಷೀಹಣ್ಣಿನ ರಸದಿಂದ ಮಾಡಿದ ಹೆಂಡ) ವಿನಂತಿರುವುದು. ॥೧೦॥

ಪ್ರಪಂಚದಲ್ಲಿ ಮಹಾತ್ಮರ ನಡೆವಳಿಕೆಯು ಅತಿ ವಿಚಿತ್ರವಾಗಿ ಕಾಣುವುದು. ಆಶ್ಚರ್ಯವು ! ಒಂದು ಕಡೆ ನೋಡಿದರೆ ಮಹಾತ್ಮರು ಬಾಹ್ಯನಡವಳಿಕೆಯಿಂದ ಆಶ್ಚರ್ಯಕಾರಕರಾಗಿರುತ್ತಾರೆ. ಮತ್ತೊಂದು ಕಡೆ ನೋಡಿದರೆ ಆಂತರಿಕವಾಗಿ ಮನೋಹರರಾಗಿರುತ್ತಾರೆ. ನನ್ನಂತಹವರಿಗೆ ತಿಳಿಯಲಸಾಧ್ಯವಾದ ನಡೆವಳಿಕೆಗಳಿಂದ ಕೂಡಿದವರಾಗಿ ತೋರುತ್ತಾರೆ. ॥೧೧-೧೨॥

ಆ ಸಂವರ್ತಮುನಿಯು ಅಪ್ರಯೋಜಕವಾದುದನ್ನು ಎಂದಿಗೂ ಹೇಳಲಾರನು. ಅಲ್ಲದೆ, ಶಾಂತನಾದ ಈ ಋಷಿಯು ದ್ವಾರದೇಶದಲ್ಲಿ ಗುರುವಿನ ಅನುಗ್ರಹಕ್ಕಾಗಿ ಕುಳಿತಿರುತ್ತಾನೆ. ಇವನು ಎಂದಿಗೂ ಪ್ರಾಕೃತನಾದವನನ್ನು ಆಶ್ರಯಿಸಲಾರ. ಈ ಮಹಾತ್ಮನ ಸುತ್ತಲೂ ಅನೇಕ ಸಾತ್ವಿಕರು ಕುಳಿತಿರುತ್ತಾರೆ. ಆದಕಾರಣ ನಾನು

ಯಥಾ ತಥಾ ವಾ ಭವತು ಗುರುರ್ಮೇಽಯಂ ಸನಾತನಃ ।
ಮನಃ ಕಲ್ಪಿತ ಮೇವೇಹ ಸದಸದ್ಭೇದಭೇದನಂ ॥೧೫॥

ಇತಿ ನಿಶ್ಚಿತ್ಯ ಮೇಧಾವೀ ಸುಚಿತ್ತಸ್ತತ್ರ ತಸ್ಥಿವಾನ್ ।
ತಂ ಸಮಾಲೋಕ್ಯ ಸ ಗುರುರ್ವಿನೀತಂ ಭಾರ್ಗವಂ ತತಃ ॥೧೬॥

ಪ್ರೋವಾಚ ಮಧುರಂ ವಾಕ್ಯಂ ವಿಚಿತ್ರಾರ್ಥಸಮನ್ವಿತಂ ।
ಸ್ವಾಗತಂ ಭಾರ್ಗವ ತವ ಕಚ್ಚಿತ್ತೇ ಕುಶಲಂ ಸ್ಥಿತಂ ॥೧೭॥

ಆಶ್ರಮೇ ತವ ಗೋವಿಪ್ರ ತೃಣವೀರುನ್ಮಹೀರುಹಾಂ ।
ಕಚ್ಚಿದಭ್ಯಾಗತಂ ಚಾಗ್ನಿಂ ಕಾಲೇ ಶುಶ್ರೂಷಸಿ ಕ್ರಮಾತ್ ॥೧೮॥

ಕಾಲೇ ಕಾಲೇ ಸ್ವಾಧ್ಯಯನಾತ್ಕಚ್ಚಿತ್ತೇ ಬ್ರಹ್ಮಸಂಧೃತಂ ।
ಅಕಾಂಡೇಷೂತ್ಥಿತಾ ನ್ದೇಹಜಾತಾರೀನ್ ಜಯಸಿ ಹ್ಯರಂ ॥೧೯॥
ತಪಸಾ ತೇ ಜಿತಾ ಲೋಕಾ ಬಹವಃ ಪುಣ್ಯ ಸಂಶ್ರಯಾಃ ।

ಕಾಣುತ್ತಿರುವುದು ವಾಸ್ತವಿಕ ದೃಶ್ಯವಲ್ಲ. ನಿಜವಾಗಿಯೂ ಹೊರಗೆ ತೋರುವುದಕ್ಕಿಂತಲೂ ಒಳತತ್ವವು ಭಿನ್ನವಾಗಿಯೇ ಇರಬೇಕು. ॥೧೩-೧೪॥

ಸತ್ ಒಳ್ಳೆಯದು ಮತ್ತು ಅಸತ್ ಕೆಟ್ಟುದು ಎಂಬ ಭೇದವು ಮನಃ ಕಲ್ಪಿತವಾದುದು. ಹೇಗಾದರೂ ಇರಲಿ. ಈ ಪುರಾತನ ಪುರುಷನು ನನ್ನ ಗುರುವು.॥೧೫॥

ಬುದ್ಧಿಶಾಲಿಯಾದ ಪರಶುರಾಮನು ಈ ಪ್ರಕಾರವಾಗಿ ನಿಶ್ಚಯಿಸಿ ಶಾಂತವಾದ ಮನಸ್ಸುಳ್ಳವನಾಗಿ ಅಲ್ಲೇ ನಿಂತುಕೊಂಡನು. ಹೀಗೆ ವಿನಮ್ರನಾಗಿ ನಿಂತಿರುವ ಪರಶುರಾಮನನ್ನು ನೋಡಿ ಆ ದತ್ತಗುರುವು ಆಶ್ಚರ್ಯಕರವಾದ ಅರ್ಥಗಳಿಂದ ಕೂಡಿದ ಮಾತನ್ನು ಮನೋಹರವಾಗಿ ಹೇಳಿದನು. ॥೧೬॥

ಎಲೌ ಪರಶುರಾಮನೇ, ನಿನಗೆ ಸ್ವಾಗತವು. ನಿನಗೆ ಆರೋಗ್ಯವೇ ? ನಿನ್ನ ಆಶ್ರಮದಲ್ಲಿರುವ ಗೋ ಬ್ರಾಹ್ಮಣರು, ಸಸ್ಯ, ಬಳ್ಳಿ, ಗಿಡಮರಗಳು ಮೊದಲಾದ ಸಕಲರೂ ಕ್ಷೇಮವಷ್ಟೆ ? ಆಶ್ರಮಕ್ಕೆ ಬಂದ ಅತಿಥಿ ಅಭ್ಯಾಗತರ ಸೇವೆಯು ಸರಿಯಾಗಿ ನಡೆಯುತ್ತಿರುವುದೇ ? ಅಗ್ನಿಹೋತ್ರಾದಿ ಕರ್ಮಗಳು ಸಾಂಗೋಪಾಂಗವಾಗಿ ನಡೆಯುತ್ತಿರುವುವೇ ? ॥೧೭-೧೮॥

ಎಲೌ ಬ್ರಹ್ಮಋಷಿಯೇ, ಆಶ್ರಮದಲ್ಲಿ ಕಾಲಕಾಲದಲ್ಲಿ ವೇದಾಧ್ಯಯನಾದಿಗಳು ನಿಯತವಾಗಿ ನಡೆಯುತ್ತಿವೆಯೇ ? ಅನುಚಿತ ಕಾಲದಲ್ಲಿ ದೇಹದಲ್ಲೇ ಉತ್ಪನ್ನ

ತ್ವಯಾ ಭಾರ್ಗವವಂಶೋ ವೈ ನೀತೋಽತ್ಯುಚ್ಚಪದಂ ಪರಂ ॥೨೦॥

ತಪಸಾ ವಿದ್ಯಯಾ ಶಕ್ತ್ಯಾ ಬ್ರಹ್ಮಚರ್ಯೇಣ ತೇಜಸಾ ।
ವದಾಗಮನ ಕಾರ್ಯಂ ತೇ ಮಾದೃಶಾ ನ ಸದಾಶ್ರಯಾಃ ॥೨೧॥

ಲೋಕೇಽಕ್ಷಗೋಚರಜಯಃ ಪುರುಷಾರ್ಥೈಕ ಕಾರಣಂ ।
ಪುರುಷಾರ್ಥಸ್ಯ ಸಂಪತ್ತಿಃ ಪರೋ ಲಾಭ ಇಹ ಸ್ಮೃತಃ ॥೨೨॥

ಅಲಬ್ಧಪುರುಷಾರ್ಥಾ ಯೇ ತತ್ರಾರ್ಥೇಽನ್ಯೈವ ಚೋದ್ಯತಾಃ ।
ಪುರುಷಾಸ್ತೇ ನ ಜೀವಂತಿ ಜೀವತ್ಕುಣಪ ಸಂಜ್ಞಕಾಃ ॥೨೩॥

ಇತಿ ಬಹ್ವರ್ಥ ನಿಶ್ವಾಸಾಃ ಸ್ವಾರ್ಥಘ್ನಾಃ ಕಾಷ್ಠಪೂರುಷಾಃ ।
ಸೂತ್ರಪಾಂಚಾಲಿ ಕೇವೇಹ ವ್ಯರ್ಥಚೇಷ್ಟಾಪರಾ ನರಾಃ ॥೨೪॥

ವಾಗುವ ಇಂದ್ರಿಯಪ್ರವೃತ್ತಿಗಳೆಂಬ ಶತ್ರುಗಳನ್ನು ಶೀಘ್ರವಾಗಿ ಜಯಸುತ್ತಿರುವೆಯಲ್ಲವೇ? ಅನೇಕ ಪುಣ್ಯಲೋಕಗಳನ್ನು ನೀನು ತಪಸ್ಸಿನಿಂದ ಜಯಿಸಿರುವೆಯಾ? ॥೧೯॥

ತಪಸ್ಸಿನಿಂದಲೂ ವಿದ್ಯೆಯಿಂದಲೂ, ಶಕ್ತಿಯಿಂದಲೂ, ಬ್ರಹ್ಮಚರ್ಯದಿಂದಲೂ ತೇಜಸ್ಸಿನಿಂದಲೂ ನೀನು ಭಾರ್ಗವವಂಶದ ಗೌರವವನ್ನು ಹೆಚ್ಚಿಸಿರುತ್ತೀಯಾ? ॥೨೦॥

ಎಲೌ ಪರಶುರಾಮನೇ, ಏತಕ್ಕಾಗಿ ನನ್ನಲ್ಲಿಗೆ ಬಂದಿರುವೆ? ನನ್ನಂತಹವರು ಸತ್ಪುರುಷರಿಂದ ಆಶ್ರಯಿಸಲು ಯೋಗ್ಯರಲ್ಲವು. ಪ್ರಪಂಚದಲ್ಲಿ ಇಂದ್ರಿಯ ವಿಷಯಗಳಲ್ಲಿ ಆಶೆಯನ್ನು ಬಿಟ್ಟು ಅವನ್ನು ಜಯಿಸುವುದು ಪುರುಷಾರ್ಥಲಾಭಕ್ಕೆ ಮುಖ್ಯ ಕಾರಣವು. ಆ ಪುರುಷಾರ್ಥಗಳ ಸಂಪಾದನೆಯೇ ಈ ಲೋಕಜೀವನದಲ್ಲಿ ಪಡೆಯಬೇಕಾದ ಉತ್ತಮಫಲವಾಗಿದೆ. ॥೨೨॥

ಯಾರು ಆ ಪುರುಷಾರ್ಥವನ್ನು ಸಂಪಾದಿಸದೆ ಅರ್ಥಕಾಮಗಳಲ್ಲೇ ಆಸಕ್ತರಾಗಿರುತ್ತಾರೋ ಅಂತಹ ಪುರುಷರು ಜೀವಿಶವಗಳಾಗಿರುತ್ತಾರೆ. ॥೨೩॥

ಹಣದಲ್ಲೇ ಆಸಕ್ತರಾದ ಸ್ವಾರ್ಥಪರರಾದ ಮೂಢರಾದ ಮನುಷ್ಯರು ಸೂತ್ರದ ಎಳೆತದಿಂದ ಕುಣಿಯುವ ಬೊಂಬೆಯಂತೆ ನಿತ್ಯಸುಖದ ಲಾಭವಿಲ್ಲದೆ ವ್ಯರ್ಥವಾದ ಪ್ರಯತ್ನದಲ್ಲಿ ಆಸಕ್ತಿಯುಳ್ಳವರಾಗಿರುತ್ತಾರೆ. ॥೨೪॥

ಅಹಂ ಪುರಾಽತಿವೈರಾಗ್ಯಾನ್ನ್ಯಸ್ತಸರ್ವ ಕ್ರಿಯೋಽಭವಂ ।
ದ್ವಯಂ ತತ್ರಾತಿ ಬಲವದಿಂದ್ರಿಯೇಷ್ವಾತ್ಮಶತ್ರುಷು ॥೨೫॥

ರಸನೋಪಸ್ಥಯುಗಲಂ ಬಹವಸ್ತೇನ ಪಾತಿತಾಃ ।
ದ್ವಯಂ ಯೇನ ಜಿತಂ ಸಮ್ಯಕ್ತೇನ ಸರ್ವಂ ಜಿತಂ ಭವೇತ್ ॥೨೬॥

ಅಹಮಿತ್ಥಂ ಭೂತ ಆಭ್ಯಾಂ ಜಾತೋ ನೂನಂ ವಿನಿಂದಿತಃ ।
ನ ಸಂಶ್ರಯಂತಿ ಮಾಂ ಸಂತೋ ನಿಷಿದ್ಧಪಥಸೇವಿನಂ ॥೨೭॥

ಬುದ್ಧಿಭ್ರಂಶಕರೀ ಚೇಯಂ ಸುರಾ ಸಜ್ಜನಗರ್ಹಿತಾ ।
ತಾದೃಶೀ ವಾರಯೋಷಾಽಪಿ ಮಯ್ಯೈತದುಭಯಂ ಶ್ರಿತಂ ॥೨೮॥

ಅತೋ ಮತ್ಸಂಗತಿಂ ಪ್ರಾಯಸ್ತ್ಯಕ್ತ್ವಾ ಸಂತ ಇತೋ ಗತಾಃ ।
ತಸ್ಮಾದೇವಂ ವಿಧಸ್ಯೇಹ ಸ್ಥಾನೇ ತ್ವಂ ಕಥಮಾಗತಃ ॥೨೯॥
ವದ ಭಾರ್ಗವ ತಥ್ಯಂ ತದ್ಯೇನ ಶುಧ್ಯೇತ ಮನ್ಮನಃ ।

ಹಿಂದೆ ನಾನು ಬಹು ವೈರಾಗ್ಯದಿಂದ ಸಕಲ ಕ್ರಿಯೆಗಳನ್ನೂ ತ್ಯಜಿಸಿರುತ್ತೇನೆ. ಆತ್ಮಜ್ಞಾನ ಪಡೆಯುವವರಿಗೆ ಮುಖ್ಯಶತ್ರುಗಳಾದ ಇಂದ್ರಿಯುಗಳಲ್ಲಿ ರಸನೇಂದ್ರಿಯ ಮತ್ತು ಉಪಸ್ಥೇಂದ್ರಿಯ ಎರಡೂ ಪ್ರಬಲವಾದ ಶತ್ರುಗಳು. ಇವುಗಳಿಂದ ಅನೇಕರು ಪತಿತರಾಗಿರುತ್ತಾರೆ. ಈ ಎರಡು ಇಂದ್ರಿಯಗಳನ್ನೂ ಯಾವನು ಜಯಿಸುತ್ತಾನೋ ಅವನು ಸಕಲವನ್ನೂ ಜಯಿಸಿದಂತೆಯೇ. ॥೨೫-೨೬॥

ನಾನಾದರೋ ಇವುಗಳಿಂದ ಕೂಡಿರುತ್ತೇನೆ. ಇವುಗಳಿಂದ ಉತ್ಪನ್ನನಾದವನು ನಿಜವಾಗಲೂ ನಿಂದಾರ್ಹನೇ. ನಾನು ಹೀಗೆ ನಿಷೇಧಿಸಲ್ಪಟ್ಟಿರುವ ಮಾರ್ಗಾನು ಸಾರಿಯು. ಆದುದರಿಂದಲೇ ಸತ್ಪುರುಷರು ನನ್ನನ್ನು ಆಶ್ರಯಿಸುವುದಿಲ್ಲವು. ॥೨೭॥

ಬುದ್ಧಿಭ್ರಂಶವನ್ನುಂಟುಮಾಡುವ ಈ ಮದ್ಯವು ಸತ್ಪುರುಷರಿಂದ ನಿಂದಿಸ ಲ್ಪಟ್ಟಿದೆ. ವಾರಸ್ತ್ರೀಯೂ ಸಹ ನಿಂದ್ಯಳು. ನಾನಾದರೋ ಮದ್ಯವನ್ನೂ ಸೇವಿಸು ತ್ತೇನೆ. ವಾರಸ್ತ್ರೀಯ ಸಂಗವನ್ನೂ ಉಳ್ಳವನು. ॥೨೮॥

ಆದಕಾರಣ ಸತ್ಪುರುಷರು ನನ್ನನ್ನು ತ್ಯಜಿಸಿ ಹೊರಟುಹೋದರು. ಹೀಗಿರು ವಲ್ಲಿ ನನ್ನಂತಹವನ ಸಮೀಪಕ್ಕೆ ಎಲೌ ಪರಶುರಾಮನೇ, ಏನುಕಾರಣ ಬಂದೆ ?

ಇತಿ ಪೃಷ್ಟೋ ಜಾಮದಗ್ನ್ಯೋ ರಾಮಃ ಪ್ರಾಹ ಸುವಿಸ್ಮಿತಃ ॥೩೦॥

ಸಂವರ್ತ ಚರಿತಂ ತಚ್ಚ ಪೂರ್ವ ದೃಷ್ಟಮನುಸ್ಮರನ್ ।
ನೂನಂ ಸ್ವರೂಪಗುಪ್ತ್ಯೈ ನೋ ಮುನಿರಾಹೇದೃಶಂ ವಚಃ ॥೩೧॥

ಉದ್ವಿಗ್ನೋ ಮಾದೃಶಾಂ ಸಂಗಾತ್ಕಾಮಿನಾಂ ಹತಚೇತಸಾಂ ।
ನ ಪ್ರಾಕೃತಂ ವದೇನ್ಮಹ್ಯಂ ಸಂವರ್ತೋಽತಿ ದಯಾಪರಃ ॥೩೨॥

ಇತಿ ವ್ಯವಸ್ಯ ನತ್ವಾ ತ ಮಾಹಾತ್ಮ್ಯಂತ ಶುಭಂ ವಚಃ ।
ಭಗವನ್ನಾರ್ಹಸಿ ಮಯಿ ಶಂಕಿತುಂ ಶರಣಾಗತೇ ॥೩೩॥

ಅನನ್ಯಗತಿರದ್ಯ ತ್ವಾಂ ದಯಾ ಪೀಯೂಷ ವಾರಿಧಿಂ ।
ದೀನಃ ಸಂಸೃತಿ ಕಾಂತಾರ ದುರ್ಗಭ್ರಮಣ ಕಾತರಃ ॥೩೪॥

ನನ್ನ ಮನಸ್ಸು ಇದನ್ನು ತಿಳಿಯಲು ತವಕಪಡುತ್ತಿದೆ. ನಿಜವನ್ನು ಹೇಳುವವನಾಗು. ಕೇಳಿ ಸಮಾಧಾನಪಟ್ಟುಕೊಳ್ಳುತ್ತೇನೆ. ॥೨೯॥

ದತ್ತಾತ್ರೇಯನ ಮಾತನ್ನು ಕೇಳಿ ಪರಶುರಾಮನು ಆಶ್ಚರ್ಯಗೊಂಡನು. ಮತ್ತು ಹಿಂದೆ ತಾನು ಕಂಡ ಸಂವರ್ತನ ಸಮಾಚಾರವನ್ನು ಸ್ಮರಿಸಿಕೊಳ್ಳುತ್ತಾ ತನ್ನ ನಿಜರೂಪವನ್ನು ಮರೆಮಾಚಲೋಸುಗವೇ ಈ ಋಷಿಯು ಹೀಗೆ ಹೇಳಿರಬೇಕು. ಎಂದು ಯೋಚಿಸಿದನು. ಅಲ್ಲದೆ— ॥೩೦-೩೧॥

ಕಾಮಿಗಳೂ, ದುಷ್ಟಮನಸ್ಸುಳ್ಳವರೂ ಆದ ನನ್ನಂತಹವರಿಂದ ಈ ದತ್ತಗುರುವು ಬೇಸರಪಟ್ಟಿರಬಹುದು. ಕರುಣಾಳುವಾದ ಸಂವರ್ತನು ಎಂದಿಗೂ ನನಗೆ ಸುಳ್ಳನ್ನು ಹೇಳಿಲ್ಲ. ಹೀಗೆ ಮನಸ್ಸಿನಲ್ಲಿ ಪರಶುರಾಮನು ನಿರ್ಣಯಿಸಿಕೊಂಡು ದತ್ತಾತ್ರೇಯನನ್ನು ಕುರಿತು ನಮಸ್ಕರಿಸಿ ಒಳ್ಳೆಯ ಮಾತನ್ನು ಹೀಗೆ ಹೇಳಿದನು. ॥೩೨॥

ಓ ಪೂಜ್ಯನೇ, ಬೇರೆ ಗತಿಯಿಲ್ಲದೇ ದಯಾಸಮುದ್ರನಾದ ನಿನ್ನನ್ನು ಶರಣು ಹೊಕ್ಕಿರುತ್ತೇನೆ. ನನ್ನ ಭಕ್ತಿಶ್ರದ್ಧೆಗಳ ವಿಷಯದಲ್ಲಿ ಸಂದೇಹಪಡಬೇಡ. ॥೩೩॥

ಸಂಸಾರವೆಂಬ ಭಯಂಕರವಾದ ಮಾರ್ಗದಲ್ಲಿ ಸಂಚರಿಸಬೇಕಾದ ನಿರ್ಬಂಧದಿಂದ ದುಃಖವೆಂಬ ಕಾಡ್ಗಿಚ್ಚಿನ ನಿಬಿಡವಾದ ಜ್ವಾಲೆಗಳಿಂದ ಆವರಿಸಲ್ಪಟ್ಟಿರುವ ಹೃದಯ ಉಳ್ಳ ನಾನು, ದೀನನಾಗಿ ಆಶೆಯೆಂಬ ಮಧ್ಯಾಹ್ನದ ಸೂರ್ಯನ ಪ್ರಚಂಡ

ದುಃಖದಾವಾಗ್ನಿ ಜಟಿಲ ಜ್ವಾಲಾಮಾಲಾಽಽಕುಲಾಶಯಃ ।
ನಾಂಭಾ ಮಧ್ಯಾಹ್ನ ತರಣಿ ಕಿರಣೈಃ ಪರಿತಾಪಿತಃ ॥೩೫॥

ದೈವಾತ್ಸಂವರ್ತಸ್ಯ ಮಾರ್ಗಂ ಪ್ರಾಪ್ಯಾಽಽಸಾದಿತ ವಾನಹಂ ।
ಸ್ರವಚ್ಛೀತಲಪೀಯೂಷ ಮಕರಂದಾಲವಾಲಕಂ ॥೩೬॥

ಕಲ್ಪದ್ರುಮವರಂ ಸೇವ್ಯಂ ಸೇವಕಾಲಿ ಕುಲಾವೃತಂ ।
ತ್ವಾಂ ಮಹಾತ್ಮಾನಮನಘಂ ಸೋಽಹಂ ತ್ವದನುಕಂಪಿತಃ ॥೩೭॥

ಭವಾಮಿ ನಚಿರಾದೇವ ಸಂವರ್ತೋಕ್ತ್ಯಾ ಮಹತ್ವತಃ ।
ನಾಹಂ ವಿಶಂಕನೀಯಃ ಸ್ಯಾಮನನ್ಯ ಶರಣಾಗತಃ ॥೩೮॥

ಭವಾನ್ಮಯಾ ಸಂವಿದಿತೋ ನಿಶ್ಚಿತಶ್ಚಾಪಿ ಮೇ ಗುರುಃ ।
ಸದ್ವಾಽಸದ್ವಾ ಸ ಏವಾಽಸ್ತು ಪಂಥಾಸ್ತೇ ಸದ್ಗುರೋರ್ಮಮ ॥೩೯॥
ಗುರುಃ ಸಾಕ್ಷಾತ್ಪರಶಿವಃ ಸರ್ವೇಷಾಮಾತ್ಮದೋ ಮತಃ ।

ವಾದ ಕಿರಣಗಳಿಂದ ಬಹುವಾಗಿ ಪೀಡಿಸಲ್ಪಟ್ಟು ಮುಂಗಾಣದೆ ತೊಳಲುತ್ತಿರುವಾಗ ಅದೃಷ್ಟಬಲದಿಂದ ಸಿಕ್ಕಿದ ಸಂವರ್ತನ ಸಹಾಯದಿಂದ ಸರಿಯಾದ ಮಾರ್ಗಕ್ಕೆ ಬಂದಿರುತ್ತೇನೆ. ||೩೪-೩೫||

ಯಾವಾಗಲೂ ಸುರಿಯುತ್ತಿರುವ ಅಮೃತವೆಂಬ ಮಕರಂದದಿಂದ ಕೂಡಿದ ಪಾತಿಯುಳ್ಳ ಕಲ್ಪವೃಕ್ಷರೂಪನಾದ, ಸೇವಿಸಲರ್ಹನಾದ, ಅನೇಕ ಸೇವಕರಿಂದ ಯುಕ್ತನಾದ, ಮಹಾತ್ಮನೂ, ಪರಿಶುದ್ಧನೂ ಆದ ಸಂವರ್ತ ಮುನಿಯ ಮಾತಿನ ಮಹಿಮೆಯಿಂದ ನಿನ್ನನ್ನು ಪಡೆದು ಸೇವಿಸಿ ನಾನು ನಿನ್ನ ದಯೆಯಿಂದಲೂ ಮತ್ತು ಉಪದೇಶದಿಂದಲೂ ಜಾಗ್ರತೆಯಾಗಿ ಉದ್ದಿಷ್ಟವಾದ ಫಲವನ್ನು ಪಡೆಯುತ್ತೇನೆ. ||೩೬-೩೭||

ಗುರುವೇ, ನನ್ನನ್ನು ಸಂಶಯದೃಷ್ಟಿಯಿಂದ ನೋಡಲಾಗದು. ನಾನು ನಿನ್ನನ್ನೇ ರಕ್ಷಕನನ್ನಾಗಿ ನಂಬಿ ಬಂದಿರುತ್ತೇನೆ. ನಿನ್ನನ್ನು ನಾನು ಚೆನ್ನಾಗಿಯೂ ಬಲ್ಲೆನು. ನಿಜವಾಗಿಯೂ ನೀನೇ ನನ್ನ ಗುರುವು. ||೩೮||

ಒಳ್ಳೆಯದೇ ಆಗಲಿ, ಕೆಟ್ಟದೇ ಆಗಲಿ ಸದ್ಗುರುವಿನ ಮಾರ್ಗವೇ ನನಗೂ ಇರಲಿ. ನಾನೂ ನಿನ್ನ ಮಾರ್ಗವನ್ನೇ ಅನುಸರಿಸುತ್ತೇನೆ. ಗುರುವೇ ಪ್ರತ್ಯಕ್ಷನಾದ ಪರಶಿವನು ಮತ್ತು ಸಕಲರಿಗೂ ಆತ್ಮಜ್ಞಾನವನ್ನುಂಟುಮಾಡುವವನು. ||೩೯||

ಅನಾತ್ಮಜ್ಞೈರಸದ್ಭಿಃ ಕಿಂ ಕೋ ಲಾಭಸ್ತತ್ಸಮಾಗಮಾತ್ ॥೪೦॥

ಧನೈಃ ಪುತ್ರೈರ್ಗೃಹೈಃ ಸ್ತ್ರೀಭಿರ್ಗ್ರಾಮೈರಖಿಲ ಭೂಧನೈಃ ।
ಪ್ರಾಪ್ತೈರನಾತ್ಮಭೂತೈಸ್ತೈರಪ್ರಾಪ್ತಾತ್ಮಫಲಸ್ಯ ಕಿಂ ॥೪೧॥

ಹೃತಾತ್ಮನಃ ಸುಖಂ ಕಸ್ಮಾದ್ಭವೇದಖಿಲ ವೈಭವೈಃ ।
ಜಾತ್ಯಂಧಸ್ಯೇವ ದೀಪಾನಾಂ ಸಹಸ್ರೈರಿವ ನೋ ಫಲಂ ॥೪೨॥

ತಸ್ಮಾನ್ಮಯಿ ಕೃಪಾಸಿಂಧೋ ಭಗವನ್ ದೀನವತ್ಸಲ ।
ಕೃಪಾ ಕರ್ತುಂ ಸಮುಚಿತಾ ಶುದ್ಧೋಽಹಂ ತ್ವತ್ಪದಾಶ್ರಿತಃ ॥೪೩॥

ಇತ್ಯೇವಂ ತಸ್ಯ ವಚನಂ ಶ್ರುತ್ವಾ ದೀನದಯಾಪರಃ ।
ಪ್ರಸನ್ನವದನಃ ಪ್ರಾಹ ದತ್ತಾತ್ರೇಯೋ ಮಹಾಮುನಿಃ ॥೪೪॥

ಆತ್ಮಜ್ಞಾನವನ್ನುಂಟುಮಾಡುವ ಸಾಮರ್ಥ್ಯವಿಲ್ಲದ ದುಷ್ಟರಿಂದ ಏನು ಪ್ರಯೋಜನ ? ಅಂತಹವರಲ್ಲಿಗೆ ಹೋಗುವುದರಿಂದ ತಾನೇ ಏನು ಪ್ರಯೋಜನ ? ಆತ್ಮಜ್ಞಾನಕ್ಕೆ ಸಹಾಯಕಗಳಲ್ಲದ ಹಣ, ಮಕ್ಕಳು, ಮನೆ, ಹೆಣ್ಣು, ಗ್ರಾಮ ಇವುಗಳೇ ಮೊದಲಾದವುಗಳ ಪ್ರಾಪ್ತಿಯಿಂದ ಏನು ಪ್ರಯೋಜನ ? ಆತ್ಮಜ್ಞಾನವಲ್ಲದೆ ಬೇರಾವಫಲದಿಂದ ಏನು ಪ್ರಯೋಜನ ? ॥೪೦-೪೧॥

ಸಕಲ ವೈಭವಗಳಿಂದ ತಾನೆ ಅಜ್ಞಾನಿಗೆ ಏನು ಪ್ರಯೋಜನವಾದೀತು ? ಹುಟ್ಟುಕುರುಡನಾದವನಿಗೆ ಸಾವಿರಾರು ದೀಪಗಳಿಂದ ಹೇಗೆ ಪ್ರಯೋಜನವಿಲ್ಲವೋ ಹಾಗೆ ಅಜ್ಞಾನಿಗಳಿಗೆ ಅನೇಕ ಐಶ್ವರ್ಯದಿಂದ ಏನೂ ಪ್ರಯೋಜನವಿಲ್ಲವು. ॥೪೨॥

ದಯಾಸಮುದ್ರನೂ ದೀನರಲ್ಲಿ ಅಭಿಮಾನಉಳ್ಳವನೂ ಆದ ಓ ಪೂಜ್ಯನೇ, ಆದಕಾರಣ ನನ್ನಲ್ಲಿ ದಯೆಮಾಡು. ನಾನು ನಿನ್ನ ಪಾದಸೇವೆಯಿಂದ ಪರಿಶುದ್ಧನು. ನನ್ನಲ್ಲಿ ದಯೆಯನ್ನು ಮಾಡುವುದು ಉಚಿತವೂ ಆಗಿದೆ. ॥೪೩॥

ಈರೀತಿಯಾದ ಪರಶುರಾಮನ ಮಾತನ್ನು ಕೇಳಿ ದೀನರಲ್ಲಿ ಕರುಣೆಯುಳ್ಳ ಮುನಿಶ್ರೇಷ್ಠನಾದ ಆ ದತ್ತಾತ್ರೇಯನು ಶಾಂತವದನನಾಗಿ ಹೇಳಿದನು. ॥೪೪॥

ಸಾಧು ವತ್ಸ ಜಾಮದಗ್ನ್ಯ ಸಮ್ಯಗ್ವ್ಯವಸಿತಂ ತ್ವಯಾ ।
ಸ್ವಾತ್ಮನಃ ಪದವೀ ಶ್ರೇಷ್ಠಾ ದುರ್ಲಭಾ ಪರಿಮಾರ್ಗಿತಾ ॥೪೫॥

ನೈತದಲ್ಪ ಫಲಂ ಜ್ಞೇಯಂ ಯದಾತ್ಮಪದಮಾರ್ಗಣಂ ।
ಆಶ್ಚರ್ಯೋಽತ್ರ ನರೋ ಲೋಕೇ ಸ್ವಾತ್ಮಲೋಕಾನುಚಿಂತಕಃ ॥೪೬॥

ಏತಾವದತ್ರ ನೃತನೌ ಸಾರಭೂತಂ ಮಹಾಫಲಂ ।
ಶಾಶ್ವತ ಪ್ರಾಪಕಂ ಸತ್ಯಂ ಯದಾತ್ಮಪದಮಾರ್ಗಣಂ ॥೪೭॥

ನೂನಂ ಜನಾ ಗೋಚರೇಷು ಸಂಧೃತಾಕ್ಷಾಶಯಾ ಸ್ಸದಾ ।
ಇಂದ್ರಜಾಲ ನಿಭೇಷ್ವದ್ಧಾ ಸಮೀಹಂತೇ ಪದೇ ಪದೇ ॥೪೮॥

ಅಲಭ್ಯ ತತ್ರ ವಿಶ್ರಾಂತಿಂ ಕಾಲಪಾಶೇನ ಪಾಶಿತಾಃ ।
ದೇಹಾದ್ದೇಹಾಂತರಂ ಯಾಂತಿ ಚಾಸಂಖ್ಯೇಯ ಪರಿಕ್ರಮೈಃ ॥೪೯॥

ವತ್ಸ, ಜಾಮದಗ್ನ್ಯನೇ, ನೀನು ಸರಿಯಾಗಿ ನಿರ್ಣಯಿಸಿದೆ. ಆತ್ಮಪದವಿ ಎಂಬುದು ಶ್ರೇಷ್ಠವಾದುದು ಮತ್ತು ಹುಡುಕಿದರೆ ದೊರಕಲಸಾಧ್ಯವಾದುದು. ॥೪೫॥

ಪ್ರಪಂಚದಲ್ಲಿ ಮನುಷ್ಯನಾದವನು ಆತ್ಮಜ್ಞಾನ ಪಡೆಯಲು ಅನುಸಂಧಾನ ಮಾಡುತ್ತಾನೆಂಬುದು ಆಶ್ಚರ್ಯಕರವಾದುದು. ನೀನು ಆತ್ಮಜ್ಞಾನ ಪಡೆಯಲು ಪ್ರಯತ್ನಿಸುತ್ತಿರುವುದು ಅಲ್ಪವಾದುದೆಂದು ಭಾವಿಸಬೇಡ. ಲೋಕದಲ್ಲಿ ಈಶ್ವರೀಯ ಜ್ಞಾನಕ್ಕಾಗಿ ಪ್ರಯತ್ನಪಡುವವರು ವಿರಳ. ॥೪೬॥

ಮನುಜಶರೀರದಲ್ಲಿ ಸಾರಭೂತವಾದ ಶ್ರೇಷ್ಠ ಫಲವು ಆತ್ಮಜ್ಞಾನವನ್ನು ಪಡೆಯುವುದು ಒಂದೇ ಆಗಿದೆ. ಅದೇ ಸತ್ಯವಾದುದು ಮತ್ತು ಸ್ಥಿರತೆಯನ್ನು ಹೊಂದಿಸತಕ್ಕದ್ದು. ॥೪೭॥

ಲೋಕದ ಜನಗಳು ಯಾವಾಗಲೂ ಅನೇಕ ವಿಧವಾದ ಇಂದ್ರಜಾಲಕ್ಕೆ ಸದೃಶವಾದ ಇಂದ್ರಿಯಗಳ ವಿಷಯಾನುಭವದ ಸುಖದಲ್ಲಿ ಆಸಕ್ತವಾದ ಮನಸ್ಸುಳ್ಳವರಾಗಿರುತ್ತಾರೆ. ॥೪೮॥

ಅಲ್ಲಿ ವಿಶ್ರಾಂತಿಸುಖವನ್ನು ಪಡೆಯದೆ ಕಾಲಪಾಶಕ್ಕೆ ಒಳಗಾಗಿ ಹೋಗುತ್ತಾ ಮೃತ್ಯುವಶರಾಗುತ್ತಾರೆ. ಅನಂತರದಲ್ಲಿ ದೇಹದಿಂದ ದೇಹಕ್ಕೆ ಹೋಗುತ್ತಾ ಅನೇಕ ಪರಿಕ್ರಮಗಳನ್ನು ಮಾಡುತ್ತಾರೆ. ॥೪೯॥

ಚಕ್ರಾಂದೋಲನ ಯಂತ್ರಸ್ಥ ಜನಾ ಇವ ಮುಧಾ ಸದಾ ।
ಊರ್ಧ್ವಾರ್ಧೋ ಮಧ್ಯಗಮನಂ ಯಾಂತಿ ತತ್ತದ್ಗತಿ ಕ್ರಮಾತ್ ॥೫೦॥

ಪ್ರಸನ್ನೋಽಹಂ ಜಾಮದಗ್ನ್ಯ ದೃಷ್ಟ್ವಾ ನಿಷ್ಠಾಂ ತವಾಚಲಾಂ ।
ವದ ತೇಽಭೀಪ್ಸಿತಂ ಕಿಂ ತದಾಗತೋ ಯನ್ನಿಮಿತ್ತತಃ ॥೫೧॥

ಶ್ರುತ್ವೈವಂ ತದ್ವಚೋ ರಾಮಃ ಪ್ರಸನ್ನೇಂದ್ರಿಯ ಮಾನಸಃ ।
ಪ್ರಣಿಪತ್ಯ ಪ್ರಶ್ರಯತಃ ತಮಾಹ ಪ್ರಾಪ್ತ ವಿಷ್ಟರಃ ॥೫೨॥

ಕೃತಾಂಜಲಿರ್ಮಧುರಯಾ ಗಿರಾ ಸೂನೃತಯಾ ತದಾ ।
ಮಹಾರಾಜ ಗುರೋ ಸ್ವಾಮಿನ್ ತ್ವಯಿ ತುಷ್ಟೇ ಮಹೇಶ್ವರೇ॥೫೩॥
ಕಿಮಲಭ್ಯ ಮಿಹಾಸ್ತ್ಯನ್ಯದಿಹ ಲೋಕೇ ಪರತ್ರ ಚ ।
ರತ್ನೇಚ್ಛಸ್ಯೇವ ಸಂಪ್ರಾಪ್ತ ರೋಹಣಸ್ಯ ಮಹಾತ್ಮನಃ ॥೫೪॥

ಸುತ್ತುವ ಚಕ್ರಕ್ಕೆ ಅಧೀನರಾದ ಜನರು ಹೇಗೆ ಚಕ್ರದ ಗತಿಗೆ ಸರಿಯಾಗಿ ಚಕ್ರದ ಸುತ್ತಲೂ ಮೇಲೆ ಕೆಳಗೆ ಮತ್ತು ಮಧ್ಯಭಾಗಗಳಲ್ಲಿ ವ್ಯರ್ಥವಾಗಿ ಸುತ್ತುತ್ತಿರುತ್ತಾರೋ ಹಾಗೆ ಜನರು ದೇಹದಿಂದ ದೇಹಕ್ಕೆ ಸುತ್ತುತ್ತಿರುತ್ತಾರೆ. ॥೫೦॥

ಎಲೌ ಜಾಮದಗ್ನ್ಯನೇ, ಅಚಲವಾದ ನಿನ್ನ ನಿಷ್ಠೆಯನ್ನು ನೋಡಿ ನಾನು ತೃಪ್ತಿಗೊಂಡೆನು. ಯಾವ ಕಾರಣಕ್ಕಾಗಿ ಬಂದೆ? ನಿನ್ನ ಇಚ್ಛೆ ಏನು? ಹೇಳುವವನಾಗು. ॥೫೧॥

ಪರಶುರಾಮನು ದತ್ತಾತ್ರೇಯನ ಈ ಪ್ರಕಾರವಾದ ಮಾತನ್ನು ಕೇಳಿ ಸಂತೋಷಗೊಂಡು ನಮಸ್ಕರಿಸಿ ಆಸನದಲ್ಲಿ ಕುಳಿತುಕೊಂಡು ನಮ್ರಭಾವದಿಂದ ಅಂಜಲಿಬದ್ಧನಾಗಿ ಮಧುರವಾಗಿ ಹೇಳತೊಡಗಿದನು. ॥೫೨॥

ಓ ಸ್ವಾಮಿಯೇ, ಗುರುಶ್ರೇಷ್ಠನೇ, ಮಹಾಮಹಿಮನಾದ ನೀನು ಸಂತೋಷಗೊಂಡರೆ ಈ ಲೋಕದಲ್ಲಾಗಲೀ, ಪರಲೋಕದಲ್ಲಾಗಲೀ ಅಲಭ್ಯವಾದುದು ಬೇರಾವುದಿದೆ? ಸಿದ್ಧಿಸಿದ ಇಚ್ಛೆಯುಳ್ಳ ಮಹಾತ್ಮನಾದ ರತ್ನೇಚ್ಛಕನು ರೋಹಣ ಪರ್ವತವನ್ನು ಪಡೆದಂತೆ, ನಾನು ನಿನ್ನಲ್ಲಿಗೆ ಪ್ರಾಪ್ತನಾಗಿದ್ದೇನೆ. ॥೫೩-೫೪॥

ನೂನಂ ಮಯಾ ಬಹುತಿಥಂ ಸಂಸೃತೇರ್ವರ್ತ್ಮ ಸಂಶ್ರಿತಂ ।
ತತ್ರ ಭ್ರಮನ್ನ ವಿಶ್ರಾಂತಿಂ ಲಬ್ಧವಾನ್ ಲೇಶತಃ ಕ್ವಚಿತ್ ॥೫೫॥

ಈಹಾಮನ್ಯು ಜ್ವಲತ್ಕೀಲಿ ಜ್ವಾಲಾಜಾಲ ಸಮಾಕುಲಃ ।
ದಂದಹ್ಯಮಾನೋಽನುದಿನಂ ದೀರ್ಘಕಾಲೋಽತಿ ನಾಹಿತಃ ॥೫೬॥

ಅಂತಃ ಶೀತಲತಾ ಲಬ್ಧಾ ನ ಮಯಾ ಕುತ್ರಚಿತ್ಕ್ವಚಿತ್ ।
ಲೋಕೇ ಸರ್ವೇ ನರಾ ನಾರ್ಯೋ ಮೃಗಾ ಯಾದೋ ವಿಹಂಗಮಾಃ ॥೫೭॥

ಆಢ್ಯೋ ರಂಕೋ ಮಹೀಪಾಲೋ ಮಂಡಲೇಶಶ್ಚ ಚಕ್ರಪಃ ।
ಗಂಧರ್ವಾ ಗುಹ್ಯಕಾ ಯಕ್ಷಾಃ ಸಿದ್ಧವಿದ್ಯಾಧರಾದಯಃ ॥೫೮॥

ಸರ್ಪಾ ನಾಗಾ ಯಾತುಧಾನಾ ಇಂದ್ರಚಂದ್ರಾದಯೋಽಪಿ ಚ ।
ದಂದಹ್ಯಮಾನಾ ಏವೈತೇ ಸದಾ ಕಾಮಮಹಾಗ್ನಿನಾ ॥೫೯॥

ತಸ್ಮಾದ್ಯಥಾಽಹಮನಿಶಂ ಭವೇಯಂ ಸರ್ವಶೀತಲಃ ।
ದಹ್ಯಮಾನೇ ವನೇ ಗಂಗಾ ಮಧ್ಯಸ್ಥ ಇವ ಸಿಂಧುರಃ ॥೬೦॥
ತಥಾಽಹಂ ಭವತಃ ಸಮ್ಯಗ್ಬೋಧಿತಃ ಸ್ಯಾಮಿತಿ ಪ್ರಭೋ ।

ಓ ಗುರುವೇ, ಅನೇಕ ಕಾಲದಿಂದ ನಾನು ಈ ಸಂಸಾರಮಾರ್ಗದಲ್ಲಿ ಬಿದ್ದು, ತೊಳಲುತ್ತಾ ಸ್ವಲ್ಪವೂ ವಿಶ್ರಾಂತಿಸುಖವನ್ನು ಪಡೆಯಲಿಲ್ಲ. ಕಾಮಕ್ರೋಧಗಳೆಂಬ ಅಗ್ನಿಜ್ವಾಲೆಯಲ್ಲಿ ಸಿಕ್ಕಿ ದಹಿಸಲ್ಪಡುತ್ತಾ ನಾನು ಸಂಸಾರದಲ್ಲಿ ಬಹುಕಾಲವನ್ನು ಕಳೆದಿರುತ್ತೇನೆ. ಎಷ್ಟೇ ತೊಳಲಿದರೂ ಸಂಸಾರಮಾರ್ಗದಲ್ಲಿ ಸ್ವಲ್ಪವೂ ಮನಶ್ಯಾಂತಿಯು ದೊರೆಯಲಿಲ್ಲ. ॥೫೫-೫೬॥

ಲೋಕದಲ್ಲಿ ಹೆಂಗಸರು, ಗಂಡಸರು, ಮೃಗಪಕ್ಷಿಗಳು, ಬಡವರು, ಬಲ್ಲಿದರು, ರಾಜರು, ಚಕ್ರವರ್ತಿಗಳು, ಗಂಧರ್ವರು, ಗುಹ್ಯರು, ಯಕ್ಷರು, ಸಿದ್ಧರು, ವಿದ್ಯಾಧರರು ಇವರೇ ಮೊದಲಾದವರು, ಸರ್ಪಗಳು, ನಾಗರು, ರಾಕ್ಷಸರು ಮತ್ತು ಇಂದ್ರಚಂದ್ರರೇ ಮೊದಲಾದ ಸಕಲರೂ ಕೂಡ ಕಾಮವೆಂಬ ಮಹಾಗ್ನಿಯಿಂದ ದಹಿಸಲ್ಪಡುವವರಾಗಿರುತ್ತಾರೆ. ॥೫೭-೫೮-೫೯॥

ಆದಕಾರಣದಿಂದ ಓ ಸ್ವಾಮಿಯೇ, ಕಾಡು ಉರಿಯುತ್ತಿರಲು ಗಂಗೆಯ ಮಧ್ಯದಲ್ಲಿರುವ ಆನೆಯು ಹೇಗೆ ಅಗ್ನಿಯ ಬೇಗೆಗೆ ಸಿಗದೆ ಶಾಂತವಾಗಿರುತ್ತದೋ

ಇತಿ ತದ್ವಾಕ್ಯಮಾಕರ್ಣ್ಯ ದತ್ತಾತ್ರೇಯೋ ಮಹಾಮುನಿಃ ।೬೧॥

ಅವದತ್ಸುಶುಭಾಂ ವಾಣೀಂ ಹರ್ಷಯನ್ಭಾರ್ಗವಂ ಮುನಿಂ ।
ರಾಮ ಸಂಶೃಣು ಮದ್ವಾಕ್ಯಂ ಯದುಕ್ತಂ ಭವತಾಽನಘ ॥೬೨॥

ಅತ್ಯಂತ ಶ್ರೇಯಸೋ ಮೂಲಮೇತತ್ತೇ ವಾಂಛಿತಂ ಶುಭಂ।
ನೂನಂ ತ್ವಯಿ ಕೃಪಾ ಸಮ್ಯಗ್ಭಗವತ್ಯಾ ಸಮಾಹಿತಾ ॥೬೩॥

ಅನೇಕ ಪ್ರಾಗ್ಜನ್ಮ ಕೃತಂ ಸುಕರ್ಮ ಫಲಿತಂ ತವ।
ನ ಹ್ಯಲ್ಪಕರ್ಮಭಿರ್ಜಾತು ಶುಭಮೇವಂ ಪ್ರಜಾಯತೇ ॥೬೪॥
ಮಹಾಫಲಂ ವ್ಯವಸಿತಮಾರಾತ್ತೇ ಹಿ ಫಲೋದಯಃ।

ಹಾಗೆ ನಾನು ನಿನ್ನಿಂದ ಉಪದೇಶದ ತಿಳಿವಳಿಕೆಯಿಂದ ಎಚ್ಚರಗೊಳಿಸಲ್ಪಟ್ಟವನಾಗಿ ಸಂಸಾರವೆಂಬ ದುಃಖಾಗ್ನಿಯ ಬೇಗೆಗೆ ಸಿಲುಕದೆ ಶಾಂತನಾಗಿರುವಂತೆ ಮಾಡು.॥೬೦॥

ಈರೀತಿಯಾದ ಪರಶುರಾಮನ ಮಾತನ್ನು ಕೇಳಿದ ದತ್ತಾತ್ರೇಯ ಮುನಿವರನು ಪರಶುರಾಮನಿಗೆ ಸಂತೋಷವನ್ನುಂಟುಮಾಡುವ ಮಂಗಳಕರವಾದ ಮಾತನ್ನು ಹೇಳಿದನು. ॥೬೧॥

ಎಲೌ ಪರಶುರಾಮನೇ, ನಿನಗೆ ಇಷ್ಟವಾದ ಯಾವುದನ್ನು ಹೇಳಿದೆಯೋ ಅಂತಹ ಅತಿಶಯ ಶ್ರೇಯಸ್ಸುಗಳಿಗೆ ಮೂಲಕಾರಣವಾದ ನನ್ನ ಮಾತನ್ನು ಕೇಳುವವನಾಗು. ॥೬೨॥

ಎಲೌ ಭಾರ್ಗವನೇ, ಈಗಲೀಗ ನೀನು ನಿಜವಾಗಿಯೂ ಭಗವತಿಯ ದಯೆಗೆ ಪಾತ್ರನಾಗಿರುವೆ. ನೀನು ಅನೇಕ ಜನ್ಮಗಳಿಂದ ಆರ್ಜಿಸಿದ ಪುಣ್ಯಫಲಗಳು ಈಗ ಫಲಿಸಿದುವು. ॥೬೩॥

ಸ್ವಲ್ಪವಾದ ಕೆಲಸಗಳಿಂದ ಯಾವಾಗಲೂ ಈರೀತಿಯಾದ ಶುಭಫಲವುಂಟಾಗುವುದಿಲ್ಲ. ನಿನ್ನ ಪುಣ್ಯಕರ್ಮಗಳ ಫಲಾವಿರ್ಭಾವವು ದೊಡ್ಡದೂ ಮತ್ತು ಶ್ರೇಷ್ಠವಾದುದೂ ಆಗಿದೆ. ॥೬೪॥

ಶೃಣು ಮದ್ವಚನಂ ರಾಮ ಸಾವಧಾನೇನ ಚೇತಸಾ ॥೬೫॥

ಆತ್ಯಂತಿಕಂ ತು ಯತ್ ಕ್ಷೇಮಂ ತತ್ತೇಽಭೀಷ್ಟತಮಂ ಮತಂ ।
ತದ್ವಿನಾ ಜ್ಞಾನಯೋಗೇನ ನ ಸಿಧ್ಯತಿ ಕದಾಚನ ॥೬೬॥

ಸರ್ವೇಷಾಂ ಪ್ರಾಣಿನಾಮಾತ್ಮಾ ಸಾಕ್ಷಾದೇವ ಪರಃಶಿವಃ ।
ಸ್ವಮಾಯಾ ವೈಭವ ವಶಾತ್ಸ್ವಾತ್ಮಾನಮವಿದನ್ ಪರಂ ॥೬೭॥

ಸಂಕೋಚೇ ಸರ್ವಶಕ್ತೀನಾಂ ಸ್ವಯಂ ಸಂಕುಚಿತಸ್ತತಃ ।
ನೈತಾವದಿಹ ಸತ್ಯಂ ಸ್ಯಾದ್ಭಾತಿ ರಿಕ್ತಮಪಿ ಕ್ವಚಿತ್ ॥೬೮॥

ತಥಾ ತಥಾ ಭಾಸನಾತ್ತು ವಿನಾ ಕಿಂಚಿನ್ನವಿದ್ಯತೇ ।
ಭಾಸನಂ ಭಾನಮೇವೇಹ ನಾಭಾಸಾದ್ಭಾಸನಂ ಪೃಥಕ್ ॥೬೯॥

ಭಾನಶಕ್ತಿರ್ಭಾಸನಂ ಹಿ ಭಾನಾತ್ಮಾ ಪರಮಃ ಶಿವಃ ।
ಸ ಏವಾತ್ಮ ಚ್ಛಯಾ ಶಕ್ತ್ಯಾ ಸ್ವಯಮೇಕಃ ಸನಾತನಃ ॥೭೦॥
ಭಾಸತೇ ವಿವಿಧಾಕಾರೋ ವಿಚಿತ್ರತ್ವೇನ ಸರ್ವತಃ ।

ಎಲೌ ಭಾರ್ಗವನೇ, ಶಾಂತಮನಸ್ಕನಾಗಿ ನನ್ನ ಮಾತನ್ನು ಕೇಳುವವನಾಗು. ಬಹು ಅಮೂಲ್ಯವಾದ ಕ್ಷೇಮ ಯಾವುದುಂಟೋ ಅದೇ ನಿನಗೆ ಇಷ್ಟವೆಂದು ಅಭಿಪ್ರಾಯವು. ಅದು ಜ್ಞಾನಯೋಗದಿಂದಲ್ಲದೆ ಮತ್ತಾವುದರಿಂದಲೂ ಸಿದ್ಧಿಸುವುದಿಲ್ಲ. ॥೬೫-೬೬॥

ಸಾಕ್ಷಾತ್ ಪರಶಿವನೇ ಸಕಲ ಪ್ರಾಣಿಗಳ ಆತ್ಮನು. ಜೀವಾತ್ಮನು ತನ್ನ ಮಾಯೆಗೆ ಅಧೀನನಾಗಿ ಸಕಲ ಶಕ್ತಿಗಳೂ ಸಂಕುಚಿತವಾಗಲು ತಾನೂ ಸಹ ಸಂಕುಚಿತನಾಗಿ ಶ್ರೇಷ್ಠವಾದ ಪರಮಾತ್ಮಸ್ವರೂಪವನ್ನು ತಿಳಿಯದೇ ಇರುತ್ತಾನೆ. ॥೬೭॥

ಇಲ್ಲಿ ಸತ್ಯವಾದುದು ಇಷ್ಟೇ. ಇದಕ್ಕಿಂತಲೂ ಬೇರಾವುದೂ ತೋರುವುದಿಲ್ಲ. ತೋರುವುದಕ್ಕಿಂತಲೂ ಬೇರಾವುದೂ ಇಲ್ಲಿ ಇಲ್ಲವು. ॥೬೮॥

ಭಾಸನಶಕ್ತಿಯೂ ಭಾನವೂ ಒಂದೇ. ಭಾನಕ್ಕಿಂತಲೂ ಭಾಸನವು ಬೇರೆಯಲ್ಲವು. ಭಾನದ ಶಕ್ತಿಯೇ ಭಾಸನವು. ಪರಶಿವನೇ ಭಾನರೂಪನಾಗಿರತಕ್ಕವನು. ॥೬೯॥

ನಿರ್ಮಲವಾದ ತನ್ನ ಶಕ್ತಿಯಿಂದ ಪುರಾತನನಾದ ಆ ಪರಶಿವನು

ಸ ಏವಾತ್ಮಾ ತು ಸರ್ವೇಷಾಂ ಲೋಕಾನಾಂ ನಿತ್ಯಸತ್ಪ್ರಭಃ ॥೨೧॥

ಅಭಾತ ಇವ ಭಾತೋಽಪಿ ಸದಾ ಮೋಹೇನ ಮನ್ಯತೇ ।
ತಸ್ಮಾತ್ತತ್ಪ್ರತ್ಯಭಿಜ್ಞಾನಾತ್ ಮೋಹನಾಶೇ ಸತಿ ದ್ರುತಂ ॥೨೨॥

ಅಂತರ್ಬಹಿಃ ಸರ್ವತಶ್ಚ ಗಂಗಾಂತರ್ದ್ವಿಪಗೋ ಯಥಾ ।
ಶೀತಲಂ ಭಾವಮಭ್ಯೇತಿ ನಾನ್ಯಥಾ ಯತ್ನಕೋಟಿಭಿಃ ॥೨೩॥

ತಜ್ಜ್ಞಾನಂ ದುರ್ಲಭಂ ಲೋಕೇ ದುರ್ಲಕ್ಷ್ಯಂ ವಿಷಯಾತ್ಮಭಿಃ ।
ವಿನಾ ಪರಾಶಕ್ತಿಕೃಪಾಂ ನೈವ ಲಭ್ಯಂ ಕದಾಚನ ॥೨೪॥

ಅತ ಆದೌ ಸರ್ವಜನ್ಯೈಃ ಸೇವ್ಯಾ ಸಾ ತ್ರಿಪುರಾಂಬಿಕಾ ।
ಸೇವನಂ ತು ವಿನಾ ಭಕ್ತ್ಯಾ ದುರ್ಲಭಾ ಜನ್ಮಕೋಟಿಭಿಃ ॥೨೫॥
ಸಾಽಪಿ ತಸ್ಯಾಃ ಸುಮಹಿಮಾಽಽಕರ್ಣನೇನ ವಿನಾ ತಥಾ ।

ತಾನೊಬ್ಬನೇ ಅನೇಕ ರೂಪಗಳಿಂದ ಕೂಡಿ ಎಲ್ಲೆಡೆಯಲ್ಲೂ ವಿಚಿತ್ರವಾಗಿ ತೋರುತ್ತಿರುತ್ತಾನೆ. ॥೨೦॥

ಆ ಪರಶಿವನೇ ಸಕಲ ಲೋಕಗಳೊಳಗೆ ನಿತ್ಯವಾದ ಸತ್ಪ್ರಭಾಪೂರ್ಣನು. ಆ ಪರಮಾತ್ಮನು ಪ್ರಕಾಶಮಾನನಾದ ಚಿದ್ವಸ್ತುವಾದರೂ ಅಜ್ಞಾನದಿಂದ ಅಪ್ರಕಾಶ ವಸ್ತುವೆಂಬಂತೆ ತಿಳಿಯಲ್ಪಡುತ್ತಾನೆ. ॥೨೧॥

ಅದಕಾರಣದಿಂದ ಆ ಪರಶಿವನ ಪ್ರತ್ಯಭಿಜ್ಞಾನದಿಂದ ಅಜ್ಞಾನವು ನಾಶವಾಗಲು ಒಳಗೆ ಹೊರಗೆ ಎಲ್ಲೆಲ್ಲೂ ತೃಪ್ತಿಯನ್ನು, ಗಂಗೆಯ ಮಧ್ಯದಲ್ಲಿರುವ ಗಜದಂತೆ, ಹೊಂದುತ್ತೀಯೆ. ಹಾಗಲ್ಲದೆ ಬೇರಾವ ಪ್ರಯತ್ನಗಳಿಂದಲೂ ಸಂಸಾರದಾವಾಗ್ನಿಯ ಬೇಗೆಯು ತಪ್ಪಲಾರದು. ॥೨೨-೨೩॥

ಪರಮಾತ್ಮನ ಪ್ರತ್ಯಭಿಜ್ಞಾನವು ದುರ್ಲಭವಾದುದು ಮತ್ತು ಇಂದ್ರಿಯಗಳನ್ನು ಜಯಿಸದವರಿಗೆ ಅಗೋಚರವಾದುದು. ಅದೂ ಕೂಡ ತ್ರಿಪುರಾಂಬಿಕೆಯ ಕೃಪೆಗೆ ಪಾತ್ರರಲ್ಲದವರಿಗೆ ಯಾವಾಗಲೂ ಲಭಿಸುವುದಿಲ್ಲ. ॥೨೪॥

ಆದುದರಿಂದ ಸಕಲರೂ ಕೂಡ ಮೊದಲು ತ್ರಿಪುರಾಂಬಿಕೆಯನ್ನು ಸೇವಿಸಬೇಕು. ಆ ದೇವಿಯ ಸೇವೆಯಾದರೋ ಭಕ್ತಿಯಿಲ್ಲದೇ ಲಭ್ಯವಾಗುವುದಲ್ಲ.

ತಸ್ಮಾತ್ಪ್ರಯತ್ನೇನ ಜನೈಃ ಸದಾ ಸುಶ್ರದ್ಧಯಾ ಯುತೈಃ ॥೭೬॥

ಶ್ರೋತವ್ಯಾ ಕೀರ್ತಿತವ್ಯಾ ಚ ತ್ರಿಪುರಾಯಾಃ ಪರಾ ಕಥಾ ।
ಶೃಣ್ವತೋಽನುದಿನಂ ಸೈವ ದೃಢಾಂ ಭಕ್ತಿಂ ಪ್ರಯಚ್ಛತಿ ॥೭೭॥

ಯಯಾಽಽಸಾದ್ಯ ಪರಾಂ ಸೇವಾಂ ಸಮಾಪ್ನೋತ್ಯಭಯಂ ಪದಂ ।
ನಾನ್ಯಃ ಪಂಥಾಃ ತಸ್ಯ ಭವೇತ್ಪದಸ್ಯ ಪ್ರಾಪಣೇ ಕ್ವಚಿತ್ ॥೭೮॥

ಅತ ಆದೌ ಪರಾ ಶ್ರದ್ಧಾ ಕರ್ತವ್ಯಾ ಮಹಿಮಶ್ರುತೌ ।
ಸೈವ ಕಲ್ಪತರು ರ್ನ್ಣಾಂ ವಾಂಛಿತಾರ್ಥ ಪ್ರಸಾಧನೇ ॥೭೯॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ
ದತ್ತಗುರೋರನುಗ್ರಹವರ್ಣನಂ ನಾಮ ಷಷ್ಠೋಽಧ್ಯಾಯಃ

ದೇವಿಯಲ್ಲಿ ಭಕ್ತಿಯುಂಟಾಗಬೇಕಾದರೂ ತಾಯಿಯ ಮಹಾತ್ಮ್ಯೆಯನ್ನು ಕೇಳುವುದರಿಂದಲೇ ಹೊರತು ಬೇರಾವುದರಿಂದಲೂ ಉಂಟಾಗುವುದಿಲ್ಲವು. ॥೭೫॥

ಆದಕಾರಣ ಜನಗಳು ತ್ರಿಪುರಾಂಬಿಕೆಯ ಶ್ರೇಷ್ಠವಾದ ಕಥೆಯನ್ನು ಶ್ರದ್ಧಾ ಯುಕ್ತರಾಗಿ ಕೇಳಬೇಕು. ಹಾಗೆಯೇ ಕೀರ್ತನ ಮಾಡಬೇಕು. ॥೭೬॥

ದೇವಿಯ ಕಥೆಯನ್ನು ಪ್ರತಿ ದಿನವೂ ಕೇಳಿದರೆ ಆ ದೇವಿಯು ತೃಪ್ತಿಗೊಂಡು ದೃಢವಾದ ಭಕ್ತಿಯನ್ನು ಕೊಡುತ್ತಾಳೆ. ಆ ಭಕ್ತಿಯಿಂದ ಕೂಡಿ ದೇವಿಯನ್ನು ಸೇವಿಸೋಣದರಿಂದ ಜಂತುವು ಅಭಯಸ್ಥಾನವನ್ನು ಪಡೆಯುತ್ತದೆ. ॥೭೭॥

ಆ ರೀತಿಯ ಅಭಯಸ್ಥಾನವನ್ನು ಬೇರಾವ ಮಾರ್ಗದಿಂದಲೂ ಪಡೆಯಲಾಗುವುದಿಲ್ಲ. ಆದುದರಿಂದ ಪ್ರಥಮದಲ್ಲಿ ಹೆಚ್ಚಾದ ಶ್ರದ್ಧೆಯಿಂದ ದೇವಿಯ ಮಹಾತ್ಮ್ಯೆಯನ್ನು ಕೇಳಬೇಕು. ಅದೇ ಮನುಷ್ಯರಿಗೆ ಅವರ ಇಷ್ಟಗಳನ್ನು ನೆರವೇರಿಸುವುದರಲ್ಲಿ ಕಲ್ಪತರುವಿನಂತಿದೆ. ॥೭೮-೭೯॥

ಇಲ್ಲಿಗೆ ಇತಿಹಾಸೋತ್ತಮವಾದ ತ್ರಿಪುರಾರಹಸ್ಯದ ಮಾಹಾತ್ಮ್ಯಖಂಡದಲ್ಲಿ
ಪರಶುರಾಮನಿಗೆ ದತ್ತಗುರುವಿನ ಉಪದೇಶಾನುಗ್ರಹವೆಂಬ
ಆರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ಸಪ್ತಮೋಽಧ್ಯಾಯಃ ॥

ಏಳನೆಯ ಅಧ್ಯಾಯವು

ಇತಿ ಶ್ರುತ್ವಾ ಗುರೋರ್ವಾಕ್ಯಂ ಭಾರ್ಗವಃ ಪ್ರೀತಮಾನಸಃ ।
ಪುನರಾಹ ಶುಭಂ ವಾಕ್ಯಂ ಮಧುರಾಕ್ಷರ ಸುಸ್ವರಂ ॥೧॥

ಶ್ರೀಗುರೋ ಯಾ ತ್ವಯಾ ಪ್ರೋಕ್ತಾ ತ್ರಿಪುರೇತಿ ಪರಾಽಂಬಿಕಾ ।
ಕೀದೃಶೀ ಸಾ ಕಥಂ ಭೂತಾ ಕಿಂ ಸ್ವಭಾವಾ ಕಿಮಾಶ್ರಿತಾ ॥೨॥

ವದ ಮೇ ಕರುಣಾಸಿಂಧೋ ಸವಿಸ್ತರತಯಾಽಧುನಾ ।
ಇತಿ ಪರ್ಯನುಕ್ತಸ್ತು ಪ್ರೋವಾಚ ಲಲಿತಂ ವಚಃ ॥೩॥

ತ್ರಿಪುರಾ ಮಹಿಮಾಸಿಂಧು ಮಗ್ನಾಂತಃ ಕರಣೋ ಮುನಿಃ ।
ಧ್ಯಾತ್ವಾ ಪ್ರಣಮ್ಯ ಪರಮಾಂ ಧ್ಯಾನಜಾನಂದ ಸಂಪ್ಲುತಃ ॥೪॥

ಈ ಪ್ರಕಾರವಾದ ದತ್ತಗುರುವಿನ ಮಾತನ್ನು ಕೇಳಿದ ಪರಶುರಾಮನು ಸಂತೋಷಗೊಂಡನು. ಪುನಃ ಮಂಗಳಕರವಾದ ಮಾತನ್ನು ಮನೋಹರವಾಗಿ ಹೇಳತೊಡಗಿದನು. ॥೧॥

ಓ ಗುರುವೇ, ತ್ರಿಪುರದೇವಿ ಎಂಬ ಪರಾ ಅಂಬಿಕೆಯು ಇರುತ್ತಾಳೆ. ಅವಳ ಭಕ್ತಿಯಿಂದ ಮತ್ತು ಸೇವೆಯಿಂದ ಸಕಲವೂ ಸಿದ್ಧವಾಗುತ್ತದೆಂದು ಹೇಳಿದೆ. ಆ ದೇವಿಯು ಯಾವ ಪ್ರಕಾರವಾಗಿದಾಳೆ? ಅವಳ ಸ್ವಭಾವವು ಯಾವ ಪ್ರಕಾರ ವಾದುದು ? ಅವಳು ಏನನ್ನು ಆಶ್ರಯಿಸಿಕೊಂಡಿದಾಳೆ? ದಯಾಸಾಗರನೇ, ಈ ಎಲ್ಲ ವನ್ನೂ ವಿಸ್ತಾರವಾಗಿ ನನಗೆ ಹೇಳುವವನಾಗು. ॥೨॥

ಹೀಗೆ ಪರಶುರಾಮನು ಪ್ರಶ್ನಿಸಲು ದತ್ತಾತ್ರೇಯ ಮುನಿಯು ತ್ರಿಪುರಾ ಮಹಿಮೆಯೆಂಬ ಸಾಗರದಲ್ಲಿ ಮುಳುಗಿ ಉತ್ತಮಳಾದ ದೇವಿಯನ್ನು ಧ್ಯಾನಿಸಿ,

ಶೃಣು ರಾಮ ಪರಾಶಕ್ತೇರ್ಮಹಿಮಾ ಕೇನ ವರ್ಣ್ಯತೇ ।
ಲೋಕೇಶ್ವರೈರ್ವಿಧಾತ್ರಾದ್ಯೈಃ ಸರ್ವಜ್ಞೈಃ ಸರ್ವಶಕ್ತಿಕೈಃ ॥೫॥

ಅದ್ಯಾಪಿ ಸಾ ನ ವಿಜ್ಞಾತಾ ಕೇಯಂ ಕುತ್ರ ಸ್ಥಿತೇತ್ಯಪಿ ।
ನ ಸಾ ವರ್ಣಯಿತುಂ ಶಕ್ಯಾ ಈದೃಶೀತಿ ಯಥಾರ್ಥತಃ ॥೬॥

ವೇದಾಃ ಶಾಸ್ತ್ರಾಣಿ ತಂತ್ರಾಣಿ ವಕ್ತುಂ ನ ಪ್ರಭವಂತಿ ವೈ ।
ಪ್ರತ್ಯಕ್ಷಾದಿ ಪ್ರಮಾಣಾನಿ ಪರಾಕ್ಸಂ ಸ್ಥಾನಿ ಸರ್ವದಾ ॥೭॥

ವಿಶ್ರಾಂತಾನಿ ಮೇಯಪದೇ ನಾಕ್ರಾ(ಕ್ರ)ಮಂತಿ ತು ತತ್ಪದಂ ।
ವೈಶ್ವಾನರಸ್ಯ ಜ್ವಾಲೇವ ನಾಂತರ್ಗಚ್ಛತಿ ಕುತ್ರಚಿತ್ ॥೮॥

ಸಾ ಶಕ್ತಿರ್ಮಾತೃಸಾಮಸ್ತ್ಯ ಸಂಘಟ್ಟಪದವೀಂ ಶ್ರಿತಾ ।
ನ (ಸಾ) ತರ್ಕೇಣ ಯುಕ್ತ್ಯಾ ವಾ ಜ್ಞಾತುಂ ಯೋಗ್ಯಾ ಕದಾಚನ ॥೯॥
ಅಸ್ಮೀತ್ಯವಗಮಾದನ್ಯ ನ್ಯೋಪಲಭ್ಯೇತ ಕುತ್ರಚಿತ್ ।

ನಮಸ್ಕರಿಸಿ, ಧ್ಯಾನದಿಂದುಂಟಾದ ಸಂತೋಷದಿಂದ ಕೂಡಿದವನಾಗಿ ಮನೋಹರವಾದ ಮಾತನ್ನು ಹೇಳತೊಡಗಿದನು. ॥೩-೪॥

ಎಲೌ ರಾಮನೇ, ಪರಾಶಕ್ತಿಯಾದ ಅಂಬಿಕೆಯ ಮಹಿಮೆಯನ್ನು ಯಾರು ತಾನೇ ಪೂರ್ಣವಾಗಿ ಹೇಳಬಲ್ಲರು? ಸರ್ವಜ್ಞರೂ ಸರ್ವ ಸಮರ್ಥರೂ ಎನ್ನಿಸಿಕೊಂಡಿರುವ, ಲೋಕನಾಥರೂ, ಆದ ಬ್ರಹ್ಮನೇ ಮೊದಲಾದವರೂ ಆ ದೇವಿಯು ಯಾರು? ಎಲ್ಲಿರುತ್ತಾಳೆ? ಎಂಬುದನ್ನು ಅರಿಯರು. ಆ ದೇವಿಯನ್ನು ಅವಳು ಹೀಗೇ ಇರುವಳೆಂದು ವರ್ಣಿಸಲು ಯಾರೂ ಸಮರ್ಥರಲ್ಲವು. ॥೫-೬॥

ಆ ದೇವಿಯ ಮಹಿಮೆಯನ್ನು ವೇದ, ಶಾಸ್ತ್ರ, ಆಗಮಾದಿ ತಂತ್ರಗಳೂ ಹೇಳಲಾರವು. ಹೊರಕ್ಕೆ ಹೋಗಿ ಹೊರಗಿನ ವಿಷಯಗಳನ್ನು ತಿಳಿಸಬಲ್ಲ ಪ್ರತ್ಯಕ್ಷ ಅನುಮಾನವೇ ಮೊದಲಾದ ಪ್ರಮಾಣಗಳೂ ಕೂಡ ಆ ದೇವಿಯ ಸ್ಥಿತಿಯನ್ನು ಅರಿಯಲಾರವು. ॥೭॥

ಅಗ್ನಿಜ್ವಾಲೆಯು ಹೇಗೆ ಒಳಗೆ ಪ್ರವೇಶಿಸಲಾರದೋ ಹಾಗೆ ಯಾವ ಪ್ರಮಾಣಗಳೂ ಪ್ರತ್ಯಗ್ವೃತ್ತಿಯಿಂದ ಆ ದೇವಿಯನ್ನು ತಿಳಿಯಿಸಲಾರವು. ದೇವಿಯು ಸಕಲ ಮಾತೃಸ್ವರೂಪಳಾಗಿರುತ್ತಾಳೆ. ಅವಳು ತರ್ಕದಿಂದಾಗಲೀ ಯುಕ್ತಿಯಿಂದಾಗಲೀ ತಿಳಿ

ಸಾ ಲೀಲಾಽತ್ತತನುಃ ಶಾಸ್ತ್ರೈರ್ವೇದಾದ್ಯೈಶ್ಚ ನಿರೂಪ್ಯತೇ ॥೧೦॥

ಪ್ರಮಾಣಾನಾಂ ಪ್ರಮಾತ್ರೀ ಸಾ ಚಿಚ್ಛಕ್ತಿರಿತಿ ಶಬ್ದ್ಯತೇ ।
ಲೀಲಾಽತ್ತವಪುಷೋಽಪ್ಯಸ್ಯಾನಾಂತೋಽಸ್ತಿ ಮಹಿಮ್ನಾಂಬುಧೇಃ ॥೧೧॥

ಶಕ್ಯಾ ಗಣಯಿತುಂ ಸಮ್ಯಕ್ಪಾರ್ಥಿವಾಃ ಪರಮಾಣವಃ ।
ನಾಂತೋಽಸ್ತಿ ಮಹಿಮಾರಾಶೇರಸ್ಯಾಶ್ಚಿತ್ರತನೋಃ ಕ್ವಚಿತ್ ॥೧೨॥

ತಥಾಽಪಿ ಸಾರತೋ ಲೇಶಂ ತ್ರಿಪುರಾಚರಿತಸ್ಯ ತೇ ।
ಅಭಿಧಾಸ್ಯಾಮಿ ತದ್ರಾಮ ಸಾವಧಾನಮನಾಃ ಶೃಣು ॥೧೩॥

ಪುರಾ ಕ್ಷೀರಾಂಬುಧಿಪ್ರಾಂತೇ ಶಯಾನಃ ಫಣಿತಲ್ಪಕೇ ।
ಆದಿನಾರಾಯಣಃ ಸಾಕ್ಷಾತ್ತಸ್ಯಾಃ ಸತ್ವತನುರ್ಹರಿಃ ॥೧೪॥

ಯಲ್ಪಡಲಾರಳು. ಸಕಲ ಶಾಸ್ತ್ರಗಳು ಮತ್ತು ಪುರಾಣಗಳೂ ದೇವಿಯನ್ನು "ಅಸ್ಮಿ" ಎಂಬ ಸ್ವಾನುಭವ ಮಾತ್ರದಿಂದ ತಿಳಿಯಬೇಕೆಂದು ಹೇಳುತ್ತವೆ. ॥೮-೯॥

ಶಾಸ್ತ್ರಗಳೂ ಮತ್ತು ವೇದಾದಿಗಳೂ ದೇವಿಯನ್ನು, ಲೀಲೆಗಾಗಿ ಶರೀರವನ್ನು ಧರಿಸಿರುತ್ತಾಳೆ; ಇವಳೇ ಸಕಲ ಪ್ರಮಾಣಗಳ ಪ್ರಮಾತ್ರಿಯು, ಚಿತ್ಸ್ವರೂಪಳು, ಎಂಬುದಾಗಿ ಹೇಳುತ್ತಲಿವೆ. ದೇವಿಯು ಲೀಲಾರ್ಥವಾದ ಶರೀರ ಉಳ್ಳವಳಾದರೂ ಮಹಾಮಹಿಮಳು. ಅವಳ ಮಹಿಮೆಗೆ ಕೊನೆ ಎಂಬುದೇ ಇಲ್ಲವು. ॥೧೦-೧೧॥

ಒಂದುವೇಳೆ ಪಾರ್ಥಿವ ಪರಮಾಣುಗಳನ್ನು ಎಣಿಸಬಹುದು. ಆದರೆ ಮಹಿಮಾರಾಶಿಯಾದ ಈ ದೇವಿಯ ವೈಭವವನ್ನು ಪೂರ್ಣವಾಗಿ ತಿಳಿಯುವುದು ಅಸಾಧ್ಯವು. ॥೧೨॥

ಆದರೂ ಕೂಡ ತ್ರಿಪುರಾದೇವಿಯ ಚರಿತ್ರೆಯ ಸಾರರೂಪವಾದ ಅಲ್ಪಭಾಗ ವನ್ನು ಮಾತ್ರ ಹೇಳುವೆನು. ಅದನ್ನು ಸಾವಧಾನದಿಂದ ಕೇಳುವವನಾಗು. ॥೧೩॥

ಯಾವ ವಿಷ್ಣುದೇವನು ಲಕ್ಷ್ಮಿಯು ಪಾದಚರ್ಯೆಯನ್ನು ಮಾಡುತ್ತಿರುವುದ ರಿಂದ ಆಕೆಯ ಹಸ್ತಗಳ ಸಾನ್ನಿಧ್ಯದಿಂದ ಕೆಂಪಾದ ಪಾದಕಮಲಗಳುಳ್ಳವನಾಗಿ ಪ್ರಕಾಶಿ ಸುತ್ತಿದಾನೋ, ಯಾವನ ದೇಹವಾದರೋ ಭಿನ್ನವಾದ ನೀಲಮಣಿಗಳ ಸಮೂಹದ

ಶ್ರಿಯೊ ಲಾಲಿತಪಾದಾಬ್ಜ ಯುಗಲಾತಿ ವಿರಾಜಿತಃ ।
ಭಿನ್ನನೀಲಮಣಿಸ್ತೋಮ ಕಾಂತಿ ಕಾಂತಾಂಗ ಸುಪ್ರಭಃ ॥೧೫॥

ಪ್ರಾವೃಷೇಣ್ಯ ಪಯೋವಾಹ ಮಧ್ಯ ಪ್ರೋದ್ಯತ್ತಡಿತ್ಪ್ರಭಂ ।
ಪೀತಾಂಬರಂ ಯಸ್ಯ ಕಟಿತಟೇ ಸಂರಾಜತೇ ಸ್ಫುಟಂ ॥೧೬॥

ಶ್ರೀವತ್ಸಶೋಭಿ ಪೃಥುಲ ಪೀನವಕ್ಷ ಸ್ಥಲಾಂಚಿತಃ ।
ವನಮಾಲಾ ತುಲಸಿಕಾ ಗಂಧಾಹೂತ ಮಧುವ್ರತೈಃ ॥೧೭॥

ಅಂಗಾತ್ಕಾಂತಿ ಚ್ಛಟೇವೇಹ ನಿರ್ಗತಾ ಲಕ್ಷ್ಯತೇ ಬಹಿಃ ।
ಪೀನದೀರ್ಘ ಚತುರ್ಬಾಹುನಾಲಪದ್ಮ ತಲಾನ್ವಿತಃ ॥೧೮॥

ಕಾಂತಿಯಿಂದ ಕೂಡಿ ಕಂಗೊಳಿಸುತ್ತಿದೆಯೋ, ಅಂತಹ ಆದಿನಾರಾಯಣನು ಕ್ಷೀರಸಾಗರದಲ್ಲಿ ತ್ರಿಪುರಾಂಬಿಕೆಯ ಸತ್ವಗುಣವಿಶಿಷ್ಟವಾದ ಶರೀರದಿಂದ ಕೂಡಿ ಹಿಂದಿನ ಒಂದು ಕಾಲದಲ್ಲಿ ಫಣಿತಲ್ಪದಲ್ಲಿ ಮಲಗಿ ವಿರಾಜಿಸುತ್ತಿದ್ದನು. ॥೧೪-೧೫॥

ಯಾವ ಸ್ವಾಮಿಯ ಕಟಿಪ್ರದೇಶದಲ್ಲಿ ಮಳೆಗಾಲದ ಮೇಘಗಳ ಮಧ್ಯದಲ್ಲಿ ಬೆಳಗುವ ಮಿಂಚಿನಂತೆ ಪ್ರಕಾಶಮಾನವಾದ ಪೀತಾಂಬರವು ಕಂಗೊಳಿಸುತ್ತಿದೆಯೋ ಅಂತಹ ದೇವನು ಕ್ಷೀರಸಾಗರದಲ್ಲಿ ದೇದೀಪ್ಯಮಾನನಾಗಿದ್ದಾನೆ. ॥೧೬॥

ಯಾರ ಹೃದಯ ಪ್ರದೇಶವು ಉಬ್ಬಿಯೂ ಮತ್ತು ವಿಶಾಲವಾಗಿ ಶ್ರೀವತ್ಸ ವೆಂಬ ಲಾಂಛನಯುಕ್ತವಾಗಿದೆಯೋ, ತುಲಸೀಪತ್ರದಿಂದ ರಚಿತವಾದ ವನಮಾಲಿಕೆ ಯನ್ನು ಆ ಸ್ವಾಮಿಯು ವಕ್ಷಸ್ಥಳದಲ್ಲಿ ಧರಿಸಿರುತ್ತಾನೆ. ಆದರಿಂದ ಸುಗಂಧವು ಹೊರ ಹೊಮ್ಮಿ ದುಂಬಿಗಳನ್ನು ಸಮಿಾಪಕ್ಕೆ ಆಹ್ವಾನಿಸುತ್ತಿದೆ. ಆದರಿಂದ ದುಂಬಿಗಳು ಸತತವಾಗಿ ಬರುತ್ತಿವೆ. ಇದನ್ನು ನೋಡಿದರೆ ದೇವನ ಮೇಘಶ್ಯಾಮಲವರ್ಣವುಳ್ಳ ಶರೀರದಿಂದ ಕಾಂತಿಸಮೂಹವು ಹೊರಹೊರಡುತ್ತಿದೆಯೋ ಎಂಬಂತೆ ತೋರುತ್ತಿದೆ. ಈ ರೀತಿಯಾದ ಕಾಂತಿವಿಶಿಷ್ಟನಾದ ಸ್ವಾಮಿಯು ಕ್ಷೀರಸಾಗರದಲ್ಲಿ ವಿರಾಜಮಾನ ನಾಗಿದ್ದಾನೆ. ॥೧೭॥

ಯಾರು ದೊಡ್ಡದೂ ಮತ್ತು ಧೀರ್ಘವೂ ಆದ ನಾಲ್ಕು ಬಾಹುಗಳಿಂದ ಕೂಡಿರುವನೋ, ಯಾರ ಕೈಯಲ್ಲಿ ಶಂಖ, ಚಕ್ರ, ಗದೆ, ಪದ್ಮಗಳು ಕಂಗೊಳಿಸು ತ್ತಿವೆಯೋ, ಯಾವನ ಮುಖವು ಪೂರ್ಣಚಂದ್ರನಿಗೆ ಸದೃಶವಾದ ಕಾಂತಿವಿಶಿಷ್ಟ ವಾಗಿದೆಯೋ, ಯಾರಿಗೆ ಬಿಂಬ ಫಲಕ್ಕೆ ಸದೃಶವಾದ ತುಟಿಗಳುಂಟೋ, ಯಾವನ

ಕರಸಂಧೃತ ಶಂಖಾರಿ ಗದಾಪದ್ಮವಿರಾಜಿತಃ ।
ರಾಕೇಂದು ಪ್ರತಿಮಾನಾಸ್ಯೋ ಬಿಂಬೋಷ್ಠಶ್ಚಾರುನಾಸಿಕಃ ॥೧೯॥

ಕರ್ಣೋಲ್ಲಸತ್ಸುಮಕರ ಕುಂಡಲ ದ್ವಯಶೋಭಿತಃ ।
ವಿಕಸತ್ಪದ್ಮಯುಗಲ ಪರಿಭಾವಿಶುಭೇಕ್ಷಣಃ ॥೨೦॥

ಭೃಂಗಾವಲಿ ನಿಭಸ್ನಿಗ್ಧ ದೀರ್ಘಕೇಶಾಲಿಮಂಡಿತಃ ।
ನೂತ್ನರತ್ನಾವಲಿ ಪ್ರೋದ್ಯಚ್ಚಾರು ಕೋಟೀರಮಸ್ತಕಃ ॥೨೧॥

ಪ್ರೇಮಾವಲೋಕ ನಿಷ್ಯಂದೈರಭಿಷಿಂ ಚದ್ರಮಾಂ ಮುಹುಃ ।
ಭಕ್ತೈಃ ಪ್ರಹ್ಲಾದಮುಖ್ಯೈಸ್ತು ಸೇವ್ಯಮಾನೋಽನ್ವಹಂ ಹರಿಃ ॥೨೨॥

ಆಸ್ತೇ ಸಮಸ್ತ ಜಗತೀ ರಕ್ಷಣ ದಕ್ಷಿಣಃ ಸದಾ ।
ಕದಾಚಿತ್ತ್ರಲೋಕಾನಾಂ ಸ್ರಷ್ಟಾಽಗಚ್ಛತ್ ಪಿತಾಮಹಃ ॥೨೩॥

ನಾಸಿಕವು ಮನೋಹರವಾಗಿರುವುದೋ ಅಂತಹ ಸ್ವಾಮಿಯು ಸರ್ವೋತ್ಕೃಷ್ಟನಾಗಿರುತ್ತಾನೆ. ||೧೮-೧೯||

ಯಾರ ಕಿವಿಗಳು ಮಂಕರಕುಂಡಲಗಳಿಂದ ಪ್ರಕಾಶಿಸುತ್ತಿವೆಯೋ, ಯಾರ ಮಂಗಳಕರವಾದ ನೋಟವು ಅರಳಿರುವ ಪದ್ಮಯುಗಳದ ಕಾಂತಿಯನ್ನು ತಿರಸ್ಕರಿಸುತ್ತಿದೆಯೋ, ಯಾರಿಗೆ ಭೃಂಗಸಮೂಹದಂತೆ ಸ್ನಿಗ್ಧವೂ ಮತ್ತು ದೀರ್ಘವೂ ಆದ ಕೇಶಸಮೂಹವು ಇದೆಯೋ, ಯಾರ ಮಸ್ತಕವು ಕೆತ್ತಲ್ಪಟ್ಟಿರುವ ರತ್ನಸಮೂಹದಿಂದ ಕೂಡಿ ಮನೋಹರವಾದ ಶಿರೋಭೂಷಣದಿಂದ ಅಲಂಕೃತವಾಗಿದೆಯೋ, ಅಂತಹ ದೇವದೇವನಾದ ವಿಷ್ಣುವು ಕಂಗೊಳಿಸುತ್ತಿದ್ದಾನೆ. ||೨೦-೨೧||

ಮೇಲೆ ವರ್ಣಿಸಿದಂತೆ ಪ್ರಕಾಶಮಾನನಾದ ದೇವನು ಪ್ರಹ್ಲಾದನೇ ಮೊದಲಾದ ಭಕ್ತರುಗಳಿಂದ ಸೇವಿಸಲ್ಪಡುವವನಾಗಿ, ಪದೇ ಪದೇ ಲಕ್ಷ್ಮಿಯನ್ನು ಪ್ರೇಮಪೂರ್ವಕವಾಗಿ ನೋಡುತ್ತಾ, ಯಾವಾಗಲೂ ಸರ್ವೋತ್ಕೃಷ್ಟನಾಗಿ ಕ್ಷೀರಸಮುದ್ರದಲ್ಲಿ ವಿಶ್ರಾಂತಿಯಲ್ಲಿದ್ದರೂ ಸಕಲ ಪ್ರಪಂಚದ ರಕ್ಷಣೆಯಲ್ಲಿ ಆಸಕ್ತನಾಗಿರುತ್ತಾನೆ. ||೨೨||

ಒಂದಾನೊಂದು ಕಾಲದಲ್ಲಿ, ಲೋಕಗಳನ್ನು ಸೃಷ್ಟಿಸುವ ಬ್ರಹ್ಮನು, ಕ್ಷೀರಸಮುದ್ರಕ್ಕೆ ಬಂದವನಾಗಿ, ಆದಿದೇವನಿಗೆ ವಂದಿಸಿ ಅಂಜಲಿಬದ್ಧನಾಗಿ ಅನೇಕ ಪ್ರಕಾರವಾಗಿ ಸ್ತುತಿಸಿ ಆಸನದಲ್ಲಿ ಕುಳಿತುಕೊಂಡನು. ||೨೩-೨೪||

ದಂಡವತ್ಪ್ರಣಿಪತ್ಯಾಽಥೋ ಕೃತಾಂಜಲಿ ಪುಟೋ ವಿಧಿಃ ।
ಸ್ತುತ್ವಾ ಬಹುವಿಧೈಃ ಸ್ತೋತ್ರೈಃ ಸ್ಥಿತಃ ಸಂಪ್ರಾಪ್ತವಿಷ್ಟರಃ ॥೨೪॥

ಅಥ ದೇವಾಃ ಶತಮುಖ ಮುಖಾಃ ಸಮ್ಮುಖತೋ ಹರೇಃ ।
ಅಜಗ್ಮುರ್ವಿವದಂತೋ ವೈ ಕ್ರುದ್ಧಾಃ ಸಂರಕ್ತಲೋಚನಾಃ ॥೨೫॥

ಪ್ರಣಿಪತ್ಯ ವಿಧಾತಾರಂ ಹರಿಂ ಚ ಕಮಲಾಪತಿಂ ।
ಉಪವಿಷ್ಟಾಃ ಕ್ರಮಾತ್ತತ್ರ ಸಂಪ್ರಾಪ್ತಾಜ್ಞಾ ಮಧುದ್ವಿಷಃ ॥೨೬॥

ತತ್ರಪಾರ್ಷದ ಮುಖ್ಯೇನ ಸುನಂದೇನ ಪ್ರಚೋದಿತಃ ।
ಶತಕ್ರತುರುಪ(ಪಾ)ಕ್ರಾಮದ್ವಕ್ತುಂ ವೃತ್ತಂ ನಿಜಂ ಕಲೇಃ ॥೨೭॥

ಭಗವನ್ ಕಮಲಾಕಾಂತ ಪುರಾಣ ಪುರುಷಾಽವ್ಯಯ ।
ವಿವದಾಮೋ ವಯಂ ಸರ್ವೇ ಯತ್ರಾರ್ಥೇ ತನ್ನಿಶಾಮಯ ॥೨೮॥

ಅಹಂ ಶತಕ್ರತುರ್ದೇವ ರಾಜಸ್ತ್ರಿಭುವನೇಶ್ವರಃ ।
ಮಯೋಕ್ತಂ ದೇವಸದಸಿ ಪ್ರಸಂಗಾತ್ ಸಕಲಂ ಜಗತ್ ॥೨೯॥
ಮಯಾಽಧಿಷ್ಠಿತಮೇವಾಽಸ್ತೇ ಯಜ್ಞಾನಾಮಪ್ಯಹಂ ಪತಿಃ ।

ಅನಂತರದಲ್ಲಿ ಇಂದ್ರನೇ ಮೊದಲಾದ ಸಕಲ ದೇವತೆಗಳೂ ಪರಸ್ಪರವಾಗಿ ವಿವಾದ ಮಾಡುತ್ತಾ ಕ್ರೋಧದಿಂದಸಂತಪ್ತರಾಗಿ ಕೆಂಪಾದ ಕಣ್ಣುಳ್ಳವರಾಗಿ ಅಲ್ಲಿಗೇ ಬಂದು ಬ್ರಹ್ಮನಿಗೂ ಮತ್ತು ಲಕ್ಷ್ಮೀಪತಿಯಾದ ವಿಷ್ಣುವಿಗೂ ಸಹ ನಮಸ್ಕರಿಸಿ ಮಧುವೆಂಬ ರಾಕ್ಷಸನನ್ನು ಸಂಹರಿಸಿದ ಮಹಾವಿಷ್ಣುವಿನ ಅಪ್ಪಣೆ ಪಡೆದು ಕ್ರಮವಾಗಿ ಕುಳಿತು ಕೊಂಡರು. ಅನಂತರದಲ್ಲಿ ಆ ಸಭೆಯಲ್ಲಿ ಇಂದ್ರನು ಸುನಂದನನಿಂದ ಪ್ರೇರೇಪಿಸಲ್ಪಟ್ಟವನಾಗಿ ತಮ್ಮೊಳಗಿನ ಜಗಳಕ್ಕೆ ಕಾರಣವಾದ ಸಮಾಚಾರವನ್ನು ಹೇಳತೊಡಗಿದನು. ॥೨೫-೨೬-೨೭॥

ಪುರಾಣಪುರುಷನೂ, ನಾಶರಹಿತನೂ, ಲಕ್ಷ್ಮೀಪತಿಯೂ ಆದ ಸ್ವಾಮಿಯೇ, ಏನುಕಾರಣ ನಾವು ಎಲ್ಲರೂ ವಿವಾದಮಾಡುತ್ತಿದೇವೆಂಬುದನ್ನು ವಿಜ್ಞಾಪಿಸುವೆನು. ಕೇಳುವವನಾಗು. ॥೨೮॥

ಮೂರು ಲೋಕಗಳಿಗೂ ಪಾಲಕನೂ, ದೇವತೆಗಳಿಗೆಲ್ಲರಿಗೂ ಒಡೆಯನೂ ಆದ ಇಂದ್ರನು ನಾನು. ಒಂದು ಸಾರಿ ನಾನು ಕಾರಣಾಂತರದಿಂದ ದೇವಸಭೆಯಲ್ಲಿ ಈ ಎಲ್ಲ ಪ್ರಪಂಚವೂ ನನಗಧೀನವಾದುದು. ನಾನು ಯಜ್ಞಗಳಿಗೆಲ್ಲಕ್ಕೂ ಒಡೆಯನು.

ಪರ್ಜನ್ಯೋಽಗ್ನಿಸ್ತಥಾ ವಾಯುಃ ಸರ್ವೇ ಮಮ ವಶಂವದಾಃ ॥೩೦॥

ತಸ್ಮಾದಹಂ ಸರ್ವತಸ್ತು ಶ್ರೇಷ್ಠೋ ನಾನ್ಯಸ್ತು ಕಶ್ಚನ।
ಇತಿ ಮದ್ವಚನಂ ಶ್ರುತ್ವಾ ಪ್ರಾಹ ವೈಶ್ವಾನರಸ್ತತಃ ॥೩೧॥

ಮಾಽಭಿಮಾನಂ ವೃಥಾ ಕಾರ್ಷೀರಿಂದ್ರ ತ್ವಂ ಮೂಢಭಾವತಃ ।
ಕಿನ್ನ ಪಶ್ಯಸಿ ಮಾಂ ಸರ್ವಲೋಕಶ್ರೇಷ್ಠಂ ಸುರೋತ್ತಮಂ ॥೩೨॥

ಅಹಂ ಮುಖಂ ತ್ವತ್ಪುರೋಗದೇವಾನಾಮಸ್ಮಿ ವಾಸವ ।
ಯೂಯಂ ಭುಂಜಥ ಮದ್ದತ್ತಂ ಹವಿಸ್ಸರ್ವಮಖೇ ಪುನಃ ॥೩೩॥

ನ ಸ್ಯಾಮಹಂ ಯದಿ ಭುವಿ ನ ಯಜ್ಞಾಃ ಸ್ಯುಃ ಕದಾಚನ ।
ಅಹಂ ರುದ್ರಸ್ಯ ನೇತ್ರಾತ್ಮಾ ಸಂಹರಾಮ್ಯಖಿಲಂ ಜಗತ್ ॥೩೪॥

ತಸ್ಮಾದ್ವೃಥಾ ಮೋಹಮಿಮಂ ತ್ಯಕ್ತ್ವಾ ದೇವಗಣೈಃ ವೃತಃ ।
ಮಾಂ ಸಮಾರಾಧಯ ಕ್ಷಿಪ್ರಂ ನೋ ಚೇತ್ತ್ವಂ ನ ಭವಿಷ್ಯಸಿ ॥೩೫॥

ಪರ್ಜನ್ಯ, ಅಗ್ನಿ, ವಾಯು ಮೊದಲಾದ ಸಕಲರೂ ಕೂಡ ನನಗಧೀನರಾದವರು. ಆದಕಾರಣ ನಾನು ಎಲ್ಲರಿಗಿಂತಲೂ ಶ್ರೇಷ್ಠನು. ಬೇರೆಯವರಲ್ಲವು, ಎಂದು ಹೇಳಿದೆನು. ||೨೯-೩೦||

ಈ ರೀತಿಯಾದ ನನ್ನ ಮಾತನ್ನು ಕೇಳಿದ ಅಗ್ನಿಯು, ಎಲೌ ಇಂದ್ರನೇ, ಮೂರ್ಖತನದಿಂದ ವ್ಯರ್ಥವಾಗಿ ಏಕೆ ಅಭಿಮಾನಪಡುತ್ತಿರುವೆ? ಸುರರಲ್ಲಿ ಶ್ರೇಷ್ಠನೂ ಮತ್ತು ಸಕಲ ಪ್ರಪಂಚಗಳಲ್ಲಿ ಉತ್ತಮನಾದ ನನ್ನನ್ನು ನೋಡುವುದಿಲ್ಲವೋ ? ನೀನೇ ಮೊದಲಾದ ಸಕಲ ದೇವತೆಗಳಲ್ಲೂ ನಾನೇ ಶ್ರೇಷ್ಠನು. ನೀವೆಲ್ಲರೂ ಸಕಲ ಯಜ್ಞಗಳಲ್ಲೂ ಹೋಮಮಾಡಲ್ಪಟ್ಟ, ನಾನು ತಂದುಕೊಟ್ಟ, ಹವಿಸ್ಸನ್ನು ತಿನ್ನುತ್ತೀರಿ. ||೩೧-೩೨-೩೩||

ನಾನು ಪ್ರಪಂಚದಲ್ಲಿಲ್ಲದಿದ್ದರೆ ಯಜ್ಞಗಳೇ ಆಗಲಾರವು. ನಾನು ರುದ್ರನ ನೇತ್ರಸ್ವರೂಪನಾಗಿ ಸಕಲ ಪ್ರಪಂಚವನ್ನೂ ಸಂಹರಿಸುತ್ತೇನೆ. ಎಲೌ ಇಂದ್ರನೇ, ಆದಕಾರಣ ವ್ಯರ್ಥವಾದ ಈ ಅಜ್ಞಾನವನ್ನು ಬಿಟ್ಟು ಸಕಲ ದೇವಸಮೂಹಗಳೊಡನೆ ಕೂಡಿ ನನ್ನನ್ನು ಆರಾಧಿಸು. ಇಲ್ಲದಿದ್ದರೆ ನೀನು ಜೀವಿಸಲಾರೆ ಎಂದು ಹೇಳಿದನು. ||೩೪-೩೫||

ಶ್ರುತ್ವೈತತ್ ಸೋಮ ಆಹಾಽಥ ಮಾ ಮೋಹಂ ಪ್ರತಿಪದ್ಯಥ ।
ಜೀವಂತ್ಯನ್ನೇನ ವೈ ಲೋಕಾಸ್ತತ್ರ್ಯೈವ ಮದನುಗ್ರಹಃ ॥೩೭॥

ಯದ್ಯಹಂ ವಿಮುಖೋ ಭೂಯಾಂ ತರ್ಹಿ ಸಸ್ಯಂ ವಿನಾ ಜಗತ್ ।
ಅವಸೀದೇತ(ತ್)ಕ್ಷಣೇನೈವ ಮದಂಗಜನಿತಾಮೃತೈಃ ॥೩೮॥

ವಾಸವಾಗ್ನಿಮುಖಾ ದೇವಾ ಜೀವಂತ್ಯನುದಿನಂ ನನು ।
ವೃಥಾಽಭಿಮಾನೇನ ಯೂಯಂ ಮಾ ವಿನಾಶಮುಪೈಷ್ಯಥ ॥೩೯॥

ಏತದ್ವಾಕ್ಯಂ ಸಮಾಕರ್ಣ್ಯ ಜಗತ್ಪ್ರಾಣಶ್ಚುಕೋಪ ಹ ।
ಸೋಮ ಕಿಂ ಕತ್ಥಸೇ ವೃಥಾ ಕ್ಷಣೇನಾಹಮಿದಂ ಜಗತ್ ॥೪೦॥

ಸೋಮಾಗ್ನಿವಾಸವಯುತಂ ಸದೇವಾಸುರಮಾನುಷಂ ।
ಕೀರ್ತಿಶೇಷಂ ಕರಿಷ್ಯಾಮಿ ನನ್ವಹಂ ಸರ್ವನಾಶನಃ ॥೪೧॥

ದಹ್ಯಮಾನೇಽಪರಾಧಾರ್ತೇ ನ ಸೋಮೋ ನ ಚ ವಾಸವಃ ।
ನ ಬ್ರಹ್ಮವಿಷ್ಣುರುದ್ರಾ ವಾ ತದಾಽಽಸನ್ನಿತರೇ ಕುತಃ ॥೪೨॥

ಚಂದ್ರನು ಈ ಮಾತನ್ನು ಕೇಳಿ, ವ್ಯರ್ಥವಾಗಿ ಅಜ್ಞಾನಿಗಳಾಗಬೇಡಿ. ಸಕಲವೂ ಅನ್ನದಿಂದ ಬದುಕುತ್ತದೆ. ಆ ಅನ್ನವು ನನ್ನ ಅನುಗ್ರಹದಿಂದಲೇ ಉತ್ಪತ್ತಿಯಾಗುತ್ತದೆ. ನಾನೇನಾದರೂ ವಿಮುಖನಾದರೆ ಸಕಲ ಲೋಕವೂ ಸಸ್ಯ ಫಲವಿಲ್ಲದೆ ಕ್ಷಣಕಾಲದಲ್ಲಿ ನಾಶವಾಗುತ್ತದೆ. ಇಂದ್ರ, ಅಗ್ನಿಯೇ ಮೊದಲಾದ ಸಕಲ ದೇವತೆಗಳೂ ಕೂಡ ನನ್ನ ಶರೀರದಿಂದ ಉತ್ಪನ್ನವಾದ ಅಮೃತದಿಂದ ಜೀವಿಸುತ್ತಾರೆ. ವ್ಯರ್ಥವಾದ ಅಭಿಮಾನದಿಂದ ನೀವುಗಳು ವಿನಾಶವನ್ನು ಹೊಂದಬೇಡಿ. ಎಂದು ಹೇಳಿದನು. ||೩೭-೩೮-೩೯||

ಈ ಮಾತನ್ನು ಕೇಳಿ ವಾಯುವು ಬಹುವಾಗಿ ಕೋಪಗೊಂಡನು. ಎಲೈ ಚಂದ್ರನೇ ಏನು ವ್ಯರ್ಥವಾಗಿ ಹರಟುತ್ತಿದ್ದೀಯೆ ? ಚಂದ್ರ, ಅಗ್ನಿ, ಇಂದ್ರ ಮೊದಲಾದ ಸಕಲ ದೇವಾಸುರ ಮನುಷ್ಯ ಸಮೇತವಾದ ಸಕಲ ಪ್ರಪಂಚವನ್ನು ಕ್ಷಣಮಾತ್ರ ಕಾಲದಲ್ಲಿ ನಾಶಮಾಡಿಬಿಡುತ್ತೇನೆ. ನಾನು ಸಕಲವನ್ನೂ ನಾಶಮಾಡುವವನೆಂದು ಗೊತ್ತಿಲ್ಲವೋ? ||೪೦-೪೧||

ಈ ಅಪರಾಧಕ್ಕೋಸ್ಕರ ನಾನು ಪ್ರಪಂಚನಾಶದ ಕಾರ್ಯದಲ್ಲಿ ತೊಡಗಿದರೆ

ತದಾಽಯಂ ಮತ್ಸಖಾ ಹ್ಯಗ್ನಿರ್ಬ್ರಹ್ಮಾಂಡಮಖಿಲಂ ಮಯಾ।
ಪ್ರೇರಿತೋ ದಹತಿ ಕ್ಷಿಪ್ರಂ ತತೋಽಹಂ ವೇಗವಾನ್ಬಲೀ ॥೪೩॥

ಶೂನ್ಯಾತ್ಮಕಂ ಕರೋಮ್ಯಗ್ನಿ ಸದ್ವಿತೀಯಸ್ತದಾ ತ್ವಹಂ।
ಯದಿ ಮೇಽನುಗ್ರಹೋ ನ ಸ್ಯಾತ್ತತ್ರ ಸ್ಪಂದೇತ ಕಿಂ ವದ ॥೪೪॥

ಅಹಮೇಕಃ ಸರ್ವಮಹಾನ್ಮತ್ತಃ ಸ್ಪಂದತಿ ವೈ ಜಗತ್।
ಇತ್ಯೇವಂ ಕಲಹೇ ಪ್ರಾಪ್ತೇ ಸಭಾಯಾಂ ಸ್ವರ್ಗವಾಸಿನಃ ॥೪೫॥

ಅಗ್ನಿಪಕ್ಷಾಶ್ರಿತಾಃ ಕೇಚಿತ್ಸೋಮಪಕ್ಷಾನುಗಾಃ ಪರೇ।
ಅನ್ಯೇ ಮಾರುತಪಕ್ಷಾಸ್ಸ್ಯುಶ್ಚಾನ್ಯೇ ಮತ್ಪದವೃತ್ತಯಃ ॥೪೬॥

ಏವಂ ಪರಸ್ಪರಂ ವಾದೇ ಜಾತೇ ವಾದೈಕತತ್ಪರೇ।
ಕ್ರುದ್ಧೇ ದೈವಗಣೇ ಸ್ವಸ್ವಶಸ್ತ್ರಾಽದಾನಪರೇ ತದಾ ॥೪೭॥

ಚಂದ್ರನಾಗಲೀ ಇಂದ್ರನಾಗಲೀ ಯಾರೂ ರಕ್ಷಕರಾಗಿ ಇರುವುದಿಲ್ಲ. ಹೆಚ್ಚಿಗೆ ಹೇಳುವುದೇನು? ಕುಪಿತನಾದ ನನ್ನೆದುರಿಗೆ ಬ್ರಹ್ಮಾ ವಿಷ್ಣು ರುದ್ರರೇ ನಿಲ್ಲಲಾರರು. ಇನ್ನುಳಿದವರ ಪಾಡೇನು? ಆಗ ನನ್ನ ಸ್ನೇಹಿತನಾದ ಅಗ್ನಿಯು ಸಕಲ ಪ್ರಪಂಚವನ್ನೂ ನನ್ನ ಪ್ರೋತ್ಸಾಹದಿಂದ ದಹಿಸುತ್ತಾನೆ. ಆಗ ಬಲಶಾಲಿಯಾದ ನಾನು ವೇಗದಿಂದ ಸಕಲ ಪ್ರಪಂಚವನ್ನೂ ನಾಶಮಾಡುತ್ತೇನೆ. ನೀನೇ ಹೇಳು. ನನ್ನ ಅನುಗ್ರಹವಿಲ್ಲದಿದ್ದರೆ ಯಾವುದೂ ಸಹ ಅಲ್ಲಾಡುವುದಿಲ್ಲವಲ್ಲವೆ? ನಾನೊಬ್ಬನೇ ಸಕಲ ಜಗತ್ತಿನಲ್ಲೂ ಶ್ರೇಷ್ಠನು. ನನಗಿಂತಲೂ ಉತ್ತಮರು ಮತ್ತೊಬ್ಬರಿಲ್ಲವು. ॥೪೨-೪೩-೪೪॥

ಹೀಗೆ ದೇವಸಭೆಯಲ್ಲಿ ಜಗಳವುಂಟಾಗಲು ಅಲ್ಲಿದ್ದವರಲ್ಲಿ ಕೆಲವರು ಅಗ್ನಿಯ ಪಕ್ಷವನ್ನು ವಹಿಸಿದರು. ಕೆಲವರು ಚಂದ್ರನ ಅನುಯಾಯಿಗಳಾದರು. ಮತ್ತೆ ಕೆಲವರು ವಾಯುವಿನ ಪಕ್ಷವನ್ನು ಸೇರಿದರು. ಉಳಿದವರು ನನ್ನ ಅನುಯಾಯಿಗಳು ಆದರು. ಹೀಗೆ ದೇವತೆಗಳಲ್ಲಿ ಪರಸ್ಪರ ವಾದವುಂಟಾಗಲು ವಾದದಲ್ಲೇ ಆಸಕ್ತರಾದ ದೇವತೆಗಳ ಸಮೂಹಗಳು ಶಸ್ತ್ರಾಸ್ತ್ರವನ್ನೂ ಧರಿಸಿ ಯುದ್ಧಕ್ಕಾಗಿ ಸಿದ್ಧರಾದರು. ॥೪೫-೪೬-೪೭॥

ವಾಚಸ್ಪತಿಃ ಸುರಾಚಾರ್ಯಃ ಪ್ರಾಹ ಸಾಂತ್ವನಪೂರ್ವಕಂ ।
ಮಾ ನಾಶಮಾಪದ್ಯಥ ಬುಧಾ ಮದ್ವಾಕ್ಯಂ ಶೃಣುತಾದರಾತ್ ॥೪೮॥

ಅತ್ರಾಂತಮಭಿಜಾನಾತಿ ಜಲಶಾಯೀ ಜನಾರ್ದನಃ ।
ತತ್ರ ಗತ್ವಾ ಕ್ಷೀರ ನಿಧಿಪ್ರಾಂತೇ ತೇ ಪುರುಷೋತ್ತಮಂ ॥೪೯॥

ನತ್ವಾ ತನ್ಮುಖತೋ ಜ್ಞಾತ್ವಾ ಶಾಂತಿಂ ಭಜಥ ಸತ್ವರಂ ।
ತದ್ವಯಂ ಸಮನುಪ್ರಾಪ್ತಾಸ್ತವ ಪಾದಾಂಬುಜಂ ತತಃ ॥೫೦॥

ಸಂಶಯಂ ಛಿಂಧಿ ಭಗವನ್ ತ್ವಂ ಗತಿರ್ದೇವತಾಽಽಪದಿ ।
ಇತಿ ಸಂಪ್ರಾರ್ಥಿತೋ ವಿಷ್ಣುಃ ಶತಕ್ರತುಮುಖ್ಯೈರ್ಬುಧೈಃ ॥೫೧॥

ವಿಚಾರ್ಯ ದೇವ ಕಲಹ ಶಾಂತ್ಯುಪಾಯಂ ಚಿರಂ ತದಾ ।
ನೈತೇ ಮದ್ವಾಕ್ಯವಿಸ್ರಬ್ಧಾಃ ಸ್ವ ಸ್ವಪಕ್ಷದೃಢಾಽಽಶಯಾಃ ॥೫೨॥

ನಾತ್ರ ಶಾಂತಿರ್ಮಯಾ ಶಕ್ಯಾ ವಿಧಾತುಮಿತಿ ಚಿಂತಯನ್ ।
ಕಪರ್ದಿನಂ ಮಹಾದೇವಂ ದಧ್ಯೌ ಹೃದಿ ಜನಾರ್ದನಃ ॥೫೩॥

ಆಗ ಅಲ್ಲಿದ್ದ ಗುರುವಾದ ಬೃಹಸ್ಪತಿಯು ನಮ್ಮಗಳನ್ನು ಸಮಾಧಾನ ಪಡಿಸುತ್ತಾ, ಎಲೌ ದೇವತೆಗಳೇ, ವ್ಯರ್ಥವಾಗಿ ನಾಶವಾಗಬೇಡಿ. ಆಸಕ್ತಿಯಿಂದ ನನ್ನ ಮಾತನ್ನು ಕೇಳುವವರಾಗಿ. ॥೪೮॥

ಈ ವಿಷಯದಲ್ಲಿ ಸಮುದ್ರದಲ್ಲಿ ಮಲಗಿರುವ ಜನಾರ್ದನನು ನಿಜವಾದ ಅಭಿಪ್ರಾಯವನ್ನು ತಿಳಿದಿರುತ್ತಾನೆ. ಆದಕಾರಣ ನೀವುಗಳು ಕ್ಷೀರಸಮುದ್ರದಲ್ಲಿರುವ ಪುರುಷಶ್ರೇಷ್ಠನಲ್ಲಿಗೆ ಹೋಗಿ ಅವನಿಂದ ನಿಷ್ಕರ್ಷವನ್ನು ತಿಳಿದು ಸಮಾಧಾನ ಹೊಂದಿರಿ. ಎಂದು ಹೇಳಿದನು. ॥೪೯॥

ಆದಕಾರಣ ನಾವುಗಳು ನಿನ್ನ ಪಾದಕಮಲ ಸಮೀಪಕ್ಕೆ ಬಂದಿರುತ್ತೇವೆ. ಹೇ ದೇವನೇ, ನಮ್ಮ ಸಂದೇಹವನ್ನು ನಿವಾರಿಸು. ದೇವತೆಗಳಿಗೆ ತೊಂದರೆ ಬಂದಾಗ ಲೆಲ್ಲಾ ನೀನೇ ರಕ್ಷಕನು. ॥೫೦॥

ಹೀಗೆ ಇಂದ್ರಾದಿಗಳಿಂದ ಪ್ರಾರ್ಥಿಸಲ್ಪಟ್ಟ ವಿಷ್ಣುವು ಬಹುಹೊತ್ತು ದೇವತೆಗಳ ಕಲಹದ ಶಾಂತಿಗೆ ಉಪಾಯವನ್ನು ವಿಚಾರಮಾಡಿ, ಹೀಗೆ ಯೋಚಿಸಿದನು. ॥೫೧॥

ಇವರೆಲ್ಲರೂ ತಂತಮ್ಮ ಪಕ್ಷದಲ್ಲಿ ಅಚಲವಿಶ್ವಾಸವಿಟ್ಟಿರುತ್ತಾರೆ. ನನ್ನ ಮಾತಿ

ಧ್ಯಾನಾಹೂತಸ್ತದಾ ಶಂಭುಃ ಆವಿರಾಸೀ ತ್ಸಭಾಭುವಿ ॥೫೪॥

ವೃಷಾರೂಢೋಽಂಬಿಕಾ ಪಾರ್ಶ್ವಃ ಶುದ್ಧಸ್ಫಟಿಕಸನ್ನಿಭಃ ।
ಬಾಲಶೀತಕರ ಪ್ರೋದ್ಯತ್ಕಪರ್ದ ಮುಕುಟೋಜ್ವಲಃ ॥೫೫॥

ಮಾಲತೀ ಮಾಲಿಕಾಽಽಕಾರ ಸ್ವರ್ಧುನೀ ಶೋಭಿಮಸ್ತಕಃ ।
ಫಾಲನೇತ್ರೋಜ್ವಲತ್ಕೀಲಿ ಜ್ವಾಲಾಜ್ವಲಿತ ದಿಕ್ತಟಃ ॥೫೬॥

ಭಸ್ಮತ್ರಿಪುಂಡ್ರಲಸಿತ ಫಾಲದೇಶಾತಿಸುಂದರಃ ।
ಕುಂಡಲೀಕೃತನಾಗೇಂದ್ರ ಮೂರ್ಧರತ್ನ ತ್ವಿಷಾಽರುಣಾ ॥೫೭॥

ಮಾಣಿಕ್ಯ ಮುಕುರಾಭಾಸಾ ಗಂಡಭೂಮಿರ್ವಿರಾಜತೇ ।
ಪ್ರಣಯಾವಲೋಕ ಸುಧಾಧಾರಾಭಿಃ ಪ್ಲಾವಯನ್ಸತೀಂ ॥೫೮॥

ನಿಂದ ಇವರಲ್ಲಿ ಶಾಂತಿಯುಂಟುಮಾಡುವುದು ಅಶಕ್ಯವು. ಎಂದು ಯೋಚಿಸಿ ನಾರಾಯಣನು ಈಶ್ವರನನ್ನು ಮನಸ್ಸಿನಲ್ಲಿ ಧ್ಯಾನಿಸಿದನು. ೫೨-೫೩॥

ಬಾಲಚಂದ್ರನಿಂದ ಯುಕ್ತವಾದ ಜಟೆಯಿಂದಲೂ ಮುಕುಟದಿಂದಲೂ ಪ್ರಕಾಶಮಾನನೂ, ಶುದ್ಧವಾದ ಸ್ಫಟಿಕಕ್ಕೆ ಸಮಾನವಾದ ಕಾಂತಿಯುಳ್ಳವನೂ, ವೃಷಭಾರೂಢನೂ, ಅಂಬಿಕಾಸಹಿತನೂ ಆದ ಶಿವನು ಧ್ಯಾನದಿಂದ ಆಹ್ವಾನಿಸಲ್ಪಟ್ಟು ಪ್ರಾದುರ್ಭವಿಸಿದನು. ॥೫೪-೫೫॥

ಮಾಲತೀ ಪುಷ್ಪದ ಮಾಲಿಕೆಯಂತೆ ಇರುವ ದೇವಗಂಗೆಯಿಂದ ಯಾವನ ಶಿರಃ ಪ್ರದೇಶವು ಕಂಗೊಳಿಸುತ್ತಿದೆಯೋ, ಪಾಲನೇತ್ರದಿಂದ ಹೊರಡುತ್ತಿರುವ ಅಗ್ನಿಜ್ವಾಲೆಯಿಂದ ಯಾವನು ದಿಗಂತಗಳನ್ನು ಪ್ರಕಾಶಗೊಳಿಸುತ್ತಾನೋ, ಭಸ್ಮದಿಂದ ತ್ರಿಪುಂಡ್ರಾಂಕಿತವಾದ ಯಾವನ ಫಾಲದೇಶವು ಅತಿ ಸುಂದರವಾಗಿದೆಯೋ, ಕುಂಡಲದ ಆಕಾರವಾಗಿ ಮಾಡಲ್ಪಟ್ಟಿರುವ ನಾಗೇಂದ್ರನ ತಲೆಯಲ್ಲಿರುವ ರತ್ನದ ಕೆಂಪಾದ ಕಾಂತಿಯಿಂದ ರತ್ನಗನ್ನಡಿಯ ಆಭಾಸವುಳ್ಳದ್ದಾಗಿ ಯಾವ ದೇವನಗಂಡದೇಶವು ಹೊಳೆಯುತ್ತಿರುವುದೋ, ॥೫೬-೫೭॥

ಪ್ರೀತಿಯ ನೋಟದಿಂದ ಯಾರು ಸತಿಯಾದ ಗೌರಿಯನ್ನು ಆನಂದಗೊಳಿಸುತ್ತಿರುವನೋ, ಯಾರ ಉರಃ ಪ್ರದೇಶದಲ್ಲಿ ರುದ್ರಾಕ್ಷಿಯ ಮಾಲಿಕೆಗಳು ನಿಬಿಡವಾಗಿವೆಯೋ, ಯಾವ ದೇವನು ಒಂದು ಕೈಯಿಂದ ಹರಿಣವನ್ನೂ, ಮತ್ತೊಂದರಿಂದ

ವಹನ್ರುದ್ರಾಕ್ಷಮಾಲಾನಾ ಮಾವಲಿಂ ಪೃಥುಲೋರಸಿ ।
ಹರಿಣಂ ಪರಶುಂ ಭಿಭ್ರದ್ವರಾಭೀತಿಂ ಕರಾಂಬುಜೈಃ ॥೫೯॥

ವ್ಯಾಘ್ರತ್ವಕ್ಪಟ ಸಂರಾಜತ್ಕಟೀತಟಲಸದ್ವಪುಃ ।
ಇಭಚರ್ಮೋತ್ತರೀಯಾಢ್ಯ ಭಸ್ಮೋದ್ಧೂಲಿತ ವಿಗ್ರಹಃ ॥೬೦॥

ಕರ್ಪೂರಾಚಲವದ್ರಾಜ ದುಕ್ಷ್ಣೋಪರಿ ವಿರಾಜತೇ ।
ನವರತ್ನ ಪ್ರೋದ್ಯಮಾನ ಮಹಾ ಸಿಂಹಾಸನೇ ಸ್ಥಿತಃ ॥೬೧॥

ಪದ್ಮಾಸನ ಸುಪದ್ಮಾಭ ಪದ ಪದ್ಮಾತಿಶೋ ಭನಃ ।
ಪ್ರಮಥಾದ್ಯೈಃ ಪಾರ್ಷದೈಶ್ಚ ಬಾಣಾದ್ಯೈರ್ಭಕ್ತಶೇಖರೈಃ ॥೬೨॥

ನಂದೀ ಭೃಂಗೀ ಪ್ರಭೃತಿಭಿರ್ಗಣ್ಯೈಃ ಸಂಸೇವಿತೋಭವಃ ।
ತನೋಮೂರ್ತಿಃ ಪರಾಶಕ್ತೇ ಸ್ತ್ರಿಪುರಾಯಾ ಮಹೇಶ್ವರಃ ॥೬೩॥

ದೇವಾಧಿದೇವೋ ಜಗತೀ ಸಂಹಾರಾಚಾರ ತತ್ಪರಃ ।

ಕೊಡಲಿಯನ್ನೂ, ಒಂದರಿಂದ ವರದ ಮುದ್ರೆಯನ್ನೂ ಮತ್ತೊಂದರಿಂದ ಅಭಯ ಮುದ್ರೆಯನ್ನೂ ಧರಿಸಿರುವನೋ, ॥೫೮-೫೯॥

ವ್ಯಾಘ್ರಚರ್ಮದಿಂದ ಪ್ರಕಾಶಿಸುತ್ತಿರುವ ಕಟಿ ಪ್ರದೇಶದಿಂದ ಕೂಡಿ ಯಾವನ ಶರೀರವು ಶೋಭಿಸುತ್ತಿರುವುದೋ, ಆನೆಯ ಚರ್ಮದ ಉತ್ತರೀಯದಿಂದ ಯುಕ್ತವಾಗಿ ಭಸ್ಮಾನುಲೇಪನದಿಂದ ಯಾವನ ಶರೀರವು ಕಣ್ಮನಗಳಿಗೆ ಆನಂದವನ್ನುಂಟು ಮಾಡುತ್ತಿದೆಯೋ ॥೬೦॥

ಕರ್ಪೂರ ಪರ್ವತದಂತೆ ಪ್ರಕಾಶಮಾನವಾದ ವೃಷಭವಾಹನದ ಮೇಲೆ ನವರತ್ನಗಳಿಂದ ರಚಿತವಾದ ಅತ್ಯುತ್ಕೃಷ್ಟವಾದ ಸಿಂಹಾಸನದಲ್ಲಿ ಮಂಡಿಸಿರುವ, ಪದ್ಮಾಸನದಲ್ಲಿ ಕುಳಿತು ಪದ್ಮದ ಕಾಂತಿಯಿಂದ ಕೂಡಿದ ಪಾದಕಮಲಗಳಿಂದ ಶೋಭಿಸುತ್ತಿರುವ, ॥೬೧॥

ಪರಾಶಕ್ತಿಯಾದ ತ್ರಿಪುರಾಂಬಿಕೆಯ ತಮೋಗುಣ ಪ್ರಧಾನವಾದ ಮೂರ್ತಿಯಾಗಿರುವ, ಜಗತ್ತಿನ ಸಂಹಾರಕನಾಗಿರುವ ಮಹೇಶ್ವರನು, ಪ್ರಮಥರೂಪಾರ್ಷದರೂ ಬಾಣನೇ ಮೊದಲಾದ ಭಕ್ತಶ್ರೇಷ್ಠರಿಂದಲೂ ನಂದಿ, ಭೃಂಗಿ ಮೊದಲಾದ ಗಣಾಧಿ

ನಿರೀಕ್ಷ್ಯ ತಂ ವಿಷ್ಣುಮುಖಾಃ ಪ್ರೋತ್ಥಿತಾ ವಿಬುಧೇಶ್ವರಾಃ ॥೬೪॥

ಸಾಷ್ಟಾಂಗಂ ಪಣಿಪತ್ಯಾಽಥೋ ಸಪರ್ಯಾಂ ಸಮಕಲ್ಪಯನ್ ।
ಸಭಾಜಿತೋ ಹರಿಮುಖೈರ್ಭವೋ ವಿಷ್ಣುಂ ರಮಾಪತಿಂ ॥೬೫॥

ಅವರುಹ್ಯ ವೃಷಶ್ರೇಷ್ಠಾತ್ಪರಿಷ್ವಜ್ಯ ಸಸಂಭ್ರಮಂ ।
ಸ್ವಾಽಸನೇಽಥ ಸಮಾವಿಷ್ಟೋ ಜನಾರ್ದನ ಮುಖೈರ್ಬುಧೈಃ ॥೬೬॥

ಮುರಾರೇರಿಂಗಿತಂ ಜ್ಞಾತ್ವಾ ದೃಷ್ಟ್ವಾ ದೇವಾನಪೀಶ್ವರಃ ।
ಕಲಿನಾ ಮನ್ಯುನಾ ಗ್ರಸ್ತಾನ್ ಜಗತಾಂ ಸ್ವಸ್ತಯೇ ತತಃ ॥೬೭॥

ತ್ರಿಪುರಾಂ ಜಗತಾಂ ಧಾತ್ರೀಂ ಪ್ರಾರ್ಥಯಾಮಾಸ ಶಂಕರಃ ।
ಶಂಕರಸ್ಯ ವ್ಯವಸಿತಂ ಜ್ಞಾತ್ವಾ ವಿಧಿಹರೀ ತತಃ ॥೬೮॥
ನತ್ವಾ ಸ್ಮೃತಿ ಪರೌ ತಸ್ಯ ಜಾತೌ ಶುದ್ಧಾತ್ಮನಾ ಯುತೌ ।

ಪರುಗಳಿಂದಲೂ ಸೇವಿಸಲ್ಪಡುವವನಾಗಿ ವಿಷ್ಣುವೇ ಮೊದಲಾದ ದೇವತೆಗಳ ಎದುರಿನಲ್ಲಿ ಪ್ರತ್ಯಕ್ಷನಾದನು. ॥೬೨-೬೩॥

ಹೀಗೆ ಪ್ರತ್ಯಕ್ಷನಾದ ಮಹೇಶ್ವರನನ್ನು ನೋಡಿ ವಿಷ್ಣುವೇ ಮೊದಲಾದ ದೇವತಾಶ್ರೇಷ್ಠರೆಲ್ಲರೂ ಎದ್ದು ಸಾಷ್ಟಾಂಗಪ್ರಣಾಮ ಮಾಡಿ, ಪೂಜೆಯೊಡನೆ ಸತ್ಕಾರ ಮಾಡಿದರು. ॥೬೪॥

ಹರಿಯೇ ಮೊದಲಾದ ದೇವತೆಗಳಿಂದ ಪೂಜಿಸಲ್ಪಟ್ಟು ಅನಂತರ ಈಶ್ವರನು ವೃಷಭದಿಂದ ಇಳಿದು ಲಕ್ಷ್ಮೀಪತಿಯಾದ ವಿಷ್ಣುವನ್ನು ಸಂಭ್ರಮಪೂರ್ವಕವಾಗಿ ಆಲಿಂಗಿಸಿಕೊಂಡು, ಆಮೇಲೆ ವಿಷ್ಣುವೇ ಮೊದಲಾದ ದೇವತೆಗಳೊಡನೆ ಆಸನದಲ್ಲಿ ಕುಳಿತುಕೊಂಡನು. ॥೬೫-೬೬॥

ಅನಂತರದಲ್ಲಿ ಪರಮೇಶ್ವರನು ವಿಷ್ಣುವಿನ ಅಭಿಪ್ರಾಯವನ್ನು ತಿಳಿದು, ಕೋಪಾವಿಷ್ಟರಾದ ದೇವತೆಗಳನ್ನೂ ನೋಡಿದನು. ಆಮೇಲೆ ಜಗತ್ತಿನ ಕಲ್ಯಾಣಕ್ಕಾಗಿ ಶಂಕರನು ಲೋಕಗಳ ಸೃಷ್ಟಿಕರ್ತಳಾದ ತ್ರಿಪುರಾಂಬಿಕೆಯನ್ನು ಪ್ರಾರ್ಥಿಸಿದನು. ಹೀಗೆ ಶಂಕರನು ದೇವಿಯ ಸ್ತೋತ್ರದಲ್ಲಿ ತೊಡಗಿದ್ದನ್ನು ನೋಡಿದ ಬ್ರಹ್ಮನೂ ವಿಷ್ಣುವೂ ಕೂಡ ಶುದ್ಧವಾದ ಮನದಿಂದ ಆ ದೇವಿಯನ್ನು ಸ್ಮರಿಸಲು ತೊಡಗಿದರು. ॥೬೭-೬೮॥

ಕಾರಣೈಃ ಪುರುಷೈರೇವಂ ಸಂಸ್ಮೃತಾ ಸಾ ಪರಾತ್ಪರಾ ॥೬೯॥

ಜಗದ್ರಕ್ಷಾ ವಿತಾ(ದಾ)ನಾಯ ಪ್ರಾದುರಾಸೀತ್ಪರಾಽಂಬಿಕಾ ।
ಮಹಾಶಬ್ದಃ ಸಮಭವದ್ವಜ್ರನಿಷ್ಪೇಷ ನಿಷ್ಠುರಃ ॥೭೦॥

ತೇನ ಶಬ್ದೇನ ಮಹತಾ ಬ್ರಹ್ಮಾಂಡಾಂತರಮಾಯತಾ ।
ಲೇಶೀಕೃತ ಮಹಾವಜ್ರ ಪ್ರಪಾತೌಘ ಮಹಾಸ್ವನಃ ॥೭೧॥

ಪ್ರಜಜ್ವಾಲಾಽತಿತರಸಾ ತಥಾ ಪ್ರಾಗುತ್ತರಾ ಹಿ ದಿಕ್ ।
ದ್ಯೋತನಾ ಕೋಟಿತಡಿತಾಂ ಯುಗಪತ್ತು ಯಥಾತಥಾ ॥೭೨॥

ತತ್ತೇಜಸಾ ಚ ಶಬ್ದೇನ ಬುಧಾಃ ಸೇಂದ್ರಾಗ್ನಿವಾಯವಃ ।
ಅಂಧೀಭೂತಾಶ್ಚ ಬಧಿರೀಕೃತಾಃ ಸಂತ್ರಾಸವೇಪಿತಾಃ ॥೭೩॥

ಮೂರ್ಛಿತಾಃ ಪತಿತಾ ಭೂಮೌ ಛಿನ್ನಮೂಲಾ ಇವ ದ್ರುಮಾಃ ।
ವಿಸಂಜ್ಞಾಃ ಸ್ರಸ್ತವಸನಾ ಭ್ರಷ್ಟಕೋಟೀರಭೂಷಣಾಃ ॥೭೪॥

ಹೀಗೆ ಕಾರಣಪುರುಷರಾದ ಹರಿಹರ ಬ್ರಹ್ಮರು ತನ್ನನ್ನು ಸ್ಮರಿಸಲು ಪರಾದೇವಿಯು ಪ್ರಪಂಚದ ರಕ್ಷಣೆಗಾಗಿ ಆವಿರ್ಭವಿಸಿದಳು. ಆ ಕಾಲದಲ್ಲಿ ಸಿಡಿಲಿನ ಘರ್ಷಣೆಯಂತೆ ಕಠಿನವಾದ ದೊಡ್ಡದಾದ ಶಬ್ದವುಂಟಾಯಿತು. ೬೯-೭೦॥

ಯಾವ ಮಹಾಶಬ್ದವು ವಜ್ರಾಯುಧದ ಪೆಟ್ಟುಗಳ ಶಬ್ದವನ್ನು ಅಲ್ಪವಾಗಿ ಮಾಡಿತೋ, ಅಂತಹ ಬ್ರಹ್ಮಾಂಡವನ್ನೆಲ್ಲವನ್ನೂ ವ್ಯಾಪಿಸಿದ ಮಹಾಶಬ್ದದೊಡನೆ, ಹಾಗೆಯೇ ಕೋಟಿಸಂಖ್ಯಾತವಾದ ಮಿಂಚುಗಳು ಏಕಕಾಲದಲ್ಲಿ ಹೊಳೆದಂತೆ, ಈಶಾನ್ಯದಿಕ್ಕು ಅತಿ ಭಯಂಕರವಾಗಿ ಪ್ರಕಾಶಿಸಿತು. ॥೭೧-೭೨॥

ಆ ರೀತಿಯಾದ ಅದ್ಭುತವಾದ ತೇಜಸ್ಸಿನಿಂದಲೂ ಮತ್ತು ಭಯಂಕರ ಶಬ್ದದಿಂದಲೂ, ಇಂದ್ರ, ಅಗ್ನಿ, ವಾಯು ಸಮೇತರಾದ ಸಕಲ ದೇವತೆಗಳೂ ಕೂಡ, ಕುರುಡಾಗಿಯೂ, ಕಿವುಡರಾಗಿಯೂ ಮಾಡಲ್ಪಟ್ಟರು. ಆ ವೇಗವನ್ನು ಸಹಿಸಲಾರದೆ ಎಲ್ಲರೂ ಭಯದಿಂದ, ಬುಡ ಕತ್ತರಿಸಿದ ಮರಗಳಂತೆ, ಮೂರ್ಛಿತವಾಗಿ ಭೂಮಿಯಲ್ಲಿ ಬಿದ್ದರು. ॥೭೩॥

ಹೆದರಿದ ದೇವತೆಗಳು ಜ್ಞಾನವಿಲ್ಲದೆ, ದೇಹದಿಂದ ಬಟ್ಟೆಯೆಲ್ಲವೂ ಜಾರಿದವರಾಗಲು, ತೊಟ್ಟಿದ್ದ ಆಭರಣಾದಿಗಳೆಲ್ಲವೂ ನಷ್ಟವಾಗಲು, ಕೈಕಾಲುಗಳನ್ನೂ ಸಿಕ್ಕಾ

ವಿಕ್ಷಿಪ್ತಬಾಹುಚರಣಾಃ ಸಮಾಸಾದ್ಯೇತರೇತರಂ ।
ಸಂಘುಶಃ ಪತಿತಾಃ ಕೇಚಿತ್ ಕೇಚಿದ್ವಿರಲತೋ ಬುಧಾಃ ॥೭೫॥

ಏವಂ ಭೂತೇ ದೇವಗ(ರ)ಣೇ ವಿಧಿವಿಷ್ಣು ಮಹೇಶ್ವರಾಃ ।
ದೃಷ್ಟ್ವಾ ಮಹಾಪ್ರಕಾಶೈಕಸ್ತೋಮಂ ವ್ಯಾಪ್ತದಿಗಂತರಂ ॥೭೬॥

ತತ್ತೇಜಸೋ ನ ಮೂರ್ಧಾನಂ ನ ಮಧ್ಯಂ ನಾಂತಮೇವ ಚ ।
ಲಕ್ಷಿತಂ ತೈ ಸ್ತದಾ ಸರ್ವಲೋಕಂ ವ್ಯಾಪ್ಯ ವ್ಯವಸ್ಥಿತಂ ॥೭೭॥

ಆಪಾತಾಲಾದಾದ್ಯುಮೂರ್ಧ್ನಃ ಪ್ರಕಾಶೈಕ ಘನಂ ಮಹತ್ ।
ಖದ್ಯೋತೀಕೃತ ಮಾರ್ತಂಡ ಕೋಟಿ ಕೋಟಿ ಮಹದ್ದ್ಯುತಿ ॥೭೮॥

ಜ್ಞಾತ್ವಾ ಪರಾಶಕ್ತಿಲೀಲಾ ವಿಭವಂ ಕಾರಣೇಶ್ವರಾಃ ।
ದಂಡವತ್ಪತಿತಾ ಭೂಮೌ ಭಕ್ತ್ಯಾ ತಾಂ ಶರಣಂ ಗತಾಃ ॥೭೯॥

ಭೂಯೋ ಭೂಯಃ ಪ್ರಣೇಮುಸ್ತೇ ದೃಷ್ಟ್ವಾ ತತ್ಪ್ರಭವಾದ್ಭುತಂ ।
ಕೃತಾಂಜಲಿ ಪುಟಾಃ ಸ್ತೋತುಂ ಪ್ರವೃತ್ತಾ ಜಗದಂಬಿಕಾಂ ॥೮೦॥

ಪಟ್ಟೆ ಒಗೆದು, ಕೆಲವರು ಒಟ್ಟಾಗಿಯೂ, ಕೆಲವರು ಬೇರೆ ಬೇರೆಯಾಗಿಯೂ ಇಲ್ಲೊಬ್ಬರು ಅಲ್ಲೊಬ್ಬರು ಬಿದ್ದರು. ||೭೪-೭೫||

ದೇವತೆಗಳ ಸಮೂಹವು ಹೀಗೆ ಮೂರ್ಛಿತವಾಗಿ ಬೀಳಲು ಬ್ರಹ್ಮಾ ವಿಷ್ಣು ಮಹೇಶ್ವರರು ಸಕಲ ದಿಕ್ಕುಗಳನ್ನೂ ವ್ಯಾಪಿಸಿರುವ ಒಂದು ದೊಡ್ಡದಾದ ಪ್ರಕಾಶದ ಸಮೂಹವನ್ನು ನೋಡಿದರು. ಆ ತೇಜಸ್ಸಿಗೆ ಮೊದಲಾಗಲೀ, ಮಧ್ಯವಾಗಲೀ, ಕೊನೆಯಾಗಲೀ ಕಾಣುತ್ತಿರಲಿಲ್ಲವು. ಅವರು ಸಕಲ ಲೋಕಗಳನ್ನೂ ವ್ಯಾಪಿಸಿರುವ ಒಂದೇ ಒಂದು ತೇಜಃಪುಂಜವನ್ನು ನೋಡಿದರು. ||೭೬-೭೭||

ಪಾತಾಲದಿಂದ ಹಿಡಿದು ಸುರಲೋಕದವರೆಗೂ ವ್ಯಾಪಿಸಿ ನಿಂತಿರುವ, ದೊಡ್ಡದಾದ ಆಕಾಶವನ್ನೂ ಬೆಳಗುವ, ಸೂರ್ಯನ ಕೋಟಿಸಂಖ್ಯೆಯ ತೇಜಸ್ಸಿಗೆ ಸಮಾನವಾದ, ಒಂದೇ ಆಕಾರವಾಗಿರುವ ತೇಜಸ್ಸನ್ನು ನೋಡಿ, ಆ ಕಾರಣ ಪುರುಷರು ಇದು ಪರಾಶಕ್ತಿಯಾದ ತ್ರಿಪುರಾಂಬಿಕೆಯ ಲೀಲೆಯ ಮಹಿಮೆಯು. ಎಂದು ತಿಳಿದರು. ||೭೮||

ತತ್‌ಕ್ಷಣದಲ್ಲಿ ಆ ಮೂವರೂ ಸಹ ಸಾಷ್ಟಾಂಗ ಪ್ರಣಾಮಮಾಡಿ ಆ ದೇವಿಗೆ

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ದೇವೀ ಪ್ರಾದುರ್ಭಾವ ವರ್ಣನಂ ನಾಮ ಸಪ್ತಮೋಽಧ್ಯಾಯಃ

ಶರಣಾಗತರಾದರು. ಅನಂತರದಲ್ಲಿ ದೇವಿಯನ್ನು ಅಂಜಲಿಬದ್ಧರಾಗಿ ಮತ್ತೆ ಮತ್ತೆ ಅಂಬಿಕೆಯ ಮಹಿಮೆಯ ಅತಿಶಯವನ್ನು ಸ್ತುತಿಸಲು ಪ್ರಾರಂಭಿಸಿದರು. ||೭೯-೮೦||

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ
ದೇವಿಯು ಪ್ರತ್ಯಕ್ಷಳಾದುದನ್ನು ವಿವರಿಸಿರುವ
ಏಳನೆಯ ಅಧ್ಯಾಯವು ಮುಗಿದುದು

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ಅಷ್ಟಮೋಽಧ್ಯಾಯಃ ॥

ಎಂಟನೆಯ ಅಧ್ಯಾಯವು

ಸ ಸ್ತವಂ ಕರ್ತುಮುದ್ಯುಕ್ತೋ ಬ್ರಹ್ಮಾ ಲೋಕಪಿತಾಮಹಃ ।
ಭಕ್ತಿಸಂತತವಾಗಗ್ರ್ಯೈರಾನಂದ ಭರಿತಾಂತರಃ ॥೧॥

ಜಯ ಜಯ ಮಾತರ್ಜಗತಾಂ
ಜಯಜಯ ಸರ್ವಾಧಿಕೇ ಮಹೇಶಾನಿ ।
ಜಯ ಜಯ ಭಕ್ತಾಽಽರ್ತಿಹರೇ
ಜಯ ಜಯ ಸರ್ವಾಂತರಸ್ಥ ಚಿದ್ರೂಪೇ ॥೨॥

ಜಗತಾಂ ಜನಿಮುಖರಚನಾ
ಯದ್ಭ್ರೂಲೀಲಾವಿಲಾಸತಃ ಕುರ್ಮಃ ।
ವಿಧಿಹರಿರುದ್ರೇಶಾದ್ಯಾ
ವಯಂ ಮಹೇಶೀಂ ನಮಾಮಿ ತಾಂ ದೇವೀಂ ॥೩॥

ಲೋಕಗಳಿಗೆಲ್ಲಕ್ಕೂ ಪಿತಾಮಹನಾದ ಆ ಬ್ರಹ್ಮನು ಸಂತೋಷಗೊಂಡ ಮನಸ್ಸುಳ್ಳವನಾಗಿ ಭಕ್ತಿಯಿಂದ ಕೂಡಿದ ವಾಗ್ಧಾರೆಯಿಂದ ದೇವಿಯನ್ನು ಸ್ತೋತ್ರ ಮಾಡಲು ಹೀಗೆ ಮೊದಲುಮಾಡಿದನು. ॥೧॥

ಜಗತ್ತೆಲ್ಲಕ್ಕೂ ತಾಯಿಯಾದ ದೇವಿಯೇ, ನಿನಗೆ ಜಯವಾಗಲಿ. ಸರ್ವೋಚ್ಚಳಾದ ದೇವಿಯೇ, ನಿನಗೆ ಜಯವಾಗಲಿ. ಭಕ್ತರ ದುಃಖ ನಾಶಮಾಡುವವಳೇ, ನಿನಗೆ ಜಯವಾಗಲಿ. ಸಕಲರ ಹೃದಯ ಮಧ್ಯದಲ್ಲಿರುವ ಜ್ಞಾನಸ್ವರೂಪಳೇ, ನಿನಗೆ ಜಯವಾಗಲಿ. ॥೨॥

ಹರಿಹರ ಬ್ರಹ್ಮ ಈಶ್ವರ ಮೊದಲಾದ ನಾವುಗಳು ಯಾವ ದೇವಿಯ ಹುಬ್ಬಿನ

ಸ್ರಷ್ಟಾಽಸ್ಮ್ಯಹಂ ಮುರಾರಿಃ
ಪಾಲಯಿತಾ ಚೈಷ ನಾಶಕೋ ರುದ್ರಃ ।
ಈಶಸ್ತಿರೋಧಿಮೂಲಂ
ಸರ್ವಂ ತ್ವಚ್ಛಕ್ತಿಲೇಶತಃ ಸಿದ್ಧಂ ॥೪॥

ಸರ್ವಾನುಗ್ರಹ ಮೂಲಂ
ಸದಾಶಿವೋಽಪ್ಯೇಷ ತಾವಕಪದಾಬ್ಜಂ ।
ಸಂಶ್ರಿತ್ಯೈವ ಪ್ರಭವತಿ
ತಸ್ಮಾತ್ ತ್ವಂ ಸರ್ವ ಸೇವನೀಯಾಽಸಿ ॥೫॥

ವಾಮಾ ಜ್ಯೇಷ್ಠಾ ಚ ರೌದ್ರೀ
ರೂಪೇಣಾಽಸ್ಮಾನ್ ಸ್ಥಿತಾಽಸಿ ಸಂಸ್ಥಾಪ್ಯ ।
ಯರ್ಹಿ ವಯಂ ತರ್ಹಿ ತಥಾ
ಭೂತಾ ತುರ್ಯಂ ತಥಾಽಂಬಿಕಾವಪುಷಾ ॥೬॥

ಲೀಲೆಯ ಬಲದಿಂದಲೇ ಪ್ರಪಂಚದ ಸೃಷ್ಟಿ ಸ್ಥಿತಿ ಲಯವೇ ಮೊದಲಾದ ಕೆಲಸಗಳನ್ನು ಮಾಡುತ್ತೇವೆಯೋ ಅಂತಹ ಮಹೇಶ್ವರಿಯನ್ನು ನಮಸ್ಕರಿಸುತ್ತೇವೆ. ॥೩॥

ನಾನು ಲೋಕವನ್ನು ಸೃಷ್ಟಿಮಾಡುತ್ತೇನೆ. ವಿಷ್ಣುವು ಕಾಪಾಡುತ್ತಾನೆ. ರುದ್ರನು ನಾಶಮಾಡುತ್ತಾನೆ. ಈಶ್ವರನು ತಿರೋಧಾನಕ್ಕೆ ಕಾರಣನಾಗಿದಾನೆ. ನಾವು ಈ ಕೆಲಸಗಳನ್ನು ಓ ದೇವಿಯೇ, ನಿನ್ನ ಅಲ್ಪಾಲ್ಪವಾದ ಶಕ್ತಿಯ ಸಹಾಯದಿಂದಲೇ ಮಾಡುತ್ತೇವೆ! ಇವೆಲ್ಲಕ್ಕೂ ನೀನೇ ಕಾರಣಳು. ಅಲ್ಲದೆ ॥೪॥

ಈ ಸದಾಶಿವನು ನಿನ್ನ ಪಾದಕಮಲಗಳ ಆಶ್ರಯದಿಂದಲೇ ಸಕಲರನ್ನೂ ಅನುಗ್ರಹಿಸುತ್ತಾನೆ. ಆದಕಾರಣ ಅಂಬಿಕೆಯೇ, ನೀನು ಸಕಲರಿಂದಲೂ ಪೂಜಿಸಲು ಅರ್ಹಳಾದವಳು. ॥೫॥

ನಾವು ಈಗ ಎಲ್ಲಿ ಹೇಗೆ ಇದ್ದೇವೆಯೋ ಹಾಗೆ ನೀನೂ ಕೂಡ ವಾಮಾ, ಜ್ಯೇಷ್ಠಾ, ಮತ್ತು ರೌದ್ರೀ ಮೊದಲಾದ ರೂಪವುಳ್ಳವಳಾಗಿ ನಮ್ಮಗಳನ್ನು ನಮ್ಮ ಸ್ಥಾನದಲ್ಲಿ ನಿಯೋಜಿಸಿರುತ್ತೀಯೆ; ಮತ್ತು ನೀನು ಅಂಬಿಕಾತನುವಿನಿಂದ ಈ ನಮ್ಮೆಲ್ಲರಿಗಿಂತಲೂ ಭಿನ್ನಳಾಗಿ ನಾಲ್ಕನೆಯವಳಾಗಿ ಇರುತ್ತೀಯೆ. ॥೬॥

ಸಂಹೃತ್ಯ ತಾವದಾಕಾಶಂ
ಸ್ವಸ್ಥಾನೇ ಸಂಸ್ಥಿತಾಽಸಿ ಯದಿ ಜನನಿ ।
ತರ್ಹಿ ವಯಂ ಪ್ರಥಿತಾಖ್ಯಾಃ
ಪಂಚ ಮಹಾಪ್ರೇತ ಸಂಜ್ಞಯಾ ಜಗತಿ ॥೭॥

ಅಖಿಲಾಪತ್ಸಮಯೇಷ್ವ
ಪ್ಯಸ್ಮಾಕಂ ತ್ವಂ ವಿಚಿತ್ರ ತನುವಿಭವಾ ।
ರಕ್ಷಾಪರಾ ಯಥಾ ಸ್ವೇ
ಜನಯಿತ್ರೀ ದಾರಕೇ ಜಗನ್ಮಾತಃ ॥೮॥

ಲೋಕಾನಾಂ ಸಕಲಾನಾಂ
ತ್ವದ್ಗುಣಜಾತಾ ವಯಂ ತ್ರಯಸ್ತ್ವಾದ್ಯಾಃ ।
ಅಸ್ಮಭ್ಯಮಪಿ ತ್ರಿಭ್ಯಃ
ಪುರಾ ಸ್ಥಿತೇ ಸ್ತ್ವಂ ಪ್ರಕೀರ್ತಿತಾ ತ್ರಿಪುರಾ ॥೯॥

ಇತಿ ಸಂಸ್ತುತ್ಯ ಲೋಕಾನಾಂ ಸ್ರಷ್ಟಾ ಭಕ್ತ್ಯೇಕನಿರ್ಭರಃ ।
ದಂಡವತ್ಪತಿತೋ ಭೂಮೌ ಧ್ಯಾಯನ್ ಹೃದಿ ಪರಾಽಂಬಿಕಾಂ ॥೧೦॥

ತಾಯಿಯೇ, ನೀನು ಆಕಾಶವನ್ನು ಉಪಸಂಹರಿಸಿ ನಿನ್ನ ಸ್ಥಾನದಲ್ಲಿರುವುದಾದರೆ ನೀನಿಲ್ಲದ ನಾವೂ ಪಂಚಪ್ರೇತಾತ್ಮಕರಾಗಿ ಪ್ರಪಂಚದಲ್ಲಿ ಇರುತ್ತೇವೆ. ॥೭॥

ಓ ಲೋಕಮಾತೆಯೇ, ನೀನು ಆಶ್ಚರ್ಯಕರವಾದ ಶರೀರವನ್ನು ಧರಿಸಿ ಸಕಲ ಕಷ್ಟಸಮಯಗಳಲ್ಲೂ ನಮಗೆ, ತಾಯಿಯಾದವಳು ತನ್ನ ಮಗುವನ್ನು ರಕ್ಷಿಸುವಂತೆ, ಶ್ರೇಷ್ಠ ರಕ್ಷಕಳಾಗಿರುತ್ತೀಯೆ. ॥೮॥

ನಿನ್ನ ಸತ್ವರಜಸ್ತಮೋಗುಣಗಳಿಂದುತ್ಪನ್ನರಾಗಿರುವ ನಾವು ಮೂವರೂ ಸಕಲ ಲೋಕಗಳೆಲ್ಲಕ್ಕಿಂತಲೂ ಮೊದಲಿಗರಾಗಿರುತ್ತೇವೆ. ನಾವು ಮೂವರುಗಳಿಗಿಂತಲೂ ಆದ್ಯಳಾದ ಪ್ರಯುಕ್ತ ಮಾತೆಯೇ, ನಿನ್ನನ್ನು ತ್ರಿಪುರಾ ಎಂಬುದಾಗಿ ಕರೆಯುತ್ತಾರೆ. ॥೯॥

ಲೋಕಗಳನ್ನು ಸೃಷ್ಟಿಸುವ ಬ್ರಹ್ಮನು ಈ ಪ್ರಕಾರವಾಗಿ ಸ್ತೋತ್ರಮಾಡಿ ಭಕ್ತಿಯಿಂದ ಪರಿಪೂರ್ಣನಾಗಿ ಮನಸ್ಸಿನಲ್ಲಿ ದೇವಿಯನ್ನು ಧ್ಯಾನಿಸುತ್ತಾ ದಂಡದಂತೆ ಭೂಮಿಯಲ್ಲಿ ಸಾಷ್ಟಾಂಗ ಪ್ರಣಾಮಮಾಡಿದನು. ॥೧೦॥

ಅಥ ಪೀತಾಂಬರೋ ಭಕ್ತ್ಯಾ ಗದ್ಗದಸ್ವರತೋ ಹರಿಃ ।
ಅಸ್ತೌಷೀದತಿಚಾತುರ್ಯ ಪ್ರಕರೋಕ್ತಿಪ್ರಗುಂಫನೈಃ ॥೧೧॥

ಶ್ರೀಮಾತರ್ವಯಮಿಹ ತೇ ಗುಣಪ್ರಭೂತಾಃ
ತ್ವಚ್ಛಾಸ್ತಿಂ ಸತತಮತೀವ ಜಾಗರೂಕಾಃ ।
ಕುರ್ಮಸ್ತಜ್ಜನನಿ ಪದಾಂಬುಜೈಕಭಕ್ತಿಂ
ವಾಂಛಾಮೋ ಭವತು ತದೇವ ಸರ್ವದಾ ನಃ ॥೧೨॥

ದೇವೇಶಿ ತ್ವಯಿ ಸತಿ ಸರ್ವಭಾವವರ್ಗಃ
ತತ್ತದ್ರೂಪಗುಣ ಪ್ರಭೇದ ಭಿನ್ನಗಾತ್ರಃ ।
ನಾನಾಶಕ್ತಿ ವಿಭವಶೋಭಿತೋ ವಿಭಾನೋ
ನೋಚೇದ್ದೇವಿ ಕಿಮಪಿ ನೈವ ಭಾವಿತಃಸ್ಯಾತ್ ॥೧೩॥

ಭೂರಾಪೋಽನಲಚರಖಾನಿ ಜಂಗಮಾನಿ
ಭೂತಾನಿ ಸ್ಥಿರ ವಿಭವಾನಿ ಚಾಪಿ ಮಾತಾ ।

ಅನಂತರದಲ್ಲಿ ಪೀತಾಂಬರಧರನಾದ ವಿಷ್ಣುವು ಭಕ್ತಿಯಿಂದ ಗದ್ಗದ ಕಂಠನಾಗಿ ಬಹುಚಾತುರ್ಯ ಪೂರ್ವಕವಾಗಿ ಗೂಢವಾದ ಮತ್ತು ಗಂಭೀರವಾದ ಅರ್ಥಗಳಿಂದ ಕೂಡಿದ ಸ್ತೋತ್ರದಿಂದ ದೇವಿಯನ್ನು ಸ್ತುತಿಸಿದನು. ||೧೧||

ಓ ಜನನಿಯೇ, ನಿನ್ನ ಗುಣಗಳಲ್ಲಿ ಒಂದೊಂದರ ಪ್ರಾಧಾನ್ಯದಿಂದ ಉತ್ಪನ್ನರಾಗಿರುವ ನಾವು ಯಾವಾಗಲೂ ಜಾಗರೂಕರಾಗಿ ನಿನ್ನ ಆಜ್ಞೆಯನ್ನು ಪಾಲಿಸುತ್ತೇವೆ. ಆದಕಾರಣ ಮಾತೆಯೇ, ನಾವು ಯಾವಾಗಲೂ ನಿನ್ನ ಪಾದಕಮಲಗಳ ಭಕ್ತಿಯನ್ನು ಅಪೇಕ್ಷಿಸುತ್ತೇವೆ. ನಮಗೆ ಯಾವಾಗಲೂ ಅದೇ ಲಭಿಸಲಿ. ||೧೨||

ಮಹೇಶ್ವರಿಯೇ, ನೀನು ಇರಲು ಸಕಲಭಾವ ಪದಾರ್ಥಗಳು ಆಯಾರೂಪ ಗುಣ ಭೇದಗಳಿಂದ ಭಿನ್ನ ಭಿನ್ನ ಶರೀರಗಳುಳ್ಳವುಗಳಾಗಿ ಅನೇಕವಾದ ಶಕ್ತಿಯ ವೈಭವಗಳಿಂದ ಪ್ರಕಾಶಿಸುತ್ತವೆ. ನೀನಿರದಿದ್ದರೆ ಲೋಕದಲ್ಲಿ ಯಾವುದೂ ಇರುವುದಿಲ್ಲ. ಸಕಲಕ್ಕೂ ದೇವಿಯೇ, ನೀನೇ ಕಾರಣಳು. ||೧೩||

ಜಂಗಮವಾದ ಮತ್ತು ಭೂಮಿ, ಜಲ, ವಾಯು, ತೇಜಸ್ಸು, ಆಕಾಶ, ಈ ಸ್ಥಾವರಭೂತಗಳೂ, ತಾಯಿಯೇ, ನಿನ್ನ ಮಹಿಮೆಯಿಂದಲೇ ಶಾಶ್ವತವಾದ

ದಿಕ್ಕಾಲೌ ಸದಸದಪೀಹ ಸರ್ವಮೇತ
  ತ್ತ್ವದ್ರೂಪಂ ನ ಭವತಿ ಲೇಶತಸ್ತ್ವದನ್ಯತ್ ॥೧೪॥

ಲೋಕೇಷು ಪ್ರಥಿತಮಹಾಪ್ರಭಾವಯುಕ್ತಾ
  ಬ್ರಹ್ಮಾದ್ಯಾ ವಯಮಿಹ ಲೋಕನಾಥ ನಾಥಾಃ ।
ತ್ವತ್ಪೀಠ ಪ್ರಪದ ನಿಕೇತನಾ ಹಿ ಜಾತಾಃ
  ಸೇವಾತಸ್ತವ ಪದಪದ್ಮಯೋರ್ನಮಸ್ತೇ ॥೧೫॥

ರೂಪಂ ತೇ ಪರಮ ಮತೀಂದ್ರಿಯಂ ಶ್ರುತೀನಾಂ
  ಮೂರ್ಧಾನೋಽಪ್ಯತಿಚಕಿತಾ ವದಂತಿ ನೈವ ।
ತ್ವನ್ಮಾಯಾ ವಿಭವ ಪರಾಕೃತಾಂತರಂಗಾ
  ಯೇ ತೇ ತ್ವಾಂ ಕಥಮಿಹ ತಾದೃಶೀಂ ವಿದಂತಿ ॥೧೬॥

ಭೂಯಸ್ತ್ವತ್ಪದಸರಸೀರುಹೈಕಸೇವಾ
  ನ್ಯಗ್ಭೂತಾಖಿಲಮಲದೋಷಸಂಘಯುಕ್ತಾಃ ।

ಮಹಿಮೆಯುಳ್ಳವುಗಳಾಗಿವೆ. ದಿಕ್ಕು, ಕಾಲ, ಸತ್ ಮತ್ತು ಅಸತ್ ಎಲ್ಲವೂ ಕೂಡ ದೇವಿಯೇ, ನಿನ್ನ ರೂಪವೇ ಆಗಿರುತ್ತದೆ. ನಿನಗಿಂತಲೂ ಭಿನ್ನವಾದುದು ಯಾವುದೂ ಇಲ್ಲಿ ಇಲ್ಲವು. ||೧೪||

ಪ್ರಪಂಚಗಳಲ್ಲಿ ಖ್ಯಾತಿಗೊಂಡ ಪ್ರಭಾವದಿಂದ ಯುಕ್ತರಾದ ಲೋಕೇಶರಾದ ಬ್ರಹ್ಮನೇ ಮೊದಲಾದ ನಾವು ನಿನ್ನ ಪಾದಾಗ್ರವೆಂಬ ರಕ್ಷಣಾಸ್ಥಾನವುಳ್ಳವರಾಗಿ ನಿನ್ನ ಸೇವೆಯಿಂದಲೇ ಶಕ್ತರಾಗಿ ಇರುತ್ತೇವೆ. ದೇವಿಯೇ, ಅಂತಹ ಪ್ರಭಾವಯುಕ್ತವಾದ ನಿನ್ನ ಪಾದಕಮಲಗಳಿಗೆ ನಮಸ್ಕಾರವು. ||೧೫||

ಜಗದೀಶ್ವರಿಯೇ, ನಿನ್ನ ಪರರೂಪವು ಶ್ರೇಷ್ಠವಾದುದೂ ಇಂದ್ರಿಯಗೋಚರವಲ್ಲದುದೂ ಆಗಿದೆ. ಉಪನಿಷತ್ತುಗಳೂ ಕೂಡ ಬಹಳ ಆಶ್ಚರ್ಯಗೊಂಡವಾಗಿ ನಿನ್ನ ವೈಭವವನ್ನು ವಾಚ್ಯರೀತಿಯಿಂದ ಹೇಳಲಾರದಾಗಿವೆ. ಯಾವ ಆ ಉಪನಿಷತ್ತುಗಳುಂಟೋ ಅವೆಲ್ಲವೂ ನಿನ್ನ ಮಾಯಾವಿಭವದಿಂದಲೇ ತಿರಸ್ಕೃತವಾಗಿರುವಾಗ ನೀನು ಹೀಗೆಯೇ ಇರುತ್ತೀಯೆ. ಎಂದು ಹೇಗೆ ತಾನೇ ಹೇಳಬಲ್ಲವು? ||೧೬||

ದೇವಿಯೇ, ನಿನ್ನ ಪಾದಕಮಲಗಳ ಸೇವೆಯಿಂದ ದೂರವಾದ ಸಕಲ ಪಾಪ

ಶ್ರೀನಾಥೋಽಮೃತವಚಸಾ ಸುಶುದ್ಧ ಚಿತ್ತೋ
ವೇತ್ತಿ ತ್ವಾಂ ಪರಮಶಿವಾತ್ಮರೂಪಣೀಂ ಸಃ ॥೧೭॥

ಸರ್ವಜ್ಞೋಽಪ್ಯಜನಿತ ವಾಙ್ಮಯೋ ಹಿ ವೇದಃ
ತ್ವದ್ರೂಪಂ ವದತಿ ಗುಣಪ್ರಭೇದಭಾಸಂ ।
ತಸ್ಮಾತ್ತ್ವಂ ಪರಕೃಪಯಾ ಬಿಭರ್ಷಿ ಚೈತ
ತ್ತೇಜೋಘಾತ್ಮಕವಪುರೇ ತದಸ್ಮದರ್ಥಂ ॥೧೮॥

ರೂಪಂ ಚೈತದಪಿ ಮಹಾಪ್ರಕಾಶಮಾನಂ
ತ್ವತ್ಸೇವಾ ವಿಭವತ ಏವ ಲಕ್ಷಿತಂ ನಃ ।
ದೇವೇಂದ್ರಾದ್ಯಖಿಲ ಸುರೌಘದೋಷ ಶಾಂತ್ಯೈ
ಮಾತಸ್ತೇ ಭವತು ಸಮೀಹಿತ ಸ್ವರೂಪಂ ॥೧೯॥

ಏವಂ ಮುರಾರಿಃ ಸಂಸ್ತುತ್ಯ ತ್ರಿಪುರಾಂ ಪರಮೇಶ್ವರೀಂ ।
ಭಕ್ತಿಪೀಯೂಷವಾರಿಧಿಮಗ್ನೋ ನೈಕ್ಷತ ಕಿಂಚನ ॥೨೦॥

ಸಮೂಹಗಳಿಂದ ಕೂಡಿದ ಲಕ್ಷ್ಮೀಪತಿಯು ಶುದ್ಧಾಂತಃಕರಣನಾಗಿ ಅಮೃತವಾಣಿಯಿಂದ ಶ್ರೇಷ್ಠಳಾದ ಶಿವಸ್ವರೂಪಳಾದ ನಿನ್ನನ್ನು ಸ್ತೋತ್ರಮಾಡುತ್ತಾನೆ. ॥೧೭॥

ಮಾತೆಯೇ, ಸಕಲವನ್ನೂ ಅರಿತಿರುವ, ಅಪೌರುಷೇಯವಾದ, ವೇದವು ನಿನ್ನ ಈ ಸಗುಣರೂಪವನ್ನು ಸತ್ವರಜಸ್ತಮೋಗುಣಭೇದದಿಂದ ತೋರುತ್ತದೆಂದು ಹೇಳುತ್ತಾ ಇದೆ. ಆದಕಾರಣ ದೇವಿಯೇ, ಮತ್ತೊಬ್ಬರಲ್ಲಿ ದಯಾಯುಕ್ತಳಾದುದರಿಂದಲೇ ಈ ತೇಜೋರೂಪವಾದ ಶರೀರವನ್ನು ನೀನು ನಮಗಾಗಿ ಧರಿಸಿರುತ್ತೀಯೆ. ॥೧೮॥

ನಿನ್ನ ಮಹಾಪ್ರಕಾಶಮಾನವಾದ ಈ ರೂಪವನ್ನು ನಾವು ನಿನ್ನ ಪಾದಸೇವೆಯ ಪ್ರಭಾವದಿಂದಲೇ ನೋಡುತ್ತಿದೇವೆ. ಹೇ ತಾಯಿಯೇ, ದೇವೇಂದ್ರನೇ ಮೊದಲಾದ ಸಕಲ ದೇವತೆಗಳ ದೋಷವನ್ನು ಕ್ಷಮಿಸುವವಳಾಗು. ಅದರ ಶಾಂತಿಗೋಸ್ಕರ ನಿನ್ನ ರೂಪವು ನೋಡಲರ್ಹವಾದುದಾಗಲಿ. ॥೧೯॥

ಹೀಗೆ ವಿಷ್ಣುವು ತ್ರಿಪುರಾಂಬಿಕೆಯನ್ನು ಸ್ತುತಿಸಿ ಭಕ್ತಿ ಎಂಬ ಕ್ಷೀರಸಾಗರದಲ್ಲಿ ಮುಳುಗಿ ಏನನ್ನೂ ನೋಡಲಿಲ್ಲ. ॥೨೦॥

ಅಥ ಸ್ತೋತುಂ ಪಶುಪತಿಃ ಸಮಾರೇಭೇ ಕೃತಾಂಜಲಿಃ ।
ಭಕ್ತಿನಿರ್ಭರಸಂರಾಜತ್ಸು ಕೋಮಲವಚೋಗಣೈಃ ॥೨೧॥

ನಮಾಮಿ ಪರಮೇಶ್ವರಿ ತ್ವಮಿಹ ಸರ್ವದೇವೋತ್ತಮೈಃ ।
ವಿಧಾತೃಹರಿ ಶಂಕರೈಃ ಪರಮಪೂರುಷೈಃ ಪೂಜಿತಾ ।
ಅತಸ್ತ್ವದಧಿಕಃ ಕಥಂ ಭವತಿ ಕೋಽಪಿದೇವಾಭಿಧಃ
ತ್ವಮೇವ ಸಕಲೋತ್ತಮಾ ಭವಸಿ ರಾಜರಾಜೇಶ್ವರಿ ॥೨೨॥

ಧಿಗಸ್ತು ಮನುಜಾಽಭಿಧಾನ್ನರಪಶೂನ್ ವಿಮೂಢಾನ್ ಹಿತಾನ್
ವಿಹಾಯ ಪರಮೇಶ್ವರೀಂ ಪರಶಿವಾಂ ಸಮಸ್ತೋತ್ತಮಾಂ ।
ಮುಧಾ ಹಿ ವಿಬುಧಾಧಿಪಾನ್ ಪರಿಚರಂತಿ ಯೇ ಕಾಮಿನೋ
ವಿಹಾಯಸುರಶಾಖಿನಂ ಮೃತಕರೀರ ವೃಕ್ಷಾಶ್ರಯಾನ್ ॥೨೩॥

ಜಗಜ್ಜನನಿ ತಾವಕೇ ಚರಣಪಂಕಜೇ ಮೇ ಸದಾ
ಸ್ಥಿರೀಭವತು ಮಾನಸಂ ವಿಷಯವಾಸನಾ ನಿರ್ಗತಂ ।
ತ್ವದೀಯ ಪರಿಸೇವನೇ ಸತತಮಸ್ತು ಪಾಣಿದ್ವಯಂ
ವಚೋ ಭವತು ಕೀರ್ತನೇ ಗುಣಗಣಾಽಮೃತಾಬ್ಧೇಃ ಶಿವೇ ॥೨೪॥

ಆನಂತರದಲ್ಲಿ ಈಶ್ವರನು ಅಂಜಲಿ ಬದ್ಧನಾಗಿ ಭಕ್ತಿಯಿಂದ ಭರಿತನಾಗಿ ಮನೋಹರವಾದ ವಾಕ್ಯಸಮೂಹದಿಂದ ಸ್ತುತಿಸಲು ಪ್ರಾರಂಭಿಸಿದನು. ॥೨೧॥

ಹೇ ಪರಮೇಶ್ವರಿಯೇ, ನಿನಗೆ ನಮಸ್ಕಾರಗಳು. ಇಲ್ಲಿ ಇರುವ ಹರಿಹರ ಬ್ರಹ್ಮರಾದಿಯಾಗಿ ಸಕಲ ದೇವತಾಶ್ರೇಷ್ಠರು ನಿನ್ನನ್ನು ಪೂಜಿಸಿದರು. ಆದಕಾರಣ ದೇವತೆಗಳೊಳಗೆ ಯಾರೂ ನಿನಗಿಂತಲೂ ಉತ್ತಮರಿಲ್ಲ. ನೀನು ಎಲ್ಲರಿಗಿಂತಲೂ ಸರ್ವಶ್ರೇಷ್ಠಳಾಗಿರುವೆ. ॥೨೨॥

ವಿಮೂಢರಾದ ಮನುಜರೆಂದು ಹೆಸರುಳ್ಳ ನರರೆಂಬ ಪಶುಗಳಿಗೆ ಧಿಕ್ಕಾರ ವಿರಲಿ! ಅವರು ಸಕಲರಲ್ಲೂ ಶ್ರೇಷ್ಠಳಾದ ಪರಾದೇವಿಯಾದ ಪರಮೇಶ್ವರಿಯನ್ನು ಸೇವಿಸದೆ ವ್ಯರ್ಥವಾಗಿ ಕಾಮಿಗಳಾದ ದೇವತೆಗಳ ಒಡೆಯರನ್ನು, ಕಲ್ಪತರುವನ್ನು ಬಿಟ್ಟು ಮುಳ್ಳುಅಜ್ಜಿಗಿಡವನ್ನು ಆಶ್ರಯಿಸುವಂತೆ, ಆಶ್ರಯಿಸುತ್ತಾರೆ. ॥೨೩॥

ಲೋಕಜನನಿಯೇ, ನನ್ನ ಮನಸ್ಸು ವಿಷಯವಾಸನೆಯಿಂದ ದೂರವಾಗಿ ನಿನ್ನ ಅಡಿದಾವರೆಗಳ ಸ್ಮರಣೆಯಲ್ಲಿ ಸ್ಥಿರವಾಗಿರಲಿ. ನನ್ನ ಕೈಗಳೆರಡೂ ನಿನ್ನ ಸೇವೆ

ವಿಧಾತೃಹರಿ ಶಂಕರಪ್ರಿಯತಮಾಃ ಸತೀಃ ಶಾರದಾ
ರಮಾ ಗಿರಿಸುತಾಽಭಿಧಾಸ್ತವ ಕಲಾಃ ಸಮುಖ್ಯಾ ವಯಂ ।
ಮುಖೇ ಹೃದಿ ನಿಜಾರ್ಧ(ರ್ಧ)ಕೇ ವಪುಷಿ ಧಾರಯಂತಃ ಸದಾ
ಜಗದ್ವಿಸೃತಿ ಧಾರಣ ಪ್ರಲಯಕರ್ಮಸು ಪ್ರೋದ್ಯತಾಃ ॥೨೫॥

ತ್ವಮೇವ ವಿಸೃತಿ ವಿಧೌಸ್ಥಿತಿ ರಹೀಶಪರ್ಯಂಕಕೇ
ಮಯಿ ಪ್ರಲಯನಂ ಶಿವೇ ಗುಣ ವಿಲಾಪನಾ ಚೇಶಕೇ ।
ಅನುಗ್ರಹಕೃತಿಃ ಶಿವೇ ಪರತರೇ ಪರಬ್ರಹ್ಮಣಿ
ಸ್ಥಿತಾ ಪರಶಿವಾತ್ಮನಾ ಸಹಜ ಚಿತ್ಪ್ರಕಾಶಾಽತ್ಮಿಕಾ ॥೨೬॥

ಭುವಃ ಕಠಿನತಾ ಯಥಾ ರಸ ಇಹಾಪ್ಸು ರೂಪಂ ಶುಚೇ
ರ್ಯಥಾ ಚ ಮರುತೋ ಗತಿರ್ಭವತಿ ಶೂನ್ಯತಾ ಖೇ ಯಥಾ ।
ಯಥಾ ಭವತಿ ಚೋಷ್ಮತಾದಿನಕೃತಸ್ತಥಾ ತ್ವಂ ಶಿವೇ
ಶಿವಾದಿವಸುಧಾಂತಕೇ ಪರಶಿವೇ ಚ ಸಾರಾತ್ಮಿಕಾ ॥೨೭॥

ಯಲ್ಲೇ ಯಾವಾಗಲೂ ಆಸಕ್ತವಾಗಿರಲಿ. ನನ್ನ ಮಾತು ಆ ಶಿವೆಯ ಗುಣಾಂಬುಧಿಯ ಕೀರ್ತನವನ್ನು ಮಾಡುತ್ತಿರಲಿ. ||೨೪||

ಹರಿಹರ ಬ್ರಹ್ಮರ ಸತಿಯರಾದ, ನಿನ್ನ ಕಲಾಸಂಭೂತರಾದ, ಲಕ್ಷ್ಮೀ ಪಾರ್ವತಿ, ಮತ್ತು ಶಾರದೆಯರನ್ನು ನಾವು ಯಾವಾಗಲೂ ನಮ್ಮ ಪವಿತ್ರವಾದ ಹೃದಯ, ದೇಹಾರ್ಧ, ಮುಖಗಳಲ್ಲಿ ಧರಿಸಿ ಜಗತ್ತಿನ ಸ್ಥಿತಿ, ಸೃಷ್ಟಿ, ಲಯಗಳೆಂಬ ಕೆಲಸಗಳಲ್ಲಿ ಉದ್ಯುಕ್ತರಾಗಿರುತ್ತೇವೆ. ||೨೫||

ಬ್ರಹ್ಮನಲ್ಲಿ ಸೃಷ್ಟಿಯೂ, ಆದಿಶೇಷನನ್ನೇ ಹಾಸಿಗೆಯಾಗುಳ್ಳ ವಿಷ್ಣುವಿನಲ್ಲಿ ಸ್ಥಿತಿಯೂ, ನನ್ನಲ್ಲಿ ನಾಶವೂ, ಗುಣಗಳ ವಿಲಾಪನವೂ, ಅನುಗ್ರಹಮಾಡುವುದೂ, ಈ ಎಲ್ಲವೂ ಸಹ ದೇವಿಯೇ, ಪರಶಿವಾತ್ಮಕಳಾದ, ಸ್ವಭಾವವಾಗಿ ಚಿತ್ಸ್ವರೂಪಳಾದ ನೀನೇ ಆಗಿರುವೆ. ||೨೬||

ಭೂಮಿಗೆ ಕಾಠಿನ್ಯದಂತೆಯೂ, ನೀರಿನಲ್ಲಿ ರಸದಂತೆಯೂ, ಅಗ್ನಿಗೆ ರೂಪದಂತೆಯೂ, ವಾಯುವಿಗೆ ಗಮನದಂತೆಯೂ, ಆಕಾಶದಲ್ಲಿ ಶೂನ್ಯತೆಯಂತೆಯೂ, ಸೂರ್ಯನಿಗೆ ಶಾಖದಂತೆಯೂ, ಶಿವನೇ ಮೊದಲಾಗಿ ಭೂಮಿಯವರೆಗೆ ವ್ಯಾಪಿಸಿರುವ ನೀನು ಪರಶಿವನಲ್ಲಿ ಸಾರಭೂತಳಾಗಿರುವೆ. ||೨೭||

ಬುಧಾದಿ ಪ್ರಮುಖಾ ಮರಾಸ್ತವ ಮಹಾಮಹೇಶ್ಯಾಃ ಪರ
ಪ್ರಭಾವ ಪರಿಮೋಹಿತಾಃ ಪರಿಭವಂತಿ ಚಾನ್ಯೋನ್ಯತಃ ।
ಸಮುದ್ಧರ ತವಾರ್ಭಕಾನ್ ಜನನಿ ದಾನವಾರೀನ್ ಶಿವೇ
ವಿಭಾವಯ(ಕ)ಥಾಮೃತಾಪ್ಲುತ ಕಟಾಕ್ಷ ಲೇಶೈಃ ಸಕೃತ್ ॥೨೮॥

ಜಗಜ್ಜನನಿ ಸ(ಂ)ತತಂ ವಿಷಯದಾವಸಂತಾಪಿತಾನ್
ಜನಾನ್ ಕರುಣಯಾ ದೃಶಾಽಮೃತರಸೌಘನಿಷ್ಯಂದಯಾ ।
ವಿಭಾವಯ ಪರಾತ್ಪರೇ ಸಕಲತಾಪ ಸಂಹಾರಿಣೀ
ತ್ವಮೇವ ಜಗದಾಶ್ರಯಾ ಸತತಮಸ್ತು ತುಭ್ಯಂ ನಮಃ ॥೨೯॥

ಏವಂ ಸಂಸ್ತುತ್ಯ ಸದ್ಭಕ್ತ್ಯಾ ಬ್ರಹ್ಮಾದ್ಯಾ ಭಕ್ತಿನಿರ್ಭರಾಃ ।
ದಂಡವತ್ಪತಿತಾ ಭೂಮೌ ಧ್ಯಾಯಂತಸ್ತ್ರಿಪುರಾಂಬಿಕಾಂ ॥೩೦॥

ಅಥ ಸಾ ತ್ರಿಪುರೇಶಾನೀ ಪ್ರಸನ್ನಾಸಂಸ್ತವೈಃ ಸ್ತುತಾ ।
ಸುರಾಣಾಂ ತಮಪಾಕರ್ತುಂ ಮೋಹಂ ಸಾವಯವಾ(ಬಭೌ) ಚ ಸಾ ॥೩೧॥

ಹೇಮಾತೇ, ನಿನ್ನ ಅಧೀನರಾದ ಸಕಲ ಪ್ರಮುಖದೇವತೆಗಳೆಲ್ಲರೂ ತಮ್ಮ ತಮ್ಮ ಪ್ರಭಾವದಿಂದ ಮೋಹಿತರಾಗಿ ಪರಸ್ಪರ ಒಬ್ಬರನ್ನೊಬ್ಬರು ತಿರಸ್ಕಾರಭಾವದಿಂದ ಕಾಣುತ್ತಾರೆ. ಹೇ ಶಿವೇ, ನಿನ್ನ ಮಕ್ಕಳಾದ ಈ ದೇವತೆಗಳನ್ನು ಒಂದುಸಾರಿ ನಿನ್ನ ಕಥಾಮೃತದಿಂದ ಕೂಡಿದ ಕಟಾಕ್ಷಮಾತ್ರದಿಂದ ಉದ್ಧಾರಮಾಡುವವಳಾಗು. ॥೨೮॥

ಲೋಕಮಾತೆಯೇ, ಯಾವಾಗಲೂ ಕಾಮಪಿಪಾಸೆಯಿಂದ ತಪಿಸುತ್ತಿರುವ ಜನರನ್ನು ಅಮೃತವನ್ನು ಸುರಿಸುತ್ತಿರುವ ದಯಾದೃಷ್ಟಿಯಿಂದ ಪರಾಂಬಿಕೆಯೇ, ನೋಡು. ಎಲ್ಲಾ ತಾಪಗಳನ್ನೂ ನಾಶಮಾಡುವ ದೇವಿಯೇ, ನೀನೇ ಸಕಲ ಪ್ರಪಂಚಕ್ಕೂ ಆಶ್ರಯರೂಪಳಾಗಿರುವೆ. ಹೇ ದೇವಿ, ನಿನಗೆ ಯಾವಾಗಲೂ ನಮಸ್ಕಾರವು. ॥೨೯॥

ಈ ಪ್ರಕಾರವಾಗಿ ಬ್ರಹ್ಮನೇ ಮೊದಲಾದ ದೇವತೆಗಳು ಭಕ್ತಿಯಿಂದ ವರ್ಣಿಸಿ ಶ್ರದ್ಧಾಪೂರ್ವಕವಾಗಿ ಸಾಷ್ಟಾಂಗ ಪ್ರಣಾಮಮಾಡಿ ತ್ರಿಪುರಾಂಬಿಕೆಯನ್ನು ಸ್ತೋತ್ರ ಮಾಡಿದರು. ॥೩೦॥

ಅನಂತರದಲ್ಲಿ ತ್ರಿಪುರಾಂಬಿಕೆಯು ಹೀಗೆ ಸ್ತೋತ್ರಮಾಡಿದ್ದರಿಂದ ತೃಪ್ತಿಗೊಂಡು ದೇವತೆಗಳ ಅಜ್ಞಾನವನ್ನು ನೀಗಲು ಶರೀರಧಾರಿಣಿಯಾದಳು. ॥೩೧॥

ತಪ್ತಕಾಂಚನವರ್ಣಾಂಗೀ ದಿವ್ಯಾಭರಣಭೂಷಿತಾ ।
ಅಷ್ಟಾದಶಭುಜಾ ಕನ್ಯಾರೂಪಿಣೀ ಸುಸ್ಮಿತಾನನಾ ॥೩೨॥

ಮಂಜೀರನೂಪುರಾರಾವ ಝುಣತ್‌ಝುಣಿತ ದಿಕ್ತಟಾ ।
ತಲಪಾದ ಪ್ರಭಾಕ್ಷಿಪ್ತ ನವವಿದ್ರುಮಪಲ್ಲವಾ ॥೩೩॥

ಸುಮಂದಪೇಶಲಗತಿ ಸತೀರ್ಥೀಕೃತಹಂಸಿಕಾ ।
ಕೌಸುಂಭಾಂಬರ ಸಂರಾಜತ್ಕಟೀತಟ ವಿರಾಜಿತಾ ॥೩೪॥

ಗಂಭೀರಾವರ್ತಸದೃಶನಾಭಿಹ್ರದ ವಿರಾಜಿತಾ ।
ರಕ್ತಕೌಶೇಯೋತ್ತರೀಯ ಸಂಶೋಭಿತ ಭುಜಾಂತರಾ ॥೩೫॥

ಧನುಃ ಪಾಶಂ ತಥಾ ಘಂಟಾಂ ಡಮರುಂ ರತ್ನಪಾತ್ರಕಂ ।
ಖೇಟಕಂ ಜಯಮಾಲಾಂ ಚ ಪಂಕಜಂ ಪುಸ್ತಕಂ ತಥಾ ॥೩೬॥

ಕರಗಿಸಲ್ಪಟ್ಟ ಚಿನ್ನದಂತೆ ಹೊಂಬಣ್ಣದಿಂದ ಕೂಡಿದ ಶರೀರವುಳ್ಳವಳೂ, ಬಹುಮಾನ್ಯವಾದ ಆಭರಣಗಳಿಂದ ಅಲಂಕೃತಳೂ, ಹದಿನೆಂಟು ಭುಜಗಳಿಂದ ಕೂಡಿದವಳೂ, ಮುಗುಳುನಗೆಯಿಂದ ಹಿತವಾದ ಮುಖದಿಂದ ಕೂಡಿದವಳೂ, ಕನ್ಯಾರೂಪಳೂ ಮನೋಹರವಾದ ನೂಪುರಗಳಿಂದ ಉಂಟಾದ ಝುಣ್ ಝುಣ್ ಎಂಬ ಶಬ್ದದಿಂದ ಮೊಳಗುತ್ತಿರುವ ದಿಗಂತವುಳ್ಳ, ಚರಣ ತಲದ ಕಾಂತಿಯಿಂದ ತಿರಸ್ಕರಿಸಲ್ಪಟ್ಟ ನೂತನವಾದ ಹವಳವೂ ಚಿಗುರೂ ಉಳ್ಳವಳಾಗಿ ಕಂಗೊಳಿಸಿದಳು. ॥೩೨-೩೩॥

ಮಂದಗಮನದಿಂದ ಅನುಕರಿಸಲ್ಪಟ್ಟ ಹಂಸಗಮನ ಉಳ್ಳವಳೂ, ಕೌಸುಂಭಾಂಬರದಿಂದ ಪ್ರಕಾಶಿಸುತ್ತಿರುವ ಕಟಿಪ್ರದೇಶ ಉಳ್ಳವಳೂ, ಗಂಭೀರವಾದ ಸುಳಿಗೆ ಸಮಾನವಾದ ಹೊಕ್ಕುಳಿನ ಹಳ್ಳದಿಂದ ಪ್ರಕಾಶಿಸುತ್ತಿರುವವಳೂ, ಕೆಂಪುರೇಷ್ಮೆಯ ಉತ್ತರೀಯದಿಂದ ಪ್ರಕಾಶಿಸುತ್ತಿರುವ ಭುಜಪ್ರದೇಶವುಳ್ಳವಳೂ ಆಗಿ ಭಕ್ತರ ಕಣ್ಮನಗಳಿಗೆ ಆ ದೇವಿಯು ಸಂತೋಷವನ್ನುಂಟುಮಾಡಿದಳು. ॥೩೪-೩೫॥

ಧನುಸ್ಸನ್ನೂ, ಪಾಶವನ್ನೂ, ಘಂಟೆಯನ್ನೂ, ಡಮರುವನ್ನೂ, ರತ್ನದ ಪಾತ್ರೆ, ಜಯಮಾಲೆ, ಗುರಾಣಿ, ಶಂಖಚಕ್ರಗಳನ್ನೂ, ಖಡ್ಗವನ್ನೂ, ಶೂಲವನ್ನೂ, ಬಾಣಗಳನ್ನೂ ಸಹ, ಕಮಲವನ್ನೂ ಪುಸ್ತಕವನ್ನೂ ಜ್ಞಾನಮುದ್ರೆಯನ್ನೂ,

ಚಿನ್ಮುದ್ರಾಂ ಚಕ್ರಶಂಖೌ ಚ ಖಡ್ಗಂ ಶೂಲಂ ಪರಶ್ವಧಂ ।
ಗದಾಂ ಸೃಣಿಂ ಶರಾನ್ ಹಸ್ತೈರ್ಬಿಭ್ರಾಣಾ ಪಲ್ಲವಾಽರುಣೈಃ ॥೩೭॥

ಹೇಮಪದ್ಮಸ್ರಜಂ ಕಂಠೇ ರತ್ನಕೇಯೂರಶೋಭಿತಾ(ಂ) ।
ರತ್ನಾಂಗುಲೀಯ ಸಂರಾಜದಂಗುಲೀ ಕೋರಕೋಜ್ಜ್ವಲಾ ॥೩೮॥

ನವರತ್ನ ಲಸದ್ಗ್ರೈವೇಯಕಶೋಭಿತಕಂಧರಾ ।
ಮಣಿಮಾಂಗಲ್ಯಶೋಭಾಢ್ಯಾ ಶ್ರೀಚಂದನ ಸುರೂಷಿತಾ ॥೩೯॥

ಚಂದ್ರಸೂರ್ಯ ಸಮಾನಾಭ ತಾಟಂಕ ಯುಗಲೋಜ್ಜ್ವಲಾ ।
ಪಕ್ವಬಿಂಬಫಲಚ್ಛಾಯಾದಂತಚ್ಛದವಿರಾಜಿತಾ ॥೪೦॥

ನಾಸಾಽಽಭರಣ ಮಾಣಿಕ್ಯ ದ್ವಿಗುಣಾರುಣದೃಕ್ಛದಾ ।
ಪದ್ಮಪತ್ರನಿಭತ್ರ್ಯಕ್ಷ ಲೀಲಾಽಽಹೂತಮೃಗೀ ಗಣಾ ॥೪೧॥

ಗದೆಯನ್ನೂ, ಅಂಕುಶವನ್ನೂ, ಖೇಟಕವನ್ನೂ, ಸಹ ಚಿಗುರಿನಂತೆ ಕೆಂಪಾದ ಕೈಗಳಿಂದ ಧರಿಸಿಕೊಂಡು ದೇವತೆಗಳಿಗೆ ಕಾಣಿಸಿಕೊಂಡಳು. ||೩೬-೩೭||

ಸುವರ್ಣಪದ್ಮಗಳ ಮಾಲಿಕೆಯನ್ನು ಕಂಠದಲ್ಲಿ ಧರಿಸಿಯೂ, ರತ್ನಖಚಿತವಾದ ತೋಳಿನ ಆಭರಣವನ್ನು ಧರಿಸಿಯೂ, ಪ್ರಕಾಶಿಸುತ್ತಿರುವ ರತ್ನದ ಉಂಗುರದಿಂದ ಕೂಡಿದ ಬೆರಳುಗಳೆಂಬ ಮೊಗ್ಗುಗಳಿಂದ ಕಂಗೊಳಿಸುತ್ತಲೂ, ನವರತ್ನಗಳಿಂದ ಕೂಡಿದ ಕಂಠಾಭರಣದಿಂದ ಶೋಭಿತವಾದ ಕುತ್ತಿಗೆಯಿಂದ ಕೂಡಿಯೂ, ರತ್ನದಿಂದ ಮಾಡಿದ ಮಾಂಗಲ್ಯದ ಶೋಭೆಯಿಂದ ಯುಕ್ತಳೂ, ಆಗಿ ಶ್ರೀಗಂಧವನ್ನು ದೇಹದಲ್ಲೆಲ್ಲಾ ಲೇಪಿಸಿಕೊಂಡು ಇರುವ ದೇವಿಯು ಶೋಭಿಸಿದಳು. ||೩೮-೩೯||

ಚಂದ್ರಸೂರ್ಯರಿಗೆ ಸಮಾನವಾದ ಕಾಂತಿಯಿಂದ ಕೂಡಿದ ಎರಡು ಕರ್ಣಕುಂಡಲಗಳಿಂದ ಪ್ರಕಾಶಿತಳೂ, ಪಕ್ವವಾದ ತೊಂಡೆಹಣ್ಣಿನ ಪ್ರತಿಬಿಂಬದಂತಿರುವ ತುಟಿಗಳ ಕಾಂತಿಯಿಂದ ಕೂಡಿದವಳೂ, ಮೂಗಿನ ಒಡವೆಯಲ್ಲಿರುವ ಮಾಣಿಕ್ಯದ ಕೆಂಪಿನಿಂದ ಸೇರಿ ಇನ್ನೂ ಹೆಚ್ಚಾದ ರಕ್ತಛಾಯೆಯಿಂದ ಕೂಡಿದ ಕಣ್ಣುಗಳುಳ್ಳವಳೂ, ತಾವರೆ ಎಲೆಗೆ ಸಮಾನವಾದ ಮೂರು ಕಣ್ಣುಗಳ ಲೀಲೆಯಿಂದ ಆಕರ್ಷಿಸಲ್ಪಟ್ಟ ಹೆಣ್ಣು ಜಿಂಕೆಗಳಿಂದ ಕೂಡಿದವಳೂ ಆಗಿ ಆ ದೇವಿಯು ಶೋಭಿಸಿದಳು. ||೪೦-೪೧||

ಕಸ್ತೂರೀ ತಿಲಕಾಖ್ಯಾತಮುಖ ಪೂರ್ಣೇಂದು ಲಾಂಛನಾ ।
ಮುಖಾಂಬುಜ ಮಿಲಿಂದೌಘ ಸಮಾನ ಚಿಕುರಾವಲಿಃ ॥೪೨॥

ಮೃದುದೀರ್ಘ ಘನಶ್ಯಾಮ ಕೇಶಾಮೋದ ಸುಮೇದುರಾ ।
ಅನರ್ಘ್ಯಮಣಿಕೋಟೀರ ಪ್ರಭಾಪೂರ್ಣದ್ಯುಮಂಡಲಾ ॥೪೩॥

ಫಾಲಶೋಭಿನಿಶಾನಾಥ ಕಲಿಕೋತ್ತಂಸ ಮಂಡಿತಾ ।
ಸದಾ ಕುಮಾರಿಕಾ ದೇವೀ ಪರಬ್ರಹ್ಮಸ್ವರೂಪಿಣೀ ॥೪೪॥

ಈದೃಶೀ ಸಾ ಪರಾಶಕ್ತಿಸ್ತ್ರಿಪುರಾ ಲೋಕಸುಂದರಂ ।
ಲೀಲಾರ್ಥಂ ಸಂಧೃತವತೀ ರೂಪಂ ಪರಮಪಾವನಂ ॥೪೫॥

ತತೋ ವಿಧಿಹರೀಶಾನಾನಾಹ ಗಂಭೀರಯಾ ಗಿರಾ ।
ವತ್ಸಾಃ ಶೃಣುಧ್ವಂ ಮದ್ವಾಕ್ಯಂ ಕಲ್ಯಾಣಂ ಕರವಾಣಿ ವಃ ॥೪೬॥
ದೇವಾನಾಂ ಮೋಹನಾಶಾಯ ಪ್ರಾದುರ್ಭೂತಾಽಸ್ಮಿ ಸಂಪ್ರತಿ ।

ಮುಖವೆಂಬ ಪೂರ್ಣಚಂದ್ರನ ಲಾಂಛನದಂತಿರುವ ಕಸ್ತೂರಿಯ ತಿಲಕದಿಂದ ಶೋಭಿಸುತ್ತಿರುವ, ಮುಖಕಮಲದ ಮೇಲಿರುವ ಕೂದಲುಗಳ ಸಮೂಹದಿಂದ ಕೂಡಿರುವವಳೂ, ಮೃದುವಾಗಿಯೂ ದೀರ್ಘವಾಗಿಯೂ ಒತ್ತಾಗಿಯೂ ಕಪ್ಪಾಗಿಯೂ ಇರುವ ಕೂದಲುಗಳ ಸೌರಭ್ಯದಿಂದ ಭರಿತಳೂ, ಬಹುಮೂಲ್ಯವಾದ ರತ್ನ ಸಮೂಹಗಳ ಕಾಂತಿಯಿಂದ ಪ್ರಕಾಶಗೊಳಿಸುತ್ತಿರುವ ಕಿರೀಟದಿಂದ ಕೂಡಿರುವವಳೂ ಆಗಿ ಸಂತೋಷವನ್ನುಂಟುಮಾಡುತ್ತಿದ್ದಳು. ||೪೨-೪೩||

ಹಣೆಯಲ್ಲಿ ಪ್ರಕಾಶಮಾನನಾದ ಬಾಲಚಂದ್ರನಿಂದ ಅಲಂಕೃತಳೂ ಯಾವಾಗಲೂ ಕುಮಾರಿ ಸ್ವರೂಪಿಣಿಯೂ, ಪರಬ್ರಹ್ಮಾತ್ಮಕಳೂ ಆದ ಪರಾಶಕ್ತಿಯು ಭಕ್ತರನ್ನು ಅನುಗ್ರಹಿಸುವಿಕೆ ಎಂಬ ಲೀಲೆಗೋಸ್ಕರ ಪವಿತ್ರವಾದ ಪ್ರಪಂಚದಲ್ಲೆಲ್ಲಾ ಸುಂದರವಾದ ರೂಪವನ್ನು ಧರಿಸಿದ್ದಳು. ||೪೪-೪೫||

ಅನಂತರದಲ್ಲಿ ತ್ರಿಪುರಾಂಬಿಕೆಯು ಹರಿಹರ ಬ್ರಹ್ಮರನ್ನು ಕುರಿತು ಗಂಭೀರವಾದ ವಾಣಿಯಿಂದ ಹೀಗೆ ಹೇಳಿದಳು. ಎಲೌ ಮಕ್ಕಳೇ, ನನ್ನ ಮಾತನ್ನು ಕೇಳಿರಿ. ಭಕ್ತರಾದ ನಿಮಗೆ ಮಂಗಳವನ್ನುಂಟುಮಾಡುತ್ತೇನೆ. ದೇವತೆಗಳಲ್ಲಿರುವ ಅಜ್ಞಾನ ನಾಶಕ್ಕಾಗಿ ನಾನು ಪ್ರತ್ಯಕ್ಷಳಾಗಿದೇನೆ. ||೪೬||

ಇತ್ಯುಕ್ತ್ವಾಽಮೃತವರ್ಷಿಣ್ಯಾ ದೃಷ್ಟ್ಯಾ ದೇವಾನ್ ಸುಮೂರ್ಛಿತಾನ್ ॥೪೭॥

ಮೃತಪ್ರಾಯಾನ್ ಸಮಾಲೋಕ್ಯ ಸಮಾಶ್ವಸ್ತಾಂಸ್ತದಾಽಕರೋತ್ ।
ಅಥೇಂದ್ರಪ್ರವರಾ ದೇವಾ ನಿದ್ರಾಮುಕ್ತಾ ಇವೋತ್ಥಿತಾಃ ॥೪೮॥

ಕಿಮಿದಂ ಕಿಮಿದಂ ಚೇತಿ ಪ್ರೋಚುರನ್ಯೋಽನ್ಯಸಂಗತಾಃ ।
ನ ವಿಜಾನಾತಿ ಕೋಽಪ್ಯೇನಾಂ ಪರಮಾದ್ಭುತರೂಪಿಣೀಂ ॥೪೯॥

ಅಥಾಗ್ನಿಂ ಪ್ರೇಷಯಾಮಾಸುರಿಂದ್ರಾದ್ಯಾಃ ಸುರಸತ್ತಮಾಃ ।
ತ್ವಮಗ್ನೇ ಸತ್ವರಂ ಗಚ್ಛ ಜಾನಾಹ್ಯೇತಂ ಮಹತ್ತರಂ ॥೫೦॥

ಭೂತಂ ಕಸ್ಮಾತ್ಸಮುದ್ಭೂತಂ ಕಿಂ ವೀರ್ಯಂ ಕಿಂ ಸ್ವರೂಪಕಂ ।
ಇತ್ಯಾಕರ್ಣ್ಯ ಹವಿರ್ಭಕ್ಷೋ ವಾಕ್ಯಮಿಂದ್ರಮುಖೋದಿತಂ ॥೫೧॥

ಸಾಟೋಪಮುಪಸೃತ್ಯಾಽಥ ಪ್ರಾಹ ತಾಂ ಪರಮೇಶ್ವರೀಂ ।
ತತ್ಪ್ರಭಾಽಽಕ್ಷಿಪ್ತ ತೇಜಸ್ಕಃ ಕಥಂ ಚಿತ್ಸವಿಧಂಗತಃ ॥೫೨॥

ಹೀಗೆ ಹೇಳಿ ದೇವಿಯು ಅಮೃತವರ್ಷವನ್ನುಂಟುಮಾಡುತ್ತಿರುವ ನೋಟದಿಂದ ಮೂರ್ಛೆಗೊಂಡು ಸತ್ತವರಂತೆ ಬಿದ್ದಿರುವ ದೇವತೆಗಳನ್ನು ಸಕಲರನ್ನೂ ನೋಡಿ ಅವರನ್ನು ಸಮಾಧಾನವುಳ್ಳವರನ್ನಾಗಿ ಮಾಡಿದಳು. ಅನಂತರದಲ್ಲಿ ಇಂದ್ರಾದಿ ದೇವತೆಗಳು ನಿದ್ರೆಯಿಂದ ಎಚ್ಚೆತ್ತವರಂತೆ ಎದ್ದರು. ॥೪೭-೪೮॥

ದೇವತೆಗಳೆಲ್ಲರೂ ಪರಸ್ಪರವಾಗಿ ಇದೇನಾಶ್ಚರ್ಯವು? ಈಕೆ ಯಾರು? ಅದ್ಭುತವಾದ ರೂಪದಿಂದ ಕೂಡಿರುತ್ತಾಳೆ! ಇವಳನ್ನು ಯಾರೂ ತಿಳಿದಿಲ್ಲ. ॥೪೯॥

ಅನಂತರದಲ್ಲಿ ಇಂದ್ರನೇ ಮೊದಲಾದ ಸುರಶ್ರೇಷ್ಠರು ಅಗ್ನಿಯನ್ನು ಕುರಿತು ಅಗ್ನಿಯೇ, ಜಾಗ್ರತೆಯಾಗಿ ಹೋಗಿ ಈ ಮಹಾಭೂತವು ಯಾವುದು? ಏತಕ್ಕೋಸ್ಕರ ಉತ್ಪನ್ನವಾಗಿದೆ? ಇದರ ಸ್ವರೂಪವೇನು? ಅದರ ಪ್ರಕಾರವೆಂಥಾದ್ದು? ಎಂಬುದನ್ನು ತಿಳಿದುಬಾ. ಎಂದು ಹೇಳಿ ಕಳುಹಿಸಿದರು. ॥೫೦॥

ಇಂದ್ರನು ಹೇಳಿದ ಮಾತನ್ನು ಕೇಳಿ ಅಗ್ನಿಯು ಆಡಂಬರದಿಂದ ಹೊರಟು ಆ ದೇವಿಯ ತೇಜಸ್ಸಿನಿಂದ ಹೀನಪ್ರಭನಾಗಿ ಹೇಗೋ ಕಷ್ಟದಿಂದ ಪರಮೇಶ್ವರಿಯ ಸಮೀಪಕ್ಕೆ ಹೋಗಿ ಹೇಳತೊಡಗಿದನು. ॥೫೧-೫೨॥

ಕಾ ತ್ವಂ ಕುಮಾರಿ ವದ ಮೇ ಕಿಂವೀರ್ಯಾತ್ವಂ ಕುತಃ(ತ್ರ)ಸ್ಥಿತಾ ।
ಜಿಜ್ಞಾಸುರಹ ಮಾಯಾತಸ್ತ್ವಾಂ ವರೇಣ್ಯಾಂ ಮಹತ್ತರಾಂ ॥೫೩॥

ಶ್ರುತ್ವಾ ತದ್ವಾಕ್ಯಮಥ ಸಾ ಜಗಾದ ಪರಮಂ ವಚಃ ।
ವದ ತ್ವಂ ಕತಮಃ ಕಸ್ಮಾದಾಗತಸ್ತೇ ಚ ಕಿಂ ಬಲಂ ॥೫೪॥

ಅನಂತರಂ ಮಮಾಶೇಷ ವೃತ್ತಾಂತಃ ಕಥ್ಯತೇ ಮಯಾ ।
ಇತ್ಯುಕ್ತೋಽಗ್ನಿರುವಾಚೈನಾಂ ಶೃಣು ಕಲ್ಯಾಣಿ ಮದ್ವಚಃ ॥೫೫॥

ಅಹಂ ಹುತಾಶನಃ ಸಾಕ್ಷಾನ್ಮುಖಂ ವಿಬುಧಸಂತತೇಃ ।
ಜಿಜ್ಞಾಸಿತಾ ತ್ವ ಮಿಂದ್ರಾದ್ಯೈಃ ಪ್ರಹಿತೋಽಹಂ ತವಾಂತಿಕೇ ॥೫೬॥

ವೀರ್ಯಂ ಮೇ ಮಹದುತ್ಕೃಷ್ಟಂ ಅಮೋಘಮತಿದಾರುಣಂ ।
ಯದಿದಂ ದೃಶ್ಯತೇ ಕಿಂಚಿಜ್ಜಗತ್ಸ್ಥಾವರ ಜಂಗಮಂ ॥೫೭॥

ಎಲೈ ಕನ್ಯಕೆಯೇ, ನೀನು ಯಾರು? ಎಷ್ಟು ಪರಾಕ್ರಮಶಾಲಿನಿಯು? ಎಲ್ಲಿದ್ದೆ? ನನಗೆ ಹೇಳುವವಳಾಗು. ಶ್ರೇಷ್ಠಳೂ ಮಹಾಮಹಿಮಳೂ ಆದ ನಿನ್ನನ್ನು ತಿಳಿಯಲು ಬಂದಿರುತ್ತೇನೆ. ॥೫೩॥

ಅನಂತರದಲ್ಲಿ ಅವನ ಮಾತನ್ನು ಕೇಳಿದ ದೇವಿಯು ಅಗ್ನಿಗೆ ಉತ್ತರವಾಗಿ ಈ ಮಾತನ್ನು ಹೇಳಿದಳು. ನೀನಾರು? ಎಲ್ಲಿಂದ ಬಂದೆ? ನೀನು ಎಷ್ಟು ಪರಾಕ್ರಮಿ? ಎಂಬುದನ್ನು ಹೇಳುವವನಾಗು. ಅನಂತರದಲ್ಲಿ ನನ್ನ ವೃತ್ತಾಂತವನ್ನೆಲ್ಲವನ್ನೂ ಹೇಳುವೆನು. ॥೫೪॥

ಹೀಗೆ ದೇವಿಯು ಹೇಳಲು ಆಮೇಲೆ ಅಗ್ನಿಯು ದೇವಿಯನ್ನು ಕುರಿತು ಹೇಳಿದನು. ನಾನು ಅಗ್ನಿಯು ಮತ್ತು ದೇವತೆಗಳ ಪ್ರತ್ಯಕ್ಷವಾದ ಮುಖವು. ನಿನ್ನನ್ನು ತಿಳಿಯಬೇಕೆಂಬ ಇಚ್ಛೆಯಿಂದ ಇಂದ್ರಾದಿ ದೇವತೆಗಳು ನನ್ನನ್ನು ಇಲ್ಲಿಗೆ ಕಳುಹಿಸಿರುತ್ತಾರೆ. ॥೫೫-೫೬॥

ನನ್ನ ಪರಾಕ್ರಮವಾದರೋ ಶ್ರೇಷ್ಠವಾದುದು, ಅಮೋಘವಾದುದು ಮತ್ತು ಭಯಂಕರವಾದುದು. ಇಲ್ಲಿ ಕಾಣುತ್ತಿರುವ ಸ್ಥಾವರ ಜಂಗಮವಾದ ಸಕಲ ಜಗತ್ತನ್ನೂ ಸಹ ಕ್ಷಣಕಾಲದಲ್ಲಿ ಭಸ್ಮಮಾಡುತ್ತೇನೆ. ನನ್ನಹಾಗೆ ಪರಾಕ್ರಮಿಗಳು ಬೇರೆ ಯಾರೂ ಇಲ್ಲವು. ॥೫೭॥

ಭಸ್ಮೀಕುರ್ಯಾಂ ಕ್ಷಣೇನೈವ ನೈವಮನ್ಯೋಽಸ್ತಿ ಕಶ್ಚನ ।
ಇತ್ಯಾಕರ್ಣ್ಯ ಶುಚೇರ್ವಾಕ್ಯಂ ಪ್ರಹಸ್ಯ ಪ್ರಾಹ ಸಾ ಪರಾ ॥೫೮॥

ಅಗ್ನೇ ತವೇದೃಶಂ ವೀರ್ಯಂ ಯದಿ ತರ್ಹ್ಯಾಶು ಮೇಽಗ್ರತಃ ।
ಪ್ರದರ್ಶಯೈತನ್ನಿಹಿತಂ ತೃಣಂ ದಹ ತವಾಽಗ್ರತಃ ॥೫೯॥

ಶ್ರುತ್ವಾಽವಹೇಲನಂ ವಾಕ್ಯಂ ಕ್ರುದ್ಧೋ ವೈಶ್ವಾನರಸ್ತದಾ ।
ಪ್ರಾಹ ಚಾತಿಸ್ತಬ್ಧಧಿಯಾ ಸ್ವಾತ್ಮಾನಂ ಮಾನಯನ್ ಗುರುಂ ॥೬೦॥

ನೂನಂ ತ್ವಮಬಲಾ ಬಾಲಾ ತಸ್ಮಾನ್ಮುಗ್ಧಪ್ರಭಾಷಿಣೀ ।
ಸರ್ವಭಸ್ಮೀಕರೋ ಯೋಽಹಂ ತೃಣದಾಹೇ ನಿಯೋಜಿತಃ ॥೬೧॥

ಕರೋಮಿ ತಸ್ಯ ಸದೃಶಂ ಸತೃಣಾಂ ತ್ವಾಂ ದಹೇಽಧುನಾ ।
ಇತ್ಯುಕ್ತ್ವಾ ಕ್ರೋಧತಾಮ್ರಾಕ್ಷೋ ಮಹಾಜ್ವಾಲಾ ಪರೀವೃತಃ ॥೬೨॥

ಭಕ್ಷಿತುಂ ತಾಂ ತೃಣಮಪಿ ಪಪಾತ ತರಸಾ ಶುಚಿಃ ।
ಮಹಾಬಲೋದ್ಯೋಗಯುತಃ ಸರ್ವಪ್ರಾಣೇನ ಸಂಜವಾತ್ ॥೬೩॥

ಹೀಗೆ ಹೇಳಿದ ಅಗ್ನಿಯ ಮಾತನ್ನು ಕೇಳಿದ ಪರಾಂಬಿಕೆಯು ಗಟ್ಟಿಯಾಗಿ ನಕ್ಕು ಹೇಳತೊಡಗಿದಳು. ಅಗ್ನಿಯೇ, ನಿನ್ನ ಪರಾಕ್ರಮ ಹೀಗಿರುವುದಾದರೆ ಜಾಗ್ರತೆಯಾಗಿ ನನ್ನ ಎದುರಿಗೆ ಅದನ್ನು ತೋರಿಸು. ನಿನ್ನ ಎದುರಿಗಿರುವ ಈ ಹುಲ್ಲನ್ನು ದಹಿಸುವವನಾಗು. ನಿನ್ನ ಬಲವನ್ನು ನೋಡೋಣ ಎಂದಳು. ||೫೯||

ಈ ರೀತಿಯಾಗಿ ಅವಮಾನಕರವಾದ ದೇವಿಯ ಮಾತನ್ನು ಕೇಳಿ ಕೋಪಗೊಂಡ ಅಗ್ನಿಯು ಮೂಢಭಾವದಿಂದ ತಾನೇ ದೊಡ್ಡವನೆಂದು ತಿಳಿದು ದೇವಿಯನ್ನು ಕುರಿತು ಹೇಳಿದನು. ||೬೦||

ಎಲೌ ದೇವಿಯೇ, ನೀನಿನ್ನೂ ಬಾಲಿಕೆಯು ಮತ್ತು ಅಬಲಳು. ನಿನ್ನ ಅಬಲಾಬುದ್ಧಿಗೆ ಸರಿಯಾಗಿ ಹುಡುಗತನದಿಂದ, ಸಕಲವನ್ನೂ ಭಸ್ಮಮಾಡುವ ನನ್ನನ್ನು ಒಂದು ಹುಲ್ಲನ್ನು ಸುಡೆಂದು ಹೇಳಿದೆ. ನಿನ್ನ ಈ ನಡೆವಳಿಕೆಗೆ ತಕ್ಕಹಾಗೆ ತೃಣದೊಡನೆ ನಿನ್ನನ್ನೂ ದಹಿಸಿಬಿಡುತ್ತೇನೆ. ಆಗ ನಿನ್ನ ಬಾಲ ಭಾಷಣಕ್ಕೆ ತಕ್ಕುದಾಗುತ್ತದೆ. ||೬೧||

ಅಗ್ನಿಯು ಹೀಗೆ ಹೇಳಿ ಕೋಪದಿಂದ ಕೂಡಿ ಕೆಂಗಣ್ಣಿಂದ ಮಹಾಜ್ವಾಲೆ

ಪ್ರವೃತ್ತೋಽಪಿ ತೃಣಂ ದಗ್ಧುಂ ನ ಶಶಾಕ ಧನಂಜಯಃ ।
ಹಿಮಾಬ್ಧಿಪತಿತೋಲ್ಕೇವ ಶಾಂತಾರ್ಚಿಃ ಶೀತತಾಂ ಗತಃ ॥೬೪॥

ವೇಪಮಾನಃ ಸುಶೀತೇನ ಖದ್ಯೋತಸದೃಶಪ್ರಭಃ ।
ಕರಕೇವ ಸಮಸ್ತಾಂಗ ಮಾರಬ್ಧಂ ಗಲಿತುಂ ಯದಾ ॥೬೫॥

ತದಾ ಸಮಸ್ತ ಪ್ರಾಣೇನ ಪಲಾಯನಪರೋಽಭವತ್ ।
ಲಜ್ಜಿತಃ ಕುಂಠಿತೋಽರ್ಚಿಷ್ಮಾನಂತರ್ಧಾನಂ ಗತಸ್ತತಃ ॥೬೬॥

ಇಂದ್ರಾಯ ಚಾವದದ್ವೃತ್ತಂ ನ ಜ್ಞಾತು(ಂಸು)ಮಶಕಂ ಹರೇ ।
ತದಗ್ರೇ ಸಂಸ್ಥಿತಂ ಭೂತಂ ಮಹಾಸತ್ವಪರಾಕ್ರಮಂ ॥೬೭॥

ಅಥೇಂದ್ರ ಆಹ ಶುಭ್ರಾಂಶುಂ ಜ್ಞಾತುಂ ಭೂತಂ ಮಹೋನ್ನತಂ ।
ತ್ವಂ ಗಚ್ಛ ಸೋಮ ಸುಜವಾಜ್ಜ್ಞಾನೀಹ್ಯೇತಂ ಮಹತ್ತರಂ ॥೬೮॥

ಯಿಂದ ಕೂಡಿ ಹುಲ್ಲನ್ನು ದಹಿಸಲು ಅದರ ಮೇಲೆ ಬಿದ್ದನು. ಮಹಾಪರಾಕ್ರಮದಿಂದ ಕೂಡಿ ಬಹುವೇಗದಿಂದ ಸಕಲವಾದ ತನ್ನ ಶಕ್ತಿಯಿಂದ ಪ್ರಯತ್ನಪಟ್ಟರೂ ಆ ಹುಲ್ಲನ್ನು ದಹಿಸಲಾರದವನಾದನು ! ॥೬೨-೬೩॥

ಅನಂತರದಲ್ಲಿ ಅಗ್ನಿಯು ಅಲ್ಲಿ ಹಿಮಸಾಗರದಲ್ಲಿ ಬಿದ್ದ ಕೊಳ್ಳಿಯಂತೆ ಜ್ವಾಲೆಯಿಲ್ಲದವನಾಗಿ ಶೈತ್ಯವನ್ನು ಹೊಂದಿದನು. ಅತಿಯಾದ ಶೀತದಿಂದ ನಡುಗುತ್ತಾ ಚಂದ್ರನಿಗೆ ಸಮಾನವಾದ ಕಾಂತಿಯುಳ್ಳವನಾದನು. ಹಿಮದಂತೆ ಅವನ ಸರ್ವಾಂಗವೂ ಅನಂತರದಲ್ಲಿ ಕರಗಲು ಮೊದಲಾಯಿತು. ಆಗ ಹೆದರಿ ಪ್ರಾಣಗಳೊಡನೆ ಬದುಕಿದರೆ ಸಾಕೆಂದು ಬದುಕಲು ಮನಸ್ಸು ಮಾಡಿ ನಾಚಿಕೆಯಿಂದ ಕುಗ್ಗಿದವನಾಗಿ ಅಂತರ್ಧಾನನಾದನು. ॥೬೪-೬೫-೬೬॥

ಆಮೇಲೆ ಅಗ್ನಿಯು ಇಂದ್ರನಲ್ಲಿಗೆ ಹೋಗಿ ಎದುರಿಗಿರುವ ಮಹಾ ಪರಾಕ್ರಮಶಾಲಿಯಾದ ಆ ಭೂತದ ಸಮಾಚಾರವನ್ನು ಹೇಳಿ, ಅದನ್ನು ನಾನು ಅರಿಯಲಾರದವನಾದೆನೆಂದು ತಿಳಿಸಿದನು. ॥೬೭॥

ಅನಂತರದಲ್ಲಿ ಇಂದ್ರನು ಚಂದ್ರನನ್ನು ಕುರಿತು, ಚಂದ್ರನೇ, ಮಹಾ ಪರಾಕ್ರಮಿಯಾದ ಈ ಭೂತವನ್ನು ಜಾಗ್ರತೆಯಾಗಿ ಹೋಗಿ ತಿಳಿದು ಬಾ. ಆ ಭೂತವು

ಭೂತಂ ಕಸ್ಮಾತ್ಸಮುದ್ಭೂತಂ ಕಿಂ ವೀರ್ಯಂ ಕಿಂ ಸ್ವರೂಪಕಂ ।
ಇತ್ಯಾಕರ್ಣ್ಯಾಽಥ ಶುಭ್ರಾಂಶುರ್ವಾಕ್ಯಮಾಖಂಡಲೋದಿತಂ ॥೧೯॥

ಸಾಟೋಪಮುಪಸೃತ್ಯಾಥ ಪ್ರಾಹ ತಾಂ ಪರಮೇಶ್ವರೀಂ ।
ತತ್ಪ್ರಭಾಹತತೇಜಸ್ಕಃ ಕಥಂಚಿತ್ಸವಿಧಂ ಗತಃ ॥೨೦॥

ಕಾ ತ್ವಂ ಕುಮಾರಿ ವದ ಮೇ ಕಿಂವೀರ್ಯಾ ತ್ವಂ ಕುತೋಽಹ್ಯಸಿ ।
ಜಿಜ್ಞಾಸು ರಹಮಾಯಾತಸ್ತ್ವಾಮದ್ಭುತ ತಮಾಂ ಸ್ತ್ರಿಯಂ ॥೨೧॥

ಶ್ರುತ್ವಾ ಶುಭ್ರಾಂಶು ವಾಕ್ಯಂ ಸಾ ಜಗಾದ ಪರಮಂ ವಚಃ ।
ವದ ತ್ವಂ ಕಃ ಕುತಃ ಪ್ರಾಪ್ತ ಇಮಂ ದೇಶಂ ಚ ಕಿಂಬಲಃ ॥೨೨॥

ಅನಂತರಂ ಮಯಾ ಸ್ವೀಯ ವೃತ್ತಂ ಸಂಕಥಯಾಮಿ ತೇ ।
ಸೋಮ ಏವಂ ತಯಾ ಪ್ರೋಕ್ತ ಆಮಂತ್ರ್ಯೈನಾಮುವಾಚ ತಾಂ ॥೨೩॥

ಯಾವುದರಿಂದ ಉತ್ಪನ್ನವಾಯಿತು? ಅದರ ಪರಾಕ್ರಮವೆಷ್ಟು? ಅದು ಯಾವ ರೂಪವಾದುದು? ಎಂದು ತಿಳಿದು ಬಾ, ಎಂಬುದಾಗಿ ಹೇಳಿದನು. ||೧೮||

ಇಂದ್ರನ ಈ ಮಾತನ್ನು ಕೇಳಿ ಚಂದ್ರನು ಆಡಂಬರಯುಕ್ತನಾಗಿ ಪರಮೇಶ್ವರಿಯಲ್ಲಿಗೆ ಹೊರಟು ಅವಳ ತೇಜಸ್ಸಿನಿಂದ ಹತಪ್ರಭನಾಗಿ ಹೇಗೋ ಕಷ್ಟದಿಂದ ಅವಳ ಸಮೀಪಕ್ಕೆ ಹೋದನು. ಆಮೇಲೆ ಅವಳನ್ನು ಕುರಿತು ಹೇಳತೊಡಗಿದನು. ||೧೯-೨೦||

ಎಲೌ ಕುಮಾರಿಯೇ, ಯಾರು ನೀನು? ಎಲ್ಲಿರುವೆ? ನಿನ್ನ ಪರಾಕ್ರಮವು ಎಷ್ಟರಮಟ್ಟಿನದು? ಎಂಬುದನ್ನು ಹೇಳುವವಳಾಗು. ಆಶ್ಚರ್ಯಕರಳಾದ ಹೆಂಗಸಾಗಿರುವೆ ನೀನು. ನಿನ್ನನ್ನು ತಿಳಿಯಲು ನಾನು ಬಂದಿರುತ್ತೇನೆ. ||೨೧||

ಚಂದ್ರನ ಮಾತನ್ನು ಕೇಳಿ ದೇವಿಯು ಅತ್ಯುತ್ಕೃಷ್ಟವಾದ ಮಾತನ್ನು ಹೇಳಿದಳು. ನೀನು ಯಾರು? ಇಲ್ಲಿಗೆ ಏತಕ್ಕೆ ಬಂದೆ? ನಿನ್ನ ಪರಾಕ್ರಮವು ಎಷ್ಟು? ಎಂಬುದನ್ನು ಮೊದಲು ಹೇಳು. ಆಮೇಲೆ ನಾನು ನನ್ನ ಸಮಾಚಾರವನ್ನೆಲ್ಲವನ್ನೂ ಹೇಳುವೆನು. ||೨೨||

ಹೀಗೆ ಹೇಳಿದ ದೇವಿಯ ಮಾತನ್ನು ಕೇಳಿದ ಚಂದ್ರನು ದೇವಿಯನ್ನು ಉದ್ದೇಶಿಸಿ ಹೀಗೆ ಹೇಳಿದನು. ದೇವಿಯೇ, ನನ್ನನ್ನು ಚಂದ್ರನೆನ್ನುವರು. ನಾನೇ

ಸೋಮರಾಜ ಇತಿ ಖ್ಯಾತಃ ಸರ್ವಲೋಕಸ್ಯ ಪಾಲಕಃ ।
ಓಷಧೀನಾಮಹಂ ಸ್ವಾಮೀ ಜೀವಯಾಮ್ಯಮೃತಾಂಶುಭಿಃ ॥೭೪॥

ತೃಣವೀರುದ್ಗುಲ್ಮವೃಕ್ಷಾನ್ಮಯಾ ಜೀವತಿ ವೈ ಜಗತ್ ।
ಏತತ್ಸೋಮವಚಃ ಶ್ರುತ್ವಾ ಪ್ರಹಸ್ಯ ಪ್ರಾಹ ಸಾ ಪರಾ ॥೭೫॥

ಯದಿ ಸೋಮೇದೃಶಂ ವೀರ್ಯಮಾಶು ದರ್ಶಯ ಮೇಽಗ್ರತಃ ।
ತೃಣಂ ಮಯಾ ದಹ್ಯಮಾನಂ ನಿಹಿತಂ ಚೈತದಗ್ರತಃ ॥೭೬॥

ಸಂಶಾಮಯಸ್ವಕಿರಣೈರಮೃತಾಢ್ಯೈಃ ಸುಶೀತಲೈಃ ।
ಶ್ರುತ್ವೈತತ್ಫಲ್ಗು ವಚನಂ ಮತ್ವಾ ಸ್ವಾತ್ಮಾವಹೇಲನಂ ॥೭೭॥

ಕ್ರುದ್ಧಃ ಪ್ರಾಹ ಮದೋತ್ಸಿಕ್ತಃ ಶಶಾಂಕೋ ಬಲಗರ್ವಿತಃ ।
ಅಬಲಾ ತ್ವಂ ಬಾಲಭಾವಾದಜ್ಞಾತ್ವಾ ಮತ್ಪರಾಕ್ರಮಂ ॥೭೮॥

ಉಕ್ತವತ್ಯಸಿ ಯದ್ವಾಕ್ಯಂ ತಸ್ಯಾಪಚಿತಿಮೇವ ತೇ ।
ದಿಶಾಮಿ ತ್ವಾಂ ಶೀತಕರೈರ್ಜಡೀಭೂತಾಂ ಕರೋಮ್ಯಹಂ ॥೭೯॥

ಸಕಲ ಪ್ರಪಂಚವನ್ನೂ ಪಾಲಿಸುವವನು. ನಾನು ಸಕಲ ಗಿಡಮೂಲಿಕೆಗಳನ್ನು ನನ್ನ ಅಮೃತಮಯವಾದ ಕಿರಣಗಳಿಂದ ಪೋಷಿಸುತ್ತೇನೆ. ಹುಲ್ಲು, ಲತೆ, ಪೊದರು, ವೃಕ್ಷ ಮೊದಲಾದ ಸಕಲ ಪ್ರಪಂಚವೂ ಸಹ ನನ್ನಿಂದಲೇ ಉಳಿದಿದೆ. ॥೭೩-೭೪॥

ಚಂದ್ರನ ಮಾತನ್ನು ಕೇಳಿ ದೇವಿಯು ನಕ್ಕು ಅವನನ್ನು ಕುರಿತು ಹೀಗೆ ಹೇಳಿದಳು. ಎಲೌ ಸೋಮನೇ, ನೀನು ಈ ರೀತಿಯ ಪರಾಕ್ರಮಿಯಾದರೆ ನಿನ್ನ ಶೌರ್ಯವನ್ನು ನನ್ನೆದುರು ತೋರಿಸು. ನಾನು ಎದುರಿಗಿರುವ ತೃಣವನ್ನು ಸುಡುತ್ತೇನೆ. ನಿನ್ನ ಅಮೃತಪ್ರಚುರವಾದ ಮತ್ತು ಶೀತಲವಾದ ಕಿರಣಗಳಿಂದ ಅದನ್ನು ರಕ್ಷಿಸು. ॥೭೫-೭೬॥

ಈ ರೀತಿಯಾದ ನಿಸ್ಸಾರವಾದ ಮಾತನ್ನು ದೇವಿಯು ಹೇಳಲು ಚಂದ್ರನು ಇದು ತನಗೆ ಅವಮಾನಕರವಾದುದೆಂದು ತಿಳಿದು ಕೋಪಗೊಂಡವನಾಗಿ ಮದದಿಂದ ಕೊಬ್ಬಿ, ಶಕ್ತಿಯ ಹೆಮ್ಮೆಯಿಂದ ಕೂಡಿ ಚಂದ್ರನು ದೇವಿಗೆ ಹೇಳಿದನು. ದೇವಿಯೇ, ನೀನು ಅಬಲಳು. ಬಾಲಭಾವದಿಂದ ನನ್ನ ಶಕ್ತಿಯನ್ನರಿಯದೆ ಹೀಗೆ ಹೇಳಿರುವೆ.

ಇತ್ಯುಕ್ತ್ವಾಽನೇಕಕಿರಣೈಃ ಶೀತನೀಹಾರವರ್ಷಣೈಃ ।
ವವರ್ಷ ಚಾತಿವೇಗೇನ ಬಲಾಹಕಗಣ ಇವ ॥೪೦॥

ತಸ್ಯ ನೀಹಾರಧಾರಾಸ್ತಾಃ ಫಾಲನೇತ್ರಾರ್ಚಿಭಿಃ ಹತಾಃ ।
ಕೀರ್ತಿಶೇಷನುನುಪ್ರಾಪ್ತಸ್ತದಾಽಽಪ್ಲುಷ್ಟಕಲೇವರಃ ॥೪೧॥

ಸೋವೋಽಪಿ ದಂದಹ್ಯಮಾನ ಈಷತ್ಪ್ರಾಣಾವಶೇಷಿತಃ ।
ಭೀತಃ ಪಲಾಯಿತಃ ಶೀಘ್ರಂ ಪ್ರಾಹೇಂದ್ರಂ ನಾಽಶಕಂ ಹರೇ ॥೪೨॥

ಜ್ಞಾತುಂ ತತ್ತು ಮಹಾಭೂತಂ ಮಹಾಸತ್ವಪರಾಕ್ರಮಂ ।
ಅಥ ಶಕ್ರಃ ಪ್ರಾಹ ವಾಯುಂ ತತ್ಸತ್ವಪ್ರತಿವೇದನೇ ॥೪೩॥

ವಾಯೋ ತ್ವಂ ಸತ್ವರಂ ಗಚ್ಛ ಜಾನೀಹ್ಯೇನಂ ಮಹತ್ತರಂ ।
ಭೂತಂ ಕಸ್ಮಾತ್ಸಮುದ್ಭೂತಂ ಕಿಂ ವೀರ್ಯಂ ಕಿಂ ಸ್ವರೂಪಕಂ ॥೪೪॥

ಈ ನಿನ್ನ ಮಾತಿನಂತೆಯೇ ಪೋಷಣೆಯನ್ನೇ ನಾನು ಮಾಡುತ್ತೇನೆ. ಮತ್ತು ನಿನ್ನನ್ನೂ ಸಹ ನನ್ನ ಶೀತಕಿರಣಗಳಿಂದ ಜಡೀಭೂತಳನ್ನಾಗಿ ಮಾಡುವೆನು. ॥೭೭-೭೮-೭೯॥

ಚಂದ್ರನು ಹೀಗೆ ಹೇಳಿ ಶೀತವಾದ ಹಿಮವರ್ಷಣದಿಂದ ಕೂಡಿದ ತನ್ನ ಅನೇಕ ಕಿರಣಗಳನ್ನು ಮೋಡಗಳ ಗುಂಪಿನಂತೆ ಬಹಳ ವೇಗವಾಗಿ ಸುರಿಸಿದನು. ಅವನ ಆ ಹಿಮಧಾರೆಯು ದೇವಿಯ ಫಾಲನೇತ್ರದ ಕಿರಣಗಳಿಂದ ನಾಶಮಾಡಲ್ಪಟ್ಟವು. ಅಲ್ಲದೇ ಅವನ ಶರೀರವೂ ಕೂಡ ಆ ಜ್ವಾಲೆಯಲ್ಲಿ ಸಿಕ್ಕಿಕೊಂಡಿತು. ॥೪೦-೪೧॥

ಆ ಜ್ವಾಲೆಯಲ್ಲಿ ಸಿಕ್ಕಿ ಅವನೂ ಸಹ ದಹಿಸಲ್ಪಡುತ್ತಿರಲು, ಆಗ ಚಂದ್ರನು ಹೆದರಿ ಅಲ್ಪ ಪ್ರಾಣನಾಗಿ ಜಾಗ್ರತೆಯಾಗಿ ಇಂದ್ರನಲ್ಲಿಗೆ ಹೋದನು. ಇಂದ್ರನನ್ನು ಕುರಿತು ಅವನು ಇಂದ್ರನೇ, ಆ ಮಹಾಭೂತದ ಮಹಾಪರಾಕ್ರಮವನ್ನು ನಾನು ಅರಿಯಲಾರದವನಾದೆನು. ಎಂದು ಹೇಳಿದನು. ॥೪೨॥

ಅನಂತರದಲ್ಲಿ ಇಂದ್ರನು ಆ ಭೂತದ ವಿಷಯವನ್ನು ತಿಳಿಯಲು ವಾಯುವನ್ನು ಕುರಿತು ಎಲೌ ವಾಯುವೇ, ಜಾಗ್ರತೆಯಾಗಿ ಆ ಮಹತ್ತರವಾದ ಭೂತದಲ್ಲಿಗೆ ಹೋಗಿ, ಅದು ಎಲ್ಲಿಂದ ಉತ್ಪನ್ನವಾಯಿತು? ಅದರ ಪರಾಕ್ರಮವೆಷ್ಟು? ಅದರ ರೂಪವೇನೆಂಬುದನ್ನು ತಿಳಿದು ಬಾ ಎಂದು ಹೇಳಿದನು. ॥೪೩-೪೪॥

ಇತಿ ಶ್ರುತ್ವಾ ವಚೋ ವಾಯುಃ ಪುರಂದರ ಮುಖೋದಿತಂ ।
ಸಾಭಿಮಾನಂ ಗತಸ್ತತ್ರ ಯತ್ರ ಶ್ರೀಪರಮೇಶ್ವರೀ ॥೮೫॥

ಉವಾಚಾತಿಬಲಂ ಮತ್ವಾ ಸ್ವಾತ್ಮಾನಂ ಸಾವಹೇಲನಂ ।
ಕಾ ತ್ವಂ ವದಾಬಲೇ ಕಸ್ಮಾದ್ದೇಶಾತ್ಪ್ರಾಪ್ತಾತ್ರ ಕಿಂಬಲಾ ॥೮೬॥

ಪುರಂದರಾದಿ ಪ್ರಹಿತಸ್ತ್ವಾಂ ಜಿಜ್ಞಾಸುರಿಹಾಗತಃ ।
ವಾಯುವಾಕ್ಯಮಿತಿ ಶ್ರುತ್ವಾ ಸಾ ಪ್ರೋವಾಚ ಶುಭಂ ವಚಃ ॥೮೭॥

ವದ ತ್ವಂ ಕಃ ಕುತಃ ಪ್ರಾಪ್ತಃ ಕಿಂಬಲಃ ಕಿಂಪರಾಯಣಃ ।
ವದಾಮ್ಯನಂತರಂ ಯಸ್ತೇ ಕೃತಃ ಪ್ರಶ್ನಸ್ತದುತ್ತರಂ ॥೮೮॥

ಇತಿ ಶ್ರುತ್ವಾ ವಚೋ ದೇವ್ಯಾಃ ಪ್ರೋವಾಚಾಮಂತ್ರ್ಯ ತಾಂ ಪರಾಂ ।
ಅಬಲೇ ಶೃಣು ಮೇ ವೃತ್ತಂ ಲೋಕೋತ್ತರತಮಂ ಶುಭಂ ॥೮೯॥

ಈ ಪ್ರಕಾರವಾದ ಇಂದ್ರನ ಮುಖದಿಂದ ಹೊರಟ ಮಾತನ್ನು ಕೇಳಿ ವಾಯುವು ಗರ್ವದಿಂದ ಪರಮೇಶ್ವರಿಯಾದ ದೇವಿಯಿದ್ದಲ್ಲಿಗೆ ಹೋದನು. ॥೮೫॥

ದೇವಿಯ ಸಮೀಪದಲ್ಲಿ ವಾಯುವು ತಾನು ಮಹಾಬಲಶಾಲಿ ಎಂಬ ಜಂಭದಿಂದ ಕೂಡಿ ತಿರಸ್ಕಾರಪೂರ್ವಕವಾಗಿ ದೇವಿಯನ್ನು ಕುರಿತು ಹೇಳತೊಡಗಿದನು. ಎಲೌ ಅಬಲೆಯೇ, ನೀನು ಯಾರು ? ಎಲ್ಲಿಂದ ಬಂದೆ ? ನಿನ್ನ ಬಲವೇನು ? ಹೇಳುವವಳಾಗು. ನಾನು ನಿನ್ನನ್ನು ಅರಿಯಲು ದೇವೇಂದ್ರಾದಿಗಳಿಂದ ಪ್ರೇರಿತನಾಗಿ ಬಂದಿದ್ದೇನೆ. ॥೮೬॥

ವಾಯುವಿನ ಈ ರೀತಿಯಾದ ಮಾತನ್ನು ಕೇಳಿದ ಭಗವತಿಯು ಅವನಿಗೆ ಈ ಪ್ರಕಾರವಾಗಿ ಹೇಳಿದಳು. ನೀನು ಯಾರು ? ಏತಕ್ಕೋಸ್ಕರ ಇಲ್ಲಿಗೆ ಬಂದೆ ? ನಿನ್ನ ಪರಾಕ್ರಮವೆಷ್ಟು ? ಯಾವ ಕೆಲಸವುಳ್ಳವನು ನೀನು ? ಎಂಬುದನ್ನು ಮೊದಲು ಹೇಳು. ನಿನ್ನ ಪ್ರಶ್ನೆಗೆ ಉತ್ತರವನ್ನು ಆಮೇಲೆ ಹೇಳುವೆನು. ॥೮೭-೮೮॥

ದೇವಿಯ ಈ ರೀತಿಯಾದ ಮಾತನ್ನು ಕೇಳಿ ವಾಯುವು ಅವಳನ್ನುದ್ದೇಶಿಸಿ ಹೇಳತೊಡಗಿದನು. ಓ ದೇವಿಯೇ, ಪ್ರಪಂಚದಲ್ಲೆಲ್ಲಾ ಶ್ರೇಷ್ಠವೂ ಮತ್ತು ಮಂಗಳಕರವೂ ಆದ ನನ್ನ ಚರಿತ್ರೆಯನ್ನು ಕೇಳುವವಳಾಗು. ನಾನು ಮಹಾವೇಗಶಾಲಿಯೂ

ಅಹಂ ತ್ವತಿಬಲೋ ವಾಯುರ್ಜಗತ್ಪ್ರಾಣೋ ಮಹಾಗತಿಃ ।
ಇಂದ್ರಾದಿಸನ್ನಿಧೇಃ ಪ್ರಾಪ್ತೋ ಜಗತಾಮಾಶ್ರಯಃ ಪರಃ ॥೯೦॥

ಮಯಾ ಸಂವೇಪಿತಾಃ ಕಾಲೇ ಮಹಾಂತೋಽಪಿ ಚ ಭೂಭೃತಃ ।
ಜ್ವಾಲಾಣುಕಾ ಇವ ಸದಾ ಪ್ರಚರಂತಿ ಚ ಸರ್ವತಃ ॥೯೧॥

ಸಮುದ್ರಾಶ್ಚಾಪಿ ಶುಷ್ಯಂತಿ ಮಯಿ ಕ್ಷುಬ್ಧೇ ಪ್ರಭಂಜನೇ ।
ಗತಿಂ ಮಮ ಸ್ಥಗಯಿತುಂ ಸಮರ್ಥೋ ನೈವ ಕಶ್ಚನ ॥೯೨॥

ಇತಿ ಶ್ರುತ್ವಾ ಮರುದ್ವಾಕ್ಯಂ ಪ್ರಾಹ ಸಾ ಪರಮೇಶ್ವರೀ ।
ನನು ವಾಯೋ ಸಮರ್ಥಸ್ತ್ವಂ ವೀರ್ಯಂ ಪಶ್ಯಾಮಿ ತಾವಕಂ ॥೯೩॥

ತೃಣಂ ಚೈತತ್ಪುರೋ ನ್ಯಸ್ತಂ ಸಮಾಹರ್ತುಂ ತದರ್ಹಸಿ ।
ಕದರ್ಥನಾವಚಶ್ಚೈತಚ್ಛ್ರುತ್ವಾ ಮನ್ಯುಪರೀವೃತಃ ॥೯೪॥

ಜಗತ್ತಿನ ಪ್ರಾಣನೂ, ಅತಿ ಪರಾಕ್ರಮಿಯೂ ಆದ ವಾಯುವು. ಜಗತ್ತುಗಳಿಗೆಲ್ಲಕ್ಕೂ ಆಶ್ರಯಿಭೂತನಾದ ನಾನು ಇಂದ್ರಾದಿಗಳ ಹತ್ತಿರದಿಂದ ಇಲ್ಲಿಗೆ ಬಂದಿರುತ್ತೇನೆ. ||೮೯-೯೦||

ಒಂದಾನೊಂದು ಕಾಲದಲ್ಲಿ ನನ್ನಿಂದ ದೊಡ್ಡ ದೊಡ್ಡ ಪರ್ವತಗಳೂ ಕೂಡ ನಡುಗಿಸಲ್ಪಟ್ಟವು. ಆಗ ಅವುಗಳು ಜ್ವಾಲೆಯ ಕಣದಂತೆ ಎಲ್ಲೆಲ್ಲೂ ಸಂಚರಿಸಿದವು. ನಾನು ಕೋಪಗೊಂಡರೆ ಸಮುದ್ರಗಳೆಲ್ಲವೂ ಒಣಗಿಹೋಗುತ್ತವೆ. ನನ್ನ ಗಮನವನ್ನು ತಡೆಯಲು ಈವರೆವಿಗೆ ಯಾರೂ ಸಮರ್ಥರಾಗಲಿಲ್ಲವು. ||೯೧-೯೨||

ವಾಯುವಿನ ಗರ್ವಪೂರ್ವಕವಾದ ಮಾತನ್ನು ಕೇಳಿ ಜಗದಂಬೆಯು ಅವನನ್ನು ಕುರಿತು, ವಾಯುವೇ, ನೀನೊಂದುವೇಳೆ ಪರಾಕ್ರಮಿಯಾದರೆ ನಿನ್ನ ಪರಾಕ್ರಮವನ್ನು ನೋಡುತ್ತೇನೆ. ಇಲ್ಲಿ ಎದುರಿಗೆ ಬಿದ್ದಿರುವ ಹುಲ್ಲನ್ನು ಅಪಹರಿಸಿ ನಿನ್ನ ಪರಾಕ್ರಮವನ್ನು ತೋರಿಸುವವನಾಗು ಎಂದು ಹೇಳಿದಳು. ||೯೩||

ದೇವಿಯ ಈ ತಿರಸ್ಕಾರ ನುಡಿಯನ್ನು ಕೇಳಿ ವಾಯುವು ಕೋಪದಿಂದ ಧಿಕ್ಕಾರದ ಮಾತುಗಳನ್ನು ಗರ್ವದಿಂದ ಹೇಳತೊಡಗಿದನು. ಹೇ ಅಬಲೆಯೇ, ಬುದ್ಧಿಯಿಲ್ಲದೇ ಮೂರ್ಖಸ್ವಭಾವದಿಂದ ನಾಶವನ್ನೇಕೆ ಅಪೇಕ್ಷಿಸುತ್ತಿರುವೆ? ನಾನು

ಪ್ರಾಹಾಧಿಕ್ಷೇಪಣಂ ವಾಕ್ಯಂ ಮಾರುತೋ ಬಲಗರ್ವಿತಃ ।
ವಿನಾಶಮಬಲೇ ಕಸ್ಮಾತ್ಪ್ರಾರ್ಥಯಸ್ಯತಿ ಮೂಢಧೀಃ ॥೯೫॥

ಮಹಾಬಲಂ ಮಹಾವೇಗಂ ಕಃ ಸೋಢುಂ ಶಕ್ನುಯಾದ್ಬಲೀ ।
ಮೂಢಾ ತ್ವಮವಲಿಪ್ತಾಽಸಿ ಶಮಯಾಮಿ ಮದಂ ತವ ॥೯೬॥

ಆದೌ ತೃಣಾಯಿತಾಂ ತ್ವಾಂ ವೈ ನಾಮಶೇಷಂ ಕರೋಮ್ಯಹಂ ।
ಸ್ಥಿರೀಭವ ಸಹಸ್ವಾಶು ಮಮ ವೇಗಂ ಸುದುಸ್ಸಹಂ ॥೯೭॥

ಇತ್ಯುಕ್ತ್ವಾ ತಾಂ ಪರಾಂ ದೇವೀಂ ಮಾರುತೋ ಮನ್ಯುನಾಽಽವೃತಃ ।
ಮಹಾಬಲೇನ ವೇಗೇನ ಯಾವದ್ಗಂತುಂ ಮನೋ ದಧೇ ॥೯೮॥

ತಾವತ್ಪಂಗುಮಿವಾತ್ಮಾನಂ ದೃಷ್ಟ್ವಾ ಹೀನಗತಿಂ ತದಾ ।
ಸರ್ವಪ್ರಾಣೇನ ಚೋದ್ಯುಕ್ತಃ ಪದಾನ್ನ ಚಲಿತುಂ ಕ್ಷಮಃ ॥೯೯॥

ತದಾ ಹ್ರಿಯಾ ಭಯೇನಾಪಿ ಪಲಾಯನಪರೋಽಭವತ್ ।
ಪುರಂದರಂ ಪ್ರಾಹ ವಾಯುಃ ನೈತಜ್ಜ್ಞಾತುಮಲಂ ಮಮ ॥೧೦೦॥

ಮಹಾವೇಗಶಾಲಿಯು ಮತ್ತು ಬಲಶಾಲಿಯು. ನನ್ನನ್ನು ಯಾರುತಾನೇ ತಡೆಯ ಬಲ್ಲರು? ನೀನು ಮೂರ್ಖಳು. ಅಹಂಕಾರದಿಂದ ಮೆರೆಯುತ್ತಿದ್ದೀಯೆ. ನಿನ್ನ ಕೊಬ್ಬನ್ನಡಗಿಸುತ್ತೇನೆ! ॥೯೪-೯೫-೯೬॥

ಮೊದಲು ತೃಣರೂಪಳಾದ ನಿನ್ನನ್ನೇ ನಾಶಮಾಡುತ್ತೇನೆ. ಸ್ಥಿರಳಾಗಿದ್ದು ಕೊಂಡು ಇತರರಿಂದ ಸಹಿಸಲಸಾಧ್ಯವಾದ ನನ್ನ ವೇಗವನ್ನು ಸಹಿಸುವವಳಾಗು.॥೯೭॥

ಆ ಜಗದಂಬಿಕೆಗೆ ವಾಯುವು ಈ ಪ್ರಕಾರವಾಗಿ ಹೇಳಿ ಕೋಪಗೊಂಡವನಾಗಿ ಅತಿಯಾದ ವೇಗದಿಂದ ದೇವಿಯ ಮೇಲೆ ಸಾಗಲು ಮನಸ್ಸುಮಾಡಿದನು. ಅಷ್ಟರಲ್ಲೇ ಗತಿಹೀನನಾಗಿ ಕುಂಟನಂತೆ ಆದನು. ತನ್ನ ಬಲವನ್ನೆಲ್ಲವನ್ನೂ ಉಪಯೋಗಿಸಿ ಪ್ರಯತ್ನಿಸಿದರೂ ಕೂಡ ಅವನು ಒಂದು ಹೆಜ್ಜೆಯನ್ನಿಡಲೂ ಸಮರ್ಥನಾಗಲಿಲ್ಲವು.॥೯೮-೯೯॥

ಆಗ ವಾಯುವು ಭಯದಿಂದಲೂ ನಾಚಿಕೆಯಿಂದಲೂ ಓಡಿಹೋದನು. ಇಂದ್ರನ ಸಮೀಪಕ್ಕೆ ಹೋಗಿ ಈ ಭೂತವನ್ನು ನಾನು ತಿಳಿಯಲಾರದವನಾದೆ. ಅದು ಮಹಾಬಲ ಪರಾಕ್ರಮಗಳಿಂದ ಕೂಡಿದ ಅಮೋಘವಾದ ಭೂತವು! ಎಂದು ಹೇಳಿದನು. ॥೧೦೦॥

ಅಮೋಘಂ ತನ್ಮಹಾಭೂತಂ ಮಹಾಸತ್ವಪರಾಕ್ರಮಂ ।
ಏವಮಗ್ನೀಂದು ವಾಯೂನಾಂ ದೃಷ್ಟ್ವಾ ತಸ್ಮಾತ್ಪರಾಭವಂ ॥೧೦೧॥

ಪುರಂದರಃ ಶಂಕಿತೋಽಭೂತ್ ಕಿಂಮೇತದಿತಿ ಚಿಂತಯನ್ ।
ಚಿಂತಯಿತ್ವಾಽಪಿ ಬಹುಧಾ ನಾಧ್ಯಗಚ್ಛತ ಕಿಂಚನ ॥೧೦೨॥
ವಿಮನಾ ಇವ ಸಂಮೂಢೋ ನ ಕಿಂಚಿತ್ಪ್ರತ್ಯಪದ್ಯತ ।

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ
ಅಗ್ನೀಂದುವಾಯುಪರಾಭವೋ ನಾಮ
ಅಷ್ಟಮೋಽಧ್ಯಾಯಃ

ಹೀಗೆ ಚಂದ್ರ, ಅಗ್ನಿ ಮತ್ತು ವಾಯುಗಳು ಸೋತುಬಂದುದನ್ನು ನೋಡಿದ ಇಂದ್ರನು ನನ್ನ ಗತಿಯೇನೆಂದು ಆತಂಕಗೊಂಡವನಾಗಿ ಏನನ್ನು ಮಾಡಬೇಕೆಂದು ಯೋಚಿಸತೊಡಗಿದನು. ಎಷ್ಟು ಯೋಚಿಸಿದರೂ ಏನೂ ತಿಳಿಯದಿರಲು ಚಿಂತಾಕ್ರಾಂತನಾಗಿ ಏನನ್ನೂ ಮಾಡಲು ಅಜ್ಞಾನದಿಂದ ಅಸಮರ್ಥನಾದನು.||೧೦೧-೧೦೨||

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ
ಅಗ್ನೀಂದುವಾಯುಗಳ ಅವಮಾನವನೆಂಬ
ಎಂಟನೆಯ ಅಧ್ಯಾಯವು ಮುಗಿದುದು

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ನವಮೋಽಧ್ಯಾಯಃ ||

ಒಂಬತ್ತನೆಯ ಅಧ್ಯಾಯವು

ಚಿಂತಯಿತ್ವಾ ಚಿರಂ ಶಕ್ರಸ್ತಜ್ಜಯೇ ಕೃತನಿಶ್ಚಯಃ ।
ಬಲದರ್ಪ ಸಮುನ್ನದ್ಧೋ ವಜ್ರಮುದ್ಯಮ್ಯ ಸತ್ವರಂ ॥೧॥

ಜಗಾಮಾಽಽರುಹ್ಯ ಜೀಮೂತಂ ಯತ್ರ ಸಾ ಸಂಸ್ಥಿತಾಽಂಬಿಕಾ ।
ತಾಂ ದೃಷ್ಟ್ವಾ ಸುಕುಮಾರಾಽಂಗೀಂ ಪದ್ಮಕಿಂಜಲ್ಕವರ್ಚಸಂ ॥೨॥

ಸ್ವ ಸೌಂದರ್ಯ ಜಿತಾನೇಕ ಕೋಟಿಕಂದರ್ಪ ಸೌಭಗಾಂ ।
ದೂರೇ ಸ್ಥಿತಸ್ತಾಂ ಪಪ್ರಚ್ಛ ತೇಜಸಾಮುಷಿತೇಕ್ಷಣಃ ॥೩॥

ಕಾ ತ್ವಂ ಪದ್ಮಪಲಾಶಾಽಕ್ಷಿ ವ್ಯಾಪ್ಯಾಂಗಪ್ರಭಯಾ ಜಗತ್ ।
ಸ್ಥಿತಾಽಸಿ ಕನ್ಯಾ ಕಸ್ಯ ತ್ವಂ ಕಸ್ಮಾದತ್ರ ಸಮಾಗತಾ ॥೪॥

ಇಂದ್ರನು ಬಹಳಹೊತ್ತು ಆಲೋಚಿಸಿ ಕೊನೆಗೆ ದೇವಿಯನ್ನು ಜಯಿಸಬೇಕೆಂದು ನಿಶ್ಚಯಿಸಿದನು. ಅನಂತರ ಅವನ ಶಕ್ತಿಯಿಂದ ಮತ್ತನಾಗಿ ಮೇಘವೆಂಬ ವಾಹನವನ್ನೇರಿ ವಜ್ರಾಯುಧವನ್ನು ಹಿಡಿದುಕೊಂಡು ದೇವಿಯಿದ್ದಕಡೆಗೆ ಹೋದನು. ಸುಕುಮಾರವಾದ ದೇಹವುಳ್ಳ ಕಮಲದ ಕೇಸರದಂತೆ ಕಾಂತಿಯನ್ನು ಬೀರುತ್ತಿರುವ ತನ್ನ ಸೌಂದರ್ಯದಿಂದ ಅನೇಕ ಕೋಟಿ ಮನ್ಮಥರ ಸೌಂದರ್ಯವನ್ನು ಮೀರಿರುವ ದೇವಿಯನ್ನು ನೋಡಿ ಅವಳ ತೇಜಸ್ಸಿಗೆ ಬೆರಗಾಗಿ ದೂರದಲ್ಲಿಯೇ ನಿಂತು ಇಂದ್ರನು ಅವಳನ್ನು ಕುರಿತು ಕೆಳಗೆ ಕಂಡಂತೆ ಪ್ರಶ್ನೆಮಾಡಿದನು. ||೧-೨-೩||

ಎಲೌ ಕಮಲದಂತೆ ಕಣ್ಣುಳ್ಳವಳೇ, ದೇಹದ ಕಾಂತಿಯಿಂದ ಜಗತ್ತನ್ನೇ ಬೆಳಗುತ್ತಿರುವ ನೀನು ಯಾರು? ನೀನು ಯಾರ ಮಗಳು? ನೀನು ಇಲ್ಲಿಗೆ ಏಕೆ ಬಂದಿದ್ದೀಯೆ? ನಿನ್ನ ರೂಪವು ಅತ್ಯಂತ ಮನೋಹರವಾಗಿಯೂ ದೇಹದ

ರೂಪಂ ತೇ ರುಚಿರಂ ತದ್ವದಂಗ ವಿನ್ಯಾಸ ಸೌಷ್ಠವಂ ।
ವಂದ್ಯೋ(ದ್ಯಾ)ಮನ್ಯೋಮರಪುರೇ ಸಂತಿ ರಂಭಾ ಮುಖಾಃ ಸ್ತ್ರಿಯಃ॥

ನೇದೃಶೀ ದೇವಲೋಕೇ ವಾ ಭುವಿ ವಾಽಪಿ ರಸಾತಲೇ ।
ಮಯಾ ದೃಷ್ಟಾ ಸುಚಾರ್ವಂಗೀ ಭುಜಾಷ್ಟಾದಶಕೋಜ್ವಲಾ ॥೬॥

ವದ ಶೀಘ್ರಂ ಮಯಾ ಪೃಷ್ಟಾ ಸತ್ಯಮತ್ರ ಯಥಾಸ್ಥಿತಿಂ ।
ತಚ್ಛ್ರುತ್ವಾ ಶಕ್ರವಚನಂ ಪರಾಽಮ್ಬಾ ಪ್ರಾಹ ತಂ ಪ್ರತಿ ॥೭॥

ಕ್ವಸ್ತ್ವಂ ಕಿಮರ್ಥಂ ಸಂಪ್ರಾಪ್ತಃ ಕಿಂ ವೀರ್ಯಸ್ತ್ವಂ ಕಿಮುದ್ಯಮಃ ।
ಶ್ರುತ್ವಾ ವೃತ್ತಂ ತವ ತತೋ ವದಾಮಿ ಮಮ ಸಂಸ್ಥಿತಿಂ ॥೮॥

ಇತಿ ಶ್ರುತ್ವಾ ವಚೋ ದೇವ್ಯಾಃ ಪ್ರಾಹ ಶಕ್ರಃ ಸಹಸ್ರದೃಕ್ ।
ಶ್ರುಣು ಮೇ ವಚನಂ ಸಮ್ಯಗಹಂ ಸುರಪುರೇಶ್ವರಃ ॥೯॥

ಅವಯವಗಳ ರಚನೆಯೂ ಬಹಳ ಸುಂದರವಾಗಿಯೂ ಇವೆ. ನಾನೇ ಪೂಜಿಸಲು ಯೋಗ್ಯಳಾಗಿರುವಂತೆ ಕಾಣುತ್ತೀಯೆ! ರಂಭೆಯೇ ಮೊದಲಾದ ಸ್ತ್ರೀಯರೂ ನನ್ನ ಪಟ್ಟಣವಾದ ಅಮರಾವತಿಯಲ್ಲಿದ್ದಾರೆ. ದೇವಲೋಕದಲ್ಲಾಗಲಿ ಭೂಲೋಕದಲ್ಲಾಗಲೀ ಪಾತಾಳಲೋಕದಲ್ಲಾಗಲಿ ನಿನಗೆ ಸಮಾನಳಾದ ಸುಂದರಿಯೂ ಹದಿನೆಂಟು ತೋಳುಗಳಿಂದಲೂ ಶೋಭಿಸುವವಳೂ ಆದ ಸ್ತ್ರೀಯನ್ನು ನಾನು ಎಲ್ಲಿಯೂ ಕಂಡಿಲ್ಲ. ||೪-೫-೬||

ನಾನು ಕೇಳಿದ ಪ್ರಶ್ನೆಗಳಿಗೆಲ್ಲಕ್ಕೂ ಸತ್ಯವಾದ ಉತ್ತರಗಳನ್ನು ಶೀಘ್ರವಾಗಿ ಹೇಳು ಎಂದನು. ಇಂದ್ರನ ಮಾತುಗಳನ್ನು ಕೇಳಿ ಶ್ರೇಷ್ಠಳಾದ ತಾಯಿಯಾದ ದೇವಿಯು ಅವನನ್ನು ಕುರಿತು ಹೀಗೆ ಹೇಳಿದಳು:—

ನೀನು ಯಾರು? ನೀನು ಏತಕ್ಕಾಗಿ ಇಲ್ಲಿಗೆ ಬಂದಿದ್ದೀಯೆ? ನಿನ್ನ ಬಲವೆಷ್ಟು? ನೀನು ಮಾಡುವ ಉದ್ಯೋಗವಾವುದು? ನೀನು ಈ ಪ್ರಶ್ನೆಗಳಿಗೆಲ್ಲಕ್ಕೂ ನಿಜವಾದ ಉತ್ತರವನ್ನು ಹೇಳುವುದಾದರೆ ನನ್ನ ವಿಚಾರಗಳನ್ನೂ ಆಮೇಲೆ ತಿಳಿಸುವೆನು. ಹೀಗೆ ಹೇಳಿದ ದೇವಿಯ ಮಾತನ್ನು ಕೇಳಿ ಸಹಸ್ರಾಕ್ಷನಾದ ಇಂದ್ರನು ಆಕೆಗೆ "ನನ್ನ ಮಾತನ್ನು ಚೆನ್ನಾಗಿ ಆಲಿಸು" ಎಂದು ಹೇಳಿ ನಾನು ದೇವತೆಗಳ ಪಟ್ಟಣವಾದ ಸ್ವರ್ಗಕ್ಕೆ ಅಧಿಪತಿಯಾದ ದೇವೇಂದ್ರನೆಂದನು. ||೭-೮-೯||

ಶತಕ್ರತುಃ ತ್ರಿಭುವನಶ್ರಿಯೋ ಭೋಕ್ತಾ ಮಹಾಬಲಃ ।
ತ್ವಾಂ ಜಿಜ್ಞಾಸುರಿಹ ಪ್ರಾಪ್ತೋ ನಾಽನ್ಯೋಽಸ್ತಿ ಭುವನೇ ಕ್ವಚಿತ್ ॥೧೦॥

ಬಲೇನ ಯಶಸಾ ಲಕ್ಷ್ಮ್ಯಾ ತುಲ್ಯೋ ವೀರ್ಯೇಣ ಸಂಪದಾ ।
ಸದಾ ಭುವನ ಶಾಸ್ತಾಽಹಂ ದೇವಾ ಮಮ ವಶಂವದಾಃ ॥೧೧॥

ವಜ್ರಂ ಮಮಾಽಯುಧಂ ಚೈತದಮೋಘಂ ಸರ್ವದುಸ್ಸಹಂ ।
ಏತೇನ ಪ್ರಹೃತೇನೈವ ನ ಜೀವನ್ ಯಾಸ್ಯತಿ ಕ್ವಚಿತ್ ॥೧೨॥

ಬಹವೋ ದಾನವಾ ದೈತ್ಯಾ ಮಹಾಬಲ ಪರಾಕ್ರಮಾಃ ।
ಸಕೃದ್ವಜ್ರಸ್ಯ ಸಂಸ್ಪರ್ಶಾತ್ಕೃತಾಂತ ಶರಣಂ ಗತಾಃ ॥೧೩॥

ಬಲಃ ಪಾಕೋಽಥ ನಮುಚಿರ್ವೃತ್ರಸ್ತ್ವಾಷ್ಟ್ರೋಽಪಿ ತಾರಕಃ ।
ಸಮಸ್ತಲೋಕ ಜೇತಾರೋ ಗತಾ ವಜ್ರಾತ್ಪರಾಭವಂ ॥೧೪॥

ಬಹುನಾಽತ್ರ ಕಿಮುಕ್ತೇನ ನ ಮೇ ತುಲ್ಯಬಲಃ ಕ್ವಚಿತ್ ।
ಜಾನೀಹಿ ಮಾಂ ಮಹೇಂದ್ರಾಽಖ್ಯಂ ಮಹಾಬಲ ಪರಾಕ್ರಮಂ ॥೧೫।

ನಾನು ದೇವೇಂದ್ರನೂ, ನೂರು ಮಹಾಯಾಗಗಳನ್ನು ಆಚರಿಸಿದವನೂ, ಮೂರು ಲೋಕದ ಐಶ್ವರ್ಯವನ್ನು ಅನುಭವಿಸುತ್ತಿರುವವನೂ, ಮಹಾಬಲಿಷ್ಠನೂ ಆಗಿದ್ದೇನೆ. ನೀನು ಯಾರೆಂಬುದನ್ನು ತಿಳಿಯಲು ಇಲ್ಲಿಗೆ ಬಂದಿದ್ದೇನೆ. ನನಗೆ ದೇಹದ ಬಲದಲ್ಲಾಗಲೀ ಕೀರ್ತಿಯಲ್ಲಾಗಲೀ, ಐಶ್ವರ್ಯ, ಮನಸ್ಸಿನ ವೀರ್ಯ, ಸಂಪತ್ತು ಇವುಗಳಲ್ಲಾಗಲೀ ಸಮನಾದವನು ಯಾವ ಲೋಕದಲ್ಲಿಯೂ ಇಲ್ಲ. ನಾನು ಯಾವಾಗಲೂ ಲೋಕವನ್ನು ಆಳುವವನಾಗಿದ್ದೇನೆ. ಎಲ್ಲಾ ದೇವತೆಗಳೂ ನನ್ನ ಅಧೀನರು. ಈ ನನ್ನ ವಜ್ರಾಯುಧವು ಎಲ್ಲಿಯೂ ವ್ಯರ್ಥವಾಗುವುದಿಲ್ಲ. ಇದರ ಪೆಟ್ಟನ್ನು ತಿಂದಮೇಲೆ ಯಾವನೂ ಬದುಕಿಲ್ಲ. ||೧೦-೧೧-೧೨||

ಬಹಳ ಬಲಿಷ್ಠರಾದ ಅನೇಕ ದಾನವರು ಮತ್ತು ರಾಕ್ಷಸರೂ, ಒಂದುಸಲ ವಜ್ರಾಯುಧ ಪ್ರಯೋಗದಿಂದಲೇ ಯಮನ ಪಟ್ಟಣವನ್ನು ಹೊಂದಿದರು. ಅಥವಾ ಮೃತರಾದರು. ಎಲ್ಲಾ ಲೋಕಗಳನ್ನೂ ಜಯಿಸಿದವರಾದರೂ ಬಲ, ಪಾಕ, ನಮುಚಿ, ವೃತ್ರ, ತ್ವಾಷ್ಟ್ರ, ತಾರಕ, ಎಂಬ ಅಸುರರು ವಜ್ರಾಯುಧದ ಪ್ರಯೋಗವಾದ ಕೂಡಲೇ ಸೋತುಹೋದರು. ಹೆಚ್ಚು ಹೇಳಿ ಪ್ರಯೋಜನವೇನು? ನನಗೆ

ಇತೀಂದ್ರವಚನಂ ಶ್ರುತ್ವಾ ಪ್ರಾಹ ಸಾ ಪರಮೇಶ್ವರೀ ।
ನೂನಮಿಂದ್ರ ಮಯಾ ಜ್ಞಾತ ಸ್ತ್ವಂ ಕಶ್ಯಪ ತನೂದ್ಭವಃ ॥೧೬॥

ಇದಂ ತೃಣಂ ಸುನಿಹಿತಂ ತವಾಗ್ರೇ ಲಘು ಬಲ್ಬಜಂ ।
ಯತ್ಕಿಂಚಿತ್ತವ ವೀರ್ಯಂ ವಾ ವಜ್ರಸ್ಯಾಽಪಿ ಶತಕ್ರತೋ ॥೧೭॥

ಪ್ರದರ್ಶಯಾಽಸ್ಮಿನ್ನೋ ಚೇತ್ತ್ವಂ ವೈಶ್ವಾನರ ಮುಖಾ ಇವ ।
ಪಲಾಯಮಾನಂ ಪಶ್ಯಾಮಿ ತ್ವಾಮಪೀಂದ್ರ ಹ್ರಿಯಾ ನತಂ ॥೧೮॥

ನಿಶಮ್ಯೈತದ್ವಚೋ ದೇವ್ಯಾಃ ಶಕ್ರಃ ಪ್ರಸ್ಫುರಿತಾಧರಃ ।
ಉದ್ಯಮ್ಯ ವಜ್ರಂ ಸಂಕ್ರುದ್ಧಸ್ತಾಂ ಪ್ರಹರ್ತುಂ ಮನೋ ದಧೇ॥೧೯॥

ಉದ್ಯತೇ ಸ್ವಾಽಯುಧಂ ಶಕ್ರೇ ಸಹಸಾ ಜ್ವಲಿತಾ ದಿಶಃ ।
ತಸ್ಮಿನ್ನಿಂದ್ರೇ ಸ್ಥಿತೇ ಚೋದ್ಯದ್ವಜ್ರ ಹಸ್ತೇಽತಿ ಕೋಪನೇ ॥೨೦॥

ಸಮಾನವಾದ ಪರಾಕ್ರಮ ಉಳ್ಳವನು ಯಾರೂ ಎಲ್ಲಿಯೂ ಇಲ್ಲ. ಇಂಥಾ ಮಹಾ ಬಲಶಾಲಿಯೂ, ಶೌರ್ಯವುಳ್ಳವನೂ ಆದ ನಾನು ಮಹೇಂದ್ರನೆಂದು ಪ್ರಸಿದ್ಧನಾಗಿದ್ದೇನೆ. ಎಂದು ತಿಳಿ. ||೧೩-೧೪-೧೫||

ಇಂದ್ರನ ಮಾತನ್ನು ಕೇಳಿ ಪರಮೇಶ್ವರಿಯು, ಎಲೈ ಇಂದ್ರನೇ, ನೀನು ಕಶ್ಯಪನ ಮಗನಾದ ಇಂದ್ರನೆಂದು ನನಗೆ ಗೊತ್ತು. ನಿನ್ನ ಮುಂದೆ ಈ ಹುಲ್ಲಿನ ಕಡ್ಡಿಯನ್ನು ಇಟ್ಟಿದ್ದೇನೆ. ಇದು ಬಹಳ ಹಗುರವೂ ಮತ್ತು ನಿಸ್ಸಾರವೂ ಆಗಿದೆ ಯೆಂಬ ವಿಷಯ ನಿನಗೂ ಗೊತ್ತೇ ಇದೆ. ಎಲೈ ಇಂದ್ರನೇ, ಈಗ ನೀನು ಇದರ ಮೇಲೆ ನಿನ್ನ ಪರಾಕ್ರಮವನ್ನಾಗಲೀ, ಅಥವಾ ವಜ್ರಾಯುಧದ ಶಕ್ತಿಯನ್ನಾಗಲೀ ತೋರಿಸು. ಹಾಗೆ ತೋರಿಸಲು ಅಶಕ್ತನಾದರೆ ನೀನೂ ಕೂಡ ಹಿಂದೆ ಬಂದು ಜಂಭಕೊಚ್ಚಿದ ಅಗ್ನಿಯೇ ಮೊದಲಾದ ದೇವತೆಗಳಂತೆ ನಾಚಿಕೆಯಿಂದ ಪಲಾಯನ ಮಾಡಬೇಕಾಗುವುದನ್ನು ನಾನು ನೋಡುತ್ತೇನೆ. ಎಂದಳು. ||೧೬-೧೭-೧೮||

ದೇವಿಯ ಮಾತನ್ನು ಕೇಳಿ ಇಂದ್ರನು ಹಲ್ಲುಕಡಿಯುತ್ತಾ ಬಹಳ ಕೋಪ ದಿಂದ ವಜ್ರಾಯುಧವನ್ನು ಎತ್ತಿ ಅವಳನ್ನು ಹೊಡೆಯಲು ನಿಶ್ಚಯಿಸಿದನು. ಇಂದ್ರನು ವಜ್ರಾಯುಧವನ್ನು ಎತ್ತಲಾಗಿ ತತ್ಕ್ಷಣದಲ್ಲಿ ದಿಕ್ಕುಗಳೆಲ್ಲವೂ ಜ್ವಲಿಸಿದವು. ಬಹಳ ಕೋಪದಿಂದ ವಜ್ರಾಯುಧವನ್ನು ಹಿಡಿದು ಇಂದ್ರನು ನಿಂತಿರಲು ದೇವಿಯು

ಸ್ಮಿತವಿಗೊಷಚ್ಚಕಾರಾಽಂಬಾ ಹಸತ್ಕೋಟೀಂದು ಚಂದ್ರಿಕಂ ।
ಸ್ಮಿತಮಾತ್ರಾಚ್ಛತಧೃತೇ ರುದ್ಯತಃ ಸಾಽಯುಧಃ ಕರಃ ॥೨೧॥

ಸಂಸ್ತಂಭಿತ ಸ್ತಥಾ ಪಾದೋ ವಾಙ್ನೇತ್ರಾಽದೀಂದ್ರಿಯಾಣಿ ಚ ।
ಈಷನ್ನ ವೇಪಿತುಂ ಶಕ್ತೋ ಹಸ್ತಾಽದಿಕಮಪಿ ಸ್ವಯಂ ॥೨೨॥

ಏವಂ ಸಂಸ್ತಬ್ಧ ಸರ್ವಾಂಗೋ ಮಘವಾ ಲಿಖಿತಾ ಕೃತಿಃ ।
ವಕ್ತುಂ ಕರ್ತುಂ ಪ್ರಚಲಿತುಂ ನೇಷ್ಟ ಈಷದಪೀಶ್ವರಃ ॥೨೩॥

ಏವಂ ಭೂತಂ ಸಹಸ್ರಾಕ್ಷಂ ದೃಷ್ಟ್ವಾ ಕಾಷ್ಠ ನರಾಕೃತಿಂ ।
ಅನ್ವತಪ್ಯಂತ ವಿಬುಧಾ ಭಯೇನ ಪರಿವೇಪಿತಾಃ ॥೨೪॥

ದೀನಾ ನಷ್ಟೇಶ್ವರಾ ದೇವಾ ಹಾ ಹೇತ್ಯುಚ್ಚೈರ್ವಿಚುಕ್ರುಶುಃ ।
ಅಥೇಂದ್ರಃ ಸ್ತಬ್ಧಮಾತ್ಮಾನ ಮಪರಾಧಾತ್ಸ್ವಯಂ ವಿದನ್ ॥೨೫॥

ಕೋಟಿಚಂದ್ರರನ್ನು ತಿರಸ್ಕರಿಸುವಷ್ಟು ಬೆಳದಿಂಗಳಿನ ಪ್ರಕಾಶವುಳ್ಳ ಮುಗುಳು ನಗೆಯನ್ನು ನಕ್ಕಳು. ದೇವಿಯು ಮುಗುಳುನಗೆಯನ್ನು ನಕ್ಕಕೂಡಲೇ ಇಂದ್ರನ ವಜ್ರಾಯುಧವನ್ನು ಹಿಡಿದಿದ್ದ ಕೈ ಹಾಗೆಯೇ ಅಲುಗದಂತಾಯಿತು. ॥೧೯-೨೦-೨೧॥

ಹೀಗೆ ಇಂದ್ರನು ವಜ್ರಾಯುಧವನ್ನು ಹಿಡಿದಿದ್ದ ಕೈ ಸ್ತಬ್ಧವಾಯಿತು. ಹಾಗೆಯೇ ಕೈಕಾಲುಗಳು ನಾಲಿಗೆ ಕಣ್ಣುಗಳೇ ಮೊದಲಾದ ಇಂದ್ರಿಯಗಳೂ ಚಲಿಸ ದಂತಾದುವು. ಅವನು ತನಗೆ ಇಷ್ಟಬಂದಂತೆ ಕೈ ಮುಂತಾದ ಅವಯವಗಳನ್ನು ಅಲ್ಲಾಡಿಸಲೂ ಅಸಮರ್ಥನಾದನು. ಹೀಗೆ ಇಂದ್ರನ ಸಕಲ ಶರೀರವೂ ಚಲಿಸದಂ ತಾಗಲಾಗಿ ಅವನು ಚಿತ್ರದಲ್ಲಿರುವ ಬೊಂಬೆಯಂತಿದ್ದನು. ಇಂದ್ರನು ಮಾತನಾಡಲು ಅಥವಾ ಏನನ್ನಾದರೂ ಮಾಡಲು ಅಥವಾ ಚಲಿಸಲು ಸ್ವಲ್ಪವೂ ಸಮರ್ಥನಾಗಲಿಲ್ಲ. ಮರದಲ್ಲಿ ಕೆತ್ತಿದ ಮನುಷ್ಯನಂತೆ ಸ್ತಬ್ಧನಾದ ಇಂದ್ರನನ್ನು ನೋಡಿ ದೇವತೆಗಳೆಲ್ಲರೂ ಭಯದಿಂದ ನಡುಗುತ್ತಾ ಸಂಕಟಕ್ಕೊಳಗಾದರು. ತಮಗೆ ಅಧಿಪತಿಯನ್ನು ಕಳೆದು ಕೊಂಡವರಂತೆ ದೈನ್ಯದಿಂದ ಕೂಡಿದ ದೇವತೆಗಳು "ಅಯ್ಯಯ್ಯೋ" ಎಂದು ದುಃಖದಿಂದ ಕೂಗಲು ಆರಂಭಿಸಿದರು. ಅನಂತರದಲ್ಲಿ ಇಂದ್ರನು ತನ್ನ ಅಪರಾಧ ದಿಂದಲೇ ಹೀಗಾಯಿತೆಂದು ಭಾವಿಸಿದನು. ॥೨೨-೨೩-೨೪-೨೫॥

ತತ್ಕಾಲಾಽಪದ್ರಕ್ಷಣಾಽರ್ಹಂ ಸಸ್ಮಾರಾಂಗಿರಸಂ ಗುರುಂ ।
ತದಾ ಸಂಸ್ಮೃತಮಾತ್ರಸ್ತು ಹರಿಣಾಽಂಗಿರಸೋ ಮುನಿಃ ॥೨೬॥

ದೇವ್ಯಾ ಕೃತಂ ಮದಶಮಂ ಜ್ಞಾತ್ವೇಂದ್ರಸ್ಯಾಽಭ್ಯಗಾತ್ತ್ವರನ್ ।
ಯೋಗಿರಾಜಃ ಸುಮೇಧಾವೀ ಜ್ಞಾತಜ್ಞೇಯ ಪರಾವರಃ ॥೨೭॥

ಕ್ಷಣೇನ ತತ್ರ ಸಂಪ್ರಾಪ್ತೋ ಯತ್ರೇಂದ್ರಸ್ತು ಜಡೀಕೃತಃ ।
ದೃಷ್ಟ್ವಾ ಬುಧಗಣಾಃ ಸರ್ವೇ ಜೀವಮಿಂದ್ರಾವನ ಕ್ಷಮಂ ॥೨೮॥

ಸ್ರೋತೋಭಿರುಹ್ಯಮಾನಾನಾಂ ನೌ ಪ್ರಾಪ್ತಿರಿವ ಸಂಬಭೌ ।
ಗೀಷ್ಪತೇಃ ದರ್ಶನಾದೇವಮಾಶ್ವಸ್ತಾ ಸ್ತ್ರಿದಶಾಸ್ತದಾ ॥೨೯॥

ಏತಸ್ಮಿನ್ನಂತರೇ ತತ್ರ ಧಿಷಣೋ ದೀರ್ಘದರ್ಶನಃ ।
ವಿಶ್ವೇಶ್ವರೀಂ ಸಮಾಲೋಕ್ಯ ಹರ್ಷರೋಮಾಂಚ ಪೀವರಃ ॥೩೦॥

ಆನಂದಾಽಶ್ರು ಕಲಾರುದ್ಧ ನೇತ್ರೋ ಮೂರ್ಧ್ನಿ ಕೃತಾಂಜಲಿಃ ।
ಸಾಷ್ಟಾಂಗಂ ಪ್ರಣಿಪತ್ಯಾಽಥೋ ಗದ್ಗದಸ್ವರಸಂಯುತಃ ॥೩೧॥

ಇಂದ್ರನು ಆಗ ತನಗೆ ಬಂದಿರುವ ವಿಪತ್ತನ್ನು ನಿವಾರಣೆಮಾಡಲು ಸಮರ್ಥನಾದ ತನ್ನ ಗುರುವಾದ ಬೃಹಸ್ಪತಿಯನ್ನು ಸ್ಮರಿಸಿದನು. ಇಂದ್ರನು ಸ್ಮರಿಸಿಕೊಂಡ ಕೂಡಲೇ ಗುರುವಾದ ಬೃಹಸ್ಪತಿಯು ಇಂದ್ರನ ಅಹಂಕಾರವನ್ನು ಖಂಡಿಸುವುದಕ್ಕೋಸ್ಕರ ದೇವಿಯು ಮಾಡಿರುವ ಉಪಾಯವನ್ನು ಜ್ಞಾನದೃಷ್ಟಿಯಿಂದಲೇ ತಿಳಿದನು. ಯೋಗಿಗಳಲ್ಲಿ ಶ್ರೇಷ್ಠನೂ ಆದ ಬೃಹಸ್ಪತಿಯು ತತ್ಕ್ಷಣದಲ್ಲೇ ಇಂದ್ರನು ಸ್ತಬ್ಧನಾಗಿ ನಿಂತಿದ್ದ ಕಡೆಗೆ ಬಂದನು. ಇಂದ್ರನನ್ನು ಕಾಪಾಡಲು ಶಕ್ತನಾದ ಬೃಹಸ್ಪತಿಯು ಅಲ್ಲಿಗೆ ಬಂದದ್ದನ್ನು ಕಂಡು ದೇವತೆಗಳೆಲ್ಲರೂ ಬಹಳ ಸಂತೋಷಪಟ್ಟರು. ||೨೬-೨೭-೨೮||

ಆಗ ಬುದ್ಧಿವಂತನಾದ ಬೃಹಸ್ಪತಿಯು ಬಂದದ್ದು, ಪ್ರವಾಹವನ್ನು ದಾಟಲು ಅಪೇಕ್ಷಿಸುವ ಜನರಿಗೆ ದೋಣಿಯು ಸಿಕ್ಕಿದಂತೆ, ದೇವತೆಗಳಿಗೆ ಒಳ್ಳೆಯ ರಕ್ಷಕನು ಸಿಕ್ಕಿದಂತಾಯಿತು. ಹೀಗೆ ದೇವತೆಗಳು ಬೃಹಸ್ಪತಿಯ ದರ್ಶನದಿಂದ ಸಮಾಧಾನವನ್ನು ಹೊಂದಿದರು. ಈ ಸಂದರ್ಭದಲ್ಲಿ ಬಹಳ ಬುದ್ಧಿಶಾಲಿಯೂ, ದೂರದರ್ಶಿಯೂ ಆದ ಬೃಹಸ್ಪತಿಯು ವಿಶ್ವೇಶ್ವರನ ಪತ್ನಿಯಾದ ದೇವಿಯನ್ನು ನೋಡಿ ಸಂತೋಷ

ಬದ್ಧಾಂಜಲಿಃ ಪರಾಮಂಬಾಮೀಡಿತುಂ ಸಮುಪಾಕ್ರಮತ್ ।
ಗೂಢಾಶಾಯೊ ಮೋದಭರೈಃ ವಾಕ್ಪುಷ್ಪೈಃ ಪೂಜಯನ್ನಿವ ॥೩೨॥

ಜಯಜಯ ಶಂಕರಿ ಜಗದಭಯಂಕರಿ
ವಿಧಿಮುಖ ಕಿಂಕರಿ ವೇದನುತೇ ।
ದುಷ್ಟ ಭಯಂಕರಿ ಶಿಷ್ಟ ಶುಭಂಕರಿ
ಸಕಲವಶಂಕರಿ ಪಾಹಿ ಸುರಾನ್ ॥೩೩॥

ಜಗತಾಂ ಜನನ ಸ್ಥಿತಿ ಹರಣಾದಿಷು
ವಿಧಿ ಹರಿ ಶಂಕರ ವಿಬುಧೇಶಾಃ ।
ತವಪದಪಂಕಜ ಸೇವಾಽಽಸಾದಿತ
ಕರುಣಾಲೇಶಾಃ ಪ್ರಭವಂತಿ ॥೩೪॥

ದಿಂದ ರೋಮಾಂಚಭರಿತನಾಗಿ ಆನಂದಬಾಷ್ಪವನ್ನು ಸುರಿಸುತ್ತಾ ತನ್ನ ತಲೆಯ ಮೇಲೆ ಕೈಮುಗಿದು ಸಾಷ್ಟಾಂಗನಮಸ್ಕಾರವನ್ನು ಮಾಡಿ ತೊದಲುನುಡಿಗಳಿಂದ ದೇವಿಯನ್ನು ಸ್ತೋತ್ರಮಾಡಲು ಪ್ರಾರಂಭಿಸಿದನು. ॥೨೯-೩೦-೩೧॥

ಹೀಗೆ ಬೃಹಸ್ಪತಿಯು ಕೈಮುಗಿದುಕೊಂಡು ಶ್ರೇಷ್ಠಳಾದ ಅಂಬಿಕೆಯಲ್ಲಿರುವ ಗುಣಮಹಿಮೆಗಳನ್ನು ವರ್ಣಿಸಿದನು. ಬಹಳ ಗೂಢವಾದ ಅಭಿಪ್ರಾಯವುಳ್ಳ ದೇವ ಗುರುವು ಬಹಳ ಸಂತೋಷದಿಂದ ಆ ದೇವಿಗೆ ತನ್ನ ಸ್ತೋತ್ರವೆಂಬ ಹೂಗಳಿಂದ ಪೂಜಿಸುತ್ತಿದ್ದನೋ ಎಂಬಂತಿತ್ತು. ಓ ಶಂಕರನ ಪತ್ನಿಯೇ, ನೀನು ಲೋಕ ಕ್ಕೆಲ್ಲಕ್ಕೂ ಅಭಯವನ್ನು ನೀಡುತ್ತೀಯೆ. ಬ್ರಹ್ಮನೇ ಮೊದಲಾದವರು ನಿನಗೆ ಸೇವಕರಾಗಿ ಇರುತ್ತಾರೆ. ನೀನು ವೇದಗಳಿಂದಲೂ ಸ್ತುತಿಸಲ್ಪಡುತ್ತೀಯೆ. ನೀನು ಧರ್ಮರಕ್ಷಣೆಗಾಗಿ ಲೋಕದಲ್ಲಿ ಆಗಾಗ್ಗೆ ಹೆಚ್ಚಿರುವ ದುಷ್ಟರಿಗೆ ಭಯವನ್ನುಂಟು ಮಾಡುವವಳೂ, ಯೋಗ್ಯರಿಗೆ ಮಂಗಳವನ್ನುಂಟುಮಾಡುವವಳೂ, ಎಲ್ಲರನ್ನೂ ಅಧೀನದಲ್ಲಿಟ್ಟುಕೊಂಡಿರುವವಳೂ ಆಗಿದ್ದೀಯೆ. ಇಂಥಾ ನೀನು ದಯವಿಟ್ಟು ದೇವತೆಗಳನ್ನು ಕಾಪಾಡು. ಬ್ರಹ್ಮ, ವಿಷ್ಣು, ಶಿವ ಮೊದಲಾದ ದೇವತೆಗಳ ಅಧಿಪತಿಗಳೂ ಕೂಡ ನಿನ್ನ ಪಾದಕಮಲದ ಸೇವೆಯಿಂದ ಪ್ರಾಪ್ತವಾದ ನಿನ್ನ ಕರುಣಾಲೇಶದಿಂದಲೇ ಲೋಕದ ಸೃಷ್ಟಿ, ಸ್ಥಿತಿ, ನಾಶ ಮುಂತಾದ ಕಾರ್ಯಗಳನ್ನು ನಡಸುವುದರಲ್ಲಿ ಸಾಮರ್ಥ್ಯವನ್ನು ಹೊಂದಿದಾರೆ. ॥೩೨-೩೩-೩೪॥

ಯದಿ ತವ ಕರುಣಾಲೇಶವಿಹೀನೋ
ವಿಬುಧಗಣೇಶೋಽಪ್ಯತಿಮೂಢಃ ।
ನೇದಂ ಚಿತ್ರಂ ತ್ವದ್ವಿಮುಖೋಽಪಿ ಹಿ
ನ ಕ್ವಚಿದೀಶಃ ಪರಮೇಶಃ ॥೩೫॥

ವಿಧಿಹರಿಮುಖ್ಯಾ ಅಪಿ ತವ ಲೀಲಾಂ
ನ ಪ್ರಭವಃ ಸ್ಯುರ್ವರ್ಣಯಿತುಂ ।
ತತ್ರ ಕಥಂ ಮಮ ಶಕ್ತಿಃ ಸ್ತೋತ್ರೇ
ತವ ಮಹಿಮಾಽಬ್ಧೇರ್ವದ ಮಾತಃ ॥೩೬॥

ವಾಚಃ ಪ್ರಾಂಚಸ್ತವ ನಿಶ್ವಸಿತಂ
ವಿಧಿ ಹರಿಮುಖ್ಯಾ ಗುಣ ಜಾತಾಃ ।
ಲೀಲಾಜನಿತಂ ಸಕಲಂ ತತ್ತೇ
ನ ವಿದಂತ್ಯವರಾ ಸ್ತ್ವಾಮಂಬಾಂ ॥೩೭॥

ಓ ದೇವಿಯೇ, ನಿನ್ನ ಕರುಣಾಲೇಶವಿಲ್ಲದೇ ಇರುವುದರಿಂದ ದೇವತೆಗಳಿಗೆಲ್ಲರಿಗೂ ಒಡೆಯನಾದರೂ ಇಂದ್ರನು ಈ ದುರ್ಗತಿಗೆ ಇಳಿದನು. ಆದ್ದರಿಂದಲೇ ಪರಮೇಶ್ವರನೂ ಸಹ ನಿನಗೆ ವಿರುದ್ಧನಾದರೆ ಏನನ್ನೂ ಮಾಡಲು ಸಮರ್ಥನಾಗುವುದಿಲ್ಲ. ಎಂಬ ವಿಷಯದಲ್ಲಿ ಆಶ್ಚರ್ಯವಿಲ್ಲ. ಬ್ರಹ್ಮ, ವಿಷ್ಣು, ಮೊದಲಾದವರೂ ಸಹ ನಿನ್ನ ಲೀಲೆಯನ್ನು ವರ್ಣಿಸಲು ಶಕ್ತರಾಗಿಲ್ಲ. ಓ ತಾಯಿಯೇ, ಹೀಗಿರುವಾಗ ನಿನ್ನ ಮಹಿಮೆಯೆಂಬ ಸಮುದ್ರವನ್ನು ಸ್ತೋತ್ರಮಾಡಲು ನಾನು ಹೇಗೆ ಸಮರ್ಥನು? ಎಂಬುದನ್ನು ನೀನೇ ಹೇಳು. ಬಹಳ ಪ್ರಾಚೀನವಾದ ವೇದಗಳೂ ಕೂಡ ನಿನ್ನ ಉಸಿರು. ನಿನ್ನ ಗುಣಗಳಿಂದಲೇ ಬ್ರಹ್ಮ, ವಿಷ್ಣು ಮೊದಲಾದವರೂ ಜನಿಸಿದರು. ಸಮಸ್ತ ಪ್ರಪಂಚವೂ ಕೂಡ ನಿನ್ನ ಲೀಲೆಯಿಂದಲೇ ಸೃಷ್ಟಿಯಾಯಿತು. ಅಧಮರಾದ ಜನರು ಲೋಕಮಾತೆಯಾದ ನಿನ್ನ ಸ್ವರೂಪವನ್ನು ತಿಳಿಯಲಾರರು. ॥೩೫-೩೬-೩೭॥

ಸಕಲ ಚರಾಽಚರವಪುರಾದ್ಯಾ ತ್ವಂ
ಸ್ವಾಽಶ್ರಿತಲೋಕಾಽಲೋಕಗಣಾ ।
ನಾನ್ಯತ್ಕಿಂಚಿತ್ತವ ಶರಣಂ ಸ್ವಂ
ವಿಭವಂ ಶ್ರಿತ್ವಾ ನನು ಭಾಸಿ ॥೩೮॥

ತಂತುಭಿರೋತಃ ಪ್ರೋತೋ ಯದ್ವ
ತ್ಪಟ ಇಹ ಹೇಮ್ನಾ ಕಟಕಾಽದ್ಯಂ ।
ಅಖಿಲಂ ಚೋತಂ ಪ್ರೋತಂ ತದ್ವತ್
ಕಲಯಾ ತ್ರಿಪುರೇ ಪರಮುಪರಂ ॥೩೯॥

ವರ್ಣಾಽದ್ಯಾ ಅಪಿ ಷಡ್ವಿಧಮಾರ್ಗಾಃ
ಕಾಲಾಽದ್ಯಾ ಅಪಿ ನವಸಂಘಾಃ ।
ಸ್ಥೈರ್ಯಾಽದ್ಯಾ ಅಪಿ ಪಂಚಕಲಾ ನನು
ಚಿಚ್ಛಕ್ತೇಸ್ತ್ವನ್ನಾಪ್ಯನ್ಯತ್ ॥೪೦॥

ಸರ್ವಸ್ಯಾಽದೌ ಪರಚಿತಿ ವಪುಷಾ
ವಿಲಸಸಿ ಚೈಕಾ ಶಿವರೂಪಾ ।
ದ್ರಷ್ಟಾ ಶ್ರೋತಾ ವಕ್ತಾ ನಾಽನ್ಯ
ಸ್ತತ್ತ್ವಾಂ ಸ್ತೋತುಂ ಕಃ ಶಕ್ತಃ ॥೪೧॥

ಓ ದೇವಿಯೇ, ನೀನು ಎಲ್ಲಕ್ಕೂ ಮೊತ್ತಮೊದಲಿನವಳೂ, ಸಮಸ್ತ ಚರಾಚರಪ್ರಪಂಚಸ್ವರೂಪಳೂ, ನಿನ್ನನ್ನೇ ಆಶ್ರಯಿಸಿದ ಸಮಸ್ತ ಪ್ರಪಂಚವುಳ್ಳವಳೂ ಆಗಿದ್ದೀಯೆ. ನಿನಗೆ ರಕ್ಷಕವಾದ ಬೇರೊಂದು ಶಕ್ತಿಯೇ ಇಲ್ಲ. ನಿನ್ನ ಅಸಾಧಾರಣವಾದ ಶಕ್ತಿಯ ಮಹಿಮೆಯಿಂದಲೇ ನೀನು ವಿರಾಜಮಾನಳಾಗಿದ್ದೀಯೇ. ||೩೮||

ಓ ತ್ರಿಪುರಸುಂದರೀ ದೇವಿಯೇ, ಬಟ್ಟೆಯು ದಾರಗಳಲ್ಲಿ ಹಾಸುಹೊಕ್ಕುಗಳಾಗಿ ಹೇಗೆ ಸೇರಿಕೊಂಡಿದೆಯೋ, ಬಳೆಯಲ್ಲಿ ಚಿನ್ನವು ಒಳಗೂ ಹೊರಗೂ ಹೇಗೆ ಸೇರಿಕೊಂಡಿದೆಯೋ, ಹಾಗೆ, ಸಮಸ್ತ ಪ್ರಪಂಚವೂ ನಿನ್ನ ಕಲೆಯಲ್ಲಿ ಒಂದಕ್ಕೊಂದು ಸೇರಿಕೊಂಡಿದೆ. ಆರು ವಿಧವಾಗಿರುವ ವರ್ಣವೇ ಮೊದಲಾದವೂ ಒಂಬತ್ತು ಬಗೆಯ ಕಾಲವೇ ಮೊದಲಾದವೂ, ಸ್ಥೈರ್ಯವೇ ಮೊದಲಾದ ಐದು ಕಲೆಗಳೂ, ನಿನ್ನ

ದಿನಮಣಿ ಬಿಂಬಾತ್ಕಿರಣ ಗಣಾ ಇವ
ತಸ್ಯಾಸ್ತ್ವತ್ತಃ ಸಕಲಮಭೂತ್ ।
ತಸ್ಮಾತ್ತ್ವತ್ತೋ ನಾನ್ಯತ್ಕಿಂಚನ
ದೃಶ್ಯಾಽದೃಶ್ಯಂ ಜಗದಖಿಲಂ ॥೪೨॥

ದೇವೇಶಿ ತ್ವದ್ದುರ್ಘಟ ಶಕ್ತ್ಯಾ
ಚ್ಛಾದಿತನೇತ್ರಾಸ್ತ್ವದ್ರೂಪಂ ।
ಜಾನೀಯುಸ್ತೇ ಕಥಮಿಹ ವಿಬುಧಾಃ
ಪಾಲಯ ಸರ್ವಾನ್ ಸುರಸಂಘಾನ್ ॥೪೩॥

ಏಷ ಮಹೇಂದ್ರ ಸ್ತವ ಪದ ಸವಿಧೇ
ಸ್ತಬ್ಧತನುಸ್ತ್ವಾಂ ನ ವಿಜಾನನ್ ।
ಈಷದ್ದೃಷ್ಟ್ಯಾ ಕರುಣಾರಸಯಾ
ಪಾಹಿ ಶತಕ್ರತು ಮಮರೇಶಂ ॥೪೪॥

ಚಿಚ್ಛಕ್ತಿಸ್ವರೂಪಗಳೇ ಆಗಿವೆ. ನಿನ್ನ ಚಿಚ್ಛಕ್ತಿಗಿಂತ ಬೇರೆಯಾದದ್ದು ಯಾವುದೂ ಇಲ್ಲ. ಅತ್ಯಂತ ಶ್ರೇಷ್ಠವಾದ ಜ್ಞಾನವೆಂಬ ಸ್ವರೂಪದಿಂದ ಶಿವಸ್ವರೂಪಳಾದ ನೀನೊಬ್ಬಳೇ ಎಲ್ಲಕ್ಕೂ ಮೊದಲಿನವಳಾಗಿ, ನೋಡತಕ್ಕ, ಹೇಳುವ, ಮಾತನಾಡುವ ಎಲ್ಲಾ ವಸ್ತುಗಳ ಸ್ವರೂಪಳೂ, ನೀನೇ ಆಗಿದ್ದೀಯೆ. ನಿನಗಿಂತ ಬೇರೆ ಯಾವುದೂ ಇಲ್ಲ. ಇಂತಹ ನಿನ್ನ ಸ್ವರೂಪವನ್ನು ಸ್ತೋತ್ರಮಾಡಲು ಶಕ್ತರಾರು. ? ॥೩೯-೪೦-೪೧॥

ಸೂರ್ಯನ ಬಿಂಬದಿಂದ ಕಿರಣಗಳ ಸಮೂಹದಂತೆ, ನಿನ್ನಿಂದ ಸಮಸ್ತ ಪ್ರಪಂಚ ಸೃಷ್ಟಿಯೂ ಆಯಿತು. ಆದ್ದರಿಂದ ಇಂದ್ರಿಯಗಳಿಗೆ ಗೋಚರವಾಗುವ ಮತ್ತು ಆಗದಿರುವ ಸಮಸ್ತ ಪ್ರಪಂಚವೂ ನಿನ್ನಿಂದಲೇ ಉಂಟಾಗಿದೆ. ಇನ್ನೊಬ್ಬರಿಂದಲೂ ಅಲ್ಲ. ಎಲ್ಲಾ ದೇವತೆಗಳಿಗೂ ಈಶ್ವರಿಯಾದ ದೇವಿಯೇ, ನಿನ್ನ ಅಭೇದ್ಯವಾದ ಶಕ್ತಿಯಿಂದ ಮಂಕಾಗಿರುವ ಕಣ್ಣುಗಳುಳ್ಳ ದೇವತೆಗಳು ನಿನ್ನ ಶ್ರೇಷ್ಠವಾದ ಸ್ವರೂಪವನ್ನು ಹೇಗೆ ತಾನೇ ತಿಳಿದಾರು ? ಆದ್ದರಿಂದ ಓ ತಾಯಿಯೇ, ಎಲ್ಲಾ ದೇವತೆಗಳ ಈ ಸಮೂಹಗಳನ್ನೂ ದಯವಿಟ್ಟು ಕಾಪಾಡು. ನಿನ್ನ ಸ್ವರೂಪವನ್ನು ತಿಳಿಯಲಾರದೇ ದೇವೇಂದ್ರನು ನಿನ್ನ ಪಾದದ ಸಮೀಪದಲ್ಲಿ ಜಡವಾದ ಶರೀರವುಳ್ಳವನಾಗಿದ್ದಾನೆ. ಆದ್ದರಿಂದ ಓ ತಾಯಿಯೇ, ದೇವತೆಗಳಿಗೆ ಅಧಿಪತಿಯಾದ ಇಂದ್ರನಮೇಲೆ

ಇತಿ ಸಂಸ್ತುತ್ಯ ಗೀರ್ವಾಣ ಗುರುಃ ಪರಮಹೇಶ್ವರೀಂ ।
ನತ್ವಾ ಭೂಯಃ ಪ್ರಾರ್ಥನಯಾ ಪ್ರಸಾದಂ ಯೋಜಯದ್ಧರಾ ॥೪೫॥

ಅಥ ತಸ್ಯಾಃ ಕೃಪಾದೃಷ್ಟಿಲೇಶ ಪೀಯೂಷ ಸಂಪ್ಲುತಃ ।
ಇಂದ್ರಃ ಪುರೇವ ಪ್ರಕೃತಿಂ ಗತೋಽಹಂ ಸ್ತಂ ಭವರ್ಜಿತಃ ॥೪೬॥

ಜ್ಞಾತ್ವಾ ವಿಶ್ವೇಶ್ವರೀಂ ಸಮ್ಯಗ್ಗುರೋ ರ್ವಾಕ್ಯಾದ್ಯಥಾವಿಧಿ ।
ಭಕ್ತ್ಯಾ ಪರಮಯಾ ಯುಕ್ತೋ ದೇವೀಂ ಸರ್ವೋತ್ತಮೋತ್ತಮಾಂ ॥೪೭॥

ಪರಾಶಕ್ತಿಂ ಸರ್ವಜಗನ್ನಿದಾನಂ ಶುದ್ಧಚಿನ್ಮಯೀಂ ।
ಭೂಯಃ ಪ್ರಣಮ್ಯ ಸಾಷ್ಟಾಂಗಂ ಕೃತಾಂಜಲಪುಟೋ ಹರಿಃ ॥೪೮॥

ಭಕ್ತ್ಯಾ ಗೃಹೀತ ಸುಸ್ವಾಂತಃ ಕಿಞ್ಚಿದ್ಧ್ರೀನತ ಕಂಧರಃ ।
ಅಸ್ತೌಷೀಲ್ಲೋಕಜನನೀಂ ಮಧುಕೋಮಲ ವಾಗ್ಗಣೈಃ ॥೪೯॥

ಶೃಣ್ವತಾಂ ಸರ್ವದೇವಾನಾಂ ಸನಿಧೇ ಬಲಶಾಸನಃ ।
ತಸ್ಯಾಃ ಕೃಪಾದೃಷ್ಟಿಲೇಶಾಚ್ಛಿನ್ನೋ ಮಾಯಾ ಸುಬಂಧನಃ ॥೫೦॥

ನಿನ್ನ ಕರುಣಾಕಟಾಕ್ಷವನ್ನು ದಯವಿಟ್ಟು ಸ್ವಲ್ಪ ಬೀರಿ ಇವನನ್ನು ರಕ್ಷಿಸು. ||೪೨-೪೩-೪೪||

ಹೀಗೆ ದೇವತೆಗಳಿಗೆ ಗುರುವಾದ ಬೃಹಸ್ಪತಿಯು ಶ್ರೇಷ್ಠಳಾದ ಮಹೇಶ್ವರನ ಪತ್ನಿಯಾದ ಮಹೇಶ್ವರಿಯನ್ನು ಸ್ತೋತ್ರಮಾಡಿ, ನಮಸ್ಕಾರವನ್ನು ಮಾಡಿ, ಇನ್ನೂ ಅನೇಕಾವರ್ತಿ ಪ್ರಾರ್ಥನೆಮಾಡಿ, ದೇವಿಯು ಇಂದ್ರನಿಗೆ ಪ್ರಸನ್ನಳಾಗುವಂತೆ ಮಾಡಿದನು. ಅನಂತರದಲ್ಲಿ ಇಂದ್ರನು ವಿಶ್ವೇಶ್ವರನ ಪತ್ನಿಯ ಮಹಿಮೆಯನ್ನರಿತು, ಗುರುವಾದ ಬೃಹಸ್ಪತಿಯ ಮಾತಿನಂತೆ ಶಾಸ್ತ್ರೋಕ್ತ ಕ್ರಮದಲ್ಲಿ ಪರಮಭಕ್ತಿಯಿಂದ ಅತ್ಯಂತ ಶ್ರೇಷ್ಠಳಾದ ಪರಾಶಕ್ತಿಸ್ವರೂಪಳಾದ ಎಲ್ಲಾ ಜಗತ್ತಿಗೂ ಮೂಲಕಾರಣಳಾದ, ಶುದ್ಧಚಿತ್ಸ್ವರೂಪಳಾದ, ದೇವಿಯನ್ನು ಪುನಃ ಪುನಃ ಸಾಷ್ಟಾಂಗ ನಮಸ್ಕಾರವನ್ನು ಮಾಡಿ ಕೈಮುಗಿದು ಸ್ತೋತ್ರಮಾಡಲಾರಂಭಿಸಿದನು. ||೪೫-೪೬-೪೭-೪೮||

ಬಲನೆಂಬ ರಾಕ್ಷಸನನ್ನು ಕೊಂದ ಇಂದ್ರನು ಬಹಳ ಭಕ್ತಿಯಿಂದ ಕೂಡಿದ ಮನಸ್ಸುಳ್ಳವನಾಗಿ ಸ್ವಲ್ಪ ನಾಚಿಕೆಯಿಂದ ಕತ್ತನ್ನು ತಗ್ಗಿಸಿದವನಾಗಿ, ಆಕೆಯ

ನಮಸ್ತೇ ತ್ರಿಪುರೇ ಮಾತರ್ನಮಃ ಪರಶಿವಾಶ್ರಯೇ ।
ನಮಃ ಕಾರಣ ಸತ್ಯಾಖ್ಯ ಪರಾನಂದ ಸುಧಾತ್ಮಿಕೇ ॥೫೦॥

ತ್ವಂ ಹಿ ಕಾರಣರೂಪಾಸಿ ಸದಸದ್ವಸ್ತು ಸಂತತೇಃ ।
ತ್ವತ್ತಃ ಸಕಲಮುತ್ಪನ್ನಂ ತ್ವಯಿ ಸರ್ವಂ ಪ್ರತಿಷ್ಠಿತಂ ॥೫೨॥

ತ್ವಯಿ ಪ್ರಲೀಯಮಾನಂ ಚ ತ್ವಂ ಸತ್ಯಂ ಸರ್ವವಸ್ತುಷು ।
ಮೃತ್ತಿಕೇವ ಘಟಾದೀನಾಂ ಭೂಷಣಾನಾಂ ಚ ಕಾಂಚನಂ ॥೫೩॥

ನಾನ್ಯತ್ತ್ವತ್ತೋ ಲೇಶತೋಽಪಿ ಜಗದೇತದ್ಭವೇತ್ಕ್ವಚಿತ್ ।
ಜಲಂ ವಿನಾ ಶೈತ್ಯಮಿವ ಪ್ರಕಾಶೋಽಗ್ನೇರಿವ ಕ್ವಚಿತ್ ॥೫೪॥

ಕರುಣಾಕಟಾಕ್ಷ ಲೇಶದಿಂದ ಅವನನ್ನು ಆವರಿಸಿದ್ದ ಮಾಯೆಯೆಂಬ ಕಟ್ಟು ನಾಶವಾಗಲಾಗಿ, ಎಲ್ಲಾ ದೇವತೆಗಳೂ ಕೇಳುತ್ತಿರುವಂತೆಯೇ ಅಮೃತದಂತೆ ಮನೋಹರವಾದ ಮಾತುಗಳಿಂದ ಲೋಕಜನನಿಯಾದ ದೇವಿಯನ್ನು ಸ್ತೋತ್ರಮಾಡಲು ಆರಂಭಿಸಿದನು. ॥೪೯-೫೦॥

ತಾಯಿಯಾದ ತ್ರಿಪುರಸುಂದರೀದೇವಿಗೆ ನಮಸ್ಕಾರಗಳು. ಪರಶಿವನನ್ನು ಆಶ್ರಯಿಸಿರುವ, ಜಗತ್ತಿಗೆ ಮೂಲಕಾರಣವಾದ ಸಚ್ಚಿದಾನಂದ ಸ್ವರೂಪಳೂ ಆದ, ಜಗನ್ಮಾತೆಗೆ ನಮಸ್ಕಾರಗಳು. ಸತ್ಯವಾದ ಮತ್ತು ಶೂನ್ಯವಾದ ಸ್ವರೂಪವುಳ್ಳ ಎಲ್ಲಾ ಪದಾರ್ಥಗಳಿಗೂ ನೀನೇ ಕಾರಣಳಾಗಿದ್ದೀಯೇ ? ನಿನ್ನಿಂದಲೇ ಸಮಸ್ತ ಜಗತ್ತೂ ಹುಟ್ಟಿದೆ. ನಿನ್ನಲ್ಲಿಯೇ ಎಲ್ಲಾ ಪ್ರಪಂಚವೂ ಸ್ಥಿತಿಯನ್ನು ಪಡೆದಿದೆ. ನಿನ್ನಲ್ಲಿಯೇ ಸಕಲ ಜಗತ್ತೂ ಲಯವನ್ನು ಹೊಂದುತ್ತದೆ. ಎಲ್ಲಾ ಪದಾರ್ಥಗಳ ಮಧ್ಯೆ ನೀನೇ ಸತ್ಯಸ್ವರೂಪಳಾಗಿರುವವಳು. ಗಡಿಗೆ ಮೊದಲಾದ ವಸ್ತುಗಳಲ್ಲಿ ಮಣ್ಣು ಹೇಗೋ, ಆಭರಣಗಳಲ್ಲಿ ಚಿನ್ನವು ಹೇಗೋ ಹಾಗೆ ನೀನೊಬ್ಬಳೇ ಪದಾರ್ಥಗಳಲ್ಲಿ ಸ್ಥಿರಳಾದವಳು. ನೀನಿಲ್ಲದೆ, ನಿನ್ನಲ್ಲಲ್ಲದೆ, ಯಾವುದೂ ಇರದು. ॥೫೧-೫೨-೫೩॥

ಓ ದೇವಿಯೇ, ನೀರಿಲ್ಲದೇ ಶೈತ್ಯವೂ, ಅಗ್ನಿಯಿಲ್ಲದೇ ಪ್ರಕಾಶವೂ ಹೇಗೆ ಉಂಟಾಗಲಾರದೋ ಹಾಗೆಯೇ ನೀನಿಲ್ಲದೇ ಬೇರೆಯಾರಿಂದಲೂ ಜಗತ್ತು ಉಂಟಾಗಿರಲಾರದು. ॥೫೪॥

ದ್ಯುಮಣೇಃ ಶಕ್ತಯೋ ಯದ್ವತ್ಕಿರಣಾಃ ಸಂಸ್ಥಿತಾ ಸ್ತಥಾ ।
ತ್ವತ್ತಃ ಸಕಲವಸ್ತೂನಿ ವಿಭಾಂತಿ ಪರಮೇಶ್ವರಿ ॥೫೫॥

ವಿಧೌ ಹರೌ ಶಿವೇ ತದ್ವದನ್ಯಸ್ಮಿನ್ ದೇವತಾಽಭಿಧೇ ।
ಯತ್ಸಾರಮಸ್ತಿ ತತ್ಸರ್ವಂ ತವ ಶಕ್ತೇರ್ವಿಜೃಂಭಿತಂ ॥೫೬॥

ನಾಮಾಽಽಕೃತಿ ಕ್ರಿಯಾ ಹೀನಾ ಸಂವಿನ್ಮಾತ್ರೈಕರೂಪಿಣೀ ।
ಅನುಗ್ರಹಾಯ ಲೋಕಾನಾಂ ರೂಪಂ ನಾಮ ಕ್ರಿಯಾಽಪಿ ತೇ ॥೫೭॥

ತಸ್ಮಾದನನ್ಯಃ ಸತತಂ ಪುರುಷಾರ್ಥೇಚ್ಛುರನ್ವಹಂ ।
ತ್ವಾ ಮೇವ ಭಕ್ತ್ಯಾ ಸೇವೇತ ಶ್ರಿತ ಚಿಂತಾಮಣಿಂ ಶಿವೇ ॥೫೮॥

ತ್ವಯಿ ಪ್ರಸನ್ನೇ ಕಿಮಿಹಾಽಸ್ತ್ಯ ಲಭ್ಯಂ
ತ್ವಯ್ಯಪ್ರಸನ್ನೇ ಕಿಮಿಹಾಽಸ್ತಿ ಲಭ್ಯಂ ।
ವಿಹಾಯ ಸೇವಾಂ ಜಗದೀಶಶಕ್ತೇ
ವೃಥೈವ ಚಾಽನ್ಯತ್ರ ರತಾ ವಿಮೂಢಾಃ ॥೫೯॥

ಓ ಪರಮೇಶ್ವರನ ಪತ್ನಿಯಾದ ದೇವಿಯೇ, ಕಿರಣಗಳು ಹೇಗೆ ಸೂರ್ಯನ ಶಕ್ತಿಸ್ವರೂಪಗಳಾಗಿವೆಯೋ ಹಾಗೆ ನಿನ್ನಿಂದಲೇ ಸಮಸ್ತ ಪ್ರಪಂಚವೂ ಬೆಳಗುತ್ತಿದೆ. ಬ್ರಹ್ಮ, ವಿಷ್ಣು ಶಿವ, ಅಥವಾ ಬೇರೆ ದೇವತೆಗಳು ಇವರೆಲ್ಲರಲ್ಲಿಯೂ, ಸಾರಭೂತ ವಾದ ಶಕ್ತಿಯೆಲ್ಲವೂ, ನಿನ್ನ ಶಕ್ತಿಯ ಪ್ರಭಾವದಿಂದಲೇ ಉಂಟಾಗಿವೆ. ನೀನು ವಾಸ್ತವವಾಗಿ ನಾಮರೂಪ ಮತ್ತು ಕ್ರಿಯೆಗಳೊಂದೂ ಇಲ್ಲದೇ ಕೇವಲ ಜ್ಞಾನ ಸ್ವರೂಪಳಾಗಿದ್ದೀಯೆ. ಆದರೆ ನೀನು ಲೋಕವನ್ನು ಅನುಗ್ರಹಿಸುವುದಕ್ಕಾಗಿ ಮಾತ್ರವೇ ನಾಮರೂಪ ಕ್ರಿಯಾದಿಗಳನ್ನು ತೆಗೆದುಕೊಳ್ಳುತ್ತೀಯೆ. ॥೫೫-೫೬-೫೭॥

ಓ ಶಿವನಪತ್ನಿಯಾದ ದೇವಿಯೇ, ಆದ್ದರಿಂದ ಪುರುಷಾರ್ಥಗಳನ್ನು ಇಚ್ಛಿಸುವ ಮನುಷ್ಯನು ಅನನ್ಯಭಾವದಿಂದ ಆಶ್ರಿತರಿಗೆ ಚಿಂತಾಮಣಿಯಂತೆ ಸಕಲ ಇಷ್ಟಾರ್ಥಗಳನ್ನೂ ನೀಡುವ ನಿನ್ನನ್ನೇ ಸೇವಿಸಬೇಕು. ನೀನು ಮೆಚ್ಚಿದರೆ ಸಿಕ್ಕದಿ ರುವ, ಮೆಚ್ಚದಿದ್ದರೆ ದೊರೆಯುವ, ವಸ್ತುವಾವುದು? ಹೀಗಿದ್ದರೂ ಜಗತ್ತಿಗೆ ಅಧಿದೇವತೆಯಾದ ಶಕ್ತಿಸ್ವರೂಪಳಾದ ದೇವಿಯೇ, ಯೋಚಿಸದೆ ಮೂಢರಾದ ಜನರು ನಿನ್ನ ಸೇವೆಯನ್ನು ಬಿಟ್ಟು ಬೇರೇ ದೇವತೆಗಳನ್ನು ವ್ಯರ್ಥವಾಗಿ ಉಪಾಸನೆ ಮಾಡು

ಮಿತೇಶ್ವರೇಣಾಪಿ ಹಿ ಸಂಪ್ರಬದ್ಧಾ
ವಿನಾ ತದಾಽರಾಧನತೋ ನ ಮುಕ್ತಾಃ ।
ಮಹೇಶಶಕ್ತ್ಯಾ ದೃಢಸಂಪ್ರಬದ್ಧಾ
ಸ್ತದಪ್ರಸಾದಾತ್ಕಥಮಸ್ತು ಮುಕ್ತಿಃ ॥೬೦॥

ಅನಾದಿಶಕ್ತ್ಯಾ ತವ ಮಾಯಯಾ ವೈ
ಬದ್ಧಾ ಜನಾ ಶ್ಚಿರಕಾಲಾ ದ್ವಿಮೂಢಾಃ ।
ಹಿತ್ವಾಽಽತ್ಮಶಕ್ತಿಂ ಪರದೇವತಾಂ ತ್ವಾಂ
ದೈವಾಽಭಿಧಾನ್ ಭಿನ್ನರೂಪಾನ್ನಮಂತಿ ॥೬೧॥

ತ್ವಮೇವ ಸರ್ವಾಗ್ರ್ಯತಯಾ ಪರಾತ್ಪರಾ
ತ್ವತ್ತೋ ಜಾತಾ ದೇವತಾಽಽಖ್ಯಾಃ ಕಥಂ ಸ್ಯುಃ ।
ಯದ್ವದ್ಧೇನ್ನೋಽನ್ಯೋ ನ ಭೂಷಾಗಣಃ ಸ್ಯಾ
ದಾಖ್ಯಾ ಶೇಷಾಸ್ತದ್ವದೀಶಾದಿ ದೇವಾಃ ॥೬೨॥

ತ್ತಾರೆ. ಸಂಸಾರ ಬಂಧಕ್ಕೆ ಸಿಕ್ಕಿದ ಜನರು ಬೇರೆ ಯಾವ ದೇವತೆಯ ಉಪಾಸನೆಯನ್ನು ಮಾಡಿದರೂ ನಿನ್ನನ್ನು ಉಪಾಸನೆ ಮಾಡದಿದ್ದರೆ ಮುಕ್ತರಾಗಲಾರರು. ಮಹೇಶ್ವರನ ಮಾಯಾ ಶಕ್ತಿಯಿಂದ ಚೆನ್ನಾಗಿ ಕಟ್ಟಲ್ಪಟ್ಟಿರುವ ಸಂಸಾರಿಗಳು ನಿನ್ನನ್ನು ಉಪಾಸನೆ ಮಾಡದೇ ಪರಿಚ್ಛಿನ್ನವಾದ ಐಶ್ವರ್ಯವುಳ್ಳ ಇತರ ದೇವತೆಗಳಿಂದಲೇ ಮುಕ್ತಿಯನ್ನು ಹೊಂದಲಾರರು. ॥೫೮-೫೯-೬೦॥

ಜನರು ನಿನ್ನ ಅನಾದಿಶಕ್ತಿರೂಪವಾದ ಮಾಯೆಯಿುದ ಬಂಧಿಸಲ್ಪಟ್ಟು, ಆತ್ಮಶಕ್ತಿಸ್ವರೂಪಳಾದ ಮತ್ತು ಪರದೇವತೆಯೂ ಆದ ನಿನ್ನ ಉಪಾಸನೆಯನ್ನು ಬಿಟ್ಟು, ನಿನ್ನ ಬೇರೆ ಬೇರೆ ಸ್ವರೂಪಗಳಾದ ದೇವತೆಗಳೂ ನೀನೆಂದರಿಯದೇ ನಮಸ್ಕರಿಸುತ್ತಾರೆ. ನೀನೇ ಎಲ್ಲಕ್ಕೂ ಮೊತ್ತಮೊದಲನೆಯವಳಾದ್ದರಿಂದ ಪರಾತ್ಪರಸ್ವರೂಪಳಾಗಿದ್ದೀಯೆ. ನಿನ್ನಿಂದಲೇ ಹುಟ್ಟಿದ ಅವರಿಗೆ ದೇವತೆಯೆಂಬ ಹೆಸರೂ ಸಲ್ಲುವುದು! ಆಭರಣಸಮೂಹವು ಚಿನ್ನಕ್ಕಿಂತ ಬೇರೆಯಾಗಿ ಹೇಗಲ್ಲವೋ, ಮತ್ತು ಚಿನ್ನದ ಸ್ವರೂಪಗಳೇ ಹೇಗೋ, ಹಾಗೆ ಈಶ್ವರನೇ ಮೊದಲಾದ ದೇವತೆಗಳು ಬೇರೆ ಬೇರೆ ಹೆಸರುಗಳನ್ನು ಹೊಂದಿದ ನಿನ್ನ ರೂಪಾಂತರಗಳೇ ಆಗಿದ್ದಾರೆ. ಚೆನ್ನಾಗಿ ವಿಮರ್ಶೆ ಮಾಡಿದರೆ ಈಶ್ವರನೇ ಮೊದಲಾದವರಿಗೆ ಈಶ್ವರ ಪ್ರಭಾವ ಬಂದಿರುವುದೂ ನಿನ್ನ

ಈಶಾದ್ಯೇಷ್ವಪ್ಯಂ ತತ ಸ್ತ್ವೀಶ್ವರತ್ವಂ
ಸರ್ವೇಶ್ಯಾಸ್ತೇಽನುಗ್ರಹಸ್ಯೈವ ಲೇಶಃ ।
ತದ್ವ್ಯಾಮೋಹೋ ಜಾಹ್ನವೀ ಮ(ಂ)ತಿಸಂ(ಕೆ)ಸ್ಥಾಂ
ಹಿತ್ವಾ ಕುಲ್ಯಾನ್ವೇಷಕಾ ದಾವದಗ್ಧಾಃ ॥೬೩॥

ಸತ್ತ್ವಂ ಮೂಢಂ ಮೃತಕೇ ದೇಹಕಾಽಖ್ಯೇ
ಸರ್ವೇಶತ್ವಾಽದ್ಯಭಿಮಾನೇನ ಯುಕ್ತಂ ।
ಮಾತರ್ಭೂಯಸ್ತ್ವಘಕೃತ್ಯಂ ದುರೀಹಂ
ತ್ವತ್ತೋಽನ್ಯಾ ಕಾ ರಕ್ಷಿತುಂ ಮಾಂ ಸಮರ್ಥಾ ॥೬೪॥

ಸಾ ತ್ವಂ ವಿಶ್ವಪ್ರಸವಿತ್ರೀ ಪರಾಂಬಾ
ಸರ್ವಂ ಮೇಽಘಂ ಕ್ಷಂತು ಮೇವಾಽರ್ಹಸೀತಿ ।
ನ ಪ್ರಾರ್ಥ್ಯಾ ಸ್ವೇ ತೋಕಕೇ ಮಾತುರೇಷಾ
ಕ್ಷಾಂತಿರ್ಯಸ್ಮಾತ್ಸಹಜಾ ಸುಪ್ರಸಿದ್ಧಾ ॥೬೫॥

ಅನುಗ್ರಹಲೇಶಮಾತ್ರದಿಂದಲೇ ಎಂದು ನಿಶ್ಚಯವಾಗಿ ಹೇಳಬಹುದು. ಹೀಗಿದ್ದರೂ ಸಂಸಾರವೆಂಬ ಕಾಡುಗಿಚ್ಚಿನಿಂದ ಸುಡಲ್ಪಡುತ್ತಿರುವ ಜೀವರು ನಿನ್ನನ್ನು ಬಿಟ್ಟು ಬೇರೇ ದೇವತೆಗಳನ್ನು ತಮ್ಮ ಆತ್ಮೋದ್ಧಾರಕ್ಕಾಗಿ ಆಶ್ರಯಿಸಿದರೆ ಅವರನ್ನು ಶುದ್ಧ ವಾದ ನೀರಿನಿಂದ ಪವಿತ್ರವಾಗುವುದಕ್ಕೆ ಗಂಗಾನದಿಯೇ ಹತ್ತಿರವಿದ್ದರೂ ಕುಂಟೆ ಯನ್ನು ಹುಡುಕುವ ಅಜ್ಞಾನಿಗಳೆಂದೇ ತಿಳಿಯಬೇಕು. ॥೬೧-೬೨-೬೩॥

ಇಂತಹ ನಿನ್ನ ಶ್ರೇಷ್ಠಸ್ವರೂಪವನ್ನರಿಯದೇ ಮರಣಸ್ವಭಾವವುಳ್ಳ ಈ ದೇಹದಲ್ಲಿ ಅಭಿಮಾನವನ್ನಿಟ್ಟು ನಾನೇ ಸರ್ವೇಶ್ವರನೆಂದು ಹೆಮ್ಮೆಪಡುತ್ತಿದ್ದ ಮೂಢನಾದ ನನ್ನನ್ನು ಓ ತಾಯಿಯೇ, ನನ್ನ ಪಾಪಗಳನ್ನೆಲ್ಲವನ್ನೂ ನಿವಾರಣೆ ಮಾಡುವುದರ ಮೂಲಕ ದಯೆಯಿಟ್ಟು ಉದ್ಧರಿಸಲು ನೀನಲ್ಲದೇ ಬೇರೆಯಾರು ಸಮರ್ಥರು ? ಇಂತಹ ಸರ್ವಪೂಜ್ಯವಾದ ಸರ್ವಶ್ರೇಷ್ಠವಾದ ಸ್ವರೂಪವನ್ನು ಧರಿಸಿರು ವವಳೂ, ಜಗತ್ತನ್ನು ಜಯಿಸಿದವಳೂ, ಆದ, ನೀನು ನನ್ನ ಪಾಪಗಳನ್ನೆಲ್ಲವನ್ನೂ ದಯವಿಟ್ಟು ಹೋಗಲಾಡಿಸಬೇಕೆಂದು ಬೇಡುತ್ತೇನೆ. ನೀನು ಜಗತ್ತಿಗೆ ತಾಯಿ ಯಾದ್ದರಿಂದ ನಿನ್ನ ಮಗುವೇ ಆದ ನಾನು ನಿನ್ನನ್ನು ಈ ವಿಷಯದಲ್ಲಿ ಹೆಚ್ಚಾಗಿ ಪ್ರಾರ್ಥಿಸಬೇಕಾದದ್ದೇ ಇಲ್ಲ. ಏಕೆಂದರೆ, ನಿನ್ನಲ್ಲಿ ತಾಯಿಯ ಕ್ಷಮಾಗುಣವು

ಯೋಽಹಂ ತೇಽಗ್ರೇ ಸ್ತಬ್ಧಕಾಯೋಽಭವಂ ವೈ
ನೈತದ್ರೋಷಾದಪಿ ತೇಽನುಗ್ರಹಃ ಸ್ಯಾತ್ ।
ರೋಷೇ ಸರ್ವಂ ಭಸ್ಮಶೇಷಂ ಸಮೀಯಾತ್
ಮಾತುಸ್ತೋಕೇ ತರ್ಜನೈವಾಽತಿ ದುಷ್ಟೇ ॥೬೬॥

ಏವಂ ಬಹುವಿಧೈರ್ವಾಕ್ಯೈಃ ಸ್ತುತ್ವಾ ಪೀಯೂಷ ಸಂಸ್ರವೈಃ ।
ಕ್ಷಮಾಪಯತ್ಪರಾಂ ದೇವೀಂ ಮಹೇಂದ್ರೋ ಭಕ್ತಿನಿರ್ಭರಃ ॥೬೭॥

ಶಕ್ರಮೇವಂ ವಿಧಂ ದೃಷ್ಟ್ವಾ ಪಾವಕಾದ್ಯಾ ದಿವೌಕಸಃ ।
ಜ್ಞಾತ್ವಾ ತಾಂ ಲೋಕಜನನೀ ಮಪರಾಧಮಪಿ ಸ್ವಕಂ ॥೬೮॥

ಭೀತಾಃ ಪ್ರಾಂಜಲಯೋ ನೇಮುರ್ದಂಡವಚ್ಚರಣಾಂತಿಕೇ ।
ಸ್ತುತ್ವಾ ವಿವಿಧಸೂಕ್ತೈಸ್ತಾಂ ಕ್ಷಾಮಯಾಮಾಸು ರಂಬಿಕಾಂ ॥೬೯॥

ತದಾ ಸಾ ಪರಮೇಶಾನೀ ವಿಧಿಮುಖ್ಯಾನ್ ದಿವಸ್ಪತೀನ್ ।
ಪ್ರಸನ್ನಾ ಪ್ರಾಹ ಕಲ್ಯಾಣೀ ಕಲ್ಯಾಣಂ ಪರಮಂ ವಚಃ ॥೭೦॥

ಸ್ವಾಭಾವಿಕವಾಗಿಯೂ ಮತ್ತು ಲೋಕಪ್ರಸಿದ್ಧವೂ ಆಗಿದೆ. ನಿನ್ನ ಕೋಪದಿಂದ ನಾನು ಜಡವಾದ ಶರೀರವುಳ್ಳವನಾಗಿದ್ದರೂ ಅದೂ ಸಹ ನನ್ನಲ್ಲಿ ಅನುಗ್ರಹವೇ ಎಂದು ಭಾವಿಸುತ್ತೇನೆ. ಏಕೆಂದರೆ ನಿನ್ನ ಕೋಪದಿಂದ ನನ್ನ ಪಾಪಗಳೆಲ್ಲವೂ ನಾಶವಾದವು. ಎಂಥಾ ಕೆಟ್ಟಮಗುವಾದರೂ ತಾಯಿಯ ಸ್ವಲ್ಪ ಕೋಪದಿಂದಲೇ ಅದರ ಪಾಪವೆಲ್ಲವೂ ಶಾಂತವಾಗುವುದಷ್ಟೇ ? ಹೀಗೆ ಅಮೃತವನ್ನೇ ಸುರಿಸುವಂಥಾ ಅನೇಕವಾದ ವಾಕ್ಯಗಳಿಂದ ಶ್ರೇಷ್ಠಳಾದ ದೇವಿಯನ್ನು ಪೂರ್ಣವಾದ ಭಕ್ತಿಯಿಂದ ಸ್ತುತಿಸಿ ಇಂದ್ರನು ತನ್ನನ್ನು ದೇವಿಯು ಕ್ಷಮಿಸುವಂತೆ ಮಾಡಿಕೊಂಡನು. ||೬೪-೬೫-೬೬-೬೭||

ಅಗ್ನಿಯೇ ಮೊದಲಾದ ದೇವತೆಗಳೂ ಈ ರೀತಿಯಾಗಿ ಇಂದ್ರನು ದೇವಿಯನ್ನು ಕ್ಷಮಾಪಣೆ ಬೇಡಿದ್ದನ್ನು ಕಂಡು, ತಾವೂ ದೇವಿಯನ್ನು ಲೋಕಕ್ಕೆ ಮಾತೃವನ್ನಾಗಿ ತಿಳಿದು ಭಯಗೊಂಡವರಾಗಿ ಅನೇಕ ಸೂಕ್ತಗಳಿಂದ ಲೋಕಕ್ಕೆ ತಾಯಿಯಾದ ಆಕೆಯನ್ನು ಸ್ತೋತ್ರಮಾಡಿ, ಆಕೆಯ ಚರಣಗಳಿಗೆ ದಂಡಾಕಾರವಾಗಿ ಪ್ರಣಾಮಮಾಡಿ ಕ್ಷಮೆಬೇಡಿದರು. ಆಗ ಪರಮೇಶ್ವರನ ಪತ್ನಿಯಾದ, ಮಂಗಳಕರಳಾದ ದೇವಿಯು ಬ್ರಹ್ಮನೇ ಮೊದಲಾದ ದೇವತೆಗಳ ಭಕ್ತಿಗೆ ಮೆಚ್ಚಿ ಮಂಗಳಕರವೂ ಮತ್ತು ಶ್ರೇಷ್ಠವೂ ಆದ ಮಾತನ್ನಾಡಿದಳು. ||೬೮-೬೯-೭೦||

ಭೋಭೋ ದೇವಾ ವಿಧೀಂದ್ರಾದ್ಯಾಃ ಶೃಣುಧ್ವಂ ವಚನಂ ಮಮ ।
ಅಪ್ರಮಾದಿಭಿರಾಯತ್ತೈಃ ಸ್ವಸ್ವಕಾರ್ಯೇಷು ಸಂತತಂ ॥೭೧॥

ಭವಿತವ್ಯಂ ಭವದ್ಭಿರ್ಮೇ ಶಾಸ್ತಿ ಪಾಲನತತ್ಪರೈಃ ।
ವಿಧಾತೃ ಹರಿರುದ್ರಾಣಾಂ ವಶೇ ಶಕ್ರ ಸದಾ ಭವ ॥೭೨॥

ಅನ್ಯೇ ದೇವಾ ಸ್ತ್ವದ್ವಶೇ ಚ ತಿಷ್ಠಂ ತ್ವಗ್ನಿಪುರೋಗಮಾಃ ।
ಮಯಿ ಸಂತತ ಸಂನ್ಯಸ್ತ ಭಾವಾ ಭವಥ ಸಾತ್ವಿಕಾಃ ॥೭೩॥

ವಿಧಾತೃ ಮುಖ್ಯಾ ಯೂಯಂ ಚ ಸೃಷ್ಟ್ಯಾದಿ ಕರಣೋದ್ಯತಾಃ ।
ಧ್ಯಾಯಂತೋ ಮಾಂ ಸದಾ ಸ್ವಾತ್ಮ ಸಂವಿದೇಕ ಸ್ವರೂಪಿಣೀಂ ॥೭೪॥

ಏವಂ ತಸ್ಯಾ ವಚಃ ಶ್ರುತ್ವಾ ಧಾತೃಮುಖ್ಯಾಃ ಸುರೇಶ್ವರಾಃ ।
ನತ್ವಾ ಬದ್ಧಾಂಜಲಿಪುಟಾಃ ಪ್ರಾರ್ಥಯಾಮಾಸು ರಂಬಿಕಾಂ ॥೭೫॥

ಮಾತರಸ್ಮಾಕಮನಿಶಂ ತವ ಪಾದಾಬ್ಜದರ್ಶನಂ ।
ತ್ವಯಿ ಚಾನನ್ಯ ಭಕ್ತಿಶ್ಚ ಭೂಯಾದೇತನ್ಮಹೇಶ್ವರಿ ॥೭೬॥

ಎಲೈ ಬ್ರಹ್ಮ, ಇಂದ್ರ ಮೊದಲಾದ ದೇವತೆಗಳೇ, ನಾನು ಈಗ ಹೇಳುವ ಮಾತನ್ನು ಕೇಳಿರಿ. ನೀವು ನನ್ನ ಆಜ್ಞೆಯನ್ನು ಪಾಲಿಸುವುದರಲ್ಲಿ ಆಸಕ್ತಿ ವಹಿಸಿ ನಿಮ್ಮ ನಿಮ್ಮ ಕೆಲಸಗಳಲ್ಲಿ ಜಾಗರೂಕರಾಗಿಯೂ ಮತ್ತು ನನ್ನ ಆಜ್ಞೆಯನ್ನು ಮೀರದಂತೆಯೂ ಯಾವಾಗಲೂ ವರ್ತಿಸಬೇಕು. ಎಲೈ ಇಂದ್ರನೇ, ನೀನು ಬ್ರಹ್ಮ, ವಿಷ್ಣು ಮತ್ತು ರುದ್ರರಿಗೆ ಯಾವಾಗಲೂ ಅಧೀನನಾಗಿರು. ಇತರ ಅಗ್ನಿಯೇ ಮುಂತಾದ ದೇವತೆಗಳು ನಿನಗೂ ಅಧೀನರಾಗಿರಲಿ. ನೀವು ಯಾವಾಗಲೂ ನಿಮ್ಮ ಕರ್ಮಗಳನ್ನೆಲ್ಲವನ್ನೂ ನನಗೆ ಸಮರ್ಪಿಸುತ್ತಾ ಸಾತ್ವಿಕರಾಗಿರಿ. ಬ್ರಹ್ಮನೇ ಮೊದಲಾದ ದೇವತೆಗಳು ಸೃಷ್ಟಿಯೇ ಮೊದಲಾದ ಕಾರ್ಯಗಳನ್ನು ನೆರವೇರಿಸುತ್ತಿರಲಿ. ನೀವೆಲ್ಲರೂ ಒಬ್ಬಳೂ ಮತ್ತು ಜ್ಞಾನಸ್ವರೂಪಳೂ ಆದ ನನ್ನನ್ನೇ ಧ್ಯಾನಿಸುತ್ತಾ ನಿಮ್ಮ ನಿಮ್ಮ ಕರ್ಮಗಳಲ್ಲಿ ತೊಡಗಿರಿ. ||೭೧-೭೨-೭೩||

ದೇವಿಯ ಈ ಮಾತನ್ನು ಕೇಳಿ ಬ್ರಹ್ಮನೇ ಮೊದಲಾದ ದೇವಶ್ರೇಷ್ಠರು ದೇವಿಯನ್ನು ನಮಸ್ಕರಿಸಿ ಕೈಮುಗಿದುಕೊಂಡು ಮುಂದೆ ಹೇಳುವಂತೆ ಪ್ರಾರ್ಥನೆ ಮಾಡಿಕೊಂಡರು. ಓ ತಾಯಿಯಾದ ಮಹೇಶ್ವರನ ಪತ್ನಿಯೇ, ನಮಗೆ ಯಾವಾ

ಏತಾವತಿ ಸಮೃದ್ಧೇ ತು ಸರ್ವಂ ಸಂಪನ್ನಮೇವ ನಃ ।
ಪ್ರಾಪ್ತೇ ಕಲ್ಪತರೌ ಚಾಽನ್ಯನ್ನಪ್ರಾಪ್ಯಂ ಶಿಷ್ಯತೇ ಕ್ವಚಿತ್ ॥೭೭॥

ಭಕ್ತಿಲಕ್ಷ್ಮೀ ಸಮೃದ್ಧಾನಾಂ ಕಿಮನ್ಯೈಃ ಫಲ್ಗು ಭಾವನೈಃ ।
ತದ್ರಿಕ್ತಾ ನಾಮಪಿ ಪ್ರಾಪ್ತೈಃ ಕಿಂ ಚಿಂತಾಮಣಿ ಕೋಟಿಭಿಃ ॥೭೮॥

ಚಿಂತಾಮಣಿ ಗಣೈರ್ದೇವಿ ದೀಯತೇ ಸಭಯಂ ಫಲಂ ।
ತ್ವತ್ಪಾದ ಭಕ್ತಿ ಲೇಶೋಽಪಿ ಪ್ರಯಚ್ಛತ್ಯಭಯಂ ಫಲಂ ॥೭೯॥

ತಸ್ಮಾದಭಯ ಮನ್ವಿಚ್ಛುಃ ಶ್ರಯೇತ್ತ್ವತ್ಪಾದಪಂಕಜಂ ।
ಸದಾ ನೋ ದಿಶ ಸದ್ಭಕ್ತಿಂ ಕಿಮನ್ಯದ್ಯಾಚಿತೇನ ನಃ ॥೮೦॥

ಇತಿ ಬ್ರಹ್ಮಾದಿ ವಾಕ್ಯಂ ಸಾ ಶ್ರುತ್ವಾ ಲೀಲಾಽತ್ತ ವಿಗ್ರಹಾ ।
ಉಕ್ತ್ವಾ ತಥಾಽಸ್ತ್ವಿತಿ ತತಸ್ತತ್ರೈವಾಽಂತರ ಧೀಯತ ॥೮೧॥

ಗಲೂ ನಿನ್ನ ಪಾದಕಮಲದ ದರ್ಶನವು ಮತ್ತು ನಿನ್ನಲ್ಲಿ ಅನನ್ಯವಾದ ಭಕ್ತಿಯೂ ಉಂಟಾಗಲಿ. ಇಷ್ಟನ್ನು ನೀನು ನಮಗೆ ದಯವಿಟ್ಟು ದಯಪಾಲಸಿದರೆ ನಮಗೆ ಎಲ್ಲಾ ಇಷ್ಟಾರ್ಥಗಳೂ ಲಭಿಸಿದ ಹಾಗೆಯೇ ಆಗುತ್ತವೆ. ಏಕೆಂದರೆ ಕಲ್ಪವೃಕ್ಷವೇ ಸಿಕ್ಕಿದರೆ ಏನುತಾನೇ ಲಭಿಸಲಾರದು ? ||೭೫-೭೬-೭೭||

ಭಕ್ತಿಯೆಂಬ ಐಶ್ವರ್ಯವು ಸಮೃದ್ಧಿಯಾಗಿರುವ ಜನರಿಗೆ ಬೇರೆ ಅಲ್ಪವಾದ ಭಾವನೆಗ್ಳಿಂದ ಆಗಬೇಕಾದದ್ದೇನು ? ದರಿದ್ರರೂ ಸಹ ಭಕ್ತಿಯೆಂಬ ಐಶ್ವರ್ಯ ವನ್ನು ಹೊಂದಿದ್ದರೆ ಕೋಟ್ಯಾಂತರ ಚಿಂತಾಮಣಿಗಳೆಂಬ ರತ್ನಗಳನ್ನೂ ಆವರು ಅಪೇಕ್ಷಿಸಬೇಕಾದುದಿಲ್ಲ. ಓ ದೇವಿಯೇ, ಎಷ್ಟೇ ಚಿಂತಾಮಣಿಗಳಿದ್ದರೂ ಅದ ರಿಂದಾಗುವ ಪ್ರಯೋಜನವಾದರೂ ಅದರ ಜೊತೆಯಲ್ಲಿ ಭಯವೂ ಉತ್ಪನ್ನವಾಗು ವುದು. ಆದರೆ ನಿನ್ನ ಪಾದದ ಭಕ್ತಿಯು ಭಯವಿಲ್ಲದ ಫಲವನ್ನು ಕೊಡುವುದು. ಆದುದರಿಂದ ಅಭಯವನ್ನು ಅಪೇಕ್ಷಿಸುವ ಮನುಷ್ಯನು ನಿನ್ನ ಪಾದಕಮಲವನ್ನು ಆಶ್ರಯಿಸಬೇಕು. ಓ ದೇವಿಯೇ, ಆದ್ದರಿಂದ ನೀನು ದಯವಿಟ್ಟು ನಮಗೆ ಸದ್ಭಕ್ತಿಯನ್ನು ಕೊಡು. ನಾವು ಇನ್ನೇನನ್ನೂ ನಿನ್ನನ್ನು ಬೇಡಬೇಕಾದದ್ದಿಲ್ಲ. ||೭೮-೭೯-೮೦||

ಬ್ರಹ್ಮನೇ ಮೊದಲಾದ ದೇವತೆಗಳ ಆ ಮಾತನ್ನು ಕೇಳಿ ಲೀಲೆಯಿಂದ ಶರೀರವನ್ನು ಧರಿಸಿದ್ದ ಆ ದೇವಿಯು ಅವರಿಗೆ ಹಾಗೆಯೇ ಆಗಲೆಂದು ಹೇಳಿ,

ಅಂತರ್ಧಿಮಾಗತಾಯಾಂ ತು ತಸ್ಯಾ ಮಿಂದ್ರಾದಯಃ ಸುರಾಃ ।
ವಿಧಿಂ ಹರಿಂ ಶಿವಂ ನತ್ವಾ ಬಧ್ವಾಽಂಜಲಿ ಮಥೋ ವಚಃ ॥೮೨॥

ಪ್ರಾಹುರ್ವಿನೀತಭಾವೇನ ಪ್ರಶ್ರಯಾಽವನತೇನ ಚ ।
ವಿಧೇ ಮುರಾರೇ ಶಂಭೋ ನಃ ಕೃಪಯಾಽರ್ಹಥ ರಕ್ಷಿತುಂ ॥೮೩॥

ಪರಾಃಪರಾಧಾನ್ಮಹತಃ ಕಥಂಚಿದ್ಗುರುಣಾ ವಯಂ ।
ನೋಚಿತಾ ಶ್ಚಾಽಥ ನಾಂ ಭಾಮು ಸ್ತದ್ರೂಪಂ ವಾಸ್ತವಂ ತು ಯತ್ ॥೮೪॥

ತತ್ ಜ್ಞಾತುಂ ಕೃಪಯಾಽಸ್ಮಭ್ಯಂ ವದಂತು ಶ್ರಾವ್ಯಮಸ್ತಿ ಚೇತ್ ।
ತ್ವದ್ಗತೀ ನಥ ಕಿಂ ಕುರ್ನೋಽ ದಿಶಂತ್ವಾಽಜ್ಞಾಮತಃ ಪರಂ ॥೮೫॥

ಇತೀಂದ್ರಾಽದಿ ವಚಃ ಶ್ರುತ್ವಾ ಮುರಾರಿಃ ಪ್ರಾಹ ವಿಸ್ಮಿತಃ ।
ಶತಕ್ರತೋ ಶೃಣು ವಚೋ ಮಮ ಸಂಯುತ ಮಾನಸಃ ॥೮೬॥

ಇಯಂ ತು ಪರಮಾ ಶಕ್ತಿರ್ಯಾ ಸಮಸ್ತವಿಭಾವನಾ ।
ಸಾ ಶಕ್ತಿಃ ಪರಮೇಶಸ್ಯ ವಿಮರ್ಶಾಽಽಖ್ಯಾ ಮಹತ್ತರಾ ॥೮೭॥

ಅಲ್ಲಿಯೇ ಅಂತರ್ಧಾನವಾದಳು. ಆಕೆಯು ಅಂತರ್ಧಾನವಾಗಲು ಇಂದ್ರನೇ ಮೊದಲಾದ ದೇವತೆಗಳು ಬ್ರಹ್ಮಾ, ವಿಷ್ಣು, ಶಿವ ಈ ಮೂವರನ್ನೂ ವಂದಿಸಿ ಕೈಮುಗಿದುಕೊಂಡು ಬಹಳ ವಿನಯದಿಂದ ಬಗ್ಗಿಕೊಂಡು ಹೀಗೆ ಬಿನ್ನಯಿಸಿದರು.• ಬ್ರಹ್ಮಾ, ವಿಷ್ಣು ಮತ್ತು ಶಿವ, ತಾವು ಮೂವರೂ, ನಮ್ಮನ್ನು ದಯವಿಟ್ಟು ರಕ್ಷಿಸಬೇಕು. ||೮೧-೮೨-೮೩||

ನಾವು ಮಾಡಿದ ಮಹತ್ತರವಾದ ಪಾಪಗಳಿಂದ ಮುಕ್ತರಾಗಲು ಬಯಸುವೆವು. ದಯವಿಟ್ಟು ದೇವಿಯ ವಾಸ್ತವಸ್ವರೂಪವನ್ನು ಹೇಳಬೇಕು. ಅದನ್ನು ನಾವು ಕೇಳಲು ಅರ್ಹರಾದರೆ ದಯವಿಟ್ಟು ನಮಗೆ ಈ ವಿಷಯವನ್ನು ತಿಳಿಯಿಸಬೇಕು. ಅಲ್ಲದೇ ಇನ್ನುಮುಂದೆ ನಮ್ಮ ಕರ್ತವ್ಯಗಳೇನೆಂಬುದನ್ನೂ ಸಹ ಅಪ್ಪಣೆಕೊಡಿಸಬೇಕು. ವಿಷ್ಣುವು ಇಂದ್ರನೇ ಮೊದಲಾದ ದೇವತೆಗಳ ಮಾತನ್ನು ಕೇಳಿ ಮುಗುಳುನಗೆಯಿಂದ ಈ ರೀತಿಯಾಗಿ ಹೇಳಿದನು. ಎಲೈ ಇಂದ್ರನೇ, ಎಲ್ಲರೂ ವಿಶೇಷವಾಗಿ ಭಾವಿಸಬೇಕಾದ ಶಕ್ತಿಯ ಸ್ವರೂಪವೇ ಈಕೆಯೆಂದು ತಿಳಿ. ಪರಮೇಶ್ವರನ

ಮಹಾಽಕಾಶಾಽತ್ಮಿಕಾ ಯಸ್ಯಾಂ ಜಗದೇತದ್ವಿರಾಜತೇ ।
ಸೇಯಂ ದ್ರಷ್ಟ್ರಾಽಽತ್ಮನಾ ಭೂತ್ವಾ ಜಗದ್ವ್ಯಾಪ್ಯ ವ್ಯವಸ್ಥಿತಾ ॥೮೮॥

ದೃಶ್ಯತೇ ಯಜ್ಜಗದಿದಮಿತಿ ತದ್ರೂಪಮುಚ್ಯತೇ ।
ದೃಶ್ಯಂ ತು ದ್ವಿವಿಧಂ ಪ್ರೋಕ್ತಂ ಕಾಲದೇಶವಿಭೇದತಃ ॥೮೯॥

ಕಾಲಃ ಕ್ರಿಯಾಮಯೋ ರಯೋ ದೇಶೋ ಮೂರ್ತಿಮಯಃ ಸ್ಮೃತಃ ।
ವರ್ಣಃ ಪದಂ ತಥಾ ಮಂತ್ರ ಇತಿ ಕಾಲ ಸ್ತ್ರಿಧಾ ಸ್ಥಿತಃ ॥೯೦॥

ಕಲಾ ತತ್ವಂ ಚ ಭುವನಮಿತಿ ದೇಶೋಽಪಿ ವೈ ತ್ರಿಧಾ ।
ಷಡಧ್ವನಾವಸ್ನಾ ಚೈತತ್ತು ಪ್ರೋಕ್ತಂ ಷಟ್ಸಂಘರೂಪತಃ ॥೯೧॥

ಸ್ವಕಾರಣಾಽತ್ಮಕಂ ಕಾರ್ಯಂ ತರೋರ್ಬೀಜಾತ್ಮನಾ ಯಥಾ ।
ತೇನ ವರ್ಣಾಽದಯಃ ಕಾಲಃ ಕಲಾಽದಿರ್ದೇಶ ಉಚ್ಯತೇ ॥೯೨॥

"ವಿಮರ್ಶಾ" ಎಂಬ ಹೆಸರುಳ್ಳ ಅತ್ಯಂತ ಮಹತ್ವವುಳ್ಳ ಶಕ್ತಿಯೇ ಈಕೆಯೆಂದು ತಿಳಿ. ||೮೪-೮೫-೮೬-೮೭||

ಈ ಶಕ್ತಿಯು ಮಹಾಕಾಶಸ್ವರೂಪವಾಗಿದೆ. ಇದರಲ್ಲಿ ಈ ಪ್ರಪಂಚವೆಲ್ಲವೂ ಪ್ರಕಾಶಿಸುತ್ತಿದೆ. ಈ ಶಕ್ತಿರೂಪಳಾದ ತಾಯಿಯು ಸಾಕ್ಷಿಸ್ವರೂಪಳಾಗಿ ಈ ಪ್ರಪಂಚವನ್ನೆಲ್ಲವನ್ನೂ ವ್ಯಾಪಿಸಿಕೊಂಡಿರುತ್ತಾಳೆ. ಈ ಕಾಣುವ ಜಗತ್ತೆಲ್ಲವೂ ಆಕೆಯ ರೂಪವೇ ಎಂದು ತಿಳಿಯಬೇಕು. ಕಾಣಿಸುವ ಪದಾರ್ಥಗಳೆಲ್ಲವೂ ಕಾಲದೇಶಗಳ ಪ್ರಭೇದದಿಂದ ಎರಡು ವಿಧವಾಗಿದೆಯೆಂದು ತಿಳಿಯಬೇಕು. ಕಾಲವು ಕ್ರಿಯೆಯಿಂದ ಪೂರ್ಣವಾಗಿಯೂ ಶಬ್ದದಿಂದ ಪೂರ್ಣವಾಗಿಯೂ ಇದೆ. ದೇಶವು ಆಕಾರವುಳ್ಳದ್ದಾಗಿದೆ. ವರ್ಣ, ಪದ, ಮಂತ್ರ ಎಂಬುದಾಗಿ ಕಾಲವು ಮೂರು ವಿಧವಾಗಿದೆ. ಎಂದು ತಿಳಿಯಬೇಕು. ಕಲಾ, ತತ್ವ, ಭುವನ, ಎಂದು ದೇಶವೂ, ಮೂರು ವಿಧವಾಗಿದೆ. ಎಂದು ತಿಳಿಯಬೇಕು. ಈ ಮೂರು ವರ್ಗಗಳ ಹೆಸರನ್ನು ಹೊಂದಿರುವ ಈ ತತ್ವವು ಆರು ಅಂಶಗಳ ಸಂಘಸ್ವರೂಪವಾಗಿದೆ ಎಂದು ಹೇಳಲ್ಪಟ್ಟಿದೆ. ||೮೮-೮೯-೯೦-೯೧||

ಮರವು ವಾಸ್ತವವಾಗಿ ಬೀಜಸ್ವರೂಪವಾಗಿರುವಂತೆ ಕಾರ್ಯಗಳೆಲ್ಲವೂ ಕಾರಣಸ್ವರೂಪಗಳೇ ಎಂದು ತಿಳಿಯಬೇಕು. ಆದ್ದರಿಂದ ವರ್ಣವೇ ಮೊದಲಾದವೂ ಕಾಲ

ದ್ರಷ್ಟುಸ್ತದ್ದ್ವಯ ನಿರ್ಭಾನಾದ್ದ್ರಷ್ಟ್ರಾತ್ಮಕ ಮುದೀರಿತಂ ।
ತಸ್ಮಾದಖಿಲ ಮೇತದ್ವೈ ದ್ರಷ್ಟೃರೂಪಮುದೀರಿತಂ ॥೯೩॥

ತಂ ದ್ರಷ್ಟಾರಂ ಸ್ವಾತ್ಮರೂಪಂ ಚಿತಿಶಕ್ತಿ ಸ್ವರೂಪಿಣಂ ।
ದೃಶ್ಯ ದೇಹಾದಿತೋ ಭಿನ್ನಂ ಮತ್ವಾ ತಾಂ ಜ್ಞಾತುಮರ್ಹಸಿ ॥೯೪॥

ಇದಂ ಸಂಗ್ರಹತಃ ಪ್ರೋಕ್ತ ಮಾತ್ಮಶಕ್ತ್ಯವಬೋಧನಂ ।
ನ ಸಕೃಚ್ಛ್ರವಣಾಲ್ಲಭ್ಯಂ ತದ್ರೂಪಂ ಪಾರಮೇಶ್ವರಂ ॥೯೫॥

ಅನಂತಜನ್ಮಸ್ವಭ್ಯಸ್ತ ಮಿಥ್ಯಾಮಾರ್ಗ ನಿಷೇವಿಣಾಂ ।
ತಸ್ಮಾದೇತನ್ಮಯಾ ಪ್ರೋಕ್ತಂ ಧೃತ್ವಾಂತಃ ಶ್ರದ್ಧಯಾ ಸದಾ ॥೯೬॥

ತತ್ಪಾದಭಕ್ತ್ಯಾ ತಸ್ಯಾಂತಮಚಿರೇಣಾಧಿ ಗಚ್ಛಸಿ ।
ಶಕ್ರ ಪಾವಕ ಮುಖ್ಯೈಸ್ತ್ವಂ ದ್ಯುಲೋಕ ಮನುಪಾಲಯ ॥೯೭॥

ಸ್ವರೂಪವೇ ಆಗಿವೆ. ಮತ್ತು ಕಲಾ ಮುಂತಾದ ತತ್ವಗಳೂ, ದೇಶಸ್ವರೂಪವಾಗಿಯೇ ಇವೆಯೆಂತಲೂ ತಿಳಿಯಬೇಕು. ಕಾರ್ಯಕಾರಣಗಳೆರಡಕ್ಕೂ ಪ್ರಕಾಶವನ್ನು ಕೊಡುವುದರಿಂದ ನೋಡತಕ್ಕ ತತ್ತ್ವವು ಸಾಕ್ಷಿಸ್ವರೂಪವೆನಿಸಿಕೊಳ್ಳುತ್ತದೆ. ಆದ್ದರಿಂದ ಎಲ್ಲವೂ ವಾಸ್ತವವಾಗಿ ಸಾಕ್ಷಿಸ್ವರೂಪವೇ ಎಂದು ತಿಳಿಯಬೇಕು. ಇಂತಹ ಸಾಕ್ಷಿಸ್ವರೂಪಳೂ, ಎಲ್ಲರ ಆತ್ಮಸ್ವರೂಪಳೂ, ಜ್ಞಾನಶಕ್ತಿ ಸ್ವರೂಪಳೂ, ಕಾಣಿಸುವ ದೇಹಾದಿಗಳಿಗಿಂತ ಭಿನ್ನಳೂ, ಆದ ಶಕ್ತಿಯೇ ಆಕೆಯೆಂದು ತಿಳಿ. ॥೯೨-೯೩-೯೪॥

ಹೀಗೆ ಆತ್ಮಭೂತವಾದ ಶಕ್ತಿತತ್ವಸ್ವರೂಪವನ್ನು ನಿನಗೆ ಸಂಕ್ಷೇಪವಾಗಿ ತಿಳಿಯಿಸಿಕೊಟ್ಟಿದ್ದೇನೆ. ಪರಮೇಶ್ವರನಿಗೆ ಸಂಬಂಧಪಟ್ಟ ಮಹತ್ತರವಾದ ಈ ಶಕ್ತಿಸ್ವರೂಪದ ತಿಳಿವಳಿಕೆಯು ಒಂದೇಸಲ ಕೇಳಿದರೆ ಪೂರ್ಣವಾಗಿ ಗೊತ್ತಾಗಲಾರದು. ಅನೇಕಾನೇಕ ಜನ್ಮಗಳಲ್ಲಿ ಅಜ್ಞಾನಮಾರ್ಗದಲ್ಲೇ ಇದ್ದು ಅದೇ ಅಭ್ಯಾಸವಾಗಿರುವುದಾದ್ದರಿಂದ ಜನರು ಇದನ್ನು ಅನೇಕ ಸಲ ಕೇಳಿ ಜ್ಞಾನವನ್ನು ಹೊಂದಬೇಕು. ಆದ್ದರಿಂದ ನಾನು ಹೇಳಿದ ವಿಷಯಗಳನ್ನು ಬಹಳ ಶ್ರದ್ಧೆಯಿಂದ ಮನದಟ್ಟು ಮಾಡಿಕೊ. ದೇವಿಯ ಪಾದದಲ್ಲಿ ಭಕ್ತಿಯಿಡುವುದರಿಂದ ಜ್ಞಾನದ ಪರಾಕಾಷ್ಠದ ದೆಸೆಯನ್ನು ಜಾಗ್ರತೆಯಾಗಿ ಹೊಂದುತ್ತೀಯೆ. ಎಲೈ ಇಂದ್ರನೇ, ಅಗ್ನಿಯೇ ಮೊದಲಾದ ದೇವತೆಗಳೊಡನೆ ನೀನು ಸ್ವರ್ಗ ಲೋಕವನ್ನು ಆಳು. ॥೯೫-೯೬-೯೭॥

ಸ್ವಸ್ವಕಾರ್ಯೇ ನಿಯುಂಕ್ಷ್ವೈತಾನ್ ದೇವಾನ್ ಸತತ ಜಾಗ್ರತಃ ।
ಸದಾ ಹೃದಿ ಮಹಾಶಕ್ತಿಂ ಭಾವಯನ್ನುಕ್ತಮಾರ್ಗತಃ ॥೯೮॥

ಅಧಿಗಚ್ಛಾಭಯಂ ಮಾರ್ಗಮಂಜಸಾ ತ್ವಂ ಶತಕ್ರತೋ ।
ಏವಂ ಮುರಾರಿ ವಚನಂ ಶ್ರುತ್ವಾ ಬಲಿಭಿದಾದಯಃ ॥೯೯॥

ಪ್ರದಕ್ಷಿಣೀ ಕೃತ್ಯ ಧಾತೃಮುಖಾನ್ಲೋಕೇಶ್ವರಾನ್ ಸುರಾಃ ।
ಪ್ರಣಮ್ಯಾಜ್ಞಾಂ ಸಮಾದಾಯ ಜಗ್ಮುಃ ಸ್ವಂ ಸ್ವಂ ನಿವೇಶನಂ ॥೧೦೦॥

ಈಶಾನೋ ಹರಿ ಧಾತೃಭ್ಯಾಂ ಭಕ್ತ್ಯಾ ಸಮ್ಯಕ್ ಸಭಾಜಿತಃ ।
ಪಶ್ಯತೋ ಸ್ತತ್ಕ್ಷಣೇನೈವ ಗತೋಽಂತರ್ಧಿಂ ಮಹೇಶ್ವರಃ ॥೧೦೧॥

ಅಥ ನಾರಾಯಣಂ ಬ್ರಹ್ಮಾ ಸ್ತುತ್ವಾ ನತ್ವಾ ಯಥಾವಿಧಿ ।
ಯಯೌ ಸ್ವಭವನಂ ರಾಮ ಸರ್ವಲೋಕಪಿತಾಮಹಃ ॥೧೦೨॥

ಏವಂ ಸಾ ಪರಮಾ ಶಕ್ತಿಃ ಮಹಾದ್ಭುತತರಕ್ರಿಯಾ ।
ಸರ್ವದೇವೋತ್ತಮಾ ಸರ್ವಸಾಕ್ಷಿಣೀ ವಿಶ್ವಮೋಹಿನೀ ॥೧೦೩॥

ಎಲೈ ಇಂದ್ರನೇ, ದೇವತೆಗಳು ಯಾವಾಗಲೂ ಜಾಗರೂಕರಾಗಿ ತಮ್ಮ ತಮ್ಮ ಕೆಲಸಗಳನ್ನು ನಡೆಸಲು ಅಪ್ಪಣೆಮಾಡು. ಆದರೆ ನೀವೆಲ್ಲರೂ ಮಹಾಶಕ್ತಿ ಸ್ವರೂಪಳಾದ ದೇವಿಯನ್ನು ಮನಸ್ಸಿನಲ್ಲಿ ಭಾವಿಸುತ್ತಲೇ ನಿಮ್ಮ ನಿಮ್ಮ ಕೆಲಸಗಳನ್ನು ನಡೆಸುತ್ತಿರಬೇಕು. ಎಲೈ ಇಂದ್ರನೇ, ಹಿಂದೆ ಹೇಳಿದ ರೀತಿಯಲ್ಲಿ ಜಾಗ್ರತೆಯಾಗಿ ಅಭಯವಾದ ಮಾರ್ಗದಲ್ಲಿ ನಡೆಯುತ್ತಿರು. ವಿಷ್ಣುವು ಹೀಗೆ ಹೇಳಿದ್ದನ್ನು ಕೇಳಿ ಇಂದ್ರನೇ ಮೊದಲಾದ ದೇವತೆಗಳು, ಬ್ರಹ್ಮನೇ ಮೊದಲಾದ ಲೋಕದ ಅಧಿಪತಿಗಳಿಗೆ ಪ್ರದಕ್ಷಿಣೆಮಾಡಿ ನಮಸ್ಕರಿಸಿ, ಅವರ ಅಪ್ಪಣೆಯನ್ನು ಪಡೆದು ತಮ್ಮ ತಮ್ಮ ವಾಸಸ್ಥಾನಗಳಿಗೆ ತೆರಳಿದರು. ||೯೮-೯೯-೧೦೦||

ವಿಷ್ಣು, ಮತ್ತು ಬ್ರಹ್ಮ ಇವರಿಂದ ಭಕ್ತಿಪೂರ್ವಕವಾಗಿ ಚೆನ್ನಾಗಿ ಪೂಜಿಸಲ್ಪಟ್ಟ ಶಿವನೂ ಅವರು ನೋಡುತ್ತಿರುವಾಗಲೇ ತತ್‌ಕ್ಷಣದಲ್ಲಿ ಅಂತರ್ಧಾನವನ್ನು ಹೊಂದಿದನು. ಅನಂತರದಲ್ಲಿ ಎಲೈ ಪರಶುರಾಮನೇ, ಎಲ್ಲಾ ಲೋಕಕ್ಕೂ ಪಿತಾಮಹನಾದ ಬ್ರಹ್ಮನು ಶಾಸ್ತ್ರೋಕ್ತಕ್ರಮದಲ್ಲಿ ವಿಷ್ಣುವಿಗೆ ಸ್ತೋತ್ರ ಮತ್ತು ನಮಸ್ಕಾರಗಳನ್ನು ಮಾಡಿ, ತನ್ನ ಮನೆಯನ್ನು ಸೇರಿದನು. ಹೀಗೆ ಆ ಅತ್ಯುತ್ಕೃಷ್ಟಳಾದ

ನನು ಶ್ರುತಂ ಭಾರ್ಗವೈತತ್ಕುಮಾರ್ಯಾಖ್ಯಾನಮುದ್ಭುತಂ ।
ಯತ್ರ ಸಾ ಪರಮಾ ಶಕ್ತಿಃ ಕುಮಾರೀವಪುಷಾ ಸ್ವಯಂ ॥೧೦೪॥

ಇಂದ್ರಾಽದೀನಾಂ ಮೋಹನಾಶಮಕರೋತ್ಪರದೇವತಾ ।
ಇದಮಾಖ್ಯಾನ ಮಶುಭ ನಾಶನಂ ಶೃಣ್ವತಾಂ ಸದಾ ॥೧೦೫॥

ಶ್ರೀಪರಾಪಾದಸದ್ಭಕ್ತಿ ವರ್ಧನಂ ಪಾವನಂ ಮಹತ್ ।
ಶ್ರೋತವ್ಯಮೇ ತತ್ಸತತಂ ತ್ರಿಪುರಾ ಪ್ರೀತಿಮಿಚ್ಛತಾ ॥೧೦೬॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ
ಆತ್ಮಶಕ್ತಿಸ್ವರೂಪನಿರೂಪಣಂ ನಾಮ
ನವಮೋಽಧ್ಯಾಯಃ

ಶಕ್ತಿಸ್ವರೂಪಳಾದ ದೇವಿಯು ಅತ್ಯಂತ ಆಶ್ಚರ್ಯಕರವಾದ ಮಾಹಾತ್ಮ್ಯೆಯುಳ್ಳವಳೂ, ಎಲ್ಲಾ ದೇವತೆಗಳಿಗಿಂತಲೂ ಉತ್ತಮಳೂ, ಎಲ್ಲಕ್ಕೂ ಸಾಕ್ಷಿಸ್ವರೂಪಳೂ, ವಿಶ್ವಕ್ಕೆ ಮೋಹವನ್ನುಂಟುಮಾಡುವವಳೂ ಆಗಿದ್ದಾಳೆ. ಎಂದು ತಿಳಿ. ||೧೦೧-೧೦೨-೧೦೩||

ಎಲೈ ಪರಶುರಾಮನೇ, ಕುಮಾರಿಯಾದ ತ್ರಿಪುರಸುಂದರೀದೇವಿಯ ಈ ಕಥೆಯನ್ನು ಚೆನ್ನಾಗಿ ಕೇಳಿದೆಯಷ್ಟೆ. ಪರದೇವತೆಯೂ, ಪರಮಶಕ್ತಿಸ್ವರೂಪಳೂ ಆದ ದೇವಿಯು ಕುಮಾರಿಯ ರೂಪವನ್ನು ಧರಿಸಿ, ಇಂದ್ರನೇ ಮೊದಲಾದ ದೇವತೆಗಳ ಅಜ್ಞಾನವನ್ನು ಹಿಂದೆ ಹೇಳಿದ ರೀತಿಯಲ್ಲಿ ನಾಶಮಾಡಿದಳು. ಈ ಆಖ್ಯಾನವನ್ನು ಯಾರು ಕೇಳುತ್ತಾರೋ ಅವರಿಗೆ ಇದು ಯಾವಾಗಲೂ ಅಮಂಗಳಗಳನ್ನು ಹೋಗಲಾಡಿಸುವುದು. ಮತ್ತು ತ್ರಿಪುರಸುಂದರೀದೇವಿಯಲ್ಲಿ ಭಕ್ತಿಯನ್ನು ವೃದ್ಧಿಗೊಳಿಸುವ, ಚಿತ್ತಶುದ್ಧಿಕರವೂ ಮತ್ತು ಅತ್ಯಂತ ಮಹತ್ವವುಳ್ಳದ್ದೂ ಆದ ಈ ಕಥೆಯನ್ನು ತ್ರಿಪುರಾದೇವಿಯ ಮೆಚ್ಚಿಗೆಯನ್ನು ಬಯಸುವ ಮನುಷ್ಯನು ಯಾವಾಗಲೂ ಕೇಳಬೇಕು. ||೧೦೪-೧೦೫-೧೦೬||

ಇಲ್ಲಿಗೆ ತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ
ತ್ರಿಪುರಾತತ್ವಸ್ವರೂಪವನ್ನು ವಿವರಿಸಿರುವ
ಒಂಬತ್ತನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ದಶಮೋಽಧ್ಯಾಯಃ ||

ಹತ್ತನೆಯ ಅಧ್ಯಾಯವು

ಜಾಮದಗ್ನ್ಯಸ್ತು ಸಂಶ್ರುತ್ಯ ಕುಮಾರಾಖ್ಯಾನಮದ್ಭುತಂ ।
ವಿಸ್ಮಿತಃ ಪ್ರಾಹ ಮಧುರಂ ವಾಕ್ಯಂ ತಂ ಪ್ರಣತಸ್ತದಾ ॥೧॥

ಭಗವನ್ ಮಹದಾಶ್ಚರ್ಯ ಮಾಖ್ಯಾನಂ ಭವತೋದಿತಂ ।
ನ ಕದಾಚಿಚ್ಛ್ರುತಂ ಪೂರ್ವಂ ತ್ರಿಪುರಾಮಹಿಮೋನ್ನತಂ ॥೨॥

ಬ್ರಹ್ಮವಿಷ್ಣು ಹರೈರ್ಯೈವಂ ಪೂಜಿತಾ ಸಂಸ್ತುತಾ ತಥಾ ।
ತತಃ ಸರ್ವಾಧಿಕಾ ಸಾ ವೈ ತ್ರಿಮೂರ್ತಿ ಜನನೀ ಯತಃ ॥೩॥

ಅಹೋ ಮಯಾಽದ್ಯ ಭವತಃ ಕಥಾಽಮೃತ ರಸಂ ಮುಖಾತ್ ।
ನಿರ್ಗತಂ ಶ್ರುತಿರಂಧ್ರೇಣ ಪೀತಂ ಸ್ವಾಂತರುಜಾಽಪಹಂ ॥೪॥

ಪರಶುರಾಮನು ಅತ್ಯಂತ ಆಶ್ಚರ್ಯಕರವಾದ ತ್ರಿಪುರಸುಂದರೀದೇವಿಯು ಕುಮಾರಿಯ ಸ್ವರೂಪವನ್ನು ತೆಗೆದುಕೊಂಡು ಇಂದ್ರಾದಿದೇವತೆಗಳ ಮೋಹವನ್ನು ಹೋಗಲಾಡಿಸಿದ್ದನ್ನು ಕೇಳಿ ಬಹಳ ಆಶ್ಚರ್ಯಗೊಂಡವನಾಗಿ ಗುರುವಿಗೆ ನಮಸ್ಕರಿಸಿ ಮಧುರವಾದ ರೀತಿಯಿಂದ ಪ್ರಶ್ನೆಮಾಡಿದನು. ಪೂಜ್ಯರೇ, ತಾವು ಹೇಳಿದ ದೇವಿಯ ಕಥೆಯು ಬಹಳ ಆಶ್ಚರ್ಯಕರವಾಗಿತ್ತು. ತ್ರಿಪುರಾದೇವಿಯ ಮಹಿಮೆಯನ್ನು ವ್ಯಕ್ತಪಡಿಸುವ ಈ ಕಥೆಯನ್ನು ಹಿಂದೆ ನಾನು ಯಾವಾಗಲೂ ಕೇಳಿರಲಿಲ್ಲ. ಬ್ರಹ್ಮಾ, ವಿಷ್ಣು, ಮತ್ತು ಶಿವ ಇವರಿಂದಲೂ ಸ್ತೋತ್ರ ಮತ್ತು ಪೂಜೆಗಳನ್ನು ಮಾಡಿಸಿಕೊಳ್ಳುತ್ತಿರುವ ತ್ರಿಪುರಸುಂದರೀದೇವಿಯು ಎಲ್ಲರಿಗಿಂತಲೂ ಶ್ರೇಷ್ಠಳೂ ತ್ರಿಮೂರ್ತಿಗಳನ್ನೂ ಸೃಷ್ಟಿಸುವವಳೂ ಆಗಿದ್ದಾಳೆ. ||೧-೨-೩||

ಪೂಜ್ಯರಾದ ಗುರುಗಳೇ, ತಮ್ಮ ಮುಖದಿಂದ ಅಮೃತರಸಕ್ಕೆ ಸಮಾನವಾದ

ಕೃಪಯಾಽನು ಗೃಹೀತೋಽಹಂ ಶ್ರೀಮತಾ ಗುರುಮೂರ್ತಿನಾ ।
ಧನ್ಯೋಽಹಂ ಕೃತಕೃತ್ಯೋಽಹಂ ಯನ್ಮೇ ತುಷ್ಟೋ ಗುರುರ್ಭವಾನ್ ॥೫॥

ನೇದೃಶಂ ಶ್ರೀಕಥಾಸಾರಮಮೃತಂ ಪಿಬತೋ ಮಮ ।
ಕ್ಷುತ್ತೃಟ್ಪರಿಶ್ರಮೋ ನಿದ್ರಾ ಜಾಯತೇ ಜಾತು ಸಂತತಂ ॥೬॥

ಭಗವನ್ ತ್ವನ್ಮುಖೇಂದೂದ್ಯಚ್ಛ್ರೀ ಕಥಾಽಮೃತ ಸೇವನಾತ್ ।
ನ ತೃಪ್ತೋಽಸ್ಮಿ ಮನಾಕ್ಯೋಽಪಿ ಪ್ರತ್ಯುತ ತೃಷಿತೋಽಸ್ಮ್ಯಹಂ ॥೭॥

ಭೂಯಃ ಶ್ರೀತ್ರಿಪುರಾಂಬಾಯಾ ಲೀಲಾ ವಿಭವವರ್ಣನಂ ।
ಶ್ರೋತುಮಿಚ್ಛಾಮಿ ತನ್ಮಹ್ಯಂ ಕೃಪಯಾ ನಿಗದ ಪ್ರಭೋ ॥೮॥

ಏವಂ ಸಂಪ್ರಾರ್ಥಿತೋ ಭೂಯೋ ದತ್ತಾತ್ರೇಯೋ ಮಹಾಶಯಃ ।
ಸಂತುಷ್ಟೋ ಜಾಮದಗ್ನ್ಯಸ್ಯ ಜ್ಞಾತ್ವಾ ಶ್ರದ್ಧಾಽತಿರಿಕ್ತತಾಂ ॥೯॥

ಅತ್ಯಂತ ಆಶ್ಚರ್ಯಕರವಾದ ಕಥೆಯನ್ನು ಕೇಳಿ ನನ್ನ ಮನಸ್ಸಿನ ರೋಗಗಳೆಲ್ಲವೂ ನಾಶವಾದವು. ಗುರುಗಳಾದ ತಮ್ಮ ಅನುಗ್ರಹದಿಂದ ನಾನು ಇಂಥಾ ಕಥಾಮೃತವನ್ನು ಕೇಳಿದೆನು. ತಾವು ಹೀಗೆ ನನ್ನಲ್ಲಿ ವಾತ್ಸಲ್ಯವಿಟ್ಟು ಈ ಕಥೆಯನ್ನು ಹೇಳಿದ್ದರಿಂದ ನಾನೇ ಈಗ ಧನ್ಯನಾದೆನು. ಇಂಥಾ ಕಥಾಽಮೃತವನ್ನು ಪಾನಮಾಡುವಾಗಲೆಲ್ಲಾ ನನಗೆ ಹಸಿವು ಬಾಯಾರಿಕೆಗಳಾಗಲೀ ನಿದ್ರೆಯಾಗಲೀ ಬರುವುದೇ ಇಲ್ಲ. ||೪-೫-೬||

ಪೂಜ್ಯರೇ, ತಮ್ಮ ಮುಖಚಂದ್ರನಿಂದ ಹೊರಟ ಕಥೆಯೆಂಬ ಅಮೃತದ ಸೇವನೆಯಿಂದ ನಾನು ಇನ್ನೂ ಚೆನ್ನಾಗಿ ತೃಪ್ತಿಹೊಂದಿಲ್ಲ. ಅದಕ್ಕೆ ವಿರುದ್ಧವಾಗಿ ಇನ್ನೂ ಕೇಳಬೇಕೆಂಬ ಆಸೆಯೇ ಹೆಚ್ಚುತ್ತಿದೆ. ಪೂಜ್ಯರೇ, ಶ್ರೀ ತ್ರಿಪುರಾಂಬಿಕೆಯ ಲೀಲಾಮಹಿಮೆಯ ವರ್ಣನೆಗಳನ್ನು ಇನ್ನೂ ಕೇಳಲು ಬಯಸುತ್ತೇನೆ. ಆದ್ದರಿಂದ ತಾವು ದಯವಿಟ್ಟು ಇನ್ನೂ ಹೇಳಬೇಕು. ಹೀಗೆ ಮಹಾಶಯನಾದ ದತ್ತಾತ್ರೇಯನು ಪುನಃ ಪರಶುರಾಮನಿಂದ ಪ್ರಾರ್ಥಿಸಲ್ಪಟ್ಟವನಾಗಿ ಪರಶುರಾಮನ ಅತಿಶಯವಾದ ಶ್ರದ್ಧೆಯನ್ನು ಅರಿತು ಗುರುವಾದ ದತ್ತಾತ್ರೇಯನು ಬಹಳ ಸಂತೋಷಗೊಂಡವನಾಗಿ, ||೭-೮-೯||

ಉವಾಚ ತ್ರಿಪುರಾದೇವ್ಯಾ ಅವತಾರ ಕಥಾಃ ಶುಭಾಃ ।
ಶೃಣು ರಾಮಾಽಭಿಧಾಸ್ಯಾಮಿ ತ್ರಿಪುರಾಯಾಃ ಕಥಾಃ ಶುಭಾಃ ॥೧೦॥

ಯಾ ಚ ಶ್ರೀತ್ರಿಪುರಾ ಪ್ರೋಕ್ತಾ ಪರಮಾಽಕಾಶರೂಪಿಣೀ ।
ಯಸ್ಯಾಂ ಸರ್ವಮಿದಂ ವಿಶ್ವಂ ಪ್ರವಿಭಕ್ತಂ ಪ್ರಕಾಶತೇ ॥೧೧॥

ಸಾ ಚಿದಾನಂದಾಽದ್ವಯಾಽಽತ್ಮರೂಪಿಣೀ ಪರಮೇಶ್ವರೀ ।
ವಾಗಿಂದ್ರಿಯ ಮನೋಽತೀತಾ ಸಾಕ್ಷಿಣೀ ಸಕಲಾಶ್ರಯಾ ॥೧೨॥

ಸಾ ಭಕ್ತಕೃಪಯಾ ದೇವೀ ನಾನಾವಿಧ ತನುಕ್ರಿಯಾ ।
ತದ್ಭೇದ ಗಣನೇ ಶೇಷಃ ಸಹಸ್ರಾಽಸ್ಯೋಽಪಿ ನ ಪ್ರಭುಃ ॥೧೩॥

ತಸ್ಮಾತ್ಪ್ರಧಾನರೂಪಾಣಿ ಕಾನಿಚಿತ್ಕಥಯಾಮಿ ತೇ ।
ಆದ್ಯಾ ಕುಮಾರೀ ತತ್ಪ್ರೋಕ್ತಾ ತ್ರಿರೂಪಾಽನಂತರಾ ಮತಾ ॥೧೪॥

ಹೀಗೆ ಸಂತೋಷಪಟ್ಟ ದತ್ತಾತ್ರೇಯನು ಪರಶುರಾಮನಿಗೆ ಮಂಗಳಕರಳಾದ ತ್ರಿಪುರಸುಂದರೀದೇವಿಯ ಅವತಾರಕಥೆಗಳನ್ನು ಹೇಳಲು ಪ್ರಾರಂಭಿಸಿದನು.— ಎಲೈ ಪರಶುರಾಮನೇ, ನಾನು ಈಗ ಹೇಳುವ ತ್ರಿಪುರಸುಂದರೀದೇವಿಯ ಮಂಗಳ ಕರಗಳಾದ ಕಥೆಗಳನ್ನು ಸಾವಧಾನದಿಂದ ಕೇಳು. ಶ್ರೀ ತ್ರಿಪುರಸುಂದರೀದೇವಿಯು ಪರಮಾಕಾಶಸ್ವರೂಪಳೆಂದು ಹೇಳಲ್ಪಟ್ಟಿದ್ದಾಳೆ. ಈಕೆಯಲ್ಲಿಯೇ ಈ ಸಮಸ್ತ ಪ್ರಪಂಚವೂ ವಿಭಾಗವನ್ನು ಹೊಂದಿ ಪ್ರಕಾಶಿಸುತ್ತದೆ. ಪರಮೇಶ್ವರನ ಪತ್ನಿಯಾದ ಈಕೆಯು ಚಿತ್, ಆನಂದ, ಏಕಸ್ವರೂಪನಾದ ಪರಮಾತ್ಮನ ಸ್ವರೂಪಳೂ ವಾಕ್, ಇಂದ್ರಿಯ ಮತ್ತು ಮನಸ್ಸುಗಳನ್ನು ಮೀರಿದವಳೂ ಸಾಕ್ಷಿಸ್ವರೂಪಳೂ, ಎಲ್ಲಕ್ಕೂ ಆಶ್ರಯಳೂ ಆಗಿದ್ದಾಳೆಂದು ತಿಳಿ. ||೧೦-೧೧-೧೨||

ಶ್ರೀ ತ್ರಿಪುರಾಂಬಿಕೆಯು ಭಕ್ತರಿಗೆ ಅನುಗ್ರಹವನ್ನು ಮಾಡುವುದಕ್ಕಾಗಿ ಅನೇಕ ವಿಧವಾದ ಶರೀರಗಳನ್ನು ತೆಗೆದುಕೊಂಡು ಅನೇಕ ಕಾರ್ಯಗಳನ್ನು ಮಾಡು ತ್ತಾಳೆ. ಸಾವಿರಮುಖವುಳ್ಳ ಪೂಜ್ಯನಾದ ಶೇಷನೂ ಕೂಡ ಆ ದೇವಿಯ ಲೆಕ್ಕವಿಲ್ಲ ದಷ್ಟು ಸ್ವರೂಪಗಳನ್ನು ಲೆಕ್ಕಹಾಕಿ ಮುಗಿಸಲು ಅಸಮರ್ಥನು. ಆದ್ದರಿಂದ ನಾನು ಆಕೆಯ ಕೇವಲ ಮುಖ್ಯವಾದ ಸ್ವರೂಪಗಳನ್ನು ಮಾತ್ರ ನಿನಗೆ ಹೇಳುತ್ತೇನೆ. ಈಕೆಯ ಮೊದಲನೆಯ ಸ್ವರೂಪವು ಕುಮಾರೀ ಎಂದು ತಿಳಿ. ಆಮೇಲೆ ಮೂರು ಮುಖ್ಯ ರೂಪಗಳು ಹೇಳಲ್ಪಟ್ಟಿವೆ. ಗೌರೀ, ರಮಾ, ಭಾರತೀ ಎಂಬ ರೂಪಗಳೂ

ಗೌರೀ ರಮಾ ಭಾರತೀತಿ ತತಃ ಕಾಲೀ ಚ ಚಂಡಿಕಾ ।
ದುರ್ಗಾ ಭಗವತೀ ಪಶ್ಚಾತ್ಪ್ರೋಕ್ತಾ ಕಾತ್ಯಾಯನೀ ಪರಾ ॥೧೫॥

ಲಲಿತಾ ಶ್ರೀಮಹಾರಾಜ್ಞೀ ತತ್ರ ಪೂರ್ಣ ತಮಾ ಮತಾ ।
ಏತಾಸಾಂ ಕ್ರಮತೋ ಲೀಲಾಃ ಶೃಣು ವಕ್ಷ್ಯಾಮಿ ಭಾರ್ಗವ ॥೧೬॥

ತತ್ರ ಪ್ರೋಕ್ತಾ ಕುಮಾರೀ ಸಾ ಯಾ ಸ್ತುತಾ ವಿಧಿಮುಖ್ಯಕೈಃ ।
ಭೂಯಃ ಸಾ ತ್ರಿಪುರಾ ದೇವೀ ತ್ರಿರೂಪಾ ಸಮಜಾಯತ ॥೧೭॥

ತತ್ರೇಽಭಿಧಾಸ್ಯೇ ಪರಮಮಾಖ್ಯಾನಂ ಪರಮಾದ್ಭುತಂ ।
ಪುರಾ ಸರ್ಗಾದಿಸಮಯೇ ತ್ರಿಪುರಾ ಚಿತಿರೂಪಿಣೀ ॥೧೮॥

ಏಕಾಽಸೀನ್ನೇ ತರತ್ತತ್ರ ತಸ್ಯಾಃ ಕಿಂಚಿದಪಿ ಸ್ಥಿತಂ ।
ಸಾ ತಥಾರೂಪಿಣೀ ಶಕ್ತಿಃ ಸ್ವಸ್ವಾತಂತ್ರ್ಯವಶೇನ ತು ॥೧೯॥

ಸೃಷ್ಟ್ಯುನ್ಮುಖೀ ಯದಾ ಜಾತಾ ತದೇಚ್ಛಾ ಸಮಜಾಯತ ।
ಇಚ್ಛಾಯಾ ಜ್ಞಾನಮುತ್ಪನ್ನಂ ಕ್ರಿಯಾ ಚ ತದನಂತರಂ ॥೨೦॥

ಅಲ್ಲದೇ ಕಾತ್ಯಾಯನೀ, ಲಲಿತಾ ಶ್ರೀ ಮಹಾರಾಜ್ಞೀ, ಕಾಳೀ, ಚಂಡಿಕಾ, ದುರ್ಗಾ, ಮತ್ತು ಪೂರ್ಣತಮಾ ಎಂಬ ಸ್ವರೂಪಗಳೂ ದೇವಿಯ ವಿಷಯದಲ್ಲಿ ಹೇಳಲ್ಪಟ್ಟಿವೆ. ಎಲೈ ಪರಶುರಾಮನೇ, ಈ ಸ್ವರೂಪಗಳ ಲೀಲೆಗಳನ್ನು ಹೇಳುವೆನು ಕೇಳು. ||೧೩-೧೪-೧೫-೧೬||

ಬ್ರಹ್ಮಾದಿಗಳಿಂದ ಹಿಂದೆ ಸ್ತುತಿಸಲ್ಪಟ್ಟ ಕುಮಾರೀ ಸ್ವರೂಪಧಾರಿಣಿಯಾದ ತ್ರಿಪುರಸುಂದರೀದೇವಿಯೂ, ಇನ್ನೂ ಮೂರು ಸ್ವರೂಪಗಳನ್ನು ತೆಗೆದುಕೊಂಡಳು. ಎಲೈ ಪರಶುರಾಮನೇ, ಅತ್ಯಂತ ಆಶ್ಚರ್ಯಕರವಾದ ಶ್ರೇಷ್ಠವಾದ ಈ ಕಥೆಯನ್ನು ಈಗ ನಿನಗೆ ಹೇಳುವೆನು. ಹಿಂದೆ ಸೃಷ್ಟಿಯ ಪ್ರಾರಂಭಕಾಲದಲ್ಲಿ ತ್ರಿಪುರಸುಂದರೀ ದೇವಿಯು ಜ್ಞಾನಸ್ವರೂಪಳಾಗಿ ಒಬ್ಬಳೇ ಇದ್ದಳು. ಇನ್ನೆಲ್ಲಿಯೂ ಇನ್ನೇನೂ ಇರಲಿಲ್ಲ. ಹೀಗೆ ಒಬ್ಬಳೇ ಆದ ಶಕ್ತಿಸ್ವರೂಪಳಾದ ದೇವಿಯು ತನ್ನ ಇಚ್ಛೆಯಿಂದ ಪ್ರಾಣಿಕರ್ಮಾನುಸಾರವಾಗಿ ಸೃಷ್ಟಿಯನ್ನು ಕೈಗೊಳ್ಳಲು ಇಚ್ಛೆಪಟ್ಟಳು. ||೧೭-೧೮-೧೯||

ಶಕ್ತಿಸ್ವರೂಪಳಾದ ದೇವಿಯು ಸೃಷ್ಟಿಗೆ ಆರಂಭಿಸಿದ ಕೂಡಲೇ ಅವಳಿಗೆ ಇಚ್ಛೆಯುಂಟಾಯಿತು. ಆಕೆಯ ಇಚ್ಛೆಯಿಂದ ಜ್ಞಾನವು ಹುಟ್ಟಿತು. ಅನಂತರದಲ್ಲಿ

ತತಸ್ತ್ರಿಮೂರ್ತಯೋ ಜಾತಾ ಸ್ತ್ರಿತಯಾದ್ದೇವತೇಕ್ಷಿತಾತ್ ।
ಇಚ್ಛಾಮಯಃ ಪಶುಪತಿ ರ್ಜ್ಞಾನಾತ್ಮಾ ಹರಿರೇವ ಚ ॥೨೧॥

ಬ್ರಹ್ಮಾ ಕ್ರಿಯಾತ್ಮಕಸ್ತಾನ್ ಸಾ ಭಾವಯಾಮಾಸ ಶಂಕರೀ ।
ತೇ ನಿಸರ್ಗ ಮಹಾವೀರ್ಯಾಃ ಸತ್ಯಸಂಕಲ್ಪ ಶಾಲಿನಃ ॥೨೨॥

ತಪಃ ಸುಪರಮಂ ಚಕ್ರುರ್ಯತಚಿತ್ತೇಂದ್ರಿಯಕ್ರಿಯಾಃ ।
ತದಾ ನ ರಾತ್ರಂ ನ ದಿವಾ ನ ಸೂರ್ಯೋ ನ ಚ ತಾರಕಾಃ ॥೨೩॥

ನ ಭೂಮಿರ್ನ ಜಲಂ ತೇಜೋ ವಾಯುರ್ವಾ ನ ದಿಶಃ ಕ್ವಚಿತ್ ।
ನ ನಿಮೇಷೋ ಯುಗಶ್ಚಾಪಿ ಸ್ಥಿತಂ ಸರ್ವಂ ನಭೋಮಯಂ॥೨೪॥

ಸ್ವಯಂ ಪ್ರಭಾಸ್ತು ತೇ ದೇವಾ ನಭೋ ನಿಲಯಸಂಶ್ರಯಾಃ ।
ಮಹತಾ ತಪಸಾ ಯುಕ್ತಾಃ ಸಮಾಧಯೇ ಸುನಿಶ್ಚಲಾಃ ॥೨೫॥

ಅನೇಕಯುಗಪರ್ಯಾಪ್ತ ಕಾಲೇಽತೀತೇ ಪರಾಂಬಿಕಾ ।
ಪರಾಕಾಶಮಯೀ ತತ್ರ ವಿಧಾತಾರಮುವಾಚ ಹ ॥೨೬॥

ಕ್ರಿಯೆಯೂ ಉಂಟಾಯಿತು. ಅನಂತರದಲ್ಲಿ ತ್ರಿಮೂರ್ತಿಗಳೂ ಹುಟ್ಟಿದರು. ದೇವಿಯು ದೃಷ್ಟಿಯನ್ನು ತ್ರಿಮೂರ್ತಿಗಳ ಮೇಲೆ ಬೀರಲು ಶಿವನು ಇಚ್ಛಾಸ್ವರೂಪನಾಗಿಯೂ, ವಿಷ್ಣುವು ಜ್ಞಾನಸ್ವರೂಪನಾಗಿಯೂ, ಬ್ರಹ್ಮನು ಕ್ರಿಯಾಸ್ವರೂಪನಾಗಿಯೂ ಆದರು. ಶಂಕರಿಯು ಅವರನ್ನು ಒಳ್ಳೆಯ ದೃಷ್ಟಿಯಿಂದ ನೋಡಿದಳು. ಆದ್ದರಿಂದ ಅವರು ಬಹಳ ವೀರ್ಯ ಮತ್ತು ಸತ್ಯಸಂಕಲ್ಪಗಳುಳ್ಳವರಾದರು. ||೨೦-೨೧-೨೨||

ಆ ತ್ರಿಮೂರ್ತಿಗಳೂ, ಮನಸ್ಸೂ, ಇಂದ್ರಿಯಗಳು ಮತ್ತು ಕರ್ಮಗಳೂ ಇವೆಲ್ಲವನ್ನೂ, ನಿಗ್ರಹಮಾಡಿಕೊಂಡು ಬಹಳ ಶ್ರೇಷ್ಠವಾದ ತಪಸ್ಸನ್ನು ಮಾಡಿದರು. ಆಗ ರಾತ್ರಿ, ಹಗಲು, ಸೂರ್ಯ, ನಕ್ಷತ್ರಗಳು, ಭೂಮಿ, ನೀರು, ಅಗ್ನಿ, ವಾಯು, ದಿಕ್ಕುಗಳು, ನಿಮಿಷಗಳು, ಯುಗಗಳು ಇವು ಯಾವುವೂ ಇರಲಿಲ್ಲ. ಎಲ್ಲವೂ ಆಕಾಶಸ್ವರೂಪವಾಗಿದ್ದವು. ||೨೩-೨೪||

ಆಕಾಶವೆಂಬ ಮನೆಯಲ್ಲಿದ್ದ ಆ ದೇವತೆಗಳೆಲ್ಲರೂ ಸ್ವಯಂಪ್ರಕಾಶಸ್ವರೂಪರಾಗಿದ್ದರು. ಅವರು ಬಹಳ ದೊಡ್ಡ ತಪಸ್ಸನ್ನು ಕೈಗೊಂಡು ಸಮಾಧಿಯಲ್ಲಿ ಏಕಾಗ್ರ

ವತ್ಸೋತ್ತಿಷ್ಠ ವಿಧೇ ಕಿಂ ತೇ ತಪಸಾ ಕರ್ತುಮಿಚ್ಛಸಿ ।
ಸೃಜ ಲೋಕಾನ್ ಸುಭವನಾ ನತಸ್ತ್ವಂ ಜನಿತೋ ಮಯಾ ॥೨೭॥

ಇತ್ಯಾದಿಷ್ಟಃ ಪರಾಶಕ್ತ್ಯಾ ಜಗತ್ಸ್ರಷ್ಟುಂ ಮನೋ ದಧೇ ।
ಅಹಂ ಕುತ್ರ ಸೃಜಾಮೀತಿ ಚಿಂತಯನ್ ಸಮುಪಶ್ಯತ ॥೨೮॥

ತದಾ ದೃಷ್ಟೋ ಮಹಾಕಾಶಃ ಸರ್ವಶೂನ್ಯ ಮಯೋಽಮಲಃ ।
ಅನಂತ ವಿಸ್ತರೋಽನಾದಿ ರ್ನಾಽಂತಂ ತಸ್ಯೋಪಲಕ್ಷಿತಂ ॥೨೯॥

ಅವಕಾಶೋಽಸ್ತಿ ಮೇ ಸೃಷ್ಟೇ ರಿತಿಮತ್ವಾ ಪಿತಾಮಹಃ ।
ವ್ಯಚಲತ್ಕಿಂಚಿದಂಗೇನ ಸ್ಪರ್ಶಂ ತತ್ರೋಪಲಬ್ಧವಾನ್ ॥೩೦॥

ಸ್ವಾಂಗಸ್ಯ ಚಲನಾದೇವ ಸ್ಪರ್ಶಾದ್ವಾಯು ರ್ವ್ಯಜೃಂಭತ ।
ವಾಯೋ ರ್ವೇಗಾದೂಷ್ಮಣಸ್ತು ಪ್ರಾದುರ್ಭಾವೋಽಭವತ್ತದಾ ॥೩೧॥

ವಾದ ಮನಸ್ಸುಳ್ಳವರಾಗಿದ್ದರು. ಹೀಗೆ ಅನೇಕ ಯುಗಗಳು ಕಳೆಯಲು ಶ್ರೇಷ್ಠ ಮಾತೆಯಾದ ದೇವಿಯು ಸೂಕ್ಷ್ಮವಾದ ಆಕಾಶಸ್ವರೂಪಳಾಗಿ ಬ್ರಹ್ಮನನ್ನು ಕುರಿತು ಹೀಗೆ ಹೇಳಿದಳು.—ಎಲೈ ಮಗುವೇ, ಬ್ರಹ್ಮನೇ, ಏಳು. ನೀನು ತಪಸ್ಸು ಮಾಡಿ ಏನನ್ನು ಸಾಧಿಸಬೇಕು? ನೀನು ಅನೇಕ ಲೋಕಗಳನ್ನು ಸೃಷ್ಟಿಮಾಡು. ಆದಕ್ಕಾಗಿಯೇ ನಾನು ನಿನ್ನನ್ನು ಸೃಷ್ಟಿಮಾಡಿದ್ದೇನೆ. ॥೨೫-೨೬-೨೭॥

ದೇವಿಯು ಹೀಗೆ ಅಪ್ಪಣೆಮಾಡಲಾಗಿ ಬ್ರಹ್ಮನು ಜಗತ್ತನ್ನು ಸೃಷ್ಟಿಮಾಡಲು ನಿಶ್ಚಯಿಸಿದನು. ಆಗ ಅವನು ನಾನೆಲ್ಲಿ ಸೃಷ್ಟಿಮಾಡಲಿ? ಎಂದು ಯೋಚಿಸುತ್ತಾ ಸುತ್ತಲೂ ನೋಡಿದನು. ಆಗ ಅವನು ಎಲ್ಲೆಲ್ಲಿಯೂ ಶೂನ್ಯವಾಗಿಯೂ ಶುದ್ಧವಾಗಿಯೂ ಇರುವ ದೊಡ್ಡದಾದ ಆಕಾಶವನ್ನು ನೋಡಿದನು. ಅದು ಲೆಕ್ಕವಿಲ್ಲದಷ್ಟು ವಿಸ್ತಾರವಾಗಿಯೂ, ಆದಿಅಂತ್ಯಗಳಿಲ್ಲದೇ ಎಲ್ಲೆಲ್ಲಿಯೂ ಕಾಣುತ್ತಿತ್ತು. ಬ್ರಹ್ಮನು ಇಲ್ಲಿ ತಾನು ಸೃಷ್ಟಿಮಾಡಲು ಅವಕಾಶವಿದೆಯೆಂದು ಭಾವಿಸಿ ಸ್ವಲ್ಪ ತನ್ನ ಅಂಗಗಳನ್ನು ಅಲ್ಲಾಡಿಸಿದನು. ಆಗ ಸ್ಪರ್ಶವುಂಟಾಯಿತು. ॥೨೮-೨೯-೩೦॥

ಬ್ರಹ್ಮನು ತನ್ನ ಅಂಗವನ್ನು ಚಲಿಸಿದ ಕೂಡಲೇ ಸ್ಪರ್ಶವೂ ಅದರಿಂದ ವಾಯುವೂ ವಿಶೇಷವಾಗಿ ಉಂಟಾದವು. ಆಗ ವಾಯುವಿನ ವೇಗದಿಂದ ಶಾಖವುಂಟಾಯಿತು. ಬ್ರಹ್ಮನು ಶಾಖವು ಅಗ್ನಿಯ ಆಕಾರವಾದದ್ದನ್ನು ನೋಡಿದನು. ಅನಂತರ

ಊಷ್ಮಣೋ ರೂಪಸಂಯುಕ್ತಮಗ್ನಿಂ ಪ್ರೇಕ್ಷಿತವಾನ್ವಿಧಿಃ ।
ತತೋ ವಹ್ನೇಸ್ತು ಪರಿತೋ ಶೀತಸಂಸ್ಪರ್ಶಸಂಯುತಂ ॥೩೨॥

ರಸಾಢ್ಯಂ ಸಲಿಲಂ ಸ್ಯಂದಿ ಸ್ನೇಹಸಂಯುಕ್ತಮೇವ ಚ ।
ತತ್ರ ಗಂಧಸ್ತು ಸಂದೃಷ್ಟೋಽನಂತರಂ ತನ್ಮಲೇನ ತು ॥೩೩॥

ಪೃಥಿವೀ ದದೃಶೇ ತಸ್ಯ ಕಠಿಣಾ ಧಾರಣಕ್ಷಮಾ ।
ದೃಷ್ಟ್ವೈತಾವಜ್ಜಗತ್ಸ್ರಷ್ಟಾ ಚಾಽಸ್ತಿ ಮತ್ಸೃಷ್ಟಿ ಧಾರಿಣೀ ॥೩೪॥

ಅಸ್ಯಾಂ ಸೃಜಾಮಿ ಭುವನಂ ನಾನಾತನು ವಿಚಿತ್ರಿತಂ ।
ಇತಿ ಮತ್ವಾ ತತ್ರ ಸೃಷ್ಟಿಂ ವಿತೇನೇ ಜಗದೀಶ್ವರಃ ॥೩೫॥

ಶ್ರುತ್ವೈವಂ ವಚನಂ ತಸ್ಯ ದತ್ತಾತ್ರೇಯಸ್ಯ ಭಾರ್ಗವಃ ।
ಪ್ರಾಹ ಸಂಶಯಿತಸ್ವಾಂತೋ ಮಧುರಾಽಕ್ಷರಯಾ ಗಿರಾ ॥೩೬॥

ಭಗವನ್ನತ್ರ ಮೇ ಚಿತ್ತ ಮಂತಂ ನೈವಾಽಧಿ ಗಚ್ಛತಿ ।
ಬಹುಶಂಕಾಽಽಸ್ಪದಂ ವಾಕ್ಯಂ ಶ್ರುತ್ವಾ ತವ ವಿಚಿತ್ರಿತಂ ॥೩೭॥

ದಲ್ಲಿ ಬೆಂಕಿಯ ಸುತ್ತಲೂ ಶೀತವಾದ ಸ್ಪರ್ಶವುಳ್ಳ ದ್ರವರೂಪವಾದ ನೀರು ಜಿಡ್ಡಿನಿಂದ ಕೂಡಿ ಹುಟ್ಟಿತು. ಅನಂತರ ಅಲ್ಲಿ ಗಂಧವೂ ಉತ್ಪತ್ತಿಯಾಯಿತು. ಆಮೇಲೆ ಗಂಧದ ಕಶ್ಮಲದಿಂದ ಕೂಡಿದ ಭೂಮಿಯು ಉಂಟಾಯಿತು. ಭೂಮಿಯು ಗಟ್ಟಿಯಾಗಿಯೂ ಲೋಕವನ್ನು ಹೊರಲು ಯೋಗ್ಯವಾಗಿಯೂ ಇತ್ತು. ಜಗತ್ತಿಗೆ ಸೃಷ್ಟಿಕರ್ತನಾದ ಬ್ರಹ್ಮನು ಇದನ್ನೆಲ್ಲವನ್ನೂ ಕಂಡು ಇಲ್ಲಿ ನನ್ನ ಲೋಕಸೃಷ್ಟಿಯು ಸ್ಥಿರವಾಗಿ ನಿಲ್ಲುವುದೆಂದು ತಿಳಿದನು. ಮತ್ತು ಅನೇಕ ಬಗೆಯ ಶರೀರಗಳಿಂದ ವಿಚಿತ್ರವಾದ ಲೋಕವನ್ನು ಭೂಮಿಯ ಮೇಲೆ ಸೃಷ್ಟಿಮಾಡುವೆನೆಂದೂ ಸಂಕಲ್ಪಿಸಿದನು. ಹೀಗೆ ಭಾವಿಸಿ ಜಗದೀಶ್ವರನಾದ ಬ್ರಹ್ಮನು ಭೂಮಿಯಮೇಲೆ ಸೃಷ್ಟಿಗೆ ಆರಂಭಿಸಿದನು. ||೩೨-೩೩-೩೪-೩೫||

ದತ್ತಾತ್ರೇಯನು ಹೀಗೆ ಹೇಳಿದ್ದನ್ನು ಕೇಳಿ ಪರಶುರಾಮನು ಸಂಶಯದಿಂದ ಕೂಡಿದ ಮನಸ್ಸುಳ್ಳವನಾಗಿ ಮಧುರವಾದ ರೀತಿಯಲ್ಲಿ ಹೀಗೆ ಪ್ರಶ್ನೆಮಾಡಿದನು.— ಪೂಜ್ಯರೇ, ತಾವು ನನಗೆ ಹೇಳಿದ್ದು ಬಹಳ ಆಶ್ಚರ್ಯಕರವಾಗಿಯೂ ತುಂಬ ಸಂಶಯವನ್ನುಂಟುಮಾಡುತ್ತಲೂ ಇದೆ. ತಾವು ಆಕಾಶವೇ ಮೊದಲಾದ ತತ್ವಗಳು ಮೊದಲೇ

ಆಕಾಶಮುಖ ಭೂತಾನಿ ಸಿದ್ಧವದ್ಧಾತುರೀಕ್ಷಣಾತ್ ।
ಅಕರ್ತೃಕಾಣಿ ಮೇ ಭಾಂತಿ ಕರ್ತಾ ನಾಽನ್ಯೋಽಯತಃ ಸ್ಥಿತಃ ॥೩೮॥

ಕಥಂ ತೇಷಾಂ ಜಗದ್ಧಾತ್ರಾ ವಿನಾ ಸಂಜ್ಞಾಪಕಂ ತದಾ ।
ಶಬ್ದಃ ಪ್ರವರ್ತಿತಸ್ತಸ್ಮಾತ್ಪೂರ್ವಂ ಭೂತಸೃತೇಃ ಕಥಂ ॥೩೯॥

ಪಾಂಚಭೌತಿಕದೇಹಸ್ಯ ಸಂಬಂಧ ಇತಿ ಶಂಸ ಮೇ ।
ನ ಮೇ ಸಂಶಯನೀಹಾರ ಹರಣೇಽನ್ಯತ್ಪ್ರಗಲ್ಭತೇ ॥೪೦॥

ತ್ವದ್ವಾಕ್ಯ ಚಂಡಕಿರಣಾದ್ಭಗವನ್ ಕರುಣಾನಿಧೇ ।
ಅಪೃಷ್ಟಮಪಿ ಶಿಷ್ಯಾಯ ಪ್ರಸನ್ನಾಯ ದಯಾಲವಃ ॥೪೧॥

ಗುರವಃ ಪ್ರಾಹುರತ್ಯಂತ ಶುದ್ಧ ಚಿತ್ತಾ ಭವಾದೃಶಾಃ ।
ಇತಿ ಪೃಷ್ಟೋ ಭಾರ್ಗವೇಣ ದತ್ತಃ ಪ್ರೀತಃ ಕೃಪಾನಿಧಿಃ ॥೪೨॥

ಇದ್ದವೆಂದೂ, ಅವನ್ನು ಸೃಷ್ಟಿಕರ್ತನಾದ ಬ್ರಹ್ಮನು ಮೊದಲೇ ನೋಡಿದನೆಂದೂ ಹೇಳಿದಿರಿ. ಆದ್ದರಿಂದ ಆಕಾಶವೇ ಮೊದಲಾದ ಪ್ರಪಂಚಕ್ಕೆ ಮೂಲಭೂತವಾದ ತತ್ವಗಳನ್ನು ಮೊದಲೇ ಸೃಷ್ಟಿಮಾಡಿದ ಕರ್ತೃವು ಯಾರೂ ಇಲ್ಲವೆಂದೂ, ಅವು ಸ್ವತಃ ಇದ್ದವೆಂದೂ ವ್ಯಕ್ತಪಡುವುದು. ॥೩೬-೩೭-೩೮॥

ಆಗ ಪಂಚಭೂತಗಳನ್ನು ಗುರುತಿಸಿ ಆಕಾಶ, ವಾಯು, ಮುಂತಾದ ಹೆಸರಿಡುವುದಕ್ಕೆ ಶಬ್ದವು ಎಲ್ಲಿ ಸೃಷ್ಟಿಯಾಗಿತ್ತು? ಆದ್ದರಿಂದ ಪಂಚಭೂತಗಳ ಸೃಷ್ಟಿಗೆ ಮುಂಚೆ ಶಬ್ದವು ಸೃಷ್ಟಿಯಾದ ಬಗೆ ಹೇಗೆ? ಪಂಚಭೂತಗಳಿಂದ ಸೃಷ್ಟಿಸಲ್ಪಟ್ಟ ದೇಹಕ್ಕೂ ಶಬ್ದಕ್ಕೂ ಸಂಬಂಧವಾದ ಬಗೆ ಹೇಗೆ? ಕೃಪೆಗೆ ಗಣಿಯಂತಿರುವ ಪೂಜ್ಯರಾದ ಗುರುಗಳೇ, ನನ್ನ ಇವೆಲ್ಲಾ ಸಂಶಯವೆಂಬ ಹಿಮವನ್ನು ನಾಶಮಾಡಲು ತಮ್ಮ ವಾಕ್ಯಗಳೆಂಬ ಸೂರ್ಯಕಿರಣಗಳಿಂದಲ್ಲದೇ ಬೇರೊಂದರಿಂದ ಸಾಧ್ಯವಲ್ಲ. ಕರುಣಾಶಾಲಿಗಳಾದ ಗುರುಗಳು ತಮ್ಮಲ್ಲಿ ಭಕ್ತನಾದ ಶಿಷ್ಯನು ಕೇಳದಿದ್ದ ವಿಷಯಗಳನ್ನೂ ಹೇಳುವರು. ॥೩೯-೪೦-೪೧॥

ಅತ್ಯಂತ ಶುದ್ಧವಾದ ಮನಸ್ಸುಳ್ಳ ತಮ್ಮಂಥಾ ಗುರುಗಳು ಶಿಷ್ಯರು ಕೇಳಲಿ, ಕೇಳದಿರಲಿ, ಎಲ್ಲವನ್ನೂ ಕಪಟವಿಲ್ಲದೇ ಹೇಳುತ್ತಾರೆ. ಈರೀತಿಯಾಗಿ ಪರಶುರಾಮನು ಪ್ರಶ್ನೆಮಾಡಲು, ಕರುಣಾಶಾಲಿಯಾದ ದತ್ತಾತ್ರೇಯನು ಬಹಳ ಸಂತೋಷಪಟ್ಟನು.

ಪ್ರಾಹ ಸೂನೃತಯಾ ವಾಚಾ ಸಂಬೋಧ್ಯವದತಾಂ ವರಃ ।
ರಾಮ ಬುದ್ಧಿಮತಾಂ ಶ್ರೇಷ್ಠ ಪ್ರಶ್ನಸ್ತೇಽತಿ ವಿಶಾರದಃ ॥೪೩

ತ್ರಿಧಾ ಸ್ಥಿತಸ್ತನ್ಮಯಾಗ್ರೇ ಪ್ರೋಚ್ಯತೇಽವಸರೇ ಸ್ಫುಟಂ ।
ನ ಜ್ಞಾತುಂ ಶಕ್ಯತೇ ಸದ್ಯಸ್ತ್ವಯಾ ತಸ್ಮಾತ್ಸ್ಥಿರೀಭವ ॥೪೪॥

ಅಸಾಂಪ್ರತಂ ತು ಶಿಷ್ಯಾಯ ವದನ್ ಸ್ಯಾನ್ಮುಗ್ಧ ಏವ ಸಃ ।
ವಿಪರೀತಂ ಪ್ರಸೀಧ್ಯೇತ ಚಾಽಸಾಮ್ಪ್ರತ ನಿರೂಪಣಾತ್ ॥೪೫॥

ಅಸಾಂಪ್ರತಸ್ಯ ಶ್ರವಣಾ ದ್ವಿನಶ್ಯೇತ್ಕಟ ಕಾರವತ್ ।
ಇತಿ ಶ್ರುತ್ವಾ ಗುರೋರ್ವಾಕ್ಯಂ ಪುನರಾಹ ಭೃಗೂದ್ವಹಃ ॥೪೬॥

ಸ್ವಾಮಿನ್ ಕಿಮುಕ್ತಂ ಭವತಾ ಕಟಿಕಾರಃ ಕಥಂವಿಧಃ ।
ಕಿಂ ವೃತ್ತಂ ತಸ್ಯ ಕಸ್ಮಾದ್ವೈ ವಿನಷ್ಟಸ್ತು ನಿವೇದಯ ॥೪೭॥

ಮತ್ತು ಬಹಳ ಜ್ಞಾನಿಯಾದ ಈತನು ಶಿಷ್ಯನನ್ನು ಪ್ರೀತಿಯಿಂದ ಸಂಬೋಧಿಸಿ ಹೀಗೆ ಹೇಳಿದನು.—ಎಲೈ ಬುದ್ಧಿವಂತರಲ್ಲಿ ಶ್ರೇಷ್ಠನಾದ ಪರಶುರಾಮನೇ, ನಿನ್ನ ಪ್ರಶ್ನೆಯು ಬಹಳ ಗಹನವಾದುದು. ಅದು ಮೂರು ವಿಧವಾಗಿರುವುದು. ಆದ್ದರಿಂದ ನಾನು ಮುಂದಕ್ಕೆ ಸಕಾಲದಲ್ಲಿ ಸಮಾಧಾನವನ್ನು ಕೊಡುವೆನು. ಈಗಲೇ ಆ ಪ್ರಶ್ನೆಗೆ ಉತ್ತರವನ್ನು ತಿಳಿದುಕೊಳ್ಳುವುದು ನಿನ್ನಿಂದ ಸಾಧ್ಯವಿಲ್ಲ. ಆದ್ದರಿಂದ ಸದ್ಯಕ್ಕೆ ಸ್ವಲ್ಪ ತಾಳ್ಮೆಯಿಂದಿರು. ॥೪೨-೪೩-೪೪॥

ಶಿಷ್ಯನು ಗ್ರಹಿಸಲು ಅಸಾಧ್ಯವಾದ ವಿಷಯಗಳನ್ನು ಅಕಾಲದಲ್ಲಿ ಹೇಳುವ ಗುರುವನ್ನು ಮೂಢನೆಂದೇ ತಿಳಿಯಬೇಕು. ಗುರುವು ಅಕಾಲದಲ್ಲಿ ಅಂಥಾ ವಿಷಯಗಳನ್ನು ಹೇಳಿದರೆ ಶಿಷ್ಯನಿಗೆ ತಪ್ಪು ತಿಳಿವಳಿಕೆಯುಂಟಾಗುವುದು. ತಾನು ತಿಳಿಯಲು ಯೋಗ್ಯವಲ್ಲದ ವಿಷಯಗಳನ್ನು ಒಂದೇ ಆವೃತ್ತಿ ಅನುಗ್ರಹಿಸಲು ಪ್ರಯತ್ನಪಟ್ಟರೆ ಶಿಷ್ಯನು ಚಾಪೆಯ ಕೆಲಸದವನಹಾಗೆ ಹಾಳಾಗಬೇಕಾದೀತು. ಭೃಗುವಂಶದ ಋಷಿಗಳಲ್ಲಿ ಶ್ರೇಷ್ಠನಾದ ಪರಶುರಾಮನು ಗುರುವಿನ ಆ ಮಾತುಗಳನ್ನು ಕೇಳಿ, ಪುನಃ ಈರೀತಿಯಲ್ಲಿ ಪ್ರಶ್ನೆಮಾಡಿದನು.—ಪೂಜ್ಯರೇ, ಈಗ ತಾವು ಹೇಳಿದ ವಿಷಯವೇನು ? ಚಾಪೆ ಕೆಲಸ ಮಾಡುವವನು ಯಾರು ? ಅವನ ಸಮಾಚಾರವೇನು ? ಅವನು ಏತಕ್ಕೆ ಹಾಳಾದನು ? ಈ ಎಲ್ಲಾ ವಿಷಯಗಳನ್ನೂ ಚೆನ್ನಾಗಿ ದಯವಿಟ್ಟು ನಿರೂಪಣೆಮಾಡಬೇಕು. ॥೪೫-೪೬-೪೭॥

ಏವಂ ಪರ್ಯನುಯುಕ್ತಃ ಸೋಽವದದ್ವಿಪ್ರಶಿರೋಮಣಿಃ ।
ಶ್ರೃಣು ರಾಮ ಪುರಾವೃತ್ತಂ ಕಟಕಾರ ಸಮಾಶ್ರಯಂ ॥೪೮॥

ಆಸೀತ್ಕಶ್ಚಿತ್ಕಲಿಂಗೇಷು ಕುವಲಾಖ್ಯೋ ಯದೋಃ ಪುರೇ ।
ಕಟಕಾರೋಽತಿ ನಿಪುಣಃ ಕಟಕರ್ಮಸುಶಿಕ್ಷಿತಃ ॥೪೯॥

ಕೃತ್ವಾ ವಿಚಿತ್ರ ಚಿತ್ರಾಣಿ ಕಟಾನಿ ಕುವಲಾಽಭಿಧಃ ।
ರಾಜ್ಞೋ ನಿವೇದಯತ್ತೇನ ರಾಜಾ ತುಷ್ಟಃ ಸುಶಿಕ್ಷಯಾ ॥೫೦॥

ತಸ್ಮೈ ದದೌ ಧನಂ ಭೂರಿ ತೇನಾಽಢ್ಯಃ ಸಮಜಾಯತ ।
ಧನೇನ ತೇನ ಕಟಕೃತ್ ಬ್ರಾಹ್ಮಣಾಽರಾಧನೋದ್ಯತಃ ॥೫೧॥

ಶ್ರುತ್ವಾ ಕ್ವಚಿತ್ಪುರಾಣೇಷು ಬ್ರಾಹ್ಮಣಾನಾಂ ಪ್ರಶಂಸನಂ ।
ಕದಾಚಿತ್ಕುವಲಃ ಪುಣ್ಯ ಕಥಾ ತತ್ಪರತಃ ಸ್ಥಿತಃ ॥೫೨॥

ತತ್ರಾಽಧ್ಯಾತ್ಮ ವಿಚಾರಸ್ತು ಪ್ರವೃತ್ತಸ್ತೇನ ಸಂಶ್ರುತಃ ।
ನ ತದ್ವೇದಾಽತಿ ಸೂಕ್ಷ್ಮತ್ವಾತ್ಪುನಃ ಪುನರಪಿ ಶ್ರುತಂ ॥೫೩॥

ಎಲೈ ರಾಮನೇ, ಚಾಪೆ ಕೆಲಸದವನಿಗೆ ಸಂಬಂಧಪಟ್ಟ ಹಿಂದೆ ನಡೆದ ವೃತ್ತಾಂತವನ್ನು ಕೇಳು. ಕಲಿಯುಗದಲ್ಲಿ ಯದುವಿನ ಪಟ್ಟಣದಲ್ಲಿ ಕುವಲಯ ಎಂಬ ಹೆಸರಿನ ಅತ್ಯಂತ ನಿಪುಣನಾದ ಚಾಪೆಯ ಕೆಲಸದವನಿದ್ದನು. ಇವನು ಚಾಪೆಯ ಕೆಲಸದಲ್ಲಿ ಬಹಳ ಗಟ್ಟಿಗನಾಗಿದ್ದನು. ಈ ಕುವಲನು ಚಿತ್ರ ವಿಚಿತ್ರಗಳಾದ ಮಂದಲಿಗೆಗಳನ್ನು ಮಾಡಿ ಆ ದೇಶದ ದೊರೆಗೆ ಸಮರ್ಪಿಸುತ್ತಿದ್ದನು. ಈ ಚಾಪೆ ಕೆಲಸದವನ ಅತ್ಯುತ್ತಮವಾದ ಮಂದಲಿಗೆಗಳನ್ನು ನೋಡಿ ದೊರೆಗೆ ಬಹಳ ಸಂತೋಷವಾಯಿತು. ||೪೮-೪೯-೫೦||

ರಾಜನು ಸಂತೋಷಪಟ್ಟು ಚಾಪೆಕೆಲಸದವನಿಗೆ ಬಹಳ ಹಣವನ್ನು ಕೊಟ್ಟನು. ಅದರಿಂದ ಅವನು ಬಹಳ ಶ್ರೀಮಂತನಾದನು. ಚಾಪೆಕೆಲಸದವನು ಪುರಾಣಗಳಲ್ಲಿ ಬ್ರಾಹ್ಮಣರ ಶ್ಲಾಘನೆಯನ್ನು ಕೇಳಿ ಆ ಹಣದಿಂದ ಬ್ರಾಹ್ಮಣರನ್ನು ಪೂಜಿಸಲು ಆರಂಭಿಸಿದನು. ಕುವಲನು ಒಂದು ದಿನ ಪುಣ್ಯಕಥೆಗಳನ್ನು ಕೇಳುವುದರಲ್ಲಿ ಆಸಕ್ತನಾಗಿದ್ದನು. ಪುಣ್ಯಕಥೆಗಳಮಧ್ಯೆ ವೇದಾಂತವಿಚಾರವೂ ಬಂದಿತು. ಕುವಲನು ವೇದಾಂತವಿಚಾರವನ್ನು ಕೇಳಲು ಬಹಳ ಆಸಕ್ತಿಯುಳ್ಳವನಾಗಿ ತನ್ನ ಬಯಕೆಯನ್ನು

ತದಾಽಪ್ತ ವಚನಂ ವಿಪ್ರಮೇಕಾಂತೇ ಸಂಗತಃ ಕ್ವಚಿತ್ ।
ಭಗವನ್ ಯತ್ತ್ವಯಾ ಪ್ರೋಕ್ತಂ ಅಧ್ಯಾತ್ಮ ವಿಷಯಂ ವಚಃ ॥೫೪॥

ತದತೀವ ಗಭೀರಾರ್ಥಂ ಮಯಾ ಭೂಯೋಽಪಿ ಸಂಶ್ರುತಂ ।
ತತ್ರ ಸಾರಂ ಸಮಾಕೃಷ್ಯ ಮಮ ಧಾರಯಿತುಂ ಕ್ಷಮಂ ॥೫೫॥

ವದ ಬ್ರಹ್ಮನ್ ಕರುಣಯಾ ದೃಷ್ಟ್ಯಾಽಪಶ್ಯ ಸಕೃತ್ತು ಮಾಂ ।
ಪ್ರಾರ್ಥಿತಃ ಕುವಲೇನೈವಂ ಪ್ರಾಹ ಸಂಕ್ಷಿಪ್ಯ ಸಾರತಃ ॥೫೬॥

ಶೃಣು ತೇ ಕಥಯಿಷ್ಯಾಮಿ ಕುವಲಾಽಧ್ಯಾತ್ಮ ಸಂಗ್ರಹಂ ।
ಅಕ್ಷಾರ್ಥಾದ್ವಿಮುಖಃ ಶಾಂತೋ ದೃಶ್ಯಂ ಮತ್ವಾ ದೃಗಾತ್ಮಕಂ ॥೫೭॥

ಜ್ಞಾತ್ವಾ ಸರ್ವಂ ಸಮಂ ಪಶ್ಚಾದಾಗತಂ ನ ತ್ಯಜನ್ ಸದಾ ।
ಅನಾಗತ ಮನಿಚ್ಛನ್ ವೈ ಸಂತುಷ್ಟೋ ನಿರ್ಭಯಃ ಸದಾ ॥೫೮॥

ತಿಳಿಯಹೇಳಿ, ಪದೇ ಪದೇ ಅವುಗಳನ್ನು ಕೇಳಿದಾಗ್ಯೂ ಸೂಕ್ಷ್ಮವಾಗಿದ್ದುದರಿಂದ ಕುವಲನ ಬುದ್ಧಿಗೆ ಆ ವಿಷಯಗಳು ಹಿಡಿಯಲೇ ಇಲ್ಲ. ॥೫೧-೫೨-೫೩॥

ಆಗ ಕುವಲನು ಸತ್ಯವಂತನಾದ ಗುರುವಾದ ಬ್ರಾಹ್ಮಣನನ್ನು ರಹಸ್ಯದಲ್ಲಿ ಸಮೀಪಿಸಿ ಪೂಜ್ಯರೇ, ವೇದಾಂತವಿಷಯವಾಗಿ ತಾವು ಏನನ್ನು ಹೇಳಿದಿರೋ ಆ ವಿಚಾರವು ಬಹಳ ಗಹನವಾಗಿದೆ. ಆ ವಿಚಾರವನ್ನು ಪದೇ ಪದೇ ಹೇಳಿದಾಗ್ಯೂ ಅದರ ಸಾರವನ್ನು ನಾನು ತಿಳಿದು ಮಂದಟ್ಟುಮಾಡಿಕೊಳ್ಳಲು ನನಗೆ ಅಸಾಧ್ಯವಾಗಿದೆ. ಪೂಜ್ಯರಾದ ಬ್ರಾಹ್ಮಣಗುರುಗಳೇ, ತಾವು ಕೃಪಾದೃಷ್ಟಿಯಿಂದ ನನ್ನನ್ನು ಒಂದಾವೃತ್ತಿ ನೋಡಿ ನನಗೆ ಆ ವಿಷಯವು ಮಂದಟ್ಟಾಗುವಂತೆ ಮಾಡಬೇಕು. ಹೀಗೆ ಕುವಲನು ಪ್ರಾರ್ಥನೆಮಾಡಲಾಗಿ ಗುರುವು ಅವನಿಗೆ ಅದರ ಸಾರವನ್ನು ಸಂಕ್ಷೇಪವಾಗಿ ಹೇಳಿದನು. ॥೫೪-೫೫-೫೬॥

ಎಲೈ ಕುವಲನೇ, ಕೇಳು. ನಿನಗೆ ವೇದಾಂತವಿಷಯದ ಸಾರವನ್ನು ಹೇಳುವೆನು. ಮಾನವನು ಇಂದ್ರಿಯ ಸುಖಗಳ ಅಭಿಲಾಷೆಗಳನ್ನು ತೊರೆದು, ಶಾಂತನಾಗಿ, ಕಾಣಿಸುವ ಸಕಲ ಪದಾರ್ಥಗಳೂ ಜ್ಞಾತೃಸ್ವರೂಪಗಳೆಂದೇ ಭಾವಿಸಿ, ಪ್ರಪಂಚದ ವಸ್ತುಗಳನ್ನೆಲ್ಲವನ್ನೂ ಸಮಭಾವನೆಯಿಂದ ಕೂಡಿ ನೋಡುತ್ತಾ, ತನ್ನ ಇಚ್ಛೆಯಿಲ್ಲದೇ ತಾನಾಗಿಯೇ ಸಿಕ್ಕಿದ ವಸ್ತುಗಳನ್ನು ಸ್ವೀಕರಿಸುತ್ತಾ, ಸಿಕ್ಕದಿರುವ

ವಿಚರೇತ್ಸಂಗರಹಿತ ಇತಿ ತೇ ಸುನಿರೂಪಿತಂ ।
ಏವಂ ತದ್ವಾಕ್ಯಮಾಕರ್ಣ್ಯ ಕುವಲೋ ಮೋಹಿತೋಽವಿದನ್ ॥೫೯॥

ಸಮುಜ್ಞಾನೇನ ವಿಪ್ರೇಷು ಭಕ್ತಿಶೈಥಿಲ್ಯಮಾಶ್ರಿತಃ ।
ಆಢ್ಯಃ ಸದಾ ಸುಖಂ ಪ್ರಾಪ್ತಾನ್ಕಾಮಾನ್ಸೇವನ್ಕಥಾಽದಿಕಂ ॥೬೦॥

ದೇವತಾಸೇವನಂ ಚಾಽಪಿ ತ್ಯಕ್ತ್ವಾ ಪಾಪಭಯಂ ತಥಾ ।
ಸಂಸ್ಥಿತೋ ನಾಸ್ತಿಕಪ್ರಾಯಃ ಪ್ರಾಪ್ತವಾನಧಮಾಂ ಗತಿಂ ॥೬೧॥

ಏತತ್ತೇ ಭಾರ್ಗವ ಪ್ರೋಕ್ತಂ ವೃತ್ತಂ ಕಟಿಕೃತೋ ಮಯಾ ।
ತಸ್ಮಾದಕಾಲೇ ಸಂಪ್ರೋಕ್ತೋ ದೋಷಾಯ ಪರಿಕಲ್ಪತೇ ॥೬೨॥

ಏವಂ ಭುವಂ ಸಮಾಲೋಕ್ಯ ಜಗತಾಂ ಪ್ರಪಿತಾಮಹಃ ।
ಮನಸೈವಾಽಸೃಜತ್ ಸರ್ವಾನ್ ಸಚರಾಚರಮಾನುಷಾನ್ ॥೬೩॥

ಪದಾರ್ಥಗಳಿಗೆ ಹಂಬಲಿಸದೇ, ಸಂತೋಷದಿಂದಲೂ ಭಯವಿಲ್ಲದೆಯೂ ವ್ಯಾಮೋಹ ವಿಲ್ಲದ ಮನಸ್ಸುಳ್ಳವನಾಗಿ, ನಡೆಯಬೇಕೆಂಬುದೇ ವೇದಾಂತಸಾರವು. ಕುವಲನು ಗುರುಗಳು ಹೇಳಿದ ಈ ಮಾತುಗಳನ್ನು ಅರ್ಥಮಾಡಿಕೊಳ್ಳಲಾರದೇ, ಎಲ್ಲರೂ ಒಂದೇ ಎಂಬ ಭಾವನೆಯನ್ನು ಮಾತ್ರ ಇಟ್ಟುಕೊಂಡು ಬ್ರಾಹ್ಮಣರಲ್ಲಿ ತಾನು ಮುಂಚೆ ಇಟ್ಟಿದ್ದ ಭಕ್ತಿಯನ್ನು ಬಿಟ್ಟು ಬಿಟ್ಟನು. ಅನಂತರದಲ್ಲಿ ಅವನು ಧನಮದ ದಿಂದ ಕೂಡಿದವನಾಗಿ ಯಾವಾಗಲೂ ಇಹಲೋಕದ ಸೌಖ್ಯಗಳಲ್ಲೇ ಮಗ್ನನಾಗಿ ಭಗವಂತನ ಕಥೆಗಳೇ ಮುಂತಾದವುಗಳ ಶ್ರವಣಾದಿಗಳನ್ನು ಬಿಟ್ಟು ಬಿಟ್ಟನು. ||೫೭-೫೮-೫೯-೬೦||

ಮತ್ತು ಕುವಲನು ದೇವರ ಪೂಜೆಯನ್ನು ಬಿಟ್ಟು ಪಾಪದ ಭೀತಿಯನ್ನೂ ಬಿಟ್ಟುಬಿಟ್ಟನು. ಹೀಗೆ ಕುವಲನು ಅನಧಿಕಾರಿಯಾದುದರಿಂದ ವೇದಾಂತೋಪ ದೇಶವನ್ನು ಗ್ರಹಿಸಲಾರದವನಾಗಿ ನಾಸ್ತಿಕನಂತೆ ವರ್ತಿಸಿ ಕಡೆಗೆ ದುರ್ಗತಿಯನ್ನೂ ಹೊಂದಿದನು! ಎಲೈ ಪರಶುರಾಮನೇ, ಹೀಗೆ ನಡೆದ ಚಾಪೆ ಕೆಲಸದವನ ಕಥೆ ಯನ್ನು ಹೇಳಿದ್ದೇನೆ. ಆದ್ದರಿಂದ ಹೇಳಬಾರದ ಕಾಲದಲ್ಲಿ ವಿಷಯಗಳನ್ನು ಹೇಳಿದರೆ ಹೀಗೆ ಅದು ತಪ್ಪೇ ಆಗಿ, ಅನರ್ಥವೇ ವುಂಟಾಗುವುದು. ||೬೧-೬೨||

ಜಗತ್ತಿಗೆಲ್ಲಕ್ಕೂ ತಾತನಾದ ಬ್ರಹ್ಮನು ಹೀಗೆ ಭೂಮಿಯನ್ನು ನೋಡಿ ಸ್ಥಾವರ,

ಮನುಷ್ಯಾನ್ಯಕ್ಷ ಗಂಧರ್ವಾನ್ ಸಿದ್ಧವಿದ್ಯಾಧ್ರಕಿನ್ನರಾನ್ ।
ರಕ್ಷಾಂಸಿ ದಾನವಾನ್ ದೈತ್ಯಾನ್ ಭೂತಪ್ರೇತಪಿಶಾಚಕಾನ್ ॥೬೪॥

ದೇವಾನ್ಪಿತ್ರ್ಯಾನ್ ಸುರಾಧೀಶಾನ್ ಪಶೂನಶ್ವಾನಜಾನ್ಖಗಾನ್ ।
ಭೂಚರಾನ್ ಜಲ ಜಾತಾಂಶ್ಚ ತೃಣವೀರುದ್ದ್ರುಮಾಂ ಸ್ತಥಾ ॥೬೫॥

ಭುವನಾನ್ಯಪಿ ಚಿತ್ರಾಣಿ ವಿಧಿರೇವಂ ಸಸರ್ಜ ವೈ ।
ಸೃಷ್ಟಂ ಸೃಷ್ಟಂ ಕ್ಷಣೇನೈವ ಸರ್ವಂ ತತ್ರಾಽವಸೀದತಿ ॥೬೬॥

ದೃಷ್ಟ್ವಾಽವಸನ್ನಾಂ ಸೃಷ್ಟಿಂ ಸ್ವಾಂ ಪುನರೇವ ಮನೋ ದಧೇ ।
ತಪಸ್ಯಾಸು ತದಾಽತೀತೇ ಬಹುಕಾಲೇ ಪರಾಽಂಬಿಕಾ ॥೬೭॥

ಪ್ರಾಹಾಽಶರೀರವಚನಾ ವಿಧೇ ಕಿಂ ತಪಸಿ ಸ್ಥಿತಃ ।
ಮಯಾ ಸೃಷ್ಟೌ ನಿಯುಕ್ತಃ ಸನ್ಸೃಷ್ಟಿಂ ತ್ಯಕ್ತ್ವಾ ಕಿಮಾಸ್ಥಿತಃ ॥೬೮॥

ತಚ್ಛ್ರುತ್ವಾ ವಚನಂ ಪ್ರಾಹ ವಿಧಾತಾಽಕಾಶರೂಪಿಣೀಂ ।
ಮಾತರ್ಮಯಾ ಸೃಜ್ಯಮಾನಂ ಕ್ಷಣಾದೇವಾಽವಸೀದತಿ ॥೬೯॥

ಜಂಗಮ ಪ್ರಾಣಿಗಳು ಮತ್ತು ಮಾನವರಿಂದ ಕೂಡಿದ ಜಗತ್ತನ್ನು ತನ್ನ ಮನಸ್ಸಿನಿಂದಲೇ ಸೃಷ್ಟಿಮಾಡಿದನು. ॥೬೩॥

ಅನಂತರದಲ್ಲಿ ಬ್ರಹ್ಮನು, ಮನುಷ್ಯರು, ಯಕ್ಷರು, ಗಂಧರ್ವರು, ಸಿದ್ಧರು, ವಿದ್ಯಾಧರರು, ಕಿನ್ನರರು, ರಾಕ್ಷಸರು, ದಾನವರು, ದೈತ್ಯರು, ಭೂತಗಳೂ, ಪ್ರೇತಗಳೂ, ಪಿತೃದೇವತೆಗಳೂ ದೇವತೆಗಳ ಅಧಿಪತಿಗಳು, ಪಶುಗಳು, ಕುದುರೆಗಳು, ಆಡುಗಳು, ಪಕ್ಷಿಗಳು ಭೂಮಿಯಮೇಲೆ ಚಲಿಸುವ ಪ್ರಾಣಿಗಳು, ಮತ್ತೆ ನೀರಿನಲ್ಲಿ ಹುಟ್ಟುವ ಪ್ರಾಣಿಗಳೂ, ಹುಲ್ಲು, ಬಳ್ಳಿಗಳು, ಮರಗಳು, ಮನೋಹರವಾದ ಮನೆಗಳು, ಇವೆಲ್ಲವನ್ನೂ ಸೃಷ್ಟಿಮಾಡಿದನು. ಹೀಗೆ ಬ್ರಹ್ಮನು ಎಲ್ಲವನ್ನೂ ಸೃಷ್ಟಿಮಾಡಿದರೂ, ಸೃಷ್ಟಿಮಾಡಿದ ಉತ್ತರಕ್ಷಣದಲ್ಲಿಯೇ ಅವು ಲಯವಾಗುತ್ತಿದ್ದುದನ್ನು ಕಂಡನು. ॥೬೪-೬೫-೬೬॥

ಬ್ರಹ್ಮನು ತಾನು ಸೃಷ್ಟಿಮಾಡಿದ ಎಲ್ಲವೂ ಹೀಗೆ ವ್ಯರ್ಥವಾದದ್ದನ್ನು ಕಂಡು ತಪಸ್ಸುಮಾಡಲು ಪ್ರಾರಂಭಿಸಿದನು. ಹೀಗೆ ಬ್ರಹ್ಮನು ತಪಸ್ಸುಮಾಡಲು ಪ್ರಾರಂಭಿಸಿ ಬಹಳ ಕಾಲಕಳೆಯಲು ಶ್ರೇಷ್ಠಳಾದ ದೇವಿಯು ಅಶರೀರವಾಣಿಯಿಂದ ಬ್ರಹ್ಮನನ್ನು

ತತ್ಪಾಲನೇ ನಿಯುಂಕ್ಷ್ವೈನಂ ವಿಷ್ಣುಂ ಲೋಕೇಶ್ವರಂ ಶಿವೇ ।
ವಿಮೃಶ್ಯ ಬ್ರಹ್ಮವಚನಂ ಸಾ ಪರಾಽಕಾಶರೂಪಿಣೀ ॥೨೦॥

ಆಕಾಶವಾಣ್ಯಾಂ ತಂ ವಿಷ್ಣುಂ ಪ್ರಾಹ ಸಾ ಪರಮೇಶ್ವರೀ ।
ಉತ್ತಿಷ್ಠ ವಿಷ್ಣೋ ತಪಸೋ ವಿರಮಾಽಚಕ್ಷ್ವ ಮದ್ವಚಃ ॥೨೧॥

ಪಾಲನಾರ್ಥಂ ಮಯಾ ಸೃಷ್ಟಃ ಸತ್ವಮಾಜ್ಞಾವಶೇನ ಮೇ ।
ವಿಧಿಸೃಷ್ಟಂ ಪಾಲಯಸ್ವ ಸ್ವಾಽತ್ಮಶಕ್ತಿಂ ಸಮಾಶ್ರಿತಃ ॥೨೨॥

ಇತಿ ವಾಕ್ಯಂ ಸಮಾಕರ್ಣ್ಯ ಪರಾಂಽಬಾಯಾ ಹರಿಸ್ತದಾ ।
ನಮಸ್ಕೃತ್ಯ ತಥೇತ್ಯುಕ್ತ್ವಾ ಜಗತ್ಪಾಲನ ತತ್ಪರಃ ॥೨೩॥

ಸ್ವಾತ್ಮಶಕ್ತಿಂ ಸಮಾಶ್ರಿತ್ಯ ಹರಿರ್ಯೋಗೇಶ್ವರೋ ಜಗತ್ ।
ತತ್ರ ತತ್ರ ಸ್ಥಿತಂ ಸರ್ವ ಮಪಾಲಯದಶೇಷತಃ ॥೨೪॥

ಕುರಿತು ಎಲೈ ಬ್ರಹ್ಮನೇ, ನೀನೇಕೆ ಇಷ್ಟೊಂದು ತಪಸ್ಸನ್ನು ಮಾಡುತ್ತಿದ್ದೀಯೆ? ನಾನು ನಿನಗೆ ಸೃಷ್ಟಿಮಾಡೆಂದು ನೇಮಿಸಿರಲು ಅದನ್ನು ಬಿಟ್ಟು ಏಕೆ ತಪಸ್ಸನ್ನು ನೀನು ಕೈಗೊಂಡಿರುವೆ? ಎಂದು ಕೇಳಿದಳು. ಬ್ರಹ್ಮನು ಈ ಮಾತನ್ನು ಕೇಳಿ ಆಕಾಶ ಸ್ವರೂಪಳಾದ ದೇವಿಯನ್ನು ಕುರಿತು ತಾಯಿಯೇ, ನಾನು ಸೃಷ್ಟಿಮಾಡುತ್ತಿದ್ದರೂ ಅದು ಕ್ಷಣಕಾಲದಲ್ಲೇ ಲಯವಾಗುತ್ತಿದೆ ಎಂದು ಬಿನ್ನೈಸಿದನು. ||೧೭-೧೮-೧೯||

ಓ ಶಿವನ ಶಕ್ತಿಯಾದ ದೇವಿಯೇ, ನಾನು ಸೃಷ್ಟಿಮಾಡಿದ ಜಗತ್ತನ್ನು ಪಾಲಿಸಲು ವಿಷ್ಣುವನ್ನು ನಿಯಮಿಸು. ಶ್ರೇಷ್ಠವಾದ ಆಕಾಶಸ್ವರೂಪಳಾದ ದೇವಿಯು ಬ್ರಹ್ಮನ ಅಭಿಪ್ರಾಯವನ್ನು ವಿಮರ್ಶಿಸಿ ಆಕಾಶವಾಣಿಯಿಂದ ವಿಷ್ಣುವನ್ನು ಕುರಿತು ಎಲೈ ವಿಷ್ಣುವೇ, ನೀನು ತಪಸ್ಸನ್ನು ಮಾಡುವುದನ್ನು ಬಿಟ್ಟು ನನ್ನ ಈ ಮಾತನ್ನು ಕೇಳು. ಜಗತ್ತನ್ನು ರಕ್ಷಿಸುವುದಕ್ಕಾಗಿ ನಿನ್ನನ್ನು ಸೃಷ್ಟಿಸಿದೆನು. ಆದ್ದರಿಂದ ನಿನ್ನ ಸ್ವಶಕ್ತಿಯಿಂದ ಬ್ರಹ್ಮನು ಸೃಷ್ಟಿಮಾಡಿದ ಜಗತ್ತನ್ನು ನನ್ನ ಅಪ್ಪಣೆಯ ಪ್ರಕಾರ ರಕ್ಷಿಸಬೇಕು. ||೨೦-೨೧-೨೨||

ಶ್ರೇಷ್ಠಳಾದ ಜಗನ್ಮಾತೆಯ ವಾಕ್ಯವನ್ನು ಕೇಳಿ ವಿಷ್ಣುವು ಆಕೆಯನ್ನು ನಮಸ್ಕರಿಸಿ ಹಾಗೆಯೇ ಮಾಡುವೆನು ಎಂದು ಹೇಳಿ ಜಗತ್ತಿನ ರಕ್ಷಣೆಯಲ್ಲಿ ಆಸಕ್ತನಾದನು. ಯೋಗೇಶ್ವರನಾದ ವಿಷ್ಣುವು ತನ್ನ ಆತ್ಮಶಕ್ತಿಯ ಪ್ರಭಾವದಿಂದ ಜಗತ್ತ

ಏವಂ ಜಗತ್ಸೃಜ್ಯಮಾನಂ ಪಾಲ್ಯಮಾನಂ ಚ ವಿಷ್ಣುನಾ ।
ಸಮವರ್ಧತ ವರ್ಷಾಂಬು ಸ್ರೋತೋಭಿರ್ಹ್ರದತೋಯವತ್ ॥೭೫॥

ಆಪೂರಿತಂ ಜಗತ್ಸೃಷ್ಟ್ಯಾ ಪ್ರತ್ಯಹಂ ವರ್ಧಮಾನಯಾ ।
ಭೂಚರೈರ್ಭರಿತಾ ಭೂಮಿಃ ಖೇಚರೈರ್ಭರಿತಂ ನಭಃ ॥೭೬॥

ಯಾದೋಭಿರ್ಜಲಮಾಕ್ರಾಂತಂ ಕೃಮಿಕೀಟೈರ್ಬಲಂ ತಥಾ ।
ತರುಗುಲ್ಮಾದಿಭಿಸ್ತದ್ವದ್ವ್ಯಾಪ್ತಾಃದ್ರೇರ್ದುರ್ಗಭೂಮಿಕಾಃ ॥೭೭॥

ಶ್ವಾಪದೈರ್ಮೃಗವ್ಯಾಘ್ರಾದ್ಯೈಃ ಸಂವ್ಯಾಪ್ತಾನಿ ವನಾನಿ ಚ ।
ಮಶಕೈರ್ಮಕ್ಷಿಕಾದ್ಯೈಶ್ಚ ವ್ಯಾಪ್ತಂ ಸರ್ವಾಂತರಂ ತದಾ ॥೭೮॥

ಏವಂ ಜಗತಿ ಸಂವ್ಯಾಪ್ತೇ ನಿರಂತರತಯಾ ಸ್ಥಿತೇ ।
ಆಕ್ರಂದಸ್ಸಮಭೂತ್ತತ್ರ ಪ್ರಾಣಿನಾಂ ಪೀಡಿತಾತ್ಮನಾಂ ॥೭೯॥

ನ್ನೆಲ್ಲವನ್ನೂ ರಕ್ಷಿಸಲು ಪ್ರಾರಂಭಿಸಿದನು. ಹೀಗೆ ಬ್ರಹ್ಮನು ಜಗತ್ತನ್ನು ಸೃಷ್ಟಿಸುತ್ತಲೂ, ಅದನ್ನು ವಿಷ್ಣುವು ಕಾಪಾಡುತ್ತಲೂ ಇರಲಾಗಿ ವರ್ಷಾಕಾಲದ ಮಳೆಯ ಧಾರೆಯಿಂದ ಕೊಳವು ನೀರಿನಿಂದ ತುಂಬಿಹೋಗುವಂತೆ ಜಗತ್ತು ವೃದ್ಧಿಹೊಂದಿತು. ||೭೩-೭೪-೭೫||

ಪ್ರತಿದಿನವೂ ಜಗತ್ತು ನಾನಾ ಬಗೆಯ ಪದಾರ್ಥಗಳಿಂದ ತುಂಬಿಹೋಯಿತು. ಭೂಮಿಯಮೇಲೆ ಸಂಚರಿಸುವ ಪ್ರಾಣಿವರ್ಗಗಳಿಂದ ಭೂಮಿಯು ತುಂಬಿಹೋಯಿತು. ಆಕಾಶದಲ್ಲಿ ಸಂಚರಿಸುವ ಪ್ರಾಣಿವರ್ಗಗಳಿಂದ ಆಕಾಶವೂ ಕೂಡ ತುಂಬಿಹೋಯಿತು. ||೭೬||

ಜಲಜಂತುಗಳಿಂದ ನೀರಿನ ಪ್ರದೇಶಗಳೆಲ್ಲವೂ ತುಂಬಿಹೋದವು. ಕ್ರಿಮಿಕೀಟಗಳಿಂದ ಬಿಲಗಳೆಲ್ಲವೂ ತುಂಬಿಹೋದವು. ಹಾಗೆಯೇ ಪರ್ವತಗಳ ಪ್ರದೇಶಗಳೆಲ್ಲವೂ ಮರ, ಪೊದರು ಇವುಗಳಿಂದ ತುಂಬಿಹೋದವು. ಅವಕಾಶವಿರುವ ಜಾಗಗಳಲ್ಲೆಲ್ಲಾ ಸೊಳ್ಳೆಗಳೂ, ನೊಣಗಳೂ, ತುಂಬಿಕೊಂಡವು. ಹೀಗೆ ಪ್ರಪಂಚವು ಎಲ್ಲೆಲ್ಲಿಯೂ ಅನೇಕ ಸ್ಥಾವರಜಂಗಮ ಪ್ರಾಣಿಗಳಿಂದ ತುಂಬಿ ನಿಬಿಡವಾಗಲು ತೊಂದರೆಗೊಳಗಾದ ಪ್ರಾಣಿಗಳು ಕಿರಿಚುತ್ತಿರುವುದು ಕೇಳಿಬಂದಿತು. ||೭೭-೭೮-೭೯||

ವಿದೀರ್ಯಮಾಣಂ ಬ್ರಹ್ಮಾಂಡ ಮಾಸೀತ್ಪ್ರಾಣಿಭಿರಾತತಂ ।
ಬೀಜಪುಷ್ಟ್ಯಾ ದಾಡಿಮಾನಾಂ ಯಥಾ ಪಕ್ವಫಲಂ ತಥಾ ॥೮೦॥

ಏವಂ ಜಾತೇ ನಿರುಚ್ಛ್ವಾಸೇ ಲೋಕೇ ಸಂಮೃದಿತಾಕುಲೇ ।
ದೃಷ್ಟ್ವಾ ವಿಧಿಶ್ಚಿಂತಯಾಸೋ ಹಾ ಕಷ್ಟಮಿತಿ ನಿಶ್ವಸನ್ ॥೮೧॥

ಪುನರಾತಿಷ್ಠತ ತಪೋ ವಿಧಿರ್ಲೋಕ ಹಿತೇಪ್ಸಯಾ ।
ತಪಸಾ ತಸ್ಯ ಸಂತುಷ್ಟಾ ಪುನರಾಹ ಪರಾಂಬಿಕಾ ॥೮೨॥

ಆಕಾಶವಾಣ್ಯಾ ಧಾತಾರಂ ಹರ್ಷಯಂತೀ ಮಹೇಶ್ವರೀ ।
ವಿಧೇ ಪುನಃ ಕಿಂ ತಪಸಿ ಸ್ಥಿತಸ್ತದ್ವದ ಮೇಽಚಿರಂ ॥೮೩॥

ಅಭೀಷ್ಟಂ ಯದಹಂ ತತ್ತೇ ವಿಧಾಸ್ಯಾಮಿ ನ ಸಂಶಯಃ ।
ಇತ್ಯುಕ್ತಃ ಪ್ರಾಹ ಲೋಕಾನಾಂ ಕರ್ತಾ ಧಾತಾ ಪರಾಂಬಿಕಾಂ ॥೮೪॥

ಮಾತರ್ಮಯಾ ಸೃಜ್ಯಮಾನಂ ಪಾಲ್ಯಮಾನಂ ಗದಾಭೃತಾ ।
ವ್ಯಾಪ್ತಂ ಪ್ರಾಣಿಭಿರತ್ಯಂತಂ ಪೀಡಿತಂ ಸಕಲಂ ಜಗತ್ ॥೮೫॥

ಪ್ರಾಣಿಗಳಿಂದ ನಿಬಿಡವಾದ ಬ್ರಹ್ಮಾಂಡವು ಸೀಳಿಹೋಗುವಂತಿತ್ತು! ಹೀಗೆ ಮಾಗಿ ಕಳಿತಿರುವ ದಾಳಿಂಬದ ಹಣ್ಣಿನಲ್ಲಿ ಕಾಳುಗಳು ನಿಬಿಡವಾಗಿ ತುಂಬಿರುವಂತೆ, ಲೋಕದಲ್ಲಿ ಉಸಿರಾಡುವಷ್ಟೂ ಜಾಗವಿಲ್ಲದೇ ಎಲ್ಲೆಲ್ಲಿಯೂ ಘರ್ಷಣೆಗೆ ಆರಂಭವಾಗಲು ಬ್ರಹ್ಮನು ಚಿಂತಾಕ್ರಾಂತನಾಗಿ ಅಯ್ಯೋ ಕಷ್ಟ! ಎಂದು ನಿಟ್ಟುಸಿರು ಬಿಡುತ್ತಾ ಲೋಕದ ಹಿತಕ್ಕಾಗಿ ಪುನಃ ತಪಸ್ಸಿಗೆ ಕುಳಿತನು. ಶ್ರೇಷ್ಠಳಾದ ಜಗನ್ಮಾತೆಯು ಇವನ ತಪಸ್ಸಿಗೆ ಮೆಚ್ಚಿ ಪುನಃ ಈರೀತಿಯಾಗಿ ಹೇಳಿದಳು. ||೮೦-೮೧-೮೨||

ಮಹೇಶ್ವರನ ಪತ್ನಿಯಾದ ದೇವಿಯು ಬ್ರಹ್ಮನನ್ನು ಆಕಾಶವಾಣಿಯಿಂದ ಸಂತೋಷ ಪಡಿಸಿದವಳಾಗಿ ಅವನನ್ನು ಕುರಿತು ಎಲೈ ಬ್ರಹ್ಮನೇ, ಪುನಃ ಏಕೆ ಬಹಳ ತಪಸ್ಸನ್ನು ಮಾಡುತ್ತಿದ್ದೀಯೆ? ಹೇಳು, ನಿನ್ನ ಅಭಿಲಾಷೆಯನ್ನು ತಿಳಿಸಿದರೆ ಅದನ್ನು ನಾನು ನೆರವೇರಿಸಿಕೊಡುವೆನು. ಈ ವಿಷಯದಲ್ಲಿ ಸಂಶಯವೇ ಇಲ್ಲವು. ಹೀಗೆ ದೇವಿಯು ಹೇಳಲಾಗಿ ಸೃಷ್ಟಿಕರ್ತನಾದ ಬ್ರಹ್ಮನು ಜಗನ್ಮಾತೆಯನ್ನು ಕುರಿತು ತಾಯಿಯೇ, ನಾನು ಸೃಷ್ಟಿಮಾಡುವ ಮತ್ತು ವಿಷ್ಣುವು ರಕ್ಷಿಸುವ ಪ್ರಾಣಿಗಳು

ಅನಂತರಂ ವಿಧೇಯಂ ಯತ್ತದಾಜ್ಞಾಪಯ ಶಂಕರಿ ।
ಏವಮುಕ್ತಾ ಜಗದ್ಧಾತ್ರೀ ಪ್ರಾಹ ರುದ್ರಂ ಮಹೇಶ್ವರಂ ॥೮೬॥

ರುದ್ರಾಲಂ ತಪಸಾ ಶೀಘ್ರಮುತ್ತಿಷ್ಠ ಮಮ ಶಾಸನಾತ್ ।
ವಿಧಿಸೃಷ್ಟಂ ಪ್ರಾಣಿಗಣಂ ಸಂಹರ್ತುಂ ತ್ವ ಮಿಹಾರ್ಹಸಿ ॥೮೭॥

ಇತಿ ಶ್ರುತ್ವಾ ಜಗನ್ಮಾತು ರ್ವಚನಂ ಖಾಶ್ರಿತಂ ತದಾ ।
ನಮಸ್ಕೃತ್ವಾ ಪಶುಪತಿಸ್ತಾಂ ಪರಬ್ರಹ್ಮರೂಪಿಣೀಂ ॥೮೮॥

ಓಮಿತ್ಯಾಹಾಥ ಜಗತಸ್ಸಂಹಾರೇ ಕೃತನಿಶ್ಚಯಃ ।
ಫಾಲನೇತ್ರೋನ್ಮೇಷಣೇನ ಯುಗಪದ್ಭಸ್ಮಸಾತ್ಕರೋತ್ ॥೮೯॥

ತದ್ದೃಷ್ಟ್ವಾ ಕೃತ್ಯಮಾಶ್ಚರ್ಯಂ ವಿಧಾತಾ ಜಗತಃ ಕ್ಷಯಂ ।
ಅಸಂತುಷ್ಟಃ ಪ್ರಾಹ ರುದ್ರಂ ನಮಸ್ಕೃತ್ಯ ಕೃತಾಂಜಲಿಃ ॥೯೦॥

ಲೆಕ್ಕವಿಲ್ಲದಷ್ಟಾಗಿ ಪ್ರಪಂಚದಲ್ಲಿ ಸ್ಥಳವೇ ಇಲ್ಲದೇ ಜಗತ್ತೆಲ್ಲವೂ ಬಹಳ ಕಷ್ಟಕ್ಕೆ ಗುರಿಯಾಗಿದೆ! ॥೮೩-೮೪-೮೫॥

ಎಲೌ ಶಂಕರನ ಪತ್ನಿಯಾದ ದೇವಿಯೇ, ಇದಕ್ಕೆ ಮುಂದೆ ಮಾಡಬೇಕಾದುದನ್ನು ದಯವಿಟ್ಟು ಅಪ್ಪಣೆಕೊಡಿಸಬೇಕು. ಹೀಗೆ ಬ್ರಹ್ಮನು ಜಗನ್ಮಾತೆಯನ್ನು ಪ್ರಾರ್ಥಿಸಲಾಗಿ ಆಕೆಯು ರುದ್ರಸ್ವರೂಪನಾದ ಮಹೇಶ್ವರನನ್ನು ಕುರಿತು ಹೀಗೆಂದಳು ॥೮೬॥

ಎಲೈ ರುದ್ರನೇ, ನೀನು ತಪಸ್ಸನ್ನು ಮಾಡುವುದನ್ನು ಸಾಕುಮಾಡಿ ನನ್ನ ಅಪ್ಪಣೆಯಂತೆ ಬ್ರಹ್ಮನಿಂದ ಸೃಷ್ಟಿಸಲ್ಪಟ್ಟ ಪ್ರಾಣಿಗಳ ಸಮೂಹವನ್ನು ಸಂಹಾರಮಾಡಲು ಈಗಲೇ ಪ್ರಾರಂಭಿಸು. ಎಂದಳು. ಜಗನ್ಮಾತೆಯು ಆಕಾಶವಾಣಿಯಿಂದ ಹೇಳಿದ ಈ ಮಾತನ್ನು ಶಿವನು ಕೇಳಿ ಪರಬ್ರಹ್ಮಸ್ವರೂಪಳಾದ ಜಗನ್ಮಾತೆಯನ್ನು ನಮಸ್ಕರಿಸಿದನು. ॥೮೭-೮೮॥

ಅನಂತರ ಶಿವನು ಜಗತ್ತನ್ನು ಸಂಹಾರಮಾಡುವುದರಲ್ಲಿ ಅತ್ಯಂತ ದೃಢಮನಸ್ಸುಳ್ಳವನಾಗಿ ಹಾಗಾಗಲಿ ಎಂದು ಹೇಳಿ ತನ್ನ ಹಣೆಯಲ್ಲಿರುವ ಕಣ್ಣನ್ನು ಬಿಟ್ಟು ಒಂದೇ ಕಾಲದಲ್ಲಿ ಜಗತ್ತನ್ನು ಭಸ್ಮವಾಗುವಂತೆ ಮಾಡಿದನು. ಬ್ರಹ್ಮನು ಶಿವನು ಆಶ್ಚರ್ಯಕರವಾಗುವಂತೆ ನಾಶಮಾಡಿದುದನ್ನು ನೋಡಿ, ಬಹಳ ಸಂಕಟಪಟ್ಟು, ಶಿವನಿಗೆ ಕೈಮುಗಿದು ನಮಸ್ಕಾರವನ್ನು ಮಾಡಿ, ಅವನನ್ನು ಕುರಿತು ಹೀಗೆ ಬಿನ್ನೈ

ಅಲಂ ಮಹೇಶ ಭವತಃ ಸಂಹೃತೇ ರತಿ ಚಿತ್ರಿತಾತ್ ।
ಬಹುಕಾಲೇನ ಸೃಷ್ಟಂ ಮೇ ತ್ವಯಾ ಭಸ್ಮೀಕೃತಂ ಕ್ಷಣಾತ್ ॥೯೧॥

ತತ್ಪುನಸ್ತಪ ಆತಿಷ್ಠ ಲೋಕಾನಾಂ ಸ್ವಸ್ತಯೇಽಧುನಾ ।
ಇತಿ ಸಂಪ್ರಾರ್ಥಿತೋ ಧಾತ್ರಾ ಪುನಸ್ತಪಸಿ ಸಂಸ್ಥಿತಃ ॥೯೨॥

ತತಶ್ಚಿಂತಾ ಸಮಾವಿಷ್ಟಃ ಸೃಷ್ಟಿರ್ಮೇ ಸ್ಯಾತ್ಕಥಂ ತ್ವಿತಿ ।
ತತಃ ಪ್ರಜಾಪತೀನ್ ಬ್ರಹ್ಮಾ ಸ್ವಾಂಶೇನಾಽಸೃಜತ ಪ್ರಭುಃ ॥೯೩॥

ದಕ್ಷ ಕಶ್ಯಪ ಮುಖ್ಯಾನ್ವೈ ಸೃಷ್ಟಾಸ್ತೈಃ ಪ್ರಾಣಿನಸ್ತದಾ ।
ವಿವಿಧಾಸ್ತೈಃ ಸಮಗ್ರಂ ವೈ ಜಗದ್ವ್ಯಾಪ್ತಂ ಚರಾಚರೈಃ ॥೯೪॥

ತದಾ ಕ್ರಮೇಣ ಜಗತಾಂ ಸಂಹಾರಾರ್ಥಮಚಿಂತಯತ್ ।
ಸ್ತುತ್ವಾ ರುದ್ರಂ ಪಶುಪತಿಂ ಪ್ರಸಾದ್ಯ ಪ್ರಪಿತಾಮಹಃ ॥೯೫॥

ಸಿದನು. :—ಪೂಜ್ಯನಾದ ಶಿವನೇ, ನೀನು ಅತ್ಯಂತ ಆಶ್ಚರ್ಯಕರವಾಗುವಂತೆ ಸಂಹಾರ ಮಾಡುವುದನ್ನು ದಯವಿಟ್ಟು ನಿಲ್ಲಿಸು. ನಾನು ಬಹಳ ಕಾಲ ಶ್ರಮಪಟ್ಟು ಸೃಷ್ಟಿಸಿದ ಪ್ರಾಣಿಗಳೆಲ್ಲವನ್ನೂ ನೀನು ಒಂದು ಕ್ಷಣಕಾಲದಲ್ಲಿಯೇ ಬೂದಿಯಾಗುವಂತೆ ಮಾಡಿದೆ! ||೮೯-೯೦-೯೧||

ಆದುದರಿಂದಪುನಃ ಲೋಕಕ್ಕೆ ಕ್ಷೇಮವುಂಟಾಗುವುದಕ್ಕಾಗಿ ತಪಸ್ಸು ಮಾಡು. ಎಂದು ಬ್ರಹ್ಮನು ಶಿವನನ್ನು ಪ್ರಾರ್ಥಿಸಲಾಗಿ, ಶಿವನು ಪುನಃ ತಪಸ್ಸಿಗೆ ಆರಂಭಿಸಿದನು. ಅನಂತರ ಸೃಷ್ಟಿಕಾರ್ಯವು ಹೇಗೆ ಮುಂದುವರಿಯುವುದು? ಎಂದು ಆಲೋಚಿಸಿ ಸ್ವಾಮಿಯಾದ ಬ್ರಹ್ಮನು ತನ್ನ ಅಂಶದಿಂದ ದಕ್ಷ, ಕಶ್ಯಪ, ಮೊದಲಾದ ಇತರ ಬ್ರಹ್ಮರನ್ನು ಸೃಷ್ಟಿಸಿದನು. ಅನಂತರ ಅವರು ಪ್ರಾಣಿಗಳನ್ನು ಸೃಷ್ಟಿಮಾಡಿದರು. ದಕ್ಷಬ್ರಹ್ಮನೇ ಮೊದಲಾದವರು ಸೃಷ್ಟಿಮಾಡಿದ ಸ್ಥಾವರ ಜಂಗಮವರ್ಗಗಳಿಂದ ಪ್ರಪಂಚವೆಲ್ಲವೂ ತುಂಬಿಹೋಯಿತು. ||೯೨-೯೩-೯೪||

ಅನಂತರದಲ್ಲಿ ಬ್ರಹ್ಮನು ಪಶುಪತಿಯಾದ ರುದ್ರನನ್ನು ಸ್ತೋತ್ರಮಾಡಿ ಅವನನ್ನು ಮೆಚ್ಚಿಸಿ ಕ್ರಮವಾಗಿ ಜಗತ್ತನ್ನು ಸಂಹಾರಮಾಡಿಸಬೇಕೆಂದು ಯೋಚಿಸಿದನು. ಆ ಮೇಲೆ ಶಿವನ ಅಂಶದಿಂದ ಮೃತ್ಯುವು ಸೃಷ್ಟನಾದನು. ಬ್ರಹ್ಮನು ಆ ಮೃತ್ಯುವನ್ನು ಸಂಹಾರಕಾರ್ಯದಲ್ಲಿ ನಿಯಮಿಸಿದನು. ಬ್ರಹ್ಮನು ಮೃತ್ಯುವನ್ನು ಕುರಿತು, ಎಲೈ

ತಸ್ಯಾಂಶೇನಾಽಸೃಜನ್ಮೃತ್ಯುಂ ಸಂಹಾರೇ ತಂ ನ್ಯಯೋಜಯತ್ ।
ಮೃತ್ಯೋ ಮಮಾಜ್ಞಯಾ ಚೈತಾನ್ಸಂಹರ ಕ್ರಮಶೋಽಖಿಲಾನ್ ॥೯೬॥

ಮಯಾ ತ್ವಮೇತದರ್ಥಂ ವೈ ಸೃಷ್ಟಃ ಸಂಹೃತಿಹೇತವೇ ।
ತಚ್ಛ್ರುತ್ವಾ ಬ್ರಹ್ಮಣೋ ವಾಕ್ಯಂ ಮೃತ್ಯುಃ ಪ್ರಾಹ ಪಣಮ್ಯ ತಂ ॥೯೭॥

ನ ಸಂಹರ್ತುಮಿಹೇಚ್ಛಾಮಿ ಭಗವನ್ಕ್ಷಂತು ಮರ್ಹಸಿ ।
ಶಪಿಷ್ಯಂತಿ ಜನಾ ಮಾಂ ವೈ ನ ಮಾಂ ಕ್ರೌರ್ಯೇ ನಿಯೋಜಯ ॥೯೮॥

ಬಹುಧೈವಂ ಪ್ರಾರ್ಥಿತೋಽಪಿ ನ ತದ್ಬ್ರಹ್ಮಾಽನುಮನ್ಯತ ।
ಪ್ರತಿಷಿದ್ಧಸ್ತತ್ರ ಧಾತ್ರಾ ತಪಃ ಪರಮಮಾಸ್ಥಿತಃ ॥೯೯॥

ವರ್ಷಾಣಾಮಯುತಂ ತತ್ರ ಪಾದಾಂಗುಷ್ಠ ಸಮಾಶ್ರಯಃ ।
ಶೀರ್ಣಪರ್ಣಾಶನೋ ದಾಂತಸ್ತದಾ ಲೋಕಸೃಡೀಶ್ವರಃ ॥೧೦೦॥

ಸುಪ್ರಸನ್ನ ಉವಾಚೈವಂ ಮೃತ್ಯೋಽಹಂ ತಪಸಾ ತವ ।
ತುಷ್ಟಃ ಪ್ರತೀಚ್ಛ ಯನ್ಮತ್ತೋ ವರಂ ವಾಂಛಿತಮಸ್ತಿ ತತ್ ॥೧೦೧॥

ಮೃತ್ಯುವೇ, ನನ್ನ ಆಜ್ಞೆಯಿಂದ ಕ್ರಮವಾಗಿ ಈ ಪ್ರಾಣಿವರ್ಗಗಳೆಲ್ಲವನ್ನೂ ಸಂಹಾರ ಮಾಡು. ನಾನು ನಿನ್ನನ್ನು ಜಗತ್ತೆಲ್ಲವನ್ನೂ ಸಂಹಾರಮಾಡಲೆಂದೇ ಸೃಷ್ಟಿಮಾಡಿದ್ದೇನೆ. ಎಂದು ಅಪ್ಪಣೆ ಮಾಡಲು ಬ್ರಹ್ಮನ ಈ ಮಾತನ್ನು ಕೇಳಿ ಮೃತ್ಯುವು ಅವನಿಗೆ ನಮಸ್ಕರಿಸಿ ಹೀಗೆ ಅವನನ್ನು ಕುರಿತು ಪೂಜ್ಯರೇ, ನಾನು ನಿಮ್ಮ ಕ್ಷಮೆಯನ್ನು ಬೇಡುತ್ತೇನೆ. ನಾನು ಸಂಹಾರಕಾರ್ಯವನ್ನು ಮಾಡಲು ಇಷ್ಟಪಡುವುದಿಲ್ಲ. ಏಕೆಂದರೆ ಜನರು ನನ್ನನ್ನು ಶಪಿಸುವರು. ಆದ್ದರಿಂದ ತಾವು ದಯುವಿಟ್ಟು ಇಂಥಾ ಕ್ರೂರಕಾರ್ಯಗಳಲ್ಲಿ ನನ್ನನ್ನು ನಿಯಮಿಸಬೇಡಿ. ಎಂದು ಪ್ರಾರ್ಥಿಸಿದನು. ||೯೫-೯೬-೯೭-೯೮||

ಮೃತ್ಯುವು ಬ್ರಹ್ಮನನ್ನು ಹೀಗೆ ಅನೇಕಸಲ ಪ್ರಾರ್ಥಿಸಿದಾಗ್ಯೂ ಬ್ರಹ್ಮನು ಒಪ್ಪಲೇಇಲ್ಲ. ತನ್ನ ಪ್ರಾರ್ಥನೆಯು ಈರೀತಿಯಾಗಿ ಬ್ರಹ್ಮನಿಂದ ತಿರಸ್ಕೃತವಾದ್ದರಿಂದ ಮೃತ್ಯುವು ಘೋರವಾದ ತಪಸ್ಸನ್ನು ಕೈಗೊಂಡನು. ಮೃತ್ಯುವು ಹತ್ತು ಸಾವಿರ ವರ್ಷಗಳವರೆಗೂ ತನ್ನ ಪಾದಗಳ ಹೆಬ್ಬೆರಳಿನ ಮೇಲೆ ಮಾತ್ರ ನಿಂತು ತಪಸ್ಸನ್ನು ಮಾಡುತ್ತಾ, ತರಗೆಲೆಗಳನ್ನು ಮಾತ್ರ ತಿನ್ನುತ್ತಾ ಬಹಳವಾಗಿ ಇಂದ್ರಿಯನಿಗ್ರಹವನ್ನು

ತಚ್ಛ್ರುತ್ವಾ ಪ್ರಾಹ ಧಾತಾರಂ ಮೃತ್ಯುರ್ನತ್ವಾ ಕೃತಾಂಜಲಿಃ ।
ಭಗವನ್ಯದಿ ಮೇ ತುಷ್ಟಸ್ತದಾಽಜ್ಞಾಪಯ ಮಾಂ ವಿಭೋ ॥೧೦೨॥

ನೇಚ್ಛಾಮ್ಯಹಂ ಸುಸಂಹರ್ತುಮೇತದೇವಾಽಭಿವಾಂಛಿತಂ ।
ತದಾಕರ್ಣ್ಯ ಪ್ರಾಹ ವಿಧಿಃ ಮೃತ್ಯೋ ನೈತದ್ಭವಿಷ್ಯತಿ ॥೧೦೩॥

ನಾಸೀನ್ಮಮಾಽನೃತಾ ವಾಣೀ ಸಂಹರೇತಿ ಪುರೋದಿತಂ ।
ಅನ್ಯದ್ವರಂ ಪ್ರತೀಚ್ಛಾಽಶು ಯತ್ತೇ ಮತ್ತೋಽಭಿವಾಂಛಿತಂ ॥೧೦೪॥

ತಚ್ಛ್ರುತ್ವಾಽತಿಭಯಾನ್ಮೃತ್ಯುಃ ಪ್ರಾರುದತ್ಸಹಸಾ ತದಾ ।
ರುದತಸ್ತನ್ನೇತ್ರಯುಗಾ ದಶ್ರುಧಾರಾಽಭಿಜಾಯತ ॥೧೦೫॥

ತದ್ಗೃಹೀತ್ವಾಽಂಜಲೌ ಧಾತಾ ವ್ಯಸೃಜದ್ಬಹುಧಾ ಭುವಿ ।
ತತೋ ರೋಗಾ ಬಹುವಿಧಾಃ ಜಾತಾ ವಿವಿಧಮೂರ್ತಯಃ ॥೧೦೬॥

ಮಾಡಿದ್ದನು. ಆಗ ಲೋಕಗಳನ್ನು ಸೃಜಿಸಿದ ಮತ್ತು ಅವಕ್ಕೆ ಅಧಿಪತಿಯಾದ ಬ್ರಹ್ಮನು ಮೃತ್ಯುವಿನ ತಪಸ್ಸಿಗೆ ಮೆಚ್ಚಿ ಎಲೈ ಮೃತ್ಯುವೇ, ನಿನ್ನ ತಪಸ್ಸಿಗೆ ನಾನು ಮೆಚ್ಚಿದೆನು. ನಿನಗೆ ಇಷ್ಟವಾದ ಯಾವ ವರವನ್ನು ಬೇಕಾದರೂ ಕೇಳು. ನಾನು ಕೊಡುವೆನು. ಎಂದನು. ||೯೯-೧೦೦-೧೦೧||

ಬ್ರಹ್ಮನ ಮಾತನ್ನು ಕೇಳಿ ಮೃತ್ಯುವು ಜಗತ್ತಿನ ಸಂಹಾರ ಕಾರ್ಯದಲ್ಲಿ ನನ್ನನ್ನು ದಯವಿಟ್ಟು ನಿಯಮಿಸಬೇಡಿ. ಎಂಬ ವರವನ್ನೇ ನಾನು ಪ್ರಾರ್ಥಿಸುವೆನು. ಎಂದನು. ಮೃತ್ಯುವಿನ ಪ್ರಾರ್ಥನೆಯನ್ನು ಕೇಳಿ ಬ್ರಹ್ಮನು ಅದೆಂದಿಗೂ ಸಾಧ್ಯವಿಲ್ಲ. ಎಂದುತ್ತರ ಕೊಟ್ಟನು. ಬ್ರಹ್ಮನು ಹೇಳಿದ ಮಾತನ್ನು ಕೇಳಿ ಮೃತ್ಯುವು ಕೈಮುಗಿದು ಪೂಜ್ಯರೇ, ತಾವು ನನ್ನ ತಪಸ್ಸಿಗೆ ಮೆಚ್ಚಿದ್ದರೆ ನನ್ನ ವರವನ್ನು ದಯವಿಟ್ಟು ನೀಡಬೇಕು. ಎಂದು ಬ್ರಹ್ಮನನ್ನು ಪ್ರಾರ್ಥಿಸಿದನು. ||೧೦೨-೧೦೩||

ಓ ಯಮನೇ, ಸಂಹಾರಕಾರ್ಯವನ್ನು ಮಾಡು. ಎಂದು ನಾನು ಹಿಂದೆ ಹೇಳಿದ ವಾಕ್ಯವು ಸುಳ್ಳಾಗಲಾರದು. ಆದ್ದರಿಂದ ನನ್ನಿಂದ ಅಪೇಕ್ಷಿಸಬಹುದಾದ ನಿನ್ನ ಮನಸ್ಸಿನಲ್ಲಿರುವ ಇನ್ನೊಂದು ವರವನ್ನು ಜಾಗ್ರತೆಯಾಗಿ ಪ್ರಾರ್ಥಿಸಿಕೊ. ಆಗ ಮೃತ್ಯುವು ಬಹಳ ಭಯದಿಂದ ತತ್ಕ್ಷಣವೇ ಬಹಳವಾಗಿ ಅತ್ತನು. ಅಳುತ್ತಿರುವ ಮೃತ್ಯುವಿನ ಕಣ್ಣುಗಳಿಂದ ಕಣ್ಣೀರಿನ ಪ್ರವಾಹವೇ ಹರಿಯಿತು. ಆ ಕಣ್ಣೀರನ್ನು

ತದಾ ವಿಧಿರುವಾಚೇದಂ ಮೃತ್ಯೋ ಮಾ ಕ್ಲೇಶಮಾವಹ ।
ಇಮೇ ರೋಗಾಃ ಸಮುತ್ಪನ್ನಾಸ್ತವ ಸಾಹಾಯ್ಯ ಕಾರಣಾತ್ ॥೧೧೭॥

ಏತೇ ಭವಂತಿ ತೇ ರೋಗಾಃ ಪುರೋಗಾಸ್ತೇನ ತೇ ಜನಾಃ ।
ನಾಽಭಿಜಾನಂತಿ ತಸ್ಮಾತ್ತೇ ಸಿದ್ಧಂ ಸರ್ವಂ ಸಮೀಹಿತಂ ॥೧೦೮॥

ತಥೇತಿ ಪ್ರತಿಜಗ್ರಾಹ ತುಷ್ಟೋ ಮೃತ್ಯುರ್ವಿಧೇರ್ವಚಃ ।
ತತೇವಂ ಜಗತಃ ಸೃಷ್ಟಿಸ್ಥಿತಿಸಂಹಾರಸಂಸ್ಥಿತೌ ॥೧೦೯॥

ಬ್ರಹ್ಮಾ ಹರಿಃ ಪಶುಪತಿಃ ಸ್ವೇಸ್ವೇ ಕರ್ಮಣಿ ಸಂಸ್ಥಿತಾಃ ।
ಜಗತ್ಕೃತ್ಯೇನ ಸಂಶ್ರಾಂತಾ ವಿಷಣ್ಣಾ ವಿಗತಪ್ರಭಾಃ ॥೧೧೦॥

ಉಪತಸ್ಥುರ್ಮಹಾದೇವೀಂ ಜಗತ್ಕಾರಣಕಾರಣಂ ।
ತದಾ ಪ್ರಸನ್ನಾ ಪರಮಾ ಪ್ರಾದುರ್ಭೂತಾ ಮಹೇಶ್ವರೀ ॥೧೧೧॥

ತನ್ನ ಬೊಗಸೆಯಲ್ಲಿ ತೆಗೆದುಕೊಂಡು ಬ್ರಹ್ಮನು ಭೂಮಿಯ ಮೇಲೆಲ್ಲವೂ ನಾನಾ ಬಗೆಯಾಗಿ ಚೆಲ್ಲಿದನು. ಅನಂತರದಲ್ಲಿ ಆ ನೀರೆಲ್ಲವೂ ಹಲವು ಬಗೆಯಾದ ರೋಗಗಳಾಗಿ ಪರಿಣಮಿಸಿದವು. ॥೧೦೪-೧೦೫-೧೦೬॥

ಆಗ ಬ್ರಹ್ಮನು ಎಲೈ ಮೃತ್ಯುವೇ, ಅಳಬೇಡ. ನಿನ್ನ ಕೆಲಸಕ್ಕೆ ಸಹಾಯ ಮಾಡುವುದಕ್ಕಾಗಿಯೇ ಈ ರೋಗಗಳೆಲ್ಲವೂ ಉಂಟಾಗಿವೆ. ಜನರು ಸಾಯುವುದಕ್ಕಿಂತ ಮುಂಚೆ ಈ ರೋಗಗಳೇ ಮುಂದಾಗಿ ಬರುತ್ತಾ ಅವರ ಮರಣಕ್ಕೆ ಸಹಾಯ ಮಾಡುತ್ತವೆ. ಆದ್ದರಿಂದ ಜನರು ನಿನ್ನನ್ನು ಸಂಹಾರಕನೆಂದು ತಿಳಿಯುವುದಿಲ್ಲ. ಆದ್ದರಿಂದ ನಿನ್ನ ಇಷ್ಟಾರ್ಥವೇ ಸಿದ್ಧಿಸಿದ ಹಾಗೆಯೇ ಆಯಿತು. ಆಗ ಮೃತ್ಯುವು ಬ್ರಹ್ಮನ ಮಾತನ್ನು ಕೇಳಿ ಸಂತೋಷಪಟ್ಟವನಾಗಿ ಹಾಗೆಯೇ ಆಗಬಹುದೆಂದು ಒಪ್ಪಿಕೊಂಡನು. ಹೀಗೆ ಲೋಕದ ಸೃಷ್ಟಿ ಸ್ಥಿತಿ ಮತ್ತು ಸಂಹಾರಗಳ ವ್ಯವಸ್ಥೆಯಾಯಿತು. ॥೧೦೭-೧೦೮-೧೦೯॥

ಬ್ರಹ್ಮ, ವಿಷ್ಣು ಮತ್ತು ಶಿವ ಇವರು ತಮ್ಮ ತಮ್ಮ ಕಾರ್ಯಗಳನ್ನು ಕ್ರಮವಾಗಿ ನೆರವೇರಿಸುತ್ತಿದ್ದರು. ಆದರೆ ಅವರು ಆ ಕೆಲಸದಿಂದ ಆಯಾಸಪಟ್ಟು ಶ್ರಮದಿಂದ ಕಾಂತಿಹೀನರಾಗಿ ದುಃಖದಿಂದ ಕೂಡಿ ತಮ್ಮ ತಮ್ಮ ಕೆಲಸಗಳನ್ನು ಬಿಟ್ಟು ಜಗತ್ತಿಗೆ ಮೂಲಕಾರಣಳಾದ ಮಹಾದೇವಿಯನ್ನು ಸಮೀಪಿಸಿದರು. ಆಗ

ತ್ರಿವರ್ಣಾ ದ್ವಾದಶಭುಜಾ ದಶವಕ್ತ್ರಾ ಮಹಾಪ್ರಭಾ ।
ಪಂಚವಿಂಶತಿನೇತ್ರಾಢ್ಯಾ ಬ್ರಹ್ಮಾಂಡಂ ವ್ಯಾಪ್ಯ ಸಂಸ್ಥಿತಾ ॥೧೧೨॥

ಕಮಂಡಲುಂ ಸ್ವಕ್ಷಮಾಲಾಂ ವರಂ ತ್ರಾಣಂ ಸುದರ್ಶನಂ ।
ಶಂಖಂ ಗದಾಂ ಪಂಕಜಾತಂ ಮೃಗಂ ಶೂಲಂ ಪರಶ್ವಧಂ ॥೧೧೩॥

ಕಪಾಲಂ ಧಾರಯಂತೀ ಸಾ ತ್ರಿಮೂರ್ತ್ಯೈಕಸ್ವರೂಪಿಣೀ ।
ತಾಂ ದೃಷ್ಟ್ವಾ ವಿಧಿಮುಖ್ಯಾಸ್ತೇ ದಂಡವತ್ಪ್ರಣತಾ ಭುವಿ ॥೧೧೪॥

ತತ್ಪಾದಭಕ್ತಿಸಂಜಾತಹರ್ಷಾಃಶ್ರುಭರಿತೇಕ್ಷಣಾಃ ।
ತದ್ದರ್ಶನಾಃನಂದಿತಾಂತಃಕರಣಾಸ್ತಂ(ಸ್ತಾಂ)ಸಮೀಡಿರೇ ॥೧೧೫॥

ನಮಾಮಸ್ತ್ವಾಂ ದೇವೀಂ ಶ್ರಿತಜನಸಮೀಹಾಃಧಿಕ ಫಲ
ಪ್ರದಾನಾಂ ಲೋಕೇಶೀಮಗಣಿತಮಹಾವೈಭವಯುತಾಂ ।

ಶ್ರೇಷ್ಠಳಾದ ಮಹೇಶ್ವರನ ಪತ್ನಿಯಾದ ದೇವಿಯು ಅವರ ತಪಸ್ಸಿಗೆ ಮೆಚ್ಚಿ ಕಾಣಿಸಿಕೊಂಡಳು. ಆಕೆಯು ಮೂರು ವರ್ಣವುಳ್ಳವಳಾಗಿಯೂ, ಹನ್ನೆರಡು ತೋಳುಗಳುಳ್ಳವಳಾಗಿಯೂ, ಹತ್ತು ಮುಖಗಳುಳ್ಳವಳಾಗಿಯೂ, ಬಹಳ ಕಾಂತಿಯುಕ್ತಳಾಗಿಯೂ, ಇಪ್ಪತ್ತೈದು ಕಣ್ಣುಗಳುಳ್ಳವಳಾಗಿಯೂ, ಬಹ್ಮಾಂಡವೆಲ್ಲವನ್ನೂ ವ್ಯಾಪಿಸಿದವಳಾಗಿಯೂ ಇದ್ದಳು. ||೧೧೦-೧೧೧-೧೧೨||

ದೇವಿಯು, ಕಮಂಡಲು, ಶ್ರೇಷ್ಠವಾದ ಜಪಮಾಲೆ, ಶ್ರೇಷ್ಠ ರಕ್ಷಕವಾದ ಸುದರ್ಶನ ಎಂಬ ಚಕ್ರಾಯುಧ, ಶಂಖ, ಗದೆ, ಕಮಲ, ಮೃಗ, ಶೂಲ, ಕೊಡಲಿ, ಕಪಾಲ, ಇವೆಲ್ಲವನ್ನೂ, ಧರಿಸಿ ತ್ರಿಮೂರ್ತಿಸ್ವರೂಪಳಾಗಿದ್ದಳು. ಬ್ರಹ್ಮನೇ ಮೊದಲಾದ ದೇವತೆಗಳು ಆಕೆಯನ್ನು ನೋಡಿ ದಂಡಾಕಾರವಾಗಿ ಭೂಮಿಯಮೇಲೆ ನಮಸ್ಕಾರಮಾಡಿದರು. ಆಕೆಯ ಪಾದಗಳಲ್ಲಿ ತಮಗಿರುವ ಭಕ್ತಿಯಿಂದುಂಟಾದ ಸಂತೋಷದ ಕಣ್ಣೀರುಗಳಿಂದ ತುಂಬಿದ ಕಣ್ಣುಳ್ಳವರಾಗಿಯೂ, ಹಾಗೆ ಆಕೆಯ ದರ್ಶನದಿಂದುಂಟಾದ ಸಂತೋಷದಿಂದ ಕೂಡಿದ ಮನಸ್ಸುಳ್ಳವರಾಗಿಯೂ ಆಕೆಯನ್ನು ಸ್ತೋತ್ರಮಾಡಿದರು. ||೧೧೩-೧೧೪-೧೧೫||

ಆಶ್ರಿತರಾದ ಭಕ್ತಜನರು ಬಯಸುವುದಕ್ಕಿಂತಲೂ ಹೆಚ್ಚಾದ ಫಲಗಳನ್ನು ಕೊಡುವ, ಲೋಕಕ್ಕೆಲ್ಲಕ್ಕೂ ಈಶ್ವರಿಯಾದ ಲೆಕ್ಕಮಾಡಲು ಅಸಾಧ್ಯವಾದಷ್ಟು

ಸ್ವಲೀಲಾ ಮಾತ್ರಾರ್ಥಪ್ರಕಟಿತವಿಧಾತ್ರಂಡವಿತತಿಂ
ಪರಬ್ರಹ್ಮಾಕಾರಾಂ ಪರಮಶಿವಜೀವಾಖ್ಯಧಮನೀಂ ॥೧೧೬॥

ವಿಹಾಯ ತ್ವಾಂ ದೇವೀಂ ಕ್ಷಿತಿಮುಖಶಿವಾಂತಾತ್ಮಕಗಣೇ
ಪ್ರಮೇಯೇ ಕಾಲಾಗ್ನಿಪ್ರಮುಖಶಿವಪರ್ಯಂತ ನಿವಹೇ ।
ಪ್ರಮಾತೄಣಾಂ ತದ್ವತ್ಸ್ಥಿರಚರವಿಭೇದೇಽಪಿ ಸಕಲೇ
ತ್ವಯಾ ರಿಕ್ತೇ ಜಾತೇ ಭವತಿ ಮೃಗತೃಷ್ಣಾಜಲವಿಧಿಃ ॥೧೧೭॥

ಮಹಚ್ಚಿತ್ರಂ ದೇವಿ ಸ್ವಯಮಿಹ ಜಗದ್ಭೇದನಿವಹೇ
ಸ್ಥಿತಾ ಸಂವ್ಯಾಪ್ಯಾಽಪಿ ಪ್ರಕಟತರಮೂರ್ತ್ಯಾ ನನು ಸದಾ ।
ನಖಾನಿ ಶ್ರೋತ್ರಾದೀನ್ಯಪಿ ವಚನಮುಖ್ಯಾನ್ಯಪಿ ತಥಾ
ಪ್ರವರ್ತೇತೇ ಜಾತು ತ್ವಯಿ ನ ಹಿ ಮನೋಽಪ್ಯಂತರತಮಃ ॥೧೧೮॥

ಸದ್ಗುಣಗಳ ವಿಶೇಷವಾದ ವೈಭವದಿಂದ ಕೂಡಿರುವ, ತನ್ನ ಲೀಲೆಗಳನ್ನು ತೋರಿಸುವುದಕ್ಕೆ ಮಾತ್ರವೇ ಹೊರಗೆಡಹಿದ ಬ್ರಹ್ಮಾಂಡಗಳ ವಿಸ್ತಾರವುಳ್ಳ, ಪರಬ್ರಹ್ಮಸ್ವರೂಪಳಾದ ಪರಶಿವನ ಜೀವ ಶಕ್ತಿ ನಾಡಿಯ ಸ್ವರೂಪಳಾದ ದೇವಿಯಾದ ನಿನ್ನನ್ನು ನಾವು ನಮಸ್ಕರಿಸುವೆವು. ॥೧೧೬॥

ಓ ದೇವಿಯೇ, ನಿನ್ನ ಅಂಶವಿಲ್ಲದಿದ್ದರೆ ಭೂಮಿಯೇ ಮೊದಲಾದ, ಶಿವಪರ್ಯಂತವಾದ, ತತ್ವಗಳ ಸಮೂಹದಲ್ಲೂ, ಹಾಗೆಯೇ ಪ್ರಳಯಕಾಲಾಗ್ನಿ, ಶಿವಪರ್ಯಂತವಾದ ಪ್ರಮೇಯುಗಳಲ್ಲೂ, ಅಷ್ಟೇ ಏಕೆ? ಸ್ಥಾವರಜಂಗಮಾತ್ಮಕವಾದ ಈ ಒಟ್ಟು ಎಲ್ಲ ಪ್ರಪಂಚದಲ್ಲೂ, ನಿನ್ನನ್ನು ಬಿಟ್ಟು ಇತರರನ್ನು ಪ್ರಾರ್ಥಿಸುವ ಜನರಿಗೆ, ಬಿಸಲುಕುದುರೆಯಲ್ಲಿ ಹೇಗೋ ಹಾಗೆ, ಅವರವರ ಕೋರಿಕೆಗಳು ನೆರವೇರದೇ ಹೋಗುತ್ತವೆ. ॥೧೧೭॥

ಓ ದೇವಿಯೇ, ಪ್ರಪಂಚದಲ್ಲಿರುವ ಭಿನ್ನಭಿನ್ನ ವಸ್ತುಗಳಲ್ಲಿ ನೀನೇ ನಿನ್ನ ನಿಜವಾದ ಪ್ರಭಾವವನ್ನು ಪ್ರಕಾಶಪಡಿಸುತ್ತಾ ಇವುಗಳೆಲ್ಲವನ್ನೂ ಸರ್ವದಾ ವ್ಯಾಪಿಸಿಕೊಂಡಿದ್ದಾಗ್ಯೂ, ಕಿವಿಯೇ ಮೊದಲಾದ ಇಂದ್ರಿಯಗಳೂ, ಮಾತೂ ಮುಂತಾದುವೂ, ಅತ್ಯಂತ ಒಳಗಿರುವ ಮನಸ್ಸೂ ಕೂಡ ನಿನ್ನ ನಿಜತತ್ವವನ್ನು ಗ್ರಹಿಸಲೂ, ತಿಳಿದು ಹೇಳಲೂ, ಸಮರ್ಥಗಳಾಗದೇ ಹೋಗುತ್ತಿವೆಯೆಂಬುದು ಅತ್ಯಂತ ಆಶ್ಚರ್ಯಕರವಾದ ವಿಷಯವೇ ಸರಿ. ॥೧೧೮॥

ನತಾನಾಂ ಭಕ್ತಾನಾಮತಿಕರುಣಯಾಽನುಗ್ರಹ ಪರಾ ।
ಮನೋ ವಾಙ್ನೇತ್ರಾಣಾಂ ಸುಲಭಗತಿಹೇತೋಸ್ತ್ವಮನಘೇ ।
ಯಥಾ ಧ್ಯಾತಾ ತೈಸ್ತೈಃ ಪದನಲಿನಸೇವಾಪರಜನ್ಯೈಃ
ತಥಾ ರೂಪಂ ಧತ್ಸೇ ಜನನಿ ಜಗದುದ್ಧಾರಣಪರೇ ॥೧೧೯॥

ನಿಮೇಷೋನ್ಮೇಷಾಭ್ಯಾಮಗಣಿತ ವಿಧಾತ್ರಂಡವಿಲಯೋ
ದ್ಭವೌ ಸ್ಯಾತಾಂ ಯಸ್ಯಾಃ ಪರತರಮಹಾಶಕ್ತಿವಪುಷಃ ।
ಮಹಾಮಾಯಾಶಕ್ತೇಃ ಶ್ರಿತಜನಸಮೀಹಾಫಲವಿಧೌ
ಕಿಯಚ್ಚಿತ್ರಂ ನಾನಾವಿಧತನು ಧೃತಿಸ್ತೇ ಪರಶಿವೇ ॥೧೨೦॥

ಭವತ್ಯಾ ಬ್ರಹ್ಮಾದ್ಯಾ ವಯಮಿಹ ಜಗತ್ಸೃಷ್ಟಿವಿಲಯ
ಸ್ಥಿತೌ ಸಂಸ್ಥಾಂ ಪ್ರಾಪ್ತಾ ಜನನಿ ಸತತಂ ತದ್ವ್ಯವಸಿತಾಃ ।

ಅತ್ಯಂತ ಪರಿಶುದ್ಧಳಾದ ಓ ದೇವಿಯೇ, ನೀನು ನಿನ್ನನ್ನು ನಮಸ್ಕರಿಸುವ ಭಕ್ತರಿಗೆ ಅತ್ಯಂತ ಕರುಣೆಯಿಂದ ಅನುಗ್ರಹವನ್ನು ಮಾಡುವವಳಾಗಿದ್ದೀಯೆ. ಅಲ್ಲದೇ ಭಕ್ತರ ಮನಸ್ಸು, ಮಾತು, ಮತ್ತು ಕಣ್ಣುಗಳಿಗೆ ಸುಲಭವಾಗಿ ನೀನು ಗೋಚರಳಾಗುತ್ತೀಯೆ. ಜಗತ್ತಿನ ಉದ್ಧಾರಕಳಾದ ತಾಯಿಯೇ, ನಿನ್ನ ಪಾದಕಮಲ ವನ್ನು ಸೇವಿಸುವ ಜನಗಳು ನಿನ್ನನ್ನು ಯಾವ ರೀತಿಯಲ್ಲಿ ಧ್ಯಾನಮಾಡುತ್ತಾರೋ ಅದೇ ಬಗೆಯಾದ ರೂಪವನ್ನು ಧಾರಣೆಮಾಡಿ, ಅವರಿಗೆ ಕಾಣಿಸಿಕೊಳ್ಳುತ್ತೀಯೆ ! ॥೧೧೯॥

ಓ ಪರಶಿವನ ಪತ್ನಿಯಾದ ದೇವಿಯೇ, ನೀನು ಕಣ್ಣುಮುಚ್ಚುವುದು, ಮತ್ತು ಬಿಡುವುದು, ಇಷ್ಟುಮಾತ್ರದಿಂದಲೇ ಕ್ರಮವಾಗಿ ಅಪರಿಮಿತವಾದ ಬ್ರಹ್ಮಾಂಡದ ಲಯ ಮತ್ತು ಉತ್ಪತ್ತಿಗಳಾಗುತ್ತವೆ. ಇಂಥಾ ಆಶ್ಚರ್ಯಕರವಾದ ಮಹಾ ಶಕ್ತಿಸ್ವರೂಪವಾದ ಶರೀರವುಳ್ಳ ಮತ್ತು ಮಹಾಮಾಯಾಶಕ್ತಿಸ್ವರೂಪಳಾದ ನೀನು ಆಶ್ರಿತಜನರ ಇಷ್ಟಾರ್ಥಗಳನ್ನು ನೀಡುವುದಕ್ಕಾಗಿ ಅನೇಕ ವಿಧವಾದ ಶರೀರಗಳನ್ನು ಧಾರಣೆಮಾಡುವುದೆಂಬುದು ಏನು ಆಶ್ಚರ್ಯ? ॥೧೨೦॥

ಓ ತಾಯಿಯೇ, ನಿನ್ನಿಂದಲೇ ಬ್ರಹ್ಮನೇ ಮೊದಲಾದ ನಾವುಗಳು ಜಗತ್ತಿನ ಸೃಷ್ಟಿ, ಸ್ಥಿತಿ, ಲಯ ಕಾರ್ಯಗಳಲ್ಲಿ ಕ್ರಮವಾಗಿ ನಿಯಮಿಸಲ್ಪಟ್ಟಿದ್ದೇವೆ. ಮತ್ತು ನಾವು ಈ ಕಾರ್ಯಗಳನ್ನು ನೆರವೇರಿಸಿಕೊಂಡು ಬರುತ್ತಿದ್ದೇವೆ. ಆದರೆ ಈಗ

ವಿಷಣ್ಣಾಸ್ಸ್ಮಃ ಕೃತ್ಯೇ ವಿಹತಬಲವೀರ್ಯಾದಿ ವಿಭವಾಃ
ಸಮುದ್ಧರ್ತುಂ ಚಾಸ್ಮಾನ್ಪ್ರಭವಸಿ ಹಿ ಚೈಕೈವ ಪರಮಾ ॥೧೨೧॥

ಇತಿ ಸಂಸ್ತುತ್ಯ ಧಾತ್ರಾದ್ಯಾ ಜಗದ್ಧಾತ್ರೀಂ ಪರಾಂಬಿಕಾಂ ।
ಕೃತಪ್ರಣತಯೋ ಭಕ್ತ್ಯಾ ಸ್ವವೃತ್ತಂ ಪ್ರೋಚುರಾದರಾತ್ ॥೧೨೨॥

ತಚ್ಛ್ರುತ್ವಾ ಧಾತೃಮುಖ್ಯಾನಾಂ ವಾಕ್ಯಂ ಸಾ ಪರಮೇಶ್ವರೀ ।
ಪ್ರಾಹ ಪ್ರಸನ್ನಾ ವರದಾ ಪ್ರಿಯಂ ತೇಷಾಂ ವಿತನ್ವತೀ ॥೧೨೩॥

ಬ್ರಹ್ಮನ್ಮುರಾರೇ ಶಂಭೋ ವೋ ಜ್ಞಾತಂ ವೃತ್ತಂ ಮಯಾನಘಾಃ ।
ಭವಂತಃ ಸ್ಥೂಲರೂಪೇಣ ಮದಂಶೇನ ವಿನಾ ಸ್ಥಿತಾಃ ॥೧೨೪॥

ಅತೋ ನ ನಿರ್ವೃತಾ ಯೂಯಂ ಶ್ರಾಂತಾಶ್ಚ ಸ್ವೇಷು ಕರ್ಮಸು ।
ಹತಪ್ರಭಾ ಹತಬಲಾ ನಿರ್ವೀರ್ಯಾ ಇವ ಸಂಸ್ಥಿತಾಃ ॥೧೨೫॥

ನಮ್ಮ ಶಕ್ತಿಸಾಮರ್ಥ್ಯವೇ ಮೊದಲಾದುವು ನಷ್ಟವಾಗಿ ನಾವು ಶೋಕಿಸುತ್ತಿದ್ದೇವೆ. ಓ ದೇವಿಯೇ, ಅತ್ಯಂತ ಶ್ರೇಷ್ಠಳಾದ ನೀನೊಬ್ಬಳೇ ನಮ್ಮನ್ನು ಉದ್ಧಾರ ಮಾಡಲು ಸಮರ್ಥಳಾಗಿದ್ದೀಯೇ. ಬ್ರಹ್ಮನೇ ಮೊದಲಾದವರು ಜಗತ್ತಿಗೆ ರಕ್ಷಕಳಾದ ಪರಾಂಬಿಕೆಯನ್ನು ಈರೀತಿಯಲ್ಲಿ ಸ್ತೋತ್ರಮಾಡಿ, ಭಕ್ತಿಯಿಂದ ನಮುಸ್ಕರಿಸಿ ತಮ್ಮ ವೃತ್ತಾಂತವನ್ನು ಭಕ್ತಿಪೂರ್ವಕವಾಗಿ ಆಕೆಗೆ ಬಿನ್ನೈಸಿದರು. ॥೧೨೧-೧೨೨॥

ಪರಮೇಶ್ವರನ ಪತ್ನಿಯಾದ ದೇವಿಯು ಬ್ರಹ್ಮನೇ ಮೊದಲಾದವರ ಮಾತನ್ನು ಕೇಳಿ ಪ್ರಸನ್ನಳಾಗಿ ಅವರಿಗೆ ಪ್ರಿಯವನ್ನುಂಟುಮಾಡುವವಳಾಗಿ ಅವರನ್ನು ಕುರಿತು, ಎಲೈ ಬ್ರಹ್ಮ, ವಿಷ್ಣು, ಮಹೇಶ್ವರಿರಾ, ನಿಮ್ಮ ವಿಚಾರವು ನನಗೆ ಗೊತ್ತಾಯಿತು. ನೀವು ನನ್ನ ಅಂಶದ ಬೆಂಬಲವಿಲ್ಲದೇ ಸ್ಥೂಲರೂಪವಾದ ದೇಹ ಗಳನ್ನುಮಾತ್ರ ಪಡೆದವರಾಗಿದ್ದೀರಿ. ಆದ್ದರಿಂದ ನಿಮಗೆ ಸೌಖ್ಯವುಂಟಾಗಲಿಲ್ಲ. ಮತ್ತು ನೀವು ನಿಮ್ಮನಿಮ್ಮ ಕೆಲಸಗಳಲ್ಲಿ ಬಳಲಿದಿರಿ. ಅಲ್ಲದೇ ಕಾಂತಿಹೀನರೂ, ನಷ್ಟವಾದ ವೀರ್ಯವುಳ್ಳವರೂ, ಶಕ್ತಿಯಿಲ್ಲದವರೂ ಆದಿರಿ. ಎಂದು ಹೇಳಿದಳು. ॥೧೨೩-೧೨೪-೧೨೫॥

ತಚ್ಛುಭಂ ವೋ ವಿಧಾಸ್ಯಾಮಿ ಚಿಂತಾಂ ಜಹಥ ಮಾ ಚಿರಂ ।
ಏವಮುಕ್ತ್ವಾ ಕ್ಷಣೇನೈವ ತ್ರಿಪುರಾ ಸಾ ಮಹೇಶ್ವರೀ ।೧೨೬॥

ಸ್ವಾಂಗಾತ್ತ್ರಿಧಾ ಸ್ಥಿತಾ ತ್ರೀಣಿ ರೂಪಾಣಿ ವ್ಯಸೃಜತ್ತದಾ ।
ಬ್ರಹ್ಮವಿಷ್ಣುಮಹೇಶಾಂಶಾದ್ರೂಪತ್ರಯಮಭೂತ್ತದಾ ॥೧೨೭॥

ವಾಣೀ ರಮಾ ಚ ರುದ್ರಾಣೀ ಶ್ವೇತರಕ್ತಾಽಸಿತಪ್ರಭಾಃ ।
ಹಂಸಪದ್ಮಮೃಗೇಂದ್ರಸ್ಥಾಃ ಸೌಂದರ್ಯಮಣಿರೋಹಣಾಃ ॥೧೨೮॥

ಮತ್ತೇಭಮಂದಗಮನಾ ಮೃದುಶೋಣಲಸತ್ತಲಾಃ ।
ನಖ ಚಕ್ರಾಂಶು ನಿವಹನ್ಯಕ್ಕೃತೇಂದು ಗಣಪ್ರಭಾಃ ॥೧೨೯॥

ಕಮಠಾಽಭ ಪ್ರಪದಕಾಃ ಪುಷ್ಟಗುಲ್ಫವಿರಾಜಿತಾಃ ।
ಕಂದರ್ಪತೂಣಾಭಜಂಘಾ ನಭೋಭೂತಾಽವಲಗ್ನಕಾಃ ॥೧೩೦॥

ಎಲೈ ಬ್ರಹ್ಮನೇ ಮೊದಲಾದ ದೇವಪ್ರಮುಖರೇ, ನಿಮಗೆ ನಾನು ಜಾಗ್ರತೆಯಾಗಿ ಮಂಗಳವನ್ನುಂಟುಮಾಡುವೆನು. ಚಿಂತೆಯನ್ನು ಬಿಟ್ಟುಬಿಡಿ. ಹೀಗೆ ಹೇಳಿ ಮಹೇಶ್ವರನ ಪತ್ನಿಯಾದ ತ್ರಿಪುರಾದೇವಿಯು ಕ್ಷಣಕಾಲದಲ್ಲಿಯೇ ತನ್ನ ಶರೀರದಿಂದ ಮೂರು ವಿಧವಾದ ಶಕ್ತ್ಯಂಶಗಳಿಂದ ಕೂಡಿದ ರೂಪಗಳನ್ನು ಹೊರಗೆಡಹಿದಳು. ಆಗ ಆ ಶರೀರಗಳು ಬ್ರಹ್ಮ, ವಿಷ್ಣು, ಮಹೇಶ್ವರರ ಅಂಶಗಳಿಂದ ಕೂಡಿ ಮೂರು ವಿಧವಾದ ರೂಪಗಳನ್ನು ತಾಳಿದವು. ಅಲ್ಲದೇ ಅವು ವಾಣೀ, ರಮಾ, ರುದ್ರಾಣೀ ರೂಪಗಳನ್ನು ಹೊಂದಿ ಬಿಳುಪು, ಕೆಂಪು, ಕಪ್ಪು, ಕಾಂತಿಗಳನ್ನು ಹೊರಸೂಸುತ್ತಿದ್ದವು. ಆ ಶರೀರಗಳು ಹಂಸ, ಕಮಲ, ಸಿಂಹಗಳಮೇಲೆ ಮಂಡಿಸಿದ್ದವು. ಮತ್ತು ಸುಂದರವಾದ ಮಣಿಗಳಿಂದ ಅಲಂಕರಿಸಲ್ಪಟ್ಟು ಬಹಳ ತೇಜೋಮಯಗಳಾಗಿದ್ದವು. ॥೧೨೬-೧೨೭-೧೨೮॥

ದೇವಿಯ ಆ ಶರೀರಗಳು ಮದಿಸಿದ ಆನೆಯ ಗಮನದಂತೆ ಮಂದಗಮನವುಳ್ಳವಳಾಗಿಯೂ, ಉತ್ತಮವಾಗಿಯೂ ಮತ್ತು ಕೆಂಪಗೆ ಪ್ರಕಾಶಿಸುತ್ತಿರುವ ಅಂಗಾಲುಗಳುಳ್ಳವಾಗಿಯೂ, ಚಂದ್ರಕಿರಣಗಳಂತಿರುವ ಉಗುರುಗಳಿಂದ ತಿರಸ್ಕರಿಸಲ್ಪಟ್ಟ ಚಂದ್ರನ ಕಾಂತಿಯುಳ್ಳವಾಗಿಯೂ ಇದ್ದವು. ಮತ್ತು ಅವು ಆಮೆಯನ್ನು ಹೋಲುವ ಶ್ರೇಷ್ಠವಾದ ಮುಂಗಾಲುಗಳುಳ್ಳವಾಗಿಯೂ, ತುಂಬಿದ ಕಾಲಿನಗಂಟು ಅಥವಾ ಗುಲ್ಫಗಳಿಂದ ಪ್ರಕಾಶಮಾನವಾಗಿಯೂ, ಮನ್ಮಥನ ಬತ್ತಳಿಕೆಗಳನ್ನು

ಅನರ್ಘ್ಯಕೌಶೇಯುಗೂಢ ಪ್ರಥುಶ್ರೋಣೀಭರಾಽಲಸಾಃ ।
ಸ್ಮರಕಲ್ಪಲತಾಬಾ(ವಾ)ಲ ನಿಮ್ನನಾಭಿವಿರಾಜಿತಾಃ ॥೧೩೧॥

ಮೃದೂದರತ್ರಿವಳಿಕಾ ಸ್ತನುರೋಮಾಳಿ ಶೋಭಿತಾಃ ।
ಮಾಣಿಕ್ಯಕಲಶಾಽಕಾರ ಕುಚದ್ವಯಭರಾಽಽನತಾಃ ॥೧೩೨॥

ಮೃದುದೀರ್ಘ ಚತುರ್ಬಾಹು ಕರಕಂಜ ಮೃಣಾಳಿಕಾಃ ।
ಕಂಬುಕಂಧರವಿನ್ಯಾಸಾಃ ಪಕ್ವಬಿಂಬ ಫಲಾಽಧರಾಃ ॥೧೩೩॥

ಕುಂದಕೋರಕಪಂಕ್ತ್ಯಾಭ ದಂತಪಂಕ್ತಿಸುಶೋಭನಾಃ ।
ಚಾಂಪೇಯ ಕಲಿಕಾಕಾರ ನಾಸಾವಂಶವಿರಾಜಿತಾಃ ॥೧೩೪॥

ಹೋಲುವ ತೊಡೆ ಮತ್ತು ಆಕಾಶವನ್ನು ಹೋಲುವ ಸೊಂಟವುಳ್ಳವರಾಗಿಯೂ ಇದ್ದವು. ಅಮೂಲ್ಯವಾದ ರೇಷ್ಮೆವಸ್ತ್ರದಿಂದ ಮುಚ್ಚಲ್ಪಟ್ಟ ವಿಸ್ತಾರವಾದ ಕಟಿ ಪುರೋಭಾಗದ ಭಾರದಿಂದ ದೇವಿಯರ ಶರೀರಗಳು ನಿಧಾನವಾಗಿ ಚಲಿಸುತ್ತಿದ್ದವು. ಅಲ್ಲದೇ ಆಕೆಯ ಆ ಶರೀರಗಳು ಮನ್ಮಥನು ಪ್ರಯೋಗಿಸಿದ ಕಲ್ಪವೃಕ್ಷದ ಬಳ್ಳಿಗೆ ಪಾತೆಯಂತೆ ಕೋಮಲವೂ, ಆಳವೂ ಆದ ಹೊಕ್ಕುಳಿನಿಂದ ಪ್ರಕಾಶಮಾನವಾಗಿದ್ದವು. ॥೧೨೯-೧೩೦-೧೩೧॥

ದೇವಿಯ ಶರೀರಗಳು ಮೃದುವಾದ ಮಧ್ಯಭಾಗವುಳ್ಳ ಸೊಂಟದ ಮೂರು ಮಡಿಕೆಗಳುಳ್ಳವಾಗಿಯೂ, ಚಿಕ್ಕ ಚಿಕ್ಕ ಕೂದಲಿನಿಂದ ಪ್ರಕಾಶಮಾನವಾಗಿಯೂ, ಮುತ್ತಿನಲ್ಲಿ ಮಾಡಿದ ಗಡಿಗೆಗಳನ್ನು ಹೋಲುವ ಎರಡು ಸ್ತನಗಳ ಭಾರದಿಂದ ಬಗ್ಗಿದವುಗಳಾಗಿಯೂ ಇದ್ದವು. ಅಲ್ಲದೇ ಅವು ಮೃದುವಾಗಿಯೂ ಮತ್ತು ದೀರ್ಘವಾಗಿಯೂ ಇದ್ದ ನಾಲ್ಕು ತೋಳುಗಳಲ್ಲಿ ಕೈಗಳೆಂಬ ಕಮಲದ ದಂಟುಗಳುಳ್ಳವಾಗಿಯೂ ಇದ್ದವು. ಅವು ಶಂಖವನ್ನು ಹೋಲುವ ಕತ್ತುಗಳುಳ್ಳವಾಗಿಯೂ ಪಕ್ವವಾದ ತೊಂಡೆಯ ಹಣ್ಣಿನಂತಿರುವ ತುಟಿಗಳುಳ್ಳವಾಗಿಯೂ ಇದ್ದವು. ಅಲ್ಲದೇ ಆಕೆಯ ಶರೀರಗಳು ಕುಂದಪುಷ್ಪದ ಮುಗ್ಗಿನ ಸಾಲಿನಂತೆ ಇದ್ದ ಹಲ್ಲಿನ ಸಾಲಿನಿಂದ ವಿಶೇಷವಾಗಿ ಸುಂದರಗಳಾಗಿಯೂ, ಸಂಪಿಗೆಯ ಮುಗ್ಗಿನಂತಿದ್ದ ಮೂಗಿನ ಆಕಾರದಿಂದ ಪ್ರಕಾಶಮಾನವಾಗಿಯೂ ಇದ್ದವು. ॥೧೩೨-೧೩೩-೧೩೪॥

ಶ್ವಾಸಾಽಮೋದ ಪರೀವಾಹ ಭರಿತಾಶಾಕೃಶೋದರಾಃ ।
ಮಣಿದರ್ಪಣಸಾಧರ್ಮ್ಯ ವ್ರತಗಂಡದ್ವಯೋಜ್ಜ್ವಲಾಃ ॥೧೩೫॥

ನೀಲೋತ್ಪಲಸುಹೃತ್ಕಾಂತಿ ನೇತ್ರತ್ರಯ ಸುಸೌಭಗಾಃ ।
ಅರ್ಧಶೀತಾಂಶುದಾಪಾದ ನಿಟಿಲಾಽಭೋಗಭಾಸುರಾಃ ॥೧೩೬॥

ಜಗತ್ತಿಮಿರಸಂದೋಹ ಸಂಕ್ಷೇಪಾಽಕಾರಚೂಲಿಕಾಃ ।
ನಿಸರ್ಗಚಾಂಪೇಯ ಸುಮ ಸೌರಭಾಽಸ್ಪದ ಬಾಲಿಕಾಃ ॥೧೩೭॥

ಮಣಿಪ್ರವೇಕಪಟಲಪ್ರತ್ಯುಪ್ತ ಮುಕುಟೋಜ್ಜ್ವಲಾಃ ।
ಅನರ್ಘ್ಯ ರತ್ನಪುರಟಕ್ಲ್‌ಪ್ತ ಕುಂಡಲಮಂಡಿತಾಃ ॥೧೩೮॥

ನಾಸಾಮಣಿ ಪ್ರಭಾಚೋರಾಽಸುರಶಿಕ್ಷಕ ತಾರಕಾಃ ।
ಗಲವಿನ್ಯಸ್ತಮಾಣಿಕ್ಯ ಗ್ರೈವೇಯಕವಿಭೂಷಿತಾಃ ॥೧೩೯॥

ಆಕೆಯ ಶರೀರಗಳು ಸುವಾಸನೆಯಾದ ಉಸಿರಿನಿಂದ ಕೂಡಿದವಾಗಿ, ಅತ್ಯಂತ ಕೃಶವಾದ ಮಧ್ಯಭಾಗವುಳ್ಳವಾಗಿಯೂ, ಮಣಿಯಿಂದ ಮಾಡಿದ ಕನ್ನಡಿಯನ್ನು ಹೋಲುವ ಎರಡು ಕಪೋಲಗಳಿಂದ ಪ್ರಕಾಶಮಾನವಾಗಿಯೂ ಇದ್ದವು. ಅಲ್ಲದೇ ಅವು ಕನ್ನೈದಿಲೆಯನ್ನು ಹೋಲುವ ಕಾಂತಿ ಮತ್ತು ಆಕಾರವುಳ್ಳ ಮೂರು ಕಣ್ಣಿನಿಂದ ಬಹಳ ಮನೋಹರವಾಗಿಯೂ ಇದ್ದವು. ಅರ್ಧಚಂದ್ರನಂತೆ ಕಾಂತಿಯುಳ್ಳ ಹಣೆಗಳಿಂದ ಮೊದಲುಮಾಡಿಕೊಂಡು ಕಾಲುಗಳಭಾಗದ ವರೆಗೂ, ಆಕೆಯ ಶರೀರಗಳು ಪ್ರಕಾಶಮಾನವಾಗಿಯೂ ಮತ್ತು ವಿಸ್ತಾರವಾಗಿಯೂ ಇದ್ದವು. ಜಗತ್ತಿನ ಕತ್ತಲೆಯೆಲ್ಲವೂ ಒಟ್ಟುಗೂಡಿ ಒಂದುಕಡೆ ನೆಲಸಿದೆಯೋ ಎಂಬಂತಿದ್ದ ಕೇಶಪಾಶದಿಂದ ಕೂಡಿದವುಗಳಾಗಿಯೂ, ಸ್ವಾಭಾವಿಕವಾದ ಸಂಪಿಗೆಹುಪ್ಪಿನ ಸುವಾಸನೆಗೆ ಆಶ್ರಯವಾದ ದೇಹಭಾಗವುಳ್ಳವುಗಳಾಗಿಯೂ ಇದ್ದವು. ॥೧೩೫-೧೩೬-೧೩೭॥ .

ಈ ಶರೀರಗಳು ಮಣಿಗಳ ಸಮೂಹದಿಂದ ಕೂಡಿ ಚೆನ್ನಾಗಿ ಕೆತ್ತಲ್ಪಟ್ಟಿರುವ ಕಿರೀಟಗಳಿಂದ ಪ್ರಕಾಶಮಾನಗಳಾಗಿಯೂ ಇದ್ದವು. ಅಮೂಲ್ಯವಾದ ರತ್ನಗಳನ್ನು ಸೇರಿಸಿ ನಿರ್ಮಾಣಮಾಡಿದ ಕರ್ಣಕುಂಡಲಗಳಿಂದಲೂ, ಮನೋಹರವಾಗಿದ್ದವು. ಮೂಗುತಿಯಲ್ಲಿರುವ ರತ್ನವು ಕಾಂತಿಯನ್ನು ಬೀರುತ್ತಲೂ ಇದ್ದಿತು. ದೇವದಾನವರನ್ನು ಶಿಕ್ಷಿಸುವುದರಲ್ಲಿ ಸಮರ್ಥಗಳಾದ ಪ್ರಕಾಶವನ್ನು ಕಣ್ಣುಗುಡ್ಡೆಗಳು ಬೀರುತ್ತಿದ್ದವು. ಕತ್ತಿನಲ್ಲಿದ್ದ ಮುತ್ತಿನಿಂದ ಮಾಡಿದ ಕಂಠಾಭರಣಗಳಿಂದ ಸುಂದರವಾಗಿಯೂ

ಮುಕ್ತಾಹಾರಮೃಣಾಳೋತ್ಥ ವಿಕಸನ್ಮುಖಪಂಕಜಾಃ ।
ಕೇಯೂರಾಂಗದ ಮಾಣಿಕ್ಯ ವಲಯಾಂಗುಳಿಭೂಷಣಾಃ ॥೧೪೦॥

ಗಾಂಗೇಯ ಪಟ್ಟಿಕಾಕಾಂಚೀ ದಾಮನದ್ಧಾಂಶುಕಾವೃತಾಃ ।
ಮಂಜೀರ ಹಂಸಕಕ್ವಾಣಕ್ವಣತ್ ಕ್ವಣಿತ ನಿರ್ಭರಾಃ ॥೧೪೧॥

ಏವಂ ವಿಧಾ ವಾಗಧೀಶಾ ಶುದ್ಧಸ್ಫಟಿಕ ಸನ್ನಿಭಾ ।
ತ್ರಿನೇತ್ರಾ ಚಂದ್ರಚೂಡಾಲಾ ವೀಣಾ ಪುಸ್ತವರಾಭಯಾನ್ ॥೧೪೨॥

ಧಾರಯಂತೀ ಕರಾಂಭೋಜೈ ರ್ವಿದ್ಯಾತತಿತನೂಜ್ವಲಾ ।
ವಿದ್ರುಮಾಭಾ ವಿಶಾಲಾಕ್ಷೀ ಪದ್ಮಾ ಪದ್ಮಚತುಷ್ಟಯಂ ॥೧೪೩॥

ದಧಾನಾ ಪಾಣಿ ಜಲಜೈರೈಶ್ವರ್ಯ ನಿವಹೇಶ್ವರೀ ।
ದಲದಿಂದೀವರಾಭಾಸಾ ಚತುರ್ಭಿಃ ಪಾಣಿಪಲ್ಲವೈಃ ॥೧೪೪॥

ಇದ್ದವು. ಮುತ್ತಿನಹಾರವೆಂಬ ತಾವರೆಯದಂಟಿನಿಂದ ಉಂಟಾಗಿದೆಯೋ ಎಂಬಂತೆ ಪ್ರಕಾಶಿಸುತ್ತಿರುವ ಮುಖಕಮಲಗಳುಳ್ಳವಾಗಿಯೂ, ಇದ್ದವು. ವಂಕಿ, ನಾಗಮುರಿಗೆ ಗಳಿಂದಲೂ, ರತ್ನಮೆಟ್ಟಿದ ಬಳೆಗಳು ಮತ್ತು ಉಂಗುರಗಳಿಂದಲೂ, ಸ್ವರ್ಣಮಯ ವಾದ, ಗೆಜ್ಜೆಯುಳ್ಳ ಪಟ್ಟೆಯಿಂದ ಸುತ್ತುವರಿಯಲ್ಪಟ್ಟ ರೇಷ್ಮೆ ವಸ್ತ್ರಗಳಮೇಲಿರುವ ಹಂಸಗಳು ಮನೋಹರವಾಗಿ ಧ್ವನಿಮಾಡುತ್ತಿವೆಯೋ ಎಂಬಂತೆ ತೋರುತ್ತಿದ್ದವು. ||೧೩೮-೧೩೯-೧೪೦-೧೪೧||

ಇಂತಹ ಶರೀರಗಳಿಂದ ಕೂಡಿದ, ವಾಕ್ಕಿಗೆ ಅಧಿದೇವತೆಯಾದ, ಶುದ್ಧವಾದ ಸ್ಫಟಿಕಕ್ಕೆ ಸಮಾನಳಾದ, ಮೂರು ಕಣ್ಣುಗಳುಳ್ಳ ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿರುವ ದೇವಿಯು ವೀಣೆ, ಶ್ರೇಷ್ಠವಾದ ಪುಸ್ತುಕ, ವರ ಮತ್ತು ಅಭಯ ಮುದ್ರೆಗಳನ್ನು ಕೈಗಳೆಂಬ ಕಮಲದಲ್ಲಿ ಧರಿಸಿದ್ದಳು. ಅಲ್ಲದೇ ಈಕೆಯು ವಿದ್ಯೆಗಳಿಂದ ಪೂರ್ಣವಾದ ಶರೀರದಿಂದ ಚಿದ್ರೂಪಿಣಿಯಾಗಿದ್ದಳು. ಈಕೆಯು ಹವಳಕ್ಕೆ ಸಮಾನ ವಾದ ಕಾಂತಿಯಿಂದ ಕೂಡಿದವಳಾಗಿ, ವಿಶಾಲವಾದ ಕಣ್ಣುಗಳುಳ್ಳವಳಾಗಿ, ಕಮಲ ದಂತೆ ಕಾಂತಿಯಿಂದ ಕೂಡಿ, ನಾಲ್ಕು ಕಮಲಗಳನ್ನು ತನ್ನ ಕರಕಮಲಗಳಲ್ಲಿ ಧರಿಸಿದವಳಾಗಿ, ಐಶ್ವರ್ಯಗಳ ಸಮೂಹಕ್ಕೂ ಈಶ್ವರಿಯಾಗಿ, ಅರಳಿದ ಕಮಲಕ್ಕೆ ಸಮಾನವಾದ ಕಾಂತಿಯುಳ್ಳವಳಾಗಿ, ಚಿಗುರಿನಂತಿರುವ ನಾಲ್ಕು ಕೈಗಳಲ್ಲಿಯೂ, ವಿವಿಧವಾದ ಆಯುಧಗಳನ್ನು ಧರಿಸಿದವಳಾಗಿದ್ದಳು. ||೧೪೨-೧೪೩-೧೪೪||

ಆಸಾದಿತಾಃ ಖಡ್ಗಖೇಟಾ ಶೂಲಮುದ್ಗರಹೇತಿಕಾಃ ।
ಕೋಟೀರಕೋಟಿ ಸಂಕ್ಲೃಪ್ತ ಶೀತಾಂಶುಕಲಿಕೋಜ್ವಲಾಃ ॥೧೪೫॥

ಏವಂ ವಿಧಾಸ್ತದಂಗಾತ್ತು ತ್ರಿವಿಧಾಃ ಕ್ಷಣಮಾತ್ರತಃ ।
ಪ್ರಾದುರ್ಭೂತಾ ಮಹಾದೇವ್ಯೋ ವಿಸ್ಫುಲಿಂಗಾ ಇವಾರ್ಚಿಷಃ ॥೧೪೬॥

ತಾಃ ಪ್ರಣಮ್ಯ ಪರಾಂ ದೇವೀಂ ಸವಿಧೇ ಸಂಸ್ಥಿತಾಸ್ತದಾ ।
ವಿಧಾತ್ರಾದೀನತಃ ಪ್ರಾಹ ತ್ರಿಪುರಾ ಪರಮೇಶ್ವರೀ ॥೧೪೭॥

ಭೋ ಬ್ರಹ್ಮಕೇಶವಹರಾಃ ಭವದರ್ಥಂ ಮಯಾ ಇಮಾಃ ।
ಸ್ವಾಂಶಾತ್ಸೃಷ್ಟಾ ಮಹಾದೇವ್ಯಃ ಪ್ರತೀಚ್ಛಧ್ವಂ ಕ್ರಮೇಣ ತಾಃ ॥೧೪೮॥

ಇಯಂ ವಿದ್ರುಮವರ್ಣಾಭಾ ಧಾತರ್ಜಾತಾ ತವಾಂಶತಃ ।
ತಥಾ ರೌದ್ರೀ ಮೇಚಕಾಭಾ ತ್ವದಂಶೇನೋದ್ಗತಾ ಹರೇ ॥೧೪೯॥

ವಿಶ(ದಾ)ದಂ ಗಾ ಭಾರತೀಯಂ ರುದ್ರ ತೇಽಂಶಾತ್ಸಮುದ್ಗತಾ ।
ತತ್ತದಂಶೋದ್ಭವಾ ತಸ್ಯ ಸೋದರೀತಿ ಪ್ರಸಿಧ್ಯತು ॥೧೫೦॥

ಈಕೆಯು ತನ್ನ ಕೈಗಳಲ್ಲಿ ಕತ್ತಿ, ಖೇಟ, ಶೂಲ, ಹಾರೆ ಮೊನಚಾದ ಅಲುಗುಳ್ಳ ಕತ್ತಿ, ಇವುಗಳಿಂದ ಪ್ರಕಾಶಮಾನಳಾಗಿದ್ದಳು. ಇಂತಹ ದೇವಿಯ ಶರೀರದಿಂದ ಹಿಂದೆ ಹೇಳಿದ ಲಕ್ಷಣಗಳುಳ್ಳ ಮೂರು ವಿಧವಾದ ಶರೀರಗಳು ಕ್ಷಣಕಾಲದಲ್ಲಿಯೇ, ಬೆಂಕಿಯಿಂದ ಕಿಡಿಗಳು ಬರುವಂತೆ, ಹೊರಗೆ ಕಾಣಿಸಿಕೊಂಡವು. ಆಮೇಲೆ ಶಕ್ತ್ಯಂಶರಾದ ದೇವಿಯರು ಅತ್ಯಂತ ಶ್ರೇಷ್ಠಳಾದ ದೇವಿಗೆ ನಮಸ್ಕರಿಸಿ ಆಕೆಯ ಸಮೀಪದಲ್ಲಿ ನಿಂತರು. ಮಹೇಶ್ವರನ ಪತ್ನಿಯಾದ ತ್ರಿಪುರಾದೇವಿಯು ಅಲ್ಲಿ ನಿಂತಿದ್ದ ಬ್ರಹ್ಮನೇ ಮೊದಲಾದವರನ್ನು ಕುರಿತು ಹೀಗೆ ಹೇಳಿದಳು. ॥೧೪೫-೧೪೬-೧೪೭॥

ಎಲೈ ಬ್ರಹ್ಮ, ವಿಷ್ಣು, ಮಹೇಶ್ವರರಿರಾ ನಿಮಗಾಗಿ ನಾನು ಈ ದೇವಿಯರನ್ನು ನಿಮ್ಮ ನಿಮ್ಮ ಅಂಶಗಳಿಂದಲೂ ಸೃಷ್ಟಿಮಾಡಿದ್ದೇನೆ. ನೀವು ಕ್ರಮವಾಗಿ ಇವರನ್ನು ಸ್ವೀಕರಿಸಿ. ಎಲೈ ಬ್ರಹ್ಮನೇ, ನಿನ್ನ ಅಂಶದಿಂದ ಹವಳದ ಬಣ್ಣದಂತೆ ಕಾಂತಿಯುಳ್ಳ ಈ ದೇವಿಯು ಉಂಟಾಗಿದ್ದಾಳೆ. ಎಲೈ ವಿಷ್ಣುವೇ, ರುದ್ರವಾದ ಆಕಾರವುಳ್ಳ, ಮೇಚಕದಂತೆ ಕಾಂತಿಯುಳ್ಳ ಈಕೆಯು ನಿನ್ನ ಅಂಶದಿಂದ ಹುಟ್ಟಿದ್ದಾಳೆ. ಎಲೈ ಶಿವನೇ, ವಿಶದವಾದ ಅವಯವಗಳುಳ್ಳ ಭಾರತಿ ಎಂಬ ಈಕೆಯು ನಿನ್ನ ಅಂಶದಿಂದ

ವಿಧಾತುಃ ಸೋದರೀ ವಿಷ್ಣೋರ್ವಿಷ್ಣೋರುದ್ರಸ್ಯ ತಸ್ಯ ತು ।
ವಿಧೇರೇವಂ ವಿವಾಹೇನ ವಿಧಿನಾ ದ್ರುತಮುಸ್ತು ವಃ ॥೧೫೧॥

ಪತ್ನೀ ತಥಾಽದ್ಯಾ ಭವತು ವಿವಾಹೋ ಮಂಗಳಾಯ ವಃ ।
ಏವಂ ಕೃತವಿವಾಹಾನಾಂ ಶಕ್ತಿಭಿರ್ಮಮ ಯೋಗತಃ ॥೧೫೨॥

ತ್ಯಕ್ತಶ್ರಮಾ ನಿರ್ವೃತಾಶ್ಚ ಸಮರ್ಥಾ ವಿಶ್ವಕರ್ಮಸು ।
ಯೂಯಂ ಭವಥ ಧಾತ್ರಾದ್ಯಾ ಜಗತಾಂ ಸ್ವಸ್ತಯೇಽಧುನಾ ॥೧೫೩॥

ಇತ್ಯುಕ್ತ್ವಾ ಸಾ ಮಹೇಶಾನೀ ತತ್ರೈವಾಂಽತರಧೀಯತ ।
ಅಂತರ್ಧಿಮಾಗತಾಯಾಂ ತು ದೇವ್ಯಾಂ ತೇ ಜಗದೀಶ್ವರಾಃ ॥೧೫೪॥

ಸ್ವಾಂ ಸ್ವಾಂ ಶಕ್ತಿಂ ಸಮಾದಾಯ ಸ್ವಸ್ಥಾನಂ ಪ್ರತಿಪೇದಿರೇ ।
ಅಥ ಕಾಲೇ ಶುಭೇ ತತ್ರ ತ್ರಯಸ್ತೇ ಜಗದೀಶ್ವರಾಃ ॥೧೫೫॥

ವೈವಾಹಿಕವಿಧಾನೇನ ಬಭೂವುರ್ದಾರಸಂಯುತಾಃ ।
ಮೇರುಪೃಷ್ಠೇ ಸುವಿಪುಲೇ ಯೋಜನಾಯುತ ವಿಸ್ತರೇ ॥೧೫೬॥

ಹುಟ್ಟಿದ್ದಾಳೆ. ನಿಮ್ಮ ನಿಮ್ಮ ಅಂಶಗಳಿಂದ ಹುಟ್ಟಿದ ಈಕೆಯನ್ನು ಕ್ರಮವಾಗಿ ನಿಮ್ಮ ನಿಮ್ಮ ತಂಗಿಯರೆಂದು ಭಾವಿಸಿರಿ. ಅಲ್ಲದೆ, ||೧೪೮-೧೪೯-೧೫೦||

ಬ್ರಹ್ಮನ ಅಂಶದಿಂದ ಹುಟ್ಟಿದ ಸ್ತ್ರೀಯು ವಿಷ್ಣುವಿಗೆ ಪತ್ನಿಯು. ವಿಷ್ಣುವಿನ ಅಂಶದಿಂದ ಹುಟ್ಟಿದ ಸ್ತ್ರೀಯು ಶಿವನಿಗೆ ಭಾರ್ಯೆಯು. ಶಿವನ ಅಂಶದಿಂದ ಹುಟ್ಟಿದ ಸ್ತ್ರೀಯು ಬ್ರಹ್ಮನಿಗೆ ಹೆಂಡಿತಿಯೆಂದು ಕ್ರಮವಾಗಿ ಭಾವಿಸಿರಿ. ಇನ್ನು ಮುಂದೆ ನಿಮ್ಮೆಲ್ಲರ ಮಂಗಳಕ್ಕಾಗಿ ವಿವಾಹವೇರ್ಪಡಲಿ. ಹೀಗೆ ನನ್ನ ಸಂಬಂಧವುಳ್ಳ ಶಕ್ತಿಗಳನ್ನು ನೀವು ಮದುವೆಯಾದರೆ ನಿಮ್ಮ ಶ್ರಮವೆಲ್ಲವೂ ಕಳೆದು ಸುಖವನ್ನು ಹೊಂದುವಿರಿ ಮತ್ತು ಪ್ರಪಂಚದ ಎಲ್ಲ ಕೆಲಸಗಳಲ್ಲಿ ಸಾಮರ್ಥ್ಯವನ್ನು ತೋರುಸುವಿರಿ. ಇದರಿಂದ ಜಗತ್ತಿಗೂ ಮಂಗಳವಾಗುವುದು. ||೧೫೧-೧೫೨-೧೫೩||

ಹೀಗೆ ಹೇಳಿ ಮಹೇಶ್ವರನ ಪತ್ನಿಯಾದ ದೇವಿಯು ಅಲ್ಲಿಯೇ ಅಂತರ್ಧಾನವನ್ನು ಹೊಂದಿದಳು. ದೇವಿಯು ಅಂತರ್ಧಾನವನ್ನು ಹೊಂದಲು ಜಗತ್ತಿಗೆ ಈಶ್ವರರಾದ ಬ್ರಹ್ಮಾದಿಗಳು ತಮ್ಮ ತಮ್ಮ ಶಕ್ತಿಗಳೊಂದಿಗೆ ತಮ್ಮ ತಮ್ಮ ಸ್ಥಾನಗಳನ್ನು ಸೇರಿದರು. ಆಮೇಲೆ ಮಂಗಳವಾದ ಕಾಲದಲ್ಲಿ ಬ್ರಹ್ಮನೇ ಮೊದಲಾದ ತ್ರಿಮೂರ್ತಿ

ವಿವಾಹಶಾಲಾ ರುಚಿರಾ ನಿರ್ಮಿತಾ ವಿಶ್ವಶಿಲ್ಪಿನಾ ।
ಚತುರ್ಯೋಜನಮುನ್ನಮ್ರಾ ನಿಯುತಸ್ತಂಭಸಂಯುತಾ ॥೧೫೭॥

ವಿತಾನಮಾಕಾಶನಿಭಂ ತಾರಕಾಽಕಾರ ಚಿತ್ರಿತಂ ।
ಪರಿತೋ ಲಂಬಮಾನೈಸ್ತು ರತ್ನಗುಚ್ಛೈಃ ಸುಶೋಭಿತಂ ॥೧೫೮॥

ಪತಾಕಾಭಿರ್ಧ್ವಜೈರ್ನೀಲ ಮಣಿವೈಡೂರ್ಯ ನಿರ್ಮಿತೈಃ ।
ತ್ರಿಂಶದ್ಯೋಜನಮುನ್ನಮ್ರೈಃ ಸಮಂತಾದುಪಶೋಭಿತಂ ॥೧೫೯॥

ವಿದ್ರುಮ ಸ್ತಂಭವಿನ್ಯಸ್ತ ಪಾಂಚಾಲೀ ಗಣಮಂಡಿತಾ ।
ತತ್ರ ಸ್ವರ್ಣಮಯೀ ಭೂಮಿಃ ಹೀರಕಾಸ್ತರಣಾನಿ ಚ ॥೧೬೦॥

ಮಣಿಪ್ರವರ ಸಂಜಾತ ವೇದಿಕಾಭಿಃ ಸಮುಜ್ವಲಾ ।
ನವರತ್ನಮಯೈರ್ದೀಪವೃಕ್ಷೈಃ ಸರ್ವತ್ರ ಮಂಡಿತಾ ॥೧೬೧॥

ಗಳೂ, ವಿವಾಹವಿಧಿಯಿಂದ ಪತ್ನೀಸಮೇತರಾದರು. ಬಹಳ ವಿಸ್ತಾರವಾದ ಹತ್ತು ಸಾವಿರ ಯೋಜನದಷ್ಟು ವಿಶಾಲವಾದ ಮೇರುಪರ್ವತದ ತಪ್ಪಲು ಪ್ರದೇಶದಲ್ಲಿ ವಿಶ್ವಶಿಲ್ಪಿಯಾದ ವಿಶ್ವಕರ್ಮನಿಂದ ಬಹು ಸುಂದರವಾದ ವಿವಾಹಮಂಟವು ರಚಿಸಸಲ್ಪಟ್ಟಿತು. ಅದು ನಾಲ್ಕು ಯೋಜನದಷ್ಟು ಎತ್ತರವಾಗಿಯೂ, ಬಹಳ ಉದ್ದ ಮತ್ತು ದಪ್ಪಗಳಾದ ಸಾವಿರಾರು ಕಂಬಗಳಿಂದ ಕೂಡಿತ್ತು.॥೧೫೪-೧೫೫-೧೫೬-೧೫೭॥

ಈ ವಿವಾಹ ಮಂಟಪದ ಮೇಲ್ಭಾವಣಿಯು ಆಕಾಶಕ್ಕೆ ಸಮಾನವಾಗಿ, ತಾರೆಗಳಂತೆ ಅಲ್ಲಲ್ಲಿ ನಾನಾಬಗೆಯಾಗಿ ಚಿತ್ರಿಸಲ್ಪಟ್ಟಿದ್ದಿತು. ಅಲ್ಲದೇ ಈ ಮಂಟಪವು ಹವಳದಿಂದಮಾಡಿದ ಕಂಭಗಳಲ್ಲಿ ಕೆತ್ತಲ್ಪಟ್ಟ ಬೊಂಬೆಗಳಿಂದ ಅಲಂಕರಿಸಲ್ಪಟ್ಟಿದ್ದಿತು. ಇದರ ಭೂಮಿಯನ್ನು ಚಿನ್ನದಲ್ಲಿ ಮಾಡಿದ್ದಿತು. ಮತ್ತು ವಜ್ರದ ಚಾಪೆಗಳನ್ನೂ ಹಾಸಿದ್ದಿತು. ಅತ್ಯಂತ ಶ್ಲಾಘ್ಯವಾದ ಮಣಿಗಳಿಂದಮಾಡಿದ ಜಗುಲಿಗಳಿಂದ ಪ್ರಕಾಶಮಾನವಾಗಿತ್ತು. ಒಂಬತ್ತು ವಿಧವಾದ ದೀಪದ ಮರಗಳಿಂದ ಎಲ್ಲಾ ಕಡೆಯಲ್ಲಿಯೂ ಅಲಂಕರಿಸಲ್ಪಟ್ಟಿದ್ದಿತು. ಈ ವಿವಾಹಮಂಟಪವು ಮುವ್ವತ್ತು ಯೋಜನದಷ್ಟು ವಿಸ್ತಾರವಾಗಿ ನೀಲಮಣಿ ವೈಡೂರ್ಯಗಳಿಂದ ನಿರ್ಮಿಸಲ್ಪಟ್ಟ ಬಾವುಟಗಳ ಧ್ವಜಗಳಿಂದ ಎಲ್ಲಾ ಕಡೆಯಲ್ಲಿಯೂ ಶೋಭಾಯಮಾನವಾಗಿತ್ತು. ॥೧೫೮-೧೫೯-೧೬೦-೧೬೧॥

ಹರಿನ್ಮಣಿ ಕೃತಾತ್ಯಚ್ಛ ತೋರಣೌಘ ಪರೀವೃತಾ ।
ಪ್ರತಿಸ್ತಂಭ ಸಮಾಬದ್ಧ ಮಣಿರಂಭಾ ತರೂಜ್ವಲಾ ॥೧೬೨॥

ಮಣಿ ಪಾಂಚಾಲಕಾ ಹಸ್ತನ್ಯಸ್ತಹೀರಕ ಚಾಮರಾ ।
ಯಕ್ಷ ಕರ್ದಮ ಸಂಸಿಕ್ತಾ ಧೂಪಾಮೋದ ಸುದುಂಧುಮಾ ॥೧೬೩॥

ದೀಪಸಂತತಿ ಸಂಜಾತಪ್ರಭಾ ಸಂಮೂರ್ಚ್ಛನಾವಶಾತ್ ।
ಮಣಿಪ್ರವೇಕ ಜ್ವಲಿತ ಧಗದ್ಧಗಿತದಿಕ್ತಟಾ ॥೧೬೪॥

ಶಾಲಾಯಾಃ ಪರಿತಸ್ತತ್ರ ಕಲ್ಪಾನೋಕಹ ವಾಟಿಕಾಃ ।
ನಿಸರ್ಗಸ್ಯಂದಿಮಧುರ ಮಕರಂದೌಘ ನಿರ್ಝರಾಃ ॥೧೬೫॥

ತದಾಮೋದಪ್ರಸಕ್ತಾಲಿ ಪಂಕ್ತಿರ್ಝೇಂಕಾರ ಜೃಂಭಿತಾಃ ।
ಮಾದ್ಯಚ್ಛುಕಪಿಕಾರಾವ ಭರಿತಾಂತರ ಸುಂದರಾಃ ॥೧೬೬॥

ಮಂಟಪವು ಹಸುರಾದ ಮಣಿಗಳಿಂದಮಾಡಿದ ಅತ್ಯಂತ ಸ್ವಚ್ಛವಾದ ತೋರಣಗಳ ಸಮೂಹದಿಂದ ಕೂಡಿದ್ದಾಗಿಯೂ, ಪ್ರತಿಯೊಂದು ಕಂಭದಲ್ಲಿಯೂ ಕೆತ್ತಲ್ಪಟ್ಟ ರಂಭಾ ಬಾಳೆಯ ಮರಗಳಿಂದ ಮನೋಹರವಾಗಿಯೂ ಇತ್ತು. ॥೧೬೨॥

ವಿವಾಹ ಮಂಟಪವು ಮಣಿಗಳಿಂದ ಮಾಡಿದ ಬೊಂಬೆಗಳ ಕೈಗಳಲ್ಲಿ ಇಡಲ್ಪಟ್ಟ ವಜ್ರದ ಚಾಮರಗಳುಳ್ಳದ್ದಾಗಿಯೂ, ಯಕ್ಷ, ಎಂಬ ಸುವಾಸನೆಯಾದ ಲೇಪನದಿಂದ ಕೂಡಿದ್ದಾಗಿಯೂ, ಧೂಪದ ಸುವಾಸನೆಯಿಂದ ಘಮಘಮಿಸುತ್ತಲೂ ಇದ್ದಿತು. ಅಲ್ಲದೇ ಈ ಮಂಟಪವು ವಿಶೇಷವಾದ ಪ್ರಕಾಶದಿಂದ ಕೂಡಿದ ದೀಪಗಳ ಸಮೂಹಗಳಿಂದ ಬಹಳ ಬೆಳಕಾಗಿಯೂ ಇದ್ದಿತು. ಮಂಟಪವು ಮಣಿಗಳ ಕಾಂತಿ ಗಳಿಂದ ಜ್ವಲಿಸುತ್ತಿದ್ದಿತು. ತನ್ಮೂಲಕ ದಿಕ್ಕಿನ ಪ್ರದೇಶಗಳೆಲ್ಲವೂ ಧಮಧಮಿಸು ತ್ತಿದ್ದವು. ಈ ವಿವಾಹ ಮಂದಿರದ ಸುತ್ತಲೂ ಕಲ್ಪವೃಕ್ಷಗಳಿಂದ ತುಂಬಿದ್ದ ಉಪವನ ಗಳಿದ್ದವು. ಅವುಗಳಿಂದ ಸ್ವಾಭಾವಿಕವಾಗಿ ಸುರಿಯುತ್ತಿರುವ ಮಧುರಗಳಾದ ಪುಷ್ಪ ರಸಗಳ ಪ್ರವಾಹಗಳೇ ಹರಿಯುತ್ತಿದ್ದವು. ॥೧೬೩-೧೬೪-೧೬೫॥

ವಿವಾಹಮಂಟಪವು ಈ ಹೂಗಳ ವಾಸನೆಯಿಂದ ಆಕರ್ಷಿಸಲ್ಪಟ್ಟ ದುಂಬಿಗಳ ಸಾಲಿನ ಝೇಂಕಾರದಿಂದ ವಿಜೃಂಭಿಸುತ್ತಲೂ, ಮದಿಸಿದ ಗಿಣಿ ಮತ್ತು ಕೋಗಿಲೆಗಳ ಮಧುರವಾದ ಧ್ವನಿಗಳಿಂದ ತುಂಬಿದ ಒಳಭಾಗದಿಂದ ಸುಂದರವಾಗಿಯೂ ಇದ್ದಿತು.

ಫಲಸಂಘಭರಾಕ್ರಾಂತಿ ಭೂಲಂಬಿ ವಿಟಪಾಯುತಾಃ ।
ತಸ್ಯಾಂ ಸರ್ವಂ ವಿವಾಹಾರ್ಥಂ ಕಲ್ಪಯಾಮಾಸ ಶಿಲ್ಪಿರಾಟ್ ॥೧೬೭॥

ತತ್ರಾಜಗ್ಮುರ್ದೇವಗಣಾಃ ಸ್ವಲಂಕೃತ ವಿಮಾನಗಾಃ ।
ತೇಷಾಂ ವಿಮಾನವಿತತಿ ವ್ಯಾಪೃತಾ ವನಭೂಮಯಃ ॥೧೬೮॥

ಋಷಯೋ ಮುನಯಃ ಸಿದ್ಧಾಃ ವಿದ್ಯಾಧರ ಸಕಿನ್ನರಾಃ ।
ನರಾ ನಾಗಾಃ ಪೂರ್ವದೇವಾಃ ಯಾತುಧಾನಾಃ ಸಹಸ್ರಶಃ ॥೧೬೯॥

ತೈರಾಪೂರ್ಣಾ ವಿಶಾಲಾಽಪಿ ಶಾಲಾಶುಭ ಸಮಾಗಮೇ ।
ಗಾಯದ್ಗಂಧರ್ವಮಧುರರಾಗಾಽಲಾಪ ಸುಮೂರ್ಛನೈಃ ॥೧೭೦॥

ಮಂಜುಲಾಽರಾವ ಝುಂಕಾರ ಝುಂಕೃತೈಃ ಸುಮನೋಹರಾ ।
ನೃತ್ಯದ್ರಂಭಾಽದಿವಿಬುಧ ವೇಶ್ಯಾಗಣಲಯೋತ್ತರೈಃ ॥೧೭೧॥

ಅಲ್ಲದೆ ಮಂಟಪದ ಸುತ್ತಲೂ ಹಣ್ಣುಗಳ ಸಮೂಹದ ಭಾರದಿಂದ ಭೂಮಿಯ ವರೆಗೂ ಬಗ್ಗಿರುವ ಕೊಂಬೆಗಳುಳ್ಳ ಮರಗಳಿದ್ದವು. ಶಿಲ್ಪಿರಾಜನಾದ ವಿಶ್ವಕರ್ಮನು ವಿವಾಹಮಂಟಪವನ್ನು ರಚಿಸಲು ಇವೆಲ್ಲವನ್ನೂ ಉಪಯೋಗಿಸಿದ್ದನು. ಹೀಗೆ ಸುಂದರವಾಗಿದ್ದ ವಿವಾಹಮಂಟಪಕ್ಕೆ ದೇವತೆಗಳ ಗುಂಪುಗಳು ಸೊಗಸಾದ ವಿಮಾನ ಗಳ ಮೇಲೆ ಕೂತು ಬಂದು ಸೇರಿದವು. ಅವರ ವಿಮಾನಗಳ ಮೇಲ್ಭಾಗಗಳಿಂದ ಅಲ್ಲಿರುವ ವನಪ್ರದೇಶವೆಲ್ಲವೂ ತುಂಬಿಹೋದವು. ಅಲ್ಲದೇ ಋಷಿಗಳು, ಮುನಿಗಳು, ಸಿದ್ಧರು, ವಿದ್ಯಾಧರರು, ಮನುಷ್ಯರು, ಸರ್ಪಗಳು, ರಾಕ್ಷಸರು, ದಾನವರು ಸಾವಿರ ಗಟ್ಟಲೆಯಲ್ಲಿ ವಿವಾಹಮಂಟಪಕ್ಕೆ ಬಂದು ಸೇರಿದರು. ||೧೬೬-೧೬೭-೧೬೮-೧೬೯||

ಮಂಗಳಕರಗಳಾದ ಈ ವಿವಾಹಗಳ ಸಂದರ್ಭಗಳಲ್ಲಿ, ಅಷ್ಟು ವಿಶಾಲವಾಗಿ ಈ ಮಂದಿರವು ನಿರ್ಮಿಸಲ್ಪಟ್ಟಿದ್ದರೂ, ಜನಭರಿತವಾಗಿ ಜಾಗವೇ ಇಲ್ಲದಂತಾಗಿತ್ತು. ವಿವಾಹಮಂಟಪವು ಸೊಗಸಾಗಿ ಗಾನಮಾಡುತ್ತಿರುವ ಗಂಧರ್ವರ ಮಧುರವಾದ ರಾಗಾಲಾಪನೆ ಆರೋಹಣಾವರೋಹಣಾದಿಗಳಿಂದಲೂ, ಮನೋಹರವಾಗಿರುವ ಝುಂಕರಿಸುವಿಕೆಯಿಂದುಂಟಾದ ಬಹಳ ಮನೋಹರವಾದ ಝುಂಕಾರಗಳ ಧ್ವನಿ ಗಳಿಂದಲೂ, ಬಹಳ ರಮಣೀಯವಾಗಿದ್ದಿತು. ಅಲ್ಲದೇ ವಿವಾಹಮಂಟಪವು ನರ್ತನ ಮಾಡುತ್ತಿರುವ ರಂಭೆಯೇ ಮೊದಲಾದ ವೇಶ್ಯೆಯರ ನರ್ತನಗಳಿಂದ ಅತಿ ಮನೋ

ಭರಿತಾ ಶ್ರವಣಾಽನಂದ್ಯೈ ರ್ವಾದ್ಯೈ ರುಚ್ಚಾವಚೈಸ್ತಥಾ ।
ದೇವಾಽಸುರಮನುಷ್ಯಾದಿ ಯೋಷಿತಃ ಸಮಲಂಕೃತಾಃ ॥೧೭೨॥

ನೂತ್ನರತ್ನೋತ್ಕೀರ್ಣಹೇಮ ವಿವಿಧಾಽಕಲ್ಪಕೋಟಿಭಿಃ ।
ಪರಾರ್ಘ್ಯರತ್ನವಿಲಸದ್ವಸನೈಃ ಪರಿಪೇಶಲಾಃ ॥೧೭೩॥

ಏವಂ ವಿಧಾಯಾಂ ಶಾಲಾಯಾಂ ವಿವಾಹಃ ಸಮವರ್ತತ ।
ಶುಭೇ ಮುಹೂರ್ತೇ ವಿಲಸತ್ಸಭಾಮಂಡಪಮಧ್ಯತಃ ॥೧೭೪॥

ನವರತ್ನಾ ಕಲ್ಪವೇದೀ ಮಧ್ಯೇ ಜ್ವಲತಿ ಪಾವಕೇ ।
ನಾರಾಯಣಾನುಜಾಯಾಸ್ತು ಶರ್ವಾಣ್ಯಾಃ ಪಾಣಿಪಲ್ಲವಂ ॥೧೭೫॥

ಜಗ್ರಾಹ ಶಂಕರೋ ವೇದವಿಧಿನಾ ಮಂತ್ರಮುಚ್ಚರನ್ ।
ಏವಂ ವಿಧಾತ್ರವರಜಾ ರಮಾ ಪಾಣಿ ಸರೋಜನಿಂ ॥೧೭೬॥

ಹರವಾಗಿಯೂ ವಿಶೇಷ ಶಬ್ದಗಳನ್ನು ಕೊಡುವ ಮತ್ತು ಹೆಚ್ಚಾಗಿ ಸಂತೋಷವನ್ನುಂಟುಮಾಡುವ ವಾದ್ಯಗಳಿಂದಲೂ ತುಂಬಿದ್ದಿತು. ದೇವತೆಗಳು, ರಾಕ್ಷಸರು, ಮನುಷ್ಯರು ಇವರೇ ಮೊದಲಾದವರ ಹೆಂಗಸರು ವಿಶೇಷವಾಗಿ ಶೃಂಗರಿಸಿಕೊಂಡಿದ್ದರು. ಇವರು ಹೊಸದಾದ ರತ್ನದ ಕೆಲಸದಿಂದ ಕೂಡಿದ ಚಿನ್ನದ ವಿವಿಧವಾದ ಆಭರಣಗಳ ಸಮೂಹಗಳನ್ನೂ, ಬಹಳ ಬೆಲೆಬಾಳುವ ರತ್ನಗಳಿಂದ ಪ್ರಕಾಶಿಸುತ್ತಿದ್ದ ಬಟ್ಟೆಗಳನ್ನೂ ಧರಿಸಿ ಬಹಳ ಮನೋಹರರಾಗಿದ್ದರು. ||೧೭೦-೧೭೧-೧೭೨-೧೭೩||

ಇಂತಹ ವಿವಾಹಮಂದಿರದಲ್ಲಿ ವಿವಾಹವು ನೆರವೇರಿತು. ಪ್ರಕಾಶಮಾನವಾದ ಸಭಾಮಂಟಪದ ಮಧ್ಯಭಾಗದಲ್ಲಿ ಮಂಗಳಕರವಾದ ಮುಹೂರ್ತದಲ್ಲಿ ಮಧ್ಯಭಾಗದಲ್ಲಿರುವ ನವರತ್ನಖಚಿತವಾದ ವೇದಿಕೆಯಮೇಲೆ ಮುಂಭಾಗದಲ್ಲಿ ಅಗ್ನಿಯು ಜ್ವಲಿಸುತ್ತಿರಲು ಶಿವನು ನಾರಾಯಣನ ತಂಗಿಯಾದ ಪಾರ್ವತಿಯ ಚಿಗುರಿನಂತಿರುವ ಕೈಗಳನ್ನು ಹಿಡಿದು ವೇದೋಕ್ತಕ್ರಮದಲ್ಲಿ ಮಂತ್ರೋಚ್ಚಾರಣೆಯನ್ನು ಮಾಡುತ್ತಿರಲು ಆಕೆಯನ್ನು ವಿವಾಹವಾದನು. ಹಾಗೆಯೇ ಪರಮಪುರುಷನಾದ ನಾರಾಯಣನು ಬ್ರಹ್ಮನ ತಂಗಿಯಾದ ಲಕ್ಷ್ಮಿಯ ಕಮಲದಂತಿರುವ ಕೈಯನ್ನು ಹಿಡಿದು ಆಕೆಯನ್ನು ವಿವಾಹಮಾಡಿಕೊಂಡನು. ||೧೭೪-೧೭೫-೧೭೫||

ಹೀಗೆ ಶ್ರೀನಾರಾಯಣನು ಲಕ್ಷ್ಮಿಯನ್ನು ಪರಿಗ್ರಹಿಸಿದನು. ಅನಂತರ ಬ್ರಹ್ಮನು ಅಗ್ನಿಸಾಕ್ಷಿಯಾಗಿ ಶಿವನ ತಂಗಿಯಾದ ವಾಗ್ದೇವಿಯ ಪಾಣಿಗ್ರಹಣವನ್ನು

ಸಮಾದದತ್ತದಾ ತತ್ರ ಸಾಕ್ಷಾನ್ನಾರಾಯಣಃ ಪರಃ ।
ಅಥ ತಸ್ಯಾಃ ಪಶುಪತೇಃ ಕನೀಯಸ್ಯಾಃ ಕರಗ್ರಹಂ ॥೧೭೭॥

ಪಿತಾಮಹಃ ಸಮಕರೋದ್ವಾಗ್ದೇವ್ಯಾಃ ಪಾವಕಾಗ್ರತಃ ।
ತತೋತ್ಸವಃ ಸಮಭವತ್ಪರಮಃ ಶೋಭನೋದಯಃ ॥೧೭೮॥

ಸರ್ವೇ ಸಮುದಿತಾ ಸ್ತತ್ರ ಕಲ್ಯಾಣೋತ್ಸವಮಂಡಪೇ ।
ಏವಂ ವಿವಾಹ ವಿಧಿನಾ ಬ್ರಹ್ಮವಿಷ್ಣುಮಹೇಶ್ವರಾಃ ॥೧೭೯॥

ತ್ರಿಪುರಾಯಾಃ ಕಲಾಃ ಪ್ರಾಪ್ಯ ವಾಣೀ ಲಕ್ಷ್ಮೀ ಶಿವಾಭಿದಾಃ ।
ಜಗತಾಂ ಜನನೀರ್ಭಕ್ತ ಜನತಾಪಾಪಹಾರಿಣೀಃ ॥೧೮೦॥

ಜಗತ್ಸುಮಂಗಳಕರೀಃ ವಾಕ್ಸಂಪತ್ ಜ್ಞಾನದಾಯಿನೀಃ ।
ವಿಚಿತ್ರ ವಸ್ತ್ರಾಭರಣ ಸ್ವಾಯುಧಾದಿ ಸುಶೋಭಿತಾಃ ॥೧೮೧॥

ಪರಾಂ ನಿರ್ವೃತಿಮಾಯಾತಾ ವಿಶ್ರಾಮಮನುಭವಂ ಸ್ತದಾ ।
ತಚ್ಛಕ್ತಿಸಂಯುತಾಃ ಸ್ವೇಸ್ವೇ ಲೋಕೇ ಗತ್ವಾ ಮಹೇಶ್ವರಾಃ ॥೧೮೨॥

ಮಾಡಿದನು. ಈ ರೀತಿಯಾಗಿ ವಿವಾಹಮಂಟಪದಲ್ಲಿ ಅತ್ಯಂತ ಮಂಗಳಕರವೂ, ಶ್ರೇಷ್ಠವೂ ಆದ ವಿವಾಹಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಆಗ ಎಲ್ಲರೂ ಕಲ್ಯಾಣಮಂಟಪದಲ್ಲಿ ಸೇರಿದ್ದರು. ಹೀಗೆ ಶಾಸ್ತ್ರೋಕ್ತಕ್ರಮದಲ್ಲಿ ಬ್ರಹ್ಮಾ, ವಿಷ್ಣು, ಮಹೇಶ್ವರರು ವಿವಾಹಮಾಡಿಕೊಂಡರು. ||೧೭೭-೧೭೮-೧೭೯||

ಹೀಗೆ ಬ್ರಹ್ಮ, ವಿಷ್ಣು, ಮಹೇಶ್ವರರು ತ್ರಿಪುರಾದೇವಿಯ ಕಲಾಸ್ವರೂಪರೇ ಆದ ವಾಣೀ, ಲಕ್ಷ್ಮೀ, ಶಿವಾ ಎಂಬ ಹೆಸರಿನ ಪತ್ನಿಯರನ್ನು ಪರಿಗ್ರಹಿಸಿದರು. ಈ ದೇವಿಯರು ಲೋಕಕ್ಕೆ ಮಂಗಳವನ್ನುಂಟುಮಾಡುವವರಾಗಿಯೂ, ವಾಕ್, ಐಶ್ವರ್ಯ ಮತ್ತು ಜ್ಞಾನಗಳನ್ನು ನೀಡುವವರಾಗಿಯೂ ಇದ್ದರು. ಅಲ್ಲದೇ ಇವರು ನಾನಾವಿಧವಾದ ವಸ್ತ್ರಗಳೂ, ಉಡುಪುಗಳೂ, ಶ್ರೇಷ್ಠವಾದ ಆಭರಣಗಳೂ, ಆಯುಧಗಳೂ, ಇವುಗಳಿಂದ ಅಲಂಕೃತರಾಗಿದ್ದರು. ಬ್ರಹ್ಮಾದಿಗಳು ವಿವಾಹಾನಂತರದಲ್ಲಿ ವಿಶೇಷವಾದ ಆನಂದವನ್ನು ಅನುಭವಿಸುತ್ತಾ ವಿಶ್ರಾಂತಿಯನ್ನು ಪಡೆದರು. ತರುವಾಯ ಇವರು ದೇವಿಯ ಶಕ್ತಿಸ್ವರೂಪರಾದ ಈ ದೇವಿಯರೊಂದಿಗೆ ತಮ್ಮ ತಮ್ಮ ಲೋಕಗಳನ್ನು ಹೊಂದಿ ಸುಖವಾಗಿದ್ದರು. ||೧೮೦-೧೮೧-೧೮೨||

ಜಗತ್ಸೃಷ್ಟ್ಯಾದಿ ಕೃತ್ಯೇಷು ಸನ್ನದ್ಧಾ ವಿಧಿಮುಖ್ಯಕಾಃ ।
ನಿರಂತರಂ ಮಹಾದೇವ್ಯಾಃ ಪಾದಪದ್ಮಾರ್ಚನೇ ರತಾಃ ॥೧೮೩॥

ಏತತ್ತೇ ಭಾರ್ಗವಾಽಽಖ್ಯಾತಂ ತ್ರಿರೂಪಾಽಽಖ್ಯಾನ ಮುತ್ತಮಂ ।
ಯತ್ರ ಸಾ ತ್ರಿಪುರೇಶಾನೀ ತ್ರಿರೂಪಾ ಸಮುಜಾಯತ ॥೧೮೪॥

ವಾಣೀ ರಮಾ ಶಿವಾರೂಪಾ ಸರ್ವಲೋಕಪ್ರಸಾದಿನೀ ।
ಬ್ರಹ್ಮವಿಷ್ಣು ಶಿವಾನ್ ಯತ್ರ ಭಾವಯಂತೀ ಕಲಾಽಽತ್ಮಭಿಃ ॥೧೮೫॥

ಏತದಾಽಽಖ್ಯಾನಮಾಯುಷ್ಯಮಭೀಷ್ಟಫಲದಾಯಕಂ ।
ಶ್ರೋತವ್ಯಂ ತ್ರಿಪುರಾಭಕ್ತೈಃ ಸರ್ವದಾ ಸಂಯತಾಽತ್ಮಭಿಃ ॥೧೮೬॥

ಶ್ರೋತೄಣಾಂ ಪರಮಾ ದೇವೀ ಭಕ್ತಾನಾಂ ಸಹಸಾ ದ್ರುತಂ ।
ಸಂಪಾದ್ಯ ವಾಂಛಿತಾ ನರ್ಥಾ ನೈಹಿಕಾನ್ಸುಖಸಾಧನಾನ್ ॥೧೮೭॥

ಅನಂತರ ಬ್ರಹ್ಮಾದಿಗಳು ಜಗತ್ಸೃಷ್ಟಿಯೇ ಮೊದಲಾದ ಕಾರ್ಯದಲ್ಲಿ ತೊಡಗಿದ್ದರು. ಅಲ್ಲದೇ ಇವರು ಯಾವಾಗಲೂ ಮಹಾದೇವಿಯಾದ ತ್ರಿಪುರಾದೇವಿಯ ಪಾದಕಮಲಗಳ ಪೂಜೆಯಲ್ಲಿ ಅತ್ಯಂತ ಆಸಕ್ತಿಯನ್ನು ತೋರಿಸಿದರು. ಎಲೈ ಪರಶುರಾಮನೇ, ತ್ರಿಪುರಾದೇವಿಯು ಮೂರು ರೂಪಗಳನ್ನು ಧರಿಸಿದುದನ್ನು ಬೋಧಿಸುವ ಅತ್ಯಂತ ಶ್ರೇಷ್ಠವಾದ ಈ ಕಥೆಯನ್ನು ನಿನಗೆ ತಿಳಿಯಿಸಿದ್ದೇನೆ. ಅಲ್ಲದೇ ತ್ರಿಪುರಾದೇವಿಯು ಲೋಕಾನುಗ್ರಹಾರ್ಥವಾಗಿ ತನ್ನ ಕಲೆಗಳಿಂದಲೇ ವಾಣೀ, ರಮಾ, ಶಿವಾ ಸ್ವರೂಪಗಳನ್ನು ಧರಿಸಿ, ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಕ್ರಮವಾಗಿ ವರಿಸಿದ ಕಥಾಭಾಗವನ್ನು ನಿನಗೆ ವಿವರಿಸಿದ್ದೇನೆ. ಈ ತ್ರಿಪುರಾಕಥೆಯ ಶ್ರವಣವು ಮಾನವನಿಗೆ ಆಯುಸ್ಸನ್ನು ವೃದ್ಧಿಗೊಳಿಸುವುದು. ಮತ್ತು ಸಕಲ ಇಷ್ಟಾರ್ಥಗಳನ್ನೂ ಕೊಡುವುದು. ಆದ್ದರಿಂದ ತ್ರಿಪುರಾದೇವಿಯ ಭಕ್ತರಾದ ಜನರು ಜಿತೇಂದ್ರಿಯರಾಗಿ ಯಾವಾಗಲೂ ಈ ಶ್ರೇಷ್ಠವಾದ ಕಥೆಯನ್ನು ಶ್ರವಣಮಾಡಬೇಕು. ||೧೮೩-೧೮೪-೧೮೫-೧೮೬||

ಅತ್ಯಂತ ಶ್ರೇಷ್ಠಳಾದ ತ್ರಿಪುರಾದೇವಿಯು ಈ ಕಥೆಯನ್ನು ಕೇಳುವ ತನ್ನ ಭಕ್ತರಿಗೆ ಇಹಲೋಕಕ್ಕೆ ಸಂಬಂಧಪಟ್ಟ ಅವರ ಸುಖಕ್ಕೆ ಕಾರಣವಾದ ವಸ್ತುಗಳೆಲ್ಲವನ್ನೂ ಬಹು ಶೀಘ್ರವಾಗಿ ಅನುಗ್ರಹಿಸುವಳು. ಅಲ್ಲದೇ ಕೊನೆಯಲ್ಲಿ ಅವರವರ

ಅಂತೇ ಭಕ್ತಿಕ್ರಮೇಣೈವ ಕೃತ್ವಾ ಶಾಂಭವವೇದನಂ ।
ಪ್ರದದಾತಿ ಪರಂ ಸ್ಥಾನಂ ಪುನರಾವೃತ್ತಿವರ್ಜಿತಂ ॥೧೮೮॥

ಶ್ರುತಮೇತತ್ ಜಾಮದಗ್ನ್ಯ ಕಚ್ಚಿದವ್ಯಗ್ರ ಚೇತಸಾ ।
ಪರಮಾಽದ್ಭುತಮಾಹಾತ್ಮ್ಯಂ ತ್ರಿಪುರಾಯಾ ಮಹಾಫಲಂ ॥೧೮೯॥

ಅಭಕ್ತಾನಾಂ ನಾಸ್ತಿಕಾನಾಂ ಶಠಾನಾಂ ದುಷ್ಟಚೇತಸಾಂ ।
ನ ವಾಚ್ಯಂ ಸಂಮುಖೇ ಜಾತು ನೋಚೇತ್ಸಾಕುಪ್ಯತೀಶ್ವರೀ ॥೧೯೦॥

ತ್ವಯಾ ಸದಾ ಧಾರಣೀಯಂ ಚಿಂತನೀಯಂ ಚ ಸರ್ವದಾ ।
ಕಿಂ ಪುನಃ ಶ್ರೋತುಮಿಚ್ಛಾ ತೇ ವದ ರಾಮ ಮಹಾಮತೇ ॥೧೯೧॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ
ತ್ರಿಮೂರ್ತಿವಿವಾಹವರ್ಣನಂ ನಾಮ ದಶಮೋಽಧ್ಯಾಯಃ

ಭಕ್ತಿಗೆ ಅನುಸಾರವಾಗಿ ಮಹೇಶ್ವರನ ಸ್ವರೂಪದ ಜ್ಞಾನವಾಗುವಂತೆ ಮಾಡಿ, ಕಡೆಗೆ ಪುನರಾವೃತ್ತಿರಹಿತವಾದ ಮೋಕ್ಷವನ್ನೂ ಕೊಡುವಳು. ಎಲೈ ಪರಶುರಾಮನೇ, ನೀನು ಏಕಾಗ್ರಮನಸ್ಸಿನಿಂದ ತುಂಬ ಆಶ್ಚರ್ಯಕರವೂ ಬಹಳ ಅತಿಶಯವಾದ ಮಹಿಮೆಯುಳ್ಳ ಮತ್ತು ಮಹಾಫಲವನ್ನೂ ಕೊಡುವ ಈ ತ್ರಿಪುರಾಕಥೆಯನ್ನು ಕೇಳಿದೆಯಷ್ಟೇ? ॥೧೮೭-೧೮೮-೧೮೯॥

ಇಂತಹ ಶ್ರೇಷ್ಠವಾದ ತ್ರಿಪುರಾಕಥೆಯನ್ನು ಆಕೆಯ ಭಕ್ತರಲ್ಲದವರಿಗಾಗಲೀ, ನಾಸ್ತಿಕರಿಗಾಗಲೀ, ವಂಚಕರಿಗಾಗಲೀ, ದುಷ್ಟರಿಗಾಗಲೀ, ಎಂದಿಗೂ ಹೇಳಬಾರದು. ಹಾಗೇನಾದರೂ ಹೇಳಿದರೆ ದೇವಿಯು ಕೋಪಿಸಿಕೊಳ್ಳುವಳು. ಎಲೈ ಪರಶುರಾಮನೇ, ಈ ಶ್ರೇಷ್ಠವಾದ ಕಥೆಯನ್ನು ನೀನು ಯಾವಾಗಲೂ ಮನಸ್ಸಿನಲ್ಲಿ ಧಾರಣೆಮಾಡಿ, ಆಕೆಯನ್ನು ಧ್ಯಾನಿಸು. ಎಲೈ ಬಹಳ ಬುದ್ಧಿಶಾಲಿಯಾದ ಪರಶುರಾಮನೇ, ನೀನು ಇನ್ನೇನನ್ನು ಕೇಳಲು ಇಷ್ಟಪಡುತ್ತಿರುವೆಯೋ ಅದನ್ನು ತಿಳಿಸು. ॥೧೯೦-೧೯೧॥

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ತ್ರಿರೂಪಾಖ್ಯಾನವೆಂಬ
ತ್ರಿಮೂರ್ತಿಗಳ ವಿವಾಹವನ್ನು ವರ್ಣಿಸಿರುವ
ಹತ್ತನೆಯ ಅಧ್ಯಾಯವು ಮುಗಿದುದು

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ಏಕಾದಶೋಽಧ್ಯಾಯಃ ||

ಹನ್ನೊಂದನೆಯ ಅಧ್ಯಾಯವು

ಏವಂ ವಿಧಂ ಸಮಾಖ್ಯಾನಂ ತ್ರಿರೂಪಾಯಾ ಮಹತ್ತರಂ ।
ಶ್ರುತ್ವಾ ಸ ವಿಸ್ಮಯೋ ರಾಮಃ ಶ್ರೀದತ್ತಮುಖಪಂಕಜಾತ್ ॥೧॥

ನಿರ್ಗಮನ್ನೂತನಾಮೋದ ಮಕರಂದಮನೋಹರಂ ।
ಆನಂದಾಮೃತವಾರಾಶೀ ಮಗ್ನಸ್ವಾಂತೋ ಬಭೂವ ಹ ॥೨॥

ಆಹ ಭಕ್ತಿಪ್ರೇಮಭರ ಪೇಶಲಂ ವಾಕ್ಯಮುತ್ತಮಂ ।
ಅಹೋಽತ್ಯದ್ಭುತಮೇತದ್ವೈ ಪ್ರೋಕ್ತಮಾಖ್ಯಾನನಾಯಕಂ ॥೩॥

ನೈವಂ ವಿಧಂ ಸಮಾಖ್ಯಾನಂ ಶ್ರುತಮಾಸೀದ್ದಯಾನಿಧೇ ।
ಭವನ್ಮುಖಾಽಬ್ಜನಿರ್ಗಚ್ಛತ್ಕಥಾಽಮೃತಝರೀಭರಂ ॥೪॥

ಮೂರು ರೂಪಗಳನ್ನು ಧರಿಸಿದ ತ್ರಿಪುರಾದೇವಿಯ ಶ್ರೇಷ್ಠವಾದ ಇಂಥಾ ಕಥೆಯನ್ನು ದತ್ತಾತ್ರೇಯನ ಮುಖಕಮಲದಿಂದ ಕೇಳಿ, ಪರಶುರಾಮನು ಆಶ್ಚರ್ಯದಿಂದ ಕೂಡಿದವನಾಗಿ ಉಕ್ಕಿಬರುತ್ತಿರುವ ಹೊಸಹೊಸದಾದ ಆನಂದವೆಂಬ ಮಕರಂದದಿಂದ ಮನೋಹರವಾದ ಆನಂದಾಮೃತವೆಂಬ ಸಮುದ್ರದಲ್ಲಿ ಮುಳುಗಿದ ಮನಸುಳ್ಳವನಾದನು. ಅನಂತರ ಅವನು ದತ್ತಾತ್ರೇಯನನ್ನು ಕುರಿತು ಭಕ್ತಿ ಪ್ರೇಮಗಳ ಅತಿಶಯದಿಂದ ಬಹಳ ಮನೋಹರವಾದ ಮಾತುಗಳಿಂದ ಕಥಾರತ್ನವೂ ಮತ್ತು ಅತ್ಯಾಶ್ಚರ್ಯಕರವೂ ಆದ ದೇವಿಯ ಕಥೆಯನ್ನು ತಾವು ನನಗೆ ತಿಳಿಸಿದ್ದೀರಿ. ಎಂದು ಹೇಳಿದನು. ||೧-೨-೩||

ಪೂಜ್ಯರಾದ ಮತ್ತು ಪರಮಕರುಣಾಶಾಲಿಯಾದ ಗುರುಗಳೇ, ತಾವು ಈಗ ದಯವಿಟ್ಟು ಹೇಳಿದ ಕಥೆಯಂಥಾ ಕಥೆಯನ್ನು ನಾನು ಹಿಂದೆ ಯಾವಾಗಲೂ ಕೇಳಿ

ಪಿಬತಃ ಶ್ರೋತ್ರ ಪುಟೇತಸ್ತೃಷಾಶಾಂತಿರ್ನ ವಿದ್ಯತೇ ।
ಯಥಾ ಕಾಮಿ ಜನಸ್ಯಾತಿ ಸುಂದರೀ ಭಾಸಗೋಚರಾಂ ॥೫॥

ಜುಷತೋಽನುಕ್ಷಣಂ ತೃಷ್ಣಾ ವರ್ಧತೇ ಮೇ ತಥಾಽಭವತ್ ।
ಗುರೋ ಶ್ರೀನಾಥ ಮೇ ಸಮ್ಯಕ್ ಶ್ರುತಮಾಖ್ಯಾನಮುತ್ತಮಂ ॥೬॥

ತ್ರಿರೂಪಾಯಾಃ ಶುಭಂ ಪುಣ್ಯಂ ಗೌರ್ಯಾದೀನಾಮಪಿ ಪ್ರಭೋ ।
ವದಾಽಖ್ಯಾನಂ ಕಥಂಭೂತಂ ಕೃಪಯಾ ಕರುಣಾನಿಧೇ ॥೭॥

ಇತಿ ಪರ್ಯನುಯುಕ್ತೋಽಥ ದತ್ತಾತ್ರೇಯೋ ಯತೀಶ್ವರಃ ।
ಪ್ರಾಹ ಗಂಭೀರಯಾ ವಾಚಾ ಮಧುರಾಽಕ್ಷರ ಸುಸ್ವರಂ ॥೮॥

ಭಾರ್ಗವ ಶೃಣು ಗೌರ್ಯಾದಿ ಚರಿತಂ ಲೋಕಪಾವನಂ ।
ಏವಂ ಗೌರೀಂ ರಮಾಂ ವಾಣೀಂ ಪ್ರಾಪ್ಯ ರುದ್ರಾಽದಯಸ್ತದಾ ॥೯॥

ತ್ರಿಲ್ಲ. ತಮ್ಮ ಮುಖಕಮಲದಿಂದ ಹೊರಟ ಕಥಾಮೃತದ ಪ್ರವಾಹದ ಸವಿಯನ್ನು ಕಿವಿಗಳೆಂಬ ದೊನ್ನೆಗಳಿಂದ ಪಾನಮಾಡುತ್ತಿರುವ ನನಗೆ ಕೇಳಬೇಕೆಂಬ ದಾಹವು ಇನ್ನೂ ಹೆಚ್ಚಾಗುತ್ತಿದೆಯೇ ವಿನಾ ಶಾಂತಿಯುಂಟಾಗಿಲ್ಲ. ಕಾಮುಕನಾದ ಮನುಷ್ಯನಿಗೆ ಅತಿ ಸುಂದರಿಯಾದ ಸ್ತ್ರೀಯು ಕಾಣಿಸಿದಾಗ ಅವನ ಆಸೆಯು ಪ್ರತಿಕ್ಷಣದಲ್ಲಿಯೂ ಹೇಗೆ ವೃದ್ಧಿಹೊಂದುವುದೋ ಹಾಗೆ ನನಗೆ ಕೇಳಬೇಕೆಂಬ ಕುತೂಹಲವು ಪ್ರತಿಕ್ಷಣದಲ್ಲಿಯೂ ವೃದ್ಧಿಹೊಂದುತ್ತಿದೆ. ಓ ಪೂಜ್ಯರಾದ ಗುರುಗಳೇ, ತಾವು ಅತ್ಯಂತ ಶ್ರೇಷ್ಠವಾದ ದೇವಿಯ ಕಥೆಯನ್ನು ದಯವಿಟ್ಟು ನನಗೆ ಹೇಳಿದ್ದೀರಿ. ||೬-೪-೫||

ಪೂಜ್ಯರಾದ ಗುರುಗಳೇ, ತ್ರಿರೂಪಳಾದ ತ್ರಿಪುರಾದೇವಿಯ ಕಲಾಸ್ವರೂಪರಾದ ಗೌರಿಯೇ ಮೊದಲಾದವರ ಪುಣ್ಯಕರಗಳಾದ ಕಥೆಗಳನ್ನೂ ದಯವಿಟ್ಟು ಹೇಳಿರಿ. ಹೀಗೆ ಪರಶುರಾಮನು ಪ್ರಶ್ನಿಸಲು ಯತೀಶ್ವರನಾದ ದತ್ತಾತ್ರೇಯನು ಮಧುರವಾದ ಮತ್ತು ಸುಸ್ವರವಾದ ಮಾತುಗಳಿಂದ ಗಂಭೀರವಾದ ರೀತಿಯಲ್ಲಿ ಪರಶುರಾಮನನ್ನು ಕುರಿತು ಹೀಗೆ ಹೇಳಿದನು.—ಎಲೈ ಪರಶುರಾಮನೇ, ಈ ಲೋಕವನ್ನು ಪವಿತ್ರವನ್ನಾಗಿ ಮಾಡುವ ಗೌರಿಯೇ ಮೊದಲಾದವರ ಚರಿತ್ರೆಯನ್ನು ಕೇಳು. ಹೀಗೆ ಶಿವನೇ ಮೊದಲಾದವರು ಗೌರೀ, ಲಕ್ಷ್ಮೀ ಮತ್ತು ಸರಸ್ವತಿಯರನ್ನು

ನಿರ್ವೃತಾಃ ಸ್ವೇಷು ಕೃತ್ಯೇಷು ವಿಕ್ಲಮಾಃ ಸ್ಯುರತೀವ ತೇ ।
ಏವಂ ಸೃಷ್ಟೇಷು ಲೋಕೇಷು ಕರ್ಮವೈಚಿತ್ರ್ಯಹೀನತಃ ॥೧೦॥

ಸಮಾಃ ಸಮಾಚಾರಪರಾ ಬಭೂವುರ್ಮಾನವಾ ಭುವಿ ।
ತೇನಾಽಸೀತ್ಕೋಽಪಿ ನೈವಾಽಢ್ಯೋ ನ ರಿಕ್ತೋ ನ ಸುಖಾಧಿಕಃ ॥೧೧॥

ನ ಕ್ಲೇಶೀ ನ ಚ ಪಾಲ್ಯೋ ವಾ ಪಾಲಕೋ ವಾಽಪಿ ಕಶ್ಚನ ।
ನ ಸೇವ್ಯಃ ಸೇವಕೋ ವಾಽಪಿ ನ ರಾಜಾ ನ ಪ್ರಜಾಸ್ತಥಾ ॥೧೨॥

ಸರ್ವಂ ಸಮಂ ಸಮಾಕ್ಷೀದ್ವೈ ಯೋಗೀಶ್ವರಮನೋ ಯಥಾ ।
ಏವಂ ವಿಧೇ ಜನೇ ಜಾತೇ ನ ಯಜ್ಞೋ ನ ಚ ದಕ್ಷಿಣಾ ॥೧೩॥

ನ ದಾನಂ ನಾಽಪಿ ಪೂಜಾಽದಿ ಶಾಂತಮಾಸೀನ್ನಿರಾಕುಲಂ ।
ಏವಂ ಭೂತೇ ಭುವಿ ತದಾ ದೇವಾಽದ್ಯಾಃ ಸೇಂದ್ರನಾಯಕಾಃ ॥೧೪॥

ಕ್ರಮವಾಗಿ ವಿವಾಹ ಮಾಡಿಕೊಂಡು ನಿರಾಯಾಸವಾಗಿ ಮತ್ತು ಸುಖವಾಗಿ ತಮ್ಮ ತಮ್ಮ ಕೆಲಸಗಳನ್ನು ನೆಡೆಸಿಕೊಂಡುಬರುತ್ತಿದ್ದರು. ಬ್ರಹ್ಮಾದಿಗಳು ಲೋಕದ ಸೃಷ್ಟಿಯೇ ಮೊದಲಾದುವನ್ನು ಮಾಡುತ್ತಿರಲಾಗಿ ಭೂಮಿಯಲ್ಲಿ ಮನುಷ್ಯರು ಭಿನ್ನ ಭಿನ್ನಕರ್ಮಗಳಿಂದ ಕೂಡಿ ಸೃಷ್ಟರಾಗದೇ ಇದ್ದುದರಿಂದ ಎಲ್ಲರೂ ಒಂದೇ ವಿಧವಾದ ಸ್ವಭಾವವನ್ನು ಹೊಂದಿದ್ದರು. ಇದರಿಂದ ಒಬ್ಬನು ಧನಿಕನಾಗಿಯೂ ಮತ್ತೊಬ್ಬನು ಬಡವನಾಗಿಯೂ, ಒಬ್ಬನು ಸುಖಪಡುವವನಾಗಿಯೂ, ಮತ್ತೊಬ್ಬನು ದುಃಖಿಯಾಗಿಯೂ ಇರಲಿಲ್ಲ. ||೭-೮-೯-೧೦-೧೧||

ಲೋಕದಲ್ಲಿ ಒಬ್ಬನು ಕ್ಲೇಶವನ್ನು ಪಡುವುದಾಗಲೀ, ಮತ್ತೊಬ್ಬನು ರಕ್ಷಿಸಲ್ಪಡಬೇಕಾದವನಾಗಲೀ, ಮಗದೊಬ್ಬನು ರಕ್ಷಕನಾಗಲೀ, ಒಬ್ಬನು ಸೇವಿಸಲ್ಪಡಬೇಕಾದವನಾಗಲೀ, ಇನ್ನೊಬ್ಬನು ಸೇವಕನಾಗಲೀ, ಒಬ್ಬನು ರಾಜನಾಗಲೀ ಇತರರು ಪ್ರಜೆಗಳೆಂದಾಗಲೀ ಈ ವಿಧವಾದ ವ್ಯತ್ಯಾಸ ಒಂದೂ ಇರಲಿಲ್ಲ. ಯೋಗೀಶ್ವರನ ಮನಸ್ಸಿನಂತೆ ಎಲ್ಲವೂ ಸಮನಾಗಿಯೇ ಕಾಣುತ್ತಿತ್ತು. ಹೀಗೆ ಲೋಕವೆಲ್ಲವೂ ಸಮನಾದ ಸ್ವಭಾವವನ್ನು ಹೊಂದಿರಲು ಯಜ್ಞಗಳಾಗಲೀ ಅಥವಾ ಅದಕ್ಕೋಸ್ಕರ ದಕ್ಷಿಣೆಯನ್ನು ಕೊಡುವುದಾಗಲೀ, ದಾನಗಳಾಗಲೀ, ಪೂಜೆಯೇ ಮುಂತಾದುವಾಗಲಿ, ಯಾವುದೂ ಇರಲಿಲ್ಲ. ಎಲ್ಲೆಲ್ಲಿಯೂ ಕಕವಳವು ಸ್ವಲ್ಪವೂ ಇಲ್ಲದೇ

ನ ಸುಖಂ ಲೇಭಿರೇ ಮರ್ತ್ಯ ಸೇವ್ಯಭಾವವಿಹೀನತಃ ।
ತದಾ ಗುರುಂ ಸಭಾಸೀನಂ ಪ್ರಣಮ್ಯ ವಿಬುಧೈಃ ಸಹ ॥೧೫॥

ಪಪ್ರಚ್ಛೇಂದ್ರಃ ಸಹಸ್ರಾಕ್ಷಃ ವಿನೀತಃ ಪುರತಃ ಸ್ಥಿತಃ ।
ಆಂಗೀರಸ ಗುರೋ ಬ್ರಹ್ಮನ್ ಭವಾನ್ ನಃ ಕುಲದೈವತಂ ॥೧೬॥

ಬುಧಾನಾಂ ಕೃಚ್ಛ್ರವಾರಾಶೀ ತರಣೇ ತರಣಿರ್ಮತಃ ।
ತದಸ್ಮಾಕಂ ಮಹತ್ಕೃಚ್ಛ್ರಂ ಸಂಪ್ರತಿ ಪ್ರೇಕ್ಷ್ಯತಾಂ ಭವಾನ್॥೧೭॥

ಮರ್ತ್ಯಾ ಬುಧಾನಾಂ ಪಶವ ಇತಿ ನಃ ಶ್ರುತಿಭಿಃ ಶ್ರುತಂ ।
ಕಥಂ ಪಿತಾಮಹವಚೋ ಮೃಷಾ ಸ್ಯಾದಿತಿ ಚಿಂತ್ಯತಾಂ ॥೧೮॥

ಯದ್ಯಸ್ಮತ್ತಂತ್ರಮಾಸೀನಾ ನ ಸ್ವತಂತ್ರಾ ಭವಂತಿ ತೇ ।
ಮರ್ತ್ಯಾಸ್ತದಾ ದೇವಪಾಲ್ಯಾಃ ಪಶುತ್ವಂ ತೇಷು ಜಾಯತೇ ॥೧೯॥

ಶಾಂತತೆಯೇ ನೆಲಸಿತ್ತು. ಹೀಗಿರಲು ಇಂದ್ರನೇ ಅಧಿಪತಿಯಾಗುಳ್ಳ ದೇವತೆಗಳೆಲ್ಲರೂ ಚಿಂತಾಕ್ರಾಂತರಾದರು. ||೧೨-೧೩-೧೪||

ಇಂದ್ರಾದಿದೇವತೆಗಳು ತಮ್ಮನ್ನು ಸೇವಿಸಬೇಕೆಂಬ ಭಾವವು ಮನುಷ್ಯರಲ್ಲಿ ಅಳಿದುದನ್ನು ಕಂಡು, ಬಹಳ ಸಂಕಟಕ್ಕೊಳಗಾದರು. ಆಗ ಇಂದ್ರನ ಸಭೆಯಲ್ಲಿ ಮಂಡಿಸಿದ್ದ ಗುರುವಾದ ಬೃಹಸ್ಪತಿಗೆ ಸಹಸ್ರಾಕ್ಷನಾದ ಇಂದ್ರನು ದೇವತೆಗಳೊಂದಿಗೆ ನಮಸ್ಕಾರಮಾಡಿ, ಅವನ ಮುಂದೆ ವಿನಯದಿಂದ ಹೇಳಿದನು. ಓ ಗುರುಗಳಾದ ಬೃಹಸ್ಪತಿಗಳೇ, ತಾವು ನಮ್ಮ ಕುಲಕ್ಕೆ ಗುರುಗಳಾಗಿದ್ದೀರಿ. ದೇವತೆಗಳಿಗಾಗುವ ಕಷ್ಟಗಳೆಂಬ ಸಮುದ್ರವನ್ನು ದಾಟಿಸುವ ವಿಷಯದಲ್ಲಿ ತಾವು ನಾವೆಯಾಗಿದ್ದೀರಿ. ಶ್ರುತಿಗಳಲ್ಲಿ ದೇವತೆಗಳಾದ ನಮಗೆ ಮನುಷ್ಯರು ಪಶುಗಳೆಂದು ಹೇಳಿರುವುದನ್ನು ಕೇಳಿದ್ದೇವೆ. ಆದ್ದರಿಂದ ಬ್ರಹ್ಮನು ಹೇಳಿರುವ ವೇದದ ಮಾತು ಹೀಗೆ ಸುಳ್ಳಾಗುವುದು ಯುಕ್ತವೇ? ಎಂದು ತಾವು ದಯವಿಟ್ಟು ಯೋಚಿಸಬೇಕು. ||೧೫-೧೬-೧೭||

ಮಾನವರು ತಮ್ಮ ಕಪಟಕ್ಕೆ ಒಳಗಾದರೆ ಅವರು ಪರಾಧೀನರಾಗಿರುವರು. ಆಗ ಅವರು ದೇವತೆಗಳಾದ ನಮ್ಮಿಂದ ಪಾಲಿಸಲ್ಪಡುವರು. ಅವರು ದೇವತೆಗಳಿಗೆ ಪಶುಗಳೂ ಆಗುವರು. ಹೀಗೆ ನಮ್ಮ ಕಾರ್ಯವು ಸಿದ್ಧಿಸುವ ಬಗೆಯನ್ನು ದಯವಿಟ್ಟು ಶೀಘ್ರವಾಗಿ ಆಲೋಚಿಸಬೇಕು. ಅಂಜನವನ್ನು ಮಾಡುವ ಮನುಷ್ಯನು ಕುರುಡ

ತನ್ನಃ ಸಂಪದ್ಯತೇ ಯೇನ ತದಾಶು ಪರಿಚಿಂತ್ಯತಾಂ ।
ಭವಾನ್ನೋ ವಿಷಮೇ ತ್ರಾತಾ ತ್ವಂಥಸ್ಯಾಂಜನಕೃದ್ಯಥಾ ॥೨೦॥

ಇತ್ಥಂ ಪುರಂದರವಚೋ ನಿಶಮ್ಯಾಂಗಿರಸೋ ಗುರುಃ ।
ಕ್ಷಣಂ ವಿಮೃಶ್ಯ ಪ್ರೋವಾಚ ಸಂಬೋಧ್ಯೇಂದ್ರಪುರೋಗಮಾನ್ ॥೨೧॥

ಹೇ ಪುರಂದರ ಮದ್ವಾಕ್ಯಂ ಶ್ರೋತವ್ಯಂ ಭವತಾಽಽದರಾತ್ ।
ದೇವಾನಾಮಿಷ್ಟಸಿದ್ಧ್ಯರ್ಥಂ ಯದ್ಬ್ರವೀಮಿ ಹಿತಂ ವಚಃ ॥೨೨॥

ಗಚ್ಛ ದೇವೈರ್ವೃತಃ ಶೀಘ್ರಂ ಶರಣ್ಯಂ ಪ್ರಪಿತಾಮಹಂ ।
ಶರಣಂ ಸ ಭವಚ್ಛ್ರೇಯೋ ವಿಧಾಸ್ಯತ್ಯಂಬುಜಾಸನಃ ॥೨೩॥

ಜಗತ್ತಂತ್ರ ಸ್ವತಂತ್ರೋಽಸೌ ಸರ್ವಜ್ಞಃ ಸರ್ವಕೃದ್ವಿಭುಃ ।
ಏವಮೇವ ಭವೇತ್ಕ್ಷೇಮಂ ಭವತಾಂ ಭಯನಾಶನಂ ॥೨೪॥

ನಾನ್ಯೋಽತ್ರ ವಿದ್ಯತೇ ಕಶ್ಚಿದುಪಾಯೋ ಭವದೀಪ್ಸಿತೇ ।
ಇತ್ಯಾಕರ್ಣ್ಯ ಗುರೋರ್ವಾಕ್ಯಂ ಪ್ರಣಮ್ಯ ಧಿಷಣಂ ತದಾ ॥೨೫॥

ನಿಗೆ ಹೇಗೋ ಹಾಗೆ ತಾವು ನಮ್ಮನ್ನು ವಿಷಮಸ್ಥಿತಿಯಲ್ಲಿ ಕಾಪಾಡತಕ್ಕವರು. ಇಂದ್ರನು ಹೀಗೆ ಹೇಳಿದ್ದನ್ನು ಕೇಳಿ, ಬೃಹಸ್ಪತಿಯು ಒಂದು ಕ್ಷಣಕಾಲ ಯೋಚಿಸಿ ಇಂದ್ರನೇ ಮೊದಲಾದವರನ್ನು ಸಂಬೋಧಿಸಿ ಹೀಗೆ ಹೇಳಿದನು. ||೧೮-೧೯-೨೦-೨೧||

ಎಲೈ ದೇವೇಂದ್ರನೇ, ದೇವತೆಗಳ ಇಷ್ಟಾರ್ಥಸಿದ್ಧಿಗಾಗಿ ನಾನು ಈಗ ಹೇಳುವ ಮಾತನ್ನು ನೀನು ಆದರದಿಂದ ಕೇಳಬೇಕು. ನೀನು ದೇವತೆಗಳೊಂದಿಗೆ ರಕ್ಷಕನಾದ ಬ್ರಹ್ಮನ ಸಮೀಪಕ್ಕೆ ಹೋಗು. ಕಮಲಾಸನನಾದ ಬ್ರಹ್ಮನು ನಿನಗೆ ರಕ್ಷಕನಾಗಿ ಶ್ರೇಯಸ್ಸನ್ನುಂಟುಮಾಡುವನು. ಆತನು ಜಗತ್ತಿನ ವ್ಯವಹಾರಗಳಲ್ಲಿ ಸ್ವತಂತ್ರವಾದ ಶಕ್ತಿಸಾಮರ್ಥ್ಯಗಳುಳ್ಳವನೂ, ಎಲ್ಲವನ್ನೂ ತಿಳಿದವನೂ, ಎಲ್ಲಕ್ಕೂ ಕರ್ತೃವೂ, ವ್ಯಾಪಕನೂ ಆಗಿದ್ದಾನೆ. ಅವನಿಂದಲೇ ನಿಮ್ಮ ಭಯವು ತೊಲಗಿ ಕ್ಷೇಮವುಂಟಾಗುವುದು. ||೨೨-೨೩-೨೪||

ನಿಮ್ಮ ಇಷ್ಟಾರ್ಥವು ಸಿದ್ಧಿಸಬೇಕಾದರೆ ಬೇರೊಂದು ಉಪಾಯವೇ ಇಲ್ಲ. ಹೀಗೆ ಗುರುವಾದ ಬೃಹಸ್ಪತಿಯ ಮಾತನ್ನು ಕೇಳಿ ಶಚೀಪತಿಯಾದ ಇಂದ್ರನು ಅವನಿಗೆ ನಮಸ್ಕರಿಸಿ ಬುದ್ಧಿವಾದವನ್ನು ಅಂಗೀಕರಿಸಿ, ದೇವತೆಗಳು, ಪಿತೃದೇವತೆಗಳು,

ಓ ಮಿತಿ ದ್ರುತಮೇವೇಂದ್ರಃ ಸದೇವ ಪಿತೃಗುಹ್ಯಕೈಃ ।
ಜಗಾಮ ಬ್ರಹ್ಮಸದನಂ ಸತ್ಯಲೋಕಂ ಶಚೀಪತಿಃ ॥೨೬॥

ತತ್ರ ಗತ್ವಾ ಜಗದ್ಧಾತುಃ ಸಭಾಂ ಬಾಹ್ಯ ಸಮಾಶ್ರಯಾಂ ।
ಶತಯೋಜನವಿಸ್ತೀರ್ಣಾಂ ವಿಂಶದ್ಯೋಜನಮಾಯತಾಂ ॥೨೭॥

ತ್ರಿಂಶದುಚ್ಛ್ರಾಯ ಸಂಯುಕ್ತಾಂ ರತ್ನಸ್ತಂಭ ಪ್ರದೀಪಿತಾಂ ।
ಸ್ತಂಭಪ್ರಭಾ ಮೂರ್ಚ್ಛನೇನ ಹೇಮಭೂಮಿ ಪ್ರಭಾಽಧಿಕಾಂ ॥೨೮॥

ಭೂಮಿಪ್ರಭಾ ಶಬಲಿತ ಚಂದ್ರಕಾಂತೋರ್ಧ್ವಭೂಮಿಕಾಂ ।
ಕಾಂತಿತ್ರಯ ಸುಸಂಕ್ರಾಂತ ಮುಕ್ತಾಜಾಲ ವಿಚಿತ್ರಿತಾಂ ॥೨೯॥

ಸ್ತಂಭ ಸಂನ್ಯಸ್ತಮಾಣಿಕ್ಯಮಯ ಪುತ್ತಾಲಿಕಾಂಚಿತಾಂ ।
ಚಂದ್ರಕಾಂತ ಖಂಡಕ್ಲೃಪ್ತ ಪ್ರತಿಮಾನೇತ್ರ ಭಾಸಿತಾಂ ॥೩೦॥

ಇಂದ್ರನೀಲ ತಾರಕಿಕಾ ಪಕ್ಷ್ಮಕೇಶ ಪ್ರಕಾಶಿತಾಂ ।
ಚಂದನಾಗರು ಕಸ್ತೂರೀ ಕಾಶ್ಮೀರಪಟವಾಸಕೈಃ ॥೩೧॥

ಗುಹ್ಯರು, ಇವರೆಲ್ಲರ ಜೊತೆಯಲ್ಲಿ ಬ್ರಹ್ಮನ ಮನೆಯಾದ ಸತ್ಯಲೋಕವನ್ನು ಕುರಿತು ತೆರಳಿದನು. ಅಲ್ಲಿ ಬ್ರಹ್ಮನ ಅರಮನೆಯ ಮುಂಭಾಗದಲ್ಲಿರುವ ಸುಧರ್ಮಾ ಸಭಾ ಮಂದಿರವು ನೂರುಯೋಜನ ವಿಸ್ತಾರವುಳ್ಳದ್ದಾಗಿಯೂ, ಇಪ್ಪತ್ತುಯೋಜನದಷ್ಟು ಉದ್ದವಾದುದಾಗಿಯೂ ಇತ್ತು. ||೨೫-೨೬-೨೭||

ಬ್ರಹ್ಮನ ಸಭಾಮಂದಿರವು ಮುವ್ವತ್ತು ಯೋಜನದಷ್ಟು ಎತ್ತರವಾದದ್ದಾಗಿಯೂ, ರತ್ನದ ಕಂಬಗಳಿಂದ ಪ್ರಕಾಶಿಸುತ್ತಲೂ, ಕಂಭಗಳ ಕಾಂತಿಯ ಪ್ರಸಾರದಿಂದ ಹೆಚ್ಚಾಗುತ್ತಿದ್ದ ಚಿನ್ನದ ಭೂಮಿಯ ಪ್ರಕಾಶವುಳ್ಳದ್ದಾಗಿಯೂ ಇತ್ತು. ಆ ಸಭಾಮಂದಿರವು ತಳಗಡೆಯ ಭೂಮಿಯ ಕಾಂತಿಯ ಸಂಪರ್ಕದಿಂದ ವಿಶೇಷವಾಗಿ ಪ್ರಕಾಶಮಾನವಾಗಿದ್ದ ಚಂದ್ರಕಾಂತಿ ಶಿಲೆಗಳಿಂದ ಮಾಡಿದ ಮೇಲ್ಭಾಗದ ಪ್ರದೇಶವುಳ್ಳದ್ದಾಗಿಯೂ, ಮೂರು ವಿಧವಾದ ಕಾಂತಿಗಳ ಸಂಪರ್ಕವುಳ್ಳ ಮುತ್ತಿನ ಸಾಲುಗಳಿಂದ ಚಿತ್ರವಿಚಿತ್ರವಾಗಿಯೂ ಇದ್ದಿತು. ಸಭಾಮಂದಿರದಲ್ಲಿ ಸೊಗಸಾದ ರೀತಿಯಲ್ಲಿ ಜೋಡಿಸಿದ ಮುತ್ತಿನ ಬೊಂಬೆಗಳೂ ಬಹಳ ಮನೋಹರವಾಗಿದ್ದವು. ಅಲ್ಲದೇ ಆ ಸಭಾಮಂದಿರದಲ್ಲಿ ಚಂದ್ರಕಾಂತಿಶಿಲೆಗಳ ಚೂರಿನಿಂದ ತಯಾರಿಸಿದ ಪ್ರತಿಮೆಗಳ

ಘುಂಘುಮಿತ(ಸು) ಗಂಧಾಽಡ್ಯಾಂ ಮಣಿ ಕಾಂಚನ ಚಿತ್ರಿತೈಃ ।
ತೋರಣೈಃ ಕದಲೀಸ್ತಂಭೈಃ ಪೂಗವೃಕ್ಷೈಃ ಸಮಂತತಃ ॥೩೨॥

ಮಂಡಿತಾಂ ಮಾಲ್ಯಜಾಲೈಶ್ಚ ಮಂದಮಾರುತ ಶೀತಲಾಂ ।
ಮಧ್ಯೇ ಮಣಿ ಪ್ರವೇಕಾಽಢ್ಯಂ ಮುಕ್ತಾಚ್ಛತ್ರ ವಿರಾಜಿತಂ ॥೩೩॥

ಸಿಂಹಾಸನಂ ಜಗತ್ಸ್ರಷ್ಟುಃ ಪರಿತೋಽಪಿ ಸಭಾಸದಾಂ ।
ನಾನಾವಿಧಾನ್ಯಾಸನಾನಿ ಸಂಸ್ಥಿತಾನಿ ಸಹಸ್ರಶಃ ॥೩೪॥

ತೇಷು ಸಿದ್ಧಾ ಮಹಾತ್ಮಾನಃ ಕಪಿಲಾಽದ್ಯಾ ಮಹರ್ಷಯಃ ।
ಭೃಗ್ವಾದ್ಯಾಃ ಸನಕಾಽದ್ಯಾಶ್ಚ ಯೋಗೀಂದ್ರಾಃ ಸುವ್ಯವಸ್ಥಿತಾಃ ॥೩೫॥

ಕೋಟಿಮನ್ಮಥಲಾವಣ್ಯ ಪರಿಪೂರ್ಣಾಂಗ ಸೌಭಗಾಃ ।
ತಾರುಣ್ಯಗರ್ವಿತಾ ರಾಮಾ ರಮಣ್ಯಶ್ಚಾಮರಗ್ರಹಾಃ ॥೩೬॥

ಕಣುಗಳಲ್ಲಿ ವಿಶೇಷವಾದ ಆನಂದವನ್ನುಂಟುಮಾಡುವ ಇಂದ್ರನೀಲಮಣಿಗಳಿಂದ ಮಾಡಿದ ಕಣ್ಣುಗುಡ್ಡೆಗಳು ಚಿಕ್ಕಚಿಕ್ಕ ತಾವರೆಯ ದಳದಂತಿರುವ ರೆಪ್ಪೆಯ ಸಣ್ಣಸಣ್ಣ ಕೂದಲುಗಳೂ ಕೂಡ ಬಹಳ ಮನೋಹರವಾಗಿದ್ದವು. ಅಲ್ಲದೇ ಸಭಾಮಂದಿರವು ಶ್ರೀಗಂಧ, ಕಸ್ತೂರಿ, ಕಾಶ್ಮೀರದ ಸೊಗಸಾದ ಸುಗಂಧದ್ರವ್ಯಗಳು ಇವುಗಳಿಂದ ಮನಸ್ಸಿಗೆ ಬಹಳ ಸಂತೋಷವನ್ನುಂಟುಮಾಡುತ್ತಿದ್ದುವು. ||೨೮-೨೯-೩೦-೩೧||

ಸಭಾಮಂದಿರವು ಘಂ, ಘಂ ಎಂದು ಸುವಾಸನೆಯನ್ನು ಬೀರುತ್ತಿರುವ ಸುಗಂಧದ್ರವ್ಯಗಳಿಂದ ಆನಂದದಾಯಕವಾಗಿಯೂ, ಮಣಿಗಳು, ಚಿನ್ನ ಇವುಗಳಿಂದ ಚಮತ್ಕಾರವಾಗಿ ರಚಿಸಿದ ತೋರಣಗಳಿಂದಲೂ, ಬಾಳೆಕಂಬಗಳಿಂದಲೂ ಅಡಿಕೆಮರಗಳಿಂದಲೂ, ಎಲ್ಲಾ ಕಡೆಯಲ್ಲಿಯೂ ಬಹಳ ಸಂತೋಷವನ್ನುಂಟುಮಾಡುತ್ತಿದ್ದಿತು. ಅಲ್ಲದೇ ಸಭಾಮಂದಿರದ ಮಧ್ಯೆ ಮಣಿಮಯವಾದ ಮುತ್ತಿನ ಛತ್ರಿಯಿಂದ ಪ್ರಕಾಶಮಾನವಾದ ಜಗತ್ತಿಗೆ ಸೃಷ್ಟಿಕರ್ತನಾದ ಬ್ರಹ್ಮನ ಸಿಂಹಾಸನವು ವಿರಾಜಿಸುತ್ತಿತ್ತು. ಅದರ ಸುತ್ತಲೂ ಸಭೆಯಲ್ಲಿ ಮಂಡಿಸುವ ಜನರ ಅನೇಕವಿಧವಾದ ಆಸನಗಳು ಸಾವಿರಾರು ಇಡಲ್ಪಟ್ಟಿದ್ದವು. ||೩೨-೩೩-೩೪||

ಮಹಾತ್ಮರಾದ ಸಿದ್ಧಪುರುಷರು, ಕಪಿಲನೇ ಮೊದಲಾದ ಸಿದ್ಧಮಹರ್ಷಿಗಳು ಭೃಗುವೇ ಮೊದಲಾದ ಮುನಿಗಳೂ, ಸನಕನೇ ಮೊದಲಾದ ಜ್ಞಾನಿಶ್ರೇಷ್ಠರೂ, ಆ ಪೀಠಗಳಲ್ಲಿ ಸುಖಾಸೀನರಾಗಿದ್ದರು. ಆ ಸಭಾಮಂದಿರದಲ್ಲಿ ಕೋಟಿ ಮನ್ಮಥರ

ತಾಭಿಃ ಸುವೀಜ್ಯಮಾನಾಸ್ತೇ ಕಾಮಿನೀಭಿಃ ಸಮಂತತಃ ।
ತಾಸಾಂ ವದನರಾಕೇಂದು ಮಂದಸ್ಮಿತಮರೀಚಿಭಿಃ ॥೩೭॥

ಸಂಪೃಕ್ತಾಃ ಸ್ತಂಭಸಂಕ್ರಾಂತ ಪ್ರತಿಮಾ ನೇತ್ರಪಂಕ್ತಯಃ ।
ಮುಮುಚುರ್ನೀರಪೃಷತಾನತಿಸ್ವಚ್ಛಾನ್ನಿರಂತರಾನ್ ॥೩೮॥

ಸಭಾಶೋಭಾ ದರ್ಶನೋದ್ಯದಾನಂದಾಶ್ರು ಕಲಾ ಇವ ।
ತತ್ರ ಸಿಂಹಾಸನೇ ಧಾತಾ ನವವಿದ್ರುಮ ಸಚ್ಛವಿಃ ॥೩೯॥

ಪ್ರಸನ್ನವೇದವದನೋ ಬ್ರಹ್ಮವ್ಯಾಖ್ಯಾನತತ್ಪರಃ ।
ಏವಂ ವಿಧಂ ವಿಧಾತಾರಂ ಚಾಽಪಶ್ಯದಮರಾಽಧಿಪಃ ॥೪೦॥

ಸತ್ಯಲೋಕಾಽಂತರೇ ಚಾಪಿ ಸ್ಥಿತ ಏವಂ ವಿಧೋ ವಿಧಿಃ ।
ರೂಪ ದ್ವಿತಯಮಾಸೀನಃ ಲೋಕರಕ್ಷಣಹೇತವೇ ॥೪೧॥

ಅಂತಃ ಸಭಾಯಾಂ ದೇವೇಂದ್ರಮುಖಾನಾಮಮೃತಾಽಂಧಸಾಂ ।
ಪ್ರವೇಶೋ ನಾಸ್ತಿ ತತ್ಪ್ರೋಕ್ತಂ ಜಿತಷಡ್ರಿಪು ಸಂಶ್ರಯಂ ॥೪೨॥

ಸೌಂದರ್ಯದಷ್ಟು ಲಾವಣ್ಯದಿಂದ ಕೂಡಿದ ಸೊಗಸಾದ ಅವಯವಗಳುಳ್ಳ ತಮ್ಮ ಯೌವ್ವನದಿಂದ ಗರ್ವಪಡುತ್ತಿರುವ ರಮಣಿಯರು ಚಾಮರಗಳನ್ನು ಹಿಡಿದಿದ್ದರು. ಆ ರಮಣೀಮಣಿಯರು ಎಲ್ಲಾ ಕಡೆಯಲ್ಲೂ ಅಲ್ಲಿ ಕೂತಿರುವವರೆಲ್ಲರಿಗೂ ಹಿತವಾಗುವಂತೆ ಬೀಸುತ್ತಿದ್ದರು. ಆ ಸ್ತ್ರೀಯರ ಮುಖಗಳೆಂಬ ಚಂದ್ರರ ಮುಗುಳು ನಗೆಯ ಕಾಂತಿಗಳ ಸಂಪರ್ಕವನ್ನು ಹೊಂದಿರುವ ಕಂಭಗಳಲ್ಲಿ ಚಂದ್ರಕಾಂತಿಶಿಲೆಯಿಂದ ಕೆತ್ತಿರುವ ಪ್ರತಿಮೆಗಳ ಕಣ್ಣುಗಳ ಸಾಲುಗಳು ಎಡಬಿಡದೆ ಬಹಳ ಶುದ್ಧವಾದ ನೀರಿನ ತೊಟ್ಟುಗಳನ್ನು ಬಿಡುತ್ತಿದ್ದವು. ||೩೫-೩೬-೩೭-೩೮||

ಆ ಪ್ರತಿಮೆಗಳ ಕಣ್ಣುಗಳಿಂದ ಹೊರಟುಬರುತ್ತಿರುವ ನೀರಿನ ತೊಟ್ಟುಗಳು ಅತ್ಯಂತ ಸುಂದರವಾದ ಸಭೆಯ ಸೌಂದರ್ಯವನ್ನು ನೋಡಿದುದರಿಂದ ಉಂಟಾದ ಆನಂದಬಾಷ್ಪಗಳ ತೊಟ್ಟುಗಳೋ ಎಂಬಂತೆ ಕಾಣುತ್ತಿದ್ದವು. ಹೊಸದಾದ ಚಿಗುರಿನ ಕಾಂತಿಗೆ ಸಮಾನವಾದ ದೇಹಕಾಂತಿಯುಳ್ಳ ಬ್ರಹ್ಮನು ಅಲ್ಲಿ ಸಿಂಹಾಸನದ ಮೇಲೆ ಮಂಡಿಸಿ, ಪರಿಶುದ್ಧಗಳಾದ ವೇದಗಳನ್ನು ಉಚ್ಚರಿಸುತ್ತಾ ಬ್ರಹ್ಮತತ್ತ್ವದ ವಿಚಾರ

ತತ್ರ ಪ್ರಾಪ್ತಾ ನ ಮುಹ್ಯಂತಿ ನಾಽಧೋ ಯಾಂತಿ ಕದಾಚನ ।
ಕಾಮಕ್ರೋಧಾದಿಭಿಃ ನೈವ ಪರಿಭೂತಾ ಭವಂತಿ ಚ ॥೪೩॥

ಕಾಮಕ್ರೋಧಾದಿಯುಕ್ತಾನಾಂ ಬಾಹ್ಯೇ ಸದಸಿ ಸಂಸ್ಥಿತಿಃ ।
ಏತದರ್ಥಂ ದ್ವಿಧಾ(ತ)ತ್ರ ಸಂಸ್ಥಿತಃ ಪ್ರಪಿತಾಮಹಃ ॥೪೪॥

ತತ್ರಾಽಮರಾಧಿಪೋ ದೇವೈಃ ಸಾಕಂ ದೃಷ್ಟ್ವಾ ಜಗತ್ಪ್ರಭುಂ।
ದೂರಾದೇವಾಽಮರೇಶಾನೋ ದಂಡವತ್ಪ್ರಣನಾಮ ತಂ ॥೪೫॥

ಪ್ರಣೇಮುರ್ವಿಬುಧಾಸ್ಸರ್ವೇ ಬದ್ಧಾಂಜಲಿ ಪುಟಾಸ್ತದಾ ।
ತಾನ್ ದೃಷ್ಟ್ವಾ ಜಗತಾಂ ಧಾತಾ ಪ್ರೋವಾಚ ಪ್ರಸಭಂ ತದಾ ॥೪೬॥

ವಾಗಿ ವ್ಯಾಖ್ಯಾನಮಾಡುತ್ತಿದ್ದನು. ಹೀಗೆ ಸಿಂಹಾಸನದಲ್ಲಿ ಮಂಡಿಸಿರುವ ಬ್ರಹ್ಮನನ್ನು ದೇವತೆಗಳಿಗೆ ಅಧಿಪತಿಯಾದ ಇಂದ್ರನು ದರ್ಶನಮಾಡಿದನು. ಸತ್ಯಲೋಕದ ಒಳಗಡೆಯೂ, ಬ್ರಹ್ಮನು ಲೋಕಕ್ಷೇಮಕ್ಕಾಗಿ ಎರಡು ವಿಧವಾದ ರೂಪವನ್ನು ಧರಿಸಿರುತ್ತಾನೆ. ಒಳಗಡೆಯ ಸಭೆಯಲ್ಲಿ ದೇವೇಂದ್ರನೇ ಮೊದಲಾದ ದೇವತೆಗಳಿಗೆ ಪ್ರವೇಶವಿಲ್ಲ. ಏಕೆಂದರೆ, ಕಾಮಕ್ರೋಧವೇ ಮೊದಲಾದ ಅರಿಷಡ್ವರ್ಗಗಳನ್ನು ಜಯಿಸಿದವರಿಗೆ ಮಾತ್ರ ಅಲ್ಲಿ ಪ್ರವೇಶವಿರುವುದು. ||೩೯-೪೦-೪೧-೪೨||

ಒಳಭಾಗದ ಬ್ರಹ್ಮನ ಸಭೆಯನ್ನು ಪ್ರವೇಶಿಸಲು ಅರ್ಹರಾದವರು ಮೋಹಕ್ಕೊಳಗಾಗುವುದಿಲ್ಲ. ಅವರಿಗೆ ಪುನಃ ಅಧೋಗತಿಯಿಲ್ಲ. ಅವರು ಕಾಮಕ್ರೋಧಗಳಿಗೆ ಯಾವಾಗಲೂ ಸಿಕ್ಕಿಬೀಳುವುದಿಲ್ಲ. ಕಾಮಕ್ರೋಧಾದಿಗಳಿಂದ ಕೂಡಿದ ಜನರಿಗೆ ಬ್ರಹ್ಮನ ಹೊರಗಡೆಯ ಸಭೆಯಲ್ಲಿ ಮಾತ್ರ ಪ್ರವೇಶವು. ಆದ್ದರಿಂದಲೇ ಬ್ರಹ್ಮನು ಸತ್ಯಲೋಕದಲ್ಲಿ ಎರಡುವಿಧವಾಗಿ ಕಾಣಿಸಿಕೊಳ್ಳುವನು. ಹೀಗೆ ಹೊರಗಡೆಯ ಸಭೆಯಲ್ಲಿ, ಸಿಂಹಾಸನಾರೂಢನಾಗಿದ್ದ, ಲೋಕಕ್ಕೆ ಸ್ವಾಮಿಯಾಗಿದ್ದ, ಬ್ರಹ್ಮನನ್ನು ನೋಡಿ, ಇತರ ದೇವತೆಗಳೊಂದಿಗೆ ಇಂದ್ರನು ದೂರದಲ್ಲಿಯೇ ದಂಡಾಕಾರವಾಗಿ ಪ್ರಣಾಮಮಾಡಿದನು. ||೪೩-೪೪-೪೫||

ಇತರ ದೇವತೆಗಳೂ ಕೈಮುಗಿದು ಬ್ರಹ್ಮನಿಗೆ ದಂಡಾಕಾರವಾಗಿ ನಮಸ್ಕಾರ ಮಾಡಿದರು. ಜಗತ್ತಿಗೆ ಸೃಷ್ಟಿಕರ್ತನಾದ ಬ್ರಹ್ಮನು ಅವರನ್ನು ನೋಡಿ ಕೂಡಲೆ ಅವರುಗಳೊಂದಿಗೆ ಮಾತನಾಡಿದನು. ||೪೬||

ಭೋಃ ಪಾಕಶಾಸನ ಬುಧೈಃ ಮಾ ಭೈರುತ್ತಿಷ್ಠ ತೇ ಹಿತಂ ।
ಸೇತ್ಸ್ಯತಿ ಬ್ರೂಹಿ ಕಿಂ ತೇಽತ್ರ ಪ್ರಾಪ್ತೌ ಕಾರಣಮಾಶು ಮೇ ॥೪೭॥

ಇತಿ ಶ್ರುತ್ವಾ ಚತುರ್ವಕ್ತ್ರ ವಚನಂ ವಿಬುಧೇಶ್ವರಃ ।
ಉತ್ಥಾಯ ಮೂರ್ಧ್ನಿ ವಿನ್ಯಸ್ತ ಕರಕಂಜ ಪುಟಸ್ತದಾ ॥೪೮॥

ಸ್ವ ವೃತ್ತಂ ವಕ್ತುಮಾರೇಭೇ ವಿಬುಧೈಃ ಸಹ ವಜ್ರಭೃತ್ ।
ವಿಧಾತರ್ನಃ ಸ್ವವೃತ್ತೇಷು ಭವಾನೇವ ಪರಾಯಣಂ ॥೪೯॥

ಭವದಾಜ್ಞಾಂ ಮೂರ್ಧ್ನಿ ಧೃತ್ವಾ ತ್ರಿಲೋಕೀ ಶಾಸನೇ ಸ್ಥಿತಃ ।
ಭವತ್ಕೃಪಾಲೇಶತೋಽಪಿ ಮಯಿ ತ್ರಿಭುವನೇಶಿತಾ ॥೫೦॥

ಸುಸ್ಥಿತಾ ಜಗತಾಂ ನಾಥ ದೇವೇಶತ್ವಮಪಿ ಧ್ರುವಂ ।
ಪರಂತು ಲೋಕತ್ರಿತಯ ನಾಥತಾ`ಮಯಿ ತಾದೃಶೀ ॥೫೧॥

ಎಲೈ ಪಾಕ ಎಂಬ ರಾಕ್ಷಸನನ್ನು ನಿಗ್ರಹಿಸಿದ ಇಂದ್ರನೇ, ದೇವತೆಗಳಾಗಲಿ, ನೀನಾಗಲೀ ಭಯಪಡಬೇಡಿರಿ. ಏಳಿ, ನಿನ್ನ ಇಷ್ಟವು ನೆರವೇರುವುದು. ನೀನು ಬಂದಿರುವುದೇಕೆ? ಎಂಬುದನ್ನು ತಿಳಿಸು. ಹೀಗೆ ಬ್ರಹ್ಮನು ಹೇಳಿದ ಮಾತನ್ನು ಕೇಳಿ ದೇವತೆಗಳಿಗೆ ಅಧಿಪತಿಯಾದ ಮತ್ತು ವಜ್ರಾಯುಧಧಾರಿಯಾದ ಇಂದ್ರನು ಎದ್ದು ತಲೆಯಮೇಲೆ ಕಮಲದಂತಿರುವ ಕೈಗಳನ್ನು ಜೋಡಿಸಿ ದೇವತೆಗಳೊಡಗೂಡಿ ತನ್ನ ವೃತ್ತಾಂತವನ್ನು ಹೇಳಲು ಉಪಕ್ರಮಿಸಿದನು. ಓ ಪೂಜ್ಯನಾದ ಬ್ರಹ್ಮನೇ, ನಮ್ಮ ಜೀವನದಲ್ಲಿ ನಮಗೆ ಸಂಭವಿಸುವ ಎಲ್ಲಾ ಕಷ್ಟಗಳನ್ನೂ ನಿವಾರಣೆ ಮಾಡುವವನು ನೀನೇ ಆಗಿದ್ದೀಯೆ. ||೪೭-೪೮-೪೯||

ಓ ಪೂಜ್ಯನಾದ ಬ್ರಹ್ಮನೇ, ನಿನ್ನ ಅಪ್ಪಣೆಯನ್ನು ಶಿರಸಾವಹಿಸಿಯೇ ನಾನು ಮೂರು ಲೋಕಗಳನ್ನೂ ಆಳುತ್ತಿದ್ದೇನೆ. ನಿನ್ನ ಕೃಪಾಲೇಶದಿಂದಲೇ ನಾನು ಮೂರು ಲೋಕಗಳಿಗೂ, ಅಧಿಪತಿಯಾಗಿದ್ದೇನೆ. ಓ ಜಗತ್ತಿಗೆ ಅಧಿಪತಿಯಾದ ಬ್ರಹ್ಮನೇ, ನಿನ್ನ ಕೃಪಾಲೇಶದಿಂದಲೇ ನಾನು ದೇವತೆಗಳಿಗೂ ಒಡೆಯನಾಗಿದ್ದೇನೆ. ನಮ್ಮೆಲ್ಲರನ್ನೂ ಸೃಷ್ಟಿಸಿದ ನಿಮ್ಮನ್ನು ಮನಸ್ಸಿನಲ್ಲಿ ಚಿಂತಿಸುತ್ತಲೇ ನಾನು ಮೂರು ಲೋಕಗಳಿಗೂ ಅಧಿಪತಿಯೆನಿಸಿಕೊಂಡಿದ್ದೇನೆಯೇ ವಿನಾ ಬೇರೇ ವಿಧವಾಗಿಲ್ಲ. ಕೇವಲ ತುಚ್ಛವಾದ ಹುಲ್ಲಿನಲ್ಲಿ ಗುಡಗಿನ ಶಬ್ದವು ಕೇಳಿಸಿದರೆ ಅದು ಆ ಮೋಡ

ಯಾದೃಶೀ ಚಿತ್ತವಿನ್ಯಸ್ತಾ ವಿಧಾತುರ್ನೈ ವಿಧಾತೃತಾ ।
ಬಲ್ಪಜೋಽಪಿ ತೃಣೇ ಯದ್ವನ್ಮೇಘನಾದಾಽದಿ ಶಬ್ದನಂ ॥೫೨॥

ನಾಽಹಂ ಮರ್ತ್ಯೈರ್ಮಾನಿತೋಽದ್ಯ ನ ಮಾಂ ಮರ್ತ್ಯಾ ಭಜಂತಿ ಚ ।
ನೇಷ್ಟೋ ನ ಪೂಜಿತೋ ನೈವ ಪ್ರಣತೋ ನಾಽಪಿ ಸಂಸ್ತುತಃ ॥೫೩॥

ಮರ್ತ್ಯಾಸ್ತು ಪಶವಃ ಪ್ರೋಕ್ತಾ ಧಾತರ್ನೋ ಹ್ಯಮೃತಾಂಧಸಾಂ ।
ತದದ್ಯಾಽಪಿ ನ ಸಂಪನ್ನಂ ಭವತೋಕ್ತಂ ಹಿ ಯತ್ಪುರಾ ॥೫೪॥

ಮಾಂ ಮಾನಯಂತಿ ವಿಬುಧಾ ಭವದ್ವಚನ ಗೌರವಾತ್ ।
ಶ್ರದ್ಧಾಮಾತ್ರ ನಿಮಿತ್ತೇನ ಮಮೇಂದ್ರತ್ವಮಿತಿ ಸ್ಥಿತಂ ॥೫೫॥

ಏವಂ ಪ್ರೋಕ್ತಂ ಮಮಾಽಶೇಷ ವೃತ್ತಮಗ್ರೇ ಯಥೋಚಿತಂ ।
ಆಜ್ಞಾಪಯತು ನೋ ದೇವೋ ಯತ್ಕರ್ತವ್ಯಮನಂತರಂ ॥೫೬॥

ದ್ದಲ್ಲದೇ ಹೇಗೆ ಹುಲ್ಲಿನದಾಗಲಾರದೋ ಹಾಗೆ ನಿನ್ನ ಪ್ರಭಾವದಿಂದಲೇ ನಾನು ಮೂರುಲೋಕಗಳಿಗೂ ಅಧಿಪತಿಯಾಗಿರುವೆನು. ಓ ಪೂಜ್ಯನಾದ ಬ್ರಹ್ಮನೇ, ಈಗ ಮನುಷ್ಯರು ನನ್ನನ್ನು ಗೌರವಿಸುತ್ತಲೂ, ಮತ್ತು ಸೇವಿಸುತ್ತಲೂ ಇಲ್ಲ. ಅವರು ನನ್ನನ್ನು ಪ್ರೀತಿಸುವುದೂ ಇಲ್ಲ. ಅವರು ನನ್ನನ್ನು ಪೂಜಿಸುವುದೂ ಇಲ್ಲ. ಅವರು ನನ್ನನ್ನು ಪೂಜಿಸುವುದು, ನಮಸ್ಕರಿಸುವುದು, ಸ್ತೋತ್ರಮಾಡುವುದು, ಇವೆಲ್ಲ ವನ್ನೂ ಬಿಟ್ಟಿರುತ್ತಾರೆ. ||೫೦-೫೧-೫೨-೫೩||

ಓ ಬ್ರಹ್ಮನೇ, ಅಮೃತವನ್ನು ಭುಜಿಸುವ ದೇವತೆಗಳಾದ ನಮಗೆ ಮನುಷ್ಯರು ಪಶುಗಳು, ಎಂದರೆ ವಿಧೇಯರಾದ ಸೇವಕರಾಗುವರು. ಎಂಬುದಾಗಿ ನೀನು ಹೇಳಿ ದ್ದೀಯಷ್ಟೆ? ಹಿಂದೆ ನೀನು ಹೇಳಿದ ಆ ಮಾತು ಇಲ್ಲಿಯ ವರೆಗೂ ಸಾರ್ಥಕ ವಾಗಿಲ್ಲ. ನಿನ್ನ ಮಾತಿನಲ್ಲಿ ಗೌರವವಿರುವುದರಿಂದಲೇ ದೇವತೆಗಳು ನನ್ನನ್ನು ಗೌರವಿಸುತ್ತಾರೆ. ನನ್ನ ಇಂದ್ರಪದವಿಯು ಕೇವಲ ಒಂದು ವಿಧವಾದ ನಂಬಿಕೆ ಯಾಗಿದೆಯೇ ವಿನಾ ಸಫಲವಾದ ಅಧಿಕಾರದಿಂದ ಕೂಡಿ ವಾಸ್ತವವಾಗಿಲ್ಲ. ಹೀಗೆ ನನ್ನ ವೃತ್ತಾಂತಗಳೆಲ್ಲವನ್ನೂ ನಿನ್ನ ಮುಂದೆ ಬಿನ್ನೈಸಿದ್ದೇನೆ. ಸ್ವಾಮಿಯಾದ ನೀನು ದಯವಿಟ್ಟು ಈಗ ನಮ್ಮ ಕರ್ತವ್ಯವೇನೆಂಬುದನ್ನು ಅಪ್ಪಣೆಮಾಡಬೇಕು. ||೫೪-೫೫-೫೬||

ಇತಿ ಶ್ರುತ್ವಾ ಸಹಸ್ರಾಕ್ಷ ವಚನಂ ವಿಶ್ವಸೃಟ್ ತದಾ ।
ವಿಮೃಶ್ಯ ಕಿಂಚಿದ್ಗಂಭೀರ ವಚಸಾ ಪ್ರತ್ಯವೋಚತ ॥೫೭॥

ಮಘವನ್ನತ್ರ ಮೇ ವಾಕ್ಯಂ ಶೃಣು ಯತ್ತೇ ಬ್ರವೀಮ್ಯಹಂ ।
ಯತ್ತ್ವಾಂ ಮರ್ತ್ಯಾ ನ ಮನ್ಯಂತೇ ಇತ್ಯುಕ್ತಂ ತತ್ರ ಕಾರಣಂ ॥೫೮॥

ನಿಬೋಧ ವದತೋ ಮತ್ತಃ ಸ್ವಹಿತಾಯೇತರಾಶ್ರಯಾಃ ।
ಸ್ವಾಽರ್ಥರಿಕ್ತಸ್ಯ ಚಾಽಹಂ ವಾ ಹರಿರ್ವಾ ಶಂಕರೋಽಪಿ ವಾ ॥೫೯॥

ಕಿಯಾನ್ ತಸ್ಯ ಜಗತ್ಸರ್ವಂ ಸೇಶ್ವರಂ ತೃಣತೋ ಲಘು ।
ಆಶ್ರಯಂತಿ ಪರಂ ಸರ್ವೇ ಸ್ವಾಽರ್ಥಂ ಕಿಂಚಿತ್ಸಮಾಶ್ರಿತಾಃ ॥೬೦॥

ಮರ್ತ್ಯಾನಾಂ ಭವತಾಂ ಕಿಂಚಿನ್ನ ಪ್ರಯೋಜನಮಸ್ತಿ ವೈ ।
ತೇನಾಽಪ್ರಯೋಜಕಾ ಯೂಯಂ ಕಥಂ ಮಾನ್ಯತ್ವಮರ್ಹಥ ॥೬೧॥

ಬ್ರಹ್ಮನು ಇಂದ್ರನ ಮಾತನ್ನು ಕೇಳಿ ಆಗ ಸ್ವಲ್ಪ ಹೊತ್ತು ವಿಮರ್ಶಿಸಿ ಗಂಭೀರವಾದ ಧ್ವನಿಯಿಂದ ಇಂದ್ರನನ್ನು ಕುರಿತು ಹೀಗೆ ಹೇಳಿದನು.—ಎಲೈ ಇಂದ್ರನೇ, ಈ ವಿಷಯದಲ್ಲಿ ನಾನು ಹೇಳುವ ಮಾತನ್ನು ಕೇಳು. ಮನುಷ್ಯರು ನಿನ್ನನ್ನು ಏಕೆ ಗೌರವಿಸುತ್ತಿಲ್ಲ? ಎಂಬುದಕ್ಕೆ ಕಾರಣವನ್ನು ಹೇಳುವೆನು. ಲೋಕದಲ್ಲಿ ಎಲ್ಲರೂ ತಮಗೇನಾದರೊಂದು ಪ್ರಯೋಜನವಾಗಲೀ, ಎಂಬ ಉದ್ದೇಶದಿಂದಲೇ ಇತರರನ್ನು ಆಶ್ರಯಿಸುತ್ತಾರೆ. ಸ್ವಾರ್ಥವೇ ಇಲ್ಲದ ಮನುಷ್ಯನಿಗೆ ನಾನಾಗಲೀ, ವಿಷ್ಣುವಾಗಲೀ, ಶಿವನಾಗಲೀ ಏಕೆ ಬೇಕು? ಈಶ್ವರನಿಂದ ಕೂಡಿದ ಇಷ್ಟು ದೊಡ್ಡ ಜಗತ್ತನ್ನೂ ಅಂಥಾ ಮನುಷ್ಯನು ಹುಲ್ಲಿಗಿಂತಲೂ ಕಡೆಯಾಗಿ ಕಾಣಬಲ್ಲನು. ಎಲ್ಲರೂ ಸ್ವಲ್ಪ ಸ್ವಾರ್ಥದೃಷ್ಟಿಯಿಂದಲೇ ಇತರರನ್ನು ಆಶ್ರಯಿಸಿದ್ದಾರೆ. ಆದರೆ ನಿಮ್ಮಿಂದ ಮಾನವರಿಗೆ ಏನು ಪ್ರಯೋಜನವೂ ಇಲ್ಲವಷ್ಟೆ? ನಿಮ್ಮಿಂದ ಯಾವ ವಿಧವಾದ ಪ್ರಯೋಜನವೂ ಇಲ್ಲದಕಾರಣದಿಂದ ನೀವು ಅವರ ಗೌರವಕ್ಕೆ ಅರ್ಹರಾಗದೇ ಇರುವುದರಿಂದ ಅವರು ನಿಮ್ಮನ್ನು ಗೌರವಿಸುತ್ತಿಲ್ಲ. ||೫೭-೫೮-೫೯-೬೦-೬೧||

ತದ್ಗಮ್ಯತಾಂ ಮದವರಾಂ ಲಕ್ಷ್ಮೀಂ ಪದ್ಮಾಸನಾಂ ಶುಭಾಂ ।
ಪ್ರಸಾದ್ಯ ವಿಷ್ಣು ರಮಣೀಂ ಶುಭಂ ಪ್ರಾಪ್ಸ್ಯಥ ಮಾ ಚಿರಂ ॥೬೨॥

ಇತಿ ಶ್ರುತ್ವಾ ಸ್ವಾತ್ಮಯೋನಿ ವಚನಂ ತದ್ದಿವಸ್ಪತಿಃ ।
ಪ್ರಣಮ್ಯ ಹಿಮವತ್ಪಾರ್ಶ್ವಂ ಯಯೌ ಲಕ್ಷ್ಮೀ ಕೃಪಾಽಪ್ತಯೇ ॥೬೩॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ
ಏಕಾದಶೋಽಧ್ಯಾಯಃ

ಎಲೈ ಇಂದ್ರಾದಿ ದೇವತೆಗಳೇ, ಆದ್ದರಿಂದ ನನ್ನ ತಂಗಿಯೂ, ಮಂಗಳಕರಳೂ, ಕಮಲದಲ್ಲಿ ಮಂಡಿಸಿರುವವಳೂ, ವಿಷ್ಣುವಿನ ಪತ್ನಿಯೂ ಆದ ಲಕ್ಷ್ಮಿಯನ್ನು ಉಪಾಸನೆಮಾಡಿ ಜಾಗ್ರತೆಯಾಗಿ ನಿಮ್ಮ ಇಷ್ಟಾರ್ಥಸಿದ್ಧಿಯನ್ನು ಪಡೆಯಿರಿ. ಹೀಗೆ ಬ್ರಹ್ಮನು ಹೇಳಿದ ಮಾತನ್ನು ಕೇಳಿ ಸ್ವರ್ಗಕ್ಕೆ ಅಧಿಪತಿಯಾದ ಇಂದ್ರನು ಅವನಿಗೆ ನಮಸ್ಕರಿಸಿ ಲಕ್ಷ್ಮಿಯ ಕೃಪೆಯನ್ನು ಹೊಂದುವುದಕ್ಕೋಸ್ಕರ ಹಿಮವತ್ಪರ್ವತದ ಪಾರ್ಶ್ವವನ್ನು ಸೇರಿದನು. ||೬೨-೬೩||

ಇಲ್ಲಿಗೆ ತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ
ದತ್ತಾತ್ರೇಯಪರಶುರಾಮರ ಸಂವಾದದಲ್ಲಿ ರಮೋಪಾಖ್ಯಾನದಲ್ಲಿ
ಹನ್ನೊಂದನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ದ್ವಾದಶೋಽಧ್ಯಾಯಃ ||

ಹನ್ನೆರಡನೆಯ ಅಧ್ಯಾಯವು

ಅಥ ತೇ ಪುರುಹೂತಾದ್ಯಾಸ್ತುಹಿನಾಽದ್ರಿತಟೇ ಸ್ಥಿತಾಃ ।
ಸ್ವರ್ಧುನೀ ಸವಿಧೇ ಪದ್ಮಾಂ ತುಷ್ಟುವುರ್ಹರಿವಲ್ಲಭಾಂ ॥೧॥

ನಮೋ ಲಕ್ಷ್ಮ್ಯೈ ಮಹಾದೇವ್ಯೈ ಪದ್ಮಾಯೈ ಸತತಂ ನಮಃ ।
ನಮೋ ವಿಷ್ಣು ವಿಲಾಸಿನ್ಯೈ ಪದ್ಮಸ್ಥಾಯೈ ನಮೋ ನಮಃ ॥೨॥

ತ್ವಂಸಾಕ್ಷಾದ್ಧರಿವಕ್ಷಃಸ್ಥಾ ಸುರಜ್ಯೇಷ್ಠಾ ವರೋದ್ಭವಾ ।
ಪದ್ಮಾಕ್ಷೀ ಪದ್ಮಸಂಸ್ಥಾನಾ ಪದ್ಮಹಸ್ತಾ ಪರಾಮಯೀ ॥೩॥

ಪರಮಾಽನಂದದಾಽಪಾಙ್ಗಹೃತಸಂಶ್ರಿತದುರ್ಗತಿಃ ।
ಅರುಣಾಽನಂದಿನೀ ಲಕ್ಷ್ಮೀರ್ಮಹಾಲಕ್ಷ್ಮೀಸ್ತ್ರಿಶಕ್ತಿಕಾ ॥೪॥

ಅನಂತರ, ಇಂದ್ರನೇ ಮೊದಲಾದವರು ಹಿಮವತ್ಪರ್ವತದ ತಪ್ಪಲು ಪ್ರದೇಶದಲ್ಲಿ ಗಂಗಾನದಿಯ ಸಮೀಪದಲ್ಲಿ ತಪಸ್ಸನ್ನು ಮಾಡುತ್ತಾ ವಿಷ್ಣುವಿನ ಪತ್ನಿಯಾದ ಲಕ್ಷ್ಮಿಯನ್ನು ಸ್ತೋತ್ರಮಾಡಿದರು. "ಮಹಾದೇವೀ ಮತ್ತು ಪದ್ಮಾಸ್ವರೂಪಳಾದ ಲಕ್ಷ್ಮೀದೇವಿಗೆ ಯಾವಾಗಲೂ ನಮ್ಮ ನಮಸ್ಕಾರಗಳು. ವಿಷ್ಣುವಿಗೆ ವಿಲಾಸವನ್ನುಂಟು ಮಾಡುವ, ಕಮಲದಲ್ಲಿರುವ ಲಕ್ಷ್ಮೀದೇವಿಗೆ ಅನೇಕ ನಮಸ್ಕಾರಗಳು. ಓ ದೇವಿಯೇ, ನೀನು ಸಾಕ್ಷಾತ್ ವಿಷ್ಣುವಿನ ವಕ್ಷಃಸ್ಥಳದಲ್ಲಿ ವಾಸಮಾಡುವವಳೂ ದೇವತೆಗಳೆಲ್ಲರಿಗೂ, ಹಿರಿಯಳೂ, ಶ್ರೇಷ್ಠವಾದ ಉತ್ಪತ್ತಿಯುಳ್ಳವಳೂ, ಕಮಲದಂತೆ ಕಣ್ಣುಗಳುಳ್ಳವಳೂ, ಕಮಲದಲ್ಲಿ ವಾಸಮಾಡುವವಳೂ, ಕಮಲಗಳನ್ನೇ ಕೈಗಳಲ್ಲಿ ಹಿಡಿದಿರುವವಳೂ, ಅತ್ಯಂತ ಶ್ರೇಷ್ಠಸ್ವರೂಪಳೂ ಆಗಿದ್ದೀಯೆ" ||೧-೨-೩||

ನೀನು ಪರಮಾನಂದದಾಯಕಳೂ, ನಿನ್ನ ಕಟಾಕ್ಷಮಾತ್ರದಿಂದಲೇ ಆಶ್ರಿತರಾದ ಜನರ ಕಷ್ಟವನ್ನು ನಿವಾರಣೆ ಮಾಡುವವಳೂ, ಅರುಣನಿಗೆ ಆನಂದವನ್ನುಂಟು

ಸಾಮ್ರಾಜ್ಯಾಸರ್ವಸುಖದಾ ನಿಧಿನಾಥಾ ನಿಧಿಪ್ರದಾ ।
ನಿಧೀಶಪೂಜ್ಯಾ ನಿಗಮಸ್ತುತಾ ನಿತ್ಯಮಹೋನ್ನತಿಃ ॥೫॥

ಸಂಪತ್ತಿಸಂಮತಾ ಸರ್ವಸುಭಗಾ ಸಂಸ್ತುತೇಶ್ವರೀ ।
ರಮಾ ರಕ್ಷಾಕರೀ ರಮ್ಯಾ ರಮಣೀ ಮಂಡಲೋತ್ತಮಾ ॥೬॥

ಏವಮಿಂದ್ರಮುಖಾ ದೇವಾ ನಾಮಾಷ್ಟಾ ವಿಂಶತಿಂ ಪಠನ್ ।
ಉಪತಸ್ಥುರ್ಹರೇಃ ಕಾಂತಾಂ ಬ್ರಹ್ಮಶಕ್ತಿಂ ಸಮಾಹಿತಾಃ ॥೭॥

ಏವಂ ತತ್ಪರಚಿತ್ತಾಸ್ತೇ ಯದಾ ತಾಂ ಶರಣಂ ಗತಾಃ ।
ತದಾ ಲಕ್ಷ್ಮೀಃ ಪ್ರಾದುರಾಸೀದ್ದೇವಾನಾಂ ಪ್ರೀತಯೇ ದ್ರುತಂ ॥೮॥

ಅನಂತಕೋಟಿತಡಿತಾಂ ಪುಂಜೀಭೂತ ಸಮಪ್ರಭಾ ।
ದಲದ್ರಕ್ತೋತ್ಪಲಾಭಾಙ್ಗೀ ತಪ್ತಹೇಮಾಂಬರಾನ್ವಿತಾ ॥೯॥

ಮಾಡಿದವಳೂ, ಮಹಾಲಕ್ಷ್ಮಿಯೂ ಕಾಂತಿಸಂಪದ್ರೂಪಳೂ, ಮೂರು ವಿಧವಾದ ಶಕ್ತಿಸ್ವರೂಪಳೂ, ಸುಖಸಾಮ್ರಾಜ್ಯಲಕ್ಷ್ಮೀಸ್ವರೂಪಳೂ ಆಗಿರುತ್ತೀಯೆ. ಎಲ್ಲರಿಗೂ ಸೌಖ್ಯವನ್ನುಂಟುಮಾಡುವವಳೂ, ಐಶ್ವರ್ಯದ ನಿಧಿಗಳಿಗೆ ಒಡೆಯಳೂ, ನಿಧಿಯನ್ನು ಕೊಡುವವಳೂ, ನಿಧಿಗಳೆಲ್ಲಕ್ಕೂ ಒಡೆಯನಾದವನಿಂದ ಪೂಜಿಸಲ್ಪಡುವವಳೂ, ವೇದಗಳಿಂದ ಸ್ತುತಿಸಲ್ಪಡತಕ್ಕವಳೂ, ಯಾವಾಗಲೂ ಅತ್ಯಂತ ಉನ್ನತವಾದ ಪದವಿಯನ್ನು ಅನುಭವಿಸುವವಳೂ, ರಮೆಯೂ, ರಕ್ಷಕಳೂ, ಸುಂದರಿಯರಾದ ಎಲ್ಲರಿಗಿಂತಲೂ ಸುಂದರಿಯೂ, ಎಲ್ಲರಿಂದಲೂ ಸ್ತುತಿಸಲ್ಪಡತಕ್ಕವಳೂ, ಜಗತ್ತಿಗೆ ಅಧಿದೇವತೆಯೂ ಆಗಿದ್ದೀಯೆ. ॥೪-೫-೬॥

ಹೀಗೆ, ಇಂದ್ರಾದಿದೇವತೆಗಳು ಲಕ್ಷ್ಮೀದೇವಿಯ ಇಪ್ಪತ್ತೆಂಟು ನಾಮಗಳನ್ನು ಹೇಳುತ್ತಾ ಲಕ್ಷ್ಮಿಯ ಧ್ಯಾನದಲ್ಲೇ ಆಸಕ್ತಚಿತ್ತರಾಗಿ ಆಕೆಗೆ ಶರಣು ಹೋಗಲಾಗಿ, ದೇವತೆಗಳ ಇಷ್ಟಾರ್ಥಗಳನ್ನು ನೀಡುವುದಕ್ಕೋಸ್ಕರ ಶೀಘ್ರದಲ್ಲೇ ಅವರಿಗೆ ಕಾಣಿಸಿಕೊಂಡಳು. ಆಕೆಯು ಅನಂತಕೋಟಿ ಮಿಂಚುಗಳು ಸೇರಿ ಬಂದಿವೆಯೋ ಎನ್ನುವಷ್ಟು ಕಾಂತಿಯನ್ನು ಹೊರಚಿಮ್ಮುತ್ತಿದ್ದಳು. ಆಕೆಯು ಅರಳಿದ ಕೆಂಪುನೈದಿಲೆಯಂತೆ ಕಾಂತಿಯುಳ್ಳ ಅವಯವಗಳುಳ್ಳವಳಾಗಿದ್ದಳು. ಅಲ್ಲದೆ ಪುಟಕ್ಕೆ ಹಾಕಿದ ಚಿನ್ನದಂತಿರುವ ಪೀತಾಂಬರವನ್ನು ಧರಿಸಿದ್ದಳು. ಆಕೆಯು ತನ್ನ ಕಮಲ

ಕರಪದ್ಮಲಸಚ್ಫೂತದಲಪದ್ಮಚತುಷ್ಟಯಾ ।
ಹೇಮಕುಂಭಪ್ರಭಾಽಽಕ್ಷೇಪ(ಪಿ) ತುಙ್ಗವಕ್ಷೋಜಶೋಭಿತಾ ॥೧೦॥

ಪಕ್ವವಿದ್ರುಮನ್ಯಕ್ಕಾರಿ ಮೃದುದಂತಚ್ಛದಾಽನ್ವಿತಾ ।
ಮುಖಾಽಮೋದಸಮಾಽಹೂತಭೃಂಗಝೋಂಕಾರಮಧ್ಯಗಾ ॥೧೧॥

ಇಂದೀವರ ಸುಸೌಭಾಗ್ಯವದಾಸ್ಯಾಽಕರ್ಣಲೋಚನಾ ।
ಕಸ್ತೂರೀ ತಿಲಕಾಽಖ್ಯಾತ ಮುಖರಾಕೇಂದುಲಾಞ್ಛನಾ ॥೧೨॥

ಅನರ್ಘ್ಯರತ್ನಪ್ರತ್ಯುಪ್ತ ಭೂಷಣೌಘ ವಿಭೂಷಿತಾ ।
ಏವಂ ವಿಧಾಂ ರಮಾಂ ದೃಷ್ಟ್ವಾ ದಂಡವತ್ಪ್ರಣತಾಃ ಸುರಾಃ ॥೧೩॥

ಆನಂದಾಽಶ್ರುಕಲೋಪೇತಾಃ ಸ್ತುವಂತೋ ಗದ್ಗದಸ್ವರೈಃ ।
ತಾನ್ ವಿಲೋಕ್ಯ ತದಾ ಲಕ್ಷ್ಮೀರುವಾಚ ಸ್ಮಿತಪೂರ್ವಕಂ ॥೧೪॥

ದಂತಿರುವ ಕೈಗಳಲ್ಲಿ ಪ್ರಕಾಶಮಾನವಾದ ಅರಳಿದ ನಾಲ್ಕು ಕಮಲಗಳನ್ನು ಹಿಡಿದುಕೊಂಡಿದ್ದಳು. ಈಕೆಯು ಚಿನ್ನದ ಗಡಿಗೆಗಳ ಕಾಂತಿ ಮತ್ತು ಆಕಾರಗಳನ್ನು ತಿರಸ್ಕರಿಸುವ ಉನ್ನತವಾದಸ್ತನಗಳಿಂದಲೂ ಪ್ರಕಾಶಿಸುತ್ತಿದ್ದಳು. ||೭-೮-೯-೧೦||

ಅಲ್ಲದೆ, ಈಕೆಯು ಪಕ್ವವಾದ ಹವಳಗಳನ್ನು ಹೋಲುವ ಮೃದುಗಳಾದ ತುಟಿಗಳನ್ನು ಹೊಂದಿದ್ದಳು. ಈಕೆಯ ಬಾಯಿನ ಸುವಾಸನೆಯಿಂದ ಆಕರ್ಷಿಸಲ್ಪಟ್ಟ ದುಂಬಿಗಳ ಝುಂಕಾರಗಳ ಮಧ್ಯೆ ಶೋಭಿಸುತ್ತಿದ್ದಳು. ಈಕೆಯು ಕಮಲದ ಸೌಂದರ್ಯವುಳ್ಳ ಮುಖವುಳ್ಳವಳಾಗಿಯೂ, ಕಿವಿಯವರೆವಿಗೂ ವ್ಯಾಪಿಸಿರುವ ವಿಶಾಲಗಳಾದ ಕಣ್ಣುಗಳುಳ್ಳವಳಾಗಿಯೂ ಕಸ್ತೂರೀ ತಿಲಕವನ್ನು ಹೊಂದಿ ಕಳಂಕದಿಂದ ಶೋಭಿಸುವ ಚಂದ್ರನಂತಿರುವ ಮುಖವುಳ್ಳವಳೂ, ಅಮೂಲ್ಯವಾದ ರತ್ನಗಳಿಂದ ಮಾಡಿದ ಆಭರಣಗಳ ಸಮೂಹದಿಂದ ಪ್ರಕಾಶಿಸುವವಳೂ ಆಗಿದ್ದಳು. ಇಂಥಾ ಮನೋಹರ ಸ್ವರೂಪವುಳ್ಳ ಲಕ್ಷ್ಮೀದೇವಿಯ ದರ್ಶನವನ್ನು ಪಡೆದು ದೇವತೆಗಳೆಲ್ಲರೂ ಆಕೆಗೆ ದಂಡಾಕಾರವಾಗಿ ನಮಸ್ಕರಿಸಿದರು. ||೧೧-೧೨-೧೩||

ಲಕ್ಷ್ಮೀದೇವಿಯ ಸಂದರ್ಶನವನ್ನು ಪಡೆದು, ದೇವತೆಗಳೆಲ್ಲರೂ ಆನಂದಬಾಷ್ಪಗಳಿಂದಕೂಡಿ, ತೊದಲ್ನುಡಿಗಳಿಂದ ದೇವಿಯನ್ನು ಸ್ತೋತ್ರ ಮಾಡುತ್ತಿದ್ದರು. ಲಕ್ಷ್ಮಿಯು, ಅವರನ್ನು ನೋಡಿ ಮುಗುಳುನಗೆಯಿಂದ ಅಮೃತದ ಪ್ರವಾಹವನ್ನು

ಮಧುನಿರ್ಝರನಿಷ್ಪ(ಷ್ಯ)ಂದ ಕಂದಸುಂದರಭಾಷಿಣೀ ।
ಭೋ ಭೋ ಶಕ್ರಸಹಸ್ರಾಕ್ಷ ಭೋ ದೇವಾ ಅಸುರದ್ವಿಷಃ ॥೧೫॥

ಪ್ರಸನ್ನಾಽಸ್ಮಿ ವರಂ ಯದ್ವೋ ವಾಂಛಿತಂ ಮತ್ಸಕಾಶತಃ ।
ಪ್ರತೀಚ್ಛಧ್ವಂ ಸ್ತುತಾ ಸಾಽಹಂ ಭವದ್ಭಿರ್ಗುಪ್ತನಾಮಭಿಃ ॥೧೬॥

ತ ಏವಂ ವಿಧಮಾಕರ್ಣ್ಯ ವಚನಂ ನಿರ್ಜರಾಸ್ತದಾ ।
ಪ್ರೋಚುರ್ಬಿಡೌಜಾ(ಜಃ)ಪ್ರಮುಖಾಃ ಬದ್ಧಾಂಜಲಿ ಪುಟಾಃ ಪರಂ ॥೧೭॥

ಮಾತಸ್ತ್ವಯಿ ಪ್ರಸನ್ನಾಯಾಂ ದುಷ್ಪ್ರಾಪಂ ಕಿಮಿಹೋಚ್ಯತೇ ।
ಪ್ರಾಪ್ತಕಲ್ಪತರೋಃ ಕಿಂ ವಾ ವಾಂಛಿತಂ ಪರಿಶಿಷ್ಯತೇ ॥೧೮॥

ಅಂಬಾಽಸ್ಮಾಕಂ ಯಥಾ ಮರ್ತ್ಯಾಃ ಸೇವಕಾಃ ಸಂಭವಂತಿ ವೈ ।
ತಥಾ ಕುರು ಶುನಾಸೀರಃ ಸ್ಯಾದ್ಯಥಾ ತ್ರಿಜಗತ್ಪತಿಃ ॥೧೯॥

ಸುರಿಸುವುವೋ ಎಂಬಂತೆ ಬಹಳ ಸುಂದರವಾದ ಮಾತುಗಳಿಂದ ಅವರನ್ನು ಕುರಿತು ಹೀಗೆ ಹೇಳಿದಳು:—"ಎಲೈ ಸಹಸ್ರಾಕ್ಷನಾದ ಇಂದ್ರನೇ, ಮತ್ತು ರಾಕ್ಷಸರಿಗೆ ಶತ್ರುಗಳಾದ ದೇವತೆಗಳೇ, ನಿಮ್ಮಿಂದ ಮಂತ್ರಬೀಜಾಕ್ಷರಗಳಂತೆ ಗುಪ್ತನಾಮಗಳಿಂದ ಸ್ತೋತ್ರಮಾಡಲ್ಪಟ್ಟ ನಾನು ನಿಮ್ಮ ಭಕ್ತಿಗೆ ಮೆಚ್ಚಿದ್ದೇನೆ. ನನ್ನಿಂದ ನೀವು ಅಪೇಕ್ಷಿಸಬಹುದಾದ ವರವನ್ನು ಪ್ರಾರ್ಥಿಸಿಕೊಳ್ಳಿ. ॥೧೪-೧೫-೧೬॥

ಲಕ್ಷ್ಮೀದೇವಿಯು ಹೇಳಿದ ಮಾತನ್ನು ಕೇಳಿ, ಆಗ ಇಂದ್ರನೇ ಮೊದಲಾದ ದೇವತೆಗಳು ಅತ್ಯಂತ ವಿನಯದಿಂದ ಕೈಜೋಡಿಸಿಕೊಂಡು, ದೇವಿಯನ್ನು ಕುರಿತು, "ಓ, ತಾಯಿಯೇ, ನೀನು ಮೆಚ್ಚಿದರೆ ನಮಗೆ ಸಿಕ್ಕದಿರುವುದಾವುದು ? ಕಲ್ಪವೃಕ್ಷವನ್ನೇ ಪಡೆದವರಿಗೆ ಇನ್ನಾವ ಅಭಿಲಾಷೆಯು ಉಳಿಯುವುದು ? ಹೇ ತಾಯಿಯೇ, ನಮಗೆ ಮನುಷ್ಯರು ಸೇವಕರಾಗಿರುವಂತೆಯೂ, ಇಂದ್ರನು ಮೂರು ಲೋಕಕ್ಕೂ ಅಧಿಪತಿಯಾಗುವಂತೆಯೂ ಅನುಗ್ರಹಿಸಬೇಕು" ಎಂದು ಬಿನ್ನೈಸಿದರು. ॥೧೭-೧೮-೧೯॥

ಸದಾ ವಶಂವದಾಃ ಸರ್ವೇ ಮಾನವಾಃ ಸಂತು ನಃ ಶಿವೇ ।
ಯಜಂತ್ವಸ್ಮಾನ್ಸಮುದ್ದಿಶ್ಯ ವಿತರೈವಂ ವರಂ ಶಿವೇ ॥೨೦॥

ಇತಿ ಬರ್ಹಿರ್ಮುಖೋಕ್ತಾ ಸಾ ಪ್ರಾಹ ಮಂಜುಲಯಾ ಗಿರಾ ।
ದೇವಾಃ ಶೃಣುಧ್ವಂ ಮದ್ವಾಕ್ಯಮಹಂ ಸಂಪದಧೀಶ್ವರೀ ॥೨೧॥

ಅದ್ಯ ಪ್ರಭೃತಿ ಯೇ ಮರ್ತ್ಯಾಃ ಸುತ್ರಾಮಪ್ರಮುಖಾನ್ ಸುರಾನ್ ।
ಯಜಂತಿ ವಿಧಿವತ್ತೇಷಾಂ ಸಂಪದಃ ಸ್ಯುರ್ಹಿ ವಾಂಛಿತಾಃ ॥೨೨॥

ಉದಾಸೀನಾ ಯೇ ಸುರೇಷು ತೇಷಾಂ ಸಂಪತ್ತಿರಾಶಯಃ ।
ಕ್ಷಯಂ ಗಚ್ಛಂತು ತರಸಾ ಗ್ರೀಷ್ಮೇ ಪಲ್ವಲತೋಯವತ್ ॥೨೩॥

ಭವದುಕ್ತೈರ್ನಾಮಭಿರ್ಯೇ ಮಾಂ ಸ್ತುವಂತಿ ಸದಾ ನರಾಃ ।
ತೇಷಾಂ ಸದಾಽಹಂ ಸಂತುಷ್ಟಾ ನಿವಸಾಮಿ ಸಮೀಪತಃ ॥೨೪॥

ಯ ಏತೈರ್ನಾಮಭಿರ್ದೇವಾ ಭೃಗುವಾರೇ ನಿಶೋದ್ಭವೇ ।
ಪೂಜಯಿತ್ವಾ ಮತ್ಸಮೀಪೇ ಪಠಂತ್ಯಷ್ಟೋತ್ತರ ಶತಂ ॥೨೫॥

"ಓ ಮಂಗಳಕರಳಾದ ದೇವಿಯೇ, ಎಲ್ಲಾ ಮನುಷ್ಯರೂ ಯಾವಾಗಲೂ ನಮಗೆ ಅಧೀನರಾಗಿರಲಿ, ಅವರು ನಮ್ಮನ್ನು ಉದ್ದೇಶಿಸಿ ಯಾಗಗಳನ್ನು ಮಾಡಲಿ, ಇಂಥಾ ವರವನ್ನು ದಯವಿಟ್ಟು ದಯಪಾಲಿಸು." ಹೀಗೆ ದೇವತೆಗಳು ಪ್ರಾರ್ಥಿಸಲಾಗಿ ಆಕೆಯು ಮನೋಹರವಾದ ಮಾತಿನಿಂದ ಅವರನ್ನು ಕುರಿತು "ಎಲೈ ದೇವತೆಗಳೇ, ನನ್ನ ಮಾತನ್ನು ಕೇಳಿರಿ. ನಾನು ಐಶ್ವರ್ಯಕ್ಕೆ ಅಧಿದೇವತೆಯು. ಇವತ್ತಿನಿಂದ ಪ್ರಾರಂಭಿಸಿ ಯಾವ ಮನುಷ್ಯರು ಇಂದ್ರನೇ ಮೊದಲಾದ ದೇವತೆಗಳನ್ನುದ್ದೇಶಿಸಿ ಶಾಸ್ತ್ರೋಕ್ತಕ್ರಮದಲ್ಲಿ ಯಾಗ ಮಾಡುವರೋ ಅವರಿಗೆ ಇಷ್ಟವಾದ ಐಶ್ವರ್ಯವೆಲ್ಲವೂ ಲಭಿಸಲಿ. ಯಾವ ಮನುಷ್ಯರು ಇಂದ್ರಾದಿ ದೇವತೆಗಳ ವಿಷಯದಲ್ಲಿ ಉದಾಸೀನ ರಾಗುವರೋ ಅವರ ಐಶ್ವರ್ಯದ ರಾಶಿಗಳೆಲ್ಲವೂ ಬೇಸಿಗೆಯ ಕಾಲದಲ್ಲಿ ಕೊಳದ ನೀರಿನಂತೆ ಕ್ಷಯಿಸಲಿ. ॥೨೦-೨೧-೨೨-೨೩॥

"ಯಾವ ಮನುಷ್ಯರು ನೀವು ಹೇಳಿದ ನಾಮಗಳಿಂದ ನನ್ನನ್ನು ಸ್ತೋತ್ರ ಮಾಡುತ್ತಾರೋ, ಅವರಿಗೆ ನಾನು ಪ್ರಸನ್ನಳಾಗಿ ಯಾವಾಗಲೂ ಅವರ ಸಮೀಪದಲ್ಲೇ ವಾಸಮಾಡುತ್ತೇನೆ. ಎಲೈ ದೇವತೆಗಳೇ, ಯಾವ ಮನುಷ್ಯರು ಶುಕ್ರವಾರದ ದಿನದ

ಸುವಾಸಿನೀಂ ಪೂಜಯಂತಿ ನಾಮ್ನೈಕೈಕೇನ ಮಾನವಾಃ ।
ಏಕೈಕವಾಸರೇ ತ್ವೇವಂ ಚಣಕಾಽಢ್ಯೈರ್ನಿವೇದನಂ ॥೨೬॥

ಅಷ್ಟಾವಿಂಶತಿವಾರೈಸ್ತೇ ಭಜಂತ್ಯಚಲ ಸಂಪದಂ ।
ಪ್ರಸನ್ನಾ ಸರ್ವದೈವಾಽಹಂ ತಥಾ ಯೂಯಂ ಪ್ರಸಾದಕಾಃ ॥೨೭॥

ಗಚ್ಛಂತು ಸ್ವರ್ಗವಸತಿಂ ಫಲಿತಂ ವೋಽಭಿವಾಂಛಿತಂ ।
ಇತ್ಯುಕ್ತ್ವಾ ಸಾ ಪರಾ ದೇವೀ ಜಗಾಮಾಕಾಶತಾಂ ತದಾ ॥೨೮॥

ತತಃ ಶತಕ್ರತು ಮುಖಾಸ್ತಾಂ ದಿಶಂ ಭಕ್ತಿಭಾವತಃ ।
ಪ್ರಣಮ್ಯ ಕೃತಕೃತ್ಯತ್ವಂ ಮತ್ವಾ ಸ್ವಭುವನಂ ಯಯುಃ ॥೨೯॥

ಅಥ ಕಾಲೇ ಬಹುತರೇ ಗತೇ ದೇವಾಸ್ತ್ರಿವಿಷ್ಟಪೇ ।
ಸಮಾಸೀನಾಃ ಸುಧರ್ಮಾಯಾಮಾಂಗಿರಸ ಸಮಾಶ್ರಯಾಃ ॥೩೦॥

ಸಾಯಂಕಾಲದಲ್ಲಿ ನನ್ನನ್ನು ಪೂಜಿಸಿ ನೀವು ಈಗ ಹೇಳಿದ ನನ್ನ ನಾಮಗಳನ್ನು ನೂರೆಂಟು ಸಲ ಪಠಿಸುವರೋ ಅವರಿಗೆ ಮುಂದೆ ಹೇಳಿರುವಂತೆ ಫಲವು ಲಭಿಸುವುದು. ॥೨೪-೨೫॥

ಆ ಮಾನವರು ಹಿಂದೆ ಹೇಳಿದ ಅಷ್ಟೋತ್ತರನಾಮಗಳ ಜೊತೆಗೆ ನನ್ನ ಒಂದೊಂದು ನಾಮದಿಂದಲೂ ಪ್ರತಿದಿನವೂ ಒಬ್ಬೊಬ್ಬ ಮುತ್ತೈದೆಯನ್ನು ಪೂಜಿಸಬೇಕು. ಮತ್ತು ಕಡಲೇಬೇಳೆಯಲ್ಲಿ ಮಾಡಿದ ಪದಾರ್ಥಗಳನ್ನು ನೈವೇದ್ಯಮಾಡಬೇಕು. ಹೀಗೆ ಅವರು ಇಪ್ಪತ್ತೆಂಟು ದಿನಗಳು ಪೂಜೆಯನ್ನು ಮಾಡಿದರೆ ಸ್ಥಿರವಾದ ಐಶ್ವರ್ಯವನ್ನು ಹೊಂದುವರು. ಹೀಗೆ ನಾನು ನಿಮಗೆ ಯಾವಾಗಲೂ ಪ್ರಸನ್ನಳಾಗಿದ್ದೇನೆ. ನೀವೂ ಸಂತೋಷಚಿತ್ತದಿಂದ ನಿಮ್ಮ ನೆಲೆಯಾದ ಸ್ವರ್ಗಕ್ಕೆ ತೆರಳಿರಿ. ನಿಮ್ಮ ಇಷ್ಟಾರ್ಥವು ಸಿದ್ಧಿಸಿದೆ. ಹೀಗೆ ಹೇಳಿ ಲಕ್ಷ್ಮೀದೇವಿಯು ಆಕಾಶಸ್ವರೂಪವನ್ನು ಎಂದರೆ ಅಂತರ್ಧಾನವನ್ನು ಹೊಂದಿದಳು. ॥೨೬-೨೭-೨೮॥

ಅನಂತರ ಇಂದ್ರನೇ ಮೊದಲಾದ ದೇವತೆಗಳು, ಲಕ್ಷ್ಮಿಯು ಅಂತರ್ಧಾನವಾದ ದಿಕ್ಕಿನಕಡೆ, ಭಕ್ತಿಪೂರ್ವಕವಾಗಿ ನಮಸ್ಕರಿಸಿ, ತಾವು ಕೃತಾರ್ಥರಾದೆವೆಂದು ಭಾವಿಸಿ, ತಮ್ಮ ಲೋಕವನ್ನು ಕುರಿತು ತೆರಳಿದರು. ಆಮೇಲೆ ಬಹಳ ಕಾಲಕಳೆಯಲು ಒಂದು ದಿನ ಸ್ವರ್ಗದಲ್ಲಿರುವ ಇಂದ್ರನ "ಸುಧರ್ಮಾ" ಎಂಬ ಸಭೆಯಲ್ಲಿ

ಜೀವೇ ಶೃಣ್ವತಿ ತೇ ಪ್ರಾಹುರಿಂದ್ರಂ ಸಿಂಹಾಸನಸ್ಥಿತಂ ।
ಭೋ ದೇವರಾಜ ನೋ ವಾಕ್ಯಂ ಶ್ರೂಯತಾಂ ಹೇತು ಸಂಯುತಂ ॥೩೧॥

ಪುರಾ ಲಕ್ಷ್ಮೀಃ ಪ್ರಸನ್ನಾ ನೋ ವರಂ ದತ್ತವತೀ ಚ ಯಂ ।
ತತ್ರಾದ್ಯ ಧರಣೀಮಧ್ಯೇ ನ ಫಲಂ ದೃಶ್ಯತೇ ಕ್ವಚಿತ್ ॥೩೨॥

ಕ್ವಚಿಲ್ಲಕ್ಷೇ ಸಹಸ್ರೇ ವಾ ದೃಶ್ಯತೇ ತಾದೃಶೋ ಜನಃ ।
ಏಕೋ ಯಥಾ ವೃತೋಽಸ್ಮಾಭಿರನ್ಯೇ ಶಾಂತಾಽಶಯಾಃ ಸ್ಥಿತಾಃ ॥೩೩॥

ಅದ್ಯಾಪ್ಯಸ್ಮದಭೀಷ್ಟಂ ತು ನ ಸಿದ್ಧಂ ಸುರನಾಯಕ ।
ವಿಚಾರಯಾಽಗ್ರೇ ಯದ್ಯೋಗ್ಯಂ ಶುಭಂ ನಃ ಸ್ಯಾದ್ಯಥಾ ಹರೇ ॥೩೪॥

ಏವಮುಕ್ತಃ ಶತಮುಖಃ ವಿಚಾರ್ಯ ವಚನಂ ತದಾ ।
ಪ್ರಣಿಪತ್ಯ ಗುರುಂ ವಾಚಸ್ಪತಿ ಮೂಚೇ ಕೃತಾಂಜಲಿಃ ॥೩೫॥

ಗುರೋ ವಿಮೃಶ್ಯತಾಂ ಚೈತತ್ಕುತೋ ನಃ ಸಿದ್ಧಿರದ್ಯ ನೋ ।
ಹರಿವಲ್ಲಭಯಾ ಪ್ರೋಕ್ತಂ ನ ಮೃಷಾ ಭವಿತುಂ ಕ್ಷಮಂ ॥೩೬॥

ದೇವತೆಗಳು ಬೃಹಸ್ಪತಿಯನ್ನು ಆಶ್ರಯಿಸಿ, ಅವನು ಕೇಳುತ್ತಿರಲು, ಸಿಂಹಾಸನದ ಮೇಲೆ ಕುಳಿತಿದ್ದ ಇಂದ್ರನನ್ನು ಕುರಿತು " ಓ ದೇವತೆಗಳಿಗೆ ರಾಜನಾದ ಇಂದ್ರನೇ, ಸಕಾರಣವಾದ ನಮ್ಮ ಮಾತನ್ನು ದಯವಿಟ್ಟು ಲಾಲಿಸಬೇಕು. ಹಿಂದೆ, ಲಕ್ಷ್ಮೀ ದೇವಿಯು ಪ್ರಸನ್ನಳಾಗಿ ನಮಗೆ ವರವನ್ನು ನೀಡಿದಳಷ್ಟೆ. ಆದರೆ ಭೂಮಿಯಲ್ಲಿ ಅದರ ಫಲವು ಎಲ್ಲಿಯೂ ಕಾಣುತ್ತಿಲ್ಲ." ಎಂದು ಹೇಳಿದರು. ||೨೯-೩೦-೩೧-೩೨||

" ಹಾಗೆ ನಮ್ಮನ್ನು ಉಪಾಸನೆ ಮಾಡುವ ಜನರು ಒಂದು ಲಕ್ಷಕ್ಕೋ' ಸಾವಿರಕ್ಕೋ, ಒಬ್ಬೊಬ್ಬರು ಸಿಕ್ಕುತ್ತಾರೆ. ಯಾರೋ ಒಬ್ಬೊಬ್ಬರು ನಮ್ಮನ್ನು ಸೇವಿಸುವ ಹಾಗೆ ಕಾಣುತ್ತದೆ. ಇತರರೆಲ್ಲರೂ ಈ ವಿಷಯದಲ್ಲಿ, ಇಂದ್ರಿಯ ವಿಷಯಗಳಲ್ಲಿರುವ ಆಶೆಯನ್ನು ಬಿಟ್ಟು ಕಾಮ್ಯಕರ್ಮಗಳಲ್ಲಿ ಆಸಕ್ತಿ ಇಲ್ಲದವರಾಗಿ ಶಮದಮಾದಿಗುಣಗಳುಳ್ಳವರಾಗಿ ಉದಾಸೀನರಾಗಿದ್ದಾರೆ. ಓ ದೇವೇಂದ್ರನೇ, ಆದ್ದರಿಂದ ನಮ್ಮ ಇಷ್ಟಾರ್ಥವು ಇಲ್ಲಿಯವರೆಗೂ ಸಿದ್ಧಿಸಿಲ್ಲ. ಓ ಇಂದ್ರನೇ, ನಮ್ಮ ಇಷ್ಟಾರ್ಥವು ಸಿದ್ಧಿಸುವ ಬಗೆಯನ್ನು ನೀನು ದಯವಿಟ್ಟು ವಿಮರ್ಶೆಮಾಡಬೇಕು." ಹೀಗೆಂದು ದೇವತೆಗಳು ಹೇಳಲಾಗಿ ಅವರ ಮಾತನ್ನು ವಿಮರ್ಶಿಸಿ, ಇಂದ್ರನು

ತತ್ಕುತೋಽಸ್ಮಾನ್ ಮಾನವಾ ನೋ ಯಜಂತಿ ವಿಧಿಪೂರ್ವಕಂ ।
ಭವತಃ ಸ್ಯಾದವಿದಿತಂ ನ ಹಿ ಲೋಕತ್ರಯೇ ಸ್ಥಿತಂ ॥೩೭॥

ತ್ವಂ ಹಿ ಸರ್ವಾಂತರಗತಂ ವೇತ್ಸಿ ಸರ್ವಾಂತರೇಶವತ್ ।
ತನ್ನೋ ಬ್ರೂಹಿ ಶಿವಂ ಯೇನ ಪ್ರಾಪ್ಸ್ಯಾಮೋ ಹ್ಯವಿಲಂಬಿತಂ॥೩೮॥

ಏವಂ ಶತಕ್ರತುವಚೋ ನಿಶಮ್ಯಾಂಗಿರಸೋ ಮುನಿಃ ।
ನಿಮೀಲಿತಾಕ್ಷಃ ಸುಚಿರಂ ಧ್ಯಾತ್ವೋವಾಚ ಸುರೇಶ್ವರಂ ॥೩೯॥

ಶೃಣು ಮದ್ವಚನಂ ಪಾಕಶಾಸನಾತಿ ಶುಭೋದಯಂ ।
ಅಭೀಷ್ಟಂ ಭವತಾಂ ಕಾಲಾತ್ಸೇತ್ಸ್ಯತ್ಯತ್ರ ನ ಸಂಶಯಃ ॥೪೦॥

ಬೃಹಸ್ಪತಿಗೆ ಕೈಮುಗಿದು ನಮಸ್ಕಾರಮಾಡಿ ಹೀಗೆ ಬಿನ್ನೈಸಿದನು. "ಓ ಗುರುವೇ, ನಮ್ಮ ಇಷ್ಟಾರ್ಥವು ಇನ್ನೂ ಏಕೆ ಸಿದ್ಧಿಸಿಲ್ಲ? ಎಂಬುದನ್ನು ತಾವು ದಯವಿಟ್ಟು ವಿಮರ್ಶಿಸಬೇಕು. ವಿಷ್ಣು ಪತ್ನಿಯಾದ ಲಕ್ಷ್ಮಿಯು ಹೇಳಿದಮಾತು ಸುಳ್ಳಾಗಲಾರದು. ॥೩೩-೩೪-೩೫-೩೬॥

"ಹಾಗಿದ್ದ ಮೇಲೆ, ಮನುಷ್ಯರು ಶಾಸ್ತ್ರೋಕ್ತ ಕ್ರಮದಲ್ಲಿ ನಮ್ಮನ್ನು ಏಕೆ ಸೇವಿಸುತ್ತಿಲ್ಲ? ಎಂಬುದನ್ನು ನಮಗೆ ದಯವಿಟ್ಟು ತಿಳಿಸು. ನಿನಗೆ ತಿಳಿಯದ ವಿಷಯವು ಮೂರು ಲೋಕದಲ್ಲಿಯೂ ಯಾವುದೂ ಇಲ್ಲವಷ್ಟೆ?" ॥೩೭॥

"ನೀನು ಸರ್ವಾಂತರ್ಯಾಮಿಯಂತೆ, ಎಲ್ಲರ ಮನಸ್ಸಿನೊಳಗೂ ಅಡಗಿರುವ ಭಾವಗಳನ್ನು ಗ್ರಹಿಸಲು ಸಮರ್ಥನಾಗಿದ್ದೀಯೆ. ಆದ್ದರಿಂದ ನಾವು ಜಾಗ್ರತೆ ನಮ್ಮ ಕಾರ್ಯಸಿದ್ಧಿಯನ್ನು ಪಡೆಯುವ ಮಾರ್ಗವನ್ನು, ನಮಗೆ ದಯವಿಟ್ಟು ನೀನು ತಿಳಿಸಬೇಕು." ಹೀಗೆ ಇಂದ್ರನು ಹೇಳಿದ ಮಾತನ್ನು ಕೇಳಿ, ಬೃಹಸ್ಪತಿಯು ಕಣ್ಣನ್ನು ಮುಚ್ಚಿ ಬಹಳ ಹೊತ್ತು ಧ್ಯಾನಮಾಡಿ, ಅನಂತರ ಇಂದ್ರನನ್ನು ಕುರಿತು, "ಎಲೈ ಇಂದ್ರನೇ, ಬಹಳ ಮಂಗಳಕರವಾದ ನನ್ನ ಮಾತನ್ನು ಕೇಳು. ಸ್ವಲ್ಪಕಾಲವಾದ ನಂತರ ನಿಮ್ಮ ಇಷ್ಟಾರ್ಥವು ಸಿದ್ಧಿಸುವುದರಲ್ಲಿ ಸಂದೇಹವಿಲ್ಲ." ಎಂದು ಹೇಳಿದನು. ॥೩೮-೩೯-೪೦॥

ಗಚ್ಛ ದೇವಗಣೈಃ ಸಾಕಂ ಪುನಃ ಕಮಲವಾಸಿನೀಂ ।
ಸಂತೋಷ್ಯಾಽಭೀಷ್ಟಸಿದ್ಧಿಂ ತ್ವಂ ಭಜಿಷ್ಯಸಿ ಶತಕ್ರತೋ ॥೪೧॥

ಉಪಾಯೋ ನಾಸ್ತಿ ಚಾಽತ್ರಾಽನ್ಯೋ ಯೇನೇಷ್ಟಂಸಿದ್ಧ್ಯತಿ ದ್ರುತಂ ।
ತತ್ತ್ವಂ ಗಚ್ಛ ಮಹಾದೇವೀಂ ಶರಣಂ ಶರಣೇಷ್ಟದಾಂ ॥೪೨॥

ಇತಿ ಶ್ರುತ್ವಾ ಗುರುವಚೋ ದೇವೈಃ ಸಹ ದಿವಸ್ಪತಿಃ ।
ಜಗಾಮ ಜಾಹ್ನವೀತೀರೇ ಹಿಮಶೈಲ ತಟೋಪರಿ ॥೪೩॥

ತತ್ರ ಗತ್ವಾ ಸುವಿಮಲೇ ಸ್ವರ್ಧುನೀತೋಯ ಆಪ್ಲುತಃ ।
ಅನಿಮೇಷಗಣೈಃ ಸಾಕಂ ತಪಸ್ಯೇವ ಮನೋ ದಧೇ ॥೪೪॥

ಧ್ಯಾಯನ್ ಹರಿಮನೋಜ್ಞಾಽಂಗೀಪಾದಪದ್ಮಯುಗಂ ಮುಹುಃ ।
ಆವರ್ತಯನ್ನಾಮಗಣಮಷ್ಟಾ ವಿಂಶತಿ ಸಂಖ್ಯಕಂ ॥೪೫॥

ಅವಷ್ಟಭ್ಯ ಭುವಂ ಪಾದಾಂಗುಷ್ಠಾಽಗ್ರೇಣೇಂದ್ರಮುಖ್ಯಕಾಃ ।
ಊರ್ಧ್ವಬಾಹಾ ನಿರಾಲಂಬಾ ಮಾರುತಾಽಹಾರತತ್ಪರಾಃ ॥೪೬॥

"ಎಲೈ ಇಂದ್ರನೇ, ದೇವತೆಗಳ ಸಮೂಹದೊಂದಿಗೆ ಪುನಃ ಲಕ್ಷ್ಮೀದೇವಿಯನ್ನು ಸಮೀಪಿಸು. ಆಕೆಯನ್ನು ಮೆಚ್ಚಿಸಿ ನಿನ್ನ ಇಷ್ಟಾರ್ಥಸಿದ್ಧಿಯನ್ನು ಹೊಂದುವೆ. ಶೀಘ್ರವಾಗಿ ನಿನ್ನ ಕಾರ್ಯಸಿದ್ಧಿಯಾಗಲು ಇದಲ್ಲದೆ ಬೇರೊಂದು ಮಾರ್ಗವಿಲ್ಲ. ಶರಣಾಗತರಾದವರ ಇಷ್ಟಾರ್ಥಗಳನ್ನು ನೀಡುವ ಮಹಾದೇವಿಯಾದ ಲಕ್ಷ್ಮಿಯನ್ನೇ ರಕ್ಷಕಳನ್ನಾಗಿ ಭಾವಿಸಿ ಮರೆಹೋಗು." ಹೀಗೆ ಬೃಹಸ್ಪತಿಯು ಹೇಳಿದ ಮಾತನ್ನು ಕೇಳಿ, ಇಂದ್ರನು ಇತರ ದೇವತೆಗಳೊಂದಿಗೆ ಹಿಮವತ್ಪರ್ವತದ ತಪ್ಪಲಿನ ಮೇಲೆ ಗಂಗಾನದಿಯ ದಡವನ್ನು ಸೇರಿದನು. ಅನಂತರ ಇಂದ್ರನು ಅತ್ಯಂತ ಪರಿಶುದ್ಧವಾದ ಸ್ವರ್ಗಂಗೆಯ ನೀರಿನಲ್ಲಿ ಸ್ನಾನಮಾಡಿ ದೇವತೆಗಳೊಂದಿಗೆ ತಪಸ್ಸುಮಾಡಲು ನಿಶ್ಚಯಿಸಿದನು. ॥೪೧-೪೨-೪೩-೪೪॥

ಇಂದ್ರನೇ ಮೊದಲಾದವರು ವಿಷ್ಣುವಿನ ಮನೋಹರಳಾದ ಪತ್ನಿಯಾದ ಲಕ್ಷ್ಮಿಯ ಪಾದಕಮಲಗಳನ್ನು ಧ್ಯಾನಿಸುತ್ತಾ, ಅನೇಕ ಸಲ ಆಕೆಯ ಇಪ್ಪತ್ತೆಂಟು ನಾಮಗಳನ್ನು ಆವೃತ್ತಿಮಾಡುತ್ತಾ, ತಮ್ಮ ಕಾಲುಗಳ ಹೆಬ್ಬೆರಳುಗಳ ಮೇಲೆ ನಿಂತು ಎತ್ತಿದ ತೋಳುಗಳುಳ್ಳವರಾಗಿಯೂ, ಆಧಾರವೇ ಇಲ್ಲದವರಾಗಿಯೂ ಗಾಳಿಯನ್ನು

ಏಕಾಗ್ರಚಿತ್ತಾ ಹ್ಯಚಲಕಾಯ ಚಕ್ಷುರ್ಮನೋವಚಃ ।
ಶಿಲೋತ್ಕೀರ್ಣ ಸುಪಾಂಚಾಲೀ ಸಂಘವತ್ಸಂ ಸ್ಥಿತಾಸ್ತದಾ ॥೪೭॥

ಏವಂ ತ್ರಿಸಪ್ತದಶಕೇ ಮಾಸೇಽತೀತೇ ಭೃಗೂದ್ವಹ ।
ಉಗ್ರೇಣ ತಪಸಾ ತುಷ್ಟಾ ಪ್ರತ್ಯಕ್ಷೀ ಭವದಞ್ಜಸಾ ॥೪೮॥

ತತ್ರಾಽಗತ್ಯ ಸುರಾನಿಂದ್ರಪ್ರಮುಖಾನ್ ತಾನ್ ನಿಶಾಮ್ಯ ತು ।
ಕಾಷ್ಠಕುಡ್ಯ ಸಮಾನ್ ಧ್ಯಾನ ತತ್ಪರಾನ್ ಪ್ರಾಹ ಸಾ ರಮಾ ॥೪೯॥

ಭೋ ಭೋ ದೇವಾಃ ಸುರೇಶಾನ ಪ್ರಸನ್ನಾಽಸ್ಮಿ ವರಪ್ರದಾ ।
ವಿರಮಂತು ಭವಂತೋಽಸ್ಮಾದತ್ಯುಗ್ರತಪಸೋ ಬುಧಾಃ ॥೫೦॥

ಬ್ರುವಂತು ವೋ ವಾಂಛಿತಂ ಯತ್ಪ್ರದದಾಮ್ಯವಿ ಶಂಕಿತಂ ।
ಇತಿ ಶ್ರುತ್ವಾ ವಚೋ ದೇವ್ಯಾ ಮಧುರಸ್ವರಸುಂದರಂ ॥೫೧॥

ಮಾತ್ರ ಆಹಾರವನ್ನಾಗಿ ಸೇವಿಸುತ್ತಲೂ, ಏಕಾಗ್ರಚಿತ್ತರಾಗಿ ಅಲುಗಾಡದ ಶರೀರ ಮತ್ತು ಕಣ್ಣುಗಳುಳ್ಳವರಾಗಿ, ಬೇರೆ ವಿಷಯದಲ್ಲಿ ಪ್ರವರ್ತಿಸದೇ ಇರುವ ಮನಸ್ಸೂ ಮತ್ತು ಮಾತುಗಳುಳ್ಳವರಾಗಿ, ಕಲ್ಲಿನಲ್ಲಿ ಕೆತ್ತಿದ ಶ್ರೇಷ್ಠವಾದ ಬೊಂಬೆಗಳ ಸಮೂಹದಂತೆ ಅಲುಗಾಡದೇ ಇದ್ದರು. ಎಲೈ ಪರಶುರಾಮನೇ, ಹೀಗೆ ಐವತ್ತೊಂದು ತಿಂಗಳು ಕಳೆಯಲು, ಲಕ್ಷ್ಮಿಯು ದೇವತೆಗಳ ಉಗ್ರತಪಸ್ಸಿಗೆ ಮೆಚ್ಚಿ ಅವರಿಗೆ ತತ್‌ಕ್ಷಣವೇ ಪ್ರತ್ಯಕ್ಷಳಾದಳು. ಲಕ್ಷ್ಮಿಯು ದೇವತೆಗಳು ತಪಸ್ಸುಮಾಡುತ್ತಿದ್ದ ಸ್ಥಳಕ್ಕೆ ಬಂದು, ಕಟ್ಟಿಗೆ ಮತ್ತು ಗೋಡೆಗಳಿಗೆ ಸಮರಾಗಿದ್ದ ಎಂದರೆ ಏಕಾಗ್ರವಾದ ಮನಸ್ಸುಳ್ಳವರಾಗಿ ಅಚಲರಾಗಿದ್ದ ಧ್ಯಾನಾಸಕ್ತರಾದ ಇಂದ್ರನೇ ಮೊದಲಾದ ದೇವತೆಗಳನ್ನು ಕುರಿತು ಮುಂದೆ ಹೇಳುವ ರೀತಿಯಲ್ಲಿ ಹೇಳಿದಳು. ॥೪೫-೪೬-೪೭-೪೮-೪೯॥

"ಎಲೈ ದೇವತೆಗಳೇ, ಮತ್ತು ಇಂದ್ರನೇ, ನಾನು ನಿಮ್ಮ ತಪಸ್ಸಿಗೆ ಮೆಚ್ಚಿದ್ದೇನೆ. ನಾನು ವರವನ್ನು ನಿಮಗೆ ನೀಡಲು ಬಂದಿದ್ದೇನೆ. ಇಂಥಾ ಉಗ್ರವಾದ ತಪಸ್ಸನ್ನು ಇನ್ನು ಸಾಕುಮಾಡಿ." ಎಂದು ಹೇಳಿದಳು. ॥೫೦॥

"ನಿಮ್ಮ ಇಷ್ಟಾರ್ಥವೇನೆಂಬುದನ್ನು ಹೇಳಿ. ನಾನು ಖಂಡಿತವಾಗಿಯೂ ಅದನ್ನು ನಿಮಗೆ ನೀಡುವೆನು." ಮಧುರವಾದ ಧ್ವನಿಯಿಂದ ಮನೋಹರವಾದ ದೇವಿಯ ಮಾತನ್ನು ಕೇಳಿ, ದೇವತೆಗಳು ಕಣ್ಣುಗಳನ್ನು ಬಿಟ್ಟುನೋಡಿ ವಿಷ್ಣುವಿನ

ಉನ್ಮೀಲಿತದೃಶೋ ದೇವಾ ದೃಷ್ಟ್ವಾ ದೇವೀಂ ಹರಿಪ್ರಿಯಾಂ ।
ಪೂರ್ವದೃಷ್ಟಾಂ ಸ್ಮಿತಾಽಪಾಙ್ಗೀಂ ದಂಡವತ್ಪತಿತಾ ಭುವಿ ॥೫೨॥

ಹರ್ಷರುದ್ಧಕಲಾಽವ್ಯಕ್ತವಾಚಾ ಸ್ತೋತುಂ ಪ್ರಚಕ್ರಮುಃ ।
ಶರಣಾಗತ ದೀನಾಽರ್ತಿ ಗಿರಿದಾರಣ ವಜ್ರಿಣಿ ॥೫೩॥

ರಕ್ಷಾಽಸ್ಮಾನ್ ಪ್ರಣತಾನ್ ಲಕ್ಷ್ಮೀನಾರಾಯಣಿ ನಮೋಽಸ್ತು ತೇ ।
ಯತ್ಕೃಪಾಲೇಶಮಾಸಾದ್ಯ ನರಾಃ ಪಂಗ್ವಂಧಕಾ ಅಪಿ ॥೫೪॥

ಸ್ಪರ್ಧಂತಿ ವಿಧಿಮುಖ್ಯೈಃ ಸಾ ನಾರಾಯಣಿ ನಮೋಽಸ್ತು ತೇ ।
ಪುರಾಣಪುರುಷೋ ವಿಷ್ಣುರ್ಯಾಂ ವಿನಾ ಸೋಽಪಿ ಪಾಲನೇ ॥೫೫॥

ನ ಶಕ್ತಃ ಸಾ ಪರಾ ತ್ವಂ ವೈ ನಾರಾಯಣಿ ನಮೋಽಸ್ತು ತೇ ।
ಪರಾಶಕ್ತಿಸ್ತ್ವಮೀಶಾನೀ ವಾಚ್ಯವಾಚಕರೂಪಿಣೀ ॥೫೬॥

ಪ್ರಿಯಳಾದ ದೇವಿಯನ್ನು ದರ್ಶನಮಾಡಿದರು. ಹಿಂದೆ ಕಂಡ ಮನೋಹರ ಸ್ವರೂಪವನ್ನೇ ಧರಿಸಿ, ಮುಗುಳ್ನಗೆಯಿಂದ ತನ್ನ ಕಟಾಕ್ಷಗಳನ್ನು ಬೀರುತ್ತಿರುವ, ಲಕ್ಷ್ಮಿಯನ್ನು ನೋಡಿ ದೇವತೆಗಳು ದಂಡಾಕಾರವಾಗಿ ಭೂಮಿಯ ಮೇಲೆ ನಮಸ್ಕಾರಮಾಡಿದರು. ಮತ್ತು ಇವರು ಸಂತೋಷದಿಂದ ಗದ್ಗದವೂ, ಅಸ್ಪಷ್ಟವೂ, ಮನೋಹರವೂ ಆಗಿರುವ ಸ್ವರವುಳ್ಳವರಾಗಿ ದೇವಿಯನ್ನು ಸ್ತೋತ್ರಮಾಡಲು ಪ್ರಾರಂಭಿಸಿದರು. “ ಓ ಶರಣಾಗತರಾಗಿ ಬಂದ ಭಕ್ತರಾದ ಜನಗಳ ಕಷ್ಟಗಳೆಂಬ ಪರ್ವತಗಳನ್ನು ಸೀಳುವ ವಿಷಯದಲ್ಲಿ ವಜ್ರಾಯುಧದಂತಿರುವ ದೇವಿಯೇ, ನಮ್ಮನ್ನು ಕಾಪಾಡು.” ಎಂದು ಆಕೆಗೆ ಬಿನ್ನೈಸಿದರು. ॥೫೧-೫೨-೫೩॥

“ ಓ ನಾರಾಯಣನ ಪತ್ನಿಯಾದ ಲಕ್ಷ್ಮೀದೇವಿಯೇ, ನಮಸ್ಕಾರ ಮಾಡುತ್ತಿರುವ ನಮ್ಮನ್ನು ಕಾಪಾಡು. ನಿನಗೆ ಅನೇಕ ನಮಸ್ಕಾರಗಳು. ಕುಂಟ, ಕುರುಡರಾದ ಜನರೂ ಸಹ ನಿನ್ನ ಕೃಪಾಲೇಶಕ್ಕೆ ಪಾತ್ರರಾದರೆಂದರೆ ಬ್ರಹ್ಮನೇ ಮೊದಲಾದವರ ಜೊತೆಯಲ್ಲಿಯೂ ಸ್ಪರ್ಧೆಮಾಡಲು ಸಮರ್ಥರಾಗುತ್ತಾರೆ! ನಾರಾಯಣಪತ್ನಿಯಾದ ಇಂಥಾ ಅಸಾಧಾರಣ ಮಹಿಮೆಯುಳ್ಳ ನಿನಗೆ ನಮಸ್ಕಾರಗಳು. ನೀನು ಜಗದೀಶ್ವರಿಯೂ, ಪರಾಶಕ್ತಿಸ್ವರೂಪಳೂ ಶಬ್ದಾರ್ಥಸ್ವರೂಪಳೂ ಆಗಿದ್ದೀಯೆ. ॥೫೪-೫೫-೫೬॥

ಸರ್ವಸಾರಮಯೀ ತ್ವಂ ವೈ ನಾರಾಯಣಿ ನಮೋಽಸ್ತು ತೇ ।
ಸೃಷ್ಟಿಕರ್ತ್ರೀ ಬ್ರಹ್ಮಶಕ್ತಿರ್ಗೌರ್ಶ್ರೀಃ ವಿಷ್ಣುಬಲೋದ್ಯಮಾ ॥೫೭॥

ಸಂಹಾರಿಣೀ ರುದ್ರಶಕ್ತಿರ್ನಾರಾಯಣಿ ನಮೋಽಸ್ತು ತೇ ।
ಇತಿ ಸ್ತುತ್ವಾ ಸ್ವವೃತ್ತಾಂತಂ ಪ್ರವಕ್ತುಮುಪಚಕ್ರಮುಃ ॥೫೮॥

ಮಾತಃ ಪುರಾ ವರಂ ಪ್ರಾಪ್ಯ ತ್ವತ್ತೋ ಯಾತಾ ವಯಂ ದಿವಿ ।
ತದದ್ಯಾಽಪಿ ನ ಸಂಪನ್ನಂ ನರಾ ನೋ ನ ಯಜಂತಿ ವೈ ॥೫೯॥

ತದ್ಯಥಾಽಸ್ಮಾನ್ಯಜಂತ್ಯೇತೇ ಭವಂತ್ಯಸ್ಮತ್ಪರಾಯಣಾಃ ।
ತಥಾ ಕುರು ಮಹಾದೇವಿ ಸ್ಯುರ್ನರಾಃ ಪಶವೋ ಹಿ ನಃ ॥೬೦॥

ಇತಿ ದೇವವಚಃ ಶ್ರುತ್ವಾ ದೇವಸಾಹಾಯ್ಯಕಾರಣಾತ್ ।
ವಿಚಾರ್ಯ ದೇವಾನ್ ಪ್ರೋವಾಚ ಶೃಣುಧ್ವಂ ವಿಬುಧರ್ಷಭಾಃ ॥೬೧॥

"ಓ ಲಕ್ಷ್ಮೀದೇವಿಯೇ, ನೀನು ಎಲ್ಲಾ ವಸ್ತುಗಳ ಸಾರಸ್ವರೂಪಳೂ ನಾರಾಯಣನ ಪತ್ನಿಯೂ ಆಗಿದ್ದೀಯೆ. ಇಂಥಾ ನಿನಗೆ ನಮಸ್ಕಾರಗಳು. ನೀನು ಸೃಷ್ಟಿಕರ್ತ್ರಿಯೂ ಬ್ರಹ್ಮನ ಸೃಷ್ಟಿಶಕ್ತಿಸ್ವರೂಪಳೂ, ಭೂಮಿ, ಸಂಪತ್ತು, ವಿಷ್ಣುವಿನ ಪಾಲನಶಕ್ತಿ, ಸಾಮರ್ಥ್ಯಗಳು, ಇವೆಲ್ಲವುಗಳ ಸ್ವರೂಪಳೂ ಆಗಿದ್ದೀಯೆ. ನೀನು ಪ್ರಪಂಚಸಂಹಾರಕಳೂ, ರುದ್ರನ ಸಂಹಾರಶಕ್ತಿಸ್ವರೂಪಳೂ ಆಗಿದ್ದೀಯೆ. ಇಂಥಾ ನಿನಗೆ ನಮಸ್ಕಾರಗಳು." ಹೀಗೆ ದೇವತೆಗಳು ಲಕ್ಷ್ಮಿಯನ್ನು ಸ್ತೋತ್ರಮಾಡಿ ತಮ್ಮ ಸಮಾಚಾರವನ್ನು ಹೇಳಲು ಉಪಕ್ರಮಿಸಿದರು. ಓ ತಾಯಿಯೇ, ನಾವು ನಿನ್ನಿಂದ ಹಿಂದೆ ವರವನ್ನು ಪಡೆದು ಸ್ವರ್ಗಕ್ಕೆ ತೆರಳಿದೆವು. ಆ ವರದ ಸಿದ್ಧಿಯು ಇನ್ನೂ ಆಗಿಲ್ಲ. ಮನುಷ್ಯರು ನಮ್ಮನ್ನುದ್ದೇಶಿಸಿ ಈಗಲೂ ಯಾಗವನ್ನು ಮಾಡುತ್ತಿಲ್ಲ. ||೫೭-೫೮-೫೯||

"ಓ ಮಹಾದೇವಿಯೇ, ಆದ್ದರಿಂದ ನಮ್ಮಲ್ಲಿ ಆಸಕ್ತಿಯನ್ನು ವಹಿಸಿ ಯಾಗಾದಿಗಳನ್ನು ಮಾಡುತ್ತಾ ನಮಗೆ ಮನುಷ್ಯರು ಪಶುಗಳಂತೆ ವಿಧೇಯರಾಗಿರುವಂತೆ ನೀನು ದಯವಿಟ್ಟು ಮಾಡಬೇಕು." ಹೀಗೆ ದೇವತೆಗಳಾಡಿದ ಮಾತುಗಳನ್ನು ಕೇಳಿ ಲಕ್ಷ್ಮಿಯು ದೇವತೆಗಳಿಗೆ ಸಹಾಯಮಾಡಬೇಕೆಂದು ಯೋಚಿಸಿ, ದೇವತೆಗಳನ್ನು ಕುರಿತು "ಎಲೈ ದೇವಶ್ರೇಷ್ಠರೇ, ನನ್ನ ಮಾತನ್ನು ಕೇಳಿ; ನಾನು ಹಿಂದೆ

ಮಯಾ ಯದುಕ್ತಂ ಪೂರ್ವಂ ವೋ ತತ್ತಥೈವ ನ ಚಾಽನ್ಯಥಾ ।
ನಿಷ್ಕಾಮಾಸ್ತು ನರಾಃ ಕಾಲಸ್ವಭಾವಾತ್ತತ್ರ ಕಿಂ ಭವೇತ್ ॥೬೨॥

ಭವತ್ವೇವಂ ತಥಾಽಪ್ಯತ್ರ ವಿಧಾಸ್ಯೇ ಭವದೀಪ್ಸಿತಮ್ ।
ಇತ್ಯುಕ್ತ್ವಾ ಸಾ ಸ್ವಮನಸಾ ಕುಮಾರಂ ದಿವ್ಯವರ್ಚಸಂ ॥೬೩॥

ಉತ್ಪಾದ್ಯ ತರಸಾ ತೇಭ್ಯೋ ದತ್ವೋವಾಚ ಬುಧಾನ್ ತದಾ ।
ಅಯಂ ಕುಮಾರಃ ಕಾಮಾಖ್ಯೋ ಮಹಾಬಲಪರಾಕ್ರಮಃ ॥೬೪॥

ಸಾಧಕೋ ಭವತಾಂ ಕಾರ್ಯೇ ಭವಿಷ್ಯತಿ ನ ಸಂಶಯಃ ।
ಏತತ್ಸತ್ತ್ವಾಯ ಯೋಗೇನ ಮರ್ತ್ಯಾಃ ಸ್ಯುಃ ವೋ ವಶಂವದಾಃ॥೬೫॥

ಏನಂ ಗೃಹೀತ್ವಾ ಗಚ್ಛಂತು ಭವಂತೋ ವಾಂಛಿತಾಽಪ್ತಯೇ ।
ವತ್ಸ ಕಾಮ ಸುರಾಽರ್ಥಂ ತ್ವಂ ಜಿತ್ವಾ ಮರ್ತ್ಯಾನ್ ಅಶೇಷತಃ ॥೬೬॥

ನಿಮಗೆ ಕೊಟ್ಟ ವರವು ಖಂಡಿತ ವ್ಯರ್ಥವಾಗಲಾರದು. ಆದರೆ ಈಗ ಜನಗಳು ಕಾಲಸ್ವಭಾವಕ್ಕನುಸಾರವಾಗಿ ಇಂದ್ರಿಯ ವಿಷಯಗಳಲ್ಲಿ ಆಶೆಗಳನ್ನೇ ಬಿಟ್ಟುಬಿಟ್ಟಿದ್ದಾರೆ; ಆದ್ದರಿಂದ ಹೀಗಾಗಿದೆ. ಆದರೂ ಹೆದರಬೇಕಾಗಿಲ್ಲ. ನಿಮಗೆ ಇಷ್ಟವಾದದ್ದನ್ನು ನೆರವೇರಿಸುವೆನು.'' ಹೀಗೆ ಲಕ್ಷ್ಮಿಯು ದೇವತೆಗಳಿಗೆ ಹೇಳಿ, ತನ್ನ ಮನಸ್ಸಿನಿಂದಲೇ ದಿವ್ಯವಾದ ತೇಜಸ್ಸುಳ್ಳ ಮನ್ಮಥನೆಂಬ ಕುಮಾರನನ್ನು ಸೃಷ್ಟಿಸಿದಳು. ॥೬೦-೬೧-೬೨-೬೩॥

ಹೀಗೆ ಮನ್ಮಥನನ್ನು ಸೃಷ್ಟಿಮಾಡಿ ಲಕ್ಷ್ಮಿಯು ದೇವತೆಗಳಿಗೆ ಅವನನ್ನು ಕೊಟ್ಟು, ಅವರನ್ನು ಕುರಿತು ಹೀಗೆ ಹೇಳಿದಳು, "ಮಹಾಶೌರ್ಯ ಮತ್ತು ಪರಾಕ್ರಮಗಳುಳ್ಳ ಕಾಮನೆಂಬ ಈ ಕುಮಾರನು ನಿಮ್ಮ ಕೆಲಸಗಳಿಗೆ ಸಹಾಯಕನಾಗುವನೆಂಬ ವಿಷಯದಲ್ಲಿ ಸಂದೇಹವಿಲ್ಲ. ಈ ಮನ್ಮಥನ ಮಹಿಮೆಯಿಂದ ಮನುಷ್ಯರು ನಿಮಗೆ ಅಧೀನರಾಗುವರು. ಎಂಬುದರಲ್ಲಿ ಸಂಶಯವಿಲ್ಲವು. ನಿಮ್ಮ ಇಷ್ಟಾರ್ಥಸಿದ್ಧಿಗಾಗಿ ಇವನನ್ನು ಕರೆದುಕೊಂಡುಹೋಗಿ." ಎಂದು ಹೇಳಿ ಮನ್ಮಥನನ್ನು ಕುರಿತು "ಎಲೈ ಕುಮಾರನಾದ ಮನ್ಮಥನೇ, ದೇವತೆಗಳ ಇಷ್ಟಸಿದ್ಧಿಗಾಗಿ ನೀನು ಎಲ್ಲಾ ಮನುಷ್ಯರನ್ನೂ ಜಯಿಸು.'' ಎಂದು ಹೇಳಿದಳು. ॥೬೪-೬೫-೬೬॥

ಸಂಸ್ಥಾಪಯ ಸುರೇಂದ್ರಾದಿ ಸುರಾಣಾಂ ವಶವೃತ್ತಿಷು ।
ಇತ್ಯುಕ್ತ್ವಾಽಂತರ್ಹಿತಾ ಸದ್ಯಃ ಪಶ್ಯತಾಂ ಚ ದಿವೌಕಸಾಂ ॥೧೭॥

ತತಃ ಸುರಾ ನಮಸ್ಕೃತ್ಯ ಕಾಮಮಾದಾಯ ಸಂಯಯುಃ ।
ಆಗತ್ಯ ಸ್ವರ್ಭುವಿ ತದಾ ಕಾಮಂ ಸತ್ಕೃತ್ಯ ಸರ್ವತಃ ॥೧೮॥

ದೇವೈಃ ಸಹ ತದೋವಾಚ ಕಾಮಂ ಸಂಶ್ರಯ ಪೂರ್ವಕಂ ।
ಇಂದ್ರಃ ಸಂಸ್ತುತ್ಯ ಸಂಬೋಧ್ಯ ಮಧುರಸ್ಮಿತ ಪೂರ್ವಕಂ ॥೧೯॥

ಕಾಮ ತ್ವಂ ರಮಯಾ ಸೃಷ್ಟೋ ಮನಸಾಽಸ್ಮದ್ಧಿತೇಪ್ಸಯಾ ।
ತ್ವಂ ಪಞ್ಚಹಾಯನೋ ಬಾಲಃ ಕಥಮಸ್ಮತ್ಸಮೀಹಿತಂ ॥೨೦॥

ಸಾಧಯಿಷ್ಯಸಿ ತದ್ಬ್ರೂಹಿ ಯಥಾಽಸ್ಮದ್ವಾಂಛಿತಂ ಭವೇತ್ ।
ಏವಮಿಂದ್ರವಚಃ ಶ್ರುತ್ವಾ ಮತ್ವಾ ಸ್ವಸ್ಯಾಽವ ಹೇಳನಂ ॥೨೧॥

ರುಷಾ ಕಷಾಯಿತಾಽಕ್ಷಸ್ಸ ಉವಾಚ ಸ್ಫುರಿತಾಽಧರಃ ।
ಶೃಣು ಶಕ್ರ ಸಹಸ್ರಾಕ್ಷ ನಾವಜ್ಞಾಂ ಕರ್ತುಮರ್ಹಸಿ ॥೨೨॥

"ಎಲೈ ಕುಮಾರನಾದ ಮನ್ಮಥನೇ, ದೇವೇಂದ್ರಾದಿದೇವತೆಗಳಿಗೆ ಮನುಷ್ಯರನ್ನು ಅಧೀನರನ್ನಾಗಿ ಮಾಡು." ಎಂದು ಹೇಳಿ, ದೇವತೆಗಳು ನೋಡುತ್ತಿರುವಾಗಲೇ ಅಂತರ್ಧಾನವಾದಳು. ಅನಂತರ ದೇವತೆಗಳು ಲಕ್ಷ್ಮೀಯು ಅಂತರ್ಧಾನವಾದ ಕಡೆಗೆ ನಮಸ್ಕರಿಸಿ, ಮನ್ಮಥನನ್ನು ಕರೆದುಕೊಂಡುಹೋದರು. ಅನಂತರದಲ್ಲಿ ಅವರು ಸ್ವರ್ಗವನ್ನು ಸೇರಿ ಮನ್ಮಥನನ್ನು ಎಲ್ಲಾ ವಿಧದಲ್ಲೂ ಸತ್ಕರಿಸಿದರು. ಆಮೇಲೆ ದೇವತೆಗಳಿಂದ ಕೂಡಿದ ಇಂದ್ರನು ವಿನಯಪೂರ್ವಕವಾಗಿ ಮನ್ಮಥನನ್ನು ಸ್ತೋತ್ರ ಮಾಡಿ, ಮಧುರವಾದ ಮುಗುಳ್ನಗೆಯೊಡನೆ, "ಎಲೈ ಮನ್ಮಥನೇ, ಲಕ್ಷ್ಮೀ ದೇವಿಯು ನಮ್ಮ ಇಷ್ಟವಾದ ಕಾರ್ಯಕ್ಕೆ ಸಹಾಯವನ್ನು ಮಾಡುವುದಕ್ಕಾಗಿ ನಿನ್ನನ್ನು ಸೃಷ್ಟಿಸಿದ್ದಾಳೆ. ಆದರೆ ನೀನು ಕೇವಲ ಐದು ವರ್ಷದ ಬಾಲಕನು. ಆದ್ದರಿಂದ ನೀನು ಹೇಗೆ ನಮ್ಮ ಇಷ್ಟಸಿದ್ಧಿಯನ್ನುಂಟುಮಾಡಬಲ್ಲೆ?" ಎಂದು ಕೇಳಿದನು.॥೧೭-೧೮-೧೯-೨೦॥

"ಎಲೈ ಮನ್ಮಥನೇ, ನೀನು ಹೇಗೆ ನಮ್ಮ ಕಾರ್ಯವನ್ನು ಸಾಧಿಸುವೆ? ಎಂಬುದನ್ನು ಹೇಳು. ಅದರಿಂದ ನಮ್ಮ ಕಾರ್ಯವು ಹೇಗೆ ಸಿದ್ಧಿಯಾಗುವುದು? ಎಂದು

ಬಾಲೋಽಪಿ ಸಿಂಹಃ ಕರಿಣಾಂ ಮಂಡಲೀ ದಂಡನಕ್ಷಮಃ ।
ನ ಪಶ್ಯಸ್ಯಗ್ನಿಕಣಿಕಾ ದಹತ್ಯಾಖಂಡಲಂ ಬಲಮ್ ॥೭೩॥

ವೀರ್ಯೇ ನ ಕಾಲೋ ದೇಶೋ ವಾ ಹೇತುರ್ನೈಸರ್ಗಿಕಂ ಹಿ ತತ್ ।
ತಸ್ಮಾದಭೀಷ್ಟಂ ಕಿಂ ಯತ್ತೇ ಮಯಾ ಸಾಧ್ಯಂ ವದ ದ್ರುತಂ ॥೭೪॥

ಪಶ್ಯಸೀಮಂ ಕ್ಷಣಂ ಶಕ್ರ ಭವದೀಪ್ಸಿತಸಾಧನಂ ।
ನೋಕ್ತಂ ತ್ವಯಾ ಯಾವದಿಹ ತಾವತ್ಸಿದ್ಧ್ಯಂತರಾಯಕಮ್ ॥೭೫॥

ಇತಿ ಕಾಮವಚಃ ಶ್ರುತ್ವಾ ಪ್ರಾಹ ವಜ್ರಧರಸ್ತದಾ ।
ಕಾಮ ಮಾ ಕ್ರುಧ ಯನ್ಮೋಕ್ತಂ ತತ್ತೇ ವೀರ್ಯವಿವೃದ್ಧಯೇ ॥೭೬॥

ನಂಬೋಣ ? ” ಎಂದು ಕೇಳಿದನು. ಹೀಗೆ ಇಂದ್ರನು ಕೇಳಲಾಗಿ ಮನ್ಮಥನು, ತನ್ನನ್ನು ಇಂದ್ರನು ತಿರಸ್ಕರಿಸಿದನೆಂದು ತಿಳಿದು ಕೋಪದಿಂದ ಕೆಂಪೇರಿದ ಕಣ್ಣುಗಳುಳ್ಳವನಾಗಿ ತುಟಿಗಳು ಅಲ್ಲಾಡುತ್ತಿರಲು ಹೀಗೆ ಹೇಳಿದನು—“ ಎಲೈ ಸಹಸ್ರಾಕ್ಷನಾದ ಇಂದ್ರನೇ, ನೀನು ಹೀಗೆ ನನ್ನನ್ನು ತಿರಸ್ಕರಿಸುವುದು ನಿನಗೆ ಯುಕ್ತವಲ್ಲ. ಸಿಂಹದ ಮರಿಯು ಎಳೆಯದಾದರೂ ಆನೆಗಳ ಸಮೂಹಗಳನ್ನು ನಿಗ್ರಹಿಸಬಲ್ಲದಲ್ಲವೆ ? ಒಂದು ಬೆಂಕಿಯ ಕಿಡಿಯೇ ಇಂದ್ರನ ಬಲವನ್ನೆಲ್ಲವನ್ನೂ ನಾಶಮಾಡಲಿಲ್ಲವೇ ? ||೭೧-೭೨-೭೩||

“ ಪುರುಷನು ಶಕ್ತಿಯುಳ್ಳವನಾಗಿದ್ದರೆ ಅವನ ಪರಾಕ್ರಮ ವಿಷಯದಲ್ಲಿ ಕಾಲವಾಗಲೀ ದೇಶವಾಗಲೀ ಒಂದೂ ಕಾರಣವಲ್ಲ. ಅದು ಅವನ ನೈಜವಾದ ಗುಣ. ಎಲೈ ಇಂದ್ರನೇ, ಆದ್ದರಿಂದ ನಿನಗೆ ಇಷ್ಟವಾದ, ನಾನು ಸಾಧಿಸಬೇಕಾದ ಕಾರ್ಯವೇನು ? ಎಂಬುದನ್ನು ಹೇಳು. ಅದನ್ನು ಒಂದು ಕ್ಷಣಕಾಲ ಮಾತ್ರದಲ್ಲೇ ನಿನಗೆ ಸಾಧಿಸಿಕೊಡುವೆನು. ನೀನು ಅಪ್ಪಣೆ ಮಾಡಲು ಎಷ್ಟು ಕಾಲ ತಡಮಾಡುತ್ತೀಯೋ ಅಷ್ಟು ಮಾತ್ರವೇ ವಿಘ್ನವೇ ವಿನಾ, ಕಾರ್ಯಸಿದ್ಧಿಗೆ ಇನ್ನಾವ ವಿಘ್ನವೂ ಇಲ್ಲ.” ಎಂದು ಹೇಳಿದನು. ||೭೪-೭೫||

ಹೀಗೆ ಮನ್ಮಥನು ಹೇಳಿದ ಮಾತನ್ನು ಕೇಳಿ ಆಗ ವಜ್ರಾಯುಧಧಾರಿಯಾದ ಇಂದ್ರನು ಅವನನ್ನು ಕುರಿತು, “ ಎಲೈ ಮನ್ಮಥನೇ, ಕೋಪಿಸಿಕೊಳ್ಳಬೇಡ ; ನಿನ್ನ ಪರಾಕ್ರಮವು ವೃದ್ಧಿಯಾಗಲಿ, ಎಂತಲೇ ನಾನು ಹಾಗೆ ಹೇಳಿದೆನು. ಲಕ್ಷ್ಮೀದೇವಿಯು

ರಮಾದೇವ್ಯಾ ಯದುಕ್ತಂ ತನ್ಮೃಷಾ ನೈವ ತಥೈವ ತತ್ ।
ತ್ವಂ ಸಾಕ್ಷಾತ್ಪರಮೇಶಾನೀ ಮನೋಜಾತೋಽಸ್ಮದರ್ಥತಃ ॥೨೭॥

ಸಾಕ್ಷಾದ್ಧರೇಃ ಕ್ಷೇತ್ರಭವಃ ಕಿಮಸಾಧ್ಯಂ ತ್ವಯಾ ಭವೇತ್ ।
ನರಾ ಯಥಾಽಸ್ಮದ್ವಶಗಾಃ ಯಜಂತ್ಯನುದಿನಂ ಹಿ ನಃ ॥೨೮॥

ಕರ್ತವ್ಯಂ ಭವತಾ ತದ್ವತ್ ಯೇನಾಽಹಂ ತ್ರಿಜಗತ್ಪತಿಃ ।
ಭವಾಮಿ ಪಶವೋಽಸ್ಮಾಕಂ ಪಾಲ್ಯಾಃಸ್ಯುರ್ಮನುಜಾ ಭುವಿ ॥೨೯॥

ಏವಮಿಂದ್ರವಚಃ ಶ್ರುತ್ವಾ ಕಾಮಃ ಪ್ರೋವಾಚ ಸಸ್ಮಿತಃ ।
ಫಲ್ಗುವಾಚಾ ಹರ್ಷಯಂಸ್ತಾನ್ ಸುರಾನ್ ವೀರ್ಯೇಣ ದರ್ಪಿತಃ ॥೩೦॥

ಇತಿ ಶ್ರೀ ತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ಕಾಮೋಪಾಖ್ಯಾನಂ ನಾಮ ದ್ವಾದಶೋಽಧ್ಯಾಯಃ

ಹೇಳಿದ ಮಾತು ಸುಳ್ಳಾಗಲಾರದು. ಅದು ಸತ್ಯವಾದುದೇ. ನನಗೆ ಸಹಾಯ ಮಾಡುವುದಕ್ಕಾಗಿ ನೀನು ಸಾಕ್ಷಾತ್ಪರಮೇಶ್ವರಿಯಾದ ಲಕ್ಷ್ಮಿಯ ಮನಸ್ಸಿನಿಂದಲೇ ಉತ್ಪನ್ನನಾಗಿದ್ದೀಯೆ. ನೀನು ಸಾಕ್ಷಾತ್ ವಿಷ್ಣುವಿನ ಹೆಂಡಿತಿಯಾದ ಲಕ್ಷ್ಮಿಯ ಶರೀರದಿಂದ ಹುಟ್ಟಿದವನೂ ಆಗಿದ್ದೀಯೆ. ನಿನ್ನಿಂದ ಸಾಧಿಸಲು ಅಶಕ್ಯವಾದು ದೇನಿದೆ? ಮನುಷ್ಯರು ನಮ್ಮನ್ನುದ್ದೇಶಿಸಿ ಯಾಗಮಾಡುವಂತೆ ಮಾಡುವುದು ನಿನ್ನ ಕರ್ತವ್ಯವಾಗಿದೆ.'' ಎಂದು ಹೇಳಿದನು. ||೨೬-೨೭-೨೮||

"ಎಲೈ ಮನ್ಮಥನೇ, ನಾನು ಮೂರು ಲೋಕಗಳಿಗೂ ಅಧಿಪತಿಯಾಗಿರಲು ನೀನು ಸಹಾಯಕನಾಗಬೇಕು. ಭೂಮಿಯಲ್ಲಿರುವ ಮನುಷ್ಯರು ನಮಗೆ ಪಶು ಗಳಂತೆ ಸೇವಕರಾಗಿ, ನಾವು ಅವರನ್ನು ಆಳುವಂತಾಗಬೇಕು'' ಹೀಗೆ ಇಂದ್ರನು ಹೇಳಿದ ಮಾತನ್ನು ಕೇಳಿ ಮನ್ಮಥನು ಮುಗುಳ್ನಗೆಯಿಂದ ಕೂಡಿ, ಚಮತ್ಕಾರವಾದ ಮಾತಿನಿಂದ ದೇವತೆಗಳನ್ನೆಲ್ಲರನ್ನೂ ಸಂತೋಷಪಡಿಸುವವನಾಗಿ ತನ್ನ ವೀರ್ಯ ದಿಂದ ದರ್ಪವುಳ್ಳವನಾಗಿ ಹೇಳಿದನು. ||೨೯-೩೦||

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಕಾಮೋಪಾಖ್ಯಾನದಲ್ಲಿ ಹನ್ನೆರಡನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ತ್ರಯೋದಶೋಽಧ್ಯಾಯಃ ||

ಹದಿಮೂರನೆಯ ಅಧ್ಯಾಯವು

ಪುರಂದರ ಗತೋಽಹಂ ತೇ ಕಾರ್ಯಸಿದ್ಧ್ಯೈ ನ ತನ್ಮೃಷಾ ।
ಏಕಲೋಽಹಂ ವಿಜಿತ್ಯಾಽಶು ಕರೋಮಿ ತ್ವದ್ವಶೇನರಾನ್ ॥೧॥

ಇತ್ಯುಕ್ತ್ವಾ ಧನುರಾದಾಯ ನಿಷಙ್ಗಞ್ಚ ಮಹತ್ತರಂ ।
ಪಶ್ಯತಾಂ ಸರ್ವದೇವಾನಾಂ ಭುವಮಾಕ್ರಾಂತವಾನ್ ರುಷಾ ॥೨॥

ಪದ್ಮಕಿಂಜಲ್ಕಸಂಕಾಶಃ ಪದ್ಮಪತ್ರನಿಭೇಕ್ಷಣಃ ।
ಫುಲ್ಲಪದ್ಮ ಸಮಾನಾಽಸ್ಯಃ ಪಕ್ವಬಿಂಬರದಚ್ಛದಃ ॥೩॥

ಕುಂಡಲಪ್ರೋಲ್ಲಸದ್ಗಂಡಃ ರತ್ನಕೋಟೀರಶೋಭಿತಃ ।
ಕೋಮಲಾಂಗೋ ದೀರ್ಘಬಾಹುಃ ಪೀತಾಂಬರಲಸತ್ಕಟಿಃ ॥೪॥

ಓ ಇಂದ್ರನೇ, ನಿನ್ನ ಕಾರ್ಯಸಿದ್ಧಿಗಾಗಿ ಇಗೋ ಹೊರಟೆ, ಇದು ಸುಳ್ಳಲ್ಲ. ನಾನು ಏಕಾಕಿಯಾಗಿಯೇ ಮನುಷ್ಯರನ್ನು ಜಯಿಸಿ ಶೀಘ್ರದಲ್ಲಿಯೇ ಅವರನ್ನು ನಿನ್ನ ಅಧೀನರನ್ನಾಗಿ ಮಾಡುತ್ತೇನೆ. ಹೀಗೆ ಹೇಳಿ ಮನ್ಮಥನು ದೊಡ್ಡದಾದ ಧನುಸ್ಸು ಮತ್ತು ಬತ್ತಳಿಕೆಗಳನ್ನು ತೆಗೆದುಕೊಂಡು, ಎಲ್ಲಾ ದೇವತೆಗಳು ನೋಡುತ್ತಿರುವಾಗಲೇ ಕೋಪದಿಂದ ಭೂಲೋಕವನ್ನು ಆಕ್ರಮಿಸಿದನು. ಆಗ ಅವನು ಕಮಲದ ಕೇಸರವನ್ನು ಹೋಲುವವನಾಗಿಯೂ, ಕಮಲದಳಗಳನ್ನು ಹೋಲುವ ಕಣ್ಣುಗಳುಳ್ಳವನಾಗಿಯೂ, ಅರಳಿದ ಕಮಲಕ್ಕೆ ಸಮಾನವಾದ ಮುಖವುಳ್ಳವನಾಗಿಯೂ, ಪಕ್ವವಾದ ತೊಂಡೆಹಣ್ಣುಗಳನ್ನು ಹೋಲುವ ತುಟಿಗಳುಳ್ಳವನಾಗಿಯೂ ಇದ್ದನು. ||೧-೨-೩||

ಮನ್ಮಥನು ಕುಂಡಲಗಳಿಂದ ಪ್ರಕಾಶಮಾನವಾದ ಕಪೋಲಪ್ರದೇಶಗಳುಳ್ಳವನಾಗಿಯೂ, ರತ್ನಮಯವಾದ ಕಿರೀಟದಿಂದ ಶೋಭಿಸುವವನಾಗಿಯೂ, ಕೋಮಲ

ವಾಮಹಸ್ತಲಸಚ್ಚಾಪೋ ದಕ್ಷಹಸ್ತಾಽತ್ತಸಾಯಕಃ ।
ಆ ಮರ್ಷಸಭ್ರುಕುಟಿಲಃ ಕುಮಾರಃ ಪಂಚಹಾಯನಃ ॥೫॥

ಜಗಾಮ ಪೃಥಿವೀಮಧ್ಯೇ ಪಶ್ಯತಾಂ ನಯನೋತ್ಸವಃ ।
ಇಂದ್ರೋಽಪಿ ಸ್ವಗಣೈರ್ದ್ರಷ್ಟುಂ ಕೃತ್ಯಂ ಕಾಮಸ್ಯ ದುಷ್ಕರಂ ॥೬॥

ಐರಾವತಂ ಸಮಾರುಹ್ಯ ವಜ್ರಹಸ್ತಃ ಸಮಾಯಯೌ ।
ಅನ್ಯೇಽಪಿ ದೇವಾ ಋಷಯಃ ಸಿದ್ಧವಿದ್ಯಾಧ್ರಕಿನ್ನರಾಃ ॥೭॥

ಗಗನೇ ಸಂಸ್ಥಿತಾಸ್ತತ್ರ ಯತ್ರ ಕಾಮೋ ಭುವಿ ಸ್ಥಿತಃ ।
ಅಥ ಕಾಮೋ ನರಾನ್ ಪ್ರಾಹ ಸಮಾಹೂಯ ರುಷಾ ವಚಃ ॥೮॥

ಭೋ ನರಾಃ ಶೃಣುತಾಽಜ್ಞಾಂ ಮೇ ಭವಂತಃ ಸರ್ವ ಏವ ಹಿ ।
ಯಜಂತು ದೇವಾನ್ ಶಕ್ರಾದೀನ್ನ ಚೇಚ್ಛಾಸ್ಯಾ ಹಿ ಮೇ ನರಾಃ ॥೯॥

ಗಳಾದ ಅವಯವಗಳುಳ್ಳವನಾಗಿಯೂ, ಉದ್ದವಾದ ತೋಳುಗಳುಳ್ಳವನಾಗಿಯೂ, ಪೀತಾಂಬರದಿಂದ ಪ್ರಕಾಶಮಾನವಾದ ಸೊಂಟವುಳ್ಳವನಾಗಿಯೂ, ಎಡಗೈಯಲ್ಲಿ ಪ್ರಕಾಶಮಾನವಾದ ಬಿಲ್ಲುಳ್ಳವನಾಗಿಯೂ, ಬಲಗೈಯಲ್ಲಿ ಬಾಣವನ್ನು ಹಿಡಿದಿರುವವನಾಗಿಯೂ, ಕೋಪದಿಂದ ಹುಬ್ಬು ಗಂಟಿಕ್ಕಿದವನಾಗಿಯೂ, ಐದು ವರ್ಷದ ಬಾಲಕನಾದ ಇವನು ಪ್ರಕಾಶಿಸುತ್ತಿದ್ದನು. ಇವನು ನೋಡುವವರ ನೇತ್ರಗಳಿಗೆ ಆನಂದವನ್ನುಂಟುಮಾಡುವವನಾಗಿ ಭೂಮಿಯ ಮಧ್ಯಪ್ರದೇಶವನ್ನು ಪ್ರವೇಶಿಸಿದನು. ಇಂದ್ರನೂ ಕೂಡ ಸ್ವರ್ಗಲೋಕದ ದೇವತೆಗಳೊಂದಿಗೆ ಮನ್ಮಥನ ಅಸಾಧಾರಣವಾದ ಕಾರ್ಯವನ್ನು ನೋಡಲು ಹೊರಟನು. ॥೪-೫-೬॥

ಇಂದ್ರನು ವಜ್ರಾಯುಧ ಧಾರಿಯಾಗಿ ಐರಾವತವೆಂಬ ಆನೆಯ ಮೇಲೆ ಕುಳಿತು, ಮನ್ಮಥನ ಭೂಲೋಕವಿಜಯವನ್ನು ನೋಡಲು ಬಂದಿದ್ದನು. ಭೂಮಿಯಲ್ಲಿ ಮನ್ಮಥನು ವಿಜಯಾರ್ಥವಾಗಿ ನಿಂತಿರುವ ಪ್ರದೇಶಕ್ಕೆ ನೇರವಾಗಿ ಆಕಾಶದಲ್ಲಿ ಇತರ ದೇವತೆಗಳು ಋಷಿಗಳು, ಸಿದ್ಧರು, ವಿಧ್ಯಾಧರರು, ಕಿನ್ನರರು, ಇವರೆಲ್ಲರೂ ನೋಡುತ್ತಾ ನಿಂತಿದ್ದರು. ಅನಂತರ ಮನ್ಮಥನು ಮನುಷ್ಯರನ್ನು ಕೋಪದಿಂದ ಈ ರೀತಿ ಹೇಳಿದನು—“ಎಲೈ ಮನುಷ್ಯರೇ, ನೀವೆಲ್ಲರೂ ನನ್ನ ಅಪ್ಪಣೆಯನ್ನು ಪಾಲಿಸಬೇಕು ; ಅದೇನೆಂದರೆ, ನೀವೆಲ್ಲರೂ ಇಂದ್ರಾದಿದೇವತೆಗಳನ್ನುದ್ದೇಶಿಸಿ

ಏತದ್ವಾಕ್ಯಂ ಸಮಾಕರ್ಣ್ಯ ಜನಾ ಜಹಸುರುಚ್ಚಕೈಃ ।
ನೂನಂ ಸ್ತನಂಧಯಃ ಕಸ್ಯಾಽಪ್ಯಯಂ ಸ್ಯಾತ್ಕ್ರೀಡನೇ ರತಃ ॥೧೦॥

ವದಂತ ಏವ ಮನ್ಯೋನ್ಯಂ ಜನಾಸ್ತತ್ರೌ ಭಗೇಕ್ಷಕಾಃ ।
ಅಹೋ ಧನ್ಯತಮಾ ಚಾಽಸ್ಯ ಜನನೀ ಯದಪತ್ಯಕಂ ॥೧೧॥

ಈದೃಗ್ವಿಧಂ ಸು ಚಾರ್ವಂಗಂ ನಯನಾಽಕರ್ಷಣಂ ಪ್ರಿಯಂ ।
ನೈವಂ ವಿಧಃ ಶಿಶುಃ ದೃಷ್ಟೋ ಭುವಿ ಕಸ್ಯಾಽಪಿ ಕೇನಚಿತ್ ॥೧೨॥

ಕೋಽಪ್ಯಯಂ ರಾಜತನಯೋ ನೇದೃಶಃ ಪ್ರಾಕೃತೋ ಭವೇತ್ ।
ಇತ್ಯೇವಂ ವದತಾಂ ತೇಷಾಂ ಜನಾನಾಂ ಸ ರಮಾಸುತಃ ॥೧೩॥

ವಿಸ್ಮಾಪಯನ್ನುವಾಚೋಚ್ಚೈಃ ಶೃಣ್ವತಾಂ ವಸುಧೌಕಸಾಂ ।
ಭೋ ನರಾ ಮಾಂ ಪ್ರಾಕೃತಕಂ ನ ಜಾನೀಥ ಕುಮಾರಕಂ ॥೧೪॥

ಯಾಗಾದಿರೂಪವಾದ ಸೇವೆಯನ್ನು ಮಾಡಬೇಕು. ಹಾಗೆ ಮಾಡದಿದ್ದರೆ ನೀವೆಲ್ಲರೂ ನನ್ನ ಶಿಕ್ಷೆಗೆ ಒಳಗಾಗುವಿರಿ. ಮನ್ಮಥನ ಈ ಮಾತನ್ನು ಕೇಳಿ ಜನರೆಲ್ಲರೂ ಗಟ್ಟಿಯಾಗಿ ನಕ್ಕರು. ಮತ್ತು ಅವರು "ಇವನು ಯಾವನೋ ಒಬ್ಬ ಹುಡುಗತನದ ಶಿಶುವಾಗಿದ್ದಾನೆ. ಬಹುಶಃ ಆಟಕ್ಕಾಗಿ ಹೀಗೆ ಹೇಳುತ್ತಿರಬೇಕು. ಎಂದುಕೊಂಡರು. ||೭-೮-೯-೧೦||

ಹೀಗೆ ಜನಗಳು ಪರಸ್ಪರ ಹೇಳಿಕೊಳ್ಳುತ್ತಾ ಅವನ ಸೌಂದರ್ಯವನ್ನು ಗಮನಿಸಿ ಅಭಿನಂದನಮಾಡುತ್ತಿದ್ದರು. "ಇವನ ತಾಯಿಯು ನಿಜವಾಗಿಯೂ ಧನ್ಯಳೇ! ಏಕೆಂದರೆ ಇಂಥಾ ಅತ್ಯಂತ ಮನೋಹರನಾದ, ಕಣ್ಮನಗಳಿಗೆ ಮೋಹಕನಾದ, ಪ್ರೀತಿಯನ್ನು ಹುಟ್ಟಿಸುವ ಮಗನನ್ನು ಆಕೆಯು ಪಡೆದಿದ್ದಾಳೆ. ಭೂಮಿಯಲ್ಲಿ ಎಲ್ಲಿಯೂ ಯಾರ ಶಿಶುವೂ ಇಷ್ಟು ಸುಂದರವಾಗಿರುವುದನ್ನು ನಾವು ನೋಡಿಲ್ಲ. ಇವನು ಯಾವನೋ ಒಬ್ಬ ರಾಜಕುಮಾರನಾಗಿರಬಹುದು. ಇಷ್ಟು ಸುಂದರವಾದ ಶಿಶುವು ಸಾಧಾರಣ ಮನುಷ್ಯನಿಗೆ ಸಂಬಂಧಪಟ್ಟದ್ದಲ್ಲ" ಹೀಗೆ ಮಾತನಾಡಿಕೊಳ್ಳುತ್ತಿರುವ ಆ ಜನರನ್ನು ಲಕ್ಷ್ಮೀಪುತ್ರನಾದ ಮನ್ಮಥನು ಆಶ್ಚರ್ಯಗೊಳಿಸಿದನು. ||೧೧-೧೨-೧೩||

ಹೀಗೆ ಮನ್ಮಥನು ಜನರನ್ನು ಆಶ್ಚರ್ಯಗೊಳಿಸುತ್ತಾ, ಭೂಲೋಕವಾಸಿಗಳಾದ ಜನರನ್ನು ಕುರಿತು "ಎಲೈ ಮನುಷ್ಯರೇ, ನನ್ನನ್ನು ಸಾಧಾರಣನಾದ

ಅಹಂ ಪದ್ಮಾಲಯಾಸೂನುರಾಗತೋ ಮಾತೃಶಾಸನಾತ್ ।
ವಿಧಾತುಂ ವೋ ನಿರ್ಜರಾಣಾಂ ಸರ್ವಾನ್ ಮರ್ತ್ಯಾನ್ ವಶಂವದಾನ್॥೧೫॥

ಸಾಮ್ನಾಽಥವಾಽಪಿದಂಡೇನ ಕರೋಮಿ ವಶವರ್ತಿನಃ ।
ದೇವಾನಾಂ ನಾಽತ್ರ ಸಂದೇಹೋ ಮತಂ ವೋ ವದಥಾಽಶು ನೋ ॥೧೬॥

ಏವಂ ವಚಃ ಸಮಾಕರ್ಣ್ಯ ಪ್ರೋಚುಸ್ತೇ ವಿಸ್ಮಿತಾ ಜನಾಃ ।
ಕುಮಾರ ಶೃಣು ನೋ ವಾಕ್ಯಂ ಕಿಮರ್ಥಂ ದೇವತಾವಶೇ ॥೧೭॥

ಸ್ಥಾಸ್ಯಾಮಸ್ತೇ ಕುತೋಽಸ್ಮಾಕಂ ನ ತಿಷ್ಠಂತಿ ವಶೇ ಸುರಾಃ ।
ಯಥಾಽಸ್ಮಾಭಿರ್ನ ಕೃತ್ಯಂ ವೈ ತೇಷಾಂ ತೈರಪಿ ನಸ್ತಥಾ ॥೧೮॥

ಅನ್ಯಚ್ಚಾಪ್ಯವಗಚ್ಛ ತ್ವಂ ರಾಜಾ ನೋ ಮಾನವಃ ಪ್ರಭುಃ ।
ವೀರವ್ರತೋಽಯಮಧ್ಯಾಸ್ತೇ ಬ್ರಹ್ಮಾವರ್ತೇ ತು ಸಂಪ್ರತಿ ॥೧೯॥

ವಶಂವದಾಸ್ತಸ್ಯ ವಯಂ ಸ ನಃ ಪಾಲಯಿತಾ ಪ್ರಭುಃ ।
ನ ತವಾಽಜ್ಞಾಂ ಕರಿಷ್ಯಾಮ ಏಕಾಽಜ್ಞಾವಶವರ್ತಿನಃ ॥೨೦॥

ಬಾಲಕನೆಂದು ತಿಳಿಯಬೇಡಿ. ತಾಯಿಯ ಅಪ್ಪಣೆಯಂತೆ ಇಲ್ಲಿ ಬಂದಿರುವ ಲಕ್ಷ್ಮೀ ಕುಮಾರನಾಗಿದ್ದೇನೆ. ಮನುಷ್ಯರಾದ ನಿಮ್ಮೆಲ್ಲರನ್ನೂ ದೇವತೆಗಳ ಅಧೀನರನ್ನಾಗಿ ಮಾಡಲು ನಾನು ಬಂದಿದ್ದೇನೆ. ನಾನು ನಿಮ್ಮನ್ನು ಸಾಮ ಅಥವಾ ದಂಡೋಪಾಯ ಗಳಿಂದ ದೇವತೆಗಳಿಗೆ ಅಧೀನರನ್ನಾಗಿ ಮಾಡುವೆನೆಂಬುದರಲ್ಲಿ ಸಂದೇಹವಿಲ್ಲ. ಈಗ ನಿಮ್ಮ ಅಭಿಪ್ರಾಯವೇನೆಂಬುದನ್ನು ತಿಳಿಸಿ. ||೧೪-೧೫-೧೬||

ಹೀಗೆ ಮನ್ಮಥನು ಹೇಳಿದ ಮಾತನ್ನು ಕೇಳಿ, ಆ ಜನರು ಬಹಳ ಆಶ್ಚರ್ಯ ದಿಂದ ಕೂಡಿದವರಾಗಿ ಅವನನ್ನು ಕುರಿತು ಈ ರೀತಿಯಾಗಿ ಹೇಳಿದರು. “ ಎಲೈ ಬಾಲಕನೇ, ನಮ್ಮ ಮಾತನ್ನು ಕೇಳು. ನಾವು ಏಕೆ ದೇವತೆಗಳಿಗೆ ಅಧೀನರಾಗ ಬೇಕು ? ದೇವತೆಗಳೇಕೆ ನಮ್ಮಲ್ಲಿ ಅಧೀನರಾಗಿರಬಾರದು ? ನಮ್ಮಿಂದ ಅವರಿಗೆ ಹೇಗೆ ಏನೂ ಪ್ರಯೋಜನವಾಗಬೇಕಾಗಿಲ್ಲವೋ, ಹಾಗೆ ಅವರಿಂದ ನಮಗೂ ಏನೂ ಆಗಬೇಕಾಗಿಲ್ಲ. ಅಲ್ಲದೆ ನಮ್ಮ ಸ್ವಾಮಿಯೂ ರಾಜನೂ ಆದವನು ಮಾನವನು. ಈಗ ಆತನು ಬ್ರಹ್ಮಾವರ್ತದಲ್ಲಿ ವೀರವ್ರತನೆಂದು ಪ್ರಸಿದ್ಧನಾಗಿದ್ದಾನೆ. ||೧೭-೧೮-೧೯||

“ ಆ ದೊರೆಗೆ ನಾವು ಅಧೀನರು ? ಅವನು ನಮಗೆ ರಕ್ಷಕನು. ಒಬ್ಬನ

ಇತ್ಥಂ ಬ್ರುವತ್ಸು ಮರ್ತ್ಯೇಷು ಕ್ರೋಧಾರುಣಿತಲೋಚನಃ ।
ಅಸ್ತ್ರಜಾಲೇನ ತಾನ್ಮರ್ತ್ಯಾನ್ ಬಬಂಧಾದ್ಭುತವಿಕ್ರಮಃ ॥೨೧॥

ಏತಸ್ಮಿನ್ನಂತರೇ ತತ್ರ ಕರ್ಣಾತ್ಕರ್ಣಂ ನಿಶಮ್ಯ ತತ್ ।
ಸಮಾಗತಾ ರಾಷ್ಟ್ರಪಾಲಾಃ ಕೋಟಿಶಃ ಪ್ರೋದ್ಯತಾಯುಧಾಃ ॥೨೨॥

ತಾನ್ ದೃಷ್ಟ್ವಾ ಪುನರೇವೈಷಃ ಕ್ರೋಧಾಗ್ನಿಜ್ವಲಿತಾಕೃತಿಃ ।
ಶರಾನ್ ಧನುಷಿ ಸಂಧಾಯ ಪದೈಕಮಪಿ ನಾಚಲತ್ ॥೨೩॥

ತಂ ದೃಷ್ಟ್ವಾ ಸುಂದರಂ ಬಾಲಂ ವಿಸ್ಮಾಪನಪರಾಕ್ರಮಮ್ ।
ಪ್ರಾಹುಸ್ತಂ ರಾಷ್ಟ್ರಪಾಲಾಸ್ತೇ ದರ್ಪಮಾನೋದ್ಧತಂ ವಚಃ ॥೨೪॥

ರೇ ಕುಮಾರಕ ಮಾ ನಾಶಮುಪೇಹ್ಯದ್ಯ ಬಲಾತ್ಸ್ವಯಮ್ ।
ಪತಂಗ ಇವ ದಾವಾಗ್ನಿಮಸ್ಮತ್ಕ್ರೋಧೇಣ ಸಂಗತಃ ॥೨೫॥

ಆಜ್ಞೆಗೆ ಅಧೀನರಾದ ನಾವು ನಿನ್ನ ಅಪ್ಪಣೆಯನ್ನು ನಡೆಸುವುದಿಲ್ಲ." ಹೀಗೆ ಆ ಮನುಷ್ಯರು ಹೇಳಲಾಗಿ, ಕೋಪದಿಂದ ಕೆಂಪೇರಿದ ಕಣ್ಣುಗಳುಳ್ಳವನಾಗಿ, ಅದ್ಭುತ ಪರಾಕ್ರಮಶಾಲಿಯಾದ ಮನ್ಮಥನು, ಆ ಮನುಷ್ಯರನ್ನೆಲ್ಲರನ್ನೂ ತನ್ನ ಅಸ್ತ್ರಗಳ ಸಮೂಹದಿಂದ ಕಟ್ಟಿಹಾಕಿದನು. ಈ ಸಂದರ್ಭದಲ್ಲಿ ಕಿವಿಯಿಂದ ಕಿವಿಗೆ ಎಂಬ ರೀತಿಯಲ್ಲಿ ಈ ವಿಚಾರವನ್ನು ಅನೇಕ ದೇಶದ ದೊರೆಗಳು ಕೇಳಿ ಕೋಟಿಸಂಖ್ಯೆಯಲ್ಲಿ ಆಯುಧಗಳನ್ನು ಧರಿಸಿಕೊಂಡು ಅಲ್ಲಿಗೆ ಬಂದುಬಿಟ್ಟರು. ||೨೦-೨೧-೨೨||

ಆ ದೊರೆಗಳನ್ನು ನೋಡಿ ಮನ್ಮಥನು ಕೋಪದಿಂದ ಉರಿಯುತ್ತಿದ್ದನು. ಮತ್ತು ಇವನು ತನ್ನ ಬಿಲ್ಲಿಗೆ ಬಾಣಗಳನ್ನು ಜೋಡಿಸಿಕೊಂಡು ಒಂದು ಹೆಜ್ಜೆಯೂ ಹಿಮ್ಮೆಟ್ಟದೆ ನಿಂತನು. ಆ ರಾಷ್ಟ್ರನಾಯಕರು ಆಶ್ಚರ್ಯಕರವಾದ ಪರಾಕ್ರಮವುಳ್ಳ ಸುಂದರನಾದ ಆ ಬಾಲಕನನ್ನು ನೋಡಿ ಅವನನ್ನು ಕುರಿತು ದರ್ಪ ಮತ್ತು ಅಹಂಕಾರವನ್ನು ತೋರಿಸುವ ಮಾತನ್ನಾಡಿದರು. ||೨೩-೨೪||

"ಎಲೈ ಬಾಲಕನೇ, ಈಗ ನಮ್ಮ ಕೋಪಕ್ಕೆ ಪಾತ್ರನಾಗಿ ನೀನಾಗಿಯೇ ಪತಂಗದ ಹುಳುವು ಕಾಡುಕಿಚ್ಚನ್ನು ಪ್ರವೇಶಿಸಿ ನಾಶವಾಗುವಂತೆ, ನಮ್ಮಿಂದ ಬಲಾತ್ಕಾರವಾಗಿ ನಾಶಕ್ಕೆ ಗುರಿಯಾಗಬೇಡ. ಎಲೈ ಬಾಲನೇ, ನಿನ್ನನ್ನು ಪಡೆದ ತಾಯಿಗೆ

ಆತ್ಮನಾಶಾಯ ಚೋದ್ಯುಕ್ತೋ ವ್ಯರ್ಥಂ ತ್ವಂ ಮಾತೃಶೋಚನ ।
ಏವಂ ತೇಷಾಂ ಮುಪಶ್ರುತ್ಯ ವಚೋ ನೃ ಮರ್ಮಕೃಂತನಂ ॥೨೬॥

ನಾಽಪಶ್ಯತ್ತತ್ರ ಕಿಮಪಿ ರೋಷಾಽಂಧೀಕೃತಲೋಚನಃ ।
ಪ್ರಬುದ್ಧಃ ಕ್ರೋಧಮೂರ್ಛಾಯಾಃ ಕ್ಷಣೇನ ಪ್ರಾಹ ತಾನ್ ಪ್ರತಿ ॥೨೭॥

ವ್ಯರ್ಥಂ ಕತ್ಥಂತಿ ನೃ ಬಾಲಾಃ ನ ಬಾಲೋ ವಯಸಾಽಲ್ಪಕಃ ।
ವೀರ್ಯಾಽಲ್ಪಕೋಽಲ್ಪಮೇಧಾಶ್ಚ ಬಾಲಃ ಪ್ರೋಕ್ತೋ ವಿಚಕ್ಷಣೈಃ॥೨೮॥

ತದ್ವೋ ವೀರ್ಯಂ ಬಲಂ ಶಸ್ತ್ರಂ ಪ್ರದರ್ಶಯತ ಮಾ ಚಿರಂ ।
ಅನಂತರಂ ಮದೀಯಾಽಸ್ತ್ರವೀರ್ಯೋರ್ವಿಪರ್ಗರಿತ ಕೀರ್ತಿಕಾನ್ ॥೨೯॥

ವಿಧಾಸ್ಯಾಮಿ ದ್ರುತಂ ಯುಷ್ಮಾನ್ ವ್ಯರ್ಥಾಂ ವಾಚಂ ವಿಮುಂಚಥ ।
ಅಥೈತದ್ವಾಕ್ಯತೋ ದ್ರಾಕ್(ನೈ)ನುನ್ನಾಸ್ತೇ ರಾಷ್ಟ್ರಪಾಲಕಾಃ ॥೩೦॥

ದುಃಖವನ್ನುಂಟುಮಾಡುವವನಾಗಿ ವ್ಯರ್ಥವಾಗಿ ನಿನ್ನ ನಾಶಕ್ಕೆ ನೀನೇ ಸಿದ್ಧನಾಗುತ್ತಿದ್ದೀಯೆ. ಹೀಗೆ ಧೊರೆಗಳು ಹೇಳಿದ ಕರುಳನ್ನು ಕೊಯ್ಯುವ ಮಾತನ್ನು ಕೇಳಿ ಮನ್ಮಥನು ಕೋಪದಿಂದ ಕುರುಡಾದಂತಿರುವ ಕಣ್ಣುಗಳುಳ್ಳವನಾಗಿ ಯಾವುದನ್ನೂ ನೋಡದೆ ಧೀರನಾಗಿ ನಿಂತನು. ಅವನು ಒಂದು ಕ್ಷಣಕಾಲದಲ್ಲಿಯೇ ಕೋಪಾವೇಶದ ಮೂರ್ಛೆಯಿಂದ ಚೇತರಿಸಿಕೊಂಡು ಅವರನ್ನು ಕುರಿತು ಹೀಗೆ ಹೇಳಿದನು—॥೨೫-೨೬-೨೭॥

"ಮೂಢರಾದ ಜನರು ಚಿಕ್ಕವಯಸ್ಸಿನವನನ್ನು ಮಾತ್ರ ಬಾಲನೆಂದು ಕರೆಯುವರು. ಆದರೆ, ಅಲ್ಪವೀರ್ಯವುಳ್ಳ ಮತ್ತು ಅಲ್ಪಬುದ್ಧಿಯುಳ್ಳವನನ್ನು ವಿದ್ವಾಂಸರು ಬಾಲಕನೆಂದು ತಿಳಿಯುತ್ತಾರೆ. ಆದ್ದರಿಂದ ನಿಮ್ಮ ವೀರ್ಯ, ಬಲ, ಶಸ್ತ್ರ ಇವುಗಳ ಸಾಮರ್ಥ್ಯವಿದ್ದರೆ ಅದರ ಪ್ರದರ್ಶನವನ್ನು ಜಾಗ್ರತೆಯಾಗಿ ನನ್ನ ಮುಂದೆ ಮಾಡಿರಿ. ಈ ವ್ಯರ್ಥವಾದ ಮಾತುಗಳಿಂದೇನು ಫಲವು ಬಂದೀತು? ಆಮೇಲೆ ನನ್ನ ಅಸ್ತ್ರಗಳ ಶಕ್ತಿಗೆ ನೀವು ಸಿಕ್ಕಿಬಿದ್ದು ನಿಮ್ಮ ಕೀರ್ತಿಯೆಲ್ಲವೂ ಸ್ವಲ್ಪ ಕಾಲದಲ್ಲಿಯೇ ಅಳಿದು ಹೋಗುವುದು. ಆದ್ದರಿಂದ ಹೀಗೆ ನಿರರ್ಥಕವಾಗಿ ಮಾತನಾಡಬೇಡಿ." ಅನಂತರ ಆ ದೊರೆಗಳೆಲ್ಲರೂ ಇವನ ಮಾತಿನಿಂದ ಪ್ರೇರಿತರಾಗಿ, ॥೨೮-೨೯-೩೦॥

ವವರ್ಷುರಸ್ತ್ರಜಾಲಾನಿ ಸಾಂದ್ರಾಽಽಸಾರಾನಿವಾಽಮ್ಬುದಾಃ ।
ಶಸ್ತ್ರಾಽಸಾರಾಸ್ತೇಽಭಿತಸ್ತಂ ಪತಂತಃ ಪ್ರೋಲ್ಲಸಂತಿ ವೈ ॥೩೧॥

ರಾಕೇಂದೋರ್ಜ್ವಲಿತೋಲ್ಕಾನಾಂ ಸಹಸ್ರಂ ಪತತಾಮಿವ ।
ಆಯಾಂತೀಂ ಶಸ್ತ್ರವೃಷ್ಟಿಂ ಸ ದೃಷ್ಟ್ವಾ ಲಘುಪರಾಕ್ರಮಃ ॥೩೨॥

ಅಸ್ತ್ರವೃಷ್ಟ್ಯಾ ಕ್ಷಣೇನೈಕೋ ನಾಶಯಾಮಾಸ ಸರ್ವತಃ ।
ಖಂಡಿತಾನ್ಯಷ್ಟಧಾ ತೇಷಾಂ ಶಸ್ತ್ರಾಣ್ಯಾಸನ್ ಪೃಥಕ್ ಪೃಥಕ್ ॥೩೩॥

ಶಸ್ತ್ರನೀಹಾರಮುಕ್ತೋಽಥ ಕಾಮೋ ದಿನಮಣಿರ್ಬಭೌ ।
ತದ್ದೃಷ್ಟ್ವಾ ಶಕ್ರಮುಖ್ಯಾಸ್ತಂ ಶಶಂಸುಃ ಸಾಧುಸಾಧ್ವಿತಿ ॥೩೫॥

ಅವಾಕಿರನ್ ಪುಷ್ಪವರ್ಷೈರ್ನಾದಯಂತೋಽಥ ದುಂದುಭೀನ್ ।
ಪುನರ್ದ್ರುತತರಂ ಕಾಮಸ್ತಾನ್ಪ್ರತ್ಯೇಕಂ ಶರೈಸ್ತ್ರಿಭಿಃ ॥೩೫॥

ಮೋಡಗಳು ನೀರಿನ ಧಾರೆಗಳ ಮಳೆಗರೆಯುವಂತೆ, ಆ ದೊರೆಗಳು ಅಸ್ತ್ರ ಸಮೂಹಗಳನ್ನು ಆ ಹುಡುಗನ ಮೇಲೆ ಬಿಟ್ಟರು. ಹೀಗೆ ಆ ಶಸ್ತ್ರಸಮೂಹಗಳು ಅವನ ಸುತ್ತಲೂ ಬಿದ್ದು ವಿಶೇಷವಾದ ಪೂರ್ಣಿಮೆಯ ಚಂದ್ರನಿಂದ ಉರಿಯು ತ್ತಿರುವ ಸಾವಿರಾರು ಕೊಳ್ಳಿಗಳು ಬೀಳುತ್ತಿರುವುವೋ ಎಂಬಂತೆ ಪ್ರಕಾಶಿಸುತ್ತಿದ್ದವು. ಪರಾಕ್ರಮವನ್ನು ತೋರಿಸುವ ಮನ್ಮಥನು ಬರುತ್ತಿರುವ ಶಸ್ತ್ರಗಳ ಸಮೂಹವನ್ನು ನೋಡಿ, ಅವಕ್ಕೆ ಪ್ರತಿಯಾಗಿ ನಿರಾಯಾಸವಾಗಿಯೇ, ಒಂದು ಕ್ಷಣಕಾಲದಲ್ಲಿಯೇ ತಾನೂ ಅಸ್ತ್ರಗಳ ಸಮೂಹಗಳನ್ನು ಎಸೆದು ಅವನ್ನೆಲ್ಲವನ್ನೂ ಎಲ್ಲಾ ಕಡೆಯಲ್ಲಿಯೂ ನಾಶಮಾಡಿದನು. ಮನ್ಮಥನು ಹಾಗೆ ಅಸ್ತ್ರಪ್ರಯೋಗಮಾಡಿದ್ದರಿಂದ ಆ ದೊರೆಗಳ ಶಸ್ತ್ರಗಳೆಲ್ಲವೂ ಎಂಟು ವಿಧವಾಗಿ ಚೂರುಚೂರಾದವು. ಅನಂತರದಲ್ಲಿ ಮನ್ಮಥನೆಂಬ ಸೂರ್ಯನು ಶಸ್ತ್ರಗಳೆಂಬ ಹಿಮದಿಂದ ಮುಕ್ತನಾದನು. ಇಂದ್ರನೇ ಮೊದಲಾದ ದೇವತೆಗಳು ಇದನ್ನು ನೋಡಿ ಬಾಲಕನಾದ ಮನ್ಮಥನನ್ನು "ಭಲೆ, ಭೇಷ್ ಭೇಷ್!" ಎಂದು ಪ್ರಶಂಸೆಮಾಡಿದರು. ॥೩೧-೩೨-೩೩-೩೪॥

ಅನಂತರದಲ್ಲಿ ದೇವತೆಗಳು ಅವನ ಮೇಲೆ ಹೂವಿನ ಮಳೆಗರೆದು ದುಂದುಭಿ ಧ್ವನಿಯನ್ನು ಮಾಡಿದರು. ಪುನಃ ಮನ್ಮಥನು ಅತ್ಯಂತ ಶೀಘ್ರವಾಗಿ ಬೇರೆ ಬೇರೆ ವಿಧವಾದ ಮೂರು ಬಾಣಗಳನ್ನು ಬಿಟ್ಟನು. ಈ ಮನ್ಮಥನ ಬಾಣಗಳ

ವಿವ್ಯಾಧ ಸಮರೇ ತೈಸ್ತೇ ನಾಮಶೇಷತ್ವಮಾಪಿತಾಃ ।
ಕಟಿಬಾಹು ಶಿರೋ ವರ್ಙಿಪ್ರಿಸಾರ್ಶ್ವಕುಕ್ಷಿಷು ದಾರಿತಾಃ ॥೩೬॥

ತೇ ಖಂಡಿತಾಃ ಸಮಭವನ್ ಖಂಡೈಃ ಕೀರ್ಣಾ ವಸುಂಧರಾ ।
ಶೋಣಿತಸ್ರೋತಸಸ್ತತ್ರ ವವುರುಷ್ಣೋದಕಾ ಇವ ॥೩೭॥

ಕೇಶಾಽಽಂತ್ರಶೈವಲಾ ಮೀನೀ ಕೃತಾಂಗುಲಿ ಸಹಸ್ರಕಾಃ ।
ಊಹ್ಯನ್ಮುಂಡಾಽಸಂಖ್ಯಗಣಾಃ ಪಿಶಾಚೋತ್ಸವ ದರ್ಶನಾಃ ॥೩೮॥

ಮರಾಳೀಭೂತ ಕಾಕೌಘಾಃ ತರಂಗೀಭೂತ ಹೇತಿಕಾಃ ।
ಫೇನಿಲೌಘಾ ಮಹಾವೇಗಾ ನಿಮ್ನಾಽವರ್ತ ಶತಾಽಕುಲಾಃ ॥೩೯॥

ಭೀರೂಣಾಂ ಹೃದಯೇ ಕಂಪಂ ವಿದಧತಿ ಪದೇಪದೇ ।
ಏತದತ್ಯದ್ಭುತಂ ದೃಷ್ಟ್ವಾ ಕಾಮಸ್ಯಾಽನೋಘವಿಕ್ರಮಂ ॥೪೦॥

ಪ್ರಯೋಗದಿಂದ ಆ ದೊರೆಗಳೆಲ್ಲರೂ ಯುದ್ಧದಲ್ಲಿ ಕೊಲ್ಲಲ್ಪಟ್ಟು ನಾಮಾವಶೇಷರಾದರು. ಆ ದೊರೆಗಳೆಲ್ಲರೂ ಸೊಂಟಗಳು, ತೋಳುಗಳು, ಶಿರಸ್ಸುಗಳು, ತೊಡೆಯ ಪ್ರದೇಶಗಳು, ಕಾಲುಗಳು ಪಕ್ಕಗಳು, ಹೊಕ್ಕಳು, ಇವೇ ಮುಂತಾದ ಪ್ರದೇಶಗಳಲ್ಲಿ ಸೀಳಲ್ಪಟ್ಟರು. ಅವರ ದೇಹಗಳ ಚೂರುಗಳು ಭೂಮಿಯನ್ನೆಲ್ಲವನ್ನೂ ವ್ಯಾಪಿಸಿದ್ದುವು. ಆಗ ರಕ್ತದ ಕೋಡಿಗಳು, ಬಿಸಿನೀರಿನ ಪ್ರವಾಹದಂತೆ, ಯುದ್ಧಭೂಮಿಯಲ್ಲೆಲ್ಲಾ ಕಡೆಯಲ್ಲೂ ಹರಿಯುತ್ತಿತ್ತು. ॥೩೫-೩೬-೩೭॥

ಕೇಶಗಳು ಮತ್ತು ಕರುಳುಗಳೆಂಬ ಪಾಚಿಗಳುಳ್ಳ, ಮೀನಿನಂತಿರುವ ಸಾವಿರಾರು ಬೆರಳುಗಳುಳ್ಳ, ತೇಲುತ್ತಿರುವ ಮುಂಡಗಳೆಂಬ ಅಸಂಖ್ಯಾತವಾದ ಬುರುಡೆಗಳುಳ್ಳ, ಪಿಶಾಚಿಯ ಉತ್ಸವಗಳ ಪ್ರದರ್ಶನಗಳುಳ್ಳ, ಹಂಸದಂತಿರುವ ಕಾಗೆಗಳ ಸಮೂಹಗಳುಳ್ಳ, ಅಲೆಗಳಂತಿರುವ ಕತ್ತಿಗಳುಳ್ಳ, ನೊರೆಗಳ ಸಮೂಹವುಳ್ಳ, ಬಹಳ ಹೆಚ್ಚಾದ ವೇಗವುಳ್ಳ, ತಗ್ಗಾದ ಪ್ರದೇಶಗಳಲ್ಲಿ ನೂರಾರು ಸುಳಿಗಳನ್ನೊಳಗೊಂಡಿರುವ, ಈ ಯುದ್ಧಭೂಮಿಯಲ್ಲಿ ರಕ್ತದ ಪ್ರವಾಹಗಳು ಹೆದರುವ ಜನರ ಮನಸ್ಸನ್ನು ಪದೇ ಪದೇ ನಡುಗಿಸಿದುವು! ಇಂಥಾ ಅತ್ಯಂತ ಆಶ್ಚರ್ಯಕರವಾದ ಮನ್ಮಥನ ಸಾರ್ಥಕವಾದ ಪರಾಕ್ರಮವನ್ನು ನೋಡಿ ಇಂದ್ರಾದಿಗಳು ಬಹಳ ಸಂತೋಷಗೊಂಡರು. ॥೩೮-೩೯-೪೦॥

ಇಂದ್ರಾದಯೋಽಮರಾಃ ಸ್ವೇಷ್ಟಂ ಸಿದ್ಧಮಿತ್ಯೇವ ಸಂಜಗುಃ ।
ತತ್ರಾಽಂತರೇ ಚಾರಗಣಾಃ ಶ್ರುತ್ವಾ ರಾಜ್ಯಸ್ಯ ವಿಪ್ಲವಮ್ ॥೪೧॥

ವೀರವ್ರತಾಯ ಕಥಿತುಂ ಬ್ರಹ್ಮಾವರ್ತೇ ಸಮಾಗತಾಃ ।
ಪ್ರವಿಶ್ಯ ರಾಜದಾನೀಂ ತೇ ದ್ವಾರಿಕಾನ್ ಪ್ರೋಚುರಞ್ಜಸಾ ॥೪೨॥

ವಿಜ್ಞಾಪಯಂತು ನಃ ಪ್ರಾಪ್ತಾನ್ ಮಹಾರಾಜ್ಞೇ ಯಶಸ್ವಿನೇ ।
ಕಾರ್ಯಮಾತ್ಯಂತಿಕಂ ಹ್ಯಸ್ತಿ ದ್ರುತಂ ನಾತ್ರ ವಿಲಂಬ್ಯತಾಮ್ ॥೪೩॥

ಇತಿ ಶ್ರುತ್ವಾ ಚಾರವಾಕ್ಯಂ ದ್ವಾರಿಕಾಃ ಸಹಸೋತ್ಥಿತಾಃ ।
ಸ್ವನಾಥಾಯ ಜಗುರ್ವೃತ್ತಂ ಚಾರೋಕ್ತಂ ತಂ ನಿಶಮ್ಯ ತು ॥೪೪॥

ದ್ವಾರನಾಥೋ ಮಹಾರಾಜಸನಿಧೇ ವೇಗವತ್ತರಂ ।
ಗತ್ವಾಽಶೀರ್ಭಿರ್ವರ್ಧಯಿತ್ವಾ ಕೃತಾಽಞ್ಜಲಿರುವಾಚ ತಮ್ ॥೪೫॥

ಮನ್ಮಥನ ಈ ಅದ್ಭುತಕಾರ್ಯವನ್ನು ಕಂಡು, ಇಂದ್ರಾದಿಗಳು ತಮ್ಮ ಕಾರ್ಯದ ಸಿದ್ಧಿಯಾಯಿತೆಂದು ಸಂತೋಷದಿಂದ ಹೇಳಿದರು. ಈ ಸಂದರ್ಭದಲ್ಲಿ ಗೂಢಚಾರರ ಸಮೂಹಗಳು, ರಾಜ್ಯವು ಹಾಳಾಗುತ್ತಿರುವುದನ್ನು ಕೇಳಿ ವೀರವ್ರತನಿಗೆ ತಿಳಿಸಲು ಬ್ರಹ್ಮಾವರ್ತಕ್ಕೆ ಬಂದು ಸೇರಿದರು. ಅವರು ರಾಜಧಾನಿಗೆ ಬಂದು ದ್ವಾರಪಾಲಕರನ್ನು ಕುರಿತು "ನೀವು ಶೀಘ್ರವಾಗಿ ನಾವು ಬಂದಿರುವ ವಿಷಯವನ್ನು ಕೀರ್ತಿಶಾಲಿಗಳಾದ ನಮ್ಮ ಮಹಾರಾಜರವರಿಗೆ ತಿಳಿಸಬೇಕು. ಬಹಳ ಆವಶ್ಯಕವಾದ ಕಾರ್ಯವಿದೆ. ಆದ್ದರಿಂದ ನೀವು ವಿಳಂಬಮಾಡದೆ ತಿಳಿಸಿ" ಎಂದು ಹೇಳಿದರು. ||೪೧-೪೨-೪೩||

ಹೀಗೆ ಗೂಢಚಾರರು ಹೇಳಿದ ಮಾತನ್ನು ಕೇಳಿ ದ್ವಾರಪಾಲಕರು ಜಾಗ್ರತೆಯಾಗಿ ಎದ್ದು, ತಮ್ಮ ಯಜಮಾನನಾದ ದ್ವಾರಪಾಲಕನಿಗೆ ಚಾರರು ಹೇಳಿದ ವಿಷಯವನ್ನು ಹೇಳಿದರು. ಚಾರರು ಹೇಳಿದ ವಿಷಯವನ್ನು ಕೇಳಿ, ದ್ವಾರಪಾಲಕರ ಯಜಮಾನನು ಮಹಾರಾಜನ ಸಮೀಪಕ್ಕೆ ಬಹಳ ವೇಗವಾಗಿ ಹೋಗಿ, ಜಯ ಜಯಕಾರಗಳಿಂದ ಅವನ ಶ್ರೇಯಸ್ಸನ್ನು ಹೆಚ್ಚುವಂತೆ ಮಾಡಿ ಕೈಮುಗಿದು ಆತನನ್ನು ಕುರಿತು ಈ ಕೆಳಗೆ ಕಂಡಂತೆವಿಜ್ಞಾಪನೆ ಮಾಡಿಕೊಂಡನು. ||೪೪-೪೫||

ಸಿಂಹಾಸನಗತಂ ಮಂತ್ರಿಮುಖ್ಯೈಃ ಪೌರೈರುಪಾಸಿತಮ್ ।
ಮಂಡಲಾಧಿಪಸಂಘಾತೈ ರ್ದೂತೈರ್ದೇಶಾಂತರಾಗತೈಃ ॥೪೬॥

ಭಟೈಃ ಭಟಾಧಿಪೈಃ ಶೂರೈಃ ಪ್ರತಿಪಕ್ಷ ಕ್ಷಯಂಕರೈಃ ।
ನಿಶಿತೋತ್ಪಾತಸಂವೇಲ್ಲತ್ಕರವಾಲ ಕರೋದ್ಯತೈಃ ॥೪೭॥

ಪರೀತಂ ಹೇಮಶೃಂಗಸ್ಥ ಮೃಗೇಂದ್ರ ಇವ ಸಂಸ್ಥಿತಮ್ ।
ಮಹಾರಾಜ ಯಶಸ್ಸೂರ್ಯಹತಶತ್ರುತಮಿಸ್ರಕ ॥೪೮॥

ಪ್ರಾಪ್ತಾಶ್ಚಾರೈಃ ಸೋಮುದಿಶಃ ಪ್ರೋಚುರಾತ್ಯಂತಿಕಂ ತು ತೈಃ ।
ಅಗ್ರೇ ಯದಾಜ್ಞಾಪಯತಿ ದೇವಸ್ತದ್ವಿಧಾಮ್ಯಹಮ್ ॥೪೯॥

ಇತಿ ಶ್ರುತ್ವಾ ದ್ವಾರನಾಥವಾಕ್ಯಂ ರಾಜೇಙ್ಗಿತಸ್ತತಃ ।
ವರ್ಧನೋ ಮಂತ್ರಿರಾಟ್ ಪ್ರಾಹ ಪ್ರವೇಶಯ ಸ ಮಾಂ ದ್ರುತಂ॥೫೦॥

ದ್ವಾರಪಾಲಪರ ಯಜಮಾನನು ಸಿಂಹಾಸನದ ಮೇಲೆ ಮಂಡಿಸಿರುವ ಮಂತ್ರಿಗಳೇ ಮೊದಲಾದ ಪಟ್ಟಣಿಗರಿಂದ ಸೇವಿಸಲ್ಪಟ್ಟ, ಅನೇಕ ಸಾಮಂತರಾಜರು, ಬೇರೇ ದೇಶಗಳಿಂದ ಬಂದಿರುವ ದೂತರು, ಶತ್ರುಪಕ್ಷವನ್ನು ನಾಶವನ್ನು ಮಾಡಲು ಸಮರ್ಥರಾದ, ತೀಕ್ಷ್ಣವಾಗಿ ಸಾಣೆ ಹಿಡಿದಿರುವುದರಿಂದ ಪ್ರಕಾಶಿಸುತ್ತಿರುವ ಕತ್ತಿಗಳನ್ನು ಹಿಡಿದುಕೊಂಡಿರುವ, ಶತ್ರುಪಕ್ಷವನ್ನು ನಾಶಮಾಡಲು ಸಮರ್ಥರಾದ ಶೂರರಾದ ಸೈನಿಕರು ಮತ್ತು ಸೇನಾನಾಯಕರು ಇವರಿಂದಲೂ ಸುತ್ತುವರಿಯಲ್ಪಟ್ಟಿರುವ, ಚಿನ್ನದ ಶಿಖರದ ಮೇಲೆ ಪ್ರಕಾಶಿಸುತ್ತಿರುವ ಮೃಗರಾಜನಂತೆ, ಗಂಭೀರವಾಗಿ ಕುಳಿತಿರುವ ದೊರೆಯನ್ನು ಸಂದರ್ಶಿಸಿದನು. ಆಗ ಅವನು ದೊರೆಯನ್ನು, " ಓ ಕೀರ್ತಿಯೆಂಬ ಸೂರ್ಯನಿಂದ ನಾಶಮಾಡಲ್ಪಟ್ಟ ಶತ್ರುಗಳೆಂಬ ಕತ್ತಲೆಯುಳ್ಳ ಮಹಾರಾಜನೇ " ಎಂದು ಸಂಬೋಧಿಸಿದನು. ॥೪೬-೪೭-೪೮॥

" ಓ ಮಹಾರಾಜನೇ, ಉತ್ತರ ದಿಕ್ಕಿನಿಂದ ಗೂಢಚಾರರು ಬಂದಿದ್ದಾರೆ. ಅವರು ಅವಶ್ಯಕರ್ತವ್ಯವಾದ ವಿಚಾರವಿದೆಯೆಂದು ಹೇಳುತ್ತಾರೆ. ಸ್ವಾಮಿಯು ಏನನ್ನು ಅಪ್ಪಣೆಮಾಡುತ್ತಾರೋ, ಅದನ್ನು ನಡೆಸಲು ಸಿದ್ಧನಾಗಿದ್ದೇನೆ " ಹೀಗೆ ದ್ವಾರಪಾಲಕರ ಯಜಮಾನನು ಹೇಳಿದ ಮಾತನ್ನು ಕೇಳಿ ಅನಂತರ ರಾಜನ ಇಂಗಿತವನ್ನು ಅರಿತ ವರ್ಧನ, ಎಂಬ ಮಂತ್ರೀಶ್ವರನು " ಅವರನ್ನು ಸಭೆಗೆ ಶೀಘ್ರ

ಆಜ್ಞಪ್ತ ಏವಂ ದ್ವಾರೇಶಶ್ಚಾರಾನ್ ತತ್ರಾಽನಯದ್ದ್ರುತಂ ।
ಚಾರಾ ದೂರಾನ್ಮಹೀಪಾಲಂ ನತ್ವಾ ಬದ್ಧಕರಾಃ ಸ್ಥಿತಾಃ ॥೫೧॥

ತಾನ್ ಪ್ರಾಹ ವರ್ಧನೋಽತ್ಯಂತ ಪ್ರಿಯೋ ರಾಜ್ಞಃ ಪ್ರಿಯೇ ಸ್ಥಿತಃ ।
ಚಾರಾ ನಿರಾಮಯಂ ಕಚ್ಚಿದ್ದೇಶೇಷು ಪ್ರವಿಭಾವಿತಂ ॥೫೨॥

ರಾಷ್ಟ್ರಕೋಶೇಷು ಸೇನಾಸು ಪ್ರಕೃತಿಷ್ವಸ್ತಿ ಸಾಂಪ್ರತಂ ।
ಆತ್ಯಂತಿಕಂ ವಚೋ ರಾಜ್ಞಃ ಪಾದಯೋರ್ವಿನಿವೇದ್ಯತಾಂ ॥೫೩॥

ತನ್ನಿಶಮ್ಯ ನತಾ ಭೂಯ ಶ್ಚಾರಾ ಬದ್ಧಕರಾಂಬುಜಾಃ ।
ನಾಥ ತೇ ವರ್ಧತೇ ಕೀರ್ತಿಸಿತಚಂದ್ರಃ ಪ್ರತಿಕ್ಷಣಂ ॥೫೪॥

ಪರಾಃ ಪಾರಂ ಗತಾಃ ಸದ್ಯೋ ಲೋಕಾಲೋಕಮಹೀಭೃತಃ ।
ಹಿಮವತ್ಪಾರ್ಶ್ವತಃ ಕಶ್ಚಿತ್ಕುಮಾರೋಽರ್ಕಪ್ರತಾಪನಃ ॥೫೫॥

ವಾಗಿ ಬರುವಂತೆ ಹೇಳು" ಎಂದು ದ್ವಾರಪಾಲಕರ ಯಜಮಾನನಿಗೆ ಅಪ್ಪಣೆ ಮಾಡಿದನು. ॥೪೯-೫೦॥

ಹೀಗೆ ಮಂತ್ರೀಶ್ವರನು ಅಪ್ಪಣೆ ಮಾಡಲಾಗಿ ದ್ವಾರಪಾಲಕರ ಯಜಮಾನನು ಆ ಗೂಢಚಾರರನ್ನು ಸಭೆಗೆ ಶೀಘ್ರವಾಗಿ ಕರೆದುಕೊಂಡು ಬಂದನು. ಗೂಢಚಾರರು ದೂರದಲ್ಲಿ ರಾಜನಿಗೆ ನಮಸ್ಕರಿಸಿ ಕೈಜೋಡಿಸಿ ನಿಂತಿದ್ದರು. ರಾಜನಿಗೆ ಅತ್ಯಂತ ಆಪ್ತನೂ ಮತ್ತು ಪ್ರಿಯನೂ ಆದ ವರ್ಧನ ಎಂಬ ಮಂತ್ರಿ ಶ್ರೇಷ್ಠನು ಗೂಢಚಾರರನ್ನು ಕುರಿತು "ಎಲೈ ಗೂಢಚಾರರೇ, ರಾಷ್ಟ್ರಗಳು ಮತ್ತು ಕೋಶಗಳಲ್ಲಿಯೂ ಸೈನ್ಯಗಳಲ್ಲಿಯೂ, ಮತ್ತು ಸಾಮಂತರಾಜರಲ್ಲಿಯೂ, ಯಾವ ವಿಧವಾದ ತೊಡಕುಗಳಿಲ್ಲದೆ ಎಲ್ಲೆಲ್ಲಿಯೂ ಶಾಂತಿಯು ನೆಲಸಿದೆಯೇ? ಈಗ ನೀವು ದೊರೆಗೆ ವಿಜ್ಞಾಪಿಸಬೇಕಾದ ಆವಶ್ಯಕವಾದ ವಿಷಯವನ್ನು ದೊರೆಗೆ ಬಿನ್ನೈಸಿಕೊಳ್ಳಿ." ಎಂದು ಹೇಳಿದನು. ॥೫೧-೫೨-೫೩॥

ಮಂತ್ರಿಯ ಮಾತನ್ನು ಕೇಳಿ ಗೂಢಚಾರರು ಪುನಃ ದೊರೆಗೆ ನಮಸ್ಕರಿಸಿ, ಕಮಲಗಳಂತಿರುವ ಕೈಗಳನ್ನು ಜೋಡಿಸಿಕೊಂಡು, ದೊರೆಯನ್ನು ಕುರಿತು "ಓ ಸ್ವಾಮಿಯೇ, ನಿನ್ನ ಕೀರ್ತಿಯೆಂಬ ಚಂದ್ರನು ಪ್ರತಿಕ್ಷಣದಲ್ಲಿಯೂ ವೃದ್ಧಿ ಹೊಂದುತ್ತಿದ್ದಾನೆ. ನಿನ್ನ ಕೀರ್ತಿಯೆಂಬ ಚಂದ್ರನ ಅತಿಶುಭ್ರವಾದ ಕಾಂತಿಯು ಅತ್ಯಂತ

ಔತ್ತರಾನಷ್ಟಪಾಲಾನ್ ಸ ನಿಜಘಾನ ಮಹಾರಣೇ ।
ಬದ್ಧಾಃ ಪ್ರಕೃತಯಃ ಸರ್ವಾ ದೇಶೋ ವಿಪ್ಲಾವಿತೋಽದ್ಯ ವೈ ॥೫೬॥

ಸ ಏಕಾಕೀ ಪಞ್ಚಸಮಃ ಕಮಲಾಂಘ್ರಿಕರಾಙ್ಕಕಃ ।
ಹತಾಸ್ತೇನ ಮುಹೂರ್ತೇನ ಕೋಟಿಶೋ ರಾಷ್ಟ್ರನಾಯಕಾಃ ॥೫೭॥

ಏತದ್ವಿಜ್ಞಾಪಿತಂ ದೇವ ಭವಾನಗ್ರೇ ಪರಾಯಣಂ ।
ಇತಿ ತದ್ವಾಕ್ಯಮಾಕರ್ಣ್ಯ ರಾಜಾ ವೀರವ್ರತಸ್ತದಾ ॥೫೮॥

ಪರಾಮೃಶನ್ ಪಾರ್ಶ್ವಸಂಸ್ಥಂ ಚಾಪಶರಧಿಮಾಶು ವೈ ।
ಉತ್ಥಾಯ ನಿರ್ಯಯೌ ಸೋಽಮುಕಾಷ್ಠಾಽಭಿಮುಖತಸ್ತದಾ ॥೫೯॥

ತದಾ ಶೀಘ್ರಂಪುರೋ ಗತ್ವಾ ವರ್ಧನಃ ಪ್ರಣಿಪತ್ಯ ತಂ ।
ಉವಾಚಾಽಮೃತಸಂಸ್ರಾವವಾಕ್ಯಂ ವಾಕ್ಯಜ್ಞಕೋವಿದಃ ॥೬೦॥

ದೂರದಲ್ಲಿರುವ ಲೋಕಾಲೋಕ ಪರ್ವತಗಳ ಅಂಚಿನ ಪ್ರದೇಶಗಳವರಿವಿಗೂ ವ್ಯಾಪಿಸಿ, ಪ್ರಕಾಶಿಸುತ್ತಿದೆ. ಆದರೆ ಸೂರ್ಯನಂತೆ ಪ್ರತಾಪಶಾಲಿಯಾದ ಯಾವನೋ ಒಬ್ಬ ಬಾಲಕನು ಹಿಮವತ್ಪರ್ವತದ ಪಕ್ಕದಲ್ಲಿರುವ ಉತ್ತರದೇಶದ ರಾಷ್ಟ್ರನಾಯಕರನ್ನು ಮಹಾಯುದ್ಧದಲ್ಲಿ ನಾಶಮಾಡಿದನು. ಮತ್ತು ನಿನ್ನ ಎಲ್ಲಾ ಸಾಮಂತರಾಜರು ಅವನಿಂದ ಕಟ್ಟುಹಾಕಲ್ಪಟ್ಟರು ! ಹೀಗೆ ದೇಶದಲ್ಲೆಲ್ಲವೂ ಅನಾಯಕತ್ವವು ತಲೆದೋರಿದೆ. ||೫೪-೫೫-೫೬||

"ಆ ಬಾಲಕನು ಒಬ್ಬನೇ ಆಗಿ ಐದು ವರ್ಷ ವಯಸ್ಸಿನವನಾಗಿದ್ದಾನೆ. ಅವನು ಕಮಲದಂತಿರುವ ಸಣ್ಣ ಕಾಲು ಕೈಗಳುಳ್ಳವನಾಗಿದ್ದಾನೆ. ಅವನು ಒಂದು ಘಳಿಗೆಯಲ್ಲಿಯೇ ಕೋಟ್ಯಾಂತರ ರಾಜರನ್ನು ನಾಶಮಾಡಿದನು. ಹೀಗೆ ನಡೆದ ವಿಷಯವನ್ನು ತಮಗೆ ವಿಜ್ಞಾಪನೆ ಮಾಡಿಕೊಂಡಿದ್ದೇವೆ. ಇನ್ನು ಮುಂದೆ ನಡೆಸಬೇಕಾದ ಕರ್ತವ್ಯವು ಸ್ವಾಮಿಗೆ ವೇದ್ಯವು." ಹೀಗೆ ಗೂಢಚಾರರು ಹೇಳಿದ ಮಾತನ್ನು ಕೇಳಿ ವೀರವ್ರತರಾಜನು ತನ್ನ ಪಕ್ಕದಲ್ಲಿದ್ದ ಧನುಸ್ಸು ಮತ್ತು ಬತ್ತಳಿಕೆಗಳನ್ನು ಶೀಘ್ರದಲ್ಲಿಯೇ ತೆಗೆದುಕೊಂಡು ಉತ್ತರ ದಿಕ್ಕಿನಕಡೆಗೆ ಎದ್ದು ಹೊರಟೇಬಿಟ್ಟನು. ||೫೭-೫೮-೫೯||

ಆಗ ವರ್ಧನನು ಶೀಘ್ರವಾಗಿ ದೊರೆಯ ಮುಂದಕ್ಕೆ ಹೋಗಿ ಆತನಿಗೆ ನಮಸ್ಕರಿಸಿ, ಶ್ರೇಷ್ಠವಾಗ್ಮಿಯಾದ ಇವನು ದೊರೆಯನ್ನು ಕುರಿತು ಅಮೃತವನ್ನು

ಕ್ಷಮ್ಯತಾಂ ನಾಥ ಭಗವನ್ ಸ್ವಯಂ ತಂ ಶುಭಮೇಷ್ಯತಿ ।
ವಿಮೃಶ್ಯಕಾರಿಣಂ ಸಮ್ಯಗಶುಭಂ ದೂರತಸ್ತ್ಯಜೇತ್ ॥೬೧॥

ಮಂತ್ರಿಭಿಃ ಸಹಿತೋ ಮಂತ್ರಂ ಕೃತ್ವಾ ನಿಶ್ಚಿತ್ಯ ಚಾಽಗಮಮ್ ।
ಫಲಾಽವಸಾನಂ ಕರ್ತವ್ಯಂ ವಿಭಜ್ಯ ಸ್ವಮನೀಷಯಾ ॥೬೨॥

ಏವಂ ಬಹು ಪ್ರಾರ್ಥಿತಂ ತನ್ಮಂತ್ರಿಣಾಽಽಕರ್ಣ್ಯ ಭೂಪತಿಃ ।
ಸಭಾಂ ಸಭಾಸದಃ ಪಶ್ಚಾದ್ರಾಜಾನ ಮನು ಯೇ ಗತಾಃ ॥೬೩॥

ಪಂಚಾಶದಕ್ಷೌಹಿಣೀಪಾಃ ರಾಜ್ಞೋಽಗ್ರೇ ದೂರತೋ ಗತಾಃ ।
ಸಸೇನಾಸ್ತಾನ್ ವರ್ಧನಸ್ತು ಸಂನ್ಯವರ್ತಯತ ದ್ರುತಂ ॥೬೪॥

ಪುನಃ ಸಭಾಂ ಸಮಾಗಮ್ಯ ನಾನಾರತ್ನೋಜ್ಜ್ವಲಾಂತದಾ ।
ಆಸೀನಾಃ ಸ್ವ ಸ್ವಸಂಸ್ಥಾನೇ ರಾಜ್ಞಾಸಹ ಸಭಾಸದಃ ॥೬೫॥

ಸುರಿಸುವಂಥಾ ಮಾತುಗಳನ್ನಾಡಿದನು. "ಓ ಪೂಜ್ಯನಾದ ಸ್ವಾಮಿಯೇ, ಕ್ಷಮಿಸಬೇಕು. ವಿಚಾರಮಾಡಿ ಕೆಲಸಕ್ಕೆ ತೊಡಗುವವನಿಗೆ ಮಂಗಳವುಂಟಾಗಿ ಅಮಂಗಳವೆಲ್ಲವೂ ನಾಶವಾಗುವುವು. ರಾಜನು ಮಂತ್ರಿಗಳ ಜೊತೆಯಲ್ಲಿ ಮಂತ್ರಾಲೋಚನೆಯನ್ನು ಮಾಡಿ ತಾನೂ ಸಹ ಕೊನೆಯಲ್ಲಿ ಯೋಚಿಸಿ ರಾಜ್ಯಶಾಸ್ತ್ರಕ್ಕೆ ಅನುಸಾರವಾದ ಮಾರ್ಗದಲ್ಲಿ ಒಳ್ಳೆಯ ಫಲವನ್ನೇ ಕೊಡುವ ರೀತಿಯಲ್ಲಿ ಯುದ್ಧಾದಿರೂಪ ಕಾರ್ಯದಲ್ಲಿ ತೊಡಗಬೇಕು. ॥೬೦-೬೧-೬೨॥

ಮಂತ್ರಿಯು ಹೀಗೆ ಬಹಳ ಪ್ರಾರ್ಥಿಸಿದ್ದರಿಂದ ಧೊರೆಯು ಅವನ ಮಾತನ್ನು ಉಪೇಕ್ಷಿಸಲಾರದೆ ಹೋದನು. ಅನಂತರ ವರ್ಧನನು, ಹಿಂದೆ ಯುದ್ಧಕ್ಕಾಗಿ ಹೊರಟಿದ್ದ ರಾಜನನ್ನು ಅನುಸರಿಸಿದ್ದ ರಾಜನ ಆಸ್ಥಾನಿಕರನ್ನೂ ಮತ್ತು ಇತರ ಅವನ ಪರಿವಾರದವರನ್ನೂ, ಹದಿನೈದು ಅಕ್ಷೋಹಿಣೀ ಸೈನ್ಯನಾಯಕರಾದ ರಾಜರನ್ನು ಸೇನಾಸಮೇತವಾಗಿ ರಾಜನ ಸಭೆಯ ಹತ್ತಿರಕ್ಕೆ ಶೀಘ್ರವಾಗಿ ಹಿಂತಿರುಗಿಸಿದನು. ರಾಜರೂ ಮತ್ತು ಇತರ ಸಭಿಕರೂ ಪುನಃ ಅನೇಕ ವಿಧವಾದ ರತ್ನಗಳಿಂದ ಪ್ರಕಾಶಿಸುತ್ತಿದ್ದ ರಾಜನ ಸಭೆಯನ್ನು ಸೇರಿ ತಂತಮ್ಮ ಪೀಠಗಳಲ್ಲಿ ಕುಳಿತುಕೊಂಡರು. ॥೬೩-೬೪-೬೫॥

ಅನಂತರಂ ಮಹಾರಾಜಂ ವರ್ಧನಃ ಪ್ರಾಹ ಸಾಂತ್ವಯನ್ ।
ಆಕರ್ಣಯ ಮಹಾರಾಜ ಸಮಾಧಾಯ ಮನೋ ವಚಃ ॥೬೬॥

ದಂಡನೀತಿಮುಪಾಶ್ರಿತ್ಯ ರಾಜಾನಃ ಸುಖಭಾಗಿನಃ ।
ವಿಮೃಶ್ಯಕಾರೀ ತತ್ರಾಽದೌ ಶ್ಲಾಘಿತಸ್ತೇನ ವಚ್ಮ್ಯಹಮ್ ॥೬೭॥

ರಾಜ್ಞಾ ವಿಮೃಶ್ಯ ಕರ್ತವ್ಯಂ ಸರ್ವಂ ಸಮ್ಯಕ್ ಸುಮಂತ್ರಿಭಿಃ ।
ಸಾಮ ದಾನಂ ಭೇದ ದಂಡೌ ಪ್ರೋಕ್ತಾ ನೀತಾವುಪಾಯಕಾಃ ॥೬೮॥

ಪೂರ್ವ ಪೂರ್ವಾಽಸಂಭವೇತು ತತ್ರಸ್ಯಾದುತ್ತರೋತ್ತರಂ ।
ಅತ್ರಾಽರ್ಹಃ ಕತಮೋಪಾಯೋ ಭವೇದ್ವಿಮೃಶ ಮಂತ್ರಿಭಿಃ ॥೬೯॥

ಕ್ವಚಿದ್ವಿಮರ್ಶರಹಿತಂ ಕರ್ತವ್ಯಂ ಸವಿಧೋದ್ಭವೇ ।
ಅಂತರಯತಿ ತತ್ರಾಽಪಿ ಸ್ಯಾತ್ತರ್ಹಿ ತದಪೀಷ್ಯತೇ ॥೭೦॥

ಅನಂತರ ವರ್ಧನನು ಮಹಾರಾಜನನ್ನು ಸಮಾಧಾನಗೊಳಿಸುತ್ತಾ ಅವನನ್ನು ಕುರಿತು "ಓ ಮಹಾರಾಜನೇ, ಸಮಾಧಾನದಿಂದ ತಾವು ದಯವಿಟ್ಟು ನನ್ನ ಮಾತನ್ನು ಲಾಲಿಸಬೇಕು. ರಾಜರು ರಾಜನೀತಿಗೆ ಅನುಸಾರವಾಗಿ ವರ್ತಿಸಿಯೇ ಸುಖವನ್ನು ಅನುಭವಿಸುವರು. ಹೀಗೆ ವಿಮರ್ಶೆಯಿಂದ ಕಾರ್ಯಗಳನ್ನು ಕೈಗೊಳ್ಳುವವನೇ ರಾಜರಲ್ಲಿ ಅಗ್ರಗಣ್ಯನು, ಎಂದು ಪ್ರಶಂಸಿಸಲ್ಪಟ್ಟಿದ್ದಾನೆ. ಆದ್ದರಿಂದ ರಾಜನು ಶ್ರೇಷ್ಠಮಂತ್ರಿಗಳ ಜೊತೆಯಲ್ಲಿ ವಿಮರ್ಶಿಸಿಯೇ ಕರ್ತವ್ಯಗಳನ್ನು ಮಾಡಬೇಕು. ರಾಜನೀತಿಯಲ್ಲಿ ಸಾಮ, ದಾನ, ಭೇದ, ದಂಡಗಳೆಂಬ ನಾಲ್ಕು ಕಾರ್ಯಸಿದ್ಧಿಯ ಉಪಾಯಗಳು ಹೇಳಲ್ಪಟ್ಟಿವೆ. ಎಂದು ನಾನು ತಮಗೆ ಬಿನ್ನೈಸುವೆನು" ಎಂದು ಹೇಳಿದನು. ||೬೬-೬೭-೬೮||

"ಈ ನಾಲ್ಕು ಉಪಾಯಗಳ ಪೈಕಿ ಹಿಂದೆ ಹಿಂದಿನ ಉಪಾಯಗಳು ಕಾರ್ಯಸಿದ್ಧಿಯನ್ನುಂಟುಮಾಡದೇ ಹೋದರೆ ಮುಂದೆ ಮುಂದಿನ ಉಪಾಯಗಳನ್ನು ಉಪಯೋಗಿಸಬೇಕು. ಆದ್ದರಿಂದ ಈಗ ಉಪಾಯಗಳ ಪೈಕಿ ಯಾವ ಉಪಾಯವನ್ನು ಆಶ್ರಯಿಸಬೇಕೆಂದು ಮಂತ್ರಿಗಳೊಡನೆ ದಯವಿಟ್ಟು ವಿಮರ್ಶಿಸಬೇಕು. ಆದರೆ ಕೆಲವುಕಾಲದಲ್ಲಿ ಕಾರ್ಯವು ಅತಿ ಶೀಘ್ರವಾಗಿ ನಡೆಯಬೇಕಾದಾಗ ಹೀಗೆ ವಿಮರ್ಶೆ ಮಾಡಬೇಕಾದ್ದಿಲ್ಲ. ಅಂಥಾ ಸಮಯಗಳಲ್ಲಿಯೂ ಕಾರ್ಯಸಿದ್ಧಿಗೆ ವಿಘ್ನ

ನ್ಯವಸ್ಯ ಮಂತ್ರಿಭಿಶ್ಚೈತದುದ್ಯಮಂ ಕ್ರಿಯತಾಂ ತತಃ ।
ಏತಚ್ಛ್ರುತ್ವಾ ವಚೋ ರಾಜಾ ಮಂತ್ರಿಣಾಂ ಮುಖಮೈಕ್ಷತ ॥೭೧॥

ಜ್ಞಾತ್ವೇಂಗಿತಂ ಮಂತ್ರಿಣಸ್ತು ಪ್ರಾಹುಃ ಸ್ವಸ್ವಮತಂ ತದಾ ।
ಕಶ್ಚಿತ್ಸಾಮೋತ್ತಮಂ ಪ್ರಾಹ ದಾನಮೇಕಂ ಪರಂ ಪರಃ ॥೭೨॥

ದಂಡಮಾಹಾಽಪರಸ್ತತ್ರ ಶ್ರುತ್ವಾ ಬಹುವಿಧಂ ಮತಂ ।
ರಾಜಾ ತೂಷ್ಣೀಂ ಸ್ಥಿತಃ ಕಿಂಚಿದೀಕ್ಷಾಂ ಚಕ್ರೇಽಥ ವರ್ಧನಂ ॥೭೩॥

ತದೋತ್ಥಾಯ ಪ್ರಣಮ್ಯಾಗ್ರೇ ವರ್ಧನಃ ಪ್ರಾಕ್ರಮದ್ವಚಃ ।
ರಾಜಾಽನ್ಯಮಂತ್ರಿಭಿಃ ಪ್ರೋಕ್ತಂ ಸ್ವಸ್ವಾಽವಸರಗೋಚರಂ ॥೭೪॥

ಸರ್ವಂ ಸದೇವ ತತ್ರಾಪಿ ಪ್ರಕೃತೇ ತದ್ವಿಚಾರ್ಯತಾಂ ।
ಸಮೋ ಸಾಮ ಸ್ವಪಕ್ಷಾಯೇ ಚಾಽವ್ಯಯೇ ವಾಽಪರೇ ಬಲೇ ॥೭೫॥

ಗಳುಂಟಾದರೆ, ಆಗಲೂ ಮಂತ್ರಿಗಳೊಡನೆ ವಿಮರ್ಶೆ ಮಾಡಬೇಕೆಂದು ಹೇಳಿದೆ. ಆದ್ದರಿಂದ ಮಂತ್ರಿಗಳೊಡನೆ ಈಗ ಪ್ರಾಪ್ತವಾಗಿರುವ ಕಾರ್ಯದ ವಿಷಯದಲ್ಲಿ ವಿಮರ್ಶೆಮಾಡಿ ಅನಂತರ ತಾವು ಈ ಕಾರ್ಯಕ್ಕೆ ತೊಡಗಬಹುದು.'' ಎಂದು ಮಂತ್ರಿ ಶ್ರೇಷ್ಠನಾದ ವರ್ಧನನು ಹೇಳಿದ ಮಾತನ್ನು ಕೇಳಿ, ರಾಜನು ಅದರಂತೆಯೇ ಮಂತ್ರಿಗಳ ಕಡೆ ನೋಡಿದನು. ॥೬೯-೭೦-೭೧॥

ದೊರೆಯ ಇಂಗಿತವನ್ನರಿತು, ಮಂತ್ರಿಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ಹೇಳಿದರು. ಒಬ್ಬನು ಈಗ ಸಾಮೋಪಾಯವೇ ಯುಕ್ತವೆಂದೂ, ಇನ್ನೊಬ್ಬನು ದಾನೋಪಾಯವೇ ಶ್ರೇಷ್ಠವೆಂದೂ, ಮತ್ತೊಬ್ಬನು ದಂಡೋಪಾಯವನ್ನೇ ಶ್ರೇಷ್ಠವೆಂದೂ ದೊರೆಗೆ ಬಿನ್ನೈಸಿದರು. ಹೀಗೆ ಮಂತ್ರಿಗಳು ಹೇಳಿದ ನಾನಾ ವಿಧವಾದ ಅಭಿಪ್ರಾಯಗಳನ್ನು ಕೇಳಿ, ದೊರೆಯು ಏನನ್ನೂ ಹೇಳದೆ ಸುಮ್ಮನಿದ್ದು ಕೊನೆಗೆ ವರ್ಧನನ ಕಡೆಗೆ ನೋಡಿದನು. ಆಗ ವರ್ಧನನು ಎದ್ದುನಿಂತು ದೊರೆಗೆ ನಮಸ್ಕರಿಸಿ ತನ್ನ ಮಾತನ್ನು ಆರಂಭಿಸಿದನು:—'' ಓ ದೊರೆಯೇ, ಇಲ್ಲಿಯವರೆಗೂ ಇತರ ಮಂತ್ರಿಗಳ ಮಾತುಗಳು ಅವರವರ ದೃಷ್ಟಿಯನ್ನು ಸಮರ್ಥಿಸುವುವಾದರೂ, ಇತರ ಪಕ್ಷಗಳ ಕಡೆಗೆ ಸ್ವಲ್ಪವೂ ದೃಷ್ಟಿಯನ್ನಿಡದೆ ಅವರು ಮಾತನಾಡಿದ್ದಾರೆ. ಆದ್ದರಿಂದ ಅವರ ಪಕ್ಷಕ್ಕೆ ಅನುಗುಣವಾಗಿ ಅವರವರ ಪ್ರತಿಯೊಂದು

ತದಸತ್ತ್ವೇ ದ್ವಿತೀಯಂ ಸ್ಯಾತ್ಪರೇ ಪರಬಲಾಽಶ್ರಯೇ ।
ಪರಸ್ಯ ತತ್ರ ನೋ ಲಾಭೋ ಯತ್ರಾಽಯಃ ಸ್ವಸ್ಯ ವೈ ಭವೇತ್ ॥೨೬॥

ತತ್ರಾಽಪ್ಯಸತಿ ತಸ್ಯಾಂಶ್ಯೋಽಪರಃ ಸ್ಯಾದ್ಬಹುಸಂಶ್ರಯಃ ।
ಸೋಽಪ್ಯಾಽದ್ಯಾಭ್ಯಾನೇವ ಭವೇತ್ ನ ಚೇದ್ಬಹುಸಮಾಶ್ರಯಃ॥೨೭॥

ಚತುರ್ಥಸ್ತತ್ರ ವೈ ಪ್ರೋಕ್ತಃ ಸರ್ವಥಾಽನ್ಯಾನುಪಸ್ಥಿತೌ ।
ಯತ್ರಾಽದ್ಯೇನ ಸುಸಂಪಾದ್ಯಂ ತತ್ರಾಂತ್ಯಂ ವೈ ಪ್ರಯೋಜನಂ ॥೨೮॥

ಅಭಿಪ್ರಾಯಗಳೂ ಸರಿಯಾಗಿವೆ. ಆದರೆ ನಿಜವಾಗಿ ಕಾರ್ಯಸಾಧಕವಾದ ಉಪಾಯ ವಾವುದು? ಎಂದು ದೊರೆಯು ವಿಮರ್ಶಿಸಬೇಕು. ಸ್ವಪಕ್ಷ ಪರಪಕ್ಷಗಳಲ್ಲಿ ಸಮ ಬಲವಿದ್ದಾಗ ಸಾಮೋಪಾಯವು ಸರಿಹೋಗುವುದು. ಅಥವಾ ಒಂದು ಪಕ್ಷದ ಬಲವು ಅತ್ಯಧಿಕವಾಗಿದ್ದು ಸ್ವಪಕ್ಷವು ಅಲ್ಪಬಲವುಳ್ಳದ್ದಾಗಿದ್ದರೂ ಸಾಮೋಪಾಯವು ಯುಕ್ತ ವಾದುದು. ॥೨೨-೨೩-೨೪-೨೫॥

ಹಾಗಲ್ಲದೆ, ಶತ್ರುಪಕ್ಷವು ತನ್ನಲ್ಲಿ ಹೆಚ್ಚಾಗಿ ಸಾಮರ್ಥ್ಯವಿಲ್ಲದೆ, ಇನ್ನೊಂದು ಬಲಿಷ್ಠ ಪಕ್ಷವನ್ನು ಆಶ್ರಯಿಸಿ ಬಲಗೊಂಡಿದ್ದರೆ ಆಗ ದಾನೋಪಾಯದಿಂದ ಅದನ್ನು ಸ್ವಪಕ್ಷಕ್ಕೇ ಸೇರುವಂತೆ ಮಾಡಬಹುದು. ಆಗ ಶತ್ರುಪಕ್ಷಕ್ಕೆ ಲಾಭವಾಗದೆ, ಸ್ವಪಕ್ಷಕ್ಕೆ ಹೆಚ್ಚು ಪ್ರಯೋಜನವಾಗುವುದು. ದಾನೋಪಾಯಕ್ಕೂ ಅವಕಾಶವಿಲ್ಲದಿದ್ದರೆ, ಅನೇಕ ಜನರು, ಮತ್ತು ತಂತ್ರಗಳಿಂದ ಸಾಧಿಸಬಹುದಾದ ಭೇದೋಪಾಯವು ಆವಶ್ಯಕವು. ಅನೇಕ ತಂತ್ರಗಳಲ್ಲಿ ನಿಪುಣರಾದ ಜನರ ಸಹಾಯವಿಲ್ಲದಿದ್ದರೆ, ಆಗಲೂ ಸಾಮದಾನಗಳೆಂಬ ಮೊದಲನೆಯ ಎರಡು ಉಪಾಯಗಳಿಂದಲೇ ಕಾರ್ಯವನ್ನು ಸಾಧಿಸಬೇಕಾಗುವುದು. ॥೨೬-೨೭॥

ನಾಲ್ಕನೆಯದಾದ ದಂಡೋಪಾಯವನ್ನು ಹಿಂದೆ ಹೇಳಿದ ಯಾವ ಉಪಾಯ ಗಳಿಂದಲೂ ಕಾರ್ಯಸಿದ್ಧಿಯ ಸಂಭವವಿಲ್ಲದೇ ಇದ್ದರೆ ಮಾತ್ರ ಉಪಯೋಗಿಸ ಬೇಕು. ಮೊದಲನೆಯದಾದ ಸಾಮೋಪಾಯದಿಂದಲೇ ಕಾರ್ಯಸಿದ್ಧಿಯಾಗುವ ಸಂಭವವಿದ್ದರೂ ಅಂಥಾ ಸಮಯದಲ್ಲೂ ನಾಲ್ಕನೆಯದಾದ ದಂಡೋಪಾಯವನ್ನು ಉಪಯೋಗಿಸುವ ಧೊರೆಯು, ಅನರ್ಥಕ್ಕೆ ಈಡಾಗಿ, ತನ್ನ ಕಾರ್ಯಸಿದ್ಧಿಗೆ ತಾನೇ ಭಂಗತಂದುಕೊಳ್ಳುವನು. ಪ್ರಕೃತ ಮನ್ಮಥನು ಹೂಡಿರುವ ಯುದ್ಧವು ತನ್ನ ಸ್ವಪ್ರಯೋಜನಕ್ಕಾಗಿ ಇಲ್ಲದೆ, ಕೇವಲ ಪರಾರ್ಥವಾದುದರಿಂದ ರಾಜನೀತಿಯ

ಅನರ್ಥಾ ಯ್ಯೆವ ತತ್ಸರ್ವಂ ನ ಫಲೋದಯಮಾವಹೇತ್ ।
ಪರಾಽರ್ಥಸ್ಯ ವಿಶೇಷೇಣ ನಿಶ್ಚಯಾನ್ನಾಽದ್ಯಯೋಃ ಸ್ಥಲಂ ॥೭೯॥

ಆದ್ಯೋಽತ್ರ ತತ್ವಾನ್ನಾಽದ್ಯಸ್ಯ ಚಾಽಸಹಾಯಾತ್ ಪರಶ್ಚ ನ ।
ತಸ್ಮಾದಂತ್ಯ ಉಪಾಯೋಽತ್ರ ಭಾತಿ ಶೇಷಿತ ಇತ್ಯಸೌ ॥೮೦॥

ತತ್ರಚಾಂತ್ಯಮನಾಲೋಚ್ಯ ಕುರ್ವನ್ನಪ್ಯವಸೀದತಿ ।
ಬಾಲಃ ಪಂಚಾಽಬ್ದಕ ಇತಿ ತೇನ ರಾಷ್ಟ್ರೇಶ್ವರಾ ಜಿತಾಃ ॥೮೧॥

ದೇವಕಾರ್ಯಾರ್ಥಮಾಯಾತಸ್ತಸ್ಮಾದ್ಬಲವದುತ್ತರಂ ।
ತತ್ರಾಪ್ಯರ್ಥೋ ನ ರಾಜ್ಯಾಽದೌ ತತ್ರ ದಾನಂ ಹಿ ಸತ್ತಮಂ ॥೮೨॥

ದಾನೇ ಸಮುನ್ನತಿರ್ನೋ ಚೇತ್ ಸಮಾನಂ ಬಲಮಿಷ್ಯತಾಂ ।
ಏಕಃ ಕುಮಾರಸ್ತೇನಾಽತ್ರ ಹತಾ ರಾಷ್ಟ್ರಾಧಿಪಾಃ ಕ್ಷಣಾತ್ ॥೮೩॥

ಮೊದಲನೆಯ ಎರಡು ಉಪಾಯಗಳನ್ನು ಅವನನ್ನು ಜಯಿಸುವುದಕ್ಕಾಗಿ ಉಪಯೋಗಿಸುವುದು ಸಾಧ್ಯವೇ ಅಲ್ಲ. ||೭೮-೭೯||

ಮೇಲೆ ಹೇಳಿದ ಕಾರಣದಿಂದ ಮೊದಲನೆಯದಾದ ಸಾಮೋಪಾಯಕ್ಕೂ ಇತರರ ಸಹಾಯವನ್ನಪೇಕ್ಷಿಸದೆ ಮನ್ಮಥನು ತಾನೇ ಯುದ್ಧದಲ್ಲಿ ಪ್ರವೃತ್ತನಾಗಿರುವುದರಿಂದ ಎರಡನೆಯದಾದ ದಾನ ಭೇದೋಪಾಯಗಳಿಗೆ ಈ ಸಂದರ್ಭದಲ್ಲಿ ಅವಕಾಶವಿಲ್ಲ. ಆದ್ದರಿಂದ ಕೊನೆಯದಾದ ಉಳಿದಿರುವ ದಂಡೋಪಾಯವನ್ನೇ ಆಶ್ರಯಿಸಬೇಕಾಗುವುದು. ಹಾಗೇನಾದರೂ ದಂಡೋಪಾಯವನ್ನು 'ಈ ಪ್ರಸಂಗದಲ್ಲಿ ಆಶ್ರಯಿಸಬೇಕಾದರೆ ಮುಂಚೆ ಪರಿಣಾಮವನ್ನು ಪರ್ಯಾಲೋಚಿಸಬೇಕಾಗುವುದು. ಇಲ್ಲದಿದ್ದರೆ ನಮಗೆ ನಾಶವೇ ಸಂಭವಿಸುವುದು. ಯುದ್ಧಮಾಡುತ್ತಿರುವವನು ಕೇವಲ ಐದು ವರ್ಷದ ಬಾಲಕನಾದರೂ ಅವನು ರಾಷ್ಟ್ರನಾಯಕರನ್ನೇ ಜಯಿಸಿದ್ದಾನೆ. ಅದೂ ಅಲ್ಲದೆ ಅವನು ದೇವಕಾರ್ಯಕ್ಕಾಗಿ ಈ ಯುದ್ಧವನ್ನು ಹೂಡಿದ್ದಾನೆ. ಆದ್ದರಿಂದ ಇದರ ಪರಿಣಾಮವು ಮಹತ್ತರವಾದುದು. ಅವನು ರಾಜ್ಯಾದಿಗಳನ್ನು ಸಂಪಾದಿಸುವುದಕ್ಕೆ ಬಂದಿಲ್ಲ. ಹಾಗಾಗಿದ್ದರೆ ದಾನೋಪಾಯವನ್ನು ಉಪಯೋಗಿಸುವುದು ಶ್ರೇಷ್ಠವಾಗುತ್ತಿತ್ತು. ||೮೦-೮೧-೮೨||

ದಾನೋಪಾಯವು ನಮ್ಮ ಅಭ್ಯುದಯವನ್ನು ಗಳಿಸಿಕೊಡದಿದ್ದರೆ ಪ್ರತಿಯಾಗಿ ಬಲಪ್ರಯೋಗವೇ ಉಚಿತ. ಆದರೆ ಬಾಲಕನು ಒಬ್ಬನೇ ರಾಷ್ಟ್ರನಾಯಕರ

ಕೋಟಿಶೋಽತಿಬಲಾಸ್ತೇನ ದೈವಂ ಬಲಮಿದಂ ಭವೇತ್ ।
ತತ್ರಾಽಸ್ಮಾಭಿಃ ಪ್ರಾಕೃತಕೈಃ ಫಲಂ ನೈವ ಸಮೀಹಿತಂ ॥೮೪॥

ತಸ್ಮಾದ್ರಾಜನ್ ಕುಲಗುರುಮುಪತಿಷ್ಠ ಪಿನಾಕಿನಂ ।
ಮಹಾದೇವಂ ತದಂಶೇನ ಸರ್ವಂ ಸೇತ್ಸ್ಯತಿ ತೇ ಮತಂ ॥೮೫॥

ಇತೋಽನ್ಯನ್ಮೇ ಬುದ್ಧಿಪಥೇ ನ ಸಮಾಯಾತ್ಯುಪಾಯಕಃ ।
ಸಮಂ ಸ್ವಸ್ವಬಲೇನೈವ ಸಮಾಕ್ರಾಮಂತಿ ನಿಮ್ನಗಂ ॥೮೬॥

ತಸ್ಮಾನ್ಮಹಾರಾಜ ಮಯಾ ವಿಜ್ಞಾಪಿತಮಿದಂ ವಚಃ ।
ಸಸಭ್ಯಸ್ತ್ವಂ ವಿಚಾರ್ಯಾಽಥ ಸಫಲಂ ಕರ್ತುಮರ್ಹಸಿ ॥೮೭॥

ಏತಚ್ಛ್ರುತ್ವಾ ವರ್ಧನಸ್ಯ ಮತಂ ಸರ್ವಮತೋತ್ತಮಂ ।
ಸಾಧುಸಾಧ್ವಿತಿ ತೇ ಸಭ್ಯಾ ಮಂತ್ರಿಣೋಽಪ್ಯೂಚುರಾದರಾತ್ ॥೮೮॥

ನ್ನೆಲ್ಲರನ್ನೂ ಒಂದು ಕ್ಷಣಮಾತ್ರದಲ್ಲಿಯೇ ನಾಶಮಾಡಿದ್ದಾನೆ. ಎಂಬ ವಿಷಯವನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ॥೮೩॥

ಹೀಗೆ ಕೇವಲ ಬಾಲಕನಾದರೂ, ಅತ್ಯಂತ ಬಲಶಾಲಿಗಳಾದ ಕೋಟ್ಯಾಂತರ ದೊರೆಗಳನ್ನು ನಾಶಮಾಡಿರುವುದನ್ನು ಪರಿಶೀಲಿಸಿದರೆ ಇದು ಕೇವಲ ದೈವಬಲ ವೆಂದೇ ತೋರುವುದು. ಆದ್ದರಿಂದ ಸಾಮಾನ್ಯರಾದ ನಮ್ಮಿಂದ ಅವನು ಏನು ಫಲವನ್ನೂ ಅಪೇಕ್ಷಿಸಲಾರನು. ಎಂದೂ ಸ್ಪಷ್ಟಪಡುವುದು. ಓ ದೊರೆಯೇ, ಆದ್ದ ರಿಂದ ನಿಮ್ಮ ಕುಲಕ್ಕೆ ಗುರುವಾದ ಪಿನಾಕಾಯುಧಧಾರಿಯಾದ ಶಿವನನ್ನು ಸೇವಿಸು. ಅವನ ಅನುಗ್ರಹದಿಂದ ನಿನ್ನ ಇಷ್ಟಾರ್ಥವೆಲ್ಲವೂ ಕೈಗೂಡುವುದು. ಈ ವಿಧವಾದ ಉಪಾಯ ಹೊರತು ಬೇರಾವ ಉಪಾಯವೂ ನನ್ನ ಮನಸ್ಸಿಗೆ ಗೋಚರವಾಗು ತ್ತಿಲ್ಲವು. ದೊರೆಗಳು ತಮ್ಮ ಬಲಕ್ಕಿಂತಲೂ ಕಡಿಮೆ ಬಲವುಳ್ಳ ಶತ್ರುಪಕ್ಷವನ್ನು ಮಾತ್ರ ಆಕ್ರಮಿಸಲು ಸಮರ್ಥರಾಗುತ್ತಾರೆ. ॥೮೪-೮೫-೮೬-೮೭॥

“ಓ ಮಹಾರಾಜನೇ, ನಾನು ತಮಗೆ ಈ ಉಪಾಯವನ್ನೇ ವಿಜ್ಞಾಪನೆ ಮಾಡಿಕೊಂಡಿದ್ದೇನೆ. ತಾವು ಈ ಅಭಿಪ್ರಾಯವನ್ನು ಮಂತ್ರಾಲೋಚನಾಸದಸ್ಯ ರೊಡನೆ ಚರ್ಚಿಸಿ ಪ್ರಯೋಜನವುಳ್ಳದ್ದೆಂದು ಕಂಡುಬರುವುದನ್ನು ಅನುಸರಿಸಬೇಕು.” ಎನ್ನಲು, ಎಲ್ಲಾ ಅಭಿಪ್ರಾಯಗಳಿಗಿಂತಲೂ ಅತ್ಯಂತ ಶ್ರೇಷ್ಠವಾದ ವರ್ಧನನ

ರಾಜಾ ತದಾऽಕರ್ಣ್ಯ ತದಾ ಮಹಾದೇವಸ್ಯ ತೋಷಣೇ ।
ಚಕಾರ ನಿಶ್ಚಲಾಂ ಬುದ್ಧಿಂ ವರ್ಧನೋಕ್ತ್ಯಾ ವಿಚಕ್ಷಣಃ ॥೮೯॥

ವಿಪ್ರೈರಾಚಾರ್ಯಮುಖ್ಯೈಶ್ಚಾऽಪ್ಯನುಜ್ಞಾತೋ ಯಥಾವಿಧಿ ॥೯೦॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ದತ್ತರಾಮಸಂವಾದೇ
ಕಾಮಾಖ್ಯಾನೇ ತ್ರಯೋದಶೋऽಧ್ಯಾಯಃ

ಅಭಿಪ್ರಾಯವನ್ನು ಕೇಳಿ ಅಲ್ಲಿದ್ದ ಸಭಿಕರು, ಮಂತ್ರಿಗಳು, ಎಲ್ಲರೂ "ಬಹಳ ಚೆನ್ನಾಗಿದೆ. ಬಹಳ ಚೆನ್ನಾಗಿದೆ.'' ಎಂದು ತಮ್ಮ ಅನುಮೋದನೆಯನ್ನು ವಿಶ್ವಾಸ ಪೂರ್ವಕವಾಗಿ ಸೂಚಿಸಿದರು. ಇವರ ಸಮ್ಮತವನ್ನು ಕೇಳಿ, ಬುದ್ಧಿಶಾಲಿಯಾದ ದೊರೆಯು ವರ್ಧನನ ಮಾತಿನಂತೆ ಮಹಾದೇವನಾದ ಪರಶಿವನನ್ನು ಮೆಚ್ಚಿಸಲು ದೃಢನಿಶ್ಚಯ ಮಾಡಿದನು. ॥೮೮-೮೯॥

ದೊರೆಯು ಆಚಾರ್ಯರಾದ ಗುರುಗಳು ಮತ್ತು ಬ್ರಾಹ್ಮಣರ ಅಪ್ಪಣೆಯನ್ನೂ ಪಡೆದು ಶಾಸ್ತ್ರೋಕ್ತಕ್ರಮದಲ್ಲಿ ಪರಮೇಶ್ವರನ ಆರಾಧನೆಗೆ ಆರಂಭಿಸಿದನು. ॥೯೦॥

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ
ದತ್ತಗುರುಪರಶುರಾಮರ ಸಂವಾದದಲ್ಲಿ ಕಾಮೋಪಾಖ್ಯಾನದಲ್ಲಿ
ಹದಿಮೂರನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ಚತುರ್ದಶೋಽಧ್ಯಾಯಃ ॥

ಹದಿನಾಲ್ಕನೆಯ ಅಧ್ಯಾಯವು

ಅಥ ರಾಜಾ ಶುಭೇಽರಣ್ಯೇ ತೀರ್ಥರೋಧಸಿ ನಿರ್ಜನೇ ।
ರಾಜ್ಯಂ ಮಂತ್ರಿಷು ಸಂನ್ಯಸ್ಯ ತಪಸ್ಯೇವ ಮನೋ ದಧೇ ॥೧॥

ತತ್ರ ಸ್ಥಿತಃ ಶಶಾಂಕಾರ್ಧಶೇಖರಂ ಜಗದೀಶ್ವರಂ ।
ಧ್ಯಾಯನ್ನೇಕಾಗ್ರಚಿತ್ತೇನ ಜಿತಬಾಹ್ಯೇಂದ್ರಿಯೋ ಬಭೌ ॥೨॥

ಏವಂ ಸರ್ವಾತ್ಮನಾ ರಾಜಾ ಜಲಾಽಹಾರೋ ಮಹೇಶ್ವರಂ ।
ಉಪಸ್ಥಿತೋ ದಿನಾನಾಂ ತು ಪಂಚಕಂ ತದನಂತರಂ ॥೩॥

ನಿರಾಽಹಾರೋ ನಿರಾಧಾರೋ ನಿಯತೇಂದ್ರಿಯಮಾನಸಃ ।
ಧ್ಯಾಯನ್ ಪಿನಾಕಿ ಪಾದಾಬ್ಜಮೂರ್ಧ್ವಬಾಹುರ್ನರೇಶ್ವರಃ ॥೪॥

ಅನಂತರ ದೊರೆಯು ರಾಜ್ಯವನ್ನು ಮಂತ್ರಿಗಳ ಮೇಲ್ವಿಚಾರಣೆಗೆ ಒಪ್ಪಿಸಿ ನಿರ್ಜನವಾದ ನದಿಯ ತೀರದಲ್ಲಿರುವ ಮಂಗಳಕರವಾದ ಅರಣ್ಯದಲ್ಲಿ ತಪಸ್ಸು ಮಾಡಲು ನಿಶ್ಚಯಿಸಿದನು. ಅಂಥಾ ಪ್ರದೇಶದಲ್ಲಿದ್ದು ಜಗತ್ತಿಗೆ ಅಧಿಪತಿಯೂ ಚಂದ್ರಾರ್ಧಶೇಖರನೂ ಆದ ಶಿವನನ್ನು, ಎಲ್ಲಾ ಬಾಹ್ಯೇಂದ್ರಿಯಗಳನ್ನೂ ನಿಗ್ರಹ ಮಾಡಿ ಏಕಾಗ್ರಚಿತ್ತದಿಂದ ಧ್ಯಾನಿಸುತ್ತಾ ಪ್ರಕಾಶಿಸುತ್ತಿದ್ದನು. ಹೀಗೆ, ದೊರೆಯು ನೀರನ್ನು ಮಾತ್ರ ಆಹಾರವನ್ನಾಗಿ ಸೇವಿಸುತ್ತಾ ಶಿವನನ್ನು ಐದು ದಿನಗಳಕಾಲ ಏಕಾಗ್ರಮನಸ್ಸಿನಿಂದ ಸೇವಿಸಿದನು. ಅನಂತರದಲ್ಲಿ ಬೇರೆ ವಿಧಾನವನ್ನು ಅನುಸರಿಸಿದನು. ॥೧-೨-೩॥

ಐದು ದಿನಗಳು ಕಳೆದನಂತರ ದೊರೆಯು ಆಹಾರವನ್ನೇ ಬಿಟ್ಟು ನೆಲದ ಮೇಲೂ ಕೂರದೆ, ಇಂದ್ರಿಯ, ಮನಸ್ಸು ಇವೆಲ್ಲವನ್ನೂ ತಡೆಗಟ್ಟಿ ತೋಳುಗಳನ್ನು

ಬಾಹ್ಯಂ ನಾಽಪ್ಯಾಂತರಂ ನಾಽಪಿ ನ ಕಿಂಚಿದ್ವೇದ ತತ್ಪರಃ ।
ಏವಂ ದಿನತ್ರಯೇಽತೀತೇ ಚಾಽಷ್ಟಮೇ ಕ್ಷಣದಾಮುಖೇ ॥೫॥

ಆವಿರ್ಬಭೂವ ಸರ್ವೇಶಃ ಸಾಧಿತುಂ ಭಕ್ತವಾಂಛಿತಂ ।
ಶಾರದಾಽಭ್ರಪ್ರತೀಕಾಶ ವೃಷಸ್ಕಂಧವಿರಾಜಿತೇ ॥೬॥

ಆಸನೇ ನೂತ್ನರತ್ನೌಘ ಚಿತ್ರಜಾತಿವಿಚಿತ್ರಿತೇ ।
ಮುಕ್ತಾಜಾಲ ಸಮಾಕೀರ್ಣೇ ರಾಂಕವಾಜಿನಕೋಮಲೇ ॥೭॥

ಆಸೀನಃ ಸ್ಫಟಿಕಾಽಚ್ಛಾಽಭೋ ಜಟಾ ಮಂಡಲಮಂಡಿತಃ ।
ಬಾಲಚಂದ್ರಕೃತೋತ್ತಂಸಃ ತ್ರಿನೇತ್ರೋ ನಾಗಕುಂಡಲಃ ॥೮॥

ಫುಲ್ಲಪಂಕಜಪಂಚಾಽಽಸ್ಯಃ ಪ್ರಸನ್ನವದನೋಡುಪಃ ।
ಕುಂಡಲಾಽಹಿಫಣಾನ್ಯಸ್ತಮಣಿರಾಜತ್ಕಪೋಲಭೂಃ ॥೯॥

ಮೇಲಕ್ಕೆತ್ತಿ ಶಿವನಪಾದಕಮಲಗಳನ್ನು ಧ್ಯಾನಮಾಡುತ್ತಿದ್ದನು. ಆಗ ಕೇವಲ ಧ್ಯಾನಾಸಕ್ತನಾದ ದೊರೆಯು ಹೊರಗಡೆಯ ಪದಾರ್ಥಗಳನ್ನೂ ಅಥವಾ ಒಳಗಡೆಯ ಭಾವಗಳಾವುವನ್ನೂ ಗಮನಿಸಲೇಇಲ್ಲ. ಹೀಗೆ ಮೂರು ದಿನಗಳು ಕಳೆಯಲು ಎಂಟನೆಯ ದಿನದ ಸಾಯಂಕಾಲದಲ್ಲಿ ಭಕ್ತನಾದ ದೊರೆಯ ಇಷ್ಟಾರ್ಥವನ್ನು ನೆರವೇರಿಸುವುದಕ್ಕಾಗಿ ಎಲ್ಲಕ್ಕೂ ಸ್ವಾಮಿಯಾದ ಶಿವನು, ಶರತ್ಕಾಲದ ಮೇಘಕ್ಕೆ ಸಮಾನವಾದ ಎತ್ತಿನ ಹೆಗಲಿನಮೇಲೆ ಪ್ರಕಾಶಿಸುತ್ತಿದ್ದ ಪೀಠದ ಮೇಲೆ ಕುಳಿತು ಅಲ್ಲಿಗೆ ಬಂದನು. ॥೪-೫-೬॥

ಶಿವನು ಹೊಸದಾದ ನಾನಾ ಬಗೆಯ ರತ್ನಗಳ ಸಮೂಹದ ಆಶ್ಚರ್ಯಕರವಾದ ಗುಣಗಳಿಂದ ಸುಂದರವಾಗಿದ್ದ, ಮುತ್ತುಗಳ ಸಮೂಹದಿಂದ ಖಚಿತವಾಗಿದ್ದ, ಕೃಷ್ಣಾಜಿನದಿಂದ ಮೆತ್ತಗಿದ್ದ, ಎತ್ತಿನ ಮೇಲಿದ್ದ ಆಸನದಲ್ಲಿ ಕುಳಿತಿದ್ದನು. ಅವನು ಸ್ಫಟಿಕದಂತೆ ಅತ್ಯಂತ ಶುಭ್ರವಾದ ಕಾಂತಿಯುಳ್ಳವನಾಗಿಯೂ, ಜಟೆಗಳ ಸಮೂಹದಿಂದ ಶೋಭಿಸುತ್ತಲೂ, ಬಾಲಚಂದ್ರನನ್ನೇ ಶಿರಸ್ಸಿನ ಆಭರಣವಾಗಿ ಧರಿಸಿ, ಮುಕ್ಕಣ್ಣನಾಗಿ, ಸರ್ಪಗಳನ್ನೇ ಕಿವಿಗಳ ಆಭರಣಗಳನ್ನಾಗುಳ್ಳವನಾಗಿ, ಅರಳಿದ ಕಮಲದಂತೆ ಕೆಂಪು ಕಾಂತಿಯಿಂದ ಸುಂದರವದನನಾಗಿ, ನಿರ್ಮಲವಾದ ಚಂದ್ರನಂತೆ ಪ್ರಕಾಶಮಾನವಾದ ಮುಖವುಳ್ಳವನಾಗಿ, ಕುಂಡಲಗಳಾಗಿರುವ ಸರ್ಪಗಳ ಹೆಡೆಗಳಲ್ಲಿರುವ

ಚತುರ್ಬಾಹು ಲಸಚ್ಛೂಲ ಕಪಾಲಮೃಗಟಂಕಕಃ ।
ಸರ್ಪಯಜ್ಞೋಪವೀತಾಢ್ಯೋ ರುದ್ರಾಕ್ಷಸ್ರಗಲಂಕೃತಃ ॥೧೦॥

ವ್ಯಾಘ್ರಚರ್ಮಪರೀಧಾನೋ ಗಜಚರ್ಮೋತ್ತರೀಯಕಃ ।
ವ್ಯಾಲೇಶಮಂಡಿತೌಘೇನ ಮಂಡಿತಾಂಗೋಽತಿಸುಂದರಃ ॥೧೧॥

ರುದ್ರಾಣೀ ವಿಲಸದ್ವಾಮವಾಮಾಂಕಃ ಕರುಣಾನಿಧಿಃ ।
ಭಸ್ಮೋದ್ಧೂಳಿತ ಸರ್ವಾಂಗೋ ರುದ್ರಾಕ್ಷಸ್ರಗಲಂಕೃತಃ ॥೧೨॥

ಪಠದ್ರುದ್ರಾಧ್ಯಾಯಮಂತ್ರೈಃ ಪ್ರಮಥೈಃ ಪರಿವಾರಿತಃ ।
ರಾಜ್ಞಃ ಪುರೋಽವಸ್ಥಿತಃ ಸ ಮಹಾದೇವಃ ಪರಾತ್ಪರಃ ॥೧೩॥

ಪ್ರೋವಾಚ ದೃಷ್ಟ್ವಾ ರಾಜಾನಂ ಧ್ಯೇಯಮಾತ್ರಾತ್ಮನಾ ಸ್ಥಿತಂ ।
ಮಧುರಾಕ್ಷರಸಂಯುಕ್ತಂ ಸಂಬೋಧ್ಯ ಕೃಪಯಾ ಶಿವಃ ॥೧೪॥

ರತ್ನಗಳಿಂದ ಪ್ರಕಾಶಿಸುತ್ತಿರುವ ಕಪೋಲಪ್ರದೇಶವುಳ್ಳವನಾಗಿಯೂ, ಇದ್ದನು. ||೭-೮-೯||

ಶಿವನು, ನಾಲ್ಕು ತೋಳುಗಳಲ್ಲಿಯೂ ಪ್ರಕಾಶಮಾನವಾದ ಶೂಲ, ರುಂಡ, ಮೃಗ, ಮತ್ತು ಟಂಕವೆಂಬ ಆಯುಧ ಮುಂತಾದುವುಗಳಿಂದ ಶೋಭಿಸುತ್ತಿದ್ದನು. ಅಲ್ಲದೆ, ಅವನು ಸರ್ಪವೆಂಬ ಯಜ್ಞೋಪವೀತದಿಂದ ಪ್ರಕಾಶಿಸುತ್ತಲೂ, ರುದ್ರಾಕ್ಷಿಗಳ ಮಾಲೆಯಿಂದ ಶೋಭಿಸುತ್ತಲೂ, ಹುಲಿಯ ಚರ್ಮವನ್ನು ಹೊದ್ದುಕೊಂಡಿರುವವನಾಗಿಯೂ, ಆನೆಯ ಚರ್ಮವನ್ನೇ ಮೇಲುವಸ್ತ್ರವಾಗಿ ಧರಿಸಿಕೊಂಡು ಸರ್ಪಶ್ರೇಷ್ಠಗಳ ಆಭರಣಗಳಿಂದ ಪ್ರಕಾಶಿಸುತ್ತಿರುವ ಸುಂದರವಾದ ಅವಯವಗಳುಳ್ಳವನಾಗಿಯೂ, ಬಹಳ ಮನೋಹರನಾಗಿಯೂ ಇದ್ದನು. ||೧೦-೧೧||

ಪಾರ್ವತಿಯಿಂದ ಪ್ರಕಾಶಮಾನವಾಗಿ ಸುಂದರವಾದ ಎಡತೊಡೆಯುಳ್ಳವನಾಗಿಯೂ, ಕರುಣಾಶಾಲಿಯಾಗಿಯೂ, ಭಸ್ಮವನ್ನು ದೇಹಕ್ಕೆಲ್ಲಕ್ಕೂ ಹಚ್ಚಿಕೊಂಡಿರುವ, ರುದ್ರಾಕ್ಷಿಗಳ ಹಾರಗಳಿಂದ ಶೋಭಿಸುತ್ತಿರುವ, ರುದ್ರಾಧ್ಯಾಯದ ಮಂತ್ರಗಳನ್ನು ಪಠಿಸುತ್ತಿರುವ ಪ್ರಮಥಗಣಗಳಿಂದ ಸುತ್ತುವರಿಯಲ್ಪಟ್ಟ ಪರಾತ್ಪರಸ್ವರೂಪನೂ, ಮಹಾದೇವನೂ, ಆದ ಪರಶಿವನು ರಾಜನ ಮುಂದೆ ಬಂದು, ತನ್ನ ಧ್ಯಾನದಲ್ಲೇ ಮಗ್ನನಾಗಿರುವ ದೊರೆಯನ್ನು ಪರಮ ಕರುಣೆಯಿಂದ ಮಧುರವಾದ ರೀತಿಯಲ್ಲಿ ಹೀಗೆ ಸಂಬೋಧಿಸಿ ಹೇಳಿದನು. ||೧೨-೧೩-೧೪||

ತದಾ ಪ್ರಮಥಸಂಘಾಸ್ಯ ಕೋಲಾಹಲಮಹಾಧ್ವನೇಃ ।
ಧ್ಯೇಯಾತ್ಪರಾವೃತ್ತಮನಾಃ ಪ್ರೋನ್ಮೀಲ್ಯ ನಯನೇಽಗ್ರತಃ ॥೧೫॥

ಅಪಶ್ಯದ್ದೇವದೇವಂ ತ ಮಂಬಿಕಾ ಪ್ರಮಥಾಽನ್ವಿತಂ ।
ಪ್ರಣತೋ ದಂಡವದ್ಭೂಮೌ ಮೂರ್ಧ್ನ್ಯಾಽಹಿತ ಕರಾಂಜಲಿಃ ॥೧೬॥

ತದ್ದರ್ಶನೋತ್ಸವೋದ್ಯಚ್ಚಂದ್ರಮಾಶ್ಚ ದ್ವಿಗುಣಾಂಗಕಃ ।
ಆನಂದಾಽಶ್ರುಪರೀವಾಹ ಪ್ಲಾವಿತೋರಃ ಸ್ಥಲಾಽವನಃ ॥೧೭॥

ಭೂಯೋಭೂಯಃ ಪ್ರಣಮ್ಯೈವಂ ಪ್ರಸ್ತೋತುಮುಪಚಕ್ರಮೇ ॥೧೮॥

ಶಂಕರ ಭಕ್ತಹಿತಂಕರ ಜಗತಾಂ ರಕ್ಷಕ ದುಷ್ಟಸುಶಿಕ್ಷಕತೇ ।
ಪಾದಾಂಭೋಜಂ ವಿಬುಧೇ ಶಾನಾಮಪಿ ನೋ ಲಭ್ಯಂ ಕರುಣಾಽಬ್ಧೇ ।
ತತ್ತೇ ಭವತೋ ನಿರ್ಮಲದೃಷ್ಟ್ಯಾಪಶ್ಯಾಮ್ಯದ್ಯ ಮಹಾಫಲದಂ ।
ತಸ್ಮಾನ್ಮತ್ತೋ ಧನ್ಯೋ ನಾಽನ್ಯೋ ಮಾನುಷಲೋಕೇ ಜಗದೀಶ ॥೧೯॥

ಆಗ ಪ್ರಮಥಗಣಗಳ ಕೋಲಾಹಲಧ್ವನಿಯಿಂದ ರಾಜನು ತನ್ನ ಧ್ಯಾನದಿಂದ ಬಹಿರ್ಮುಖನಾಗಿ ಕಣ್ಣುಗಳನ್ನು ಬಿಟ್ಟು ದೇವದೇವನಾದ, ಅಂಬಿಕಾ ಮತ್ತು ಪ್ರಮಥಗಣಗಳೊಡನೆ ಬಂದಿರುವ ಶಿವನನ್ನು ದರ್ಶನಮಾಡಿದನು. ತನ್ನ ಶಿರಸ್ಸಿನಲ್ಲಿ ಕೈಜೋಡಿಸಿದವನಾಗಿ ಶಿವನಿಗೆ ದಂಡಾಕಾರವಾಗಿ ಪ್ರಣಾಮಮಾಡಿದನು. ಆಗ ದೊರೆಯು ಪರಶಿವನ ದರ್ಶನದಿಂದ ಉಂಟಾದ ಅತ್ಯಂತ ಆನಂದದಿಂದ ಪೂರ್ಣನಾಗಿ ಉಬ್ಬಿದ ಅವಯವಗಳುಳ್ಳವನಾಗಿ, ಆನಂದಬಾಷ್ಪಗಳ ಪ್ರವಾಹದಿಂದ ತೋಯ್ದ ವಕ್ಷಃಸ್ಥಲವುಳ್ಳವನಾದನು. ॥೧೫-೧೬-೧೭॥

ಆಗ ದೊರೆಯು ಶಿವನಿಗೆ ಪುನಃ ಪುನಃ ನಮಸ್ಕಾರಮಾಡಿ ಅವನನ್ನು ಸ್ತೋತ್ರಮಾಡಲು ಉಪಕ್ರಮಿಸಿದನು. ॥೧೮॥

ಓ ಕರುಣಾಸಾಗರನಾದ, ಲೋಕಕ್ಕೆ ಸುಖವನ್ನುಂಟುಮಾಡುವ, ಭಕ್ತರಿಗೆ ಹಿತವನ್ನುಂಟುಮಾಡುವ, ಜಗತ್ತಿಗೆ ರಕ್ಷಕನಾದ, ದುಷ್ಟರಿಗೆ ಸರಿಯಾದ ಶಿಕ್ಷೆಯನ್ನು ಕೊಡುವ, ಶಿವನೇ, ನಿನ್ನ ಪಾದಕಮಲಗಳ ದರ್ಶನವು ದೇವಶ್ರೇಷ್ಠರಿಗೂ ದುರ್ಲಭವು. ಇಂಥಾ ಮಹಾಫಲಗಳನ್ನು ಕೊಡುವ, ನಿನ್ನನ್ನು ಶುದ್ಧದೃಷ್ಟಿಯಿಂದ ದರ್ಶನ ಮಾಡುತ್ತಿದ್ದೇನೆ. ಓ ದಯಾಸಾಗರನಾದ ಶಿವನೇ, ಆದ್ದರಿಂದ ಈ ಮನುಷ್ಯ

ಪ್ರಾಗ್ಜನ್ಮಾರ್ಜಿತಪುಣ್ಯಸಮೂಹೈರಾಪ್ತಂ ದುರ್ಲಭ ಮಾನುಷ್ಯಂ ।
ತತ್ರ ಚ ಗಾತ್ರಂ ಬಲವನ್ನೇತ್ರಂ ಜಾತಂ ಸ್ವಾಂತಂ ವಿಮಲತರಂ ।
ಏವಂ ಸತ್ಯಪಿ ಕರುಣಾಸಿಂಧುಂ ತ್ಯಕ್ತ್ವಾಽನ್ಯತ್ರ ರತಾ ಮನುಜಾ ।
ಯೇತಾನ್ಮೂಢಾನ್ನರಪಶುಭೂತಾನ್ ಧಿಗ್ಧಿಕ್ ಸ್ವಾರ್ಥಚ್ಯುತಿಹೇತೂನ್॥೨೦॥

ಹಸ್ತೌತಾವಕ ಪದಪರಿಚರ್ಯಾಽಽಸಕ್ತೌ ವಾಣೀ ಗುಣಕಥನೇ ।
ನೇತ್ರೇ ಶ್ರೀಶಿವಮೂರ್ತಿ ನಿರೀಕ್ಷಾಕರ್ಮಣಿ ಚಿತ್ತಂ ತೇ ತತ್ತ್ವೇ ।
ಕರ್ಣೌಲೀಲಾಽಽಕರ್ಣನ ನಿರತೌ ಚರಣೌ ದೇವಪರಿಕ್ರಮಣೇ ।
ಕಾಲೋ ಯಸ್ಯ ತ್ವೇವಂ ಯಾತೋ ಧನ್ಯಾದ್ಧನ್ಯಃ ಸ(ಭವೇ)ವಾಽತ್ರ॥೨೧॥

ಶಂಭೋ ತಾವಕಪದಸೇವಾಯಾಂ ಕ್ಷಣಮಪಿ ಯೇನ ಸ್ಥಿತಮತ್ರ ।
ತಸ್ಯ ಬುಧೇಶಪದಂ ತೃಣತುಲ್ಯಂ ಮಾನುಷಭಾಗ್ಯಂ ಕಿಯದುಕ್ತಂ ।

ಲೋಕದಲ್ಲಿ ನನಗಿಂತಲೂ ಕೃತಾರ್ಥನಾದವನು ಬೇರೊಬ್ಬನಿಲ್ಲ. ಪೂರ್ವಜನ್ಮದ ಪುಣ್ಯರಾಶಿಗಳಿಂದಲೇ ಪ್ರಾಣಿಗೆ ಮನುಷ್ಯಜನ್ಮವು ಪ್ರಾಪ್ತವಾಗುವುದು. ಅದರಲ್ಲಿಯೂ ಬಲವಾದ ಶರೀರ, ಪಟುವಾದ ಕಣ್ಣುಗಳು ಮುಂತಾದ ಇಂದ್ರಿಯಗಳು, ಅತ್ಯಂತ ನಿರ್ಮಲವಾದ ಮನಸ್ಸು, ಜನ್ಮಾಂತರಪುಣ್ಯವಿಶೇಷದಿಂದಲೇ ಮನುಷ್ಯನಿಗೆ ಪ್ರಾಪ್ತವಾಗುವುವು. ಹೀಗಿದ್ದರೂ ಮನುಷ್ಯರು ಕರುಣಾಸಾಗರನಾದ ನಿನ್ನ ಧ್ಯಾನವನ್ನು ಬಿಟ್ಟು ಬೇರೆ ಲೌಕಿಕವಾದ ವಸ್ತುಗಳಲ್ಲಿ ಆಸಕ್ತಿಯನ್ನು ತೋರಿಸುವರು ! ಆದ್ದರಿಂದ ಅಂಥಾ ಮನುಷ್ಯರು ಮನುಷ್ಯಪಶುಗಳು ಮತ್ತು ತಮ್ಮ ಕಲ್ಯಾಣವನ್ನು ಸಾಧಿಸುವ ಮಾರ್ಗವನ್ನು ಬಿಟ್ಟವರೂ ಆಗಿದ್ದಾರೆ. ಆದ್ದರಿಂದ ಅಂಥವರ ಮನುಷ್ಯ ಜನ್ಮವು ವ್ಯರ್ಥವೂ, ನಿಂದೆಗೆ ಯೋಗ್ಯವಾದದ್ದೂ ಆಗಿದೆ. ಯಾವ ಮನುಷ್ಯನ ಕೈಗಳು ನಿನ್ನ ಪಾದಗಳ ಸೇವೆಯಲ್ಲಿ ತೊಡಗಿವೆಯೋ, ಮಾತುಗಳು ನಿನ್ನ ಗುಣಕಥನದಲ್ಲಿ ಆಸಕ್ತವಾಗಿವೆಯೋ, ಕಣ್ಣುಗಳು ಶ್ರೀಶಿವಸ್ವರೂಪನಾದ ನಿನ್ನನ್ನು ನೋಡುವುದರಲ್ಲಿ ಆಸಕ್ತಿಯನ್ನು ತೋರಿಸುವುವೋ, ಮನಸ್ಸು ಪರತತ್ವವಾದ ನಿನ್ನ ಧ್ಯಾನದಲ್ಲಿ ತೊಡಗಿದೆಯೋ, ಕಿವಿಗಳು ನಿನ್ನ ಲೀಲೆಗಳನ್ನು ಕೇಳಬಯಸುತ್ತವೋ, ಕಾಲುಗಳು ನಿನ್ನ ಸ್ಥಾನಕ್ಕೆ ಬರಲು ಆಶಿಸುತ್ತವೋ ಅಂಥಾ ಮನುಷ್ಯಜನ್ಮ ಒಂದೇ ಸಾರ್ಥಕವೂ, ಅವನ ಕಾಲವೆಲ್ಲವೂ ಸದ್ವ್ಯಯವಾಯಿತೆಂದೂ ಭಾವಿಸುತ್ತೇನೆ. ||೧೯-೨೦-೨೧||

ಓ ಶಂಭುವೇ, ನಿನ್ನ ಪಾದಗಳ ಸೇವೆಯಲ್ಲಿ ಕ್ಷಣಕಾಲವಿದ್ದ ಮನುಷ್ಯನಿಗೂ

ಏವಂ ಸತ್ಯಪಿ ಮಮ ಯಾ ವಾಂಛಾ ಕ್ಷುದ್ರಾರ್ಥೇಷು ನಿವಿಷ್ಟಾ ಸಾ ।
ಲೋಕೇ ವಿದ್ವತ್ಪರಿಹಸನಾರ್ಥಾಃ ಭೂಯಾದೀಶ್ವರ ಚಿರಕಾಲಂ ॥೨೨॥

ತಸ್ಮಾನ್ಮಹ್ಯಂ ದಿಶ ದೇವೇಶ ಪ್ರೇಮ್ಣೋಚ್ಛಿತ್ತಿಂ ವಿಷಯೇಷು ।
ಪ್ರಾಯೋ ಜಾನನ್ನಪಿ ಭುವಿ ಲೋಕೋ ವಿಷಯೋ ದುಃಖನಿದಾನಮಿತಿ।
ವಾಂಛಂತ್ಯೇವ ಸದಾ ತವ ಮಾಯಾ ಮೋಹಿತಚಿತ್ತಾ ಶಿವ ಮಯಿ ತೇ।
ಕರುಣಾದೃಷ್ಟಿರ್ವಿಲಸತು ದೀನೇಽನನ್ಯಶರಣ್ಯೇ ಪ್ರಣತೋಽಸ್ಮಿ ॥೨೩॥

ಏವಂ ಸಂಸ್ತುತ್ಯ ದೇವೇಶಂ ಶಂಕರಂ ಲೋಕಶಂಕರಂ ।
ಪ್ರೇಮವಿಹ್ವಲಿತಸ್ವಾಂತೋ ದಂಡವತ್ಪ್ರಣತೋ ಭುವಿ ।
ಅಥ ದೇವೋಽವರುಹ್ಯಾಽಶು ವೃಷಾದ್ಗೌರೀಯುತ ಸ್ತದಾ ॥೨೪॥

ಉಪಸೃತ್ಯ ಸಮೀಪೇ ತಂ ರಾಜಾನಂ ಮೂರ್ಧ್ನಿಸೋಽಸ್ಪೃಶತ್ ।
ಉವಾಚ ಪ್ರೇಮ ಮಧುರಂ ಸುಂದರಂ ವಚನಂ ಶಿವಃ ॥೨೫॥

ದೇವೇಂದ್ರನ ಪದವಿಯೂ ಒಂದು ಹುಲ್ಲಿಗೂ ಸಮವಾಗಿಲ್ಲದಿರುವಂತೆ ತೋರುತ್ತದೆ. ಹೀಗಿರುವಾಗ ಅವನಿಗೆ ಮನುಷ್ಯನ ಭಾಗ್ಯದಲ್ಲಿ ಏನು ಮಹಿಮೆ ಕಾಣುವುದು? ಹೀಗಿದ್ದರೂ, ಈಗ ನಾನು ಬಯಸುತ್ತಿರುವ ವಿಷಯವು ಅತಿ ಕ್ಷುದ್ರವಾದುದು. ಓ ಈಶ್ವರನೇ, ನಾನು ಬೇಡುವ ವಿಚಾರವು ಜ್ಞಾನಿಗಳು ಬಹಳ ಕಾಲ ಪರಿಹಾಸ್ಯ ಮಾಡುವಷ್ಟು ಅಲ್ಪವಾಗಿದೆ ಓ ದೇವೇಶನೇ, ಆದ್ದರಿಂದ ನನಗೆ ಪ್ರಾಪಂಚಿಕ ವಿಷಯುಗಳಲ್ಲಿರುವ ಆಸಕ್ತಿಯು ತೊಲಗುವಂತೆ ದಯವಿಟ್ಟು ಮಾಡು. ಜನರು ಪ್ರಾಪಂಚಿಕ ವಿಷಯುಗಳೆಲ್ಲವೂ ದುಃಖಕ್ಕೆ ಕಾರಣಗಳೆಂದು ತಿಳಿದಿದ್ದಾಗ್ಯೂ, ಮಾಯೆಯಿಂದ ಅಜ್ಞಾನಕ್ಕೆ ಒಳಗಾಗಿ ಅವುಗಳನ್ನೇ ಬಯಸುತ್ತಿರುತ್ತಾರೆ. ಓ ಶಿವನೇ, ಆದ್ದರಿಂದ ಇನ್ನೊಬ್ಬರು ರಕ್ಷಕರಿಲ್ಲದ ದೀನನಾದ ನನ್ನಲ್ಲಿ ನಿನ್ನ ಕೃಪಾದೃಷ್ಟಿಯೊಂದಿದ್ದರೆ ಸಾಕು. ಓ ದೇವದೇವನೇ, ನಿನಗೆ ನಮುಸ್ಕಾರ ಮಾಡುವೆನು. ॥೨೨-೨೩॥

ದೊರೆಯು ಲೋಕಕ್ಕೆ ಕ್ಷೇಮವನ್ನುಂಟುಮಾಡುವ ದೇವದೇವನಾದ ಶಿವನನ್ನು ಹೀಗೆ ಸ್ತೋತ್ರಮಾಡಿ, ಆನಂದಪೂರ್ಣವಾದ ಮನಸ್ಸುಳ್ಳವನಾಗಿ, ಅವನಿಗೆ ಭೂಮಿಯಲ್ಲಿ ದಂಡಾಕಾರವಾಗಿ ಪ್ರಣಾಮಮಾಡಿದನು. ಅನಂತರ ಶಿವನು ತತ್‌ಕ್ಷಣ ಕೆಳಗಿಳಿದು ಗೌರಿಯಿಂದ ಕೂಡಿದವನಾಗಿ ದೊರೆಯನ್ನು ಸಮೀಪಿಸಿ, ಅವನ ಶಿರವನ್ನು

ವತ್ಸೋತ್ತಿಷ್ಠ ದ್ರುತಂ ಬ್ರೂಹಿ ಪ್ರಿಯಂ ಕಿಂ ತೇಽಭಿವಾಂಛಿತಂ ।
ಯನ್ನಲಭ್ಯೇತ ತಲ್ಲೋಕೇ ಮದ್ಭಕ್ತಸ್ಯ ನ ವಿದ್ಯತೇ ॥೨೬॥

ತಚ್ಛ್ರುತ್ವಾ ವಚನಂ ರಾಜಾ ಪ್ರೋತ್ಥಾಯಾಂಜಲಿ ಸಂಯುತಃ ।
ಶಿವಾಂಘ್ರಿದರ್ಶನೋದಂಚದ್ವೈರಾಗ್ಯಭರಮಂಥರಃ ॥೨೭॥

ಮಹಾದೇವ ಪ್ರಿಯಂ ಮೇಽದ್ಯ ಯದಿ ತ್ವಂ ದಾತುಮಿಚ್ಛಸಿ ।
ತರ್ಹಿ ಮೇ ವಿಷಯಾಸಕ್ತಿಂ ಸಮೂಲಾಂ ವಿನಿವರ್ತಯ ॥೨೮॥

ನೇಚ್ಛಾಮಿ ಕಿಂಚಿತ್ತ್ವತ್ಪಾದ ಸೇವನಾದನ್ಯಕಲ್ಪನಂ ।
ಕೃಪಾ ಪೂರ್ಣಾ ಯದಿ ಮಯಿ ನಯ ಮಾಂ ತ್ವತ್ಸಮೀಪತಃ ॥೨೯॥

ರಾಜ್ಞ ಏವಂ ವಚಃ ಶಂಭುರ್ನಿಶಮ್ಯ ಪ್ರಾಹ ಸುಸ್ಮಿತಂ ।
ವತ್ಸೈತದಸ್ತು ಕಾಲೇನ ಮತ್ಸಾಮೀಪ್ಯಂ ಭವಿಷ್ಯತಿ ॥೩೦॥

ಮುಟ್ಟಿದನು. ಅಲ್ಲದೆ ಶಿವನು ಪ್ರೇಮದಿಂದ ಮಧುರವಾದ ಮಾತನ್ನು ಈರೀತಿಯಲ್ಲಿ ಅವನಿಗೆ ಹೇಳಿದನು. "ಎಲೈ ವತ್ಸನೇ, ಏಳು; ನಿನಗೆ ಇಷ್ಟವಾದದ್ದೇನೆಂದು ಶೀಘ್ರವಾಗಿ ಹೇಳು. ನನ್ನ ಭಕ್ತನಿಗೆ ನನ್ನಿಂದ ಪಡೆಯಲಾರದ ವಸ್ತುವು ಲೋಕದಲ್ಲಿ ಯಾವುದು ತಾನೆ ಇದೆ?" ॥೨೪-೨೫-೨೬॥

ಶಿವನ ಈ ಮಾತನ್ನು ಕೇಳಿ ರಾಜನು ಮೇಲಕ್ಕೆದ್ದು, ಕೈಜೋಡಿಸಿ ಅವನ ಪಾದಗಳ ದರ್ಶನದಿಂದುಂಟಾದ ವೈರಾಗ್ಯಾತಿಶಯದಿಂದ ಪೂರ್ಣನಾಗಿ ಅವನನ್ನು ಕುರಿತು "ಓ ಮಹಾದೇವನೇ, ನೀನು ದಯವಿಟ್ಟು ನನಗೆ ಪ್ರಿಯವಾದ ವರವನ್ನು ಕೊಡಲು ಇಷ್ಟಪಟ್ಟರೆ, ನನ್ನ ಪ್ರಾಪಂಚಿಕ ವಿಷಯಗಳ ಮೇಲಿರುವ ಆಶೆಯು ಸಂಪೂರ್ಣವಾಗಿ ನಾಶವಾಗುವಂತೆ ಮಾಡು. ನಿನ್ನ ಪಾದಸೇವೆಯನ್ನು ಬಿಟ್ಟು ಅಲ್ಪವಾದ ಇನ್ನಾವುದೂ ನನಗೆ ಇಷ್ಟವಾದುದಾಗಿಲ್ಲ. ನೀನು ನನ್ನಲ್ಲಿ ಕೃಪಾಪೂರ್ಣನಾಗಿದ್ದರೆ ನನ್ನನ್ನು ನಿನ್ನ ಸಮೀಪಕ್ಕೆ ಕರೆದುಕೋ." ಎಂದು ಪ್ರಾರ್ಥಿಸಿದನು. ॥೨೭-೨೮-೨೯॥

ರಾಜನು ಹೀಗೆ ಹೇಳಿದ್ದನ್ನುಕೇಳಿ, ಶಿವನು ಮುಗುಳ್ನಗೆ ನಗುತ್ತಾ ಅವನನ್ನು ಕುರಿತು, "ಎಲೈ ವತ್ಸನೇ, ನೀನು ನನ್ನ ಸಾಮೀಪ್ಯವನ್ನು ಕೊನೆಯಲ್ಲಿ ಸೇರುವೆ. ಆದರೆ ಸದ್ಯಃ ನೀನು ಅಲ್ಲಿಗೆ ಹೋಗಿ ಜಯಿಸಲು ಅಸಾಧ್ಯನಾಗಿರುವಂತೆ ಕಾಣಬರು

ಪರಂ ತು ಸದ್ಯಸ್ತ್ವಂ ಗಚ್ಛ ಕಾಮಂ ಜಯ ದುರಾಸದಂ ।
ತಸ್ಯ ಜೇತಾ ಭುವಿ ದಿವಿ ಪ್ರಾಯೋ ನೈವಾಸ್ತಿ ಮಾಮೃತೇ ॥೩೧॥

ತಸ್ಮಾತ್ ಕಾಮಂ ವಿನಿರ್ಜಿತ್ಯ ಪ್ರಜಾಃ ಪಾಲಯ ಧರ್ಮತಃ ।
ಏವಂ ತದ್ವಚನಂ ಶ್ರುತ್ವಾ ನನಾಮ ಭುವಿ ದಂಡವತ್ ॥೩೨॥

ಪ್ರಾಹ ದೇವಂ ಮಹೇಶಾನಂ ನ ವಾಂಛಾಮೀತಿ ತೇ(ಮಿ ತವೇ)ರಿತಂ।
ಪ್ರಸಾದಂ ಕುರು ತೇ ಪಾದಸೇವಾಂ ಹಿತ್ವಾ ಮಹತ್ತರಂ ॥೩೩॥

ತ್ರಿಲೋಕೇಶತ್ವಮಪಿ ಮೇ ಮಾಽಸ್ತು ಕಿಂ ಸಾರ್ವಭೌಮತಾ ।
ವದ ದೇವ ತ್ವಯಾ ಪ್ರೋಕ್ತಂ ದದಾಮೀತ್ಯಭಿವಾಂಛಿತಂ ॥೩೪॥

ತದನ್ಯಥಯಿತುಂ ಕಸ್ಮಾನ್ನಾಹಂ ಶತ್ರುಜಯಂ ವೃಣೇ ।
ತ್ವತ್ಸಾನ್ನಿಧ್ಯಂ ಯದಿ ನ ಮೇ ತರ್ಹ್ಯಹಂ ದೇವಸಂಸ್ಥಿತಃ ॥೩೫॥

ತ್ತಿರುವ ಕಾಮನನ್ನು ಅಲ್ಲಿಗೆ ಹೋಗಿ ಜಯಿಸು. ಅವನನ್ನು ಜಯಿಸುವವನು ಭೂಮಿಯಲ್ಲಾಗಲೀ ಸ್ವರ್ಗದಲ್ಲಾಗಲೀ ನನ್ನನ್ನು ಬಿಟ್ಟು ಪ್ರಾಯಶಃ ಮತ್ತೊಬ್ಬನೂ ಇಲ್ಲ. ಆದ್ದರಿಂದ ನೀನು ಮನ್ಮಥನನ್ನು ಜಯಿಸಿ, ಪ್ರಜೆಗಳನ್ನು ಧರ್ಮದಿಂದ ಕಾಪಾಡು.'' ಹೀಗೆ ಶಿವನು ಹೇಳಿದ್ದನ್ನು ಕೇಳಿ ರಾಜನು ಅವನಿಗೆ ದಂಡಾಕಾರವಾಗಿ ಪ್ರಣಾಮಮಾಡಿದನು. ||೩೦-೩೧-೩೨||

ಓ ಮಹೇಶನೇ, ನಾನು ಪ್ರಾಪಂಚಿಕಭೋಗಗಳಿಗೆ ಸ್ವಲ್ಪವೂ ಇಷ್ಟಪಡುತ್ತಿಲ್ಲ. ಎಂದು ಹೇಳಿದೆನಲ್ಲವೇ? ಎಂದು ಶಿವನಿಗೆ ಹೇಳಿದನು. "ಓ ಶಿವನೇ, ನನ್ನನ್ನು ಅನುಗ್ರಹಿಸು. ನಿನ್ನ ಪಾದಸೇವೆಯನ್ನು ಬಿಟ್ಟು ಅತ್ಯಂತ ಮಿಗಿಲಾದ ಮೂರು ಲೋಕಗಳ ಆಧಿಪತ್ಯವೂ ಅಥವಾ ಚಕ್ರವರ್ತಿಯ ಪದವಿಯು ನನಗೆ ಇಷ್ಟವಾಗಿಲ್ಲ. ಓ ದೇವನೇ, ನಿನಗೆ ಇಷ್ಟವಾದುದನ್ನು ದಯಪಾಲಿಸುವೆನೆಂದು ಈಗತಾನೇ ನೀನು ಹೇಳಿದೆಯಲ್ಲವೆ? ದಯವಿಟ್ಟು ಆ ಮಾತನ್ನು ಬದಲಾಯಿಸಬೇಡ. ನಾನು ಶತ್ರುಜಯವನ್ನು ಬೇಡುವುದಿಲ್ಲ. ನಿನ್ನ ಸಾಮೀಪ್ಯವು ನನಗೆ ಸಿಕ್ಕದಿದ್ದರೆ ನಾನು ಪುನಃ ತಪಸ್ಸನ್ನುಮಾಡಲು ಅಥವಾ ಪ್ರಾಣವನ್ನು ಬಿಡಲು ಇಚ್ಛಿಸುವೆನು. ||೩೩-೩೪-೩೫||

ತಪಸ್ಯೇವ ತತೋ ದೇವ ವರಂ ಫಲ್ಗು ನ ಮೇ ಮತಂ ।
ಇತಿ ಶ್ರುತ್ವಾ ನೃಪವಚೋ ಭೂಯಃ ಪ್ರಾಹ ಮಹೇಶ್ವರಃ ॥೩೬॥

ಶೃಣು ರಾಜನ್ ತ್ವಯಾ ಪೂರ್ವಂ ಕಾಮಸ್ಯ ಜಯಹೇತವೇ ।
ತಪಶ್ಚರಿತ ಮೇತಸ್ಮಾತ್ತದ್ವ್ಯರ್ಥಂ ನ ಭವಿಷ್ಯತಿ ॥೩೭॥

ಯದಿ ಪೂರ್ವಂ ಮತ್ಸಮೀಪ ಪ್ರಾಪ್ತಯೇ ಪತಿ(ಭಾವಿ)ತಂ ಭವೇತ್।
ತರ್ಹಿ ತತ್ಫಲಮೇವ ಸ್ಯಾನ್ನಭವೇದ್ಭಾವನಾ ವೃಥಾ ॥೩೮॥

ತಸ್ಮಾದಿದಂ ಫಲಂ ನೈವ ಮದುಕ್ತಂ ವ್ಯರ್ಥತಾಮಿಯಾತ್ ।
ಗಚ್ಛ ಕಾಮಂ ರಣೇ ಜಿತ್ವಾ ಸಾರ್ವಭೌಮತ್ವಮಾಸ್ಥಿತಃ ॥೩೯॥

ಅಂತೇ ಮಜ್ಜ್ಞಾನ ಮಾಸಾದ್ಯ ಮತ್ಸಮೀಪಂ ಪ್ರಪತ್ಸ್ಯಸಿ ।
ಮತ್ಪ್ರಸಾದಾತ್ತವ ಮನಃ ಸದಾ ನಿರ್ವಾಸನಂ ಭವೇತ್ ॥೪೦॥

ಇತ್ಯುಕ್ತ್ವಾ ಪಶ್ಯತಃ ಶಂಭುರಂತರ್ಧಾನಂ ಗತಸ್ತದಾ ।
ತತೋ ರಾಜಾ ಮಹಾದೇವಂ ಪ್ರಣಮ್ಯ ಪ್ರೇಮಭಾವತಃ ॥೪೧॥

ಓ ದೇವದೇವನೇ, ಅಲ್ಪವಾದ ಇವುಗಳನ್ನು ಹೊಂದುವುದಕ್ಕಿಂತಲೂ, ನಿನ್ನ ಸೇವಾಭಾಗ್ಯವನ್ನು ಹೊಂದುವುದಕ್ಕೋಸ್ಕರ ತಪಸ್ಸುಮಾಡುವುದೇ ಶ್ರೇಷ್ಠವೆಂದು ಭಾವಿಸುತ್ತೇನೆ. ಹೀಗೆ ಧೊರೆಯಾಡಿದ ಮಾತನ್ನು ಕೇಳಿ ಮಹೇಶ್ವರನು ಪುನಃ ಅವನನ್ನು ಕುರಿತು "ಎಲೈ ರಾಜನೇ, ಕೇಳು. ನೀನು ಕಾಮನನ್ನು ಜಯಿಸುವುದಕ್ಕಾಗಿಯೇ ಹಿಂದೆ ತಪಸ್ಸಿಗೆ ಆರಂಭಿಸಿದ್ದು. ಆದ್ದರಿಂದ ಆ ಕಾಮ್ಯತಪಸ್ಸು ವ್ಯರ್ಥವಾಗಲಾರದು. ನೀನು ನನ್ನ ಸಾಮೀಪ್ಯವನ್ನು ಹೊಂದುವುದಕ್ಕಾಗಿಯೇ ತಪಸ್ಸು ಮಾಡಿದ್ದರೆ ಹಾಗೆ ನನ್ನ ಸಾಮೀಪ್ಯವೇ ಸಿಕ್ಕುತ್ತಿತ್ತು. ಆದ್ದರಿಂದ ನಿನ್ನ ಹಿಂದಿನ ಭಾವನೆಯು ವ್ಯರ್ಥವಾಗಲಾರದು. ||೩೬-೩೭-೩೮||

ಆದ್ದರಿಂದ ನಾನು ನಿನಗೆ ಅನುಗ್ರಹಿಸಿ ಹೇಳಿರುವ ಫಲವು ವ್ಯರ್ಥವಾಗಲಾಗಲಾರದು. ಯುದ್ಧದಲ್ಲಿ ಮನ್ಮಥನನ್ನು ಜಯಿಸಿ ಚಕ್ರವರ್ತಿಯ ಪದವಿಯನ್ನು ಅನುಭವಿಸಲು ಹೋಗು. ಎಂದು ಹೇಳಿದನು. ಆದರೂ ||೩೯||

"ಕೊನೆಯಲ್ಲಿ ನನ್ನ ಸ್ವರೂಪವಿಷಯವಾದ ಜ್ಞಾನವನ್ನು ಹೊಂದಿ ನನ್ನ ಸಮೀಪವನ್ನೂ ಸೇರುವೆ! ನನ್ನ ಪ್ರಸಾದದಿಂದ ನಿನ್ನ ಮನಸ್ಸು ಯಾವಾಗಲೂ

ಶಿವಾಽಜ್ಞಾಂ ಮಾನಯನ್ನಂತರ್ನಿರ್ಮಲಃ ಸಂಬಭೂವ ಹ ।
ಏತಸ್ಮಿನ್ನಂತರೇ ಕಾಮಃ ಸರ್ವಾನ್ ಜಿತ್ವಾ ಜನಾನ್ ಭುವಿ ॥೪೨॥

ಬಧ್ವಾ ಸಮಾಗಮದ್ಬ್ರಹ್ಮಾವರ್ತಂ ತತ್ರ ಬಹಿಃ ಸ್ಥಿತಾಃ ।
ದೃಷ್ಟ್ವಾ ಜನಾಃ ಕುಮಾರಂ ತಂ ಸೌಂದರ್ಯೌಘ ಪರಿಪ್ಲುತಮ್॥೪೩॥

ನಿಬದ್ಧನಯನಾಸ್ತತ್ರ ವಿಸ್ಮೃತಾಽತ್ಮಗೃಹಾದಯಃ ।
ಯದ್ಯದಂಗಂ ಯೇನ ದೃಷ್ಟಂ ತತ್ಸೌಂದರ್ಯಾಽಹೃತೇಕ್ಷಣಾಃ ॥೪೪॥

ದಾಽರುಮೂರ್ತ್ಯಾ ಇವ ಜನಾ ನಿಶ್ಚೇಷ್ಟಾಸ್ತತ್ರ ಸಂಸ್ಥಿತಾಃ ।
ತದಾ ಕಾಮೋ ನಾಗರಿಕಾನಾಹ ರೋಷಾಽರುಣೇಕ್ಷಣಃ ॥೪೫॥

ಇತಿ ತದ್ವಚನಂ ಶ್ರುತ್ವಾ ಕಾಮಸ್ಯಾತ್ಯದ್ಭುತಂ ಜನಾಃ ।
ಪುರಾ ಶ್ರುತಂ ಮಹಾಭೀಮ ವೀರ್ಯಂ ಪ್ರಾಪ್ತಂ ನಿಶಾಮ್ಯ ತೇ ॥೪೬॥

ವಿಷಯಾಸಕ್ತವಾಗದೆ ಶುದ್ಧವಾಗಿರುವುದು. ಹೀಗೆ ಹೇಳಿ ರಾಜನು ನೋಡುತ್ತಿರುವಾಗಲೇ ಶಿವನು ಅಂತರ್ಧಾನವನ್ನು ಹೊಂದಿದನು. ಅನಂತರದಲ್ಲಿ ದೊರೆಯು ಮಹಾದೇವನಾದ ಶಿವನಿಗೆ ಪ್ರೇಮದಿಂದ ನಮಸ್ಕರಿಸಿ, ಅವನ ಆಜ್ಞೆಯನ್ನು ಗೌರವಿಸಿ ಶುದ್ಧವಾದ ಮನಸ್ಸುಳ್ಳವನಾದನು. ಈ ಮಧ್ಯೇ ಮನ್ಮಥನು ಭೂಲೋಕದಲ್ಲಿ ಎಲ್ಲಾ ಜನರನ್ನೂ ಜಯಿಸಿ ಅವರನ್ನೆಲ್ಲರನ್ನೂ ಕಟ್ಟಿಹಾಕಿ ಬಂದನು. ॥೪೦-೪೧-೪೨॥

ಹೀಗೆ ಮನ್ಮಥನು ಜನರನ್ನೆಲ್ಲರನ್ನೂ ಮೋಹಗೊಳಿಸಿ ಕಟ್ಟಿಹಾಕಿ, ಬ್ರಹ್ಮಾವರ್ತ ದೇಶಕ್ಕೆ ಬಂದನು. ಅಲ್ಲಿ ಹೊರಗಡೆ ನಿಂತಿದ್ದ ಜನರು ಸೌಂದರ್ಯಾತಿಶಯದಿಂದ ಮೋಹಕನಾದ ಆ ಬಾಲಕನನ್ನು ನೋಡುತ್ತಾ ತಮ್ಮ ಮನೆ ಮುಂತಾದವನ್ನೂ ಮರೆತು, ಅವನಲ್ಲೇ ನೆಟ್ಟದೃಷ್ಟಿಯುಳ್ಳವರಾಗಿದರು. ಯಾವ ಯಾವ ಮನುಷ್ಯರು ಮನ್ಮಥನ ಯಾವ ಯಾವ ಅಂಗಗಳನ್ನು ನೋಡಿದರೋ ಆಯಾಯಾ ಅಂಗದ ಸೌಂದರ್ಯದಿಂದಲೇ ಮೋಹಗೊಂಡು, ಮರದಲ್ಲಿ ಮಾಡಿದ ಬೊಂಬೆಯ ಆಕಾರವುಳ್ಳವರಂತೆ, ಅಲುಗಾಡದೆ ಅವನನ್ನೇ ನೋಡುತ್ತಾ ನಿಂತಿದ್ದರು! ಆಗ ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ ಮನ್ಮಥನು ಆ ಪಟ್ಟಣಿಗರನ್ನು ಕುರಿತು ಈ ಮುಂದೆ ಹೇಳುವ ರೀತಿಯಲ್ಲಿ ಹೇಳಿದನು. ॥೪೩-೪೪-೪೫॥

"ಎಲೈ ಜನರೇ, ನಾನು ನಿಮ್ಮೂರಿನ ಸಮೀಪಕ್ಕೆ ಬಂದಿದ್ದೇನೆಂದೂ, ಶೀಘ್ರವಾಗಿ ನನ್ನ ಆಜ್ಞೆಯನ್ನಾಗಲೀ ಅಥವಾ ನನ್ನೊಡನೆ ಯುದ್ಧವನ್ನಾಗಲೀ ಅಂಗೀ

ಹೇ ಜನಾ ಮಾಂ ಮಹಾರಾಜಂ ವದಂತು ಪ್ರಾಪ್ತಮಂತಿಕೇ ।
ಶೀಘ್ರಂ ಮಚ್ಛಾಸ್ತಿಮಥವಾ ಯುದ್ಧ ವಾಂ ಸ್ವೀಕರೋತು ಸಃ ॥೪೭॥

ತತ್ರ ಸುನಾಗರಾಃ ಸರ್ವೇ ಪಲಾಯನಪರಾ ಭರ್ವ ।
ಹಾಹೇತಿ ಪುತ್ರಪುತ್ರೇತಿ ಮಾತಭ್ರಾರ್ತಃ ಸಖೇ ಇತಿ ॥೪೮॥

ನಿರ್ಗಚ್ಛಧ್ವಂ ಪಲಾಯಧ್ವಂ ಇತ್ಯಾಕ್ರಂದಃ ಸಮಾಬಭೌ ।
ತತ್ಪರಂಪರಯಾ ಶ್ರುತ್ವಾ ಜನಾಃ ಪೌರಾಸ್ತು ಸರ್ವತಃ ॥೪೯॥

ನಿರ್ಜಗ್ಮುಃ ಸ್ತ್ರೀ ಬಾಲವೃದ್ಧಾ ಆಹ್ವಯಂತಃ ಪರಸ್ಪರಂ ।
ಏವಂ ಕ್ಷಣಾತ್ತನ್ನಗರ ಮುದ್ವೇಲಮಿವ ಸಾಗರಮ್ ॥೫೦॥

ವ್ಯಾಕ್ಷುಬ್ಧಂ ಜನಸಂದೋಹಾಃಕ್ರಂದಕೋಲಾಹಲೇನ ತತ್ ।
ದುರ್ಗಪಾಲಾ ಭಟಾಃ ಸೇನಾ ನಾಯಕೌಘಾಃ ಸಹಸ್ರಶಃ ॥೫೧॥

ಕರಿಸಬೇಕೆಂದೂ, ನಿಮ್ಮ ಮಹಾರಾಜನಿಗೆ ಹೇಳಿರಿ," ಹೀಗೆ ಮನ್ಮಥನು ಹೇಳಿದ ಅತ್ಯಾಶ್ಚರ್ಯಕರವಾದ ಮಾತನ್ನು ಕೇಳಿ, ಹಿಂದೆ ತಾವು ಕೇಳಿದ್ದ, ಮಹಾ ಭಯಂಕರ ವಾದ ವೀರ್ಯವುಳ್ಳ ಬಾಲಕನೇ ಬಂದಿದ್ದಾನೆಂದು ತಿಳಿದು, ಅಲ್ಲಿದ್ದ ಪಟ್ಟಣಿಗರೆಲ್ಲರೂ "ಅಯ್ಯೋಯ್ಯೋ! ಮಗನೇ! ತಾಯಿಯೇ! ಅಣ್ಣ! ಸ್ನೇಹಿತ!" ಎಂದು ಕೂಗುತ್ತಾ ಪಲಾಯನಮಾಡಲು ಪ್ರಾರಂಭಿಸಿದರು. ||೪೬-೪೭-೪೮||

"ಓಡಿರಿ, ಪಲಾಯನ ಮಾಡಿರಿ!" ಎಂಬ ಕೂಗು ಎಲ್ಲೆಲ್ಲಿಯೂ ಕೇಳಿ ಬಂದಿತು. ಈ ಸಮಾಚಾರವನ್ನು ಕ್ರಮ ಕ್ರಮವಾಗಿ ಪಟ್ಟಣಿಗರೆಲ್ಲರೂ ಕೇಳಿ ಎಲ್ಲಾ ಕಡೆಯಲ್ಲಿಯೂ ಚದುರಿ ಓಡಿಹೋದರು. ಸ್ತ್ರೀಯರು, ಬಾಲರು, ವೃದ್ಧರು, ಅನ್ಯೋನ್ಯ ವಾಗಿ ಒಬ್ಬರನ್ನೊಬ್ಬರು ಕೂಗುತ್ತಾ ಓಡಿದರು. ಹೀಗೆ ಒಂದು ಕ್ಷಣಕಾಲದಲ್ಲಿಯೇ, ದಡವನ್ನು ಮೀರುವಂತೆ ವೃದ್ಧಿಹೊಂದಿದ ಸಾಗರದಂತೆ, ಅಲ್ಲೆಲ್ಲಾ ಜನಗಳ ಗುಂಪಿನ ಕೂಗಿನ ಕೋಲಾಹಲಧ್ವನಿಯಿಂದ ಅಲ್ಲೋಲಕಲ್ಲೋಲವಾಯಿತು. ದುರ್ಗಪಾಲಕರು ಸೈನಿಕರು, ಸೇನಾಪತಿಗಳ ಗುಂಪು ಸಾವಿರಗಟ್ಟಲೆ ತಮ್ಮ ಸಾಮಗ್ರಿಗಳನ್ನು ಸಿದ್ಧ ಗೊಳಿಸಿಕೊಂಡರು. ||೪೯-೫೦-೫೧||

ಸೈನಿಕರೇ ಮೊದಲಾದವರು ಶಸ್ತ್ರಾಸ್ತ್ರಗಳನ್ನು ಹಿಡಿದುಕೊಂಡು ವಾಹನ ಗಳನ್ನು ಹತ್ತಿ ಹೊರಟರು. ಈ ಸಂದರ್ಭದಲ್ಲಿ ಮಹಾಬಲಶಾಲಿಯಾದ ಸೇನಾಧಿಪತಿ

ವಾಹನಾನಿ ಸಮಾರುಹ್ಯ ಶಸ್ತ್ರಾಽಸ್ತ್ರಧೃತಬಾಹವಃ ।
ಏತಸ್ಮಿನ್ನಂತರೇ ತಸ್ಯ ಸೇನಾನೀಃ ಸುಧೃತಿರ್ದ್ರುತಂ ॥೫೨॥

ಮಹಾವೀರ್ಯಬಲಃ ಸೇನಾಂ ಪ್ರಸ್ಥಾಪ್ಯ ನಗರಾದ್ಬಹಿಃ ।
ದ್ವಾರೇ ನಿವೇಶ್ಯ ದ್ವಾರಾಧಿಪತೀನ್ ಪ್ರಾಗಾದಿತಃ ಕ್ರಮಾತ್ ॥೫೩॥

ಕೋಣೇಷ್ವಪಿ ಮಹಾಶೂರ ಭಟಾನ್ ಸಂಸ್ಥಾಪ್ಯ ಗುಲ್ಮಶಃ ।
ವರ್ಧನಸ್ಯ ಗೃಹಂ ಪ್ರಾಗಾತ್ ದ್ರುತಂ ವಾಹನಮಾಸ್ಥಿತಃ ॥೫೪॥

ವರ್ಧನಸ್ತಾವದೇವಾಽಽಶು ಸಂಸ್ಥಾಪ್ಯಾಽಂತಃ ಪುರೇ ಜನಾನ್ ।
ರಕ್ಷಕಾನ್ ರಕ್ಷಣಾರ್ಥಾಯ ದೂತಾನ್ ಶೀಘ್ರಗಮಾನಪಿ ॥೫೫॥

ರಾಜ್ಞೇ ನಿವೇದಿತುಂ ಪ್ರೇತ್ಯ ಸ್ವಯಂ ಮಂತ್ರಿಭಿರಾವೃತಃ ।
ನಿವೇದ್ಯ ರಾಜಪುತ್ರೇಷು ಕಾಮಸ್ಯಾಽಗಮನಂ ತತಃ ॥೫೬॥

ನಿರ್ಜಗಾಮ ಸ್ವಭವನಾತ್ ಸುಧೃತಿಂ ಸಮವೈಕ್ಷತ ।
ಆಗತ್ಯ ವರ್ಧನಂ ನತ್ವಾ ಪ್ರೋವಾಚ ಸ ಚಮೂಪತಿಃ ॥೫೭॥

ಯಾದ ಸುಧೃತಿ ಎಂಬುವನು ಬಹು ಶೀಘ್ರವಾಗಿ ಪಟ್ಟಣದ ಹೊರಗಡೆ ಸೈನ್ಯವನ್ನು ಸಿದ್ಧಗೊಳಿಸಿ, ಕೋಟೆಯ ಬಾಗಿಲಲ್ಲಿ ದ್ವಾರಪಾಲಕರ ಅಧಿಪತಿಗಳನ್ನು ನಿಯಮಿಸಿ, ಮೊದಲಿನಿಂದ ಕ್ರಮವಾಗಿ ಮಹಾಶೂರರಾದ ಸೈನಿಕರನ್ನೂ ಗುಂಪುಗುಂಪಾಗಿ ಪ್ರತಿ ಮೂಲೆಗಳಲ್ಲಿಯೂ ನಿಯಮಿಸಿ, ವಾಹನವನ್ನೇರಿ ವರ್ಧನನ ಮನೆಗೆ ಬಹು ಶೀಘ್ರವಾಗಿ ಹೋದನು. ||೫೨-೫೩-೫೪||

ಅಷ್ಟರೊಳಗಾಗಿಯೇ, ವರ್ಧನನು ರಕ್ಷಕರಾದ ಜನರನ್ನು ಅಂತಃಪುರದಲ್ಲಿ ರಕ್ಷಣೆಗಾಗಿ ನಿಯಮಿಸಿ, ಶೀಘ್ರವಾಗಿ ಹೋಗಬಲ್ಲ ದೂತರನ್ನು ರಾಜನಿಗೆ ಈ ಸಮಾಚಾರವನ್ನು ತಿಳಿಸಲು ಕಳುಹಿಸಿ, ತಾನು ಇತರ ಮಂತ್ರಿಗಳೊಡನೆ ಮನ್ಮಥನ ಬರುವಿಕೆಯನ್ನು ರಾಜಪುತ್ರರಿಗೆ ತಿಳಿಸಿ, ತನ್ನ ಮನೆಯಿಂದ ಹೊರಟಿದ್ದನು. ಆಗ ತಾನೆ ಅವನು ಸುಧೃತಿಯನ್ನು ನೋಡಿದನು. ಸೇನಾನಾಯಕನಾದ ಸುಧೃತಿಯು ಕೂಡಲೇ ಸಮೀಪಿಸಿ ವರ್ಧನನಿಗೆ ನಮಸ್ಕರಿಸಿ ಈ ರೀತಿ ವಿಜ್ಞಾಪನೆ ಮಾಡಿಕೊಂಡನು. ||೫೫-೫೬-೫೭||

ಶೃಣು ವರ್ಧನ ಮದ್ವಾಕ್ಯಂ ಸೇನಾ ಸೇನಾಽಧಿಪೈಃ ಸಹ ।
ಪ್ರೇಷಿತಾ ಕಾಮರೋಧಾಯ ವಿಹಿತಂ ದ್ವಾರರಕ್ಷಣಂ ॥೫೮॥

ಗುಲ್ಮಾ ನಿವೇಶಿತಾಃ ಕೋಣೇ ನಾಗರಾಃ ಸನ್ನಿವರ್ತಿತಾಃ ।
ಪಲಾಯನಪರಾಃ ಸರ್ವೇ ಗಚ್ಛಾಮ್ಯಹಮಿತಃ ಪರಂ ॥೫೯॥

ರಾಜಪುತ್ರಾನುಪಾದಾತುಂ ಶತ್ರುಂಜಯಮುಖಾನ್ ತತಃ ।
ತಾನ್ ಪುರಸ್ಕೃತ್ಯ ತರಸಾ ಗಚ್ಛಾಮಿ ಸಮರಾಽವನಿಮ್ ॥೬೦॥

ಏವಂ ವದತಿ ತತ್ಕಾಲೇ ಸುಧೃತೌ ರಾಜಪುತ್ರಕಾಃ ।
ಸಹಿತಾಃ ಸ್ವಸ್ವಸೇನಾಭಿರ್ನಿರ್ಜಗ್ಮುರಮಿತೌಜಸಃ ॥೬೧॥

ಶತ್ರುಂಜಯಃ ಶತ್ರುಹಾ ಚ ಭೀಮಃ ಸಮರತಾಪನಃ ।
ಚತ್ವಾರೋ ರಾಜತನಯಾಃ ಶಕ್ರತುಲ್ಯಪರಾಕ್ರಮಾಃ ॥೬೨॥

ಸನ್ನದ್ಧಗಾತ್ರಾ ಮುಕುಟಕುಂಡಲಾದ್ಯೈರಲಂಕೃತಾಃ ।
ವಜ್ರಸಂಹನನಾಃ ಪ್ರೋದ್ಯದ್ಬಹುಶಸ್ತ್ರಾಽಸ್ತ್ರಕೋವಿದಾಃ ॥೬೩॥

ಓ ವರ್ಧನನೇ, ದಯವಿಟ್ಟು ಲಾಲಿಸಬೇಕು. ಸೇನಾಧಿಪತಿಗಳೊಂದಿಗೆ ಸೈನ್ಯವನ್ನು ಮನ್ಮಥನನ್ನು ತಡೆಗಟ್ಟುವುದಕ್ಕೋಸ್ಕರ ಕಳುಹಿಸಿದ್ದೇನೆ. ಸೈನಿಕರ ಗುಂಪುಗಳನ್ನು ಪ್ರತಿಯೊಂದು ಮೂಲೆಗಳಲ್ಲಿಯೂ ರಕ್ಷಣೆಗಾಗಿ ವ್ಯವಸ್ಥೆಮಾಡಿದ್ದೇನೆ. ಓಡುತ್ತಿದ್ದ ಪಟ್ಟಣಿಗರನ್ನು ಭರವಸೆ ಹೇಳಿ ಹಿಂತಿರುಗಿಸಿದ್ದೇನೆ. ಇನ್ನು ಮುಂದೆ ನಾನು ಶತ್ರುಂಜಯನೇ ಮೊದಲಾದ ರಾಜಕುಮಾರರನ್ನು ಕರೆದುಕೊಂಡು ಬರಲು ಹೋಗುತ್ತೇನೆ. ಅವರನ್ನು ಮುಂದೆಮಾಡಿಕೊಂಡು ಶೀಘ್ರವಾಗಿ ಯುದ್ಧಭೂಮಿಯನ್ನು ಕುರಿತು ತೆರಳುವೆನು. ||೫೮-೫೯-೬೦||

ಹೀಗೆ ಸುಧೃತಿಯು ಹೇಳುತ್ತಿರಲಾಗಿ ರಾಜಕುಮಾರರು ತಮ್ಮ ತಮ್ಮ ಸೇನಾ ಸಮೇತರಾಗಿ, ಮಹಾ ತೇಜಸ್ಸಿನಿಂದಲೂ ಶೋಭಿಸುತ್ತಲಿರುವವರಾಗಿ ಯುದ್ಧಕ್ಕೆ ಹೊರಟರು. ಶತ್ರುಂಜಯ, ಶತ್ರುಹಾ, ಭೀಮ, ಸಮರತಾಪನ, ಎಂಬ ಈ ನಾಲ್ಕುಜನ ರಾಜಕುಮಾರರು ಇಂದ್ರನಿಗೆ ಸಮಾನವಾದ ಬಲ ಮತ್ತು ಪ್ರತಾಪಗಳಿಂದ ಕೂಡಿದ್ದರು. ಇವರು ಯುದ್ಧಕ್ಕೆ ಸಿದ್ಧರಾಗಿದ್ದು, ಕಿರೀಟ, ಕುಂಡಲಗಳೇ ಮುಂತಾದ ಆಭರಣಗಳಿಂದ ಶೋಭಿಸುತ್ತಾ, ವಜ್ರಾಯುಧದಂತಿದ್ದ ಆಯುಧಗಳನ್ನು

ರಥೇಷು ಸೂರ್ಯವರ್ಚಸ್ಸು ಸದಶ್ವೇಷು ವಿರಾಜಿತಾಃ ।
ಚಾಮರೈರ್ವೀಜ್ಯಮಾನಾಸ್ತೇ ಸ್ತುತಾ ವಂದಿಗಣೈರ್ಮುಹುಃ ॥೬೪॥

ಸುಧೃತಿಸ್ತಾನ್ ಸುಸಂಗಮ್ಯ ನತ್ವಾಽಽರುಹ್ಯ ಗಜಾಽಧಿಪಮ್ ।
ಜಗಾಮ ರಾಜಪುತ್ರಾಣಾಮಗ್ರೇ ಸರ್ವಾನ್ ಸಮಾಕ್ಷಿಪನ್ ॥೬೫॥

ಉವಾಚ ರಾಜಪುತ್ರೋಽಥ ವರ್ಧನಂ ಕುಲವರ್ಧನಂ ।
ಅಪ್ರಮತ್ತೈಃ ಕುರು ಭಟೈ ರಕ್ಷಣಂ ಸೇನಯಾ ಯುತೈಃ ॥೬೬॥

ಸಾಂತಃಪುರೇ ಸ್ವನಗರೇ ಚಾರೈರ್ವೃತ್ತಂ ನಿವೇದಯನ್ ।
ಇತಿ ಶ್ರುತ್ವಾ ರಾಜಸುತವಾಕ್ಯಂ ಸ್ವೀಕೃತ್ಯ ತದ್ವಚಃ ॥೬೭॥

ಪ್ರೋವಾಚ ವದತಾಂ ಶ್ರೇಷ್ಠೋ ವಚಸ್ತತ್ಕಾಲಸಮ್ಮಿತಂ ।
ರಾಜಪುತ್ರ ಮಹಾಭಾಗ ಗಚ್ಛ ತ್ವಂ ಸಹ ಸೇನಯಾ ॥೬೮॥

ಹಿಡಿದುಕೊಂಡು, ಅನೇಕ ವಿಧವಾದ ಶಸ್ತ್ರಾಸ್ತ್ರವಿದ್ಯಾಪಾರಂಗತರಾಗಿದ್ದರು. ||೬೧-೬೨-೬೩||

ಈ ರಾಜಕುಮಾರರು ಸೂರ್ಯನಂತೆ ಪ್ರಕಾಶಮಾನವಾದ ಶ್ರೇಷ್ಠವಾದ ಕುದುರೆಗಳನ್ನು ಕಟ್ಟಿರುವ ರಥಗಳಲ್ಲಿ ಕುಳಿತಿದ್ದರು. ಇವರು ಸುತ್ತಲೂ ಚಾಮರಗಳಿಂದ ಬೀಸಲ್ಪಡುತ್ತಿದ್ದರು. ಹೊಗಳುಭಟರು ಸ್ತೋತ್ರಮಾಡುತ್ತಿದ್ದರು. ಆಗ ಸುಧೃತಿಯು ಇವರನ್ನು ಬಂದು ಸೇರಿ ಆನೆಯಮೇಲೇರಿ ಸೈನಿಕರೆಲ್ಲರನ್ನೂ ಸರಿಪಡಿಸುತ್ತಾ ರಾಜಕುಮಾರರ ಮುಂದೆ ಹೊರಟನು. ಅನಂತರ ರಾಜಕುಮಾರನು ರಾಜ್ಯದ ಏಳಿಗೆಯನ್ನುಂಟುಮಾಡುವ, ವರ್ಧನನ್ನು ಕುರಿತು, "ಸೈನ್ಯಗಳಲ್ಲಿ ಸೇರಿರುವ ಸೈನಿಕರೊಡನೆ ಬಹಳ ಎಚ್ಚರಿಕೆಯಿಂದ ರಕ್ಷಣಾಕಾರ್ಯವನ್ನು ನೆರವೇರಿಸಿ." ಎಂದು ಆಜ್ಞೆಮಾಡಿದನು. ||೬೪-೬೫-೬೬||

"ಎಲೈ ವರ್ಧನನೇ, ಗೂಢಚಾರರ ಮೂಲಕ ಸಮಾಚಾರವನ್ನು ಅಂತಃಪುರಸಹಿತವಾದ ನಮ್ಮ ನಗರದಲ್ಲಿ ಯೋಗಕ್ಷೇಮಗಳನ್ನು ತಿಳಿಯುತ್ತಾ ಕಾಪಾಡಿ." ಎಂದು ರಾಜಕುಮಾರನು ಹೇಳಿದ ಮಾತನ್ನು ಅಂಗೀಕರಿಸಿ ವಾಗ್ಮಿಗಳಲ್ಲಿ ಶ್ರೇಷ್ಠನಾದ ವರ್ಧನನು ಆ ಸಮಯಕ್ಕೆ ಉಚಿತವಾದ ಮಾತನ್ನು ರಾಜಕುಮಾರನೊಂದಿಗೆ ಹೇಳುತ್ತಾ "ಓ ಮಹಾ ಭಾಗ್ಯಶಾಲಿಯಾದ ರಾಜಕುಮಾರನೇ, ನೀನು ಸೇನೆಯೊಡನೆ

ಕರ್ತವ್ಯಮತ್ರ ಯತ್ಕಿಂಚಿನ್ನಗರೇ ಮಯಿ ಜೀವತಿ ।
ನ ಹಾಸ್ಯತಿ ತ್ವತ್ಪ್ರಸಾದಾತ್ ಪ್ರಾಯಃ ಕೃತ್ಯಂ ತು ಸಾಂಪ್ರತಂ ॥೬೯॥

ಕೃತಮೇವಾಽವಜಾನೀಹಿ ಭವತಾಽಪಿ ರಣೋದ್ಯಮೇ ।
ಸಾವಧಾನೇನ ಯೋದ್ಧವ್ಯಂ (ತ್ವಯಾ) ಸೇನಾಧಿಪೈಃ ಸಹ ॥೭೦॥

ಏತಸ್ಮಿನ್ನಂತರೇ ತತ್ರ ಪ್ರಾಪ್ತಃ ಕುಲಪುರೋಹಿತಃ ।
ವಿದ್ಯಾಪತಿಃ ಬ್ರಾಹ್ಮಣೌಘವೃತಸ್ತೇಜೋಮಯಃ ಶುಚಿಃ ॥೭೧॥

ತಂ ದೃಷ್ಟ್ವಾ ರಾಜಪುತ್ರಾಸ್ತೇ ರಥಾದುತ್ತೀರ್ಯ ಸತ್ವರಮ್ ।
ಅಭಿವಾದ್ಯ ಗುರುಂ ವಿಪ್ರಾನ್ ಪ್ರಶ್ರಯಾವನತಾಃ ಸ್ಥಿತಾಃ ॥೭೨॥

ತತೋ ವಿದ್ಯಾಪತಿರ್ವಿಪ್ರೈರಾಶೀರ್ಭಿರನುಯೋಜ್ಯ ತಾನ್ ।
ಫಾಲೇಷು ತಿಲಕಂ ಕೃತ್ವಾ ಸಂಸ್ಪೃಶ್ಯಾಂಗಾನಿ ಸರ್ವಶಃ ॥೭೩॥

ಹೋಗು. ನಿನ್ನ ಅನುಗ್ರಹದಿಂದ ನಾನು ಬದುಕಿರುವಾಗ ಪಟ್ಟಣದಲ್ಲಿ ಕರ್ತವ್ಯ ಲೋಪಗಳೇನೂ ಆಗಲಾರವು. ಯುದ್ಧದಲ್ಲಿ ಮುಂದುವರಿಯುವುದಕ್ಕೆ ಬೇಕಾದ ಸಿದ್ಧತೆಯನ್ನೂ ಸರಿಯಾಗಿ ನೆರವೇರಿಸಿದ್ದೇನೆ.'' ಎಂದು ಹೇಳಿದನು. ॥೬೭-೬೮-೬೯॥

"ಅಲ್ಲದೆ ಯುದ್ಧಕ್ಕೆ ಯೋಗ್ಯವಾದ ಸಿದ್ಧತೆಗಳನ್ನೂ ನಾನು ನೆರವೇರಿಸಿದ್ದೇನೆಂದು ತಿಳಿ. ನೀನೂ ಸೇನಾಪತಿಗಳಿಂದ ಕೂಡಿ ಜಾಗರೂಕತೆಯಿಂದ ಯುದ್ಧವನ್ನು ನಡಸಬೇಕು'' ಎಂದು ಅರಿಕೆಮಾಡಿದನು. ॥೭೦॥

ಈ ಸಂದರ್ಭದಲ್ಲಿ ಬ್ರಾಹ್ಮಣರ ಸಮೂಹದಿಂದ ಸುತ್ತುವರಿಯಲ್ಪಟ್ಟವನೂ, ವಿದ್ಯಾಪತಿಯೂ, ಪರಿಶುದ್ಧನೂ, ಮಹಾ ತೇಜಸ್ವಿಯೂ ಆದ ರಾಜಕುಲದ ಪುರೋಹಿತನು ಅಲ್ಲಿಗೆ ಬಂದನು. ಆ ರಾಜಕುಮಾರರು ಅವನನ್ನು ನೋಡಿ ಶೀಘ್ರವಾಗಿ ರಥದಿಂದ ಕೆಳಗಿಳಿದು ಗುರುವಿಗೆ ನಮಸ್ಕರಿಸಿ ಸವಿನಯದಿಂದ ತಲೆಬಾಗಿ ನಿಂತಿದ್ದರು. ಅನಂತರ ವಿದ್ಯಾಪತಿಯಾದ ಪುರೋಹಿತನು ಆಶೀರ್ವಾದಪೂರ್ವಕವಾಗಿ ಅವರ ಕುಶಲವನ್ನು ಕೇಳಿ ತಿಳಿದು, ಅವರ ಹಣೆಗಳ ಮೇಲೆ ತಿಲಕಗಳನ್ನು ಹಚ್ಚಿ, ಅವರ ಅಂಗಗಳನ್ನು ಎಲ್ಲಾ ಕಡೆಯಲ್ಲಿಯೂ ಮುಟ್ಟಿದನು. ॥೭೧-೭೨-೭೩॥

ರಕ್ಷಾಂ ಸಮಕರೋನ್ಮಂತ್ರೈರ್ಭಟಾವನ್ನಾ(ನಾಂನಾ)ಮ ಸಂಯುತೈಃ।
ಅಗ್ರೇ ಶಿವೋ ರಕ್ಷತು ತ್ವಾಂ ಶೂಲಪಾಣಿ ಸ್ತ್ರಿಲೋಚನಃ ॥೭೪॥

ಪಿನಾಕೀ ಪೃಷ್ಠತಃ ಪಾರ್ಶ್ವೇ ಪಾಶಹಸ್ತೋ ಮಹೇಶ್ವರಃ ।
ಮೂರ್ಧಾನಂ ಜಟಿಲಸ್ತೇಽವ್ಯಾದ್ಧಸ್ತೌ ಸರ್ಪವಿಭೂಷಣಃ ॥೭೫॥

ಕಾಲಾಽಗ್ನಿನಯನೋ ವಕ್ಷಃ ಕಟಿಂ ಕರೋಟಿತ್ವಕ್ಪಟಃ ।
ರುದ್ರಾಕ್ಷಭೂಷಣಃ ಕುಕ್ಷಿಂ ಕಪಾಲೀ ಪಾದಯುಗ್ಮಕಂ ॥೭೬॥

ಪುಷ್ಪವದ್ದೃಕ್ ಪೃಷ್ಠದೇಶಂ ಸರ್ವತಃ ಶ್ರೀಶಿವಂಕರಃ ।
ಭಸ್ಮನೈವ ವಿಧಾಯಾಂಗರಕ್ಷಾಂ ದತ್ವಾಽಶಿಷಃ ಶುಭಾಃ ॥೭೭॥

ಕಾರಯಿತ್ವಾ ಮಹಾದಾನಾನ್ಯಪಿ ನಾನಾವಿಧಾನಿ ಚ ।
ಪ್ರಣತಸ್ತೈಃ ರಾಜಪುತ್ರೈರ್ವಿಸೃಷ್ಟೈರ್ವಿದ್ಯಾಪತಿರ್ಯಯೌ ॥೭೮॥

ಅಲ್ಲದೆ ಕುಲಪುರೋಹಿತನು ಸೈನಿಕರುಗಳ ಹೆಸರನ್ನೂ ನಿರ್ದೇಶಿಸಿ ಮಂತ್ರಗಳಿಂದ ರಕ್ಷಾವಿಧಾನವನ್ನು ಮಾಡಿದನು. ಹೇಗೆಂದರೆ ಶೂಲಾಯುಧವನ್ನು ಕೈಲಿ ಹಿಡಿದಿರುವವನೂ, ಮುಕ್ಕಣ್ಣನೂ ಆದ ಶಿವನು ನಿಮ್ಮ ಮುಂಗಡೆ ರಕ್ಷಿಸಲಿ. ಪಿನಾಕಾಯುಧಧಾರಿಯೂ ಹಿಂದುಗಡೆಯಲ್ಲಿ ರಕ್ಷಿಸಲಿ. ಜಟೆಗಳಿಂದ ಶೋಭಿಸುವವನೂ ನಿಮ್ಮ ಶಿರಸ್ಸನ್ನೂ, ಸರ್ಪಾಲಂಕಾರನು ನಿಮ್ಮ ಹಸ್ತಗಳನ್ನೂ, ಕಾಲಾಗ್ನಿಯನ್ನು ಕಣ್ಣಾಗುಳ್ಳವನೂ ಆದ ಶಿವನು ನಿಮ್ಮ ಎದೆಗಳನ್ನು ರಕ್ಷಿಸಲಿ ಮತ್ತು ನಿಮ್ಮೆಲ್ಲರಿಗೂ ಮಂಗಳವನ್ನುಂಟುಮಾಡಲಿ ಎಂದು ಹರಸಿದನು. ಆನೆಯ ಚರ್ಮವನ್ನು ಧರಿಸಿರುವ ಶಿವನು ನಿಮ್ಮ ಸೊಂಟವನ್ನೂ, ರುದ್ರಾಕ್ಷಿಮಾಲೆಯ ಅಲಂಕಾರವುಳ್ಳ ಶಿವನು ನಿಮ್ಮ ಹೊಟ್ಟೆಯನ್ನೂ, ಸೂರ್ಯಚಂದ್ರರೇ ಕಣ್ಣಾಗಿರುವ ಶಿವನು ನಿಮ್ಮ ಬೆನ್ನನ್ನೂ ರುಂಡವನ್ನು ಕೈಲಿ ಹಿಡಿದಿರುವ ಶಿವನು ನಿಮ್ಮ ಪಾದಗಳನ್ನೂ ಹೀಗೆ ನಿಮ್ಮೆಲ್ಲರನ್ನೂ ರಕ್ಷಿಸಲಿ. ಎಂದು ಹೇಳುತ್ತಾ ರಾಜಕುಮಾರರನ್ನು ಆಶೀರ್ವದಿಸಿದನು.॥೭೪-೭೫-೭೬॥

ಈ ಪ್ರಕಾರವಾಗಿ ಅಂಗರಕ್ಷೆ ದಿಗ್ರಕ್ಷೆಗಳನ್ನು ಮಂತ್ರತಂತ್ರಶಾಸ್ತ್ರಗಳಲ್ಲಿ ಹೇಳಿರುವ ಕ್ರಮದಲ್ಲಿ ನೆರವೇರಿಸಿ, ಪುರೋಹಿತನು ಅವರನ್ನು ಹರಸಿದನು. ಹೀಗೆ ಅವನು ಆಶೀರ್ವದಿಸುತ್ತಾ ಭಸ್ಮದಿಂದಲೇ ಅವರ ಅಂಗರಕ್ಷಣೆಯನ್ನು ಉಂಟುಮಾಡಿದನು. ಅವನು ನಾನಾವಿಧವಾದ ಮಹಾದಾನಗಳನ್ನೂ ಮಾಡಿಸಿದ ಮೇಲೆ

ಅಥ ಸರ್ವೇ ಜನಾಶ್ಚಕ್ರುರ್ಜಯಶಬ್ದಂ ದಿವಿಸ್ಪೃಶಂ ।
ಸಿಂಹನಾದಂ ಭಟಾಸ್ತದ್ವಚ್ಛಂಖ ನಾದಂ ಚ ಸೈನಿಕಾಃ ॥೭೯॥

ದುಂದುಭೀನ್ ಪಟಹಾನ್ ಭೇರೀನ್ ವಾದಯಂತಃ ಸುಕಾಹಲಾನ್।
ನಿರ್ಜಗ್ಮುಃ ಸೈನಿಕಾ ರಾಜಪುತ್ರಾನ್ ಸಂವೃತ್ಯ ಸರ್ವತಃ ॥೮೦॥

ಅಶ್ವಾನಾಂ ಹ್ರೇಷಿತಂ ವೀರಹುಂಕಾರಾ ಗಜಚೀತ್ಕೃತಾಃ ।
ರಥಘೋಷಾ ಜ್ಯಾನಿನಾದಾ ಆಸ್ಫೋಟಾಃ ಕ್ಷ್ವೇಲನಾ ಅಪಿ ॥೮೧॥

ಮಿಲಿತಾ ರೋದಸೀಮಧ್ಯಂ ವಿದಾರಣಕರಾ ಇವ ।
ಉತ್ಸಿಕ್ತೋದಧಿವತ್ಸೇನಾ ನಗರದ್ವಾರತಸ್ತದಾ ॥೮೨॥

ನಿರ್ಜಗಾಮ ಮಹಾಭೀಮಾ ಭೀರುಹೃತ್ಸ್ಫೋಟದರ್ಶನಾ ।
ದ್ವಿತೀಯಸಾಗರ ಮಿವ ಭೂಮಧ್ಯೇ ಸಂಸ್ಥಿತಿಂ ಗತಂ ॥೮೩॥

ರಾಜಪುತ್ರರು ಅವನಿಗೆ ನಮಸ್ಕಾರಮಾಡಿದರು. ಅನಂತರ ವಿದ್ಯಾಪತಿಯು ಹಿಂತಿರುಗಿದನು. ಆ ಮೇಲೆ ಎಲ್ಲಾ ಜನರೂ ಆಕಾಶಕ್ಕೆ ಮುಟ್ಟುವಷ್ಟು ಗಟ್ಟಿಯಾಗಿ ಇವರಿಗೆ ಜಯಜಯಘೋಷಗಳನ್ನು ಮಾಡಿದರು. ಸೈನಿಕರು ಸಿಂಹನಾದವನ್ನೂ ಶಂಖನಾದವನ್ನೂ ಮಾಡಿದರು. ||೭೭-೭೮-೭೯||

ಸೈನಿಕರು ನಗಾರಿಗಳನ್ನೂ, ತಮಟೆಗಳನ್ನೂ, ಭೇರಿಗಳನ್ನೂ, ಕಾಹಳೆಗಳೊಂದಿಗೆ ಬಾರಿಸುತ್ತಾ, ರಾಜಕುಮಾರರ ಸುತ್ತಲೂ, ಅವರನ್ನೂ ಹಿಂಬಾಲಿಸಿದರು. ಕುದುರೆಗಳ ಕೆನೆಯುವಿಕೆ, ವೀರರ ಹುಂಕಾರಗಳು, ಆನೆಗಳ ಚೀತ್ಕಾರಗಳು, ರಥಗಳ ಧ್ವನಿಗಳು, ಹೆದೆಯ ಶಬ್ದಗಳು, ಭುಜಗಳ ಆಸ್ಫೋಟನೆಗಳು ಇನ್ನೂ ಅನೇಕವಾದ ಶಬ್ದಗಳು ಆಕಾಶದ ಮಧ್ಯಪ್ರದೇಶವನ್ನು ಭೇದಿಸುತ್ತಿವೆಯೋ ಎಂಬಂತೆ ಆಕಾಶದ ವರೆಗೂ ವ್ಯಾಪಿಸಿದವು. ಆಗ ಪಟ್ಟಣದ ಬಾಗಿಲಿನಿಂದ ಹೊರಟಸೈನ್ಯವು ಉಬ್ಬಿದ ಸಮುದ್ರದಂತೆ ಅದ್ಭುತಾಕಾರವಾಗಿತ್ತು. ||೮೦-೮೧-೮೨||

ಹೀಗೆ ಮಹಾಭಯಂಕರವಾದ, ಅಂಜುವ ಜನರ ಮನಸ್ಸನ್ನು ಭೇದಿಸುವಂಥಾ ನೋಟವುಳ್ಳ, ಭೂಮಿಯ ಮಧ್ಯಭಾಗದಲ್ಲಿ ಉಂಟಾದ ಎರಡನೆಯ ಸಾಗರವೋ ಎಂಬಂತಿದ್ದ, ಆ ಮಹಾಸೈನ್ಯವು ಯುದ್ಧಕ್ಕಾಗಿ ಹೊರಟಿತು. ||೮೩||

ಇತಿ ಶ್ರೀ ತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ
ಚತುರ್ದಶೋಽಧ್ಯಾಯಃ

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ದತ್ತಾತ್ರೇಯ ಪರಶುರಾಮ ಸಂವಾದದಲ್ಲಿ ಕಾಮಾಖ್ಯಾನದಲ್ಲಿ ಹದಿನಾಲ್ಕನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ಪಂಚದಶೋಽಧ್ಯಾಯಃ ॥

ಹದಿನೈದನೆಯ ಅಧ್ಯಾಯವು

ಅಥ ತಾಂ ಮಹತೀಂ ಸೇನಾಂ ಸುಧೃತಿರ್ವ್ಯಭಜತ್ ಕ್ರಮಾತ್ ।
ಶತ್ರುಂಜಯಂ ರಾಜಪುತ್ರಂ ದಶಾಕ್ಷೌಹಿಣೀಸಂಯುತಂ ॥೧॥

ಮಧ್ಯೇ ನಿವೇಶ್ಯ ಪುರತಃ ಸ್ವಯಂ ಕುಂಜರಸಂಸ್ಥಿತಃ ।
ವಿಂಶತ್ಯಕ್ಷೌಹಿಣೀಯುತಃ ಸ್ಥಿತಃ ಸೇನಾಧಿಪೈರ್ವೃತಃ ॥೨॥

ವಾಮೇ ಶತ್ರುಹಣಂ ವಿಂಶತ್ಯಕ್ಷೌಹಿಣೀಯುತಂ ತಥಾ ।
ದಕ್ಷೇ ಭೀಮಂ ಸಂನಿವೇಶ್ಯ ವಿಂಶತ್ಯಕ್ಷೌಹಿಣೀಯುತಂ ॥೩॥

ವಿಂಶತ್ಯಕ್ಷೌಹಿಣೀಯುತಂ ಪಶ್ಚಾತ್ ಸಮರತಾಪನಂ ।
ತದ್ಬಹಿಃ ಪೃಷ್ಠಭಾಗೇ ತು ಶೂಲಖೇಟಕಧಾರಿಣಃ ॥೪॥

ಅನಂತರ ಸುಧೃತಿಯು ಆ ದೊಡ್ಡ ಸೈನ್ಯವನ್ನು ಕ್ರಮವಾಗಿ ಮೂರು ವಿಧವಾಗಿ ವಿಭಾಗಮಾಡಿದನು. ಹತ್ತು ಅಕ್ಷೌಹಿಣೀ ಸೈನ್ಯದಿಂದ ಕೂಡಿದ್ದ ರಾಜಪುತ್ರನಾದ ಶತ್ರುಂಜಯನನ್ನು ಮಧ್ಯದಲ್ಲಿ ಇರಿಸಿ, ತಾನು ಇತರ ಸೇನಾಪತಿಗಳೊಂದಿಗೆ ಇಪ್ಪತ್ತು ಅಕ್ಷೋಹಿಣೀ ಸೈನ್ಯದಿಂದ ಕೂಡಿದವನಾಗಿ ಮುಂದುಗಡೆಯಲ್ಲಿ ಆನೆಯ ಮೇಲೆ ಕುಳಿತಿದ್ದನು. ಎಡಭಾಗದಲ್ಲಿ ಶತ್ರುನಾಶಕವಾದ ಇಪ್ಪತ್ತು ಅಕ್ಷೌಹಿಣೀ ಸೈನ್ಯದೊಡನೆ ದಕ್ಷನಾದ ಭೀಮನನ್ನು ನಿಯಮಿಸಿದನು. ॥೧-೨-೩॥

ಇನ್ನು ಬೇರೆ ಇಪ್ಪತ್ತು ಅಕ್ಷೌಹಿಣೀ ಸೈನ್ಯದ ಮುಂದೆ ಸಮರತಾಪನನನ್ನು ಇರಿಸಿದನು. ಈ ಸೈನ್ಯಗಳ ಹೊರಗಡೆ ಮತ್ತು ಹಿಂಭಾಗದಲ್ಲಿ ಶೂಲ, ಖೇಟಕ ಮುಂತಾದ ಆಯುಧಧಾರಿಗಳಾದ ಮಹಾಶೂರರು, ಸಿಂಹಗಳಿಗೆ ಸಮಾನರೂ, ಯುದ್ಧದಲ್ಲಿ ಎಂದೂ ಹಿಮ್ಮೆಟ್ಟದವರೂ ಆದ ಸೈನಿಕರನ್ನು ಲಕ್ಷಕೋಟಿ, ಸಾವಿರ

ಮಹಾಶೂರಾಃ ಸಿಂಹಸಮಾಃ ಸಮರೇಷ್ವನಿವರ್ತಿನಃ ।
ಲಕ್ಷಕೋಟಿಸಹಸ್ರಾಣಾಂ ಕೋಟಿಕೋಟಿಶತೈರ್ಮಿತಾಃ ॥೫॥

ಗದಾಪರಿಘಹಸ್ತಾಸ್ತು ತಾವಂತೋ ದಕ್ಷತಃ ಸ್ಥಿತಾಃ ।
ಶಕ್ತಿಚಕ್ರಧರಾ ವಾಮೇ ಸ್ಥಿತಾಃ ಶೂರಾಸ್ತಥಾಽಮಿತಾಃ ॥೬॥

ಏವಂ ಸನ್ನದ್ಧಸೇನಾನಾಂ ವಿಭಜ್ಯ ಸುಧೃತಿಸ್ತದಾ ।
ರಾಜಪುತ್ರಾಯ ವಿಜ್ಞಾಪ್ಯ ಸ್ವಯಮಗ್ರೇ ಗಜಸ್ಥಿತಃ ॥೭॥

ಕಾಮಸ್ಯಾಽಭಿಸಸಾರಾಽಗ್ರೇ ವಿಕರ್ಷನ್ ಮಹತೀಂ ಚಮೂಮ್ ।
ತದಂತರೇ ನಾರದಸ್ತು ಜಗಾಮಾಽಖಂಡಲಾಽಗ್ರತಃ ॥೮॥

ತಮಪಶ್ಯಚ್ಛತಮಖೋ ರಜತಾಽದ್ರಿಸಮಪ್ರಭಂ ।
ಕೃಷ್ಣಾಽಜಿನಪರೀಧಾನಂ ಭಸ್ಮದಿಗ್ಧಕಲೇಬರಂ ॥೯॥

ಶಾರದೇಷಜ್ಜಲಯುತಜೀಮೂತಮಿವ ಖೇ ಸ್ಥಿತಂ ।
ವಾಯುವೇಗಾದಿವಾಽಯಾಂತಂ ವೃತ್ತಾಂತಾಽಂಬುಸುವೃಷ್ಟಯೇ ॥೧೦॥

ಕೋಟಿ ಮುಂತಾದ ಹೇಳಲಸಾಧ್ಯವಾದ ಸಂಖ್ಯೆಯಷ್ಟು ಮಂದಿಯನ್ನು ನಿಲ್ಲಿಸಿದನು. ಸೈನಿಕರು, ಗದೆಗಳು ಮತ್ತು ದೊಣ್ಣೆಗಳು ಮುಂತಾದ ಆಯುಧಗಳನ್ನು ಹಿಡಿದುಕೊಂಡು ದಕ್ಷತೆಯುಳ್ಳವರಾಗಿ ನಿಂತಿದ್ದರು. ಎಡಭಾಗದಲ್ಲಿಯೂ ಶಕ್ತಿ, ಚಕ್ರ ಮುಂತಾದ ಆಯುಧಗಳನ್ನು ಹಿಡಿದುಕೊಂಡು ಅಸಂಖ್ಯಾತರಾದ ಶೂರರು ನಿಂತಿದ್ದರು. ||೪-೫-೬||

ಆಗ ಸುಧೃತಿಯು ಸಿದ್ಧವಾಗಿದ್ದ ಸೈನ್ಯಗಳನ್ನು ವಿಭಾಗಿಸಿ ಈ ಅಂಶವನ್ನು ರಾಜಪುತ್ರನಿಗೆ ವಿಜ್ಞಾಪನೆಮಾಡಿ, ತಾನು ಮುಂಭಾಗದಲ್ಲಿ ಆನೆಯಮೇಲೆ ಕುಳಿತು ದೊಡ್ಡದಾದ ಸೈನ್ಯವನ್ನು ಶತ್ರುಪಕ್ಷಕ್ಕೆ ಎದುರಾಗಿ ಒಯ್ಯುತ್ತಾ ಮನ್ಮಥನ ಮುಂದುಗಡೆ ಸರಿದನು. ಈ ಸಂದರ್ಭದಲ್ಲಿ ಇಂದ್ರನ ಮುಂದೆ ನಾರದನು ಬಂದನು. ಇಂದ್ರನು ಬೆಳ್ಳಿಯ ಪರ್ವತಕ್ಕೆ ಸಮಾನವಾದ ಕಾಂತಿಯುಳ್ಳ, ಕೃಷ್ಣಾಜಿನವನ್ನು ಹೊದ್ದಿದ್ದ, ಭಸ್ಮದಿಂದ ಲಿಪ್ತವಾದ ಶರೀರವುಳ್ಳ ನಾರದನನ್ನು ನೋಡಿದನು.||೭-೮-೯||

ಶರತ್ಕಾಲದ ಸ್ವಲ್ಪ ನೀರುಳ್ಳ ಮೇಘದಂತೆ ಆಕಾಶದಲ್ಲಿ ಕಾಣಿಸುತ್ತಿದ್ದ, ಸಮಾಚಾರವೆಂಬ ಮಳೆಗರೆಯುವುದಕ್ಕೋಸ್ಕರವಾಗಿ, ಮನ್ಮಥನ ಯುದ್ಧವನ್ನು ನೋಡು

ಕಾಮಯುದ್ಧಾವಲೋಕಾಯ ಗಜರಾಜೋಪರಿ ಸ್ಥಿತಂ ।
ವಿಬುಧೇಶೋ ಗಜಾತ್ತಸ್ಮಾದವರುಹ್ಯ ಮುನೇಸ್ತದಾ ॥೧೧॥

ಚರಣೌ ಶಿರಸಾ ನತ್ವಾ ಸಭಾಜ್ಯ ವಿಧಿದೃಷ್ಟತಃ ।
ಪುರಃಸ್ಥಿತಸ್ತದಾ ಪ್ರಾಹ ನಾರದೋ ವಿಬುಧೇಶ್ವರಂ ॥೧೨॥

ಸುತ್ರಾಮನ್ ಕಿಂ ಪಶ್ಯಸಿ ತ್ವಂ ರಾಜ್ಞಸ್ತು ಮಹತೀ ಚಮೂಃ ।
ಸುಸನ್ನದ್ಧಾಽತ್ರ ಸಂಪ್ರಾಪ್ತಾ ಪಶ್ಯಾಽನಂತಾ ಸಮುದ್ರವತ್ ॥೧೩॥

ಭವದರ್ಥಂ ಕಥಂ ಚೈಕಃ ಕಾಮಃ ಸಂಸಾಧಯಿಷ್ಯತಿ ।
ಯದ್ಯಪಿ ಶ್ರೀಮಹತ್ವೇನ ಸಾಧ್ಯಮೇವಾಽತಿದುಷ್ಕರಂ ॥೧೪॥

ಮೂರ್ತಿಃ ಪ್ರಧಾನಂ ನೋ ವೀರ್ಯಂ ಕಿಂ ತು ಬೀಜಗುಣಾತ್ತು ತತ್ ।
ಉಪಲಂ ವಟಧಾನಾಯಾಂ ಸ್ಥೂಲಮಪ್ಯವನೀಗತಂ ॥೧೫॥

ಪ್ರರೋಹಯೇನ್ನೈವ ವಟಶಾಖಾಂ ಚಾಽಪ್ಯತಿ ಪಲ್ಲವಾಂ ।
ತಥಾಽಪಿ ರಾಜ್ಞಃ ಸೇನಾ ಸಾ ತ್ವಸಂಖ್ಯಾ ಕಾಮ ಏಕಲಃ ॥೧೬॥

ವುದಕ್ಕೋಸ್ಕರ ಶ್ರೇಷ್ಠವಾದ ಐರಾವತವೆಂಬ ಆನೆಯ ಮೇಲೆ ಮಂಡಿಸಿದ್ದ ಇಂದ್ರನ ಕಡೆಗೆ ವಾಯುವೇಗದಿಂದಲೋ ಎಂಬಂತೆ ಬರುತ್ತಿದ್ದ, ನಾರದನನ್ನು ಅವನು ದರ್ಶನ ಮಾಡಿದನು. ಇಂದ್ರನು ಆನೆಯ ಮೇಲಿಂದಿಳಿದು ನಾರದಮುನಿಯ ಚರಣಗಳಿಗೆ ಶಾಸ್ತ್ರೋಕ್ತಕ್ರಮದಲ್ಲಿ ಪೂಜಿಸಿ ಅವನ ಮುಂದೆ ನಿಂತನು. ನಾರದನು ದೇವತೆಗಳಿಗೆ ಒಡೆಯನಾದ ಇಂದ್ರನನ್ನು ಕುರಿತು ಹೀಗೆ ಹೇಳಿದನು. ||೧೦-೧೧-೧೨||

ಎಲೈ ಇಂದ್ರನೇ, ಅನಂತವಾದ ಸಮುದ್ರದಂತೆ ರಾಜನ ಬಹು ದೊಡ್ಡ ಸೈನ್ಯವು ಯುದ್ಧಕ್ಕೆ ಸನ್ನದ್ಧವಾಗಿ ಬಂದಿರುವುದನ್ನು ನೋಡಿದೆಯಾ? ಹೀಗಿರುವಾಗ ಮನ್ಮಥನು ಒಬ್ಬನೇ ನಿನ್ನ ಕಾರ್ಯವನ್ನು ಹೇಗೆ ಸಾಧಿಸಬಲ್ಲನು? ಬಹಳ ಕಷ್ಟವಾದ ಕಾರ್ಯವಾದರೂ ಅಸಾಧಾರಣವಾದ ಮಹಿಮೆಯಿಂದ ಕೂಡಿದವನಿಗೆ ಅದು ಸಾಧ್ಯವೇ ಸರಿ. ಆಕಾರವನ್ನು ನೋಡಿ ನಾವು ವೀರ್ಯವನ್ನು ನಿರ್ಣಯಿಸಬಾರದು. ವೀರ್ಯವು ಬೀಜದ ಗುಣವು. ಆಲದ ಮರದ ಪಾತೆಯ ಭೂಮಿಯಲ್ಲಿರುವ ಕಲ್ಲು ಎಷ್ಟು ದಪ್ಪದಾದಾಗ್ಯೂ ಆಲದ ಮರವನ್ನು ಹುಟ್ಟಿಸಲಾರದು. ||೧೩-೧೪-೧೫||

ಹೀಗೆ ಕಲ್ಲು ದಪ್ಪನಾಗಿದ್ದರೂ ಬೇಕಾದಷ್ಟು ಚಿಗುರುಗಳುಳ್ಳ, ಆ ಆಲದ

ವಿಪರೀತಮಿವಾಭಾತಿ ತಸ್ಮಾದ್ದೇವಗಣೈರ್ವೃತಃ ।
ಕಾಮಪೃಷ್ಠಂ ಸಮಾಶ್ರಿತ್ಯ ಕಾಮಂ ಲಕ್ಷ್ಮೀಂ ಚ ತೋಷಯ ॥೧೭॥

ಅನ್ಯಥಾ ಸಾ ಜಗನ್ಮಾತಾ ತುಭ್ಯಂ ಕ್ರುಧ್ಯತ್ಯವಜ್ಞಯಾ ।
ಇತಿ ನಾರದಸದ್ವಾಕ್ಯ ಮಾಕರ್ಣ್ಯ ಸುರರಾಟ್ ತತಃ ॥೧೮॥

ಯುಕ್ತಮಿತ್ಯೇವ ತತ್ ಜ್ಞಾತ್ವಾ ಗಂತುಮೇವ ಮನೋ ದಧೇ ।
ತತೋ ನತ್ವಾ ದೇವ ಮುನಿಂ ಸಹಿತೋ ದೇವಸೇನಯಾ ॥೧೯॥

ಆಜಗಾಮ ಕಾಮಪಾರ್ಶ್ವಂ ಮರುತ್ಪಿತೃಗಣೈರ್ವೃತಃ ।
ಪ್ರಾಪ್ತಂ ಶಕ್ರಂ ದೇವಗಣೈಃ ದೃಷ್ಟ್ವಾ ಕಾಮಃ ಪ್ರಸನ್ನಧೀಃ ॥೨೦॥

ಆತ್ಮಾನಂ ಪೂಜಿತಂ ಮತ್ವಾ ದೇವೈಃ ಶಕ್ರಮುವಾಚ ಹ ।
ದೇವೇಶ ಪಶ್ಯ ಮಹತೀಂ ಸೇನಾಮರ್ಣವಸನ್ನಿಭಾಮ್ ॥೨೧॥

ಮರದ ಕೊಂಬೆಯನ್ನು ಬೆಳೆಸಲಾರದು. ಆದರೆ ಪ್ರಕೃತ ರಾಜಸೇನೆಯು ಲೆಕ್ಕವಿಲ್ಲದಷ್ಟು ಬಂದಿದೆ. ಮನ್ಮಥನಾದರೋ ಒಬ್ಬನೇ ಅದನ್ನು ಎದುರಿಸಬೇಕಾಗಿದೆ. ನನಗೆ ಇದೇನೋ ಬಹಳ ವಿರುದ್ಧವಾಗಿ ಕಾಣುತ್ತಿದೆ. ಆದ್ದರಿಂದ ದೇವಗಣಗಳೊಂದಿಗೆ ಕೂಡಿದವನಾಗಿ ಮನ್ಮಥನ ಬೆಂಬಲಕ್ಕೆ ಹೋಗಿ ಮನ್ಮಥನನ್ನೂ ಮತ್ತು ಲಕ್ಷ್ಮಿಯನ್ನೂ ಸಂತೋಷಪಡಿಸು. ಹಾಗಲ್ಲದಿದ್ದರೆ ಜಗನ್ಮಾತೆಯಾದ ಆಕೆಯು ತನ್ನ ವಿಷಯದಲ್ಲಿ ತೋರಿಸಿದ ನಿನ್ನ ತಿರಸ್ಕಾರದಿಂದ ಕೋಪಿಸಿಕೊಳ್ಳುತ್ತಾಳೆ." ಹೀಗೆ ಹೇಳಿದ ನಾರದನ ಒಳ್ಳೆಯ ಬುದ್ಧಿವಾದದ ಮಾತಿಗೆ ಇಂದ್ರನು ಸಮ್ಮತಿಸಿದನು. ||೧೬-೧೭-೧೮||

ದೇವೇಂದ್ರನು, ನಾರದನ ಮಾತು ಯುಕ್ತವಾಗಿದೆಯೆಂದು ತಿಳಿದು, ಮನ್ಮಥನ ಸಮೀಪಕ್ಕೆ ಹೋಗಲು ನಿಶ್ಚಯಿಸಿದನು. ಅನಂತರ ಅವನು ದೇವಮುನಿಯಾದ ನಾರದನಿಗೆ ನಮಸ್ಕರಿಸಿ, ದೇವತೆಗಳ ಗುಂಪು ಇವುಗಳೊಡನೆ ಕಾಮನ ಬಳಿಗೆ ಬಂದನು. ದೇವಗಣಗಳೊಂದಿಗೆ ಬಂದ ಇಂದ್ರನನ್ನು ನೋಡಿ, ಅವರು ತನ್ನನ್ನು ಗೌರವಿಸಿದರೆಂದು ಭಾವಿಸಿ, ಮನ್ಮಥನು ಸಂತೋಷಪಟ್ಟು ಅವರೊಡನೆ "ದೇವೇಶನಾದ ಇಂದ್ರನೇ, ಎದುರುಗಡೆ ಇರುವ ಸಮುದ್ರಕ್ಕೆ ಸಮಾನವಾದ ಬಹು ದೊಡ್ಡದಾದ ಸೈನ್ಯವನ್ನು ನೋಡು." ಎಂದು ಹೇಳಿದನು. ||೧೯-೨೦-೨೧||

ಭೀರುಹೃತ್ಕಂಪನಕರೀಂ ನಾನಾಧ್ವಜವಿಚಿತ್ರಿತಾಂ ।
ವಾಯುಸುನ್ನಾಭ್ರಸದೃಶೈಃ ಧಾವದ್ಭಿರಭಿತೋ ರಥೈಃ ॥೨೨॥

ಗಜೈರ್ನೀಲಾದ್ರಿಸದೃಶೈ ರ್ದಾನಧಾರಾ ಸುನಿರ್ಝರೈಃ ।
ರಕ್ತಕಂಬಲಸಂಧ್ಯಾಭ್ರೈಃ ಚಿತ್ರಧಾತುವಿಚಿತ್ರಿತೈಃ ॥೨೩॥

ಅಶ್ವೈಃ ಕಲ್ಲೋಲಸದೃಶೈಃ ಸರ್ವತಃ ಪರಿವಾರಿತಾಂ ।
ಏವಂ ಶಕ್ರಃ ಕಾಮವಚೋ ನಿಶಮ್ಯ ಪ್ರಾಹ ತತ್ತಥಾ ॥೨೪॥

ಶೃಣು ಕಾಮ ಕಥಂ ಚೈಕಃ ಸರ್ವತಃ ಸಂಸ್ಥಿತಾಂ ಚಮೂಮ್ ।
ನಾನಾಶೂರಸಮಾಕ್ರಾಂತಾಂ ಯೋಧಯಸ್ಯತಿದಾರುಣಾಂ ॥೨೫॥

ಇತಿ ತದ್ವಾಕ್ಯಮಾಕರ್ಣ್ಯ ಕಾಮಃ ಕ್ರೋಧಾರುಣೇಕ್ಷಣಃ ।
ಶೃಣು ಶಕ್ರ ಮೃಷಾ ಪೂರ್ವಂ ಮಯಾ ನೋಕ್ತಂ ಕದಾಚನ ॥೨೬॥

ಇಮಾಂ ಸೇನಾಂ ನಿಮೇಷಾರ್ಧಾತ್ ಪಶ್ಯತಸ್ತವ ಸಂಕ್ಷಯಂ ।
ನಯಾಮಿ ತ್ವಂ ನ ಸಂದೇಹಂ ಕುರು ಸತ್ಯಂ ವದಾಮಿ ತೇ ॥೨೭॥

"ಈ ಸೈನ್ಯವು ಅಂಜುವವರ ಹೃದಯವನ್ನು ನಡುಗಿಸುವುದಾಗಿಯೂ, ಅನೇಕ ವಿಧವಾದ ಬಾವುಟಗಳಿಂದ ವಿಚಿತ್ರವಾಗಿಯೂ, ಗಾಳಿಯಿಂದ ಪ್ರೇರಿತವಾದ ಮೇಘಗಳಿಗೆ ಸಮಾನವಾದ ಆನೆಗಳ, ಗಿರಿ ಪ್ರವಾಹದಂತೆ ಧಾರಾಕಾರವಾಗಿ ಸುರಿಯುತ್ತಿರುವ ಮದೋದಕಗಳಿಂದಲೂ, ಸಂಧ್ಯಾಕಾಲದ ಮೇಘಗಳಂತೆ ಕೆಂಪಗಿರುವ ಕಂಬಳಿಗಳಿಂದಲೂ, ಅನೇಕ ವಿಧವಾದ ಗೈರಿಕಾದಿಧಾತುಗಳಂತಿರುವ ವಸ್ತ್ರಗಳು ಮುಂತಾದುದರಿಂದಲೂ, ಸಮುದ್ರದ ಅಲೆಗಳಂತೆ ಪ್ರಕಾಶಮಾನವಾದ ಕುದುರೆಗಳಿಂದಲೂ, ಎಲ್ಲಾ ಕಡೆಗಳಲ್ಲಿಯೂ ಸುತ್ತುವರಿಯಲ್ಪಟ್ಟಿದೆ. ಹೀಗೆ ಮನ್ಮಥನು ಹೇಳಿದ ಮಾತನ್ನು ಕೇಳಿ ಇಂದ್ರನು ಅವನನ್ನು ಕುರಿತು ಈ ರೀತಿ ಹೇಳಿದನು. ||೨೨-೨೩-೨೪||

ಎಲೈ ಮನ್ಮಥನೇ, ಕೇಳು, ಎಲ್ಲಾ ಕಡೆಯಲ್ಲಿಯೂ ವ್ಯಾಪಿಸಿರುವ, ಅನೇಕ ಶೂರರಿಂದ ಕೂಡಿರುವ, ಬಹಳ ಭಯಂಕರವಾದ ಈ ಸೈನ್ಯವನ್ನು ನೀನು ಒಬ್ಬನೇ ಹೇಗೆ ಯುದ್ಧದಲ್ಲಿ ಜಯಿಸುವೆ? ಎಂದು ಇಂದ್ರನು ಹೇಳಿದ ಮಾತನ್ನು ಕೇಳಿ, ಮನ್ಮಥನು ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ ಅವನನ್ನು ಕುರಿತು,

ಯಾವದೇವ ನ ಸಂಪ್ರಾಪ್ತಾ ಮತ್ಸಮಕ್ಷಮಿಯಂ ಚಮೂಃ ।
ತಾವದೇವ ವಿಲಂಬಂ ತ್ವಂ ಜಾನೀಹಿ ವಿಬುಧೇಶ್ವರ ॥೨೮॥

ಏವಂ ತದ್ವಾಕ್ಯಮಾಕರ್ಣ್ಯ ದೇವಾಃ ಸೇಂದ್ರಪುರೋಗಮಾಃ ।
ಅಪೂಜಯನ್ ಸಾಧುಶಬ್ದೈರ್ವಿಸ್ಮಿತಾಃ ಸರ್ವತಃ ಸ್ಥಿತಾಃ ॥೨೯॥

ಏತಸ್ಮಿನ್ನಂತರೇ ತತ್ರ ಸೇನಾ ಪ್ರಾಪ್ತಾ ಸಮೀಪತಃ ।
ಕಾಮಸ್ತದಾ ತಾಂ ಮಹತೀಂ ಸೇನಾಂ ದೃಷ್ಟ್ವಾ ಸ್ವಯಂ ಪುರಃ॥೩೦॥

ಸಸಾರ ಪುರತಸ್ತಸ್ಯಾಽವಿಸ್ಫಾರಿತಧನುಷ್ಕರಃ ।
ಯಾವಜ್ಜಿಗಮಿಷುಃ ಕಾಮಸ್ತಾವದಿಂದ್ರೋ ಬುಧೈರ್ವೃತಃ ॥೩೧॥

ಪರಿವಾರ್ಯ ಬಭೂವಾಗ್ರೇ ಕಾಮಂ ಯೋದ್ಧುಂ ಮಹಾಭುವಿ ।
ಯಾವತ್ಸೇನಾದ್ವಯಮುಖಂ ಯುಕ್ತಂ ತಾವಚ್ಚಮೂದ್ವಯೇ ॥೩೨॥

"ಓ ಇಂದ್ರನೇ, ನಾನು ಹಿಂದೆ ಯಾವಾಗಲೂ ಸುಳ್ಳನ್ನಾಡಿಲ್ಲ. ನೀನು ನೋಡುತ್ತಿರುವಾಗಲೇ ಒಂದು ನಿಮಿಷಾರ್ಧದಲ್ಲಿ ಈ ಸೈನ್ಯವನ್ನೆಲ್ಲವನ್ನೂ ನಾಶಮಾಡುವೆನು. ನೀನು ಈ ವಿಷಯದಲ್ಲಿ ಸಂದೇಹಪಡಬೇಕಾದ್ದಿಲ್ಲ. ನಾನು ಸತ್ಯವನ್ನೇ ಹೇಳುವೆನೆಂದು ತಿಳಿ." ಎಂದು ಹೇಳಿದನು. ||೨೫-೨೬-೨೭||

ಓ ಇಂದ್ರನೇ, ಈ ಸೈನ್ಯವು ನನ್ನ ಎದುರಿಗೆ ಯುದ್ಧಮಾಡುವುದಕ್ಕೆ ಬಂದು ಪ್ರಾರಂಭಿಸುವವರಿಗೆ ಮಾತ್ರ ನನ್ನ ಜಯವೂ ಸಾವಕಾಶವಾಗಿದೆಯೆಂದು ತಿಳಿ. ಎಂದು ಮನ್ಮಥನು ಹೇಳಿದ ಮಾತನ್ನು ಕೇಳಿ, ಇಂದ್ರನನ್ನು ಮುಂದುಮಾಡಿಕೊಂಡು ದೇವತೆಗಳೆಲ್ಲರೂ ಅತ್ಯಂತ ಆಶ್ಚರ್ಯಭರಿತರಾಗಿ 'ಭಲೆ! ಭೇಷ್!' ಎನ್ನುತ್ತಾ ಮನ್ಮಥನನ್ನು ಪೂಜಿಸಿದರು. ಈ ಸಂದರ್ಭದಲ್ಲಿ ಆ ಸೈನ್ಯವು ಸಮೀಪಕ್ಕೆ ಬಂದಿತು. ಮನ್ಮಥನು ಆ ದೊಡ್ಡ ಸೈನ್ಯವು ಸಮೀಪಿಸಿದ್ದನ್ನು ಕಂಡು ತಾನೂ ಅದರ ಮುಂದಕ್ಕೆ ಸರಿದನು. ||೨೮-೨೯-೩೦||

ಹೀಗೆ ಮನ್ಮಥನು ಸಜ್ಜುಗೊಳಿಸಿದ ಬಿಲ್ಲನ್ನು ಹಿಡಿದು ಅದರ ಮುಂದಕ್ಕೆ ಹೊರಡಲು ಇಚ್ಛಿಸಿದ ಕೂಡಲೇ ಇಂದ್ರನೂ ದೇವತೆಗಳೊಡನೆ ಅವನನ್ನು ಅನುಸರಿಸಿದನು. ||೩೧||

ಇಂದ್ರನು ಮನ್ಮಥನ ಸುತ್ತಲೂ ತನ್ನ ಸೈನ್ಯವನ್ನು ಬಿಟ್ಟು ಅವನ ಮುಂದುಗಡೆ ಎದುರಾಳಿಯೊಂದಿಗೆ ಮಹಾರಣ್ಯಭೂಮಿಯಲ್ಲಿ ಯುದ್ಧಮಾಡಲು ಹೊರಟನು.

ಮಹಾಶಬ್ದಃ ಸಮಭವತ್ ಯುದ್ಧವಾದಿತ್ರನಿರ್ಗತಃ ।
ಮೃದಂಗಭೇರೀಪಟಹ ಶೃಂಗಕಾಹಲ ಶಂಖಜಃ ॥೩೩॥

ಸಿಂಹನಾದನೇಮಿಘೋಷಮಿಶ್ರಃ ಪ್ರತಿಭಯಂಕರಃ ।
ಪ್ರವೃತ್ತಃ ಶಸ್ತ್ರಸಂಪಾತಃ ಸ ಘೋಷಃ ಸೇನಯೋ ರ್ದ್ವಯೋಃ॥೩೪॥

ವಿಬುಧಾನಾಂ ಮಾನವಾನಾಂ ಪರಸ್ಪರಮಭೂದ್ರಣಃ ।
ತತ್ರ ಶೂರಾ ಮಹಾಕಾಯಾ ಮೃಗೇಂದ್ರಸಮವಿಕ್ರಮಾಃ ॥೩೫॥

ನಾನಾಶಸ್ತ್ರಾಸ್ತ್ರಕುಶಲಾಃ ಶತ್ರುಪಕ್ಷಭಯಂಕರಾಃ ।
ಸಮೇತಾ ದ್ವಂದ್ವಶಸ್ತತ್ರ ಸಮಶಸ್ತ್ರಾಸ್ತ್ರವಾಹನಾಃ ॥೩೬॥

ರಥಿಭಿಸ್ತತ್ರ ರಥಿನೋ ಗಜಸ್ಥೈರ್ಗಜಿನಸ್ತದಾ ।
ಅಶ್ವಿಭಿಶ್ಚಾಶ್ವಿನಃ ಪಾದಕ್ರಮಿಣಃ ಪಾದಚಾರಿಭಿಃ ॥೩೭॥

ಅಷ್ಟು ಹೊತ್ತಿಗೆ ಎರಡು ಕಡೆಯ ಸೈನ್ಯಗಳೂ ಪೂರ್ಣವಾಗಿ ಸಿದ್ಧವಾದುವು. ಆಗ ಮೃದಂಗ, ಭೇರೀ, ತಮಟೆ, ತುತ್ತೂರಿ, ಕಾಹಳೆ, ಶಂಖ ಮುಂತಾದ ಯುದ್ಧವಾದ್ಯಗಳ ಮಹಾಶಬ್ದವು ಎಲ್ಲೆಲ್ಲಿಯೂ ಕೇಳಿಸಿತು. ವೀರರ ಸಿಂಹನಾದಗಳು, ರಥ, ಚಕ್ರ, ನೇಮಿಗಳ ಧ್ವನಿಗಳಿಂದ ಕೂಡಿದ ಪರಸ್ಪರ ಭಯವನ್ನು ಹೆಚ್ಚಿಸುವ ಎರಡು ಸೈನ್ಯಗಳ ಭಯಂಕರ ಶಬ್ದದಿಂದ ಕೂಡಿದ ಶಸ್ತ್ರಗಳ ಪತನವು ಎರಡು ಕಡೆಯಲ್ಲಿಯೂ ಸಂಭವಿಸಿತು. ॥೩೨-೩೩-೩೪॥

ಈ ರೀತಿಯಲ್ಲಿ ದೇವತೆಗಳಿಗೂ, ಮನುಷ್ಯರಿಗೂ ಪರಸ್ಪರ ಯುದ್ಧವು ನಡೆಯಿತು. ಇದರಲ್ಲಿ ಶೂರರೂ, ದೊಡ್ಡ ದೊಡ್ಡ ಶರೀರವುಳ್ಳವರೂ, ಸಿಂಹಕ್ಕೆ ಸಮಾನವಾದ ಪರಾಕ್ರಮಶಾಲಿಗಳೂ, ಅನೇಕ ವಿಧವಾದ ಶಸ್ತ್ರ ಮತ್ತು ಅಸ್ತ್ರವಿದ್ಯೆಯಲ್ಲಿ ಕುಶಲರೂ ಶತ್ರುಪಕ್ಷಕ್ಕೆ ಭಯವನ್ನುಂಟುಮಾಡುತ್ತಿದ್ದವರೂ, ಸಮವಾಗಿ ಶಸ್ತ್ರ ಅಸ್ತ್ರ ಮತ್ತು ವಾಹನ ಇವುಗಳುಳ್ಳವರೂ ಆದ ಯೋಧರು ಮಿಲಿತರಾಗಿ ಯುದ್ಧ ಮಾಡುತ್ತಿದ್ದರು. ಆಗ ರಥದಲ್ಲಿ ಕುಳಿತಿರುವವರೊಂದಿಗೆ ರಥದಲ್ಲಿ ಕುಳಿತಿರುವವರೂ, ಆನೆಯ ಮೇಲೆ ಇರುವವರೊಂದಿಗೆ ಆನೆಯ ಮೇಲಿರುವವರೂ, ಕುದುರೆಯ ಮೇಲೆ ಕುಳಿತಿರುವವರೊಂದಿಗೆ ಕುದುರೆಯ ಮೇಲಿರುವವರೂ, ಪಾದಚಾರಿಗಳೊಡನೆ ಪಾದಚಾರಿಗಳೂ, ಹೀಗೆ ಕ್ರಮವಾಗಿ ಯುದ್ಧಮಾಡುತ್ತಿದ್ದರು. ॥೩೫-೩೬-೩೭॥

ಧಾನುಷ್ಕೈರ್ಧನುಷಾ ಯುಕ್ತಾ ಗದಾಹಸ್ತೈರ್ಗದಾಧರಾಃ ।
ಖಡ್ಗಿನಃ ಖಡ್ಗ ಕುಶಲೈರ್ಧೃತಭಲ್ಲೈಶ್ಚ ಭಲ್ಲಿನಃ ॥೩೮॥

ಭುಶುಂಡೀಶಕ್ತಿಪರಶು ಪರಿಘಪ್ರಾಸಶೂಲಿನಃ ।
ಭುಶುಂಡೀಶಕ್ತಿಪರಶುಪರಿಘಪ್ರಾಸಶೂಲಭಿಃ ॥೩೯॥

ಯೋದ್ಧುಂ ಸಮುದ್ಯತಾಸ್ತತ್ರ ಕ್ರಮೇಣ ಸಮಭಾವತಃ ।
ಏವಂ ನ್ಯಾಯೇನ ಸಮರೋ ದೈತ್ಯೈರ್ದೇವೈಃ ಸಮೇಧಿತಃ ॥೪೦॥

ಮುಹೂರ್ತಮಭವತ್ಸಾಮ್ಯಾನ್ನಿಶ್ಚಲೇಸಾಪ್ಯನಾಕುಲಃ ।
ಧರ್ಮಯುದ್ಧರತಾಃ ಸರ್ವೇ ಪರಸ್ಪರಜಯೈಷಿಣಃ ॥೪೧॥

ಛಿದ್ರಾನ್ವೇಷಪರಾಃ ಶಸ್ತ್ರಾಣ್ಯುತ್ಸೃಜಂತೋಽಂತರೇಽಂತರೇ ।
ಅಥ ಮರ್ತ್ಯಸುರಾನೀಕದ್ವಯಂ ಸಂಮಿಲಿತಂ ತದಾ ॥೪೨॥

ಯುದ್ಧಂ ಸಮಭವದ್ಘೋರಂ ತುಮುಲಂ ರೋಮಹರ್ಷಣಂ ।
ಆಹ್ವಯಂತೋ ರೋಷವಾಕ್ಯೈಃ ಭ್ರೂಕುಟಿಕುಟಿಲಾನನಾಃ ॥೪೩॥

ಧನುಸ್ಸನ್ನು ಉಪಯೋಗಿಸುವವರೊಡನೆ ಧನುರ್ಧರರೂ, ಗದೆಗಳನು ಹಿಡಿದು ಕೊಂಡಿರುವವರೊಡನೆ ಗದೆಯನ್ನು ಹಿಡಿದಿರುವವರೂ, ಕತ್ತಿಯವರೊಡನೆ ಕತ್ತಿ ಹಿಡಿದಿರುವವರೂ, ಭಲ್ಲೆಯವರೊಡನೆ ಭಲ್ಲೆಗಳನ್ನು ಹಿಡಿದಿರುವವರೂ, ಭುಶುಂಡೀ, ಶಕ್ತಿ, ಕೊಡಲಿ, ಪರಿಘ, ಪ್ರಾಸ, ಶೂಲ, ಈ ಆಯುಧಗಳನ್ನು ಹಿಡಿದಿರುವ ವರೊಡನೆ ಕ್ರಮವಾಗಿ ಆಯಾಯ ಆಯುಧಗಳನ್ನೇ ಹಿಡಿದವರೂ ಸಮವಾಗಿ ಯುದ್ಧಮಾಡುತ್ತಿದ್ದರು. ||೩೮-೩೯-೪೦||

ಹೀಗೆ ದೇವತೆಗಳಿಂದಲೂ ಮತ್ತು ದೈತ್ಯರಿಂದಲೂ ವೃದ್ಧಿಗೊಳಿಸಲ್ಪಟ್ಟ ನಿಶ್ಚಯ ಮತ್ತು ನಿರ್ಭಯವಾದ ರೀತಿಗಳಲ್ಲಿ ಒಬ್ಬರಿಗೊಬ್ಬರಿಗೆ ಸಮಾನವಾದ ಯುದ್ಧವು ಮುಹೂರ್ತಕಾಲ ಜರುಗಿತು. ಎಲ್ಲರೂ ತಂತಮ್ಮಲ್ಲಿ ಜಯವನ್ನು ಅಪೇಕ್ಷಿಸುವವರಾಗಿ, ಧರ್ಮಯುದ್ಧದಲ್ಲಿ ತೊಡಗಿದ್ದರು. ಕೆಲವು ಸಮಯಗಳಲ್ಲಿ ಯೋಧರು ಛಿದ್ರಾನ್ವೇಷಣಪರರಾಗಿಯೂ ಶಸ್ತ್ರಗಳನ್ನು ಮಧ್ಯೆ ಮಧ್ಯೆ ಬಿಡುವವ ರಾಗಿಯೂ ಇದ್ದರು. ಅನಂತರ ಮನುಷ್ಯರ ಮತ್ತು ದೇವತೆಗಳ ಎರಡು ಸೈನ್ಯ ಗಳೂ ಒಂದಕ್ಕೊಂದು ಸೇರಿ ಭಯಂಕರವಾದ ಯುದ್ಧವನ್ನು ನಡಸಿದವು. ಇದು

ಸ್ಥಿರೀಭವ ಮತ್ಸಮಕ್ಷಂ ಪಶ್ಯ ಪ್ರಾಣಾನ್ ಹರಾಮಿ ತೇ ।
ತವ ತ್ರಾತಾ ನ ಚಾಽನ್ಯೋಽಸ್ತಿ ಪ್ರೇಷಯಾಮಿ ಯಮಕ್ಷಯಂ ॥೪೪॥

ಧಿಕ್ ತ್ವಮನಾರ್ಯ ಬಹುಧಾ ಮುಧಾ ಕತ್ಥಸ್ಯಯಂ ಕ್ಷಣಃ ।
ಜೀವಿತಾಽಂತಕರಸ್ತೇಽದ್ಯ ಧಾತಾ ಕ್ಲ್ಪೃಪ್ತೇ ನ ಚಾಽನ್ಯಥಾ ॥೪೫॥

ಹತಃ ಪಶ್ಯ ಮಯಾ ತ್ವಂ ವೈ ನ ಪಲಾಯ್ಯ ಗಮಿಷ್ಯಸಿ ।
ಇತ್ಯಾದಿವಾಕ್ಯಂ ಬಹುಧಾ ವದಂತಸ್ತೇ ಪರಸ್ಪರಂ ॥೪೬॥

ಏವಂ ಯುದ್ಧೇ ಜಾಯಮಾನೇ ಮಹಾಘೋರೇ ಭಯಂಕರೇ ।
ಕ್ರೋಧೇನಾಂಧೀಕೃತಾಃ ಸರ್ವೇ ನಾಽವಿದುಃ ಸ್ವಂ ಪರಂ ತಥಾ ॥೪೭॥

ಬುಧೈರ್ಬುಧಾನಾಂ ಮರ್ತ್ಯಾನಾಂ ಮರ್ತ್ಯೈರ್ಯುದ್ಧಂ ತದಾಽಭವತ್ ।
ಸೇನಾಸಂಕ್ಷುಬ್ಧರಜಸಾ ಪಟಲೇನಾವೃತಂ ನಭಃ ॥೪೮॥

ಪ್ರೇಕ್ಷಕರಿಗೆ ರೋಮಾಂಚವನ್ನುಂಟುಮಾಡುತ್ತಿತ್ತು. ಎರಡು ಕಡೆಯ ಯೋಧರೂ, ಹುಬ್ಬುಗಂಟಿಕ್ಕಿದ ಮುಖಗಳುಳ್ಳವರಾಗಿ ಕೋಪದ ಮಾತುಗಳಿಂದ ಒಬ್ಬರನ್ನೊಬ್ಬರು ಯುದ್ಧಕ್ಕೆ ಕರೆಯುತ್ತಿದ್ದರು. ॥೪೧-೪೨-೪೩॥

"ಎಲೋ, ನನ್ನ ಮುಂದೆ ನಿಲ್ಲು; ನಾನು ನಿನ್ನ ಪ್ರಾಣಗಳನ್ನು ತೆಗೆಯುತ್ತೇನೆ, ನಿನಗೆ ರಕ್ಷಕರಾರೂ ಇಲ್ಲ, ನಿನ್ನನ್ನು ನಾನು ಯಮಪುರಿಗೆ ಕಳುಹಿಸುವುದು ಖಂಡಿತ! ಎಲೋ ದುಷ್ಟನೇ, ಏತಕ್ಕೆ ನಿನ್ನನ್ನು ನೀನೇ ವ್ಯರ್ಥವಾಗಿ ಹೊಗಳಿಕೊಳ್ಳುತ್ತೀಯೆ ? ನನ್ನ ಕೈಲಿ ನೀನು ನಾಶವಾಗಬೇಕೆಂದು ಬ್ರಹ್ಮನಿಂದಲೇ ಕ್ಲ್ಪಪ್ತವಾಗಿದೆ; ಆದ್ದರಿಂದ ನನ್ನ ಕೈಯಿಂದ ನೀನು ತಪ್ಪಿಸಿಕೊಳ್ಳಲಾರೆ. ಇಗೋ ನಾನು ಇನ್ನೇನು ನಿನ್ನನ್ನು ಕೊಂದುಬಿಟ್ಟೆ ಎಂದು ತಿಳಿದುಕೋ. ಪಲಾಯನಮಾಡಿ ತಪ್ಪಿಸಿಕೊಳ್ಳಲಾರೆ." ಇವೇ ಮೊದಲಾದ ಅನೇಕ ವಿಧವಾದ ವಾಕ್ಯಗಳನ್ನು ಅವರು ಅನ್ಯೋನ್ಯವಾಗಿ ಆಡುತ್ತಿದ್ದರು. ॥೪೪-೪೫-೪೬॥

ಹೀಗೆ ಬಹಳ ಭಯಂಕರವೂ ಕ್ರೂರವೂ ಆದ ಯುದ್ಧವು ನಡೆಯುತ್ತಿರಲು ಯೋಧರೆಲ್ಲರೂ ಕೋಪದಿಂದ ಕುರುಡರಂತಾಗಿ ಸ್ವಕೀಯ ಪರಕೀಯ ಭೇದವನ್ನೇ ಅರಿಯಲಿಲ್ಲ. ಹೀಗಾದ್ದರಿಂದ ದೇವತೆಗಳು ದೇವತೆಗಳೊಡನೆಯೇ ಮನುಷ್ಯರು ಮನುಷ್ಯರೊಡನೆಯೇ ಯುದ್ಧಮಾಡಲು ಪ್ರಾರಂಭಿಸಿದರು. ಸೈನ್ಯಗಳಿಂದ ಎಬ್ಬಿಸ

ಹೇತಿವರ್ಷಸಮಾಕ್ರಾಂತ್ಯಾ ಧ್ವಾಂತೀಭೂತಂ ಚ ಸರ್ವತಃ ।
ಏವಂ ಸ್ಥಿತೇಽತಿರೋಷೇಣ ಭೂಯೋಽಪ್ಯಂಧೀಕೃತಾ ಯುಧಿ ॥೪೯॥

ನಾವಿದನ್ ಸ್ವಂ ಪರಂ ವಾಽಪಿ ಜಘ್ನುಃ ಸ್ವೀಯಾನ್ ಸ್ವಯಂ ರುಷಾ।
ನ ವಿದುಸ್ತೇಽತಿರೋಷೇಣ ಭುವಂ ಖಂ ವಾ ದಿಶಸ್ತಥಾ ॥೫೦॥

ದಿನಂ ರಾತ್ರಂ ತಥಾಽಽತ್ಮಾನಂ ಯುದ್ಧಂ ಶಸ್ತ್ರಮುಪೀರಿತಂ ।
ಸಂಪ್ರಹಾರೈಕಸಂಸ್ಕಾರಶೇಷಾ ಜಘ್ನುಃ ಪರಸ್ಪರಮ್ ॥೫೧॥

ಏತಸ್ಮಿನ್ನಂತರೇ ಶಕ್ರಸುತೋ ವಸುಗಣೈರ್ವೃತಃ ।
ಜಗಾಮೈರಾವತಸುತಸ್ಕಂಧಾಽಽರೂಢೋಽತ್ಯಮರ್ಷಣಃ ॥೫೨॥

ಜಯಂತಃ ಸುಧೃತೇರಗ್ರೇ ಮಹತ್ಯಾ ದೇವಸೇನಯಾ ।
ತಯೋಃ ಸಮಭವದ್ಯುದ್ಧಂ ಮುಹೂರ್ತಮತಿದಾರುಣಂ ॥೫೩॥

ಲ್ಪಟ್ಟ ಧೂಳಿನಿಂದ ಆಕಾಶವೆಲ್ಲವೂ ಮುಚ್ಚಿಹೋಯಿತು. ಕತ್ತಿ ಮುಂತಾದ ಆಯುಧಗಳ ಪರಿಪತನದಿಂದ ಎಲ್ಲೆಲ್ಲಿಯೂ ಕತ್ತಲಾದಂತಾಯಿತು. ಹೀಗಾದಾಗ್ಯೂ ಯೋಧರು ಬಹಳ ರೋಷಾಕ್ರಾಂತರಾಗಿ ಪುನಃ ಅಂಧರಂತೆ ಒಬ್ಬರನ್ನೊಬ್ಬರು ತಿಳಿಯದೇ ಹೋದರು. ॥೪೭-೪೮-೪೯॥

ಆದ್ದರಿಂದ ಭಟರು ಸ್ವೀಯಪರಕೀಯ ಭೇದವನ್ನು ತಿಳಿಯದೆ ಕೋಪಾತಿಶಯದಿಂದ ಒಬ್ಬರನ್ನೊಬ್ಬರು ಹೊಡೆದು ಕೊಂದರು. ಅವರು ಬಹಳ ಕೋಪಾವಿಷ್ಟರಾಗಿ ಭೂಮಿ, ಆಕಾಶ, ದಿಕ್ಕುಗಳು ಇವಾವುವನ್ನೂ ತಿಳಿಯಲೇ ಇಲ್ಲ. ॥೫೦॥

ಕ್ರೋಧಾಂಧರಾದ ಸೈನಿಕರು ಹಗಲು, ರಾತ್ರಿ, ತಮ್ಮ ಸ್ವರೂಪ, ಯುದ್ಧ ಶಸ್ತ್ರ ಅಥವಾ ಇನ್ನಿತರ ವಸ್ತುಗಳು ಇವಾವುವನ್ನೂ ತಿಳಿಯದೆ ಯುದ್ಧಮಾಡಿದರು. ಇವರು ಕೇವಲ ಹೊಡೆಯುವಿಕೆಯನ್ನು ಮಾತ್ರ ಗುರಿಯಾಗಿಟ್ಟುಕೊಂಡು ಅನ್ಯೋನ್ಯವಾಗಿಯೂ ಕೊಲ್ಲುತ್ತಿದ್ದರು. ಈ ಸಂದರ್ಭದಲ್ಲಿ ಇಂದ್ರನ ಮಗನು ವಸು ಎಂಬ ದೇವತೆಗಳೊಡನೆ ಕೂಡಿ, ಐರಾವತ ಎಂಬ ಆನೆಯಮರಿಯ ಮೇಲೇರಿ ಬಹಳ ಕೋಪದಿಂದ ಅಲ್ಲಿಗೆ ಬಂದನು. ಇಂದ್ರನ ಮಗನಾದ ಜಯಂತನು ದೊಡ್ಡ ದೇವ ಸೈನ್ಯದ ಜೊತೆಯಲ್ಲಿ ಸುಧೃತಿಯ ಮುಂದೆ ಬಂದನು. ಒಂದು ಮುಹೂರ್ತಕಾಲ ಅವರೀರ್ವರಿಗೂ ಬಹಳ ಭಯಂಕರವಾದ ಯುದ್ಧವು ನಡೆಯಿತು. ॥೫೧-೫೨-೫೩॥

ತದಾ ಸುಧೃತಿಸೇನಾಽಗ್ರ್ಯೈರ್ನಿಹತೇಂದ್ರಮಹಾಚಮೂಃ ।
ಛಿನ್ನಪಾದಶಿರೋಹಸ್ತಪಾರ್ಶ್ವಾಽಕ್ಷಿಶ್ರೋತ್ರನಾಸಿಕಾಃ ॥೫೪॥

ಸುರಸಂಘಾ ಗತಪ್ರಾಣಾಃ ಪತಿತಾಃ ಕ್ಷ್ಮಾತಲೇ ತತಃ ।
ಗತಪ್ರಾಣಾಸ್ತತ್ರ ಕೇಚಿದಲ್ಪಪ್ರಾಣಾಸ್ತಥಾಽಪರೇ ॥೫೫॥

ಮೂರ್ಛಿತಾಶ್ಚೇತರೇ ಚಾಽನ್ಯೇ ಭೀತ್ಯಾ ತ್ವತ್ರ ಮೃಷಾ ಮೃತಾಃ ।
ನಿಮೀಲ್ಯ ನೇತ್ರೇ ಪ್ರಾಣಾನಾಂ ಗತಿಂ ರುದ್ಧ್ವಾ ಚಿರಂ ಬಲಾತ್ ॥೫೬॥

ವೀರೇ ದೂರಸ್ಥಿತೇ ನೇತ್ರಕೋಣೇನಾಽಪ್ಯವಲೋಕನಂ ।
ಕುರ್ವತಃ ಶ್ವಾಸಮಪಿ ಚ ರೇಚಯಂತಿ ಶನೈಃಶನೈಃ ॥೫೭॥

ಏವಂ ನಿಶಾಮ್ಯ ಕದನಮನ್ಯೇ ಭೀತ್ಯಾಽಭಿದುದ್ರುವುಃ ।
ಭಗ್ನಾಮೇವಂ ದೇವಚಮೂಂ ದೃಷ್ಟ್ವಾ ವಸುಗಣಾಸ್ತದಾ ॥೫೮॥

ಸಾವಿತ್ರಪ್ರಮುಖಾಸ್ತತ್ರ ಸುಧೃತೇಸ್ತಾಂ ಮಹಾಚಮೂಂ ।
ಉದ್ವೇಲಸಾಗರಮಿವ ಪ್ರವೃದ್ಧಾಂ ಜಘ್ನುರಂಜಸಾ ॥೫೯॥

ಆಗ ಸುಧೃತಿಯ ಸೈನ್ಯಗಳ ಮುಂಭಾಗದ ಸೈನ್ಯಗಳಿಂದ ಇಂದ್ರನ ದೊಡ್ಡ ಸೈನ್ಯವೂ ನಾಶವಾಯಿತು. ಆಗ ದೇವತೆಗಳ ಗಣಗಳು ಕತ್ತರಿಸಲ್ಪಟ್ಟ ಕಾಲುಗಳು, ತಲೆಗಳು, ಕೈಗಳು, ಪಕ್ಕಗಳು, ಕಣ್ಣುಗಳು, ಕಿವಿಗಳು, ಮೂಗುಗಳು ಇವುಗಳುಳ್ಳವರಾದರು. ಕೆಲವರ ಪ್ರಾಣಗಳೇ ಹೋದವು. ಕೆಲವರು ಅಲ್ಪಪ್ರಾಣಗಳುಳ್ಳವರಾದರು. ಕೆಲವರು ಮೂರ್ಛೆಹೊಂದಿದರು. ಇನ್ನುಕೆಲವರು ಭಯದಿಂದ ಪ್ರಾಣಹೋದವರಂತೆ ನಟಿಸುತ್ತಾ ಕಣ್ಣುಗಳನ್ನು ಮುಚ್ಚಿ ಬಿದ್ದಿದ್ದರು. ಅವರು ಬಹಳಕಾಲ ಬಲಾತ್ಕಾರದಿಂದ ಪ್ರಾಣಗತಿಯನ್ನು ನಿರೋಧಿಸಿ ಅಂಜಿಕೆಯಿಂದ ಬಿದ್ದಿದ್ದರು. ॥೫೪-೫೫-೫೬॥

ವೀರನಾದ ಶತ್ರುವು ದೂರದಲ್ಲಿದ್ದಾಗ್ಯೂ ದೇವತೆಗಳು ಅವನನ್ನು ತಮ್ಮ ಕಡೆಗಣ್ಣಿನಿಂದ ನೋಡಲೂ ಅಸಮರ್ಥರಾಗಿ ಕೆಳಗೆ ಬಿದ್ದಿದ್ದರು. ಮತ್ತು ಇವರು ಗಾಬರಿಯಿಂದ ಶ್ವಾಸವನ್ನು ಮೆಲ್ಲಮೆಲ್ಲಗೆ ಬಿಡುತ್ತಿದ್ದರು. ಹೀಗೆ ಯುದ್ಧವು ಬಹಳ ಪ್ರಬಲವಾಗಿರುವುದನ್ನು ಕೇಳಿ ಇತರರೂ ಹೆದರಿಕೆಯಿಂದ ಎಲ್ಲಾ ಕಡೆಯಲ್ಲಿಯೂ ಓಡಿದರು. ಆಗ ದೇವಸೈನ್ಯವು ಹೀಗೆ ನಾಶವಾಗುತ್ತಿದ್ದುದನ್ನು ಕಂಡು ಸಾವಿತ್ರನೇ ಮೊದಲಾದ ವಸು ಎಂಬ ದೇವತೆಗಳ ಗಣಗಳು, ತೀರವನ್ನು ಮೀರಿ ಉಬ್ಬಿದ

ವಸುಭಿರ್ಹನ್ಯಮಾನಾ ಸಾ ಸುಧೃತೇರ್ಮಹತೀ ಚಮೂಃ ।
ನನಾಶ ತೀವ್ರವಾತೇನ ವರ್ಷಾಽಭ್ರತತಿವದ್ದ್ರುತಂ ॥೬೦॥

ಕೇಚಿದ್ದ್ವಿಧಾಕೃತಾ ಮಧ್ಯೇ ಕೇಚಿಚ್ಛಿನ್ನಕರಾಂಘ್ರಯಃ ।
ಕೇಚಿದರ್ಧಾಂಗವಿಧುರಾಃ ಕೇಚಿಚ್ಚ ತಿಲಶಃ ಕೃತಾಃ ॥೬೧॥

ಏವಂ ಚಮೂಂ ವಿಲೋಕ್ಯಾನ್ಯೇ ದುದ್ರುವುರ್ಭಯಕಾತರಾಃ ।
ಅಶಕ್ನುವಂತಃ ಸರಿತಃ ಶೋಣಿತಾನಾಂ ವ್ಯತಿಕ್ರಮೇ ॥೬೨॥

ಇತಸ್ತತಶ್ಚ ಧಾವಂತೋ ವಸುಭಿಸ್ತಾಡಿತಾ ಭೃಶಂ ।
ಅಪ್ರಾಪ್ಯ ಶರಣಂ ಕಿಂಚಿತ್ ಪತಿತಾ ರಕ್ತಸಿಂಧುಷು ॥೬೩॥

ಅಗಾಧರಕ್ತಸಲಿಲೇ ನಿಮಗ್ನಾಸ್ತತ್ರ ಕೇಚನ ।
ಬಾಹುಭ್ಯಾಂ ಪ್ರತರಂತ್ಯನ್ಯೇ ಮಜ್ಜಂತಶ್ಚ ಪದೇಪದೇ ॥೬೪॥

ಮೃತಾನ್ ಗಜಾನ್ ಸಮಾಸಾದ್ಯ ತಸ್ಥುಃ ಪ್ರಾಣಪರೀಪ್ಸವಃ ।
ಅಂತರೀಪಮಿವಾಽಽಸಾದ್ಯ ದೂರಾತ್ಪ್ರೇಕ್ಷ್ಯ ಸಮಾಗತಾಃ ॥೬೫॥

ಸಾಗರದಂತಿದ್ದ ಸುಧೃತಿಯ ಆ ಮಹಾಸೈನ್ಯವನ್ನು ಶೀಘ್ರವಾಗಿ ನಾಶಮಾಡಲು ಉಪಕ್ರಮಿಸಿದರು. ||೫೭-೫೮-೫೯||

ವಸುಗಳಿಂದ ನಾಶಮಾಡಲ್ಪಡುತ್ತಿದ್ದ ಸುಧೃತಿಯ ಆ ಮಹಾಸೈನ್ಯವು, ಬಹಳ ವೇಗವುಳ್ಳ ವಾಯುವಿನಿಂದ ವರ್ಷಾಕಾಲದ ಮೇಘಸಮೂಹದಂತೆ, ಶೀಘ್ರವಾಗಿ ಚದುರಿಹೋಯಿತು. ಕೆಲವರು ತಮ್ಮ ಶರೀರ ಮಧ್ಯದಲ್ಲಿ ಎರಡಾಗಿ ಸೀಳಲ್ಪಟ್ಟರು. ಮತ್ತೆ ಕೆಲವರ ಕೈಕಾಲುಗಳು ಕತ್ತರಿಸಲ್ಪಟ್ಟವು. ಕೆಲವರಿಗೆ ಅರ್ಧ ಶರೀರವೇ ನಾಶವಾಯಿತು. ಕೆಲವರು ಎಳ್ಳಿನಂತೆ ಪುಡಿಪುಡಿಮಾಡಲ್ಪಟ್ಟರು. ಹೀಗೆ ನಾಶವನ್ನೈದಿದ ಸೈನ್ಯವನ್ನು ನೋಡಿ ಇತರರು ರಕ್ತಪ್ರವಾಹಗಳೇ ಹರಿಯುತ್ತಿದ್ದುದನ್ನು ನೋಡಲು ಅಸಮರ್ಥರಾಗಿ ಬಹಳ ಭಯದಿಂದ ಓಡಿದರು. ||೬೦-೬೧-೬೨||

ವಸುಗಳು ಹೀಗೆ ಹೆದರಿ ಅಲ್ಲಿ ಇಲ್ಲಿ ಓಡುತ್ತಿದ್ದವರಿಗೂ ಬಲವಾಗಿ ಪೆಟ್ಟು ಕೊಟ್ಟು ಬೀಳಿಸಿದರು. ಅವರು ತಮಗೆ ರಕ್ಷಕರಾರೂ ಇಲ್ಲದೆ ರಕ್ತದ ಪ್ರವಾಹಗಳಲ್ಲಿ ಬಿದ್ದರು. ಕೆಲವರು ಅಗಾಧವಾದ ರಕ್ತದ ಹೊಳೆಗಳಲ್ಲಿಯೇ ಮುಳುಗಿದರು. ಇನ್ನು ಕೆಲವರು ಹೆಜ್ಜೆಹೆಜ್ಜೆಗೂ ಮುಳುಗುತ್ತಾ ತಮ್ಮ ತೋಳುಗಳಿಂದ ಆ ರಕ್ತದ ಪ್ರವಾಹ

ಅನ್ಯೇ ರಥಾಂಗಮಾಸಾದ್ಯ ತೇರುರ್ನೌಕಾಮಿವಾರ್ಣವೇ ।
ಅಶ್ವಾನ್ ರಥಾನ್ ತಥಾ ಕೇಚಿತ್ತೀರ್ಣಾಃ ಶೋಣಿತವಾಹಿನೀಂ॥೧೬॥

ಸೇನಾಪರಾಭವಂ ದೃಷ್ಟ್ವಾ ಸುಧೃತೇಸ್ತನುಜಸ್ತದಾ ।
ರಣಧೀರೋ ಮಹಾಶೂರಃ ವಜ್ರಸಂಹನನೋ ಯುವಾ ॥೧೭॥

ರಥಮಾರುಹ್ಯ ಸನ್ನದ್ಧೋ ಮಣಿಹೇಮಪರಿಷ್ಕೃತಂ ।
ಧನುರ್ವಿಸ್ಫಾರಯನ್ ಪ್ರಾಗಾದ್ವಸೂನಾಂ ಪುರತೋ ರುಷಾ ॥೧೮॥

ಪ್ರಾಹೋಚ್ಚೈಃ ಸೈನಿಕಾನ್ ಸ್ವೀಯಾನ್ ಪಲಾಯನಪರಾನ್ ತದಾ ।
ನಿವರ್ತಧ್ವಂ ನಿವರ್ತಧ್ವಂ ನೋಚಿತಂ ವಃ ಪಲಾಯನಂ ॥೧೯॥

ಅಭಿದ್ರವನ್ ತಂ ಧರ್ಮಂ ಚ ಜಹಾತಿ ಶ್ರೀರ್ಯಶಸ್ತಥಾ ।
ಭರ್ತೃಪಿಂಡಸ್ಯ ನಿಷ್ಕೃತಿ ರ್ಯುದ್ಧೇ ದೇಹಸಮರ್ಪಣಂ ॥೨೦॥

ವನ್ನು ಈಜಿ ದಾಟಲು ಪ್ರಯತ್ನಪಟ್ಟರು. ಅವರು ತಮ್ಮ ಪ್ರಾಣರಕ್ಷಣೆಯನ್ನು ಬಯಸುವವರಾಗಿ ಸತ್ತ ಆನೆಗಳ ಆಸರೆಯನ್ನು ಹಿಡಿದುಕೊಂಡು ನಿಂತರು. ಅವರು ನೀರಿನ ಮಧ್ಯದಲ್ಲಿ ಸಿಕ್ಕಿದ ಆಸರೆಯಿಂದ ಬಹುದೂರ ಅವುಗಳ ಮೇಲೆ ಸಾಗುತ್ತಿದ್ದರು. ॥೧೩-೧೪-೧೫॥

ಇನ್ನು ಕೆಲವರು ಸಮುದ್ರದ ಮೇಲೆ ನಾವೆಯಂತೆ ರಥಗಳ ಚಕ್ರಗಳ ಮೇಲೇರಿ ರಕ್ತದ ಪ್ರವಾಹವನ್ನು ದಾಟಿದರು. ಕೆಲವರು ಕುದುರೆಗಳು, ರಥಗಳು ಇವುಗಳನ್ನಾಶ್ರಯಿಸಿ ರಕ್ತಪ್ರವಾಹವನ್ನು ದಾಟಿದರು. ಆಗ ತಮ್ಮ ಸೇನೆಗೆ ಉಂಟಾದ ಸೋಲನ್ನು ಸುಧೃತಿಯ ಮಗನಾದ ರಣಧೀರನು ಮನಗಂಡನು, ಮಹಾಶೂರನೂ, ವಜ್ರದಂತೆ ಮೈಕಟ್ಟುಳ್ಳವನೂ, ಯುವಕನೂ ಆದ ಇವನು ರತ್ನಖಚಿತವಾದ ಸುವರ್ಣಮಯವಾದ ರಥವನ್ನೇರಿ, ರೋಷಾವಿಷ್ಟನಾಗಿ, ಯುದ್ಧಕ್ಕೆ ಸಿದ್ಧನಾಗಿ ಧನುಸ್ಸನ್ನು ಸೆಳೆಯುತ್ತಾ ವಸುಗಳ ಮುಂದೆ ಹೋದನು. ॥೧೬-೧೭-೧೮॥

ಆಗ ಸುಧೃತಿಯ ಮಗನು ಪಲಾಯನಮಾಡುತ್ತಿರುವ ತಮ್ಮ ಸೈನಿಕರನ್ನು ಕುರಿತು "ಎಲೈ ಸೈನಿಕರೇ, ಹಿಂತಿರುಗಿ, ಹಿಂತಿರುಗಿ, ನೀವು ಪಲಾಯನಮಾಡುವುದು ಉಚಿತವಲ್ಲ. ಯುದ್ಧದಲ್ಲಿ ಹೀಗೆ ಹಿಮ್ಮೆಟ್ಟುವವನು ತನ್ನ ಕ್ಷತ್ರಿಯ ಧರ್ಮ, ಸಂಪತ್ತು, ಕೀರ್ತಿ ಎಲ್ಲವನ್ನೂ ಕಳೆದುಕೊಳ್ಳುತ್ತಾನೆ. ಮತ್ತು ಅವನು ತನ್ನ ಯಜಮಾನನಿಗೆ ಸಲ್ಲಬೇಕಾದ ಋಣಪರಿಹಾರವನ್ನು ಮಾಡಿದಹಾಗಾಗುವುದಿಲ್ಲವು. ಆದ್ದ

ಏವಂ ವದನ್ ವಸುಗಣಂ ಸಮಾಸಾದ್ಯ ವಚೋಽಬ್ರವೀತ್ ।
ಧಿಗ್ವೋಽಬಲಾನ್ ಕಾತರಾಂಶ್ಚ ಯದನುದ್ರುತ್ಯ ಸರ್ವತಃ ॥೭೧॥

ಶಸ್ತ್ರೈಃ ಪ್ರಹರಥಾಽಲಂ ತನ್ಮಾಂ ಪಶ್ಯತ ಪುರಃಸ್ಥಿತಂ ।
ಶೂರೈರ್ವಿಗರ್ಹಿತಃ ಪಂಥಾಃ ಭೀತಾನಾಂ ಯದನುದ್ರವಃ ॥೭೨॥

ಪಶ್ಯಾಮಿ ಭವತಾಂ ವೀರ್ಯಂ ಪ್ರದರ್ಶಯತ ಮೇ ದ್ರುತಂ ।
ತದನ್ವಹಂ ಸ್ವವೀರ್ಯೇಣ ತೋಷಯಾಮ್ಯಚಿರೇಣ ವಃ ॥೭೩॥

ವಸವಸ್ತದ್ವಚಃ ಶ್ರುತ್ವಾ ರಣಧೀರೋದಿತಂ ತದಾ ।
ಯುಗಪತ್ಪರಿವವ್ರುಸ್ತಂ ರಸಂ ಮಧುಕರಾ ಇವ ॥೭೪॥

ತಥಾಽಪಿ ರಣಧೀರಸ್ತು ವಸುಮಧ್ಯೇ ರಥಸ್ಥಿತಃ ।
ನ ಚಚಾಲ ಸುವರ್ಣಾದ್ರಿಃ ಯಥೋಪಗಿರಿಸಂವೃತಃ ॥೭೫॥

ರಿಂದ ವೀರನು ಯುದ್ಧದಲ್ಲಿ ದೇಹವನ್ನಾದರೂ ತ್ಯಾಗಮಾಡಿ ಋಣಮುಕ್ತನಾಗಬೇಕೇ ಹೊರತು ಸರ್ವಥಾ ಹೇಡಿತನದಿಂದ ಹಿಮ್ಮೆಟ್ಟಿ ಓಡಬಾರದು." ಎಂದು ಗಟ್ಟಿಯಾಗಿ ಕೂಗಿ ಹೇಳಿದನು. ಅನಂತರ ವಸುಗಣಗಳಿಗೂ ಎದುರಾಗಿ "ಎಲೈ ವಸುಗಳೇ, ಅಶಕ್ತರೂ, ಭೀತರೂ ಆಗಿ ಓಡುತ್ತಿರುವವರನ್ನು ಹಿಂದಟ್ಟಿಕೊಂಡು ಓಡುತ್ತಿರುವ ನಿಮ್ಮ ಶೌರ್ಯವು ತುಚ್ಛವೂ ಮತ್ತು ನಿಂದ್ಯವೂ ಆಗಿದೆ ಎಂದು ತಿಳಿಯಿರಿ." ||೬೯-೭೦-೭೧||

"ಅವರನ್ನು ಅನುಸರಿಸಿ ಹೊಡೆಯುವುದಕ್ಕೆ ಬದಲು ನಿಮ್ಮ ಮುಂದೆ ನಿಂತಿರುವ ನನ್ನಮೇಲೆ ಶಸ್ತ್ರಪ್ರಹಾರಮಾಡಿ! ಭಯಗೊಂಡ ಜನರನ್ನು ಅಟ್ಟಿಸಿಕೊಂಡು ಹೋಗುವುದು ಶೂರರಿಂದ ನಿಂದಿಸಲ್ಪಟ್ಟ ಮಾರ್ಗವು. ನನ್ನ ಮೇಲೆ ನಿಮ್ಮ ವೀರ್ಯವನ್ನು ಶೀಘ್ರವಾಗಿ ತೋರಿಸಿ, ನೋಡುವೆನು. ಆಗ ನಾನೂ ನಿಮಗೆ ಪ್ರತಿಯಾಗಿ ನನ್ನ ಪರಾಕ್ರಮವನ್ನು ತೋರಿಸುತ್ತಾ ಪ್ರತಿನಿತ್ಯವೂ ನಿಮ್ಮೊಂದಿಗೆ ಕಾದಾಡಿ ಸಂತೋಷಪಡಿಸುವೆನು. ಸುಧೃತಿಯ ಮಗನಾದ ರಣಧೀರನ ಈ ಮಾತನ್ನು ಕೇಳಿ, ಜೇನುಹುಳುಗಳು ಪುಷ್ಪರಸವನ್ನು ಹೇಗೋ ಹಾಗೆ, ಅವನನ್ನು ಸುತ್ತಲೂ ವಸುಗಳು ಮುತ್ತಿದರು. ||೭೨-೭೩-೭೪||

ಹಾಗಾದಾಗ್ಯೂ, ವಸುಗಳ ಮಧ್ಯದಲ್ಲಿ ರಥದಲ್ಲಿ ಕುಳಿತಿದ್ದ ಸುಧೃತಿ ಪುತ್ರನು, ಉಪಪರ್ವತಗಳಿಂದ ಸುತ್ತುವರಿಯಲ್ಪಟ್ಟ ಮೇರುಪರ್ವತದಂತೆ, ಚಲಿಸದೇ ಇದ್ದನು.

ಅಥ ತಂ ಶರವರ್ಷೇಣ ವವರ್ಷುಃ ವಸವೋಽಭಿತಃ ।
ತಥಾ ಮುಸಲಶಕ್ತ್ಯೃಷ್ಟಿ ಕುಂತಭಲ್ಲಾಽಸಿವೃಷ್ಟಿಭಿಃ ॥೭೬॥

ವಸುಶಸ್ತ್ರಾತಿವರ್ಷೇಣ ಸಂಪ್ಲುತಂ ಸೇನಯಾಽಽತ್ಮಜಂ ।
ದೃಷ್ಟ್ವಾ ಮೃತಂ ಮೇನಿರೇ ತಂ ಸೈನಿಕಾ ದೂರಸಂಸ್ಥಿತಾಃ ॥೭೭॥

ಕಲಭಂ ಸರ್ವತಃ ಸಿಂಹೈರಾಕ್ರಾಂತ ಮಿವ ಕಶ್ಚನ ।
ನ ಸಮರ್ಥೋ ಮೋಚಯಿತುಂ ವಿಷಣ್ಣವದನೋಽಭವನ್ ॥೭೮॥

ಅಥ ತಾಂ ಶಸ್ತ್ರವೃಷ್ಟಿಂ ಸ ಲಘುಹಸ್ತಃ ಕ್ಷಣಾರ್ಧತಃ ।
ಏಕೈಕಮಷ್ಟಧಾ ಭಿತ್ವಾ ತಾನ್ನಘಾನ ತ್ರಿಭಿಃ ಶರೈಃ ॥೭೯॥

ಪ್ರತ್ಯೇಕಂ ನಿಶಿತೈಸ್ತಚ್ಚ ದೃಷ್ಟ್ವಾಽದ್ಭುತಪರಾಕ್ರಮಂ ।
ಶಶಂಸುರ್ದೇವತಾ ಮರ್ತ್ಯಾಃ ಸಾಧುಘೋಷೈಶ್ಚ ಸರ್ವತಃ ॥೮೦॥

ತತಸ್ತೇ ವಿವಿಧೈರಸ್ತ್ರೈಃ ಜಘ್ನುರ್ಮಂಡಲಸಂಸ್ಥಿತಾಃ ।
ಸೋಽಪಿ ಶೀಘ್ರಂ ತಮಸ್ತ್ರೌಘಂ ಪ್ರತ್ಯಸ್ತ್ರೈರಹನತ್ ಕ್ರಮಾತ್ ॥೮೧॥

ಅನಂತರ ವಸುಗಳು ಅವನ ಸುತ್ತಲೂ ಬಾಣಗಳ ಮಳೆಗರೆದರು. ಹಾಗೆಯೇ, ಮುಸಲ, ಶಕ್ತಿ, ಋಷ್ಟಿ, ಕುಂತ, ಭಲ್ಲೆ, ಕತ್ತಿಗಳನ್ನೂ, ಅತಿಯಾಗಿ ಪ್ರಯೋಗಿಸಿದರು. ದೂರದಲ್ಲಿ ನಿಂತಿದ್ದ ಸೈನಿಕರು, ವಸುಗಳು ಈ ರೀತಿ ಶಸ್ತ್ರಗಳನ್ನು ನಿರಂತರವಾಗಿ ಪ್ರಯೋಗಿಸುತ್ತಿದ್ದುದನ್ನು ಕಂಡು ಸುಧೃತಿಯ ಮಗನು ಮರಣವನ್ನೇ ಹೊಂದಿರಬಹುದೆಂದು ಭಾವಿಸಿದರು. ||೭೫-೭೬-೭೭||

ಸಿಂಹಗಳಿಂದ ಆಕ್ರಮಿಸಲ್ಪಟ್ಟ ಆನೆಯ ಮರಿಯನ್ನು ಯಾವನೂ ಬಿಡಿಸಲು ಹೇಗೆ ಸಮರ್ಥನಾಗಲಾರನೋ ಹಾಗೆ ಆ ಸೈನಿಕರು ಅವನನ್ನು ಬಿಡಿಸಲು ಅಸಮರ್ಥರಾಗಿ ದುಃಖಾಕ್ರಾಂತರಾಗಿದ್ದರು. ಅನಂತರ ಸುಧೃತಿಯಮಗನು ಒಂದರ್ಧಕ್ಷಣದಲ್ಲಿಯೇ ಕೈಚಳಕದಿಂದ ಶಸ್ತ್ರಗಳನ್ನು ಎಂಟು ಭಾಗವಾಗಿ ತುಂಡರಿಸಿದ್ದಲ್ಲದೆ, ಆ ಶತ್ರುಗಳನ್ನು ತೀಕ್ಷ್ಣವಾದ ಮೂರು ಮೂರು ಬಾಣಗಳನ್ನು ಬಿಟ್ಟು ಪ್ರಹರಿಸಿದನು. ಸುಧೃತಿ ಪುತ್ರನ ಅದ್ಭುತವಾದ ಪರಾಕ್ರಮವನ್ನು ನೋಡಿ, ದೇವತೆಗಳು, ಮನುಷ್ಯರು ಎಲ್ಲಾ ಕಡೆಯಲ್ಲಿಯೂ "ಭೇಷ್! ಭೇಷ್!" ಎಂದು ಪ್ರಶಂಸೆಮಾಡಿದರು.||೭೮-೭೯-೮೦||

ಅನಂತರ ವಸುಗಣಗಳೂ ಮಂಡಲಾಕಾರದಲ್ಲಿ ಸೇರಿ ಅವನ ಮೇಲೆ ಅನೇಕ

ಏಕೋಽಷ್ಟಭಿರ್ಮಹದ್ಯುದ್ಧಮಕರೋತ್ ಭ್ರಮಿವತ್ ಭ್ರಮನ್ ।
ಏವಂ ಮುಹೂರ್ತಮಭವದ್ಯುದ್ಧಂ ವಸುಗಣೈಸ್ತದಾ ॥೮೨॥

ಭ್ರಮನ್ನಾವರ್ತವದ್ಯುದ್ಧಂ ಸರ್ವೇಷಾಂ ಸಂಮುಖೇಽಕರೋತ್ ।
ತತಃ ಪ್ರತ್ಯೇಕಮುರಸಿ ವಿವ್ಯಾಧ ನಿಶಿತೈಃ ಶರೈಃ ॥೮೩॥

ಧ್ವಜಾನೇಕೈಕಶಶ್ಛಿತ್ವಾ ಚತುರ್ಭಿಶ್ಚತುರೋ ಹಯಾನ್ ।
ಸಾರಥೀನಾಂ ಶಿರೋ ಭಲ್ಲೈಶ್ಚಕರ್ತಾಽತಿದ್ರುತಂ ತದಾ ॥೮೪॥

ನಿಶಿತೇನ ಕ್ಷುರಪ್ರೇಣ ಹೃದಿ ವಿವ್ಯಾಧ ತಾನ್ ವಸೂನ್ ।
ಹತಧ್ವಜಾಶ್ವಯಂತಾರೋ ವಸವಃ ಸುದೃಢಾಽರ್ದಿತಾಃ ॥೮೫॥

ಮೂರ್ಛಿತಾಃ ಪತಿತಾ ಭೂಮೌ ಕೃತ್ತಮೂಲಾ ಇವ ದ್ರುಮಾಃ ।
ಹಾಹಾಕಾರೋ ಮಹಾನಾಸೀತ್ ವಸೂನ್ ದೃಷ್ಟ್ವಾ ನಿಪಾತಿತಾನ್॥೮೬॥

ವಿಧವಾದ ಅಸ್ತ್ರಗಳನ್ನು ಪ್ರಯೋಗಿಸಿದರು. ಸುಧೃತಿ ಪುತ್ರನೂ ಪ್ರತಿಯಾಗಿ ಅಸ್ತ್ರಗಳನ್ನು ಬಿಟ್ಟು ಅವರು ಪ್ರಯೋಗಿಸಿದ ಅಸ್ತ್ರಗಳನ್ನೆಲ್ಲವನ್ನೂ ಕತ್ತರಿಸಿ ನಾಶಮಾಡಿದನು. ಒಬ್ಬನೇ ಆದರೂ ಇವನು ಚಕ್ರದಂತೆ ಸುತ್ತುತ್ತಾ, ಎಂಟು ಮಂದಿ ವಸುಗಳೊಡನೆ ದೊಡ್ಡ ಯುದ್ಧವನ್ನು ಮಾಡಿದನು. ಆಗ ಇವನಿಗೂ ಅವರಿಗೂ ಯುದ್ಧವು ಈ ರೀತಿ ಒಂದು ಮುಹೂರ್ತಕಾಲ ನಡೆಯಿತು. ಇವನು ಸುಳಿಗಳಂತೆ ಸುತ್ತುತ್ತಾ ಎಲ್ಲಾ ಪ್ರೇಕ್ಷಕರ ಎದುರಿಗೆ ಯುದ್ಧವನ್ನು ನಡೆಸಿದನು. ಆಮೇಲೆ ಅವರೆಲ್ಲರ ವಕ್ಷಸ್ಥಳಕ್ಕೆ ತೀಕ್ಷ್ಣವಾದ ಬಾಣಗಳನ್ನು ಪ್ರತ್ಯೇಕವಾಗಿ ಬಿಟ್ಟು ಹೊಡೆದನು. ॥೮೧-೮೨-೮೩॥

ಸುಧೃತಿಯ ಮಗನು ಒಂದೊಂದು ಬಾಣಪ್ರಯೋಗದಿಂದ ವಸುಗಳ ರಥಗಳ ಬಾವುಟಗಳನ್ನೂ, ನಾಲ್ಕು ಬಾಣಗಳಿಂದ ನಾಲ್ಕು ಕುದುರೆಗಳನ್ನೂ, ಭಲ್ಲೆಗಳಿಂದ ಸಾರಥಿಗಳ ಶಿರಸ್ಸನ್ನೂ ಬಹು ಶೀಘ್ರವಾಗಿ ಕತ್ತರಿಸಿ ಹಾಕಿದನು. ಮತ್ತು ಇವನು ಅತಿ ತೀಕ್ಷ್ಣವಾದ ಕತ್ತಿಯಿಂದ ವಸುಗಳ ಹೃದಯಗಳನ್ನು ಚುಚ್ಚಿದನು. ವಸುಗಳು ತಮ್ಮ ರಥದ ಬಾವುಟ ಮತ್ತು ಸಾರಥಿಗಳು ಇವರೆಲ್ಲರೂ ನಾಶವಾದುದನ್ನು ಕಂಡು ಬಹಳ ಪೀಡೆಗಳಿಗೊಳಗಾದರು. ಅವರು ಕೂಡಲೇ ಮೂರ್ಛೆಹೋಗಿ ಕತ್ತರಿಸಲ್ಪಟ್ಟ ಬುಡಗಳುಳ್ಳ ಮರಗಳಂತೆ ಭೂಮಿಯಲ್ಲಿ ಬಿದ್ದುಬಿಟ್ಟರು. ವಸುಗಳು

ದೇವಸೇನಾಸು ಮರ್ತ್ಯೇಷು ಜಯಶಬ್ದೋ ಮಹಾನಭೂತ್ ।
ಏತಸ್ಮಿನ್ನಂತರೇ ತತ್ರ ವಸುಃ ಸಾವಿತ್ರಸಂಜ್ಞಕಃ ॥೮೭॥

ಮೂರ್ಛಾಮುಕ್ತೋಽತಿನಿಶಿತೈಃ ರಣಧೀರಂ ಶರೈಸ್ತ್ರಿಭಿಃ ।
ನಿಹತ್ಯ ಸಿಂಹನಾದಂ ಸ ಕೃತವಾನ್ ಪ್ರಾಹ ಮಂಡಲೇ ॥೮೮॥

ಸಾವಿತ್ರಶರಸಂವಿದ್ಧೋ ರಣಧೀರೋಽತಿಮರ್ಷಿತಃ ।
ಅರ್ಧಚಂದ್ರೇಣ ಚಿಚ್ಛೇದ ಧನುಃ ಸಾವಿತ್ರಹಸ್ತಗಂ ॥೮೯॥

ಸ ಛಿನ್ನಧನ್ವಾ ಮಹತೀಂ ಗದಾಮಾದಾಯ ವೇಗತಃ ।
ಅಶ್ವಾನ್ ವಿಸಂಜ್ಞಾನಕರೋತ್ ಬಲಾಹಕಸಮಾನ್ ತದಾ ॥೯೦॥

ರಣಧೀರೋರಸಿ ತದಾ ಪ್ರಾಸ್ಯತ್ ಸರ್ವಾಯಸೀಂ ಗದಾಂ ।
ಅಥಾಽಯಾಂತೀಮಶನಿವದ್ಗದಾಮತಿಭಯಂಕರೀಂ ॥೯೧॥

ಲಘುಹಸ್ತಃ ಪ್ರಚಿಚ್ಛೇದ ತ್ರಿಧಾ ನಭಸಿ ಮಧ್ಯತಃ ।
ಅಥಾಽದದೇಽತಿನಿಶಿತಂ ಖಡ್ಗಂ ಚರ್ಮ ಚ ಸುಂದರಂ ॥೯೨॥

ಈರೀತಿ ಬಿದ್ದುದನ್ನು ಕಂಡು ದೇವಸೇನೆಗಳಲ್ಲಿ ಹಾಹಾ ಎಂದು ಕೂಗಾಟವು ಶೀಘ್ರವಾಗಿ ಕೇಳಿಸಿತು. ||೮೪-೮೫-೮೬||

ಈ ಸಂದರ್ಭದಲ್ಲಿ, ಸಾವಿತ್ರ ಎಂಬ ಹೆಸರುಳ್ಳ ವಸುವು ಮೂರ್ಛೆಯಿಂದ ತಿಳಿದು, ಬಹಳ ತೀಕ್ಷ್ಣಗಳಾದ ಮೂರು ಬಾಣಗಳನ್ನು ಸುಧೃತಿಪುತ್ರನಿಗೆ ಪ್ರಯೋಗಿಸಿ ತಮ್ಮ ಗುಂಪಿನಲ್ಲಿ ಸಿಂಹನಾದವನ್ನು ಮಾಡುತ್ತಾ ವಿಷಯವನ್ನು ತಮ್ಮ ಕಡೆಯವರಿಗೆ ತಿಳಿಸಿದನು. ಸಾವಿತ್ರನ ಬಾಣದಿಂದ ಹೊಡೆಯಲ್ಪಟ್ಟ ರಣಧೀರನಾದ ಸುಧೃತಿಕುಮಾರನು ಬಹಳ ಕೋಪಗೊಂಡವನಾಗಿ ಸಾವಿತ್ರನ ಕೈಯಲ್ಲಿದ್ದ ಧನುಸ್ಸನ್ನು ತನ್ನ ಅರ್ಧಚಂದ್ರಾಕಾರವಾದ ಬಾಣದಿಂದ ಕತ್ತರಿಸಿ ಹಾಕಿದನು. ||೮೭-೮೮-೮೯||

ಸಾವಿತ್ರನು ತನ್ನ ಧನುಸ್ಸು ಕತ್ತರಿಸಲ್ಪಟ್ಟದ್ದನ್ನು ಕಂಡು ವೇಗವಾಗಿ ಗದೆಯನ್ನು ಬೀಸಿ ಮೇಘಕ್ಕೆ ಸಮಾನವಾಗಿದ್ದ ಸುಧೃತಿ ಸುತನ ಕುದುರೆಗಳನ್ನು ಮೂರ್ಛೆಹೊಂದಿಸಿದನು. ಅನಂತರ ಕಬ್ಬಿಣದಿಂದ ನಿರ್ಮಿತವಾದ ಗದೆಯನ್ನು ಆ ರಣಧೀರನ ಮೇಲೆ ಪ್ರಯೋಗಿಸಿದನು. ಅತಿ ಭಯಂಕರವಾದ, ಗದೆಯು ಸಿಡಿಲಿ

ಸಾವಿತ್ರೋ ರಣಧೀರಸ್ಯ ರಥೇಽವಪ್ಲುತ್ಯ ತದ್ಧನುಃ ।
ಚಿಚ್ಛೇದ ಯಂತಾ ಭಲ್ಲೇನ ಹತಃ ಕ್ರೋಡೇಽತಿವೇಗಿತಃ ॥೯೩॥

ಶಿರೋ ಜಹಾರ ಖಡ್ಗೇನ ಯಂತುಃ ಸಮುಕುಟಂ ರುಷಾ ।
ರಣಧೀರಃ ಛಿನ್ನಧನುರ್ಹತಸಾರಥಿರುಚ್ಚಕೈಃ ॥೯೪॥

ಕ್ರುದ್ಧಃ ಖೇಟಕನಿಸ್ತ್ರಿಂಶೌ ಜಗೃಹೇ ಶತ್ರುತಾಪನಃ ।
ಗೃಹೀತಮಾತ್ರಂ ತರಸಾ ತೌ ಚಿಚ್ಛೇದ ಮಹಾಜವೀ ॥೯೫॥

ಗದಾಂ ಶಕ್ತಿಂ ಚ ಶೂಲಂ ಚ ಗೃಹೀತಂ ಸೋಽಚ್ಛಿನದ್ದ್ರುತಂ ।
ಏವಂ ಸಾವಿತ್ರಖಡ್ಗಸ್ಯ ಲಾಘವಂ ವೀಕ್ಷ್ಯ ದೇವರಾಟ್ ॥೯೬॥

ಅಪೂಜಯತ್ಸಾಧುವಾದೈಃ ರಣಧೀರಶ್ಚುಕೋಪ ಹ ।
ವಿವೃತ್ಯ ಮುಷ್ಟಿಂ ಸುಧೃಢಾಂ ವಜ್ರನಿಷ್ಪೇಷನಿಷ್ಠುರಾಮ್ ॥೯೭॥

ನಂತೆ ಬರುತ್ತಿದ್ದುದನ್ನು ಕಂಡು ಸುಧೃತಿಸುತನು ಕೈಚಳಕದಿಂದ ಆಕಾಶಮಧ್ಯದಲ್ಲಿ ಅದನ್ನು ಮೂರು ವಿಧವಾಗಿ ತುಂಡರಿಸಿದನು. ಅನಂತರ ಸುಧೃತಿ ಮಗನು ಬಹಳ ತೀಕ್ಷ್ಣವಾದ ಕತ್ತಿಯನ್ನೂ ಮತ್ತು ಸುಂದರವಾದ ಗುರಾಣಿಯನ್ನೂ ಕೈಗೆ ತೆಗೆದು ಕೊಂಡನು. ||೯೦-೯೧-೯೨||

ಸಾವಿತ್ರನು ರಣಧೀರನ ರಥಕ್ಕೆ ಹಾರಿ ಅವನ ಧನುಸ್ಸನ್ನು ತುಂಡರಿಸಿದನು. ಮತ್ತು ಇವನು ತನ್ನ ಭರ್ಜಿಯನ್ನು ಅತಿವೇಗವಾಗಿ ರಣಧೀರನ ಸಾರಥಿಯ ಕಂಕಳಿಗೆ ಪ್ರಯೋಗಿಸಿದನು. ಮತ್ತು ಇವನು ತನ್ನ ಕತ್ತಿಯಿಂದ ಕಿರೀಟದೊಂದಿಗೆ ಸಾರಥಿಯ ಕತ್ತನ್ನು ಕತ್ತರಿಸಿದನು. ರಣಧೀರನು ತನ್ನ ಧನುಸ್ಸನ್ನು ಕತ್ತರಿಸಿದ್ದನ್ನೂ, ಮತ್ತು ಸಾರಥಿಯು ನಾಶವಾದದ್ದನ್ನೂ ಕಂಡು ವಿಶೇಷವಾಗಿ ಕೋಪಗೊಂಡನು. ಅನಂತರ ಶತ್ರುವನ್ನು ನಾಶಮಾಡಲು ಸಮರ್ಥನಾದ ರಣಧೀರನು ಖೇಟಕ ಮತ್ತು ಕತ್ತಿಗಳನ್ನು ಕೈಗೆ ತೆಗೆದುಕೊಂಡನು. ಇವನು ಅವನ್ನು ತೆಗೆದುಕೊಂಡಕೂಡಲೇ ಮಹಾವೇಗವಾಗಿ ಯುದ್ಧಮಾಡಲು ನಿಪುಣನಾದ ಸಾವಿತ್ರನು ಅವುಗಳನ್ನೂ ತನ್ನ ಶಸ್ತ್ರಗಳಿಂದ ಕತ್ತರಿಸಿಹಾಕಿದನು. ||೯೩-೯೪-೯೫||

ಅನಂತರ ರಣಧೀರನು ಗದೆ, ಶಕ್ತ್ಯಾಯುಧ, ಶೂಲ ಇವುಗಳನ್ನೂ ತೆಗೆದು ಕೊಂಡನು. ಇವನ್ನೂ ಶೀಘ್ರವಾಗಿ ಸಾವಿತ್ರನು ಕತ್ತರಿಸಿಹಾಕಿದನು. ಹೀಗೆ ಸಾವಿತ್ರನ ಅದ್ಭುತ ಕಾರ್ಯವನ್ನು ನೋಡಿ ಇಂದ್ರನು ಅವನನ್ನು "ಭಲೆ! ಭೇಷ್!"

ಜಘಾನ ವಕ್ಷಸಿ ವಸುಂ ಜಗರ್ಜ ಚ ಮಹಾಮೃಧೇ ।
ಅಪಾಕ್ರಮತ್ ಪಂಚಹಸ್ತಂ ಸಂಜ್ಞಾಮೀಷಜ್ಜಹೌ ತತಃ ॥೯೮॥

ಪ್ರಾಹರತ್ ಪುನರೇವಾಜೌ ರಣಧೀರಂ ಮಹಾಬಲೀ ।
ಅವಲುಪ್ಯಾಂತರೇ ಹಸ್ತಾದ್ವಸೋರಾಕ್ಷಿಪ್ಯ ಖಡ್ಗಕಮ್ ॥೯೯॥

ಬಭಂಜ ಜಾನುನಾ ಮಧ್ಯೇ ತದದ್ಭುತಮಿವಾಭವತ್ ।
ಅಥ ತೌ ಮುಷ್ಟಿಭಿರ್ಘ್ನಂತೌ ವಿಶಸ್ತ್ರೌ ಚ ಪರಸ್ಪರಮ್ ॥೧೦೦॥

ಮುಹೂರ್ತಂ ತತ ಆಪ್ಲುತ್ಯ ಸಾವಿತ್ರಂ ಭುವ್ಯಪೋಥಯತ್ ।
ತಸ್ಯ ವಕ್ಷಸಿ ಸಂರುಹ್ಯ ಮುಷ್ಟಿನಾ ಮೂರ್ಧ್ನ್ಯತಾಡಯತ್ ॥೧೦೧॥

ಮುಷ್ಟಿನಾಭಿಹತೋ ರಕ್ತಂ ಸಾವಿತ್ರಃ ಪತಿತೋ ವಮನ್ ।
ಜ್ಞಾತ್ವಾ ಮುಮೂರ್ಷುಂ ಸಾವಿತ್ರಂ ಸಿಂಹಾಕ್ರಾಂತಗಜಂ ಯಥಾ ॥೧೦೨॥

ಎಂದು ವಿಶೇಷವಾಗಿ ಪ್ರಶಂಸಿಸಿದನು. ಇದನ್ನು ಕೇಳಿ ರಣಧೀರನು ಬಹಳ ಕೋಪಗೊಂಡು ಸಾವಿತ್ರನ ವಕ್ಷಃಸ್ಥಳಕ್ಕೆ ವಜ್ರಾಯುಧದ ಪೆಟ್ಟಿನಷ್ಟು ಕಠೋರವಾದ, ಬಹಳ ಬಲವಾದ, ಮುಷ್ಟಿಯನ್ನು ಪ್ರಯೋಗಿಸಿದನು. ಮತ್ತು ಅವನು ಮದದಿಂದ ಸಿಂಹನಾದ ಮಾಡಿದನು. ಸಾವಿತ್ರನು ಆ ಮುಷ್ಟಿಯ ಪೆಟ್ಟನ್ನು ಹೊಂದಿ ಜ್ಞಾನ ತಪ್ಪಿದವನಾಗಿ ಮೂರ್ಛೆಹೋದನು. ಮತ್ತು ಐದು ಮೊಳದಷ್ಟು ದೂರ ಸರಿದನು. ||೯೬-೯೭-೯೮||

ಮಹಾಬಲಿಷ್ಠನಾದ ಸಾವಿತ್ರನು ಪುನಃ ರಣಧೀರನಿಗೆ ಯುದ್ಧದಲ್ಲಿ ಹೊಡೆದನು. ಈ ಸಂದರ್ಭದಲ್ಲಿ ರಣಧೀರನು ಹಾರಿ ವಸುವಿನ ಕೈಯಿಂದ ಖಡ್ಗವನ್ನು ಕಸಿದುಕೊಂಡನು. ||೯೯||

ಹೀಗೆ ರಣಧೀರನು ಹಾರಿ ಸಾವಿತ್ರನ ಕೈಯಿಂದ ಕತ್ತಿಯನ್ನು ಸೆಳೆದುಕೊಂಡು ಅವನ ಮೊಣಕಾಲುಗಳನ್ನು ಮುರಿದನು. ಅದನ್ನು ನೋಡಲು ಅತ್ಯಂತ ಆಶ್ಚರ್ಯವಾಗಿ ಕಾಣುತ್ತಿತ್ತು. ಆ ಮೇಲೆ ಅವರಿಬ್ಬರೂ ಪರಸ್ಪರ ಶಸ್ತ್ರತ್ಯಾಗಮಾಡಿ ಮುಷ್ಟಿಗಳಿಂದ ಹೊಡೆದಾಡುತ್ತಿದ್ದರು. ಹೀಗೆ ಮುಹೂರ್ತಕಾಲವಾದಮೇಲೆ ರಣಧೀರನು ಮೇಲೆ ಹಾರಿ ಸಾವಿತ್ರನನ್ನು ಭೂಮಿಯಲ್ಲಿ ಕೆಡಹಿದನು. ಅವನ ವಕ್ಷಸ್ಥಳದ ಮೇಲೆ ಹತ್ತಿ ರಣಧೀರನು ಅವನನ್ನು ಮುಷ್ಟಿಯಿಂದ ಗುದ್ದಿದನು. ಮುಷ್ಟಿಯ

ಪ್ರೇಷಯಾಮಾಸ ದೇವೇಶೋ ಜಯಂತಂ ತದ್ವಿಮೋಕ್ಷಣೇ ।
ತತೋ ಜಯಂತೋ ಮಹತೀಂ ಶಕ್ತಿಮಾದಾಯ ವೇಗತಃ ॥೧೦೩॥

ಜಘಾನ ಪೃಷ್ಠತಸ್ತಸ್ಯ ಧರ್ಮಾಪೇತೇನ ವರ್ತ್ಮನಾ ।
ರಣಧೀರೋ ಹತಃ ಶಕ್ತ್ಯಾ ನ್ಯಪತನ್ಮೂರ್ಛಿತೋ ಭುವಿ ॥೧೦೪॥

ತದಂತರೇ ತು ಸಾವಿತ್ರಮುಪೋವಾಹೇಂದ್ರನಂದನಃ ।
ಕಥಂ ಚಿತ್ಪ್ರಾಣಸಂಶೇಷಮಿಂದ್ರಪಾರ್ಶ್ವಂ ಸಮಾನಯತ್ ॥೧೦೫॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ
ಪಂಚದಶೋಽಧ್ಯಾಯಃ

ಪೆಟ್ಟು ತಿಂದ ಸಾವಿತ್ರನು ರಕ್ತವನ್ನು ಕಾರುತ್ತಾ ಕೆಳಗೆ ಬಿದ್ದನು. ಸಿಂಹಾಕ್ರಾಂತ ವಾದ ಆನೆಯಂತೆ, ಸಾವಿತ್ರನು ಸಾಯುವ ಅವಸ್ಥೆಯಲ್ಲಿದ್ದುದನ್ನು ಇಂದ್ರನು ಕಂಡನು. ||೧೦೦-೧೦೧-೧೦೨||

ಇಂದ್ರನು ಸಾವಿತ್ರನನ್ನು ಬಿಡಿಸುವುದಕ್ಕಾಗಿ ತನ್ನ ಮಗನಾದ ಜಯಂತನನ್ನು ಕಳುಹಿಸಿದನು. ಜಯಂತನು ಶಕ್ತ್ಯಾಯುಧವನ್ನು ಹಿಡಿದುಕೊಂಡು ವೇಗವಾಗಿ ಹೋಗಿ ಅಧರ್ಮವಾದ ರೀತಿಯಲ್ಲಿ ರಣಧೀರನ ಬೆನ್ನಿಗೆ ಆಯುಧವನ್ನು ಪ್ರಯೋಗಿ ಸಿದನು. ಶಕ್ತ್ಯಾಯುಧದ ಪೆಟ್ಟಿನಿಂದ ರಣಧೀರನು ಮೂರ್ಛೆಹೋಗಿ ಭೂಮಿಯ ಮೇಲೆ ಬಿದ್ದುಬಿಟ್ಟನು. ಇಂದ್ರನ ಮಗನಾದ ಜಯಂತನು ಈ ಮಧ್ಯೆ ಸ್ವಲ್ಪ ಪ್ರಾಣ ಉಳಿದಿರುವ ಸಾವಿತ್ರನನ್ನು ಇಂದ್ರನ ಸಮೀಪಕ್ಕೆ ಬಹಳ ಕಷ್ಟದಿಂದ ಸಾಗಿಸಿದನು. ||೧೦೩-೧೦೪-೧೦೫||

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ
ಪರಶುರಾಮ ದತ್ತಾತ್ರೇಯ ಸಂವಾದದಲ್ಲಿ ಕಾಮಾಖ್ಯಾನದಲ್ಲಿ
ಹದಿನೈದನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ಷೋಡಶೋಽಧ್ಯಾಯಃ ||

ಹದಿನಾರನೆಯ ಅಧ್ಯಾಯವು

ಜಯಂತಶಕ್ತಿಸಂವಿದ್ಧೋ ಗಾಢಮೂರ್ಛಾಮುಪೇತ್ಯ ತು ।
ರಣಧೀರೋಽಕಿಂಚನಜ್ಞೋ ಮುಹೂರ್ತಾತ್ಪ್ರತ್ಯುಪಸ್ಥಿತಃ ||೧||

ತದಂತರೇ ಜಯಂತೋಽಪಿ ರಥಾರೂಢಾತ್ತಕಾರ್ಮುಕಃ ।
ರಣಧೀರಾಗ್ರತಃ ಪ್ರಾಗಾತ್ತಿಷ್ಠ ತಿಷ್ಠೇತಿ ವೈ ವದನ್ ||೨||

ತಂ ದೃಷ್ಟ್ವಾ ರಣಧೀರೋಽಪಿ ನಿರ್ಭರ್ತ್ಸಯತ ವೈ ರುಷಾ ।
ಶಚೀಸುತಂ ತ್ವಾಂ ಜಾನಾಮಿ ನ ಚ ತ್ವಂ ಶಕ್ರನಂದನಃ ||೩||

ಸ್ತ್ರೀಸ್ವಭಾವಂ ಸಮಾಸಾದ್ಯ ಪೃಷ್ಠತೋ ಮಾಂ ಯತೋಽವಧೀಃ ।
ಕೃತ್ವೈವಂ ಕರ್ಮ ಯಲ್ಲೋಕೇ ಕೃತಂ ಕಾಪುರುಷೈರ್ಲಘು ||೪||

ಜಯಂತನ ಶಕ್ತ್ಯಾಯುಧದಿಂದ ಹೊಡೆಯಲ್ಪಟ್ಟ ರಣಧೀರನು ಗಾಢ ಮೂರ್ಛೆಯನ್ನು ಹೊಂದಿ, ಏನನ್ನೂ ತಿಳಿಯದವನಾಗಿ ಒಂದು ಮುಹೂರ್ತಕಾಲ ವಾದ ಮೇಲೆ ಮೂರ್ಛೆಯಿಂದ ತಿಳಿದು ಪುನಃ ಯುದ್ಧಕ್ಕೆ ಸಿದ್ಧನಾದನು. ||೧||

ಈ ಮಧ್ಯೆ ಜಯಂತನೂ ಕೂಡ ರಥವನ್ನೇರಿ ಧನುಸ್ಸನ್ನು ಹಿಡಿದುಕೊಂಡು ರಣಧೀರನ ಮುಂಗಡೆ "ಹೋಗಬೇಡ, ನಿಲ್ಲು, ನಿಲ್ಲು" ಎಂದು ಹೇಳುತ್ತಾ ಯುದ್ಧಕ್ಕೆ ಸಿದ್ಧನಾದನು. ಇವನನ್ನು ನೋಡಿ ರಣಧೀರನು ಕೂಡ ಕೋಪದಿಂದ ಅವನನ್ನು ಈ ರೀತಿಯಾಗಿ ನಿಂದಿಸಿದನು. "ಎಲೋ ಜಯಂತನೇ, ನೀನು ಶಚಿಯ ಮಗನೇ ಹೊರತು ಇಂದ್ರನ ಮಗನಲ್ಲವೆಂದು ಭಾವಿಸುವೆನು. ಏಕೆಂದರೆ, ನೀನು ಸ್ತ್ರೀಯ ಸ್ವಭಾವವನ್ನು ಹೊಂದಿ, ನನ್ನ ಹಿಂದೆ ಬಂದು ಹೊಡೆದಿದ್ದೀಯೆ. ಕೆಟ್ಟ

ಪುರುಷಮ್ಮನ್ಯ ಏವ ತ್ವಂ ವೀರಗೋಷ್ಠೀಬಹಿಷ್ಕೃತಃ ।
ಪ್ರಜಾಽತ್ರ ವೀರಭೂಮೌ ತೇ ನ ಕಾರ್ಯಮವಶಿಷ್ಯತೇ ॥೫॥

ನ ಶೋಚಯ ಶಚೀಂ ವ್ಯರ್ಥಂ ಧಿಗನಾರ್ಯಾಸತೀಸುತ ।
ಅಥವಾ ತೇ ಭವೇಚ್ಛ್ರದ್ಧಾ ಯುದ್ಧೇ ತರ್ಹಿ ಸ್ಥಿರೀಭವ ॥೬॥

ಮದಗ್ರೇ ನಿಮಿಷಾರ್ಧೇನ ನಯಾಮ್ಯಂತಕಸಂನಿಧಿಂ ।
ಇತ್ಯುಕ್ತ್ವಾ ನಿಶಿತೈರ್ಭಲ್ಲೈಶ್ಚಿಚ್ಛೇದ ತಿಲಶೋ ರಥಂ ॥೭॥

ತದಂತರೇ ಜಯಂತೋಽಪಿ ಗದಾಂ ಚಿಕ್ಷೇಪ ರೋಷತಃ ।
ಹತೋಽಸಿ ರಣಧೀರೇತಿ ತದವಪ್ಲುತ್ಯ ಸೋಽಗ್ರಹೀತ್ ॥೮॥

ಗೃಹೀತ್ವಾ ತಾಂ ಗದಾಂ ಪ್ರಾಹ ಸಾಧು ಶೂರೋಽಸಿ ಶಕ್ರಜ ।
ಹತೋಽಸ್ಮಿ ನಾಽತ್ರ ಸಂದೇಹೋ ಹತಸ್ತ್ವಾಂ ನಿಹನಿಷ್ಯತಿ ॥೯॥

ಹೇಡಿಜನರು ಮಾಡುವ, ತುಚ್ಛವಾದ ಇಂಥಾ ಕಾರ್ಯವನ್ನು ಮಾಡಿದ್ದೀಯೆ." ||೨-೩-೪||

ನೀನು ನಿನ್ನನ್ನು ಪುರುಷನೆಂದು ತಿಳಿದಿದ್ದೀಯೆ! ಹೊರತು ವಾಸ್ತವವಾಗಿ ನೀನು ಪುರುಷನೇ ಅಲ್ಲ ಮತ್ತು ನಿನ್ನನ್ನು ವೀರರ ಗುಂಪು ಹತ್ತಿರ ಸೇರಿಸುವುದೇ ಇಲ್ಲ. ನೀನು ಈ ಯುದ್ಧಭೂಮಿಯನ್ನು ಬಿಟ್ಟು ಹೊರಗೆ ಹೊರಡು; ನೀನು ಇಲ್ಲಿ ಮಾಡಬೇಕಾದ ಕೆಲಸವೇನೂ ಇಲ್ಲ. ಎಲೋ ಅನಾರ್ಯನೇ, ಅಪತಿವ್ರತೆಯ ಮಗನೇ, ಅನ್ಯಾಯವಾಗಿ ನಿಮ್ಮ ತಾಯಿಯಾದ ಶಚಿಯನ್ನು ದುಃಖಕ್ಕೆ ಈಡು ಮಾಡಬೇಡ. ನಿನ್ನ ಜನ್ಮವು ಅತ್ಯಂತ ತುಚ್ಛವು. ಅಥವಾ ನಿನಗೆ ಯುದ್ಧದಲ್ಲಿ ಶ್ರದ್ಧೆಯಿದ್ದರೆ ನನ್ನ ಮುಂದೆ ಸ್ಥಿರವಾಗಿ ನಿಲ್ಲು. ಒಂದು ನಿಮಿಷಾರ್ಧದಲ್ಲಿಯೇ ನಿನ್ನನ್ನು ಯಮನ ಸಮೀಪಕ್ಕೆ ಕಳುಹಿಸುವೆನು. ಹೀಗೆ ರಣಧೀರನು ಹೇಳಿ ತೀಕ್ಷ್ಣವಾದ ಭರ್ಜಿಗಳಿಂದ ಜಯಂತನ ರಥವನ್ನು ಎಳ್ಳಿನಷ್ಟು ಸಣ್ಣಸಣ್ಣಗೆ ಕತ್ತರಿಸಿ ಹಾಕಿದನು. ||೫-೬-೭||

ಈ ಸಂದರ್ಭದಲ್ಲಿ ಜಯಂತನೂ ಕೂಡ ಕೋಪದಿಂದ "ಎಲೋ ರಣಧೀರನೇ, ನೀನು ಹಾಳಾದೆ!" ಎಂದು ಹೇಳುತ್ತಾ ಅವನ ಮೇಲೆ ಗದೆಯನ್ನು ಬೀಸಿದನು. ರಣಧೀರನು ಹಾರಿ ಆ ಗದೆಯನ್ನು ತನ್ನ ಮೇಲೆ ಬೀಳದಂತೆ ತಡೆದು, ಆ ಗದೆಯನ್ನೇ ಹಿಡಿದುಕೊಂಡು ಬಿಟ್ಟನು. ಅವನು ಆ ಗದೆಯನ್ನೇ ಹಿಡಿದು

ಇತಿ ಬ್ರುವತಿ ರೋಷೇಣ ಕಷಾಯೀಕೃತಲೋಚನಃ ।
ಚಿಚ್ಛೇದ ಖಡ್ಗಪಾತೇನ ಧನುಸ್ತದಪಿ ಶಕ್ರಭೂಃ ॥೧೦॥

ಛಿನ್ನೇ ದ್ವಿತೀಯೇ ಚಾಪೇಽಪಿ ರುಷಾ ಖಡ್ಗಂ ಪರಾಮೃಶತ್ ।
ವೇಗಾದಾಪ್ಲುತ್ಯ ಸವ್ಯೇನ ಕರೇಣ ನಿಮಿಷಾರ್ಧತಃ ॥೧೧॥

ನಿಪಾತ್ಯ ಶಕ್ರತನಯಕಿರೀಟಂ ಜಗೃಹೇ ಶಿಖಾಮ್ ।
ವಿಚಕರ್ಷ ಶಿಖಾಂ ಧೃತ್ವಾ ತಾರ್ಕ್ಷ್ಯಃ ಸರ್ಪಪತಿಂ ಯಥಾ ॥೧೨॥

ಛೇತ್ತುಂ ಗಲೇ ಯಾವದಯಂ ಕರವಾಲಂ ಸಮುನ್ನಯತ್ ।
ತಾವದಗ್ನಿಃ ಶತಮುಖಸುತಂ ಮತ್ವಾ ಹತಂ ಜವಾತ್ ॥೧೩॥

ಆಕ್ರೋಶತ್ಸ್ವಮೃತಾಂಧಸ್ಸು ಹಾಹೇತಿ ಪರಿಘೇಣ ತಂ ।
ಜಘಾನ ದಕ್ಷಿಣಕರೇ ಸರ್ವಪ್ರಾಣೇನ ಪಾವಕಃ ॥೧೪॥

ಕೊಂಡು, "ಎಲೋ ಇಂದ್ರನ ಮಗನಾದ ಜಯಂತನೇ, ಭೇಷ್! ಶೂರನಾಗಿದ್ದೀಯೆ, ನಾನು ಹಾಳಾದೆನಲ್ಲವೇ? ನಿಜ, ಆದರೆ ಹಾಳಾದವನೇ ನಿನ್ನನ್ನು ನಾಶ ಮಾಡುವನು! ನೋಡು." ಹೀಗೆ ಹೇಳುತ್ತಾ ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ, ತನ್ನ ಕತ್ತಿಯನ್ನು ಬೀಸಿ ಅವನ ಧನುಸ್ಸನ್ನು ಕತ್ತರಿಸಿಹಾಕಿದನು. ಜಯಂತನ ಧನುಸ್ಸೂ ಹೀಗೆ ನಾಶವಾಯಿತು. ||೮-೯-೧೦||

ಹೀಗೆ ಜಯಂತನ ಎರಡನೆಯ ಧನುಸ್ಸನ್ನು ಕತ್ತರಿಸಿ ರಣಧೀರನು ಕೋಪದಿಂದ ಕತ್ತಿಯನ್ನು ತೆಗೆದುಕೊಂಡನು. ಅನಂತರ ಅವನು ವೇಗದಿಂದ ಹಾರಿ ಬಂದು ಅರ್ಧನಿಮಿಷದಲ್ಲಿಯೇ, ಬಲಗೈಯಿಂದ ಕತ್ತಿಯನ್ನು ಪ್ರಯೋಗಿಸಿ ಜಯಂತನ ಕಿರೀಟವನ್ನು ಕೆಳಗುರುಳಿಸಿ ಅವನ ಜುಟ್ಟನ್ನು ಹಿಡಿದುಕೊಂಡನು. ರಣಧೀರನು ಹೀಗೆ ಜಯಂತನ ಜುಟ್ಟನ್ನು ಹಿಡಿದು, ಗರುಡನು ಹಾವನ್ನು ಹಿಡಿದು ಸೆಳೆಯುವಂತೆ, ಸೆಳೆದನು. ಅನಂತರದಲ್ಲಿ ರಣಧೀರನು ಅವನ ಕತ್ತನ್ನು ಕತ್ತರಿಸಲು ಕತ್ತಿಯನ್ನು ಎತ್ತುವಷ್ಟರಲ್ಲಿಯೇ, ಅಗ್ನಿಯು ಇಂದ್ರನ ಮಗನಾದ ಜಯಂತನು ಪ್ರಾಣಾಪಾಯಕ್ಕೀಡಾಗಿರುವುದನ್ನು ಕಂಡು ಅವನ ರಕ್ಷಣೆಗಾಗಿ ಬಂದನು. ||೧೧-೧೨-೧೩||

"ಹಾ! ಹಾ!" ಎಂದು ದೇವತೆಗಳು ಕೂಗುತ್ತಿರಲು, ಅಗ್ನಿಯು ತನ್ನ ಸರ್ವಶಕ್ತಿಯನ್ನೂ ಉಪಯೋಗಿಸಿ ರಣಧೀರನ ಬಲದ ಕೈಗೆ ತನ್ನ ಪರಿಘಾಯುಧದಿಂದ

ಪರಿಘಾಽಹತಹಸ್ತಾತ್ತು ಕರವಾಲೋಽಪತದ್ಭುವಿ ।
ವೃಥೀಕೃತಂ ತು ತತ್ಕರ್ಮ ದೃಷ್ಟ್ವಾ ಸ್ವಾತ್ಮಪರಾಭವಮ್ ॥೧೫॥

ಚುಕ್ರೋಧ ರಣಧೀರೋಽಥ ಜಯಂತಂ ಚ ಪದಾಽಹನತ್ ।
ಸಂಹತಃ ಪಾದಘಾತೇನ ಪಪಾತ ಭುವಿ ಮೂರ್ಛಿತಃ ॥೧೬॥

ಪಾವಕಂ ವಾಮಹಸ್ತೇನ ಗಲೇ ಜಗ್ರಾಹ ಸತ್ವರಃ ।
ದಕ್ಷಮುಷ್ಟಿಂ ವಜ್ರಕಲ್ಪಾಂ ಪಾತಯಾಮಾಸ ಮೂರ್ಧನಿ ॥೧೭॥

ಮುಷ್ಟಿನಾಽಭ್ಯಾಹತೋ ವಹ್ನಿ ಘೂರ್ಣಮಾನೋ ಭುವಂ ಯಯೌ ।
ತದಂತರೇ ಶತಮುಖಃ ಪ್ರಾಪ್ತಃ ಪುತ್ರಪರೀಪ್ಸಯಾ ॥೧೮॥

ಐರಾವತಸ್ಥಸ್ತಂ ದೃಷ್ಟ್ವಾ ರಣಧೀರೋ ಹ್ಯವಪ್ಲುತಃ ।
ತಲೇನಾಽಹೃತ್ಯ ದೇವೇಂದ್ರಂ ಕಿರೀಟಂ ಪಾತಯದ್ರುಷಾ ॥೧೯॥

ಹೊಡೆದನು. ಪರಿಘಾಯುಧದ ಪೆಟ್ಟಿಗೆ ಸಿಕ್ಕಿದ ರಣಧೀರನ ಕೈಯಿಂದ ಕತ್ತಿಯು ಭೂಮಿಯ ಮೇಲೆ ಕುಸಿದುಬಿತ್ತು. ರಣಧೀರನು ತನ್ನ ಈ ಕಾರ್ಯವು ವ್ಯರ್ಥವಾಗಿ ತನಗೆ ಹೀಗೆ ಪರಾಜಯವಾದುದರಿಂದ ಬಹಳ ಕೋಪಾವಿಷ್ಟನಾದನು. ಮತ್ತು ಇವನು ಜಯಂತನನ್ನು ತನ್ನ ಕಾಲಿನಿಂದ ಹೊಡೆದನು. ರಣಧೀರನ ಪಾದಾಘಾತದಿಂದ ಜಯಂತನು ಮೂರ್ಛೆಹೊಂದಿ ಕೆಳಗೆ ಭೂಮಿಯ ಮೇಲೆ ಬಿದ್ದನು. ||೧೪-೧೫-೧೬||

ಅಲ್ಲದೆ ರಣಧೀರನು ಅಗ್ನಿಯ ಕತ್ತನ್ನು ತನ್ನ ಎಡಗೈನಿಂದ ಜಾಗ್ರತೆಯಾಗಿ ಹಿಡಿದನು. ಮತ್ತು ಇವನು ಅಗ್ನಿಯ ತಲೆಯ ಮೇಲೆ ವಜ್ರಕ್ಕೆ ಸಮಾನವಾದ ಬಹಳ ಗಟ್ಟಿಯಾದ ಬಲವಾದ ಮುಷ್ಟಿಪ್ರಯೋಗವನ್ನು ಮಾಡಿದನು. ರಣಧೀರನ ಮುಷ್ಟಿಯ ಪೆಟ್ಟಿಗೆ ಸಿಕ್ಕಿ ಅಗ್ನಿಯು ತನ್ನ ತಲೆಯು ತಿರುಗುತ್ತಿರಲು ಭೂಮಿಯ ಮೇಲೆ ಬಿದ್ದನು. ಆ ಸಂದರ್ಭದಲ್ಲಿ ಇಂದ್ರನು ತನ್ನ ಮಗನನ್ನು ರಕ್ಷಿಸುವುದಕ್ಕೋಸ್ಕರ ಅಲ್ಲಿಗೆ ಬಂದನು. ||೧೭-೧೮||

ರಣಧೀರನು ಐರಾವತದ ಮೇಲೆ ಕುಳಿತಿದ್ದ ಇಂದ್ರನನ್ನು ನೋಡಿ ಇನ್ನೂ ಹೆಚ್ಚು ಗರ್ವಿತನಾಗಿ ಕೆಳಭಾಗದಿಂದಲೇ ಅವನನ್ನು ಹೊಡೆದು ಕೋಪದಿಂದ ಅವನ ಕಿರೀಟವನ್ನು ಕೆಳಗುರುಳಿಸಿದನು. ||೧೯||

ಕಿರೀಟಭಂಗಾಽವಮತೋಽತೋದಯತ್ ಕುಲಿಶೇನ ತಂ ।
ವಜ್ರಾಹತೋಽಥ ಜಘನೇ ನಿಪಪಾತ ಮಹೀತಲೇ ॥೨೦॥

ನಿಸಂಜ್ಞೋ ಮೂರ್ಛಿತೋ ಗಾಢಂ ರಣಧೀರೋಽಭವತ್ತದಾ ।
ಸೇನಾಪತಿಸುತಂ ತಾದೃಗ್ವಿಧಂ ಭೀಮೋ ನಿಶಾಮ್ಯ ತು ॥೨೧॥

ಸಾರಥಿಂ ಚೋದಯಾಮಾಸ ರಣಧೀರಾಂತಿಕಂ ನಯ ।
ಇತ್ಯಾಜ್ಞಪ್ತೋ ನಿಮೇಷೇಣ ರಥಂ ಸಾರಥಿರಾನಯತ್ ॥೨೨॥

ಅವತೀರ್ಯ ರಥಾದ್ಭೀಮೋ ರಥೋಽಪರಿ ನಿಧಾಯ ತಂ ।
ಅಪವಾಹ್ಯ ಸ್ವಯಂ ಭೀಮೋ ಗದಾಮಾದಾಯ ಸುಪ್ರಭಾಂ ॥೨೩॥

ಸರ್ವಾಯಸೀಂ ಮಹಾರತ್ನಪ್ರತ್ಯುಪ್ತಾಂ ಶತ್ರುತಾಪಿನೀಂ ।
ಉಡ್ಡೀಯ ಶಕ್ರಶಿರಸಿ ಪಾತಯಾಮಾಸ ವೇಗತಃ ॥೨೪॥

ಇಂದ್ರನು ತನ್ನ ಕಿರೀಟ ಭಂಗವಾದುದರಿಂದ ಅವಮಾನಗೊಂಡವನಾಗಿ ರಣಧೀರನನ್ನು ವಜ್ರಾಯುಧದಿಂದ ಹೊಡೆದನು. ರಣಧೀರನು ತನ್ನ ತೊಡೆಯ ಮೇಲ್ಪ್ರದೇಶಕ್ಕೆ ವಜ್ರಾಯುಧಘಾತವಾದ್ದರಿಂದ ಭೂಮಿಯ ಮೇಲೆ ಬಿದ್ದನು. ||೨೦||

ಆಗ ರಣಧೀರನು ಜ್ಞಾನತಪ್ಪಿದವನಾಗಿ ಅತ್ಯಂತ ಮೂರ್ಛಾಕ್ರಾಂತನಾದನು. ಭೀಮನು ತನ್ನ ಸೇನಾಪತಿಯ ಮಗನು ಹೀಗೆ ಬಿದ್ದಿರುವುದನ್ನು ನೋಡಿ ಸಾರಥಿಗೆ "ರಣಧೀರನ ಹತ್ತಿರಕ್ಕೆ ರಥವನ್ನು ಹೊಡಿ." ಎಂದು ಪ್ರೇರಿಸಿದನು. ಹೀಗೆ ಭೀಮನು ಅಪ್ಪಣೆಮಾಡಲಾಗಿ ಒಂದು ನಿಮಿಷದಲ್ಲೇ ಸಾರಥಿಯು ರಥವನ್ನು ಅಲ್ಲಿಗೆ ಹೊಡೆದನು. ||೨೧-೨೨||

ಭೀಮನು ರಥದಿಂದ ಕೆಳಗಿಳಿದು ರಣಧೀರನನ್ನು ರಥದ ಮೇಲೆ ಎತ್ತಿ ಮಲಗಿಸಿ, ತಾನು ಇಂದ್ರನನ್ನು ಪ್ರತಿಭಟಿಸುವವನಾಗಿ, ಕಬ್ಬಿಣದಿಂದ ಮಾಡಿದ, ಮಹಾರತ್ನಖಚಿತವಾದ, ಶತ್ರುಗಳನ್ನು ನಾಶಮಾಡುವ, ಅತಿ ಪ್ರಕಾಶಮಾನವಾದ ಗದೆಯನ್ನು ಕೈಗೆ ತೆಗೆದುಕೊಂಡು ಹಾರಿ, ಇಂದ್ರನ ತಲೆಗೆ ವೇಗವಾಗಿ ಅದನ್ನು ಪ್ರಯೋಗಿಸಿದನು. ಭೀಮನ ಗದಾಪ್ರಹಾರಕ್ಕೆ ಸಿಕ್ಕಿದ ಇಂದ್ರನ ಶಿರಸ್ಸು ಭಗ್ನವಾಗಲು, ಅವನು, ಕತ್ತರಿಸಲ್ಪಟ್ಟ ಮರವು ಹೇಗೋ ಹಾಗೆ, ದೊಡ್ಡ ಆನೆಯ ಹಿಂಭಾಗದಲ್ಲಿ ಮೂರ್ಛಾಕ್ರಾಂತನಾಗಿ ಬಿದ್ದನು. ||೨೩-೨೪||

ತಥಾವಿಧಂ ದೇವಪತಿಂ ಜ್ಞಾತ್ವೈರಾವತಸತ್ತಮಃ ।
ಪ್ರಾದ್ರವದ್ವೇಗತೋ ಯುದ್ಧಾಚ್ಛಕ್ರಪ್ರಾಣರಿರಕ್ಷಯಾ ॥೨೫॥

ದೃಷ್ಟ್ವಾ ಪರಾಙ್ಮುಖಂ ಭೀಮೋ ದೇವೇಭಂ ಜಗೃಹೇ ಜವಾತ್ ।
ಲಾಙ್ಗೂಲೇ ವಿಚಕರ್ಷಾಽಥ ಧನುಃಶತಮಿತಂ ಬಲೀ ॥೨೬॥

ಆತ್ಮಾನಂ ನೋ ಮೋಚಯಿತುಂ ಸಮರ್ಥಃ ಕರಿರಾಟ್ ತದಾ ।
ಕರೇಣ ತಂ ಸಮಾದಾತುಂ ಪ್ರಚಕ್ರಾಮ ಪುನಃಪುನಃ ॥೨೭॥

ಸವ್ಯಾಽಪಸವ್ಯಮಾರ್ಗೇಣ ಭ್ರಾಮಯಿತ್ವಾ ಮುಹುರ್ಮುಹುಃ ।
ಗದಯಾ ಕಟಿದೇಶೇ ತಂ ಜಘಾನ ಬಲವದ್ರುಷಾ ॥೨೮॥

ತಾಡಿತಸ್ತೇನ ಗದಯಾ ಚೀತ್ಕುರ್ವನ್ ತ್ರಿಃ ಪರಿಕ್ರಮನ್ ।
ಜಗಾಮ ಧರಣೀಮುಗ್ರ ಜಾನುಭ್ಯಾಂ ರುಧಿರಂ ವಮನ್ ॥೨೯॥

ತತೋ ಭೀಮಃ ಸಮಾಪ್ಲುತ್ಯ ಪತಿತಂ ಶಕ್ರಪಾರ್ಶ್ವತಃ ।
ವಜ್ರಂ ಸಮಾದದೇ ತಸ್ಯ ಪೃಷ್ಠತಸ್ತದನಂತರಂ ॥೩೦॥

ಹೀಗೆ ಮೂರ್ಛಾಕ್ರಾಂತನಾದ ದೇವೇಂದ್ರನನ್ನು ನೋಡಿ, ಶ್ರೇಷ್ಠವಾದ ಐರಾವತ ಎಂಬ ಆನೆಯು ಇಂದ್ರನ ಪ್ರಾಣರಕ್ಷಣೆಗೋಸ್ಕರ ಯುದ್ಧವನ್ನು ಬಿಟ್ಟು ವೇಗವಾಗಿ ಹಿಂತಿರುಗಿ ಓಡಿತು. ॥೨೫॥

ಬಲಿಷ್ಠನಾದ ಭೀಮನು ಹಿಂದಕ್ಕೆ ಓಡುತ್ತಿರುವ ದೇವಗಜವಾದ ಐರಾವತ ವನ್ನು ನೂರುಗಜ ಬಿಲ್ಲುಗಳಷ್ಟು ದೂರ ಅದರ ಬಾಲವನ್ನು ಹಿಡಿದುಕೊಂಡು ಜಗ್ಗಿಸಿ ವೇಗವಾಗಿ ಹಿಂದಕ್ಕೆಳೆದನು. ಆಗ ಗಜಶ್ರೇಷ್ಠವಾದ ಐರಾವತವು ತನ್ನನ್ನು ಬಿಡಿಸಿಕೊಳ್ಳಲು ಸಮರ್ಥವಾಗಲಿಲ್ಲ! ಆದರೆ ಅದು ತನ್ನ ಸೊಂಡಲಿನಿಂದ ಅವನನ್ನು ಹಿಡಿಯಲು ಪುನಃ ಪುನಃ ಪ್ರಯತ್ನಪಟ್ಟಿತು. ॥೨೬-೨೭॥

ಹೀಗೆ ರಣಧೀರನು ಅದರ ಬಾಲವನ್ನು ಹಿಡಿದುಕೊಂಡು ಬಲ ಮತ್ತು ಎಡದ ಕಡೆಗಳಿಗೆ ಪುನಃ ಪುನಃ ತಿರುಗಿಸಿ ಬಹಳ ಕೋಪದಿಂದ ಹಿಂದುಗಡೆ ಬಹಳ ಗಟ್ಟಿಯಾಗಿ ಗದಾಪ್ರಹಾರವನ್ನು ಮಾಡಿದನು. ರಣಧೀರನು ಆನೆಯನ್ನು ಈರೀತಿ ಹೊಡೆಯಲಾಗಿ ಅದು ಚೀತ್ಕಾರಮಾಡುತ್ತಾ ಮೂರುಸಲ ಸುತ್ತಿ ರಕ್ತವನ್ನು ಕಾರುತ್ತಾ ಭೂಮಿಯಲ್ಲಿ ಬಿದ್ದಿತು. ಅನಂತರದಲ್ಲಿ ಭೀಮನು ಆಕಾಶಕ್ಕೆ ಹಾರಿ ಇಂದ್ರನ ಪಕ್ಕದಲ್ಲಿ

ಶಕ್ರಂ ನಿಹನ್ಮಿ ತಸ್ಯೈವ ಶಸ್ತ್ರೇಣೇತಿ ವ್ಯಚಿಂತಯತ್ ।
ತದಂತರೇ ಶಕ್ರಹೇತಿರಂತರ್ಧಾನಂ ಗತಾ ದ್ರುತಂ ॥೩೨॥

ಏತಸ್ಮಿನ್ನಂತರೇ ವಾಯುರ್ಮರುದ್ಗಣಸಮಾವೃತಃ ।
ಭೀಮೇನ ಯುದ್ಧಮಕರೋತ್ಮೃತ್ಯೋಸ್ತ್ರಾತುಂ ಶಚೀಪತಿಂ ॥೩೩॥

ಗದಾಮಾದಾಯ ಭೀಮೋಽಪಿ ಬಹುಭಿಃ ಪರಿವಾರಿತಃ ।
ಗದಯಾ ತಾಡಯಾಮಾಸ ಮರುತಸ್ತಾನ್ ಸಮಂತತಃ ॥೩೪॥

ತದಂತರೇ ಸಾರಥಿಸ್ತು ರಣಧೀರಂ ಸುಮೂರ್ಛಿತಂ ।
ಸುಧೃತೇಃ ಸನ್ನಿಧಿಂ ನೀತ್ವಾ ಪುನಃ ಪ್ರತ್ಯಾಗತ ಸ್ತ್ವರಾ ॥೩೫॥

ಬಹುಶೋ ದೇವತಾವೃಂದೈರ್ನಿರುದ್ಧೋಽಪಿ ಸುವೇಗತಃ ।
ವಂಚಯಿತ್ವಾ ಭರ್ತೃಶಯಂ ರಥಮಾನಯದಕ್ಷತಂ ॥೩೬॥

ದೃಷ್ಟ್ವಾ ರಥಂ ಸರ್ವಶಸ್ತ್ರಸಂಭೃತಂ ಪ್ರಾರುಹತ್ತದಾ ।
ಸಾರಥಿಂ ಪೂಜಯಾಮಾಸ ವಾಕ್ಯೈರ್ಮಧುರಪೇಶಲೈಃ ॥೩೭॥

ಬಿದ್ದಿದ್ದ ವಜ್ರಾಯುಧವನ್ನು ಅವನ ಹಿಂಭಾಗದಿಂದ ತೆಗೆದುಕೊಂಡನು, ||೨೮-೨೯-೩೦||

ಆಗ ಭೀಮನು ಇಂದ್ರನನ್ನು ಅವನ ಶಸ್ತ್ರದಿಂದಲೇ ನಾಶಮಾಡುವೆನೆಂದು ಯೋಚಿಸಿದನು. ಈ ಸಂದರ್ಭದಲ್ಲಿ ಇಂದ್ರನ ಕತ್ತಿಯು ಕಣ್ಮರೆಯಾಯಿತು. ಆಗ ವಾಯುವು ಇತರ ದೇವತೆಗಳಿಂದ ಕೂಡಿದವನಾಗಿ ಇಂದ್ರನ ಪ್ರಾಣವನ್ನು ಉಳಿಸಲು ಭೀಮನೊಂದಿಗೆ ಯುದ್ಧಮಾಡಲು ಪ್ರಾರಂಭಿಸಿದನು. ||೩೧-೩೨||

ಭೀಮನೂ ಕೂಡ ಅನೇಕ ಮಂದಿ ಸೈನಿಕರಿಂದ ಕೂಡಿದವನಾಗಿ ಗದೆಯನ್ನು ತೆಗೆದುಕೊಂಡು, ಎಲ್ಲಾ ಕಡೆಯಲ್ಲಿಯೂ ದೇವತೆಗಳನ್ನು ಅದರಿಂದ ಹೊಡೆದನು. ಈ ಮಧ್ಯೆ ಸಾರಥಿಯು ಮೂರ್ಛಾಕ್ರಾಂತನಾಗಿದ್ದ ರಣಧೀರನನ್ನು ಸುಧೃತಿಯ ಸಮೀಪಕ್ಕೆ ಒಯ್ದು ಹಿಂತಿರುಗಿ ಜಾಗ್ರತೆಯಾಗಿ ಬಂದನು. ||೩೩-೩೪||

ಸಾರಥಿಯು ದೇವತೆಗಳ ಸಮೂಹದಿಂದಲೇ ವಿಶೇಷವಾಗಿ ಸುತ್ತುವರಿಯಲ್ಪಟ್ಟಿದ್ದರೂ ಅವರನ್ನೆಲ್ಲರನ್ನೂ ವಂಚಿಸಿ ಬಹಳ ವೇಗವಾಗಿ ತನ್ನ ಸ್ವಾಮಿಯಾದ ರಣಧೀರನು ಮಲಗಿದ್ದ ರಥವನ್ನು ಸ್ವಲ್ಪವೂ ಅಪಾಯಕ್ಕೀಡಾಗದಂತೆ ಸುಧೃತಿಯ

ಉದ್ಯಮ್ಯ ಚಾಪಮುಸ್ರೌಘೈ ರ್ವಾಯುನಾ ಸಮಯುಧ್ಯತ ।
ಕುರಂಗವಾಹನರಥೇ ಶಸ್ತ್ರಾಸ್ತ್ರಸುಪರಿಷ್ಕೃತೇ ॥೩೮॥

ಸಮಾಸೀನೋ ಧೂಮ್ರವರ್ಣಃ ಪಾಶಾಂಕುಶಮುಖಾಯುಧಃ ।
ಭೀಮಂ ನಿಶಿತಬಾಣೌಘೈರ್ವವರ್ಷಾತಿಬಲೋ ರುಷಾ ॥೩೯॥

ಬಾಣೌಘೇನ ಸಮಾಚ್ಛನ್ನೋ ವಿವಸ್ವಾನ್ ತುಹಿನೈರಿವ ।
ಪ್ರತಿಸಾಯಕವೃಷ್ಟ್ಯಾ ತಂ ನಾಶಯಾಮಾಸ ವೇಗತಃ ॥೪೦॥

ಅಥ ತೀಕ್ಷ್ಣೇನ ಭಲ್ಲೇನಾಹನದ್ವಾಯುಂ ಸ್ತನಾಂತರೇ ।
ಗಾಢವಿದ್ಧೋ ವಾಯುರಪಿ ಕ್ಷಣಮಾಸೀಜ್ಜಡೀಕೃತಃ ॥೪೧॥

ತದಂತರೇ ತು ಮರುತೋ ಯುಗಪತ್ ಸಮಯೋಧಯನ್ ।
ಅಂಕುಶಾನ್ ಚಿಕ್ಷಿಪು ರ್ಭೀಮಂ ನಿಹಂತು ಮತಿವೇಗಿನಃ ॥೪೨॥

ಹತ್ತಿರಕ್ಕೆ ಒಯ್ದನು. ಸುಧೃತಿಯು ನಾನಾಬಗೆಯ ಶಸ್ತ್ರಗಳಿಂದಲೂ ತುಂಬಿದ್ದ ತನ್ನ ರಥವನ್ನು ಕಂಡು ಸಂತೋಷದಿಂದ ಹತ್ತಿದನು. ಅಲ್ಲದೆ, ಇವನು ಮಧುರವಾದ ಮಾತುಗಳಿಂದ ಸಾರಥಿಯನ್ನು ಗೌರವಿಸಿದನು. ||೩೫-೩೬||

ಆಗ ಭೀಮನು ಚೇತರಿಸಿಕೊಂಡು ಧನುಸ್ಸನ್ನು ಎತ್ತಿಹಿಡಿದು ವಾಯುವಿನೊಂದಿಗೆ ಯುದ್ಧಮಾಡಿದನು. ಆಗ ವಾಯುವೂ ಜಿಂಕೆಯ ವಾಹನಗಳುಳ್ಳ, ಶಸ್ತ್ರ ಮತ್ತು ಅಸ್ತ್ರಗಳಿಂದ ತುಂಬಿರುವ, ರಥದಲ್ಲಿ ಕುಳಿತಿದ್ದನು. ಮತ್ತು ಬಹಳ ಬಲಿಷ್ಠನಾದ ಇವನು ಮಾಸಲುಬಿಳಪು ಬಣ್ಣವುಳ್ಳವನಾಗಿಯೂ, ಪಾಶ, ಅಂಕುಶ ಮೊದಲಾದ ಆಯುಧಗಳನ್ನು ಹಿಡಿದವನಾಗಿಯೂ ಕೋಪಾವಿಷ್ಟನಾಗಿ ಅತಿ ತೀಕ್ಷ್ಣವಾದ ಬಾಣಗಳನ್ನು ಭೀಮನ ಮೇಲೆ ಸಂತತವಾಗಿ ಪ್ರಯೋಗಿಸಿದನು. ಭೀಮನು ವಾಯುವಿನ ಬಾಣಗಳ ಸಮೂಹದಿಂದ, ಸೂರ್ಯನು ಹಿಮದಿಂದ ಹೇಗೋ ಹಾಗೆ, ವಿಶೇಷವಾಗಿ ಮುಚ್ಚಲ್ಪಟ್ಟಿದ್ದರೂ, ಪ್ರತಿಯಾಗಿ ಬಾಣಗಳನ್ನು ಪ್ರಯೋಗಿಸಿ ವಾಯುವನ್ನು ವೇಗವಾಗಿ ಹೊಡೆದನು. ||೩೭-೩೮-೩೯||

ಅನಂತರ ಭೀಮನು ವಾಯುವಿನ ಎದೆಯಪ್ರದೇಶಕ್ಕೆ ಭರ್ಜಿಯಿಂದ ಹೊಡೆದನು. ಬಲವಾದ ಪೆಟ್ಟು ತಿಂದ ವಾಯುವೂ ಕೂಡ ಒಂದುಕ್ಷಣಕಾಲ ನಿಶ್ಚೇಷ್ಟನಾಗಿದ್ದನು. ಈ ಸಂದರ್ಭದಲ್ಲಿ ಇತರ ಮರುತ್ತುಗಳೂ ಏಕಕಾಲದಲ್ಲಿ ಯುದ್ಧಮಾಡುತ್ತಾ ಭೀಮನನ್ನು ನಾಶಮಾಡಲು ಬಹಳ ವೇಗಶಾಲಿಗಳಾದ ಅಂಕುಶಗಳನ್ನು ಎಸೆದರು. ||೪೧-೪೨||

ತಾವದ್ಭಿರರ್ಧಚಂದ್ರೈಸ್ತಾನ್ ಭೀಮಶ್ಛಿತ್ವಾಽತಿವೇಗತಃ ।
ಏಕೈಕಂ ಹೃದಿ ವಿವ್ಯಾಧಾಽಽಕರ್ಣಾಕೃಷ್ಟೈಃ ಶರೈಸ್ತ್ರಿಭಿಃ ॥೪೩॥

ಮರುತಃ ತೈರ್ಹತಾಃ ಸರ್ವೇ ಪೇತುರುರ್ವ್ಯಾಂ ಸುಮೂರ್ಛಿತಾಃ ।
ಬುದ್ಧ್ವಾಸ್ತದಂತರೇ ವಾಯುರ್ಭೀಮೇ ಪ್ರಾಸ್ಯ ದಥಾಽಂಕುಶಂ ॥೪೪॥

ತೇನಾತಿವಿದ್ಧೋ ಹೃದಯೇ ಕಶ್ಮಲಂ ಕ್ಷಣಮಾವಿಶತ್ ।
ಪುನಃ ಸಂಜ್ಞಾಮವಾಪ್ಯಾಽಥ ಗದಾಮಾದಾಯ ವೇಗತಃ ॥೪೫॥

ಸ್ವಸ್ಮಾದ್ರಥಾದವಪ್ಲುತ್ಯ ವಾಯೋಃ ಸ್ಯಂದನಮಾರುಹತ್ ।
ಭ್ರಾಮಯಿತ್ವಾ ಗದಾಂ ಮೂರ್ಧ್ನಿ ಮಾರುತಸ್ಯ ಜಘಾನ ಹ ॥೪೬॥

ಪತಿತಸ್ತು ಗದಾವಿದ್ಧೋ ಭಗ್ನಮೂರ್ಧಾ ಸಮೀರಣಃ ।
ಮೂರ್ಛಿತೋ ವಿಗತಪ್ರಜ್ಞಃ ಸಾರಥಿಸ್ತಮುಪಾವಹತ್ ॥೪೭॥

ಪರಾಭವಂ ಮಾರುತಸ್ಯ ದೃಷ್ಟ್ವಾ ಯಕ್ಷಪತಿಸ್ತದಾ ।
ವರುಣಃ ಪಿತೃರಾಡಿಂದ್ರೋ ಗಂಧರ್ವಪತಿ ರೇವ ಚ ॥೪೮॥

ಭೀಮನೂ ಕೂಡ ಅಷ್ಟೇ ಸಂಖ್ಯೆಯುಳ್ಳ ಅರ್ಧಚಂದ್ರಾಯುಧಗಳನ್ನು ಪ್ರಯೋಗಿಸಿ ಆ ಅಂಕುಶಗಳನ್ನು ವೇಗದಿಂದ ಕತ್ತರಿಸಿ, ಪುನಃ ಮೂರು ಬಾಣಗಳನ್ನು ತೆಗೆದು ಕಿವಿಯ ವರೆಗೂ ಎಳೆದು ಒಂದೊಂದನ್ನೂ ಆ ದೇವತೆಗಳ ಹೃದಯಗಳಿಗೆ ಪ್ರಯೋಗಿಸಿದನು. ಆ ಬಾಣಗಳ ಪೆಟ್ಟಿಗೆ ಸಿಕ್ಕಿದ ದೇವತೆಗಳೆಲ್ಲರೂ ಮೂರ್ಛೆ ಹೊಂದಿ ಭೂಮಿಯ ಮೇಲೆ ಬಿದ್ದರು. ಈ ಸಂದರ್ಭದಲ್ಲಿ ವಾಯುವು ಭೀಮನ ಮೇಲೆ ಅಂಕುಶವನ್ನು ಪ್ರಯೋಗಮಾಡಿದನು. ॥೪೩-೪೪॥

ಅಂಕುಶದ ಬಲವಾದ ಪ್ರಹಾರಕ್ಕೆ ಸಿಕ್ಕಿ ಭೀಮನು ಕ್ಷಣಕಾಲ ಜ್ಞಾನತಪ್ಪಿದವನಾದನು. ಮೂರ್ಛೆ ತಿಳಿದು ಪುನಃ ಗದೆಯನ್ನು ಹಿಡಿದುಕೊಂಡು ತನ್ನ ರಥದಿಂದ ಹಾರಿ ವಾಯುವಿನ ರಥಕ್ಕೆ ಹತ್ತಿದನು. ॥೪೫-೪೬॥

ಭೀಮನ ಬಲವಾದ ಗದಾಪ್ರಹಾರದಿಂದ ಭಗ್ನವಾದ ಶಿರಸ್ಸುಳ್ಳ ವಾಯುವು ಮೂರ್ಛಾಕ್ರಾಂತನಾದನು. ಇವನನ್ನು ಸಾರಥಿಯು ಹೊರಕ್ಕೆ ಒಯ್ದನು. ವಾಯುವಿಗಾದ ಈ ಪರಾಜಯವನ್ನು ನೋಡಿ, ಕುಬೇರ, ವರುಣ, ಯಮ, ಇಂದ್ರ, ಗಂಧರ್ವ

ವಿಮೃಶ್ಯ ದುರ್ಜಯಂ ಭೀಮಂ ಸಮಾಯಯುರ್ಯುಗಪನ್ಮೃಧೇ ।
ಐರಾವತಸ್ಥೋ ದೇವೇಂದ್ರಃ ಪಿತೃರಾಣ್ಮಹಿಷಸ್ಥಿತಃ ॥೪೯॥

ಝುಷಸ್ಥೋ ವರುಣೋ ಮರ್ತ್ಯವಾಹನೋ ಧನನಾಯಕಃ ।
ಗಂಧರ್ವಪತಿ ರಶ್ವಸ್ಥೋ ವಿವಿಧೈರ್ಹೇತಿಭಿರ್ವೃತಾಃ ॥೫೦॥

ಆಜಗ್ಮು ರ್ಭೀಮಮಾಯೋದ್ಧುಂ ಸಮೇತಾಃ ಕೃತಸಂವಿದಃ ।
ತದ್ದೃಷ್ಟ್ವಾ ಸುಧೃತಿಃ ಪ್ರಾಹ ಗತ್ವಾ ಶತ್ರುಂ ಜಯಾಽಂತಿಕೇ ॥೫೧॥

ರಾಜಪುತ್ರಾ ಮಹೇಂದ್ರಾದ್ಯಾ ಗಚ್ಛಂತಿ ಕೃತಸಂವಿದಃ ।
ಹಂತುಂ ಭೀಮಂ ಮಹಾಬಾಹುಂ ತದ್ಯಾಮಸ್ತತ್ರ ವೈ ವಯಂ ॥೫೨॥

ಏಕಸ್ಯ ಬಹುಭಿರ್ಯುದ್ಧಂ ವಿಷಮಂ ಪ್ರತಿಭಾತಿ ಮೇ ।
ಇತಿ ತದ್ವಾಕ್ಯಮಾಕರ್ಣ್ಯ ಯುಕ್ತಮಿತ್ಯಭಿಮನ್ಯತ ॥೫೩॥

ತತಃ ಶತ್ರುಂಜಯಮುಖಾ ನರುಂಧನ್ ದೇವತಾಗಣಾನ್ ।
ಸಮಾಶಶ್ವಾಸ ಸುಧೃತಿ ರ್ದೇವೇಶಂ ಗಜಸಂಸ್ಥಿತಂ ॥೫೪॥

ರಾಜ್ಯೈಎಲ್ಲರೂ, ಭೀಮನನ್ನು ಒಬ್ಬರೇ ಜಯಿಸಲು ಅಶಕ್ಯವೆಂದು ತಿಳಿದು ಒಟ್ಟಿಗೆ ಅವನೊಂದಿಗೆ ಯುದ್ಧಕ್ಕೆ ಬಂದರು. ದೇವೇಂದ್ರನು ಐರಾವತದ ಮೇಲೂ, ಯಮನು ಕೋಣನ ಮೇಲೂ ಕ್ರಮವಾಗಿ ಕುಳಿತಿದ್ದರು. ||೪೭-೪೮-೪೯||

ವರುಣನು ಮೀನಿನ ವಾಹನದ ಮೇಲೂ, ಕುಬೇರನು ಮನುಷ್ಯನ ವಾಹನದ ಮೇಲೆಯೂ, ಗಂಧರ್ವಪತಿಯು ಕುದುರೆಯ ಮೇಲೆಯೂ, ಕುಳಿತು, ಅನೇಕ ವಿಧವಾದ ಆಯುಧಗಳೊಂದಿಗೆ ಬಂದರು. ಇವರೆಲ್ಲರೂ ಒಟ್ಟಿಗೆ ಭೀಮನೊಂದಿಗೆ ಯುದ್ಧಮಾಡಲು ಪ್ರತಿಜ್ಞೆಮಾಡಿ ಅಲ್ಲಿಗೆ ಬಂದರು. ಸುಧೃತಿಯು ಇದನ್ನು ನೋಡಿ ಶತ್ರುಂಜಯನ ಹತ್ತಿರಕ್ಕೆ ಹೋಗಿ “ ಎಲೈ ರಾಜಕುಮಾರರೇ, ಮಹೇಂದ್ರನೇ ಮೊದಲಾದವರು ಪ್ರತಿಜ್ಞೆಮಾಡಿ ಭೀಮನನ್ನು ನಾಶಮಾಡಲು ಸಿದ್ಧರಾಗಿದ್ದಾರೆ ; ಆದ್ದರಿಂದ ಭೀಮನ ಸಹಾಯಕ್ಕಾಗಿ ನಾವೆಲ್ಲರೂ ಹೋಗೋಣ” ಎಂದು ಹೇಳಿದನು. ||೫೦-೫೧-೫೨||

“ಒಬ್ಬನು ಅನೇಕರೊಂದಿಗೆ ಹೋರಾಡುವುದು ಅನುಚಿತವೆಂದು ನನಗೆ ತೋರುತ್ತದೆ” ಹೀಗೆ ಸುಧೃತಿಯ ಮಾತನ್ನು ಕೇಳಿ ರಾಜಕುಮಾರರೆಲ್ಲರೂ ಅದನ್ನು

ಶತ್ರುಂಜಯೋ ಧನಪತಿಂ ವರುಣಂ ಶತ್ರುಹಾ ತಥಾ ।
ಗಂಧರ್ವರಾಜಂ ಭೀಮೋಽಪಿ ಯಮಂ ಸಮರತಾಪನಃ ॥೫೫॥

ಶತ್ರುಂಜಯಸುತೋ ವೀರವಿಕ್ರಮಶ್ಚ ಪ್ರಭಂಜನಂ ।
ಶತ್ರುಘ್ನತನಯೋ ವಹ್ನಿಂ ವೀರಸೇನ ಇತೀರಿತಃ ॥೫೬॥

ಇಂದ್ರಾತ್ಮಜಂ ಭೀಮಪುತ್ರೋ ವೀರಭಾನುಸಮಾಹ್ವಯಃ ।
ವೀರಾಗ್ರಗಃ ಸಮರತಾಪನಪುತ್ರೋ ವಸುಂ ತಥಾ ॥೫೭॥

ಏವಂ ಸಮಾಸಾದ್ಯ ತದಾ ಯುದ್ಧಂ ಚಕ್ರುಃ ಮಹಾಽದ್ಭುತಂ ।
ಭೀರುಹೃತ್ಕಂಪಜನನಂ ಪರಸ್ಪರಜಯೈಷಿಣಃ ॥೫೮॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ದತ್ತರಾಮಸಂವಾದೇ
ಕಾಮಾಖ್ಯಾನೇ ಷೋಡಶೋಽಧ್ಯಾಯಃ

ಅನುಮೋದಿಸಿದರು. ಅನಂತರ ಶತ್ರುಂಜಯನೇ ಮೊದಲಾದ ರಾಜಕುಮಾರರು ಮತ್ತು ಸುಧೃತಿ ಇವರೆಲ್ಲರೂ ದೇವತೆಗಳ ಗುಂಪನ್ನು ಪ್ರತಿಭಟಿಸಿದರು. ಆನೆಯ ಮೇಲೇರಿದ ಸುಧೃತಿಯು ಇಂದ್ರನಿಗೆ ಪ್ರತಿಯಾಗಿ ಯುದ್ಧಮಾಡಿದನು. ||೫೩-೫೪||

ಶತ್ರುಂಜಯನು ಧನಪತಿಯೊಂದಿಗೂ, ಶತ್ರುಘ್ನನು ವರುಣನೊಂದಿಗೂ, ಭೀಮನು ಕುಬೇರನೊಂದಿಗೂ, ಸಮರತಾಪನನು ಯಮನೊಡನೆಯೂ ಕ್ರಮವಾಗಿ ಯುದ್ಧಮಾಡಿದರು. ಶತ್ರುಂಜಯನ ಮಗನಾದ ವೀರವಿಕ್ರಮನು ವಾಯುವಿನ ಜೊತೆಯಲ್ಲಿಯೂ, ಶತ್ರುಘ್ನನ ಮಗನಾದ ವೀರಸೇನನು ಅಗ್ನಿಯೊಂದಿಗೂ, ಭೀಮ ಪುತ್ರನಾದ ವೀರಭಾನುವು ಇಂದ್ರನ ಮಗನೊಡನೆಯೂ, ಸಮರತಾಪನನ ಮಗನಾದ ವೀರಾಗ್ರಗ ಎಂಬುವನು ವಸುವಿನೊಡನೆಯೂ, ಕ್ರಮವಾಗಿ ಯುದ್ಧಮಾಡಿದರು. ಹೀಗೆ ಪರಸ್ಪರ ಪ್ರತಿಭಟಿಸುತ್ತಾ ಇವರೆಲ್ಲರೂ ಅತ್ಯಂತ ಅದ್ಭುತವಾದ, ಅಂಜುವ ಜನರ ಹೃದಯವನ್ನು ನಡುಗಿಸುವ, ಯುದ್ಧವನ್ನು ಪರಸ್ಪರ ಜಯಾಭಿಲಾಷೆಯಿಂದ ನಡೆಸಿದರು. ||೫೫-೫೬-೫೭-೫೮||

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಪರಶುರಾಮದತ್ತಾತ್ರೇಯ
ಸಂವಾದದಲ್ಲಿ ಕಾಮಾಖ್ಯಾನದಲ್ಲಿ ಹದಿನಾರನೆಯ ಅಧ್ಯಾಯವು ಮುಗಿದುದು

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ಸಪ್ತದಶೋಽಧ್ಯಾಯಃ ||

ಹದಿನೇಳನೆಯ ಅಧ್ಯಾಯವು

ಮುಹೂರ್ತಮಾತ್ರ ಮಭವತ್ ಸುಯುದ್ಧಂ ರೋಮಹರ್ಷಣಂ ।
ಭೀಮಮಶ್ವಸಮಾರೂಢ ಶ್ಚಿತ್ರಸೇನಃ ಶರೈಃ ತ್ರಿಭಿಃ ॥೧॥

ವಿವ್ಯಾಧ ತದ್ಧನುರ್ಮಧ್ಯೇ ಚಿಚ್ಛೇದ ಚ ಮಹೇಷುಣಾ ।
ಸ ಛಿನ್ನಧನ್ವಾ ಪರಿಘಂ ಗಂಧರ್ವೇಶೇ ಸಮುತ್ಸೃಜತ್ ॥೨॥

ಆಯಾಂತಂ ಪರಿಘಂ ಮಧ್ಯೇ ಚಿಚ್ಛೇದ ನಿಶಿತೇಷುಣಾ ।
ಸಾರ್ಧಪತ್ರೈಃ ಚತುಃಸಂಖ್ಯೈ ಶ್ಚತುರೋ ಭೀಮವಾಜಿನಃ ॥೩॥

ಕೃತ್ವಾ ಗತಾಸೂನ್ ಸಮರೇ ಸಾರಥಿಂ ಚೈಕಪತ್ರಿಣಾ ।
ಛಿತ್ವಾ ಕಿರೀಟಮೇಕೇನ ಸಿಂಹನಾದಮಥಾಽಕರೋತ್ ॥೪॥

ಇಂಥಾ ರೋಮಾಂಚಜನಕವಾದ ಯುದ್ಧವು ಒಂದು ಮುಹೂರ್ತಕಾಲ ಜರುಗಿತು. ಕುದುರೆಯ ಮೇಲೆ ಏರಿದ್ದ ಚಿತ್ರಸೇನನು ಮೂರು ಬಾಣಗಳನ್ನು ಭೀಮನಿಗೆ ಹೊಡೆದನು ಮತ್ತು ಭೀಮನ ಧನುಸ್ಸಿನ ಮಧ್ಯಭಾಗಕ್ಕೆ ದೊಡ್ಡದಾದ ಬಾಣ ಪ್ರಯೋಗಮಾಡಿದನು. ತನ್ನ ಧನುಸ್ಸು ಕತ್ತರಿಸಲು ಭೀಮನು ಪರಿಘಾಯುಧವನ್ನು ಗಂಧರ್ವಾಧಿಪತಿಯಾದ ಚಿತ್ರಸೇನನ ಮೇಲೆ ಬಿಟ್ಟನು. ||೧-೨||

ಚಿತ್ರಸೇನನು ತನ್ನ ಮೇಲೆ ಬೀಳುತ್ತಿದ್ದ ಪರಿಘಾಯುಧವನ್ನು ತೀಕ್ಷ್ಣವಾದ ಬಾಣಪ್ರಯೋಗದ ಮೂಲಕ ತುಂಡರಿಸಿದನು. ಅಲ್ಲದೆ, ಇವನು, ಭೀಮನ ಕಡೆಗೆ ನಾಲ್ಕು ಬಾಣಗಳಪ್ರಯೋಗಮಾಡಿ ಅವನ ನಾಲ್ಕುಕುದುರೆಗಳನ್ನೂ ನಾಶಮಾಡಿದನು. ಒಂದು ಬಾಣದಿಂದ ಸಾರಥಿಯನ್ನೂ ಮತ್ತು ಅವನ ಕಿರೀಟವನ್ನೂ ನಾಶಮಾಡಿ, ಸಿಂಹನಾದವನ್ನು ಮಾಡಿದನು. ||೩-೪||

ಹತಾಽಶ್ವಸಾರಥಿರ್ಭೀಮಃ ಪ್ರಜಜ್ವಾಲ ಸುಮನ್ಯುನಾ ।
ಗದಯಾಽತಾಡಯಚ್ಚಿತ್ರಸೇನಾಽಶ್ವಮತಿವೇಗತಃ ॥೫॥

ಗದಾಪಾತ ಪ್ರಣಷ್ಟಾಸುರ್ಭಿನ್ನಮೂರ್ಧಾ ವಮನ್ನಸೃಕ್ ।
ಪಪಾತ ತುರಗಾತ್ತಸ್ಯ ಚಿತ್ರಸೇನಂ ಪರಾಮೃಶತ್ ॥೬॥

ಜ್ಞಾತ್ವಾ ತು ಬಲಿನಂ ಚಿತ್ರಸೇನೋಽಂತರ್ಧಾನ ಮಾಗತಃ ।
ಅಂತರ್ಹಿತೋ ಮಹಾಮಾಯಾಂ ಪ್ರಚಕಾರ ವಿಮೋಹಿನೀಂ ॥೭॥

ಅಶ್ಮವರ್ಷಾನ್ ಶಸ್ತ್ರವರ್ಷಾನ್ ಸರ್ಪಾನ್ ಪ್ರೇತಗಣಾನಪಿ ।
ಪ್ರಾದುಶ್ಚಕಾರ ಮುಂಡೌಘಾನಸೃಗಂಗಾರಮಾರುತಾನ್ ॥೮॥

ಯತೋ ಯತೋ ನಿಸ್ಸರತಿ ಮಾಯಾ ತಸ್ಯ ತತಸ್ತತಃ ।
ಏವಂ ಭೀಮಸ್ಸಮಾಲೋಕ್ಯ ಮಾಯಾಂ ಗಂಧರ್ವನಿರ್ಮಿತಾಂ ॥೯॥

ತದಾ ಪ್ರಾಯುಂಜ್ತ ನಿರ್ಮಾಯ ಶಸ್ತ್ರಂ ಭೀಮೋ ವಿಹಾಯಸಿ ।
ಚಿತ್ರಸೇನಮಹಾಮಾಯಾ ವಿನಷ್ಟಾಽಸ್ತ್ರೇಣ ತತ್ಕ್ಷಣೇ ॥೧೦॥

ಭೀಮನು ತನ್ನ ಕುದುರೆಗಳು ಮತ್ತು ಸಾರಥಿಯು ನಾಶವಾದದ್ದನ್ನು ಕಂಡು ಕೋಪದಿಂದ ಪ್ರಜ್ವಲಿಸಿದನು. ಅವನು ಚಿತ್ರಸೇನನ ಕುದುರೆಯನ್ನು ತನ್ನ ಗದೆಯಿಂದ ಬಹಳ ವೇಗವಾಗಿ ಹೊಡೆದನು. ಗದಾಪಾತದಿಂದ ಕುದುರೆಯ ತಲೆಯು ಸೀಳಿ ಅದು ರಕ್ತವನ್ನು ಕಾರುತ್ತಾ ಪ್ರಾಣಬಿಟ್ಟು ಕೆಳಗೆ ಬಿದ್ದಿತು. ಆಗ ಚಿತ್ರಸೇನನೂ ಕೆಳಗೆ ಬಿದ್ದನು. ಕುದುರೆ ಪ್ರಾಣಬಿಡುತ್ತಾ ಅವನನ್ನು ಮುಟ್ಟಿತು. ||೫-೬||

ಚಿತ್ರಸೇನನು, ಭೀಮನು ಬಹಳ ಬಲಿಷ್ಠನೆಂದು ತಿಳಿದು, ಅವನೊಂದಿಗೆ ಯುದ್ಧಮಾಡಲಾರದೆ ಅಂತರ್ಧಾನನಾದನು. ಆದರೆ ಅವನು ಮರೆಯಲ್ಲಿ ವಿಶೇಷ ಮೋಹಕವಾದ ಮಹಾಮಾಯೆಯ ಕೃತ್ರಿಮಯುದ್ಧವನ್ನು ಸೃಜಿಸಿದನು. ||೭||

ಆ ಮಾಯೆಯು ಕಲ್ಲಿನ ಸುರಿಮಳೆಯನ್ನೂ, ಶಸ್ತ್ರಗಳ ವರ್ಷಣವನ್ನೂ, ಸರ್ಪಗಳನ್ನೂ, ಪಿಶಾಚಿಗಳ ಗುಂಪುಗಳನ್ನೂ, ಮುಂಡಗಳ ಸಮೂಹಗಳನ್ನೂ, ರಕ್ತ, ಬೆಂಕಿ, ಗಾಳಿ ಇವುಗಳನ್ನೂ ಭೀಮನಿದ್ದಕಡೆ ತೋರುವಂತೆಮಾಡಿತು. ಭೀಮನು ಎಲ್ಲೆಲ್ಲಿ ಸಂಚರಿಸುತ್ತಾನೋ ಅಲ್ಲಲ್ಲಿ ಮಾಯೆಯೂ ಅವನನ್ನು ಹಿಂಬಾಲಿಸಿ ಈ ಮೇಲೆ ಹೇಳಿದ ವಸ್ತುಗಳನ್ನೆಲ್ಲವನ್ನೂ ಕಾಣಿಸುತ್ತಿದ್ದಿತು! ಭೀಮನು ಗಂಧರ್ವನಿಂದ

ದದರ್ಶ ಗಂಧರ್ವಪತಿಮಾಯಾಂತಂ ಸ್ವಸ್ಯ ಸಮ್ಮುಖೇ ।
ವೇಗಾತ್ತ್ರಿಶೂಲಮಾದಾಯ ಪುರಾರಿರಿವ ಚಾಂಧಕಂ ॥೧೧॥

ತಸ್ಯ ಮೂರ್ಧ್ನಿ ಗದಾಂ ಭೀಮಃ ಪ್ರಾಹಿಣೋದತಿವೇಗತಃ ।
ಗದಯಾಽಭಿಹತೋ ಭೂಮೌ ಪಪಾತ ವಿಗತಾಸುವತ್ ॥೧೨॥

ಅಥಾಽವಹತ್ತಂ ಗಂಧರ್ವೋ ವಿವಕ್ಷುಃ ಪ್ರಾಣರಕ್ಷಣಂ ।
ವೀರಾಗ್ರಗೋ ವಸೂನ್ ಯುದ್ಧೇ ಶಸ್ತ್ರಾಸ್ತ್ರೈಃ ಸಮವಾಽಕಿರತ್ ॥೧೩॥

ವಸವಃ ಶರವರ್ಷೇಣ ವವರ್ಷುಃ ಸಮರಾಂಗಣೇ ।
ಅಪೋಹ್ಯ ಶರವರ್ಷಂ ತಂ ವಸೂನೇಕೈಕತಸ್ತದಾ ॥೧೪॥

ತ್ರಿಭಿಃ ಸುಪುಂಖೈರ್ವಿವ್ಯಾಧ ಪಾದಹೃನ್ಮೂರ್ಧಸು ಕ್ರಮಾತ್ ।
ತೇ ಹತಾ ಮನ್ಯುನಾಽಽಕ್ರಾಂತಾಃ ಪರ್ಯಾಪ್ತಂ ಯುಗಪದ್ರಣೇ ॥೧೫॥

ನಿರ್ಮಾಣಮಾಡಲ್ಪಟ್ಟ ಮಾಯೆಯನ್ನು ನೋಡಿ ಒಂದು ವಿಧವಾದ ಅಸ್ತ್ರವನ್ನು ಆಕಾಶದಕಡೆಗೆ ಎಸೆದನು. ಭೀಮನ ಈ ಅಸ್ತ್ರಪ್ರಯೋಗದಿಂದ ಚಿತ್ರಸೇನನ ಮಹಾ ಮಾಯೆಯು ತತ್ಕ್ಷಣದಲ್ಲಿಯೇ ನಾಶವಾಯಿತು. ॥೮-೯-೧೦॥

ಅನಂತರ ಭೀಮನು ತನ್ನ ಎದುರಿಗೆ ಬರುತ್ತಿರುವ ಗಂಧರ್ವಪತಿಯಾದ ಚಿತ್ರಸೇನನನ್ನು ನೋಡಿ ವೇಗವಾಗಿ ತ್ರಿಶೂಲವನ್ನು ತೆಗೆದುಕೊಂಡು, ಪುರಾರಿಯಾದ ಶಿವನು ಅಂಧಕಾಸುರನ ಮೇಲೆ ಹೇಗೋ ಹಾಗೆ, ಪ್ರಯೋಗಿಸಿದನು. ಅಲ್ಲದೆ, ಇವನು ಚಿತ್ರಸೇನನನ ತಲೆಯ ಮೇಲಕ್ಕೆ ಬಹಳ ವೇಗವಾಗಿ ಗದಾಪ್ರಹಾರವನ್ನು ಮಾಡಿದನು. ಚಿತ್ರಸೇನನು ಭೀಮನ ಗದಾಘಾತದಿಂದ ಪ್ರಾಣಹೋದವನಂತೆ ಭೂಮಿಯ ಮೇಲೆ ಬಿದ್ದನು. ॥೧೧-೧೨॥

ಅನಂತರ, ಒಬ್ಬ ಗಂಧರ್ವನು ಚಿತ್ರಸೇನನ ಪ್ರಾಣರಕ್ಷಣೆಗಾಗಿ ಅಲ್ಲಿಂದ ಅವನನ್ನು ಬೇರೆ ಕಡೆಗೆ ಸಾಗಿಸಿದನು. ವೀರಾಗ್ರಗನು ವಸುಗಳೊಂದಿಗೆ ಯುದ್ಧ ಮಾಡುತ್ತಾ ಅವರ ಮೇಲೆ ಶಸ್ತ್ರಾಸ್ತ್ರಗಳನ್ನು ಬಹಳವಾಗಿ ಎಸೆದನು. ವಸುಗಳೂ ಯುದ್ಧಭೂಮಿಯಲ್ಲಿ ವಿಶೇಷವಾಗಿ ಬಾಣಗಳಮಳೆಗರೆದರು. ಆದರೆ, ಇವನು ಅವರ ಬಾಣಗಳನ್ನೆಲ್ಲವನ್ನೂ ಒಂದೊಂದಾಗಿ ಪರಿಹರಿಸಿ, ಶ್ರೇಷ್ಠವಾದ ಪುಂಖಗಳುಳ್ಳ ಮೂರು ಬಾಣಗಳನ್ನು ಅವರ ಕಾಲುಗಳು, ಹೃದಯ, ತಲೆಗಳಿಗೆ ಕ್ರಮವಾಗಿ ಪ್ರಯೋಗಿಸಿದನು. ಹೀಗೆ ಬಲವಾದ ಪೆಟ್ಟು ತಿಂದ ವಸುಗಳೂ ಅತ್ಯಂತ ಕೋಪಾವಿಷ್ಟರಾಗಿ

ಶಸ್ತ್ರೈ ರುಚ್ಚಾವಚೈ ರ್ಜಘ್ನುಃ ಸರ್ವಪ್ರಾಣ್ಯೆ ರ್ಬಲೀಯಸಃ ।
ಅಥ ವೀರಾಗ್ರಗಸ್ತೀಕ್ಷ್ಣಭಲ್ಲೈರ್ಹೃದಿ ಜಘಾನ ತಾನ್ ॥೧೬॥

ಕರ್ಣಾಂತಾಕೃಷ್ಟೈರಥ ತೇ ಗಾಢವಿದ್ಧಾ ಮಹೇಷುಭಿಃ ।
ನಿಪೇತು ರ್ಮೂರ್ಛಿತಾಃ ಸರ್ವೇ ಸಾವಿತ್ರಸ್ತು ಶರೈ ಸ್ತ್ರಿಭಿಃ ॥೧೭॥

ಛಿತ್ವಾ ವೀರಾಗ್ರಗರಥಂ ಸಾರಥಿಂ ವಾಜಿನಸ್ತಥಾ ।
ಖಂಡಶಃ ಶರವರ್ಷೇಣ ಚಕಾರ ನಿಮೇಷಾರ್ಧತಃ ॥೧೮॥

ಅಥ ಖಡ್ಗೇನ ಸಾವಿತ್ರಂ ಜಘಾನೋಡ್ಡೀಯ ಪಕ್ಷಿವತ್ ।
ತದಾ ಸಾವಿತ್ರಮುಕುಟಂ ಖಡ್ಗಹತ್ಯಾ ದ್ವಿಧಾಭವತ್ ॥೧೯॥

ಸಾವಿತ್ರಃ ಶೇಖರಭ್ರಂಶಾ ತ್ಸಕ್ರೋಧಃ ಪರಿಘೇಣ ತಂ ।
ಪ್ರಾಹರನ್ಮೂರ್ಧ್ನಿ ತೇನಾಸೌ ಛಿನ್ನಮೂರ್ಧಾ ಪಪಾತ ಹ ॥೨೦॥

ಒಂದೇಕಾಲದಲ್ಲಿ ಯುದ್ಧಭೂಮಿಯು ತುಂಬಿ ಹೋಗುವಷ್ಟು ಬಾಣಪ್ರಯೋಗಗಳನ್ನು ವೀರಾಗ್ರಗನ ಮೇಲೆ ಮಾಡಿದರು. ||೧೩-೧೪-೧೫||

ವಸುಗಳು ತಮ್ಮ ಶಕ್ತಿಯನ್ನೆಲ್ಲವನ್ನೂ ಉಪಯೋಗಿಸಿ ಅತ್ಯಂತ ದೊಡ್ಡದಾದ ಶಸ್ತ್ರಗಳನ್ನು ವೀರಾಗ್ರಗನ ಮೇಲೆ ಎಸೆದರು. ಅನಂತರ ವೀರಾಗ್ರಗನೂ ಕೂಡ ತೀಕ್ಷ್ಣಗಳಾದ ಭರ್ಜಿಗಳಿಂದ ಅವರ ಹೃದಯಗಳನ್ನು ತಿವಿದನು. ವೀರಾಗ್ರಗನಿಂದ ಕಿವಿಯ ವರೆಗೂ ಎಳೆದುಬಿಟ್ಟ ದೊಡ್ಡ ದೊಡ್ಡ ಬಾಣಗಳಿಂದ ಹೊಡೆಯಲ್ಪಟ್ಟ ವಸುಗಳು ಕೆಳಗೆ ಬಿದ್ದು ಮೂರ್ಛಾಕ್ರಾಂತರಾದರು. ಸಾವಿತ್ರನೆಂಬ ವಸುವಾದರೋ ಮುನ್ನುಗ್ಗಿ ಮೂರು ಬಾಣಗಳಿಂದ ವೀರಾಗ್ರಗನ ರಥವನ್ನೂ ಮತ್ತು ಸಾರಥಿಯನ್ನೂ ಕುದುರೆಗಳನ್ನೂ ಬಾಣಗಳ ಸುರಿಮಳೆಯಿಂದ ಬಂದ ಅರ್ಧ ನಿಮಿಷದಲ್ಲಿಯೇ ಚೂರುಚೂರು ಮಾಡಿದನು. ||೧೬-೧೭-೧೮||

ಅನಂತರ ವೀರಾಗ್ರಗನು ಹಕ್ಕಿಯಂತೆ ಹಾರಿ ಸಾವಿತ್ರನನ್ನು ಕತ್ತಿಯಿಂದ ಹೊಡೆದನು. ವಿರಾಗ್ರಗನ ಕತ್ತಿಯ ಪೆಟ್ಟಿನಿಂದ ಸಾವಿತ್ರನ ಕಿರೀಟವು ಎರಡುಭಾಗವಾಗಿ ತುಂಡಾಯಿತು. ||೧೯||

ಸಾವಿತ್ರನು, ತನ್ನ ಕಿರೀಟವು ಭಗ್ನವಾದ್ದರಿಂದ ಕೋಪಗೊಂಡವನಾಗಿ ವೀರಾಗ್ರಗನ ತಲೆಗೆ ಪರಿಘದಿಂದ ಹೊಡೆದನು. ಇದರಿಂದ ಅವನ ತಲೆಗೆ ಬಹಳ ಗಾಯವಾಗಿ ಕೆಳಗೆ ಬಿದ್ದುಬಿಟ್ಟನು. ||೨೦||

ಮುಹೂರ್ತಂ ಮೂರ್ಛಿತಃ ಸೋಽಥ ಪ್ರೋತ್ಥಾಯ ಗದಯಾಽಹನತ್ ।
ಸಾವಿತ್ರಂ ಬಲವತ್ಸೋಽಥ ವಮನ್ ರಕ್ತಂ ಪಪಾತ ಹ ॥೨೨॥

ಅಗ್ನಿನಾ ವೀರಸೇನೋಽಪಿ ಚಿರಂ ಯುದ್ಧ್ವಾ ಮಹಾಽಸಿನಾ ।
ಜಘಾನಾಽಗ್ನಿಂ ಸುವೇಗೇನ ಹತಸ್ತೇನ ಚ ಮೂರ್ಧನಿ ॥೨೨॥

ಅಸೃಗ್ಧಾರಾ ಸಂಪ್ಲುತಾಂ ಗಾಂ ವಹ್ನಿರ್ಜಜ್ವಾಲ ಮನ್ಯುನಾ ।
ಪ್ರಾಹಿಣೋನ್ನಿಜಶಕ್ತಿಂ ಸ ವೀರಸೇನಂ ವಿನಾಶಿತಂ ॥೨೩॥

ತಾಂ ದೃಷ್ಟ್ವಾ ವೀರಸೇನೋಽಪಿ ಜ್ವಲಂತೀ ಮಶನಿಪ್ರಭಾಂ ।
ತೋಯಾಽಸ್ತ್ರಂ ಪ್ರಾಹಿಣೋಚ್ಛೀಘ್ರಂ ಶಾಂತಾ ಶಕ್ತಿಸ್ತದಸ್ತ್ರತಃ ॥೨೪॥

ತಥಾಽಗ್ನಿಃ ಸ್ವಾಂ ವಿನಿಹತಾಂ ದೃಷ್ಟ್ವಾ ಶಕ್ತಿಂ ರುಷಾ ಪುನಃ ।
ಇಷುಭಿರ್ನಿಶಿತೈಸ್ತಸ್ಯ ಚಿಚ್ಛೇದಾಯುಧ ಸಂತತಿಂ ॥೨೫॥

ಒಂದು ಮುಹೂರ್ತಕಾಲ ವೀರಾಗ್ರಗನು ಮೂರ್ಛೆಹೊಂದಿದವನಾಗಿದ್ದು ಅನಂತರದಲ್ಲಿ ಮೂರ್ಛೆ ತಿಳಿದು ಎದ್ದವನಾಗಿ ಸಾವಿತ್ರನಿಗೆ ಬಲವಾಗಿ ಗದಾಪ್ರಹಾರ ಮಾಡಿದನು. ಇದರಿಂದ ಸಾವಿತ್ರನು ರಕ್ತವನ್ನು ಕಾರುತ್ತಾ ಕೆಳಗೆ ಬಿದ್ದನು. ॥೨೧॥

ವೀರಸೇನನೂ ಕೂಡ ಅಗ್ನಿಯೊಂದಿಗೆ ಬಹಳ ಕಾಲ ಯುದ್ಧಮಾಡುತ್ತಾ ದೊಡ್ಡ ಕತ್ತಿಯಿಂದ ಬಹಳ ವೇಗವಾಗಿ ಅಗ್ನಿಯ ತಲೆಗೆ ಹೊಡೆದನು. ಅಗ್ನಿಯ ಶಿರಸ್ಸಿಗೆ ಇದರ ಪೆಟ್ಟು ಬಹಳವಾಗಿ ತಗುಲಿತು. ಅಗ್ನಿಯ ಶಿರಸ್ಸಿನಿಂದ ರಕ್ತಪ್ರವಾಹವು ಧಾರಾಕಾರವಾಗಿ ಸುರಿಯಿತು. ಇದರಿಂದ ಇವನು ಬಹಳ ಕೋಪದಿಂದ ಜ್ವಲಿಸಿದನು. ಆಗ ಅಗ್ನಿಯು ವೀರಸೇನನನ್ನು ನಾಶಮಾಡಲು ತನ್ನ ಶಕ್ತಿಯೆಂಬ ಆಯುಧವನ್ನು ಅವನ ಮೇಲೆ ಪ್ರಯೋಗಿಸಿದನು. ವೀರಸೇನನೂ ಕೂಡ ವಜ್ರಾಯುಧಕ್ಕೆ ಸಮನಾಗಿ ಪ್ರಕಾಶಿಸುತ್ತಿರುವ ಶಕ್ತ್ಯಾಯುಧವನ್ನು ನೋಡಿ, ಅದಕ್ಕೆ ಪ್ರತಿಯಾಗಿ ವರುಣಾಸ್ತ್ರವನ್ನು ಪ್ರಯೋಗಿಸಿದನು. ಈ ಅಸ್ತ್ರದಿಂದ ಅಗ್ನಿಯ ಶಕ್ತ್ಯಾಯುಧವು ನಷ್ಟವಾಯಿತು. ॥೨೨-೨೩-೨೪॥

ಅನಂತರ ಅಗ್ನಿಯು ತನ್ನ ಶಕ್ತ್ಯಾಯುಧವು ನಷ್ಟವಾದುದನ್ನು ಕಂಡು ಪುನಃ ಕೋಪದಿಂದ ತೀಕ್ಷ್ಣವಾದ ಬಾಣವನ್ನು ಪ್ರಯೋಗಿಸಿ ವೀರಸೇನನ ಆಯುಧ ಸಮೂಹವನ್ನು ಕತ್ತರಿಸಿದನು. ॥೨೫॥

ಹತ ಸರ್ವಾಯುಧಃ ಸೋಽಪಿ ಮುಷ್ಟಿಮುದ್ಯಮ್ಯ ವೇಗತಃ ।
ಜಘಾನ ಮೂರ್ಧ್ನಿ ತೇನಾಽಗ್ನಿ ರ್ನಿಪಪಾತ ಮಹೀತಲೇ ॥೨೬॥

ತಾವತ್ತು ವೀರಸೇನೋಽಪಿ ಜಗ್ರಾಹ ಜ್ವಲನಂ ಜವಾತ್ ।
ಬಾಹುಭ್ಯಾಂ ವಕ್ಷಸಾಽಽಪೀಡ್ಯ ನಗರೇ ತಂ ಸಮಾನಯತ್ ॥೨೭॥

ಶೀತಿಕಾಽಮಂತ್ರಿತದೃಢರಜ್ಜುಭಿ ಸ್ತಮಬಂಧಯತ್ ।
ಅಕರೋತ್ತುಮುಲಂ ಯುದ್ಧಂ ವಾಯುನಾ ವೀರವಿಕ್ರಮಃ ॥೨೮॥

ಶರವರ್ಷೈಃ ಸಮಾಸಾದ್ಯ ಸಿಂಹನಾದ ಮಥಾಽಕರೋತ್ ।
ಶರವರ್ಷಂ ಕ್ಷಣೇನೈವ ವಿಧೂಯ ಪ್ರತಿವರ್ಷತಃ ॥೨೯॥

ಜಘಾನೋರಸ್ಯಂಕುಶೇನ ಮಹತಾ ವೀರವಿಕ್ರಮಂ ।
ಅಂಕುಶೇನಾಽಹತಂ ವಕ್ಷಃ ಸ್ಫುಟಿತಂ ರುಧಿರಸ್ರವಂ ॥೩೦॥

ಅಂಕುಶಾಽಘಾತ ಸಂಜಾತ ವ್ಯಥಯಾಽಕಂಪತ ಕ್ಷಣಂ ।
ವಿಘೂರ್ಣಮಾನನಯನೋ ನಿಷ್ಪ್ರಜ್ಞಃ ಕ್ಷಣಮಾಸ್ಥಿತಃ ॥೩೧॥

ವೀರಸೇನನು ತನ್ನ ಎಲ್ಲಾ ಆಯುಧಗಳೂ ನಷ್ಟವಾದುದನ್ನು ಕಂಡು ಮುಷ್ಟಿಯನ್ನು ಮೇಲಕ್ಕೆತ್ತಿ ವೇಗವಾಗಿ ಅಗ್ನಿಯ ತಲೆಗೆ ಹೊಡೆದನು. ಇದರಿಂದ ಅಗ್ನಿಯು ಭೂಮಿಯ ಮೇಲೆ ಬಿದ್ದನು. ವೀರಸೇನನು ಅಗ್ನಿಯನ್ನು ಅಷ್ಟು ಹೊತ್ತಿಗೆ ಶೀಘ್ರವಾಗಿ ಹಿಡಿದುಕೊಂಡು ತೋಳುಗಳಿಂದ ವಕ್ಷಸ್ಥಳದ ಮೇಲೆ ಬಹಳ ಪೀಡೆಯನ್ನುಂಟುಮಾಡಿ, ಅವನನ್ನು ಪಟ್ಟಣಕ್ಕೆ ತೆಗೆದುಕೊಂಡು ಬಂದನು. ಶೈತ್ಯವಾಗಿ ಮಂತ್ರಿಸಿದ ಗಟ್ಟಿಯಾದ ಹಗ್ಗಗಳಿಂದ ಅವನನ್ನು ಅಲ್ಲಿ ಕಟ್ಟಿಹಾಕಿದನು. ಈ ಸಂದರ್ಭದಲ್ಲಿ ವೀರವಿಕ್ರಮನು ವಾಯುವಿನೊಂದಿಗೆ ತುಮುಲಯುದ್ಧವನ್ನು ಮಾಡಿದನು. ||೨೬-೨೭-೨೮||

ವೀರವಿಕ್ರಮನು ವಾಯುವಿನ ಮೇಲೆ ಬಾಣವರ್ಷಗಳನ್ನು ಮಾಡಿ, ಅವನನ್ನು ಮುಚ್ಚಿ ಸಿಂಹನಾದವನ್ನು ಮಾಡಿದನು. ವಾಯುವು ಕ್ಷಣಕಾಲದಲ್ಲೇ ಆ ಬಾಣಗಳ ವರ್ಷಣಗಳನ್ನು ಪ್ರತಿ ಬಾಣಗಳ ವರ್ಷಣದಿಂದ ನಾಶಮಾಡಿ ದೊಡ್ಡದಾದ ಅಂಕುಶದಿಂದ ವೀರವಿಕ್ರಮನ ಮೇಲೆ ಪ್ರಯೋಗಿಸಿ ಅವನ ವಕ್ಷಸ್ಥಳಕ್ಕೆ ಪೆಟ್ಟನ್ನು ಕೊಟ್ಟನು. ವಾಯುವಿನ ಅಂಕುಶದ ಪೆಟ್ಟಿಗೆ ಸಿಕ್ಕಿದ ವೀರವಿಕ್ರಮನ ವಕ್ಷ

ಅಥ ಪ್ರಜ್ಞಾಂ ಸಮಾಸಾದ್ಯ ಹೃದಿ ಮಗ್ನಾಂಽಕುಶಂ ತದಾ ।
ಬಲಾದುತ್ಪಾಟ್ಯವೇಗೇನ ತಾಡಯತ್ತೇನ ಮಾರುತಂ ॥೩೨॥

ನಿಜಾಂಕುಶಾಽಹತೋ ವಾಯುರ್ಭಗ್ನ ಮೂರ್ಧಾಽಪತದ್ಭುವಿ ।
ಮೃತವನ್ಮೂರ್ಚ್ಛಿತೋ ವಾಯುಸ್ತದಾಽಸೌ ವೀರವಿಕ್ರಮಃ ॥೩೩॥

ಪುನಃ ಪಪಾತ ತಾಂ ಸೋಢು ಮಶಕ್ತೋ ಹೃದಯವ್ಯಥಾಂ ।
ಬಹು ಸುಸ್ರಾವ ರುಧಿರಂ ಹೃದಯಾದಂಕುಶಾಽಹತಾತ್ ॥೩೪॥

ವಾಯೋಶ್ಚ ಮಸ್ತಕಾತ್ತದ್ವದುಭಾವಪಿ ಸುಮೂರ್ಛಿತೌ ।
ಶತ್ರುಂಜಯಃ ಕುಬೇರೇಣ ಚಕಾರ ತುಮುಲಂ ರಣಂ ॥೩೫॥

ಶತ್ರುಂಜಯೋ ರಥಾಽರೂಢಃ ಕುಬೇರೋ ನರವಾಹನಃ ।
ಉಭೌ ಶಸ್ತ್ರಾಽಸ್ತ್ರ ಕುಶಲೌ ಧನುರ್ವಿದ್ಯಾವಿಚಕ್ಷಣೌ ॥೩೬॥

ಪರಸ್ಪರಂ ದರ್ಶಯಂತೌ ಸ್ವಸ್ವ ಶಸ್ತ್ರಾಽಸ್ತ್ರ ಕೌಶಲಂ ।
ಚಿರಂ ಯುದ್ಧ್ವಾ ಕುಬೇರೇಣ ಶತ್ರುಂಜಯ ಉವಾಚ ತಂ ॥೩೭॥

ಸ್ಥಳವು ರಕ್ತವನ್ನು ಸುರಿಸುತ್ತಾ ಒಡೆಯಿತು. ವೀರವಿಕ್ರಮನು ಅಂಕುಶದ ಪೆಟ್ಟಿನಿಂದ ಉಂಟಾದ ವ್ಯಥೆಯಿಂದ ಕ್ಷಣಕಾಲ ನಡುಗುತ್ತಾ ಕಣ್ಣುಗಳು ತಿರುಗುತ್ತಿರಲು ಸ್ವಲ್ಪ ಹೊತ್ತು ಜ್ಞಾನಶೂನ್ಯನಾದನು. ||೨೯-೩೦-೩೧||

ಅನಂತರದಲ್ಲಿ ವೀರವಿಕ್ರಮನು ಪ್ರಜ್ಞೆಯನ್ನು ಹೊಂದಿ ತನ್ನ ಹೃದಯಕ್ಕೆ ಬಂದು ನಾಟಿಕೊಂಡಿದ್ದ ಅಂಕುಶವನ್ನು ಕಿತ್ತು ಅದೇ ಅಂಕುಶದಿಂದಲೇ ವಾಯುವಿಗೆ ಹೊಡೆದನು. ತನ್ನ ಅಂಕುಶದ ಪೆಟ್ಟನ್ನೇ ತಿಂದ ವಾಯುವು ಮೃತನಾದವನಂತೆ ಕಾಣುತ್ತಾ ಮೂರ್ಛೆಹೊಂದಿದನು. ಆಗ ವೀರವಿಕ್ರಮನೂ ಕೂಡ ತನಗೆ ಹಿಂದೆ ಬಿದ್ದಿದ್ದ ಪೆಟ್ಟಿನ ವೇದನೆಯನ್ನು ಸಹಿಸಲು ಅಶಕ್ತನಾಗಿ ಕೆಳಗೆ ಬಿದ್ದನು. ಆಗ ಅವನ ಅಂಕುಶದ ಪೆಟ್ಟಿಗೆ ಸಿಕ್ಕಿದ್ದ ಹೃದಯದಿಂದ ರಕ್ತವು ಬಹಳವಾಗಿ ಸುರಿಯಿತು. ||೩೨-೩೩-೩೪||

ವಾಯುವಿನ ಶಿರಸ್ಸಿನಿಂದಲೂ ರಕ್ತವು ಧಾರಾಕಾರವಾಗಿ ಹರಿಯುತ್ತಿತ್ತು. ಹೀಗೆ ಇಬ್ಬರೂ ಮೂರ್ಛೆಹೋಗಿದ್ದರು. ಶತ್ರುಂಜಯನು ಕುಬೇರನೊಂದಿಗೆ ತಮುಲ ಯುದ್ಧವನ್ನು ಮಾಡಿದನು. ಶತ್ರುಂಜಯನು ರಥದ ಮೇಲೂ, ಕುಬೇರನು

ಧನೇಶ ಕಿಂ ವಿಲಂಬೇನ ದರ್ಶಯ ಸ್ವಂ ಬಲಾಽವಧಿಂ ।
ನೋಚೇ ದಿಮಂ ಶರಂ ವಿದ್ಧಿ ತವ ಪ್ರಾಣಹರಂ ಪರಂ ॥೩೮॥

ಶತ್ರುಂಜಯವಚಃ ಶ್ರುತ್ವಾ ಕ್ಷಣೇನ ನಿಶಿತೇಷುಣಾ ।
ಶರೇಣಾಪೂರಿತಂ ಚಾಪಂ ಚಿಚ್ಛೇದಾಽದ್ಭುತ ವಿಕ್ರಮಃ ॥೩೯॥

ಅಥಾಽಶ್ವಾನ್ ಸಾರಥಿ(ಂ)ಕೇತುಂ ಚತುರ್ಭಿಶ್ಚ ತ್ರಿಭಿಸ್ತ್ರಿಭಿಃ ।
ಛಿತ್ವಾ ಜಗರ್ಜ ಧನಪೋ ಹತಮಾತಂಗ ಸಿಂಹವತ್ ॥೪೦॥

ಸಾಧು ಶೂರ ಶ್ಲಾಘ್ಯತನೋ ವಿದಿತಂ ಮೇ ಬಲಂ ತವ ।
ಇತೋ ಯಾಹಿ ನ ಚೇದೇಷ ಕ್ಷಣಃ ಸ್ಯಾಜ್ಜೀವಿತಾಽಂತಕಃ ॥೪೧॥

ಶತ್ರುಂಜಯೋ ಧನೇಶೋಕ್ತಂ ಶ್ರುತ್ವಾಽಮರ್ಷೇಣ ಪೂರಿತಃ ।
ಗದಾಮುದ್ಯಮ್ಯ ವೇಗೇನ ತಾಡಯದ್ವಾಹನಂ ನರಂ ॥೪೨॥

ಮನುಷ್ಯನ ಮೇಲೆಯೂ ಮಂಡಿಸಿದ್ದರು. ಇಬ್ಬರೂ ಶಸ್ತ್ರಾಸ್ತ್ರಕುಶಲರಾಗಿಯೂ, ಧನುರ್ವಿದ್ಯಾಪಾರಂಗತರಾಗಿಯೂ ಮತ್ತು ತಮ್ಮ ತಮ್ಮ ಶಸ್ತ್ರಾಸ್ತ್ರಕೌಶಲವನ್ನು ಪರಸ್ಪರರ ಮೇಲೆ ತೋರಿಸುವವರಾಗಿಯೂ ಇದ್ದರು. ಶತ್ರುಂಜಯನು ಕುಬೇರ ನೊಂದಿಗೆ ಬಹಳಕಾಲ ಯುದ್ಧಮಾಡಿ, ಅವನು ಕುಬೇರನನ್ನು ಕುರಿತು ಹೀಗೆಂದನು. ॥೩೫-೩೬-೩೭॥

ಎಲೋ ಕುಬೇರನೇ, ಏಕೆ ವಿಲಂಬಮಾಡುತ್ತಿದ್ದೀಯೆ? ನಿನ್ನ ಶೌರ್ಯವೆಷ್ಟಿದೆ ಯೆಂಬುದನ್ನು ತೋರಿಸು. ಹಾಗಲ್ಲದಿದ್ದರೆ ಇದೋ ಇದು ನಿನ್ನ ಪ್ರಾಣವನ್ನು ಹರಣಮಾಡುವ ಶ್ರೇಷ್ಠಬಾಣವೆಂದು ತಿಳಿ. ಶತ್ರುಂಜಯನ ಈ ಮಾತನ್ನು ಕೇಳಿ, ತೀಕ್ಷ್ಣವಾದ ಬಾಣವನ್ನು ಕ್ಷಣಕಾಲದಲ್ಲಿಯೇ ತನ್ನ ಬಿಲ್ಲಿಗೆ ಜೋಡಿಸಿ, ಅದ್ಭುತ ಪರಾಕ್ರಮಶಾಲಿಯಾದ ಕುಬೇರನು ನಾಲ್ಕು, ಮೂರು, ಮೂರು ಹೀಗೆ ಬಾಣ ಗಳನ್ನು ಪ್ರಯೋಗಿಸುತ್ತಾ ಶತ್ರುಂಜಯನ ಕುದುರೆಗಳು, ಸಾರಥಿ, ಬಾವುಟ ಇವೆಲ್ಲ ವನ್ನೂ ಕತ್ತರಿಸಿ, ಆನೆಯನ್ನು ನಾಶಮಾಡಿದ ಸಿಂಹದಂತೆ, ಗರ್ಜನೆಮಾಡಿದನು. ॥೩೮-೩೯-೪೦॥

ಭೇಷ್! ನೀನು ಬಹಳ ಶ್ಲಾಘ್ಯನಾದ ಶೂರನಾಗಿದ್ದೀಯೆ. ನಿನ್ನ ಶೌರ್ಯವು ನನಗೆ ಗೊತ್ತಾಯಿತು. ಇಲ್ಲಿ ಬಾ. ಇಲ್ಲದಿದ್ದರೆ ಈ ಕ್ಷಣದಲ್ಲೇ ನಿನ್ನ ಪ್ರಾಣಾಪಹಾರ ವಾಗುವುದು ಎಂದು ಕುಬೇರನು ತಿರಸ್ಕಾರವಾಗಿ ಹೇಳಿದ್ದನ್ನು ಕೇಳಿ ಶತ್ರುಂಜಯನು

ಗದಯಾಽಭಿಹತೋ ಮರ್ತ್ಯಃ ಪಪಾತ ಭುವಿ ಮೂರ್ಛಿತಃ ।
ತದಂತರೇ ಧನೇಶಸ್ಯ ಗದಯಾ ಮೂರ್ಧ್ನ್ಯತಾಡಯತ್ ॥೪೩॥

ವಜ್ರ ನಿಷ್ಠುರಯಾ ಮೂರ್ಧ್ನಿ ತಾಡಿತೋ ಗದಯಾ ಭೃಶಂ ।
ಕ್ಷಣಮಾತ್ರಂ ಮೂರ್ಛಿತೋಽಸೌ ತದಾ ತದ್ಧಸ್ತಗಂ ಧನುಃ ॥೪೪॥

ಶತ್ರುಂ ಜಯಸ್ಸಮಾಕ್ಷಿಪ್ಯ ಬಭಂಜಾಽತುಲ ವಿಕ್ರಮಃ ।
ನಿವೃತ್ತ ಮೂರ್ಛೋ ಧನಪಃ ದೃಷ್ಟ್ವಾ ಚಾಪಸ್ಯ ಭಂಜನಂ ॥೪೫॥

ಕ್ರೋಧಸಂರಕ್ತ ನಯನಃ ಜಗ್ರಾಹ ಮಹತೀಂ ಗದಾಂ ।
ತದಾ ಶತ್ರುಂ ಜಯಃ ಪ್ರಾಹ ಸಖೇ ಶೃಣು ವಚೋ ಮಮ ॥೪೬॥

ಪೃಥಿವ್ಯಾಂ ತು ಗದಾಯುದ್ಧೇ ಮತ್ತುಲ್ಯೋ ನ ಹಿ ವಿದ್ಯತೇ ।
ಶಸ್ತ್ರಾಚಾರ್ಯಃ ಪ್ರಾಹ ಯನ್ಮೇ ತದ್ಬ್ರವೀಮಿ ನಿಶಾಮಯ ॥೪೭॥

ಕೋಪದಿಂದ ತುಂಬಿದವನಾಗಿ ಅವನಿಗೆ ವಾಹನನಾಗಿದ್ದ ಮನುಷ್ಯನಿಗೆ ಹೊಡೆದನು. ಶತ್ರುಂಜಯನ ಗದಾಘಾತಕ್ಕೆ ಸಿಕ್ಕಿದ ಮನುಷ್ಯನು ಮೂರ್ಛಾಕ್ರಾಂತನಾಗಿ ಭೂಮಿಯ ಮೇಲೆ ಬಿದ್ದನು. ಈ ಸಂದರ್ಭದಲ್ಲಿ ಶತ್ರುಂಜಯನು ತನ್ನ ಗದೆಯಿಂದ ಕುಬೇರನ ತಲೆಗೆ ಬಲವಾಗಿ ಹೊಡೆದನು. ॥೪೧-೪೨-೪೩॥

ಶತ್ರುಂಜಯನ ವಜ್ರಾಯುಧಕ್ಕೆ ಸಮಾನವಾದ ಗದೆಯ ಘಾತದಿಂದ ಕ್ಷಣಕಾಲ ಕುಬೇರನು ಮೂರ್ಛೆಹೊಂದಿದನು. ಆಗ ಅಸಮಾನ ಪರಾಕ್ರಮಶಾಲಿಯಾದ ಶತ್ರುಂಜಯನು ಕುಬೇರನ ಕೈಯ್ಯಲ್ಲಿದ್ದ ಧನುಸ್ಸನ್ನು ಕಿತ್ತುಕೊಂಡು ಮುರಿದುಹಾಕಿದನು. ಮೂರ್ಛೆಯಿಂದ ತಿಳಿದ ಕುಬೇರನು ತನ್ನ ಧನುಸ್ಸು ಭಗ್ನವಾದುದನ್ನು ಕಂಡು ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ ದೊಡ್ಡದಾದ ಗದೆಯನ್ನು ಕೈಗೆ ತೆಗೆದುಕೊಂಡನು. ಆಗ ಶತ್ರುಂಜಯನು ಕುಬೇರನನ್ನು ಕುರಿತು ಎಲೈ ಸ್ನೇಹಿತನೇ, ನನ್ನ ಮಾತನ್ನು ಕೇಳು. ಏನೆಂದರೆ. ॥೪೪-೪೫-೪೬॥

ಪೃಥ್ವಿಯಲ್ಲಿ ಗದಾಯುದ್ಧದಲ್ಲಿ ನನಗೆ ಸಮಾನನಾದವನು ಯಾವನೂ ಇಲ್ಲ. ನನ್ನ ಶಸ್ತ್ರಾಚಾರ್ಯರೂ ಹಿಂದೆ ಹೇಳಿದ್ದ ಒಂದು ಮಾತನ್ನು ಹೇಳುವೆನು ಕೇಳು. ನಮ್ಮ ಶಸ್ತ್ರಾಚಾರ್ಯರು ನನಗೆ ಗದಾಪ್ರಯೋಗದಲ್ಲಿ ವಿಶೇಷವಾಗಿ ಶಿಕ್ಷಣಕೊಟ್ಟು ಅನಂತರ ನಿನಗೆ ಸಮಾನನಾಗಿ ಗದಾಯುದ್ಧವನ್ನು ಮಾಡುವವನು ಭೂಮಿಯಲ್ಲಿ ಬೇರೊಬ್ಬ

ಶಿಕ್ಷಿತೋಽತಿ ತರಾಂ ತೇನ ಗದಾಯಾಂ ತದನಂತರಂ ।
ಗದಾ ಯುದ್ಧೇ ನ ತೇ ತುಲ್ಯಂ ಪಶ್ಯಾಮಿ ಭುವಿ ಕಂಚನ ॥೪೮॥

ಯದಿ ಜೇತಾಽಸಿ ಧನಪಂ ಗದಾಯಾಂ ಸಮುಹತ್ತಮಃ ।
ತದದ್ಯ ಯಾವನ್ಮನಸಿ ತ್ವದ್ಗದೇಕ್ಷಾ ಸಮಾಹಿತಾ ॥೪೯॥

ಅರ್ಥಾತ್ತ್ವಯಾ ಸಂಗತೋಽಹಂ ಗದಾಯುದ್ಧೇ ಧನೇಶ್ವರಂ ।
ಪ್ರದರ್ಶಯಾತ್ಮನೋ ವೀರ್ಯಂ ಗದಾಯುದ್ಧೇಽತಿ ಸಂಭೃತಿಂ ॥೫೦॥

ಏವಂ ಶತ್ರುಂಜಯವಚೋ ನಿಶಮ್ಯ ಧನದಸ್ತದಾ ।
ಓ ಮಿತ್ಯುಕ್ತ್ವಾ ತೇನ ಸಹ ಗದಾಯುದ್ಧಂ ಸಮಾರಭತ್ ॥೫೧॥

ಶತ್ರುಂಜಯೋ ಧನೇಶಶ್ಚ ಗದಾಯುದ್ಧವಿಶಾರದೌ ।
ಸುಶಿಕ್ಷಿತೌ ಮಹಾಪ್ರಾಣೌ ದೃಪ್ತಪಂಚಾಽಸ್ಯ ವಿಕ್ರಮೌ ॥೫೨॥

ತೌ ಚೇರತುರ್ಮಂಡಲಾನಿ ಸವ್ಯಸವ್ಯೇತರಾಣಿ ಚ ।
ವಿಷಯಾಣಿ ಸಮಾಽರ್ಧಾಣಿ ವಿಷಮಾಽರ್ಧ ಸಮಾನಿ ಚ ॥೫೩॥

ನಿಲ್ಲ. ಆದರೆ ನೀನು ನಿನ್ನ ಗದಾಯುದ್ಧದ ಅಸಾಧಾರಣ ಸಾಮರ್ಥ್ಯವನ್ನರಿಯಲು ಕುಬೇರನೊಂದಿಗೆ ಯುದ್ಧಮಾಡಿ ಜಯಿಸಬೇಕು ಎಂದು ಹೇಳಿದ್ದರು. ಈಗ ನಿನ್ನ ಗದಾಪ್ರಯೋಗದ ಸಾಮರ್ಥ್ಯವನ್ನು ನೋಡುವ ಅವಕಾಶಸಿಕ್ಕಿದೆ. ॥೪೭-೪೮-೪೯॥

ಎಲೈ ಕುಬೇರನೇ, ಅಕಸ್ಮಾತ್ ನಿನ್ನೊಂದಿಗೆ ಗದಾಯುದ್ಧಮಾಡುವ ಪ್ರಸಂಗವೇ ಬಂದಿದೆ. ನಿನ್ನ ವಿಶೇಷವಾದ ಗದಾಯುದ್ಧಸಾಮರ್ಥ್ಯವನ್ನು ತೋರಿಸು. ನೋಡುವೆನು ಎಂದು ಶತ್ರುಂಜಯನು ಹೇಳಿದ ಮಾತನ್ನು ಕೇಳಿ, ಕುಬೇರನು ಆಗಲಿ ಎಂದು ಹೇಳಿ ಅವನೊಂದಿಗೆ ಗದಾಯುದ್ಧವನ್ನು ಪ್ರಾರಂಭಿಸಿದನು. ॥೫೦-೫೧॥

ಶತ್ರುಂಜಯ ಮತ್ತು ಕುಬೇರ ಇವರಿಬ್ಬರೂ ಗದಾಯುದ್ಧದಲ್ಲಿ ನಿಪುಣರಾಗಿದ್ದರು. ಇವರು ಚೆನ್ನಾಗಿ ಈ ವಿಧವಾದ ಯುದ್ಧದಲ್ಲಿ ಶಿಕ್ಷಣವನ್ನು ಪಡೆದು ಬಹಳ ಬಲಿಷ್ಠರಾಗಿಯೂ, ಮದಿಸಿದ ಸಿಂಹದಂತೆ ಬಹಳ ಪರಾಕ್ರಮವುಳ್ಳವರಾಗಿಯೂ ಇದ್ದರು. ಇವರು ಗದಾಯುದ್ಧಕ್ಕೆ ಪ್ರಾರಂಭಿಸಿ ಬಲಗಡೇ ಮತ್ತು ಎಡಗಡೇ ವಿಷಮವಾಗಿ ಮತ್ತು ಅರ್ಧ ಸಮವಾಗಿ, ವಿಷಮದಲ್ಲಿ ಅರ್ಧದಷ್ಟು ಸಮನಾಗಿ, ಸಮವಾಗಿ ಮತ್ತು ಸಮ ಮತ್ತು ತಗ್ಗಿನಲ್ಲಿ ಸಮ ಮತ್ತು ತಗ್ಗಿನ ಅರ್ಧ

ಸಮಾನಿ ಸಮಾನಿಮ್ನಾನಿ ಸಮನಿಮ್ನಾಽರ್ಧಕಾಣಿ ಚ ।
ಅವಪ್ಲುತ ಪ್ಲುತಾಽರ್ಧಾನಿ ವಿಷಮಪ್ಲುತಕಾನಿ ಚ ॥೫೪॥

ಉತ್ಪ್ಲುತ ಪ್ರೋತ್ಪ್ಲುತವ್ಯತ್ಥ ಪ್ಲುತಹಂಸ ಪ್ಲುತಾನಿ ಚ ।
ಗದಾಯುದ್ಧ ಪ್ರೋಕ್ತಗತೀಃ ಸರ್ವಾ ಅಪಿ ಪರಸ್ಪರಂ ॥೫೫॥

ದರ್ಶಯಂತೌ ಗತಿಜ್ಞೌ ತೌ ಸುಶಿಕ್ಷೌ ಯುದ್ಧಕೋವಿದೌ ।
ಪರಸ್ಪರ ಪ್ರಹಾರಸ್ಯ ಸಂಧಿಪ್ರೇಕ್ಷಣಕೋವಿದೌ ॥೫೬॥

ಉಪಕ್ರಮ ಗತಿಜ್ಞಾನಾತ್ ಸಂಶ್ಲಾಘಂತೌ ಪರಸ್ಪರಂ ।
ಅಲಕ್ಷ್ಯವೇಗಸಂಚಾರೌ ಲಕ್ಷಿತೌ ಕಂದುಕಾವಿವ ॥೫೭॥

ಏವಂ ತಯೋರ್ಗದಾಯುದ್ಧಂ ಪ್ರೇಕ್ಷಂತಃ ಸಿದ್ಧಚಾರಣಾಃ ।
ಶಶಂಸುರ್ಯುದ್ಧ ಕೌಶಲ್ಯಮಹೋ ಯುದ್ಧಮಿತೀಂಗನೈಃ ॥೫೮॥

ಭಾಗ, ಮೇಲೆ ಹಾರಿ, ಅರ್ಧದಷ್ಟು ಹಾರಿ, ವಿಷಮವಾಗಿ ಹಾರಿ, ಹೀಗೆ ನಾನಾವಿಧ ವಾಗಿ ಗದಾಯುದ್ಧದಲ್ಲಿ ಬರುವ ಎಲ್ಲಾ ಬಗೆಯ ಸುತ್ತುಗಳಲ್ಲಿಯೂ ಗದೆಯನ್ನು ಬೀಸುತ್ತಾ ಯುದ್ಧಮಾಡಿದರು. ॥೫೨-೫೩-೫೪॥

ವಿಶೇಷವಾಗಿ ಹಾರುವುದು, ಅತ್ಯಂತ ಮೇಲೆ ಕುಪ್ಪುವುದು. ನೆಗೆಯುವುದು, ಹಂಸದಂತೆ ನಡೆಯುವುದು ಮುಂತಾದ ಗದಾಯುದ್ಧದ ವಿಷಯದಲ್ಲಿ ಹೇಳಿರುವ ಎಲ್ಲಾ ವಿಧವಾದ ಚಲನಗಳನ್ನು ಪರಸ್ಪರ ಮಾಡುತ್ತಾ ಯುದ್ಧನಿಷ್ಣಾತರೂ, ಸುಶಿಕ್ಷಿತರೂ, ಪರಸ್ಪರ ಗಮನಗಳನ್ನರಿಯುವವರೂ, ಆದ ಇವರಿಬ್ಬರೂ ಎಲ್ಲಾ ಬಗೆಯ ಗಮನಗಳನ್ನೂ ಪ್ರದರ್ಶಿಸುತ್ತಾ ಪರಸ್ಪರ ಹೊಡೆತಗಳಿಗೆ ಅವಕಾಶವನ್ನು ನಿರೀಕ್ಷಿಸಲು ಸಮರ್ಥರಾಗಿ, ಪ್ರಾರಂಭದ ಗಮನವನ್ನು ಜಾಗ್ರತೆ ತಿಳಿಯೋಣದ ರಿಂದ ಅನ್ಯೋನ್ಯವಾಗಿ ಶ್ಲಾಘಿಸುತ್ತಾ, ಕಣ್ಣಿಗೆ ಕಾಣಿಸದಷ್ಟು ವೇಗವಾಗಿ ಹಾರುವ ಚಂಡಿನಂತೆ ಬಹು ಸೂಕ್ಷ್ಮವಾಗಿ ಚಲನವಲನಗಳನ್ನು ಮಾಡುತ್ತಾ, ಗದಾಯುದ್ಧ ವನ್ನು ಚೆನ್ನಾಗಿ ನಡೆಸಿದರು. ॥೫೫-೫೬-೫೭॥

ಸಿದ್ಧರು, ಚಾರಣರು, ಮೊದಲಾದವರು ಆಕಾಶದಲ್ಲಿ ಇವರ ಗದಾಯುದ್ಧ ವನ್ನು ನೋಡುತ್ತಾ ಇವರಿಬ್ಬರ ಯುದ್ಧನಿಪುಣತೆಯನ್ನು ತಮ್ಮ ಸನ್ನೆಗಳ ಮೂಲಕ ಪ್ರಶಂಸೆಮಾಡುತ್ತಿದ್ದರು. ಈ ರೀತಿಯಲ್ಲಿ ಕುಬೇರನು ಶತ್ರುಂಜಯನೊಂದಿಗೆ

ಏವಂ ಚಿರಂ ತೇನ ಸಹ ಯುದ್ಧ್ವಾ ಧನಪತಿಸ್ತದಾ ।
ಸ್ವತೋಽಧಿಕಂ ಗದಾಯುದ್ಧೇ ಮೇನೇ ಶತ್ರುಂಜಯಂ ತತಃ ॥೫೯॥

ಆಪ್ಲುತ್ಯ ಖೇ ಧನಪತಿಃ ಪ್ರಹರ್ತುಂ ಚೋನ್ನಯದ್ಗದಾಂ ।
ತಜ್ಜ್ಞಾತ್ವಾಽವಂಚಯ ಚ್ಛತ್ರುಂಜಯೋಽಮೋಘಮುವಪ್ಲುತಂ ॥೬೦॥

ಜ್ಞಾತ್ವಾ ಸ್ವಂ ಧನಪಃ ಪೃಷ್ಠೇ ಜಘಾನಾಽಧರ್ಮತಸ್ತದಾ ।
ಶತ್ರುಂಜಯಃ ಪೃಷ್ಠದೇಶೇ ತಾಡಿತೋ ಮೂರ್ಛಿತಃ ಕ್ಷಣಂ ॥೬೧॥

ತತಃ ಪ್ರಜ್ಞಾಂ ಸಮಾಸಾದ್ಯ ಕ್ರೋಧಾದರುಣಲೋಚನಃ ।
ಧಿಕ್ತ್ವಾಮನಾರ್ಯಮಶುಭಂ ಧರ್ಮಾಽಪೇತಂ ಧನಾಧಿಪಂ ॥೬೨॥

ಯನ್ಮಾಮಧರ್ಮ ಯುದ್ಧೇನ ಜಘ್ನಿವಾನ್ ರಾಕ್ಷಸೋ ಯಥಾ ।
ನ ತ್ವಯಾ ಗದಯಾ ಯೋದ್ಧು ಮರ್ಹೋಽಹಂ ಧರ್ಮಮಾಶ್ರಿತಃ॥೬೩॥

ಬಹಳಕಾಲ ಗದಾಯುದ್ಧಮಾಡಿ ಶತ್ರುಂಜಯನು ತನಗಿಂತಲೂ ಗದಾಯುದ್ಧದಲ್ಲಿ ಅತಿ ನಿಪುಣನೆಂದು ಭಾವಿಸಿದನು. ಅನಂತರ ಕುಬೇರನು ಆಕಾಶಕ್ಕೆ ಹಾರಿ ಅವನಿಗೆ ಹೊಡೆಯಲು ಗದೆಯನ್ನು ಎತ್ತಿದನು. ಶತ್ರುಂಜಯನು ಹೀಗೆ ಹಾರಿ ಹೊಡೆಯಲು ಯತ್ನಿಸಿರುವುದು ವ್ಯರ್ಥವಾಗಲಾರದೆಂದು ಭಾವಿಸಿ ಅವನನ್ನು ಉಪಾಯವಾಗಿ ವಂಚಿಸಿದನು. ||೫೮-೫೯-೬೦||

ಕುಬೇರನು ಈ ವಿಷಯವನ್ನು ಕುರಿತು ಅಧರ್ಮದಿಂದ ಶತ್ರುಂಜಯನ ಹಿಂಭಾಗಕ್ಕೆ ಗದಾಪ್ರಹಾರವನ್ನು ಮಾಡಿದನು. ಹಿಂಭಾಗಕ್ಕೆ ಪೆಟ್ಟುಬಿದ್ದುದರಿಂದ ಶತ್ರುಂಜಯನು ಒಂದು ಕ್ಷಣಕಾಲ ಮೂರ್ಛೆಹೊಂದಿದನು. ಅನಂತರ ಅವನು ಜ್ಞಾನವನ್ನು ಹೊಂದಿ ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ ಎಲೋ ಕುಬೇರನೇ, ಅನಾರ್ಯನೂ ಧರ್ಮಮಾರ್ಗವನ್ನು ಬಿಟ್ಟವನೂ ಅನಿಷ್ಟನೂ ಆದ ನೀನು ಧಿಕ್ಕಾರಕ್ಕೆ ಯೋಗ್ಯನು. ಏಕೆಂದರೆ ರಾಕ್ಷಸನಂತೆ ಅಧರ್ಮವಾದ ಯುದ್ಧಮಾಡಿ ನನ್ನನ್ನು ಹೊಡೆದಿದ್ದೀಯೆ. ಧರ್ಮಮಾರ್ಗದಲ್ಲಿ ಯುದ್ಧಮಾಡುವ ನಾನು ನಿನ್ನೊಂದಿಗೆ ಯುದ್ಧಮಾಡುವುದು ಅನುಚಿತವು! ಎಂದನು. ||೬೧-೬೨-೬೩||

ಯುದ್ಧೇಷು ಸುಶ್ಲಾಘ್ಯತಮಂ ಗದಾಯುದ್ಧಂ ಪ್ರಚಕ್ಷತೇ ।
ಬಹುಭಿರ್ಧರ್ಮನಿಯಮೈಃ ನಿಯತಂ ಯೋಗವರ್ತ್ಮವತ್ ॥೬೪॥

ತತ್ತ್ವತ್ಕೃತಸ್ಯಾಪಚಿತಿಂ ಪಶ್ಯ ಕರ್ತಾಽಸ್ಮಿ ಸಂಪ್ರತಿ ।
ಇತ್ಯುಕ್ತ್ವಾ ಭುವಿ ಚಿಕ್ಷೇಪ ಗದಾಂ ಸರ್ವಾಯಸೀಂ ತತಃ ॥೬೫॥

ಮುಷ್ಟಿಮುದ್ಯಮ್ಯ ವೇಗೇನ ಜಘಾನ ಹೃದಿ ವೈ ತತಃ ।
ಮುಷ್ಟಿನಾಽಭಿಹತೋ ಯಕ್ಷರಾಜಃ ಶೋಣಿತಮುದ್ಗಿರನ್ ॥೬೬॥

ಪಪಾತ ಭುವಿ ಚಾಽತ್ಯಂತಂ ಮೂರ್ಛಿತೋ ಮೃತವತ್ತದಾ ।
ಪತಿತಂ ತಂ ಪಾಶಚಯೈರ್ಬಬಂಧ ನಿಮಿಷಾರ್ಧತಃ ॥೬೭॥

ಅಥ ಮೋಚಯಿತುಂ ಯಕ್ಷಾ ರಾಜಾನಂ ಕೋಟಿಕೋಟಿಶಃ ।
ಶಸ್ತ್ರೋದ್ಯತಕರಾಃ ಶತ್ರುಂಜಯಂ ಹಂತುಂ ಸಮಾರಭನ್ ॥೬೮॥

ಯುದ್ಧಗಳಲ್ಲೆಲ್ಲಕ್ಕೂ ಅತ್ಯಂತ ಶ್ರೇಷ್ಠವಾದುದು ಗದಾಯುದ್ಧವೆಂದು ಹೇಳುತ್ತಾರೆ. ಆದ್ದರಿಂದ ಯೋಗಮಾರ್ಗದಂತೆ ಈ ಯುದ್ಧವು ಅನೇಕ ಧರ್ಮನಿಯಮಗಳಿಂದ ಬದ್ಧವಾಗಿದೆ. ಹೀಗೆ ನೀನು ಅನ್ಯಾಯವಾದ ರೀತಿಯಲ್ಲಿ ನನ್ನನ್ನು ಹೊಡೆದುದಕ್ಕೆ ಈಗ ತಕ್ಕ ಪ್ರತೀಕಾರವನ್ನು ಮಾಡುವೆನು, ನೋಡು. ಹೀಗೆ ಹೇಳಿ ಕಬ್ಬಿಣಪೂರ್ಣವಾಗಿ ಮಾಡಿದ ಗದೆಯನ್ನು ಭೂಮಿಯಮೇಲಿಟ್ಟು ಮುಷ್ಟಿಯನ್ನು ಮೇಲಕ್ಕೆ ಹಿಡಿದು ಅವನ ಹೃದಯಕ್ಕೆ ಬಲವಾಗಿ ಹೊಡೆದನು. ಶತ್ರುಂಜಯನ ಮುಷ್ಟಿಪ್ರಹಾರದಿಂದ ಕುಬೇರನು ರಕ್ತವನ್ನು ಕಾರಿದನು. ||೬೪-೬೫-೬೬||

ಆಗ ಕುಬೇರನು ಅತ್ಯಂತ ಮೂರ್ಛಿತನಾಗಿ ಮೃತನಂತೆ ಭೂಮಿಯಮೇಲೆ ಬಿದ್ದನು. ಶತ್ರುಂಜಯನು ಕುಬೇರನನ್ನು ಅನೇಕ ಹಗ್ಗಗಳಿಂದ ಒಂದರ್ಧನಿಮಿಷದಲ್ಲಿಯೇ ಕಟ್ಟಿಹಾಕಿದನು. ಅನಂತರ ಯಕ್ಷರೆಲ್ಲರೂ ತಮ್ಮ ಧೊರೆಯಾದ ಕುಬೇರನನ್ನು ಬಿಡಿಸಲು ಕೋಟಿ ಕೋಟಿಗಟ್ಟಲೆ ಬಂದು ಶಸ್ತ್ರಗಳನ್ನು ಹಿಡಿದವರಾಗಿ ಶತ್ರುಂಜಯನನ್ನು ಹೊಡೆಯಲು ಪ್ರಾರಂಭಿಸಿದರು. ||೬೭-೬೮||

ಅಥ ತಾನ್ ಗದಯಾ ಸರ್ವಾನ್ ಶಮಯಾಮಾಸ ವೇಗತಃ ।
ದಿನೇಶ ಇವ ಭೂತೌಘಾನ್ ತತಸ್ತಂ ನಿಧಿಪಂ ಜವಾತ್ ॥೧೯॥

ಸಮಾದಾಯ ವ್ರಜಂತಂ ತಂ ಪುಲಸ್ತ್ಯಃ ಸುನಿಶಾಮ್ಯ ವೈ ।
ಆಗತ್ಯ ವತ್ಸೇತ್ಯಾಮಂತ್ರ್ಯ ಮಧುರಂ ವಾಕ್ಯಮಬ್ರವೀತ್ ॥೨೦॥

ಶತ್ರುಂಜಯ ಧನೇಶೋಽಯಂ ಜಿತೋ ಯುದ್ಧೇ ತ್ವಯಾ ಬಲಾತ್ ।
ದೇಹಿ ಮಹ್ಯಮಿಮಂ ಪೌತ್ರಂ ಪ್ರೇಯಾಂಸಂ ಹೃದಯಂಗಮಂ ॥೨೧॥

ವೀರವ್ರತೋ ಯಾಚಿತಂ ನ ವಿಪ್ರೇಭ್ಯೋ ನ ಪ್ರಯಚ್ಛತಿ ।
ತಂ ತತ್ಸುತಃ ಕಥಂ ಮಹ್ಯಂ ನ ದದಾಸ್ಯಭಿಯಾಚಿತಂ ॥೨೨॥

ಮುನೇಸ್ತದ್ವಚನಂ ಶ್ರುತ್ವಾ ಪ್ರಣಮ್ಯ ಭುವಿ ದಂಡವತ್ ।
ಸಮರ್ಪ್ಯ ತಸ್ಮೈ ಧನಪಂ ಸಂನ್ಯವರ್ತತ ವೇಗತಃ ॥೨೩॥

ಏವಂ ಜಯಂತೇನ ತತ್ರ ವೀರಭಾನುರಯೋಧಯತ್ ।
ತೌ ಯುದ್ಧ್ವಾ ಸುಚಿರಂ ತತ್ರ ಬಹುಶಸ್ತ್ರಾಸ್ತ್ರಕೋವಿದೌ ॥೨೪॥

ಅನಂತರ ಶತ್ರುಂಜಯನು ಸೂರ್ಯನು ಭೂತಸಮೂಹಗಳನ್ನು ಹೇಗೋ ಹಾಗೆ ಬಹು ಶೀಘ್ರವಾಗಿ ಅವರೆಲ್ಲರನ್ನೂ ನಾಶಮಾಡಿದನು. ಅನಂತರ ಇವನು ಕುಬೇರನನ್ನು ಬೇಗನೆ ಎತ್ತಿಕೊಂಡು ಹೋಗುತ್ತಿರಲು ಪುಲಸ್ತ್ಯನು ಈ ಸಮಾಚಾರವನ್ನು ಕೇಳಿ ಅಲ್ಲಿಗೆ ಬಂದು ಶತ್ರುಂಜಯನನ್ನು ಕುರಿತು ಎಲೈ ಮಗುವೇ, ಎಂದು ಸಂಬೋಧಿಸಿ ಮಧುರವಾದ ಈ ಮಾತನ್ನಾಡಿದನು. ಎಲೈ ಶತ್ರುಂಜಯನೇ, ನಿನ್ನ ಶೌರ್ಯದಿಂದ ಈ ಯುದ್ಧದಲ್ಲಿ ಕುಬೇರನು ಸೋಲಿಸಲ್ಪಟ್ಟಿದ್ದಾನೆ. ಆದ್ದರಿಂದ ನನ್ನ ಪ್ರೀತಿಪಾತ್ರನಾದ ನನ್ನ ಮನಮೋಹಕನಾದ ಇವನನ್ನು ನನಗೆ ಕೊಟ್ಟುಬಿಡು. ॥೧೯-೨೦-೨೧॥

ವೀರವ್ರತನು ಬ್ರಾಹ್ಮಣರು ಬೇಡಿದ್ದನ್ನು ನೀಡದೇ ಇರುವುದಿಲ್ಲ. ಆದ್ದರಿಂದ ಅವನ ಮಗನಾದ ನೀನೂ, ಬ್ರಾಹ್ಮಣರು ಪ್ರಾರ್ಥಿಸಿದ್ದನ್ನು ಹೇಗೆ ಕೊಡದೇ ಇರಬಲ್ಲೆ ? ಪುಲಸ್ತ್ಯಮುನಿಯ ಈ ಮಾತನ್ನು ಕೇಳಿ ಅವನಿಗೆ ಶತ್ರುಂಜಯನು ದಂಡಾಕಾರವಾಗಿ ಭೂಮಿಯಲ್ಲಿ ಪ್ರಣಾಮವನ್ನು ಮಾಡಿ, ಅವನಿಗೆ ಕುಬೇರನನ್ನು ಸಮರ್ಪಿಸಿ ಶೀಘ್ರವಾಗಿ ಹಿಂತಿರುಗಿದನು. ಹೀಗೆಯೇ ಅಲ್ಲಿ ವೀರಭಾನುವು ಜಯಂತ

ಲೋಕಾನ್ ವಿಸ್ಮಾಪಯಾಮಾಸತುಃ ಸ್ವಕೌಶಲಕರ್ಮಭಿಃ ।
ಖಡ್ಗಯುದ್ಧಂ ಸಮಾಸಾದ್ಯ ಜಯಂತೋ ವೀರಭಾನುನಾ ॥೭೫॥

ಬಲಿನಾ ತಾಡಿತೋ ಮೂರ್ಧ್ನಿ ನ್ಯಪತತ್ಸ್ಯಂದನೋಪರಿ ।
ಸಾರಥಿಃ ಪತಿತಂ ದೃಷ್ಟ್ವಾ ಜಯಂತಂ ತಮುಪಾಽವಹತ್ ॥೭೬॥

ಶತ್ರುಹಾ ವರುಣೇನಾಽಥೋ ಯುಯೋಧಾಽತಿ ಬಲೀಯಸಾ ।
ಶಸ್ತ್ರೈರಸ್ತ್ರೈರ್ಬಹುವಿಧೈಃ ಶಂಸನೀಯ ಪರಾಕ್ರಮಃ ॥೭೭॥

ವರುಣೋ ಮಕರಾರೂಢಃ ಶತ್ರುಹಾ ರಥಮಾಸ್ಥಿತಃ ।
ವಿಚಿತ್ರಂ ಯುದ್ಧಂ ಚಕ್ರಾತೇ ಲೋಕವಿಸ್ಮಾಪನಂ ಮಹತ್ ॥೭೮॥

ಶತ್ರುಹಾ ವರುಣೇನೈವಂ ಸುಸಂಯುಧ್ಯಾಽ ಚಿರಂ ತತಃ ।
ತ್ರಿಭಿಃ ಶರೈಃ ಸುನಿಶಿತೈ ರ್ಹೃದಿ ವಿವ್ಯಾಧ ತೋಯಪಂ ॥೭೯॥

ನೊಂದಿಗೆ ಯುದ್ಧಮಾಡಿದನು. ಅನೇಕ ಶಸ್ತ್ರಾಸ್ತ್ರಕುಶಲರಾದ ಅವರಿಬ್ಬರೂ ಬಹಳ ಕಾಲ ಯುದ್ಧಮಾಡಿದರು. ॥೭೨-೭೩-೭೪॥

ಇವರಿಬ್ಬರೂ ತಮ್ಮ ತಮ್ಮ ಯುದ್ಧಕೌಶಲವನ್ನು ತೋರ್ಪಡಿಸುವುದರಿಂದ ಜನರೆಲ್ಲರಿಗೂ ಅತ್ಯಾಶ್ಚರ್ಯವನ್ನುಂಟುಮಾಡಿದರು. ಅನಂತರ ಜಯಂತನು ವೀರಭಾನುವಿನೊಂದಿಗೆ ಕತ್ತಿಯುದ್ಧವನ್ನು ಆರಂಭಿಸಿದನು. ಆದರೆ ಬಲಿಷ್ಠನಾದ ವೀರಭಾನುವು ಜಯಂತನ ತಲೆಗೆ ಕತ್ತಿಯಿಂದ ಹೊಡೆಯಲಾಗಿ ಅವನು ರಥದಲ್ಲಿ ಬಿದ್ದುಬಿಟ್ಟನು. ಹೀಗೆ ಬಿದ್ದ ಜಯಂತನನ್ನು ನೋಡಿ ಅವನ ಸಾರಥಿಯು ಅವನನ್ನು ಬೇರೆಕಡೆಗೆ ಒಯ್ದನು. ಅನಂತರ ಶತ್ರುಘ್ನನು ಅತಿ ಬಲಿಷ್ಠನಾದ ವರುಣನೊಂದಿಗೆ ಅನೇಕ ವಿಧವಾದ ಶಸ್ತ್ರಾಸ್ತ್ರಗಳಿಂದ ಪ್ರಶಂಸೆಗೆ ಯೋಗ್ಯವಾದ ಪರಾಕ್ರಮವುಳ್ಳವನಾಗಿ ಯುದ್ಧಮಾಡಿದನು. ॥೭೫-೭೬-೭೭॥

ವರುಣನು ಮೊಸಳೆಯ ಮೇಲೆಯೂ ಶತ್ರುಘ್ನನು ರಥದ ಮೇಲೆಯೂ, ಕುಳಿತು ಆಶ್ಚರ್ಯಕರವಾದ ರೀತಿಯಲ್ಲಿ ಮಹಾಯುದ್ಧವನ್ನು ಮಾಡಿದರು. ಶತ್ರುಘ್ನನು ವರುಣನ ಜೊತೆಯಲ್ಲಿ ಬಹಳ ಹೊತ್ತು ಯುದ್ಧಮಾಡಿ ಅನಂತರ ಬಹಳ ತೀಕ್ಷ್ಣಗಳಾದ ಬಾಣಗಳನ್ನು ವರುಣನ ಹೃದಯಕ್ಕೆ ಪ್ರಯೋಗಿಸಿದನು. ಹೀಗೆ ಮೂರು

ತ್ರಿಭಿಃ ಶರೈರ್ಗಾಢವಿದ್ಧೋ ವರುಣಃ ಕ್ರೋಧಮೂಯಯೌ ।
ಚತುರ್ಭಿರ್ನಿಶಿತೈರ್ಭಲ್ಲೈಶ್ಚತುರಸ್ತಸ್ಯ ವಾಜಿನಃ ॥೮೦॥

ನಿಹತ್ಯ ಧ್ವಜಮೇಕೇನ ಯಂತಾರಂ ಚೈಕಪತ್ರಿಣಾ ।
ಹತ್ವಾ ಕರ್ಣಾಂತಪೂರ್ಣೇನ ವಿವ್ಯಾಧ ನಿಟಲೇ ತದಾ ॥೮೧॥

ಶತ್ರುಹಾ ಹತಕೇತ್ವಶ್ವ ಸಾರಥಿರ್ಗಾಢ ಮನ್ಯುನಾ ।
ವಾರುಣಂ ಮಕರಂ ತೀಕ್ಷ್ಣಕರ್ಣಿನಾ ಮೂರ್ಧ್ನ್ಯತಾಡಯತ್ ॥೮೨॥

ಅನ್ಯೇನ ಚಾಪಂ ಚಿಚ್ಛೇದ ಕಿರೀಟಮಪರೇಷುಣಾ ।
ಆಕರ್ಣಾಕೃಷ್ಟ ಬಾಣೇನ ವಿವ್ಯಾಧ ನಿಟಲಂ ತದಾ ॥೮೩॥

ತೀಕ್ಷ್ಣಬಾಣ ವಿನಿರ್ಭಿನ್ನ ಫಾಲದೇಶಾಜ್ಜಲೇಶಿತುಃ ।
ಅಸೃಗ್ಧಾರಾತಿವೇಗೇನ ನಿರಗಾತ್ಸೋಽಪಿ ಮೂರ್ಛಿತಃ ॥೮೪॥

ಶುಶುಭೇಽಸೃಗ್ಧಾರಯಾ ಸ ಫಾಲನಿರ್ಗತಯಾ ತದಾ ।
ಶೈಲೇಶ ಇವ ಶೃಂಗೋದ್ಯಚ್ಛೋಣತೋಯಝರಾವೃತಃ ॥೮೫॥

ಬಾಣಗಳು ನಾಟಿದ್ದರಿಂದ ವರುಣನು ಬಹಳ ಕೋಪಗೊಂಡನು. ಆಗ ವರುಣನು ನಾಲ್ಕು ತೀಕ್ಷ್ಣಗಳಾದ ಭರ್ಜಿಗಳಿಂದ ಶತ್ರುಘ್ನನ ಕುದುರೆಗಳನ್ನು ಚುಚ್ಚಿದನು. ||೭೮-೭೯-೮೦||

ವರುಣನು ಒಂದು ತೀಕ್ಷ್ಣವಾದ ಬಾಣವನ್ನು ಪ್ರಯೋಗಿಸಿ ಶತ್ರುಘ್ನನ ರಥ ಬಾವುಟಗಳನ್ನೂ ಇನ್ನೊಂದು ಬಾಣದಿಂದ ಸಾರಥಿಯನ್ನೂ ನಾಶಮಾಡಿ ಕಿವಿಯ ವರೆಗೂ ಎಳೆದು ಬಿಟ್ಟ ಬಾಣವನ್ನು ಅವನ ಹೃದಯಕ್ಕೆ ಹೊಡೆದನು. ಶತ್ರುಘ್ನನು ತನ್ನ ಬಾವುಟ, ಕುದುರೆಗಳು, ಸಾರಥಿ ಇವೆಲ್ಲವೂ ನಾಶವಾದುದನ್ನು ನೋಡಿ, ಅತ್ಯಂತ ಕೋಪಾವಿಷ್ಟನಾಗಿ ವರುಣನಿಗೆ ವಾಹನವಾದ ಮೊಸಳೆಯನ್ನು ತೀಕ್ಷ್ಣವಾದ ಬಾಣ ದಿಂದ ಅದರಮೇಲೆ ಗುರಿಯಿಟ್ಟು ಹೊಡೆದನು. ಇವನು ಬೇರೊಂದು ಬಾಣದಿಂದ ಅವನ ಕಿರೀಟಕ್ಕೂ, ಕಿವಿಯವರೆಗೂ ಎಳೆದು ಬಿಟ್ಟ ಬೇರೊಂದು ಬಾಣದಿಂದ ಆವನ ಹಣೆಗೂ ಹೊಡೆದನು. ||೮೧-೮೨-೮೩||

ತೀಕ್ಷ್ಣವಾದ ಬಾಣದಿಂದ ಭೇದಿಸಲ್ಪಟ್ಟ ವರುಣನ ಹಣೆಯ ಪ್ರದೇಶದಿಂದ ರಕ್ತದ ಪ್ರವಾಹವೇ ಬಹಳ ವೇಗವಾಗಿ ಹರಿಯಿತು. ಅಲ್ಲದೇ ಅವನೂ ಮೂರ್ಛೆ

ಅಥ ಪ್ರಜ್ಞಾಂ ಸಮಾಸಾದ್ಯ ಕ್ರೋಧೇನ ವರುಣೋ ರುಷಾ ।
ಬಬಂಧ ನಿಜಪಾಶೇನಾಽಮೋಘೇನ ಬಲಿನಂ ಬಲಾತ್ ॥೮೬॥

ತದಾ ದೃಷ್ಟ್ವಾ ಶತ್ರುಹಣಂ ಬದ್ಧಂ ಸಮರತಾಪನಃ ।
ನೀಯಮಾನಂ ಜಲೇಶೇನ ರುರೋಧ ಪಥಿ ಸಾಯಕೈಃ ॥೮೭॥

ವರುಣೋ ಬಲವಾನ್ ತೇನ ಯುಯೋಧ ಸುಚಿರಂ ತದಾ।
ಬದ್ಧಂ ಶತ್ರುಹಣಂ ಚಾಪಂ(ಚ)ಗೃಹೀತ್ವಾ ಶಸ್ತ್ರಕೋವಿದಃ ॥೮೮॥

ತಸ್ಯಾಽಪಿ ನಿಶಿತೈರ್ಬಾಣೈಃ ಸಾರಥಿಂ ರಥವಾಜಿನಃ ।
ನಿಹತ್ಯ ಛಿತ್ವಾ ತಚ್ಚಾಪಂ ವರುಣಃ ಪ್ರಯಯೌ ಜವಾತ್ ॥೮೯॥

ತದಾ ಖಡ್ಗಂ ಸಮಾದಾಯ ಗತ್ವಾ ಸಮರತಾಪನಃ ।
ವರುಣಂ ನಿಜಘಾನಾಽಶು ಮೂರ್ಧ್ನಿ ತೀಕ್ಷ್ಣಾಽಸಿನಾ ಸ ಚ ॥೯೦॥

ಹೊಂದಿದನು. ಆಗ ಹಣೆಯಿಂದ ಹೊರಟು ಸುರಿಯುತ್ತಿರುವ ರಕ್ತದ ಪ್ರವಾಹದಿಂದ ವರುಣನು ಶಿಖರದಮೇಲೆ ಹರಿಯುವ ಕೆಂಪಾದ ನೀರಿನ ಪ್ರವಾಹದಿಂದ ಕೂಡಿದ ಹಿಮವತ್ಪರ್ವತದಂತೆ ಪ್ರಕಾಶಿಸಿದನು. ||೮೪-೮೫||

ಅನಂತರ ವರುಣನು ಮೂರ್ಛೆಯಿಂದ ತಿಳಿದು ಕೋಪದಿಂದ ತನ್ನ ಅಮೋಘವಾದ ಪಾಶದಿಂದ ಬಲಿಷ್ಠನಾದ ಶತ್ರುಘ್ನನನ್ನು ಬಲಾತ್ಕಾರವಾಗಿ ಕಟ್ಟಿಹಾಕಿದನು. ಸಮರತಾಪನನು ವರುಣನು ಕಟ್ಟಿ ಒಯ್ಯುತ್ತಿರುವುದನ್ನು ಕಂಡು ಅವನನ್ನು ಮಾರ್ಗದಲ್ಲಿ ಬಾಣಗಳನ್ನು ಪ್ರಯೋಗಿಸಿ ತಡೆದನು. ಬಲಿಷ್ಠನಾದ ವರುಣನು ಸಮರತಾಪನನೊಂದಿಗೂ ಯುದ್ಧಮಾಡಿದನು. ಆಗ ಕಟ್ಟಲ್ಪಟ್ಟಿದ್ದ ಶತ್ರುಘ್ನನನ್ನೂ, ಧನುಸ್ಸನ್ನೂ ಶಸ್ತ್ರವಿದ್ಯಾನಿಪುಣನಾದ ವರುಣನು ತೆಗೆದುಕೊಂಡು ಸಮರತಾಪನನ ಸಾರಥಿ, ರಥ, ಕುದುರೆಗಳು ಇವೆಲ್ಲವನ್ನೂ ತೀಕ್ಷ್ಣಬಾಣಪ್ರಯೋಗದಿಂದ ಕತ್ತರಿಸಿ ನಾಶಮಾಡಿ, ವೇಗವಾಗಿ ಹೊರಟುಹೋದನು. ||೮೬-೮೭-೮೮-೮೯||

ಆಗ ಸಮರತಾಪನನು ಖಡ್ಗವನ್ನು ಎತ್ತಿಕೊಂಡು ಹೋಗಿ ವರುಣನ ತಲೆಗೆ ಅದರಿಂದಲೂ ಮತ್ತು ತೀಕ್ಷ್ಣವಾದ ಕತ್ತಿಯಿಂದಲೂ ಶೀಘ್ರವಾಗಿ ಹೊಡೆದನು. ಸಮರತಾಪನನ ಖಡ್ಗಪ್ರಹಾರದಿಂದ ವರುಣನ ತಲೆಯು ಭಿನ್ನವಾಗಿ, ಕತ್ತರಿಸಲ್ಪಟ್ಟ ರೆಕ್ಕೆಯುಳ್ಳ ಪರ್ವತದಂತೆ ಅವನು ಮೂರ್ಛಿತನಾಗಿ ಕೆಳಗೆಬಿದ್ದನು. ಈ ಸಂದರ್ಭ

ತೇನ ಖಡ್ಗಪ್ರಹಾರೇಣ ಭಿನ್ನಮೂರ್ಧಾ ಜಲೇಶ್ವರಃ ।
ಮೂರ್ಛಿತಃ ಪತಿತೋ ಭೂಮೌ ಕೃತ್ತಪಕ್ಷ ಮಹೀಧ್ರವತ್ ॥೯೧॥

ತದಂತರೇ ತು ವರುಣಂ ಬದ್ಧ್ವಾ ಸಮರತಾಪನಃ ।
ನೇತುಂ ಸಮೀಹತೇ ಯದಾ ತದಾ ವೈ ಸರ್ವತೋ ಯಮಃ ॥೯೨॥

ಮಹಾಮಹಿಷ ಸಂರೂಢೋ ಯೋದ್ಧುಂ ಸಮರತಾಪನಂ ।
ಆಯಯೌ ಭಿನ್ನ ನೀಲಾಽದ್ರಿ ಪ್ರತಿಮೋ ಮೃತ್ಯುನಾಽವೃತಃ ॥೯೩॥

ರೋಗೈರ್ದೂತೈಶ್ಚ ಸಹಿತೋ ವಿಕೃತಾಽಸ್ಯಾಂಗಬಾಹುಭಿಃ ।
ಆಯಾಂತಂ ಸಮ್ಮುಖೇ ದೃಷ್ಟ್ವಾ ಭೀಮಂ ಭೀಮಗಣೈರ್ವೃತಂ ॥೯೪॥

ಯದ್ದರ್ಶನೇನೈವ ಜನಾಃ ಸಂತ್ಯಜಂತಿ ಭಯಾದಸೂನ್ ।
ತಂ ದೃಷ್ಟ್ವಾಽಪಿ ತದಾ ಧೀರೋ ನಾಕಂಪತ ಮಹೀಧ್ರವತ್ ॥೯೫॥

ಯುಯೋಧಾಽನ್ಯ ರಥಾರೂಢಃ ಶಸ್ತ್ರಾಸ್ತ್ರೈರ್ವಿವಿಧೈರ್ಬಲೀ ।
ಯುದ್ಧ್ವಾ ಚಿರಂ ಯಮೋನೈವ ಮರ್ಧಚಂದ್ರೇಣ ವಕ್ಷಸಿ ॥೯೬॥

ದಲ್ಲಿ ಸಮರತಾಪನನು ವರುಣನನ್ನು ಕಟ್ಟಿಹಾಕಿ ಒಯ್ಯಲು ಇಷ್ಟಪಡುವಷ್ಟರಲ್ಲೇ ವೈವಸ್ವತನಾದ ಯಮನು ದೊಡ್ಡ ಕೋಣನಮೇಲೇರಿ ಸೀಳಿದ ಕಪ್ಪು ಪರ್ವತಕ್ಕೆ ಸಮಾನನಾಗಿ ಮೃತ್ಯುವಿನಿಂದ ಸುತ್ತುವರಿಯಲ್ಪಟ್ಟವನಾಗಿ ಸಮರತಾಪನನೊಂದಿಗೆ ಯುದ್ಧಮಾಡಲು ಅಲ್ಲಿಗೆ ಬಂದನು. ॥೯೦-೯೧-೯೨-೯೩॥

ಯಮನು ರೋಗಗಳಿಂದಲೂ, ವಿಕಾರವಾದ ಮುಖ, ಅವಯವ, ಮತ್ತು ತೋಳುಗಳುಳ್ಳ ಯಮದೂತರಿಂದಲೂ ಸುತ್ತುವರಿಯಲ್ಪಟ್ಟು, ಭಯಂಕರವಾದ ತನ್ನ ಗುಂಪಿನವರಿಂದಲೂ ಕೂಡಿದವನಾಗಿ ಭಯಂಕರಸ್ವರೂಪದಿಂದ ಬಂದಿದ್ದನು. ಇವನನ್ನು ನೋಡಿದ ಕೂಡಲೇ ಜನಗಳು ಪ್ರಾಣಗಳನ್ನು ಬಿಡುವಷ್ಟು ಭಯಂಕರನಾಗಿ ಯಮನು ಕಾಣಿಸುತ್ತಿದ್ದನು. ಇಂತಹ ಭಯಂಕರನಾದ ಯಮನನ್ನು ನೋಡಿದಾಗ್ಯೂ ಧೀರನಾದ ಸಮರತಾಪನನು ಹೆದರದೇ ಪರ್ವತದಂತೆ ಅಚಲನಾಗಿ ನಿಂತಿದ್ದನು. ಬಲಿಷ್ಠನಾದ ಈ ರಾಜಕುಮಾರನು ಬೇರೇ ರಥವನ್ನು ಹತ್ತಿ ಅನೇಕ ವಿಧವಾದ ಶಸ್ತ್ರಗಳನ್ನು ಮತ್ತು ಅಸ್ತ್ರಗಳನ್ನು ಪ್ರಯೋಗಿಸುತ್ತಾ ಯಮನೊಂದಿಗೆ ಬಹಳ

ಆಕೃಷ್ಯ ಕರ್ಣಪರ್ಯಂತಂ ಜಘಾನ ಶಮನಸ್ಯ ವೈ ।
ತೇನಾಽಹತೋ ದಂಡಧರೋ ವಮನ್ ರಕ್ತಂ ಸುಫೇನಿಲಂ ॥೯೭॥

ಪಪಾತ ಮಹಿಷಾದ್ಭೂಮೌ ದೂತಾ ಹಾಹೇತಿ ಚುಕ್ರುಶುಃ ।
ವರುಣಂ ಪುನರಾಸಾದ್ಯ ಗಂತುಮೇವ ಮನೋ ದಧೇ ॥೯೮॥

ತದದ್ಭುತಂ ಯಮಪರಾಭವಂ ದೃಷ್ಟ್ವಾ ಸುರಾ ನರಾಃ ।
ವಿಸ್ಮಿತಾಃ ಪ್ರಶಶಂಸುಸ್ತಂ ಸರ್ವೇಽ ಸಮರತಾಪನಂ ॥೯೯॥

ತದಂತರೇ ಯಮಗಣಾ ವರುಣಸ್ಯ ಗಣಾ ಅಪಿ ।
ಆಗತ್ಯ ರೋದ್ಧುಂ ಯುಗಪತ್ಪ್ರವೃತ್ತಾಃ ಸರ್ವತೋ ದಿಶಂ ॥೧೦೦॥

ತಾನ್ ದೃಷ್ಟ್ವಾ ಪರಿತಃ ಸರ್ವಾನಸಂಖ್ಯಾತ ಗಣಾನ್ ತದಾ ।
ಗದಾಮಾದಾಯ ಮಹತೀಂ ಸರ್ವಾನೇವಾಽಭ್ಯಕಾಲಯತ್ ॥೧೦೧॥

ಕಾಲ ಯುದ್ಧಮಾಡಿದನು. ಕೊನೆಗೆ ಇವನು ಅರ್ಧಚಂದ್ರಾಕಾರವಾದ ಬಾಣವನ್ನು ಯಮನ ವಕ್ಷಸ್ಥಳಕ್ಕೆ ಗುರಿಯಿಟ್ಟು ಹೊಡೆದನು. ॥೯೪-೯೫-೯೬॥

ಸಮರತಾಪನನು ಅರ್ಧಚಂದ್ರಾಕಾರವಾದ ಬಾಣವನ್ನು ಕಿವಿಯವರೆವಿಗೂ ಎಳೆದು ಯಮನ ವಕ್ಷಸ್ಥಳಕ್ಕೆ ಹೊಡೆದನು. ಅದರಿಂದ ಯಮನು ಹೆಚ್ಚಾಗಿ ನೊರೆ ಬರುವ ರೀತಿಯಲ್ಲಿ ಬಾಯಿಂದ ರಕ್ತವನ್ನು ಕಾರಿದನು ಮತ್ತು ಇವನು ಕೋಣನ ಮೇಲಿಂದ ಕೆಳಗೆ ಬಿದ್ದುಬಿಟ್ಟನು. ಇದನ್ನು ನೋಡಿ ಯಮದೂತರೆಲ್ಲರೂ ಹಾ! ಹಾ! ಎಂದು ಕೂಗಿದರು. ಅನಂತರ ಯಮನು ವರುಣನನ್ನು ಪುನಃ ಸಮೀಪಿಸಿ ಹಿಂತಿರುಗಲು ನಿಶ್ಚಯಮಾಡಿದನು. ದೇವತೆಗಳು ಮತ್ತು ಮನುಷ್ಯರು ಇವರೆಲ್ಲರೂ ಈ ಆಶ್ಚರ್ಯಕರವಾದ ಯಮನ ಸೋಲನ್ನು ನೋಡಿ, ಬಹಳ ಆಶ್ಚರ್ಯಪಟ್ಟವರಾಗಿ ಸಮರತಾಪನನನ್ನು ವಿಶೇಷವಾಗಿ ಪ್ರಶಂಸೆಮಾಡಿದರು. ॥೯೭-೯೮-೯೯॥

ಈ ಸಂದರ್ಭದಲ್ಲಿ ಯಮನ ಗಣಗಳೂ, ವರುಣಗಣಗಳೂ, ಏಕಕಾಲದಲ್ಲಿ ಬಂದು ಎಲ್ಲಾ ಕಡೆಯಲ್ಲಿಯೂ, ಸಮರತಾಪನನನ್ನೂ ತಡೆಯಲು ಪ್ರಾರಂಭಿಸಿದರು. ಆಗ ಅಸಂಖ್ಯಾತವಾದ ಆ ಗಣಗಳು ತನ್ನನ್ನು ಸುತ್ತುಗಟ್ಟಿರುವುದನ್ನು ಸಮರತಾಪನನು ಗಮನಿಸಿ, ದೊಡ್ಡದಾದ ಗದೆಯನ್ನು ಹಿಡಿದುಕೊಂಡು ಅವರನ್ನೆಲ್ಲರನ್ನೂ

ತೇ ಕಾಲ್ಯಮಾನಾ ಬಹುಧಾ ನ ನ್ಯವರ್ತಂತ ವೈ ಯದಾ ।
ವಾಯವ್ಯಾಸ್ತ್ರೇಣ ವರುಣಗಣಂ ತೂರ್ಣಮಪಾಕರೋತ್ ॥೧೦೨॥

ಗಣಂ ಯಾಮ್ಯ ಮಥಾಗ್ನೇಯಾಸ್ತ್ರೇಣ ಹತ್ವಾ ತದಾ ಪುನಃ ।
ಗಂತುಂ ಮನೋ ದಧೇ ಯಾವತ್ತಾವದ್ರೋಗಾಸ್ಸಹಸ್ರಶಃ ॥೧೦೩॥

ಪರಿವಾರ್ಯ ವಿಲೋಪ್ತುಂ ತಂ ಯದಾ ಸಮರತಾಪನಂ ।
ಉದ್ಯಯುಸ್ತಾವದೇವಾಯಂ ಮತ್ವಾಽನ್ಯಾಸ್ತ್ರೈಃ ಸುನಿರ್ಗತಾನ್ ॥೧೦೪॥

ನಾಮತ್ರಯಾಸ್ತ್ರಮಾಸಾದ್ಯ ರೋಗಾನ್ಪ್ರತಿ ಸಮುತ್ಸೃಜತ್ ।
ತದಸ್ತ್ರೋತ್ಸರ್ಗ ಮಾತ್ರೇಣ ಕ್ಷಣಾದೇವಾಖಿಲಾಮಯಾಃ ॥೧೦೫॥

ಮಹಾವಾತೇನ ಜಲದಾ ಇವ ನಿಶ್ಶೇಷತಾಂ ಯಯುಃ ।
ತದಂತರೇ ಮಹಾಕಾಲ ಮಹಿಷೋ ಯಮವಾಹನಃ ॥೧೦೬॥

ಹೊಡೆದೋಡಿಸಲು ಪ್ರಾರಂಭಿಸಿದನು. ಹೀಗೆ ಹೊಡೆದೋಡಿಸುತ್ತಿದ್ದರೂ ಆ ಗಣಗಳು ಹಿಂತಿರುಗದೇ ಇರುವುದನ್ನು ನೋಡಿ ಸಮರತಾಪನನು ವಾಯವ್ಯಾಸ್ತ್ರವನ್ನು ಪ್ರಯೋಗಿಸಿ ವರುಣನ ಗಣಗಳನ್ನೂ ಶೀಘ್ರವಾಗಿ ಹಿಂದಕ್ಕೆ ಅಟ್ಟಿಬಿಟ್ಟನು. ||೧೧-೧೦೨||

ಅನಂತರ ಸಮರತಾಪನನು ಆಗ್ನೇಯಾಸ್ತ್ರವನ್ನು ಯಮನ ಗಣಗಳಿಗೆ ಪ್ರಯೋಗಿಸಿ ಹೊಡೆದೋಡಿಸಿ ಹಿಂತಿರುಗಲು ಇಷ್ಟಪಡುವಷ್ಟರಲ್ಲೇ ಸಾವಿರಾರು ರೋಗಗಳು ಇವನನ್ನು ಮುತ್ತಿಕೊಂಡು ನಾಶಮಾಡಲು ಹೊರಟವು. ಇವನ್ನು ನಾಶಮಾಡಲು ಬೇರೆ ಅಸ್ತ್ರವಿಲ್ಲವೆಂಬುದನ್ನೂ ಅವು ಉಪಯೋಗವಿಲ್ಲದವೆಂದೂ ತಿಳಿದು ಸಮರತಾಪನನು ನಾಮತ್ರಯಾಸ್ತ್ರಗಳನ್ನೇ ಪ್ರಯೋಗಿಸಿದನು. ಇವನು ಈ ಅಸ್ತ್ರಪ್ರಯೋಗವನ್ನು ಮಾಡಿದ ಕೂಡಲೇ ಸಮಸ್ತ ರೋಗಗಳೂ ನಾಶವಾದವು. ೧೦೩-೧೦೪-೧೦೫||

ಸಮರತಾಪನನ ನಾಮತ್ರಯಾಸ್ತ್ರಪ್ರಯೋಗಮಾತ್ರದಿಂದಲೇ ಕ್ಷಣಕಾಲದಲ್ಲಿ ಸಕಲ ರೋಗಗಳೂ, ದೊಡ್ಡ ಗಾಳಿಗಳಿಂದ ಮೋಡಗಳಂತೆ, ನಿಶ್ಶೇಷವಾಗಿ ನಷ್ಟವಾದವು. ಈ ಸಂದರ್ಭದಲ್ಲಿ ಯಮನ ವಾಹನವಾದ ಮಹಾಕಾಲನೆಂಬ ಕೋಣವು ಕೋಪಗೊಂಡು ನಿಟ್ಟುಸಿರುಬಿಡುತ್ತಾ ಸಮರತಾಪನನನ್ನು ಕೊಲ್ಲಲು ಹೋಯಿತು.

ಕ್ರುದ್ಧೋ ವಿನಿಶ್ವಸನ್ ಹಂತುಂ ಪ್ರಾಗಾತ್ಸಮರತಾಪನಂ ।
ಖುರೈರ್ವಿದಾರಯನ್ ಪೃಥ್ವೀಂ ಶಕೃನ್ಮೂತ್ರಮವಾಽಸೃಜತ್ ॥೧೧೭॥

ಲಾಂಗೂಲ ಮುನ್ನಯನ್ಮರ್ದನ್ ನದನ್ ಜಾತಿರವಂ ತದಾ ।
ಆಯಾಂತಂ ವೀಕ್ಷ್ಯ ಮಹಿಷಮಗ್ರೇ ಸಮರತಾಪನಃ ॥೧೧೮॥

ಪಶೌ ಶಸ್ತ್ರೇಣ ಕಿಮಿತಿ ತ್ಯಕ್ತ್ವಾ ಶಸ್ತ್ರಮಶೇಷತಃ ।
ಮುಷ್ಟಿನಾ ಪ್ರಾಹರನ್ಮೂರ್ಧ್ನಿ ಬಲವಾನ್ ಬಲವತ್ತರಂ ॥೧೧೯॥

ತೇನ ಮುಷ್ಟಿಪ್ರಹಾರೇಣ ಭಿನ್ನಮೂರ್ಧಾ ಹ್ಯಪಾಽಸರತ್ ।
ಈಷತ್ಕಶ್ಮಲಮಾಯಾತೋ ಮಹಿಷೋಽಭ್ಯದ್ರವತ್ಪುನಃ ॥೧೧೦॥

ಅಭಿದ್ರುತ್ಯ ವಿಷಾಣಾಭ್ಯಾಂ ಹಿತ್ವಾ ಸಮರತಾಪನಂ ।
ಗೃಹೀತ್ವಾ ಶೃಂಗಯೋರ್ಮಧ್ಯೇ ಪಲಾಯನಪರೋಽಭವತ್ ॥೧೧೧॥

ತದದ್ಭುತಂ ವೀಕ್ಷ್ಯ ಸುರಾ ಜಹರ್ಷುಃ ಶತ್ರುಘಾತನಾತ್ ।
ವಿಷಣ್ಣಾ ಮನುಜಾ ಮತ್ವಾ ಹತಂ ಸಮರತಾಪನಂ ॥೧೧೨॥

ಆಗ ಕೋಣವು ತನ್ನ ಗೊರಸುಗಳಿಂದ ಭೂಮಿಯನ್ನು ಕೆರೆಯುತ್ತಾ ಸಗಣಿ ಮತ್ತು ಮೂತ್ರಗಳನ್ನು ಬಿಡುತ್ತಾ ಬಾಲವನ್ನು ಎತ್ತಿಕೊಂಡು ತನ್ನ ಜಾತಿಯ ಶಬ್ದವನ್ನು ಗಟ್ಟಿಯಾಗಿ ಮಾಡುತ್ತಾ ಮುಂದುಗಡೆಗೆ ಬಂದುದನ್ನು ಸಮರತಾಪನನು ನೋಡಿದನು. ॥೧೦೬-೧೦೭-೧೦೮॥

ಬಲಿಷ್ಠನಾದ ಸಮರತಾಪನನು ಪಶುಗಳನ್ನು ನಾಶಮಾಡಲು ಶಸ್ತ್ರಗಳು ಏಕೆ ಬೇಕೆಂದು ಶಸ್ತ್ರಗಳೆಲ್ಲವನ್ನೂ ಕೆಳಗೆಬಿಸುಟು ಬಹಳ ಗಟ್ಟಿಯಾಗಿ ಅದರ ತಲೆಗೆ ಮುಷ್ಟಿಯಿಂದ ಪ್ರಹಾರಮಾಡಿದನು. ಇವನ ಮುಷ್ಟಿಪ್ರಹಾರದಿಂದ ಕೋಣನ ತಲೆಗೆ ತುಂಬಾ ಪೆಟ್ಟುಬಿದ್ದು ಅದು ಹಿಂದಕ್ಕೆ ಹೊರಟುಹೋಯಿತು. ಆದರೆ ಸ್ವಲ್ಪ ಹೊತ್ತು ಜ್ಞಾನತಪ್ಪಿ ಕೆಳಗೆ ಬಿದ್ದಿದ್ದು ಪುನಃ ಕೋಣನು ಇವನಿದ್ದ ಕಡೆಗೆ ಓಡಿ ಬಂದು ತನ್ನ ಕೊಂಬುಗಳಿಂದ ಸಮರತಾಪನನನ್ನು ಕೆಳಭಾಗದಿಂದ ಮೇಲೆತ್ತಿಕೊಂಡು ಕೊಂಬುಗಳ ಮಧ್ಯಭಾಗಕ್ಕೆ ಸಿಕ್ಕಿಸಿಕೊಂಡು ಪಲಾಯನಮಾಡಲಾರಂಭಿಸಿತು. ॥೧೦೯-೧೧೦-೧೧೧॥

ಹೀಗೆ ಕೋಣನು ಆಶ್ಚರ್ಯಕರವಾದ ರೀತಿಯಲ್ಲಿ ಸಮರತಾಪನನನ್ನು ಎತ್ತಿ

ತತಃ ಪ್ರಜ್ಞಾಂ ಸಮಾಸಾದ್ಯ ಪೃಷ್ಠಮಾರುಹ್ಯ ಸತ್ವರಂ।
ಮಹಿಷಸ್ಯಾಹನತ್ಪೃಷ್ಠಂ ತಲಾಭ್ಯಾಂ ಬಲವದ್ರುಷಾ ॥೧೧೩॥

ತಲಪ್ರಹಾರಾಭಿಹತಂ ಪೃಷ್ಠಂ ತಸ್ಯ ವಿದೀರ್ಯತ।
ವಿದೀರ್ಣಪೃಷ್ಠಃ ಪತಿತೋ ಮೃತವನ್ನಿರ್ಗತೇಕ್ಷಣಃ ॥೧೧೪॥

ನಿರ್ಯಾತಿತ ಬಹಿರ್ಜಿಹ್ವೋ ಘುರ್ಘುರಾರಾವ ಸಂಯುತಃ।
ಮೂರ್ಛಾ ವಿಮುಕ್ತಃ ಪ್ರೇತೇಶಸ್ತದ್ದೃಷ್ಟ್ವಾತಿರುಷಾನ್ವಿತಃ ॥೧೧೫॥

ಉದ್ಯಮ್ಯ ಕಾಲದಂಡಂ ತಂ ಹಂತುಂ ಸಮರತಾಪನಂ।
ಯಯೌ ಯದಾ ತದಾ ದೃಷ್ಟ್ವಾ ಸುಧೃತಿಃ ಸಮಚಿಂತಯತ್ ॥೧೧೬॥

ಅಮೋಘಃ ಕಾಲದಂಡೋಽಯಂ ಪ್ರಾಪ್ತಃ ಸಮರತಾಪನಂ।
ಭಸ್ಮೀಕುರ್ಯಾನ್ನ ಸಂದೇಹಃ ಕಿಂ ಕೃತ್ವಾ ನಃ ಶುಭಂ ಭವೇತ್ ॥೧೧೭॥

ಕೊಂಡಿದ್ದುದನ್ನು ಕಂಡು ಶತ್ರುವಿನಾಶವಾಯಿತೆಂದು ದೇವತೆಗಳು ತಿಳಿದು ಅತ್ಯಂತವಾಗಿ ಸಂತೋಷಪಟ್ಟರು. ಆದರೆ ಮನುಷ್ಯರು ಸಮರತಾಪನನ ವಿನಾಶವಾಗುವುದೋ ಏನೋ ಎಂಬ ಭಯದಿಂದ ಬಹಳ ವ್ಯಥೆಗೊಂಡರು. ಆದರೆ ಸಮರತಾಪನನು ಸ್ವಲ್ಪಹೊತ್ತಿನಲ್ಲೇ ಚೈತನ್ಯವನ್ನು ಹೊಂದಿ ಶೀಘ್ರವಾಗಿ ಅದರ ಬೆನ್ನಿನಮೇಲೇರಿ ಬಹಳ ಕೋಪದಿಂದ ತನ್ನ ಹಸ್ತತಲಗಳಿಂದ ಅದರ ಪೃಷ್ಠಭಾಗವನ್ನು ಬಲವಾಗಿ ಗುದ್ದರಿಸಿದನು. ಇವನ ಹಸ್ತತಲಪ್ರದೇಶದಿಂದ ಗುದ್ದರಿಸಲ್ಪಟ್ಟ ಅದರ ಪೃಷ್ಠಭಾಗವು ಸೀಳಿತು. ಆದ್ದರಿಂದ ಕಣ್ಣನ್ನು ಮೇಲಕ್ಕೆ ಮಾಡಿಕೊಂಡು ಮೃತವಾದಂತೆ ಕೋಣವು ಕೆಳಗೆ ಬಿದ್ದಿತು. ||೧೧೨-೧೧೩-೧೧೪||

ಸ್ವಲ್ಪ ಹೊತ್ತಿನಮೇಲೆ ನಾಲಗೆಯನ್ನು ಹೊರಕ್ಕೆ ಚಾಚಿ ಘರ್, ಘರ್, ಎಂದು ಬಾಯಲ್ಲಿ ಶಬ್ದಮಾಡುತ್ತಾ ಕೋಣನು ಮೂರ್ಛೆಯನ್ನು ತಿಳಿದೆದ್ದಿತು. ಯಮನು ತನ್ನ ವಾಹನಕ್ಕೆ ಇಂತಹ ದುರವಸ್ಥೆ ಬಂದುದನ್ನು ಕಂಡು ಬಹಳ ಕೋಪಾವಿಷ್ಟನಾಗಿ ತನ್ನ ಕಾಲದಂಡವನ್ನೇ ಎತ್ತಿ ಸಮರತಾಪನನನ್ನು ನಾಶಮಾಡಲು ಹೊರಟನು. ಇದನ್ನು ನೋಡಿ ಸುಧೃತಿಯು ಕಾಲದಂಡವು ಅಮೋಘವಾದುದು. ಇದು ಸಮರತಾಪನನನ್ನು ಭಸ್ಮಮಾಡುವುದರಲ್ಲಿ ಸಂದೇಹವಿಲ್ಲ. ಆದ್ದರಿಂದ ಈಗ ನಮಗೆ ಮಂಗಳವನ್ನುಂಟುಮಾಡುವ ಬಗೆಯಾವುದು? ಎಂದು ಆಲೋಚಿಸ ತೊಡಗಿದನು. ||೧೧೫-೧೧೬-೧೧೭||

ಏವಂ ವಿಮೃಶ್ಯ ಮನಸಿ ಯಯೌ ಶೀಘ್ರಂ ಯಮಾಂತಿಕಂ ।
ತಿಷ್ಠ ಕ್ವ ಗಚ್ಛಸೀ ತ್ಯುಕ್ತ್ವಾ ಯಮಂ ಗಜವರಸ್ಥಿತಃ ॥೧೧೮॥

ತೀಕ್ಷ್ಣೇನಾಽಕರ್ಣಕೃಷ್ಟೇನ ಭಲ್ಲೇನ ಸಮತಾಡಯತ್ ।
ದಂಡೋದ್ಯತೇ ಸವ್ಯಭುಜೇ ತತಸ್ತೇನೈವ ಮಾಹತಾತ್ ॥೧೧೯॥

ಕರಾಚ್ಚ್ಯುತಃ ಕಾಲದಂಡಃ ನಿಪಪಾತ ಮಹೀತಲೇ ।
ಪುನರ್ದಂಡಂ ಸಮಾದಾತುಂ ಯಮೋ ಯಾವತ್ಸಮಾಗತಃ ॥೧೨೦॥

ಸುಧೃತಿ ಸ್ತಾವದನ್ಯೇನ ಭಲ್ಲೇನ ಯಮಮೂರ್ಧನಿ ।
ಜಘಾನ ತೇನ ಭಲ್ಲೇನ ಭಗ್ನಮೂರ್ಧಾ ಪಪಾತ ಹ ॥೧೨೧॥

ತತ್ಕರ್ಮಾಽತ್ಯದ್ಭುತಂ ದೃಷ್ಟ್ವಾ ಶಶಂಸುರ್ನಿರ್ಜರಾ ನರಾಃ ।
ಸಾಧು ಶಬ್ದೇನ ಮಹತಾ ತದಾ ವೈ ಮೇಘವಾಹನಃ ॥೧೨೨॥

ದೃಷ್ಟ್ವಾಽತಿ ಮಾನುಷಂ ತಸ್ಯ ಸುಧೃತೇರ್ವಿಕ್ರಮಂ ಜವಾತ್ ।
ಐರಾವತ ಸಮಾರೂಢಃ ಪ್ರಾಯಾದ್ಯೋದ್ಧುಂ ಶತಕ್ರತುಃ ॥೧೨೩॥

ಇತಿ ಶ್ರೀ ತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ
ಸಪ್ತದಶೋಽಧ್ಯಾಯಃ

ಹೀಗೆ ಸುಧೃತಿಯು ಮನಸ್ಸಿನಲ್ಲಿಯೇ ಆಲೋಚಿಸಿ ಶೀಘ್ರವಾಗಿ ಯಮನ ಸಮೀಪಕ್ಕೆ ಹೋದನು. ನಿಲ್ಲು ನಿಲ್ಲು ಎಲ್ಲಿ ಹೋಗುತ್ತೀಯೆ? ಎಂದು ಹೇಳುತ್ತಾ ಆನೆಯಮೇಲೇರಿದ್ದ ಸುಧೃತಿಯು ಕಿವಿಯವರೆಗೂ ಎಳೆದು ತೀಕ್ಷ್ಣವಾದ ಭರ್ಜಿಯನ್ನು ಯಮನಿಗೆ ಪ್ರಯೋಗಿಸಿದನು. ಆ ಕಾಲದಂಡವನ್ನು ಎತ್ತಿಹಿಡಿದಿದ್ದ ಯಮನ ಬಲಗೈಗೆ ಹೀಗೆ ಭರ್ಜಿಯ ಪೆಟ್ಟು ಬಿದ್ದುದರಿಂದ ಅವನ ಕೈಯಿಂದ ಕಾಲದಂಡವು ಕಳಚಿಕೊಂಡು ಭೂಮಿಗೆ ಬಿದ್ದಿತು. ಯಮನು ಬಿದ್ದ ಕಾಲದಂಡವನ್ನು ಕೈಗೆ ತೆಗೆದುಕೊಳ್ಳಲು ಹೊರಟನು. ||೧೧೮-೧೧೯-೧೨೦||

ಅಷ್ಟರೊಳಗೆ ಸುಧೃತಿಯು ಇನ್ನೊಂದು ಭರ್ಜಿಯಿಂದ ಯಮನ ತಲೆಗೆ ಹೊಡೆದನು. ಇದರಿಂದ ಯಮನ ಶಿರಸ್ಸು ಭಗ್ನವಾಗಿ ಕೆಳಗೆ ಬಿದ್ದುಬಿಟ್ಟನು. ದೇವತೆಗಳೂ, ಮನುಷ್ಯರೂ, ಇವರೆಲ್ಲರೂ ಈ ಸುಧೃತಿಯ ಅದ್ಭುತ ಕರ್ಮವನ್ನು

ನೋಡಿ ಅವನನ್ನು ಬಹಳ ಪ್ರಶಂಸೆಮಾಡಿದರು. ಇಂದ್ರನು ಭೇಷ್ ಎಂದು ಗಟ್ಟಿಯಾಗಿ ಕೂಗುತ್ತಾ ಸುಧೃತಿಯ ಅಮಾನುಷವಾದ ಪರಾಕ್ರಮವನ್ನು ಕಂಡು ಅವನೊಂದಿಗೆ ಯುದ್ಧಮಾಡಲು ಐರಾವತವನ್ನೇರಿ ಅವನಿದ್ದೆಡೆಗೆ ಹೋದನು. ||೧೨೧-೧೨೨-೧೨೩||

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಕಾಮಾಖ್ಯಾನದಲ್ಲಿ ಹದಿನೇಳನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ಅಷ್ಟಾದಶೋಽಧ್ಯಾಯಃ ||

ಹದಿನೆಂಟನೆಯ ಅಧ್ಯಾಯವು

ಸುಧೃತಿಂ ಪ್ರಾಪ್ಯ ಸಮರೇ ಗಜಸಂಸ್ಥಂ ಪುರಂದರಃ ।
ಚಿರಂ ಯುದ್ಧಂ ಸಮಕರೋತ್ತುಮುಲಂ ರೋಮಹರ್ಷಣಂ ॥೧॥

ಸುಧೃತೇರ್ಯುದ್ಧಸಾರತ್ವಂ ಸುಧೃತಿತ್ವಂ ನಿಶಾಮ್ಯ ತು ।
ಶತಕ್ರತು ರ್ವಿಸ್ಮಿತೋಽಭೂತ್ ಯುಧ್ಯಮಾನೋ ರಣಾಜಿರೇ ॥೨॥

ಶತಕ್ರತುಃ ಸಿತಶತಧಾರಾಭಿಃ ಸುಧೃತಿಂ ತದಾ ।
ವವರ್ಷ ತೋಯದ ಇವ ಮೇರು ಶೃಂಗಂ ಸುವೃಷ್ಟಿಭಿಃ ॥೩॥

ಶತಕ್ರತು ಶರಾಽಽಸಾರ ಸಂಛನ್ನಃ ಸುಧೃತಿಸ್ತದಾ ।
ನ ದಿಶೋ ನಾಽಪಿ ಚಾಽಽಕಾಶಂ ಭುವಂ ವಾ ಪಶ್ಯತಿ ಕ್ವಚಿತ್ ॥೪॥

ಇಂದ್ರನು ಆನೆಯ ಮೇಲೇರಿದ್ದ ಸುಧೃತಿಗೆ ಅಭಿಮುಖನಾಗಿ ರೋಮಾಂಚಕಾರಕವಾದ ತುಮುಲಯುದ್ಧವನ್ನು ಬಹಳ ಹೊತ್ತು ಮಾಡಿದನು. ಸುಧೃತಿಯು ಯುದ್ಧದಲ್ಲಿ ಗಟ್ಟಿಗನೆಂದೂ, ಮತ್ತು ತನ್ನ ಹೆಸರಿಗೆ ತಕ್ಕಂತೆ ಬಹಳ ಧೈರ್ಯಶಾಲಿಯೆಂದೂ ಹೇಳಿ ಅವನ ಪರಾಕ್ರಮವನ್ನು ನೋಡಿ ಅತ್ಯಂತವಾಗಿ ಆಶ್ಚರ್ಯಪಟ್ಟನು. ಇಂದ್ರನು ಸುಧೃತಿಯ ಮೇಲೆ ಬೆಳ್ಳಗಿರುವ ಬಾಣಗಳ ಸುರಿಮಳೆಯನ್ನು, ಮೇಘವು ವಿಶೇಷವಾದ ಮಳೆಯನ್ನು ಮೇರುಪರ್ವತದ ಮೇಲೆ ಸುರಿಸುವಂತೆ, ಸುರಿಸಿದನು. ||೧-೨-೩||

ಆಗ ಇಂದ್ರನ ಬಾಣಗಳೆಂಬ ಮೇಘಗಳಿಂದ ಮುಚ್ಚಲ್ಪಟ್ಟ ಸುಧೃತಿಯು ದಿಕ್ಕುಗಳನ್ನಾಗಲೀ, ಆಕಾಶವನ್ನಾಗಲೀ, ಭೂಮಿಯನ್ನಾಗಲೀ, ಹೀಗೆ ಯಾವ ಕಡೆಯಲ್ಲೂ ನೋಡಲು ಸಮರ್ಥನಾಗಲೇ ಇಲ್ಲ. ||೪||

ಏವಮಿಂದ್ರಶರಾಭ್ರೌಘೈರ್ಭಿನ್ನಂ ಸುಧೃತಿ ಪೂಷಣಂ ।
ಹಾಹೇತಿ ಚುಕ್ರುಶು ದೃಷ್ಟ್ವಾ ಮರ್ತ್ಯಸೇನಾಃ ಸಮಂತತಃ ॥೫॥

ಏತಸ್ಮಿನ್ನಂತರೇ ಶಕ್ರ ಶರವೃಷ್ಟಿಂ ಮಹಾಽಸ್ತ್ರತಃ ।
ವಿನಾಶ್ಯ ನಿರ್ಯಯೌ ಸೂರ್ಯ ಇವ ಜೀಮೂತಮಂಡಲಾತ್ ॥೬॥

ಅಥ ಸಾಯಕವೃಷ್ಟ್ಯಾಽಽಶು ದೇವೇಶಂ ಸಮವಾಕಿರತ್ ।
ತೀಕ್ಷ್ಣ ನಾರಾಚ ಜಾಲೇನ ವಿವ್ಯಾಧ ಚ ಶಚೀಪತಿಂ ॥೭॥

ಇಂದ್ರೋಽಪಿ ತಾವದೇವಾಽಶು ಶರಜಾಲಂ ಸಮಂತತಃ ।
ಚಿಚ್ಛೇದಾಸ್ತ್ರೇಣ ಮಹತಾ ವಾಯುನೇವಾಽಭ್ರಮಂಡಲಂ ॥೮॥

ಏವಂ ಕೃತಪ್ರತಿಕೃತಂ ನಿರೀಕ್ಷಂತೌ ಪರಸ್ಪರಂ ।
ಸಂಶ್ಲಾಘಂ ತೌ ಚ ಸುಧೃತಿ ದೇವೇಂದ್ರೌ ಲಾಘವಂ ಬಲಂ ॥೯॥

ತನ್ಮಧ್ಯೇ ಸುಧೃತಿಃ ಶೀಘ್ರಹಸ್ತಸ್ತೀಕ್ಷ್ಣೈಃ ಶರೈಸ್ತ್ರಿಭಿಃ ।
ಧನುರ್ನಿಷಂಗಂ ಮುಕುಟಂ ಚಿಚ್ಛೇದ ಯುಗಪದ್ದ್ರುತಂ ॥೧೦॥

ಹೀಗೆ ಇಂದ್ರನ ಬಾಣಗಳೆಂಬ ಮೇಘಗಳಿಂದ ಮುಚ್ಚಲ್ಪಟ್ಟ ಸುಧೃತಿಯೆಂಬ ಸೂರ್ಯನನ್ನು ನೋಡಿ ಮನುಷ್ಯ ಸೈನ್ಯವೆಲ್ಲವೂ ಎಲ್ಲಾ ಕಡೆಯಲ್ಲಿಯೂ ಗಟ್ಟಿಯಾಗಿ ಹಾ! ಹಾ! ಎಂದು ಕೂಗಿದವು. ಈ ಸಂದರ್ಭದಲ್ಲಿ ಸುಧೃತಿಯು ಮಹಾಸ್ತ್ರವನ್ನು ಪ್ರಯೋಗಿಸಿ, ಇಂದ್ರನ ಬಾಣಗಳೆಂಬ ಮಳೆಯನ್ನು ನಾಶಮಾಡಿ, ಮೇಘಮಂಡಲವನ್ನು ಭೇದಿಸಿ ಹೊರಡುವ ಸೂರ್ಯನಂತೆ ತೋರಿದನು. ಅನಂತರ ಇವನು ಬಾಣಗಳ ಮಳೆಯಿಂದ ದೇವೇಶನಾದ ಇಂದ್ರನನ್ನು ಮುಚ್ಚಿಹೋಗುವಂತೆ ಮಾಡಿದನು. ಅಲ್ಲದೇ ಇವನು ಹರಿತವಾದ ಬಾಣಗಳ ಸಮೂಹಗಳಿಂದ ಶಚೀಪತಿಯಾದ ಇಂದ್ರನನ್ನು ಹೊಡೆದನು. ॥೫-೬-೭॥

ಹೀಗೆ ಸುಧೃತಿ, ದೇವೇಂದ್ರರಿಬ್ಬರೂ ಪರಸ್ಪರವಾಗಿ ಪ್ರತೀಕಾರವನ್ನು ಮಾಡುವುದನ್ನು ಅನುಭವಿಸುತ್ತಾ, ಪರಸ್ಪರ ಬಲಾಬಲಗಳ ಪ್ರಶಂಸೆಗಳನ್ನೂ ಮಾಡಿಕೊಳ್ಳುತ್ತಾ ಇದ್ದರು. ಈ ಮಧ್ಯೆ ಸುಧೃತಿಯು ಮೂರು ತೀಕ್ಷ್ಣಗಳಾದ ಬಾಣಗಳನ್ನು ಬಿಟ್ಟು ಇಂದ್ರನ ಧನುಸ್ಸು, ಬತ್ತಳಿಕೆ, ಕಿರೀಟ, ಈ ಮೂರನ್ನೂ ಏಕಕಾಲದಲ್ಲಿ ಶೀಘ್ರವಾಗಿ ಕತ್ತರಿಸಿದನು. ॥೮-೯-೧೦॥

ಅಥೇಂದ್ರಃ ಶೇಖರಭ್ರಂಶಾತ್ ಕ್ರುದ್ಧಃ ಪ್ರಸ್ಫುರಿತಾಧರಃ ।
ದಧಾರಾನ್ಯತ್ಕಿರೀಟಾಗ್ರ್ಯಂ ವಿಶ್ವಕರ್ಮವಿನಿರ್ಮಿತಂ ॥೧೧॥

ತಾವತ್ತದಪಿ ವೇಗೇನ ಚಕರ್ತ ಸುಧೃತಿಃ ಶರೈಃ ।
ಪುನರನ್ಯದ್ವಿಶ್ವಕರ್ಮದತ್ತಂ ಮೂರ್ಧ್ನ್ಯಭಿಧಾರಯತ್ ॥೧೨॥

ತಾವತ್ತದಪಿ ಚಿಚ್ಛೇದ ಭೂಯೋಽನ್ಯಾನ್ಯಪಿ ಭಾರ್ಗವಃ ।
ಕಿರೀಟಾನಾಂ ಶತಂ ಚೈಕಂ ಸುಧೃತಿರ್ಲಘುವಿಕ್ರಮಃ ॥೧೩॥

ಚಿಚ್ಛೇದೈವಂ ತದಾ ದೇವರಾಜೋ ಲಜ್ಜಾಽಽನತಾಽನನಃ ।
ಕ್ರೋಧಾಗ್ನಿನಾ ಪ್ರಜ್ವಲಿತ ಐಂದ್ರಾಸ್ತ್ರಂ ಸಮವಾಸೃಜತ್ ॥೧೪॥

ಸುಧೃತಿಸ್ತರಸಾ ತಚ್ಚ ವಾಯವ್ಯಾಸ್ತ್ರೇಣ ನಾಶಯತ್ ।
ತಥಾ ದೀರ್ಘೇಣ ಭಲ್ಲೇನ ಪ್ರಾಹರಚ್ಚೇಂದ್ರವಾಹನಂ ॥೧೫॥

ಅನಂತರದಲ್ಲಿ ಇಂದ್ರನು ತನ್ನ ಕಿರೀಟವು ನಷ್ಟವಾದುದರಿಂದ ಕೋಪಗೊಂಡು ತುಟಿಗಳು ಅದುರುತ್ತಿರಲು, ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟ ಶ್ರೇಷ್ಠವಾದ ಬೇರೊಂದು ಕಿರೀಟವನ್ನು ತಲೆಯಲ್ಲಿ ಧರಿಸಿದನು. ಸುಧೃತಿಯಾದರೋ ಅದನ್ನೂ ಅಷ್ಟರಲ್ಲೇ ಶೀಘ್ರವಾಗಿ ಬಾಣಪ್ರಯೋಗಮಾಡಿ ತುಂಡರಿಸಿದನು. ಇಂದ್ರನು ಕೂಡಲೇ ಬೇರೊಂದು ವಿಶ್ವಕರ್ಮನಿಂದ ಕೊಡಲ್ಪಟ್ಟ ಕಿರೀಟವನ್ನು ಧರಿಸಿದನು. ಭೃಗುವಂಶೋತ್ಪನ್ನನೂ ಬಹಳ ಪರಾಕ್ರಮಶಾಲಿಯೂ ಆದ ಸುಧೃತಿಯು ಹೀಗೆ ಒಂದಾದಮೇಲೆ ಮತ್ತೊಂದರಂತೆ ಧರಿಸುತ್ತಿದ್ದ ಇಂದ್ರನ ನೂರು ಕಿರೀಟಗಳನ್ನೂ, ಬಹಳ ಬೇಗ ಬಾಣಪ್ರಯೋಗಗಳನ್ನು ಮಾಡುತ್ತಾ ಕತ್ತರಿಸಿ ಹಾಕಿದನು. ಆಗ ದೇವರಾಜನಾದ ಇಂದ್ರನು ನಾಚಿಕೆಯಿಂದ ಮುಖವನ್ನು ತಗ್ಗಿಸಿದವನಾಗಿ ಕೋಪ ವೆಂಬ ಬೆಂಕಿಯಿಂದ ಉರಿಯುತ್ತಾ ಐಂದ್ರಾಸ್ತ್ರವನ್ನು ಸುಧೃತಿಯಮೇಲೆ ಪ್ರಯೋಗಿಸಿದನು. ॥೧೧-೧೨-೧೩-೧೪॥

ಸುಧೃತಿಯು ಅದನ್ನು ಶೀಘ್ರವಾಗಿ ವಾಯವ್ಯಾಸ್ತ್ರದಿಂದ ನಾಶಮಾಡಿದನು. ಹಾಗೆಯೇ ಸುಧೃತಿಯು ದೀರ್ಘವಾದ ಭರ್ಜಿಯಿಂದ ಇಂದ್ರನ ವಾಹನವಾದ ಐರಾವತವೆಂಬ ಆನೆಯನ್ನು ಕುಂಭಸ್ಥಳದಲ್ಲಿ ಹೊಡೆದನು. ಆ ಆನೆಯು ಬಹಳ ಕೋಪಗೊಂಡು ಸುಧೃತಿಯ ಕೈಯ್ಯಲ್ಲಿದ್ದ ಭಲ್ಲವನ್ನು ಶೀಘ್ರವಾಗಿ ಕಸಿದುಕೊಂಡು

ಹತೋ ಭಲ್ಲೇನ ದೇವೇಂದ್ರಗಜಃ ಕುಂಭಾಂತರೇ ದೃಢಂ ।
ಕ್ರುದ್ಧಃ ಸುಧೃತಿ ಹಸ್ತಸ್ಥಂ ಚಾಪಮಾಚ್ಛಿದ್ಯ ಸತ್ವರಂ ॥೧೬॥

ಬಭಂಜ ಪಾದೇನ ತದಾ ತದದ್ಭುತಮಿವಾಽಭವತ್ ।
ಸಾಧು ಸಾಧ್ವಿತಿ ದೇವಾದ್ಯೈಃ ಶ್ಲಾಘಿತೋ ಗಜಪುಂಗವಃ ॥೧೭॥

ಸಸಾರ ಸುಧೃತಿಂ ವೇಗಾತ್ಕರೇಣಾಽದಾತು ಕಾಮುಕಃ ।
ತದಂತರೇ ತು ಸುಧೃತಿರಂಕುಶಂ ಬೃಹದಾಯಸಂ ॥೧೮॥

ಗಜರಾಜಾಯ ಚಿಕ್ಷೇಪ ಮಹಾಮಾತ್ರ ಸ್ತಮಾಚ್ಛಿನತ್ ।
ಇಂದ್ರೋಽಪಿ ಬದ್ಧಮುಕುಟಶ್ಚಿಕ್ಷೇಪ ಪರಿಘಂ ತದಾ ॥೧೯॥

ಗಜರಾಜಾಯ ಸುಧೃತೇಃ ಪರಿಘೇಣಾಽಽಹತೋ ಗಜಃ ।
ಕ್ರುದ್ಧೋಽಭಿಧಾವದಿಂದ್ರಂ ಸ ಮುಸಲಾತ್ತ ಕರಃ ಕರೀ ॥೨೦॥

ತಾವದ್ವಜ್ರೇಣಾಽಭಿಹತೋ ಮಮಾರ ಸುಧೃತೇ ರ್ಗಜಃ ।
ತತಃ ಸ್ಯಂದನಮಾಸ್ಥಾಯ ಸುಧೃತಿರ್ಲಘುವಿಕ್ರಮಃ ॥೨೧॥

ಅದನ್ನು ಕಾಲಿನಿಂದ ತುಳಿದುಕೊಂಡು ಮುರಿದು ಹಾಕಿದುದನ್ನು ನೋಡಿ ಅಲ್ಲಿದ್ದವರೆಲ್ಲರೂ ಆಶ್ಚರ್ಯಪಟ್ಟರು. ದೇವತೆಗಳೆಲ್ಲರೂ ಗಜಶ್ರೇಷ್ಠವಾದ ಐರಾವತವನ್ನೂ ಭಲಾ, ಭೇಷ್, ಎನ್ನುತ್ತಾ ಶ್ಲಾಘಿಸಿದರು. ||೧೫-೧೬-೧೭||

ಅಲ್ಲದೇ ಆ ಆನೆಯು ಸುಧೃತಿಯನ್ನು ಸೊಂಡಲಿನಿಂದ ಎತ್ತಿಕೊಳ್ಳಲು ಇಷ್ಟಪಟ್ಟು ವೇಗವಾಗಿ ಅವನ ಕಡೆಗೆ ಹೋಯಿತು. ಈ ಸಂದರ್ಭದಲ್ಲಿ ಸುಧೃತಿಯು ದೊಡ್ಡ ಕಬ್ಬಿಣದ ಅಂಕುಶವನ್ನು ಗಜರಾಜನಮೇಲೆ ಪ್ರಯೋಗಿಸಿದನು. ಆದರೆ ದೊಡ್ಡ ಶರೀರವುಳ್ಳ ಆ ಆನೆಯು ಅದನ್ನೂ ಕತ್ತರಿಸಿಹಾಕಿತು. ಇಂದ್ರನೂ ಕೂಡ ಕಿರೀಟವನ್ನು ತಲೆಗೇರಿಸಿಕೊಂಡು ಸುಧೃತಿಯ ಶ್ರೇಷ್ಠವಾದ ಆನೆಗೆ ಪರಿಘಾಯುಧವನ್ನೂ ಪ್ರಯೋಗಿಸಿದನು. ಇದರಿಂದ ಸುಧೃತಿಯ ಆನೆಗೆ ಸ್ವಲ್ಪ ಪೆಟ್ಟು ಬಿತ್ತು. ಸುಧೃತಿಯ ಆನೆಯು ಕೋಪಗೊಂಡು ಮುಸಲಾಯುಧವನ್ನು ಸೊಂಡಲಿನಲ್ಲಿ ಹಿಡಿದುಕೊಂಡು ಇಂದ್ರನನ್ನು ಅಟ್ಟಿಸಿಕೊಂಡು ಹೋಯಿತು. ||೧೮-೧೯-೨೦||

ಅಷ್ಟರೊಳಗಾಗಿಯೇ ಇಂದ್ರನು, ವಜ್ರಾಯುಧದಿಂದ ಅದನ್ನು ಹೊಡೆಯಲು ಸುಧೃತಿಯ ಆನೆಯು ಮೃತಪಟ್ಟಿತು. ಅನಂತರದಲ್ಲಿ ಬಲು ಪರಾಕ್ರಮಿಯಾದ

ತೀಕ್ಷ್ಣೈಃ ಶರೈಸ್ತ್ರಿಭಿರ್ದೇವ ಪತಿಂ ಮೂರ್ಧ್ನ್ಯಭಿತಾಡಯನ್ ।
ಗಾಢವಿದ್ಧಃ ಶರೈಸ್ತೀಕ್ಷ್ಣೈ ರೀಷತ್ಕಶ್ಮಲಮಾಪ ಸಃ ॥೨೨॥

ಪುನರೈರಾವತಂ ಚಾಪಿ ತ್ರಿಭಿಃ ಸಂಜಘ್ನಿವಾನ್ ಶರೈಃ ।
ಇಂದ್ರೋಽಪಿ ಮೂರ್ಛಾ ನಿರ್ಮುಕ್ತಃ ಶಕ್ತಿಂ ತಾವತ್ಸಮಾಕ್ಷಿಪತ್ ॥೨೩॥

ನವಘಂಟಾಂ ಸುರುಚಿರಾಂ ದೀಪ್ತಾಮಶನಿ ಸನ್ನಿಭಾಂ ।
ದೃಷ್ಟ್ವಾಽಽಯಾಂತೀಂ ಮಹಾವೇಗಾ ಮಮೋಘಾಂ ಸುಧೃತಿಸ್ತದಾ ॥೨೪॥

ರಥಾದುತ್ಪ್ಲುತಂ ಗದಾಹಸ್ತ ಆಪ್ಲುತಃ ಪಕ್ಷಿರಾಡಿವ ।
ತಾವತ್ಸ್ಯಂದನಮಾಸಾದ್ಯ ಶಕ್ತಿರೈಂದ್ರೀ ಸಸಾರಥಿಂ ॥೨೫॥

ಸಾಶ್ವಧ್ವಜಂ ಸಶಸ್ತ್ರಂ ಚ ಭಸ್ಮಶೇಷಂ ಚಕಾರ ಹ ।
ಸುಧೃತಿಃ ಕ್ರೋಧತಾಮ್ರಾಕ್ಷಸ್ತಾವದೈರಾವತಂ ಬಲೀ ॥೨೬॥

ಸುಧೃತಿಯು ರಥವನ್ನೇರಿ ಮೂರು ತೀಕ್ಷ್ಣವಾದ ಬಾಣಗಳಿಂದ ದೇವಪತಿಯಾದ ಇಂದ್ರನನ್ನು ಹೊಡೆದನು. ಈ ತೀಕ್ಷ್ಣ ಬಾಣಗಳ ಪೆಟ್ಟಿನಿಂದ ಇಂದ್ರನು ಸ್ವಲ್ಪ ಜ್ಞಾನತಪ್ಪಿದನು. ಸುಧೃತಿಯು ಮೂರು ತೀಕ್ಷ್ಣಬಾಣಗಳಿಂದ ಪುನಃ ಐರಾವತವನ್ನು ಹೊಡೆದನು. ಅಷ್ಟು ಹೊತ್ತಿಗೆ ಇಂದ್ರನು ಮೂರ್ಛೆಯಿಂದ ತಿಳಿದು ಸುಧೃತಿಯ ಮೇಲೆ ಶಕ್ತ್ಯಾಯುಧವನ್ನು ಪ್ರಯೋಗಿಸಿದನು. ॥೨೧-೨೨॥

ಒಂಬತ್ತು ಘಂಟೆಗಳಿಂದ ಮನೋಹರವಾಗಿಯೂ ಮತ್ತು ಬಹಳ ಪ್ರಕಾಶಮಾನವಾಗಿಯೂ, ಸಿಡಿಲಿಗೆ ಸಮಾನವಾಗಿಯೂ, ಬಹಳ ವೇಗವಾಗಿಯೂ ಇದ್ದ ಅಮೋಘವಾದ ಶಕ್ತ್ಯಾಯುಧವು ತನ್ನ ಕಡೆಗೆ ಬರುತ್ತಿರುವುದನ್ನು ನೋಡಿ ಆಗ ಸುಧೃತಿಯು ಗದೆಯನ್ನು ಕೈಯ್ಯಲ್ಲಿ ಹಿಡಿದುಕೊಂಡು ಗರುಡನಂತೆ ರಥದಿಂದ ಶೀಘ್ರವಾಗಿ ಮೇಲಕ್ಕೆ ಹಾರಿದನು. ಅಷ್ಟರೊಳಗೆ ಆಶಕ್ತ್ಯಾಯುಧವು ಆ ಸುಧೃತಿಯ ರಥವನ್ನು ಮುಟ್ಟಿ, ಅವನ ಸಾರಥಿ, ಕುದುರೆಗಳು, ಬಾವುಟ, ಶಸ್ತ್ರಗಳು, ಇವೆಲ್ಲವನ್ನೂ ಬೂದಿಯಾಗುವಂತೆ ಮಾಡಿಬಿಟ್ಟಿತು. ಅಷ್ಟು ಹೊತ್ತಿಗೆ ಬಲಿಷ್ಠನಾದ ಸುಧೃತಿಯು ಕೋಪದಿಂದ ಕೆಂಪೇರಿದ ಕಣ್ಣುಳ್ಳವನಾಗಿ ಕಬ್ಬಿಣದ ಗದೆಯಿಂದ ಐರಾವತವನ್ನು ಹೊಡೆದನು. ॥೨೪-೨೫-೨೬॥

ಗದಾಂ ಸರ್ವಾಯಸೀಂ ಭೂಯೋ ಭ್ರಾಮಯಿತ್ವಾ ಜಘಾನ ಹ ।
ಗದಯಾಽಭಿಹತಃ ಕುಂಭೇ ಬಲೇನಾಽಭ್ರಮುವಲ್ಲಭಃ ॥೨೭॥

ಭೂಯೋ ಭ್ರಮನ್ನಿಪತಿತೋ ವಮನ್ ರಕ್ತಂ ಸಫೇನಿಲಂ ।
ಇಂದ್ರಸ್ತಾವದವಪ್ಲುತ್ಯ ವಜ್ರಹಸ್ತೋಽಭಿಧಾವತ ॥೨೮॥

ಸುಧೃತಿಸ್ತಾವದೇವಾಽಶು ಗದಯಾ ದಕ್ಷಿಣೇ ಭುಜೇ ।
ತಾಡಯಾಮಾಸ ಬಲವತ್ತಾಡಿತೋ ದೇವಭೂಪತಿಃ ॥೨೯॥

ಮೂರ್ಛಾಮವಾಪ ನಿತರಾಂ ಪತಿತಂ ಕುಲಿಶಂ ಕರಾತ್ ।
ಸುಧೃತಿಸ್ಸತ್ವರಂ ತಾವದ್ದೇವೇಂದ್ರಂ ಮೂರ್ಛಿತಂ ಭುವಿ ॥೩೦॥

ಬದ್ಧ್ವಾ ನೇತುಮಭಿಕ್ರಾಮತ್ತಾವದ್ದೇವಾಃ ಸಮಂತತಃ ।
ನಾನಾವಿಧ ಪ್ರಹರಣಾಃ ಸುಧೃತಿಂ ವವ್ರುರೋಜಸಾ ॥೩೧॥

ಸುಧೃತಿಸ್ತ್ವಾತ್ತ ಸುಧೃತಿ ರಿಂದ್ರಂ ವಾಮೇನ ಪಾಣಿನಾ ।
ಗೃಹೀತ್ವೈವ ದಕ್ಷಿಣೇನ ಗದಯಾ ತಾನಭಿದ್ರವತ್ ॥೩೨॥

ಹೀಗೆ ಸುಧೃತಿಯು ಉಕ್ಕಿನಿಂದ ಪೂರ್ಣವಾಗಿ ಮಾಡಿದ ಗದೆಯನ್ನು ಪುನಃ ಪುನಃ ತಿರುಗಿಸಿ ಐರಾವತಕ್ಕೆ ಹೊಡೆದನು. ಅಲ್ಲದೇ ಸ್ವರ್ಗದ ಶ್ರೇಷ್ಠವಸ್ತುವಾದ ಈ ಆನೆಯ ಕುಂಭಸ್ಥಳಕ್ಕೆ ಸುಧೃತಿಯು ಗದಾಪ್ರಹಾರಮಾಡಿದನು. ಇದರಿಂದ ಆ ಆನೆಯು ಪುನಃ ಪುನಃ ಸುತ್ತುಹಾಕುತ್ತಾ ನೊರೆಬರುವಷ್ಟು ರಕ್ತವನ್ನು ಕಾರುತ್ತಾ ಭೂಮಿಯ ಮೇಲೆ ಬಿದ್ದುಬಿಟ್ಟಿತು. ಅಷ್ಟರೊಳಗಾಗಿಯೇ ಇಂದ್ರನು ಹಾರಿ ವಜ್ರಾಯುಧಧಾರಿಯಾಗಿ ಸುಧೃತಿಯನ್ನು ಅಟ್ಟಿಸಿಕೊಂಡು ಹೋದನು. ಸುಧೃತಿಯು ಅಷ್ಟು ಹೊತ್ತಿನೊಳಗಾಗಿಯೇ ತನ್ನ ಗದೆಯಿಂದ ಇಂದ್ರನ ಬಲತೋಳಿಗೆ ಹೊಡೆದನು. ಹೀಗೆ ಇಂದ್ರನು ಸುಧೃತಿಯ ಗದೆಯ ಬಲವಾದ ಪ್ರಹಾರಕ್ಕೆ ಸಿಕ್ಕಿದನು. ತತ್‌ಕ್ಷಣದಲ್ಲಿ ಭೂಮಿಯ ಮೇಲೆ ಬಿದ್ದು ಮೂರ್ಛೆಹೋದ ದೇವೇಂದ್ರನನ್ನು ಸುಧೃತಿಯು ಕಟ್ಟಿಹಾಕಿದನು. ॥೨೭-೨೮-೨೯-೩೦॥

ಹೀಗೆ ಬಿದ್ದಿದ್ದ ಇಂದ್ರನನ್ನು ಕಟ್ಟಿಹಾಕಿ ಸುಧೃತಿಯು ಒಯ್ಯಲು ಪ್ರಯತ್ನ ಪಡುತ್ತಿರಲು ಅಷ್ಟರೊಳಗಾಗಿ ದೇವತೆಗಳೆಲ್ಲರೂ ಎಲ್ಲಾ ಕಡೆಯಲ್ಲಿಯೂ ಅನೇಕ ವಿಧವಾದ ಆಯುಧಗಳನ್ನು ಹಿಡಿದುಕೊಂಡು ಬಹಳ ವೇಗವಾಗಿ ಬಂದು ಸುಧೃತಿ

ತದಂತರೇ ವೀರಸೇನಃ ಶತ್ರುಂಜಯಮುವಾಚ ಹ ।
ಪಿತೃವ್ಯ ಕಿಂ ಪಶ್ಯಸಿ ತ್ವಂ ಸುಧೃತಿಂ ಹಂತಿ ದೇವತಾಃ ॥೩೩॥

ಇಂದ್ರಂ ಬಧ್ವಾ ಗೃಹೀತ್ವಾಽಸೌ ಏಕೋ ಯುಧ್ಯತಿ ಸಂಯುಗೇ ।
ನಾಽಯಂ ವಿಲಂಬನೇ ಕಾಲ ಇತ್ಯುಕ್ತ್ವಾಽಚೋದಯದ್ರಥಂ ॥೩೪॥

ಶತ್ರುಂಜಯಮುಖಾಃ ಶ್ರುತ್ವಾ ವೀರಸೇನಸ್ಯ ಭಾಷಿತಂ ।
ಶಸ್ತ್ರವೃಷ್ಟಿಂ ಪ್ರಕುರ್ವಂತೋ ವಿವಿಶುಃ ಶಕ್ರವಾಹಿನೀಂ ॥೩೫॥

ಅಥಾಽಭವದ್ಘೋರತರೋ ರಣಃ ಪರಮದಾರುಣಃ ।
ಅಮರ್ತ್ಯಾನಾಂ ಚ ಮರ್ತ್ಯಾನಾಂ ಶಸ್ತ್ರಾಽಸ್ತ್ರಬಹುಸಂಕುಲಃ ॥೩೬॥

ಕರವಾಲ ಪ್ರಾಸಶೂಲ ಗದಾಚಕ್ರ ಪರಶ್ವಧೈಃ ।
ಭುಶುಂಡೀಶಕ್ತಿ ಪರಿಘ ಶತಘ್ನೀ ತೋಮರೇಷುಭಿಃ ॥೩೭॥

ಯನ್ನು ಸುತ್ತುಗಟ್ಟಿದರು. ಸುಧೃತಿಯು ಬಹಳ ಧೈರ್ಯಶಾಲಿಯಾದ್ದರಿಂದ ಇಂದ್ರನನ್ನು ಎಡಗೈಯ್ಯಲ್ಲೇ ಹಿಡಿದುಕೊಂಡು ಬಲಗೈಯಿಂದ ಗದಾ ಪ್ರಯೋಗಮಾಡಿ ಅವರನ್ನೂ ಅಟ್ಟಿದನು. ಈ ಸಂದರ್ಭದಲ್ಲಿ ವೀರಸೇನನು ಶತ್ರುಂಜಯನನ್ನು ಕುರಿತು ಓ ಚಿಕ್ಕಪ್ಪನೇ, ಸುಧೃತಿಯನ್ನು ದೇವತೆಗಳೆಲ್ಲರೂ ನಾಶಮಾಡುವುದಕ್ಕೆ ಯತ್ನಿಸುತ್ತಿರುವುದನ್ನೂ ಕಂಡೆಯಾ? ಎಂದು ಕೇಳಿದನು. ||೩೧-೩೨-೩೩||

ಸುಧೃತಿಯು ಇಂದ್ರನನ್ನು ಕಟ್ಟಿಹಾಕಿ ಒಬ್ಬನೇ ದೇವತೆಗಳೊಂದಿಗೆ ಯುದ್ಧ ಮಾಡುತ್ತಿದ್ದಾನೆ. ಆದ್ದರಿಂದ ನಾವು ಈಗ ಸಾವಕಾಶಮಾಡಬಾರದು ; ಎಂದು ಹೇಳಿ ವೀರಸೇನನು ತನ್ನ ರಥವನ್ನು ಅವನಿದ್ದ ಕಡೆಗೆ ಹೊಡೆದನು. ಶತ್ರುಂಜಯನೇ ಮೊದಲಾದವರೆಲ್ಲರೂ ವೀರಸೇನನ ಮಾತನ್ನು ಕೇಳಿ ಶಸ್ತ್ರಗಳ ಮಳೆಗರೆಯುತ್ತಾ ಇಂದ್ರನ ಸೈನ್ಯಕ್ಕೆ ಅಭಿಮುಖವಾಗಿ ಹೋದರು. ಅನಂತರ ದೇವತೆಗಳಿಗೂ ಮತ್ತು ಮನುಷ್ಯರಿಗೂ ಅತ್ಯಂತ ಭಯಂಕರವಾದ ಯುದ್ಧವು ಶಸ್ತ್ರಾಸ್ತ್ರಪ್ರಯೋಗಗಳಿಂದ ನಡೆಯಿತು. ||೩೪-೩೫-೩೬||

ದೇವತೆಗಳಿಗೂ ಮತ್ತು ಮನುಷ್ಯರಿಗೂ ಕತ್ತಿ, ಪ್ರಾಸಾಯುಧ, ಶೂಲ, ಗದೆ, ಚಕ್ರ, ಕೊಡಲಿ, ಭುಶುಂಡೀ, ಶಕ್ತ್ಯಾಯುಧ, ಪರಿಘಾಯುಧ, ತೋಮರ, ಬಾಣಗಳು, ಇವೇ ಮುಂತಾದ ಯುದ್ಧೋಪಕರಣಗಳಿಂದ ಅತ್ಯಂತ ಘೋರವಾದ ಯುದ್ಧವು ಸಂಭವಿಸಿತು. ||೩೭||

ಉಚ್ಚಾವಚೈಃ ಶಸ್ತ್ರಜಾಲೈರನ್ಯೋಽನ್ಯಮಭಿಹನ್ಯತಾಂ ।
ಪಕ್ವ ತಾಲಫಲಾನೀವ ವಾಯುನಾ ಶಿರಸಾಂ ಗಣಃ ॥೩೮॥

ಪತಂತಿ ಶಸ್ತ್ರಘಾತೇನ ಹಸ್ತಪಾದಾದಿಕಂ ತಥಾ ।
ರಥಾಃಶ್ವ ಗಜಪದಾತಿ ಪದಘಾತೋದ್ಗತಂ ರಜಃ ॥೩೯॥

ಆಚ್ಛಾದ್ಯ ಜ್ಯೋತಿಷಾಂ ರಾಶಿಂ ಗಾಢಸಂತಮಸಾಯಿತಂ ।
ತತ್ರ ಕೇಚಿನ್ನ ಪಶ್ಯಂತಿ ಪರಂ ವಾ ಸ್ವೀಯಮೇವ ವಾ ॥೪೦॥

ಶಬ್ದಾಽನುಸಾರಮಾರ್ಗೇಣ ಯುದ್ಧ್ಯಂತಿ ನಿಪುಣಾ ರಣೇ ।
ಅಶ್ವೇಭ್ಯಃ ಪತಿತಾಃ ಕೇಚಿದ್ಗಜೇಭ್ಯೋಽಪಿ ತಥಾ ಪರೇ ॥೪೧॥

ಗಜೈಃ ಸಮುದಿತಾಸ್ತತ್ರ ಬಹವೋಽಶ್ವಾಃ ಪದಾತಯಃ ।
ತಾವಚ್ಛಸ್ತ್ರೌಘ ಸಂಪಾತವೇಗನಿರ್ಭಿದ ಸೃಕ್ಸ್ರನ್ಯೈಃ ॥೪೨॥

ಪರಿತಃ ಪ್ರೋಚ್ಚಲದ್ಭಿಸ್ತು ಯಂತ್ರಾದಿವ ವಿನಿರ್ಗತೈಃ ।
ರಜಃ ಸಂಶಾಂತಮಭವದಭ್ರನಿರ್ಗಮವತ್ಕ್ಷಣಾತ್ ॥೪೩॥

ಹೀಗೆ ದೇವತೆಗಳು ಮತ್ತು ಮನುಷ್ಯರು ಬಹಳ ದೊಡ್ಡದಾದ ಶಸ್ತ್ರಗಳ ಸಮೂಹದಿಂದ ಪರಸ್ಪರವಾಗಿ ಹೊಡೆದಾಡಿದರು. ಈ ಸಂದರ್ಭದಲ್ಲಿ ಎರಡು ಪಕ್ಷಗಳ ಹೊಡೆತದಿಂದಲೂ, ಯೋಧರ ತಲೆಗಳು ಮತ್ತು ಕೈಕಾಲುಗಳು ಮುಂತಾದವು, ವಾಯುವಿನಿಂದ ತಳ್ಳಲ್ಪಟ್ಟ ತಾಳೆಯ ಹಣ್ಣುಗಳಂತೆ, ಕೆಳಗೆ ಬೀಳುತ್ತಿದ್ದವು. ರಥಗಳು, ಕುದುರೆಗಳು, ಆನೆಗಳು, ಕಾಲಾಳುಗಳು ಇವೆಲ್ಲರ ತುಳಿಯುವಿಕೆಯಿಂದುಂಟಾದ ಧೂಳು ನಕ್ಷತ್ರಗಳ ರಾಶಿಗಳೆಲ್ಲವನ್ನೂ ಮುಚ್ಚಿದ್ದರಿಂದ ಅಲ್ಲೆಲ್ಲಾ ಗಾಢಾಂಧಕಾರವು ಕವಿದಂತಾಯಿತು. ಅಲ್ಲಿ ಕೆಲವರು ತಮ್ಮವರು ಮತ್ತು ಬೇರೆಯವರು ಎಂದು ತಿಳಿಯಲೂ ಅಸಮರ್ಥರಾದರು. ॥೩೮-೩೯-೪೦॥

ಯುದ್ಧನಿಪುಣರು ಶಬ್ದದಿಂದ ಮಾರ್ಗವನ್ನು ಗುರುತಿಸಿ ಯುದ್ಧಮಾಡುತ್ತಿದ್ದರು. ಕೆಲವರು ಕುದುರೆಗಳಿಂದಲೂ ಮತ್ತೆಕೆಲವರು ಆನೆಗಳಿಂದಲೂ ಕೆಳಗೆ ಬೀಳುತ್ತಿದ್ದರು. ಅನೇಕ ಕುದುರೆಗಳು ಮತ್ತು ಕಾಲಾಳುಗಳು ಅಷ್ಟರಲ್ಲಿಯೇ ಇವರ ಆನೆಗಳಿಂದ ತುಳಿಯಲ್ಪಟ್ಟರು. ಆಮೇಲೆ ಶಸ್ತ್ರಗಳ ಸಮೂಹಗಳೂ ಕೂಡ ಇವರ ಮೇಲೆ ಬಿದ್ದುದರಿಂದ ಇವರ ಶರೀರಗಳಿಂದ ಬಹಳ ವೇಗವಾಗಿ ಹೊರಡು

ಪ್ರಕಾಶೇ ಸತಿ ತೇ ಶೂರಾಃ ಭ್ರಷ್ಟವಾಹಾಃ ಸಮಾಗಮನ್ ।
ವಾಹನೈರ್ವಿವಿಧೈಃ ಸ್ವೀಯೈ ರನ್ಯೈರಪಿ ಭೃಗೂದ್ವಹೈಃ ॥೪೪॥

ರಥಿನೋ ಗಜಸಂಸ್ಥಾನಾ ಗಜಿನಶ್ಚಾಽಶ್ವವಾಹನಾಃ ।
ಅಶ್ವಾರೋಹಾ ರಥಾರೂಢಾ ಏವಂ ವ್ಯಾಕುಲಿತಂ ಭವತ್ ॥೪೫॥

ಯಥಾಪ್ರಾಪ್ತಂ ಸಮಾರೂಢಾ ಭ್ರಷ್ಟವಾಹಾ ವಿಶಂಕಿನಃ ।
ಯುದ್ಧಾಯೈವ ಸುಸನ್ನದ್ಧಾ ನ ವಿದುರ್ವಾಹನಂ ಸ್ವಕಂ ॥೪೬॥

ಏವಮುತ್ಯಂತ ಸಂಮರ್ದೈಃ ಪ್ರಾದುರಾಸೀ ದಸೃಗ್ವಹಾ ।
ನದೀ ಫೇನಾಽಽವರ್ತಯುತಾ ಮಹಾವೇಗಾ ಭಯಂಕರಾ ॥೪೭॥

ಅನೇಕಕ್ಷುದ್ರಸರಿತಾಂ ಯೋಗೇನೇವ ಮಹಾನದೀ ।
ಕ್ಷುದ್ರ ಶೋಣಿತ ಧಾರಾಭಿರ್ಯುತಾ ಸಾಽಸೃಗ್ವಹಾ ನದೀ ॥೪೮॥

ತ್ತಿರುವ ರಕ್ತಪ್ರವಾಹಗಳು ಯಂತ್ರಗಳಿಂದಲೋ ಎಂಬಂತೆ ಸುತ್ತಲೂ ಧಾರಾಕಾರವಾಗಿ ಹರಿದುವು. ಆದ್ದರಿಂದ ಒಂದು ಕ್ಷಣಕಾಲದಲ್ಲಿಯೇ ಆ ಭೂಮಿಯ ಧೂಳೆಲ್ಲವೂ ಮಳೆಬಂದರೆ ಹೇಗೋ ಹಾಗೆ ಪ್ರಶಾಂತವಾಯಿತು. ||೪೧-೪೨-೪೩||

ಪ್ರಕಾಶವುಂಟಾದಾಗ ಜನರು ನೋಡಲು ಇವರು ಆಶೂರರೇ! ಎಲ್ಲರೂ ತಮ್ಮ ತಮ್ಮ ವಾಹನಗಳನ್ನೇ ಕಳೆದುಕೊಂಡಿದ್ದುದನ್ನು ಕಂಡರು. ಅವರೆಲ್ಲರೂ ಬೇರೆ ಬೇರೇ ವಾಹನಗಳನ್ನು ಬೇರೆ ಬೇರೆಯವರದ್ದಲ್ಲವೆಂದು ತಿಳಿಯದೇ ಹತ್ತಿಬಿಟ್ಟಿದ್ದರು. ಅವರು ಹತ್ತಿದ್ದ ವಾಹನಗಳಲ್ಲಿ ಕೆಲವು ತಮ್ಮವೂ ಮತ್ತೆಕೆಲವು ಭೃಗುವಂಶದ ಕ್ಷತ್ರಿಯರಿಗೆ ಸಂಬಂಧಪಟ್ಟವೂ ಆಗಿದ್ದವು. ಈ ಸಂದರ್ಭದಲ್ಲಿ ರಥವನ್ನೇರಿದ್ದವರು ಆನೆಯ ಮೇಲೆ ಕುಳಿತಿರುವವರಾಗಿಯೂ, ಗಜದಮೇಲಿದ್ದವರು ಕುದುರೆಯಮೇಲೂ, ಕುದುರೆಯಮೇಲಿದ್ದವರು ರಥಾರೂಢರಾಗಿಯೂ ಹೀಗೆ ಅನೇಕ ವಿಧವಾದ ವ್ಯತ್ಯಾಸಗಳನ್ನು ಹೊಂದಿದ್ದರು. ಹೀಗೆ ಅಲ್ಲೆಲ್ಲಾ ಕ್ಷೋಭೆಯುಂಟಾಗುತ್ತಿತ್ತು. ||೪೪-೪೫||

ಹೀಗೆ ಆ ಯೋಧರು ತಮ್ಮ ತಮ್ಮ ವಾಹನಗಳನ್ನೇ ಕಳೆದುಕೊಂಡು ಬೇರೆಯವರ ವಾಹನಗಳಮೇಲೇರಿದ್ದಾಗ್ಯೂ ನಿರ್ಭಯವಾಗಿ ತಮ್ಮ ವಾಹನಗಳು ಯಾವುದೆಂಬುದನ್ನೇ ಮರೆತು ಯುದ್ಧದಲ್ಲಿ ತೊಡಗಿದ್ದರು. ಈರೀತಿಯಾಗಿ ಎರಡು

ದ್ವೀಪಸ್ತ್ರಾಯು ಮೃತಕರೀ ನಿರೋಧಪ್ರತಿವಾಹಿನೀ ।
ಕಂಕವಾಯಸ ಹಂಸಾಢ್ಯ ದೀರ್ಘಕೇಶಾಂತ್ರಶೈವಲಾ ॥೪೯॥

ಹಸ್ತಿ ಹಸ್ತಗ್ರಾಹವತೀ ಖೇಟ ಕೂರ್ಮೌಘ ಸಂವೃತಾ ।
ನೃಜಂಘೋರು ಮಹಾಮತ್ಸ್ಯ ಕ್ಷುದ್ರಮತ್ಸ್ಯಾಂಗುಲಾಽವಳಿಃ ॥೫೦॥

ಮಹಾಘೋಷವತೀ ಭೀರು ಹೃದಯೋತ್ಕಂಪಕಾರಿಣೀ ।
ಯುಧ್ಯಮಾನಾ ಭಟಾಸ್ತತ್ರ ಪರಸ್ಪರ ಜಿಘಾಂಸವಃ ॥೫೧॥

ನಷ್ಟಶಸ್ತ್ರಾ ಮುಷ್ಟಿತಲ ನಖದಂತಾಽಯುಧಾ ಭವನ್ ।
ವಿಸ್ಫಾರಿತಾಕ್ಷಾ ಭ್ರುಕುಟೀ ಕುಟಿಲಾ ದಷ್ಟ ದೃಕ್ಛದಾಃ ॥೫೨॥

ಪಕ್ಷದವರ ಘರ್ಷಣೆಯಿಂದ ಅಲ್ಲಿ ರಕ್ತಮಯವಾದ ನದಿಯೇ ಹರಿಯಿತು. ಈ ರಕ್ತ ನದಿಗಳು ನೊರೆಗಳುಳ್ಳ ಸುಳಿಗಳಿಂದ ಕೂಡಿದ್ದಾಗ್ಯೂ ಬಹಳ ವೇಗವುಳ್ಳದ್ದಾಗಿಯೂ, ಭಯಂಕರವಾಗಿಯೂ, ಅನೇಕ ಸಣ್ಣ ಸಣ್ಣ ನದಿಗಳ ಸಂಬಂಧದಿಂದ ಮಹಾನದಿಯು ಹೇಗೋ ಹಾಗೆ, ಸಣ್ಣ ಸಣ್ಣ ರಕ್ತದ ಪ್ರವಾಹಗಳಿಂದ ಕೂಡಿ ದೊಡ್ಡ ರಕ್ತಪ್ರವಾಹವುಳ್ಳ ನದಿಯಾಗಿ ಹರಿಯುತ್ತಿತ್ತು. ॥೪೬-೪೭-೪೮॥

ಈ ರಕ್ತಮಯವಾದ ಮಹಾನದಿಯು ಸತ್ತುಬಿದ್ದಿದ್ದ ಆನೆಗಳ ಶರೀರಗಳೆಂಬ ದ್ವೀಪಗಳುಳ್ಳದ್ದಾಗಿಯೂ ಹದ್ದು, ಕಾಗೆ, ಹಂಸಗಳಿಂದ ಪೂರ್ಣವಾಗಿ ದೀರ್ಘವಾದ ಕೇಶಗಳೆಂಬ ಪಾಚಿಗಳುಳ್ಳದ್ದಾಗಿಯೂ, ಆನೆಗಳ ಸೊಂಡಿಲುಗಳೆಂಬ ಮೊಸಳೆಗಳುಳ್ಳದ್ದಾಗಿಯೂ, ಖೇಟಗಳೆಂಬ ಆಮೆಗಳ ಸಮೂಹಗಳುಳ್ಳದ್ದಾಗಿಯೂ, ಮನುಷ್ಯರ ಮೊಳಕಾಲು ತೊಡೆಗಳೆಂಬ ದೊಡ್ಡ ದೊಡ್ಡ ಮೀನುಗಳುಳ್ಳದ್ದಾಗಿಯೂ, ಬೆರಳುಗಳ ಸಮೂಹವೆಂಬ ಸಣ್ಣ ಸಣ್ಣ ಮೀನುಗಳ ಸಮೂಹಗಳುಳ್ಳದ್ದಾಗಿಯೂ, ಬಹಳ ಶಬ್ದವನ್ನುಂಟುಮಾಡುವುದಾಗಿಯೂ ಅಂಜುವ ಜನರ ಮನಸ್ಸನ್ನು ನಡುಗಿಸುವುದಾಗಿಯೂ ಇತ್ತು. ಈ ರಣರಂಗದಲ್ಲಿ ಯುದ್ಧಮಾಡುತ್ತಿದ್ದ ಸೈನಿಕರು ಒಬ್ಬರನ್ನೊಬ್ಬರು ಕೊಲ್ಲುವುದಕ್ಕೆ ಇಷ್ಟಪಡುತ್ತಿದ್ದರು. ॥೪೯-೫೦-೫೧॥

ಸೈನಿಕರು ಶಸ್ತ್ರಗಳನ್ನು ನಾಶಮಾಡಿಕೊಳ್ಳುತ್ತಲೂ ಮುಷ್ಟಿಯ ಪ್ರದೇಶಗಳೂ, ಉಗುರುಗಳೂ ಹಲ್ಲುಗಳು ಇವುಗಳನ್ನೇ ಆಯುಧವನ್ನಾಗಿ ಮಾಡಿಕೊಂಡಿದ್ದರು. ಇವರ ಕಣ್ಣುಗಳೆಲ್ಲವೂ ಅಗಲಿಸಲ್ಪಟ್ಟವು. ಮತ್ತು ಇವರು ಹುಬ್ಬು ಗಂಟಿಕ್ಕಿ ವಿಕಾರ

ಶಸ್ತ್ರಾಣ್ಯುದ್ಯಮ್ಯ ಧಾವಂತಶ್ಛಿನ್ನ ಬಾಹೂದರಾಃ ಪರೇ ।
ಕ್ವಚಿನ್ಮಸ್ತಕಹೀನಾಶ್ಚ ಯುಯುಧುಃ ಶಸ್ತ್ರಪಾಣಯಃ ॥೫೩॥

ಏವಂ ಪ್ರವರ್ತ್ತೇ ಸಮರೇ ಮರ್ತ್ಯಾಽಮರ್ತ್ಯ ಸಮಾಕುಲೇ ।
ಶತ್ರುಂಜಯಾಽದ್ಯಾ ನೃಪತಿ ಪುತ್ರಾಸ್ತತ್ಸೂನವೋಽಪಿ ಚ ॥೫೪॥

ವಿವಿಶುರ್ದೇವ ಸೇನಾಯಾಂ ಮಹಾಬಲ ಪರಾಕ್ರಮಾಃ ।
ಚಿರಂ ತೇ ದೇವಸೇನಾಭಿ ರ್ಯುಧ್ವಾ ಸಂಕ್ಷೋಭ್ಯ ಚಾಽಮರಾನ್ ॥೫೫॥

ಆಸೇದುಃ ಸುಧೃತಿಂ ಸೇನಾಪತಿಂ ಬದ್ಧಸುರಾಽಧಿಪಂ ।
ಬದ್ಧಂ ಸುರೇಶಂ ವಾಮೇನ ಗೃಹೀತ್ವೇತರ ಹಸ್ತತಃ ॥೫೬॥

ಗದಯಾ ಸಮಯುಧ್ಯಂತಂ ದೃಷ್ಟ್ವಾ ತೇ ವಿಸ್ಮಿತಾ ಭವನ್ ।
ಸಾಧು ಶೂರ ರಣಶ್ಲಾಘ್ಯ ಇತಿ ಸ್ತುತ್ವಾ ನೃಪಾಽಽತ್ಮಜಾಃ ॥೫೭॥

ಸಂಜಘ್ನುರ್ದೇವಸೇನಾಂ ತೇ ಬಲವದ್ಯುದ್ಧದರ್ಪಿತಾಃ ।
ತೈರ್ಹನ್ಯಮಾನಾ ವಿಬುಧಾಃ ಸೋಢುಮಪ್ರಭವಿಷ್ಣವಃ ॥೫೮॥

ವಾದ ಮುಖಗಳನ್ನು ಹೊಂದಿದ್ದರು. ಅಲ್ಲದೇ ಇವರ ಕಣ್ಣುರೆಪ್ಪೆಗಳೆಲ್ಲವೂ ಚುಚ್ಚಲ್ಪಟ್ಟಿದ್ದವು. ಇತರ ಕೆಲವರು ಶಸ್ತ್ರಗಳನ್ನೆಲ್ಲಾ ಎತ್ತಿಕೊಂಡು ಹಿಂದಕ್ಕೆ ಓಡುತ್ತಿದ್ದರು. ಮತ್ತೆಕೆಲವರ ತೋಳುಗಳು ಮತ್ತು ಹೊಟ್ಟೆಗಳು ಕತ್ತರಿಸಲ್ಪಟ್ಟಿದ್ದವು. ಕೆಲವರು ತಲೆಗಳನ್ನೇ ಕಳೆದುಕೊಂಡಿದ್ದರು. ಹೀಗೆ ಶಸ್ತ್ರಗಳನ್ನು ಹಿಡಿದು ಸೈನಿಕರು ಯುದ್ಧ ಮಾಡುತ್ತಿದ್ದರು. ಈರೀತಿಯಲ್ಲಿ ಮನುಷ್ಯರಿಗೂ ಮತ್ತು ದೇವತೆಗಳಿಗೂ ಯುದ್ಧವು ನಡೆಯಲು ಮಹಾ ವೀರರಾದ ಶತ್ರುಂಜಯನೇ ಮೊದಲಾದ ರಾಜಕುಮಾರರು ಮತ್ತು ಅವರ ಮಕ್ಕಳೂ ದೇವಸೇನೆಯೊಳಗೆ ಹೊಕ್ಕು ಬಹಳ ಕಾಲ ಯುದ್ಧಮಾಡಿ ದೇವತೆಗಳಿಗೆ ವಿಶೇಷವಾಗಿ ಕ್ಷೋಭೆಯನ್ನುಂಟುಮಾಡಿದರು. ||೫೨-೧೩-೫೪-೫೫||

ಇವರೆಲ್ಲರೂ ಹೀಗೆ ಯುದ್ಧಮಾಡಿ ಇಂದ್ರನನ್ನು ಕಟ್ಟಿಹಾಕಿದ್ದ ಸೇನಾಪತಿಯಾದ ಸುಧೃತಿಯ ಸಮೀಪಕ್ಕೆ ಬಂದರು. ಕಟ್ಟಿಹಾಕಿದ್ದ ಇಂದ್ರನನ್ನು ಎಡಗೈಯ್ಯಲ್ಲಿ ಹಿಡಿದುಕೊಂಡು ಬಲಗೈಯೊಂದರಿಂದಲೇ ಶತ್ರುಗಳೊಂದಿಗೆ ಯುದ್ಧಮಾಡುತ್ತಿದ್ದ ಸುಧೃತಿಯನ್ನು ನೋಡಿ ಅವರೆಲ್ಲರೂ ಅತ್ಯಂತವಾಗಿ ಆಶ್ಚರ್ಯಪಟ್ಟರು. ರಾಜಕುಮಾರರೆಲ್ಲರೂ ಭಲಾ, ಭೇಷ್ ಯುದ್ಧದಲ್ಲಿ ನೀನು ಶ್ಲಾಘನೆಗೆ ಅರ್ಹನು ! ಎಂದು ಸುಧೃತಿ

ತ್ಯಕ್ತ್ವಾ ಶಸ್ತ್ರಾಣಿ ಹಾಹೇತಿ ಚುಕ್ರುಶುಶ್ಚಾಭಿ ವಿದ್ರುತಾಃ ।
ತದಾ ಕುಬೇರೋ ವರುಣೋ ಯಮೋ ಗಂಧರ್ವರಾಡಪಿ ॥೪೯॥

ಮಿಲಿತ್ವಾ ಯುಯುಧುಸ್ತತ್ರ ವಾಯುಸೋಮ ಮುಖೈರ್ವೃತಾಃ ।
ತಾನ್ಯುಧ್ಯಮಾನಾನ್ಸುಚಿರಂ ತೇ ಯುದ್ಧ್ವಾ ರಾಜನಂದನ ॥೫೦॥

ಬಬಂಧುಸ್ತೇ ಕುಬೇರಾದೀನ್ ಬಲಾದ್ಯುದ್ಧೇನ ನಿರ್ಜಿತಾನ್ ।
ಶತ್ರುಂಜಯೋ ಧನಪತಿಂ ಶತ್ರುಹಾ ವರುಣಂ ತಥಾ ॥೫೧॥

ಚಿತ್ರಸೇನೋ ಯಮಮಪಿ ಭೀಮಂ ಸಮರ ತಾಪನಃ ।
ಜಯಂತಂ ವೀರಸೇನಶ್ಚ ವೀರಭಾನುಃ ಸಮೀರಣಂ ॥೫೨॥

ವಿರಾಗ್ರ ಗೋ ವಸೂಂಸ್ತದ್ವತ್ ಶಶಾಂಕಂ ವೀರವಿಕ್ರಮಃ ।
ಬದ್ಧ್ವಾ ಸೇಂದ್ರಾನ್ ಸರ್ವದೇವಾನ್ನೇತುಂ ಸಮುಪಚಕ್ರಮುಃ॥೫೩॥

ಯನ್ನು ಸ್ತೋತ್ರಮಾಡಿ ದೇವಸೈನ್ಯವನ್ನು ಹೊಡೆಯಲು ಪ್ರಾರಂಭಿಸಿದರು. ಇವರೆಲ್ಲರೂ ಯುದ್ಧದಲ್ಲಿ ತಾವು ತೋರಿಸಿದ ಪರಾಕ್ರಮದಿಂದ ವಿಶೇಷವಾಗಿ ಗರ್ವಪಡುತ್ತಿದ್ದರು. ಇವರಿಂದ ಹೊಡೆಯಲ್ಪಡುತ್ತಿರುವ ದೇವತೆಗಳು ಇವರ ಪೆಟ್ಟುಗಳನ್ನು ಸಹಿಸಲು ಅಸಮರ್ಥರಾದರು. ||೪೬-೪೭-೪೮||

ರಾಜಕುಮಾರನಿಂದ ಹೊಡೆಯಲ್ಪಡುತ್ತಿರುವ ದೇವತೆಗಳು ತಮ್ಮ ಶಸ್ತ್ರಗಳೆಲ್ಲವನ್ನೂ ಕೆಳಗೆ ಬಿಸುಟು ಹಾ, ಹಾ ಎಂದು ಕೂಗಿಕೊಂಡು ಓಡಿದರು. ಆಗ ಕುಬೇರ ವರುಣ, ಯಮ ಗಂಧರ್ವರಾಜನಾದ ಚಿತ್ರಸೇನ ಇವರೆಲ್ಲರೂ ಒಟ್ಟಿಗೆ ಸೇರಿ ವಾಯು ಚಂದ್ರ ಮುಂತಾದವರನ್ನೂ, ಸಹಾಯಕ್ಕೆ ತೆಗೆದುಕೊಂಡು ಈ ರಾಜಕುಮಾರರೊಂದಿಗೆ ಯುದ್ಧಮಾಡಲು ಪ್ರಾರಂಭಿಸಿದರು. ರಾಜಕುಮಾರರೂ ಇವರೊಂದಿಗೆ ಬಹಳ ಹೊತ್ತು ಯುದ್ಧಮಾಡಿ ಕೊನೆಗೆ ಇವರನ್ನು ಜಯಿಸಿ, ಕುಬೇರನೇ ಮೊದಲಾದವರನ್ನು ಕಟ್ಟಿಹಾಕಿದರು. ||೪೯-೫೦-೫೧||

ಚಿತ್ರಸೇನನು ಯಮನನ್ನೂ, ಸಮರತಾಪನನು ಭೀಮನನ್ನೂ, ವೀರಸೇನನು ಜಯಂತನನ್ನೂ, ವೀರಭಾನುವು ವಾಯುವನ್ನೂ, ವೀರಾಗ್ರಗನು ವಸುಗಳನ್ನೂ,

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ
ಅಷ್ಟಾದಶೋಽಧ್ಯಾಯಃ

ವೀರವಿಕ್ರಮನು ಚಂದ್ರನನ್ನೂ ಕಟ್ಟಿಹಾಕಿ ಇಂದ್ರನೇ ಮೊದಲಾದ ಸಮಸ್ತ ದೇವತೆಗಳನ್ನೂ ಒಯ್ಯಲು ಪ್ರಾರಂಭಿಸಿದರು. ||೬೨-೬೩||

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಕಾಮಾಖ್ಯಾನದಲ್ಲಿ
ಹದಿನೆಂಟನೆಯ ಅಧ್ಯಾಯವು ಮುಗಿದುದು.

|| ಶ್ರೀಃ ||

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

|| ಏಕೋನವಿಂಶೋಽಧ್ಯಾಯಃ ||

ಹತ್ತೊಂಬತ್ತನೆಯ ಅಧ್ಯಾಯವು

ಏವ ಮಿಂದ್ರಮುಖಾನ್ ಬದ್ಧ್ವಾ ಯದಾ ನೇತುಂ ಪ್ರಚಕ್ರಮುಃ ।
ತದಾ ಕಾಮೋ ಧನುರ್ದಿವ್ಯಂ ತಾನ್ ರುರೋಧ ವಿಕರ್ಷಯನ್ ॥೧॥

ವಿದ್ರುತಾ ವಿಬುಧಾಃ ಕೇಚಿತ್ಕೇಚಿತ್ತತ್ರ ನಿಪಾತಿತಾಃ ।
ಬಿಡೌಜಃ ಪ್ರಮುಖಾ ದೇವಪ್ರವೃದ್ಧಾ ಬಂಧನಂ ಗತಾಃ ॥೨॥

ದೇವಗಂಧರ್ವದಾರಾದ್ಯಾಶ್ಚುಕ್ರುಶುರ್ಭಯಪೀಡಿತಾಃ ।
ತದಾಕಾಮೋ ವಿಕರ್ಷನ್ ಸ್ವಂ ಧನುರ್ಮರ್ತ್ಯಾನರುಂಧತ ॥೩॥

ವಿಮುಂಚನ್ ಶಸ್ತ್ರ ವರ್ಷಾಣಿ ಶರಜಾಲೇನ ಸಂವೃಣೋತ್ ।
ತದಾ ಸುಧೃತಿಮುಖ್ಯಾಸ್ತೇ ನ್ಯಸ್ಯ ಬದ್ಧಾನ್ ದಿವೌಕಸಃ ॥೪॥

ಹೀಗೆ ರಾಜಕುಮಾರರು ಇಂದ್ರನೇ ಮೊದಲಾದ ದೇವತೆಗಳನ್ನು ಕಟ್ಟಿಹಾಕಿ ಒಯ್ಯುತ್ತಿರಲು ಆಗ ಮನ್ಮಥನು ದಿವ್ಯವಾದ ಧನುಸ್ಸನ್ನು ತೆಗೆದುಕೊಂಡು ಅದನ್ನು ಸೆಳೆದು ಬಾಣಗಳನ್ನು ಬಿಟ್ಟು ಅವರನ್ನು ತಡೆಗಟ್ಟಿದನು. ಇದರಿಂದ ಕೆಲವರು ಶತ್ರುಗಳು ಓಡಿದರು, ಇನ್ನು ಕೆಲವರು ಅಲ್ಲಿಯೇ ಬಿದ್ದರು. ಆದರೆ ಇಂದ್ರನೇ ಮೊದಲಾದ ದೇವತೆಗಳು ರಾಜಕುಮಾರರಿಗೆ ಸೆರೆಯಾಳಾದ್ದನ್ನು ನೋಡಿ ದೇವತೆಗಳು ಗಂಧರ್ವರೂ ಮುಂತಾದವರ ಪತ್ನಿಯರೇ ಮೊದಲಾದವರು ಭಯದಿಂದ ಪೀಡಿತರಾಗಿ ಗಟ್ಟಿಯಾಗಿ ರೋದಿಸಿದರು. ಆಗ ಮನ್ಮಥನು ತನ್ನ ಧನುಸ್ಸನ್ನು ಸೆಳೆದು ಮಾನವರನ್ನು ತಡೆಗಟ್ಟಿದನು. ||೧-೨-೩||

ಮನ್ಮಥನು ಬಾಣಗಳ ಮಳೆಯನ್ನೇ ಸುರಿಸುತ್ತಾ ಅದರಿಂದ ಮನುಷ್ಯಪಕ್ಷದವರೆಲ್ಲರನ್ನೂ ಮುಚ್ಚಿದನು. ಆಗ ಸುಧೃತಿಯೇ ಮೊದಲಾದವರು ಕಟ್ಟಿ

ಯುಯುಧುಃ ಸರ್ವ ಏವೈತೇ ಕಾಮೇನಾಽತಿಬಲೀಯಸಾ ।
ಪಂಚಹಾಯನಕೋ ಬಾಲ ಏಕಃ ಸರ್ವಾನಯುಧ್ಯತ ॥೫॥

ಕಾಮಃ ಶಸ್ತ್ರಾಸ್ತ್ರ ಕುಶಲ ಸ್ತದದ್ಭುತಮಿವಾಽಭವತ್ ।
ವಿಸ್ಮಯಂ ಪರಮಂ ಜಗ್ಮುಃ ಮರ್ತ್ಯಾ ದೇವಾಸ್ತಥೇತರೇ ॥೬॥

ಸರ್ವೇಷಾಮಸ್ತ್ರಜಾಲಾನಿ ಶಸ್ತ್ರಾಣ್ಯಪಿ ಪೃಥಕ್ಪೃಥಕ್ ।
ಛಿತ್ವಾ ಜಘಾನ ಪ್ರತ್ಯೇಕಂ ಸಾಯಕೈಃ ಸಿತಶಲ್ಯಕೈಃ ॥೭॥

ಹತಾಃ ಸುಧೃತಿಮುಖ್ಯಾಸ್ತೇ ಸ್ಯಂದನಂ ಸಂಶ್ರಿತಾಃ ಪೃಥಕ್ ।
ಸರ್ವಪ್ರಾಣೈರಯುಧ್ಯಂತ ಕಾಮೇನ ಬಲವತ್ತರಾಃ ॥೮॥

ತದಾ ತೇ ನಿಶಿತೈರ್ಬಾಣೈಃ ಕಾಮಂ ವಿವ್ಯಧುರೇಕಶಃ ।
ಕಾಮಸ್ತಾನಪಿ ಚಿಚ್ಛೇದ ಮಧ್ಯೇ ಪ್ರಾಪ್ತಾನ್ ಶರೈಃ ಪೃಥಕ್ ॥೯॥

ಕಾಮಸ್ಯ ದೃಷ್ಟ್ವಾಽತಿಬಲಂ ಸುಧೃತಿಃ ಪ್ರಜವಾತ್ತದಾ ।
ಭೋ ರಾಜಪುತ್ರಾಃ ಶ್ರುಣುತ ವರ್ಧನೇನ ಪುರೋದಿತಂ ॥೧೦॥

ಹಾಕಿದ್ದ ದೇವತೆಗಳನ್ನು ಕೆಳಗಿಟ್ಟು ಎಲ್ಲರೂ ಒಟ್ಟಿಗೆ ಬಹಳ ಬಲಶಾಲಿಯಾದ ಮನ್ಮಥನೊಂದಿಗೆ ಯುದ್ಧಮಾಡಿದರು. ಐದು ವರ್ಷದ ಹುಡುಗನಾದರೂ ಶಸ್ತ್ರಾಸ್ತ್ರ ವಿದ್ಯಾಪ್ರವೀಣನಾದ ಮನ್ಮಥನೊಬ್ಬನೇ ಅವರೆಲ್ಲರೊಂದಿಗೂ ಯುದ್ಧಮಾಡಿದುದು ಅತ್ಯಂತ ಆಶ್ಚರ್ಯಕರವಾಗಿತ್ತು. ಮನುಷ್ಯರು ದೇವತೆಗಳು ಮತ್ತು ಇತರರೂ ಇದನ್ನು ನೋಡಿ ಅತ್ಯಂತವಾಗಿ ಆಶ್ಚರ್ಯಪಟ್ಟರು. ||೪-೫-೬||

ಮನ್ಮಥನು ಶತ್ರುಪಕ್ಷದವರ ಅಸ್ತ್ರಗಳ ಸಮೂಹಗಳನ್ನೂ ಶಸ್ತ್ರಗಳನ್ನೂ ಪ್ರತ್ಯೇಕವಾಗಿ ಕತ್ತರಿಸುತ್ತಾ ಅವರನ್ನೆಲ್ಲರನ್ನೂ ಬೆಳ್ಳಗೆ ಚೂಪಾಗಿರುವ ಮೂತಿಗಳುಳ್ಳ ಬಾಣಗಳಿಂದ ಹೊಡೆದನು. ||೭||

ಮನ್ಮಥನು ಸುಧೃತಿಯೇ ಮೊದಲಾದವರನ್ನು ಈರೀತಿಯಾಗಿ ಹೊಡೆಯಲು ಅತ್ಯಂತ ಬಲಿಷ್ಠರಾದ ಇವರೆಲ್ಲರೂ ತಮ್ಮ ಸರ್ವಶಕ್ತಿಯನ್ನೂ ಉಪಯೋಗಿಸಿ ಮನ್ಮಥನೊಂದಿಗೆ ಯುದ್ಧಮಾಡಲು ಪ್ರಾರಂಭಿಸಿದರು. ಆಗ ಇವರೆಲ್ಲರೂ ಒಟ್ಟುಗೂಡಿ ಮನ್ಮಥನಮೇಲೆ ತೀಕ್ಷ್ಣಗಳಾದ ಬಾಣಗಳನ್ನು ಪ್ರಯೋಗಿಸಿದರು. ಆ ಬಾಣಗಳು ತನ್ನಮೇಲೆ ಬೀಳುವಷ್ಟರೊಳಗಾಗಿಯೇ ಮಧ್ಯದಲ್ಲಿಯೇ ಕಾಮನು

ಏಕಃ ಕುಮಾರಸ್ತೇನಾಽತ್ರ ಹತಾ ರಾಷ್ಟ್ರಾಧಿಪಾಃ ಕ್ಷಣಾತ್ ।
ಕೋಟಿಶೋಽತಿ ಬಲಾಸ್ತೇನ ದೈವಂ ಬಲಮಿದಂ ಭವೇತ್ ॥೧೧॥

ಇತಿ ತತ್ಸತ್ಯಮೇವಾಽದ್ಯ ಪಶ್ಯಾಮಃ ಕಾಮಪೌರುಷಂ ।
ಏಕಃ ಕುಮಾರಃ ಸರ್ವಾನ್ ನೋ ರುರೋಧ ಸಮಿತಿಂ ಜಯಾನ್ ॥೧೨॥

ಅದ್ಯಾಽಪಿ ನಾಽಗಚ್ಛತಿ ನೋ ರಾಜಾ ವೀರವ್ರತೋ ವಿಭುಃ ।
ಕಾಮೋ ನ ಜೇತುಮಸ್ಮಾಭಿಃ ಶಕ್ಯೋ ವೀರವ್ರತಾದೃತೇ ॥೧೩॥

ಸೋಽಪಿ ರಾಜಾ ಮಹಾದೇವಂ ಸಂತೋಷ್ಯ ತಪಸಾ ಯದಿ ।
ಭೂಯಾತ್ಪ್ರಾಪ್ತವಶೇ ನೋ ಚೇತ್ಕಾಮೋಽಸ್ಮಾಂಜಯತಿಕ್ಷಣಾತ್ ॥೧೪॥

ಅವೆಲ್ಲವನ್ನೂ ಕತ್ತರಿಸಿದನು. ಆಗ ಮನ್ಮಥನ ಅಸಾಧಾರಣ ಸಾಮರ್ಥ್ಯವನ್ನು ನೋಡಿ ಸುಧೃತಿಯು ರಾಜಕುಮಾರರೊಂದಿಗೆ ಎಲೈ ರಾಜಪುತ್ರರೇ, ವರ್ಧನನು ಹಿಂದೆ ಹೇಳಿದ್ದ ಮಾತನ್ನು ಹೇಳುವೆನು, ಕೇಳಿರಿ, ಎಂದನು. ||೮-೯-೧೦||

ಹಿಂದೆ ವರ್ಧನನು ಒಂಟಿಯಾಗಿ ಬಾಲಕನಾಗಿದ್ದರೂ ಮನ್ಮಥನು ಕೋಟ್ಯಂತರ ಬಲಿಷ್ಠರಾದ ರಾಷ್ಟ್ರನಾಯಕರನ್ನು ಕ್ಷಣಮಾತ್ರದಲ್ಲಿಯೇ ನಾಶಮಾಡಿರುವುದನ್ನೂ, ಅವನು ಇನ್ನೂ ಶಕ್ತಿಕುಂದದೆ ಇರುವುದನ್ನೂ ನೋಡಿದರೆ ಇದನ್ನು ದೈವ ಬಲವೆಂದೇ ಹೇಳಬೇಕು. ಎಂದು ವಿವರಿಸಿದನು. ಮನ್ಮಥನ ಪರಾಕ್ರಮವನ್ನು ನೋಡುತ್ತಿರುವ ನಮಗೆ ವರ್ಧನನ ಆ ಮಾತು ಸತ್ಯವೆಂತಲೇ ಹೊಳೆಯುವುದು. ಮನ್ಮಥನು ಕೇವಲ ಬಾಲಕನಾಗಿ ಒಬ್ಬಂಟಿಗನಾಗಿದ್ದರೂ, ಬಲಿಷ್ಠರಾದ ನಮ್ಮೆಲ್ಲರನ್ನೂ ತಡೆಗಟ್ಟಿದ್ದಾನೆ. ನಮ್ಮ ಸ್ವಾಮಿಯಾದ ವೀರವ್ರತಧೊರೆಯು ಇನ್ನೂ ಹಿಂತಿರುಗಿ ಬಂದಿಲ್ಲ. ವೀರವ್ರತನನ್ನು ಬಿಟ್ಟು ಮನ್ಮಥನನ್ನು ಜಯಿಸಲು ಇನ್ನಾರಿಗೂ ಸಾಧ್ಯವಿಲ್ಲ. ||೧೧-೧೨-೧೩||

ನಮ್ಮ ಧೊರೆಯಾದ ವೀರವ್ರತನು ಇಷ್ಟರಲ್ಲೇ ಮಹಾದೇವನ ಅನುಗ್ರಹವನ್ನು ಪಡೆದು ನಮಗೆ ರಕ್ಷಕನಾಗಿ ಬರದೇ ಇದ್ದರೆ ನಮ್ಮನ್ನು ಮನ್ಮಥನು ಕ್ಷಣಕಾಲದಲ್ಲಿಯೇ ಜಯಿಸುವುದು ಖಂಡಿತವು. ಹೀಗೆ ಸೇನಾಪತಿಯಾದ ಸುಧೃತಿಯು ಹೇಳುತ್ತಿರಲು ಮನ್ಮಥನು ಶೀಘ್ರವಾಗಿ ತನ್ನ ಯುದ್ಧವನ್ನು ಮುಂದುವರಿಸುತ್ತಾ ಸುಧೃತಿಯ ಆಯುಧವನ್ನು ತೀಕ್ಷ್ಣವಾದ ಬಾಣಪ್ರಯೋಗದ ಮೂಲಕ ಜಾಗ್ರತೆ

ವದತ್ಯೇವ ಮುನೀಕೇಶೇ ಕಾಮಃ ಶೀಘ್ರತರಕ್ರಿಯಃ ।
ಸುಧೃತೇ ರಾಯುಧಂ ತೀಕ್ಷ್ಣ ಶರೇಣಾಚ್ಛಿನದಂಜಸಾ ॥೧೫॥

ಅನ್ಯೇನ ಹೃದಿ ವಿವ್ಯಾಧ ಗಾಢಂ ಬಾಣೇನ ಪತ್ರಿಣಾ ।
ಸುಧೃತಿ ರ್ಹೃದಿ ಸಂವಿದ್ಧಃ ಕೃತ್ತಮೂಲ ಇವ ದ್ರುಮಃ ॥೧೬॥

ಪಪಾತ ಭುವಿ ನಿಷ್ಪ್ರಜ್ಞೋ ವಿಭಿನ್ನ ಹೃದಯಸ್ತದಾ ।
ಶತ್ರುಂಜಯಂ ಶತ್ರುಹಣಂ ಭೀಮಂ ಸಮರತಾಪನಂ ॥೧೭॥

ವಿಜೇಯ ಯುದ್ಧಕುಶಲೋ ವಿಧ್ವಾ ಮರ್ಮಸು ಸಾಯಕೈಃ ।
ತೀಕ್ಷ್ಣೈರಾಶೀ ವಿಷಪ್ರಖ್ಯೈಃ ಮೂರ್ಛಿತಾನಕರೋದ್ಭೃಶಂ ॥೧೮॥

ತೇ ಹತಾಃ ಕಾಮಬಾಣೌಘೈ ರ್ಜರ್ಜರೀಭೂತ ವಿಗ್ರಹಾಃ ।
ಹಿತ್ವಾ ಪ್ರಜ್ಞಾ ಮಾಯುಧಂ ಚ ಪ್ರೇಯಸೀಮಿವ ಕಾಮುಕಃ ॥೧೯॥

ಸಂ ಶ್ಲಿಷ್ಯಭೂಮಿಂ ಸರ್ವಾಂಗೈ ರ್ನವಿದುರ್ಬಾಹ್ಯಮಾಂತರಂ ।
ವೀರವಿಕ್ರಮ ಮುಖ್ಯಾಸ್ತೇ ಪುತ್ರಾ ದೃಷ್ಟ್ವಾ ತಥಾವಿಧಾನ್ ॥೨೦॥

ಯಾಗಿ ಕತ್ತರಿಸಿಹಾಕಿದನು. ಅಲ್ಲದೇ ಇವನು ಬೇರೊಂದು ಬಾಣವನ್ನು ಸುಧೃತಿಯ ಹೃದಯಕ್ಕೆ ನಾಟುವಂತೆ ಬಿಟ್ಟನು. ಆ ಬಾಣವು ಸುಧೃತಿಯ ಹೃದಯಕ್ಕೆ ನಾಟಿ ಇವನು, ಬುಡವನ್ನು ಕತ್ತರಿಸಿದಾಗ ಮರವು ಕೆಳಗೆ ಬೀಳುವಂತೆ, ಮೂರ್ಛಾಕ್ರಾಂತನಾಗಿ ಭೂಮಿಯ ಮೇಲೆ ಬಿದ್ದನು. ಅಲ್ಲದೇ ಮನ್ಮಥನು ಶತ್ರುಂಜಯ, ಶತ್ರುಘ್ನ, ಭೀಮ, ಸಮರತಾಪನ ಈ ರಾಜಕುಮಾರರಿಗೂ ತೀಕ್ಷ್ಣಬಾಣಗಳನ್ನು ಪ್ರಯೋಗಿಸಿದನು. ॥೧೪-೧೫-೧೬-೧೭॥

ಯುದ್ಧದಲ್ಲಿ ಜಯವನ್ನೇ ಗಳಿಸಲು ಸಮರ್ಥನಾದ ಮನ್ಮಥನು ರಾಜಕುಮಾರರಿಗೆಲ್ಲರಿಗೂ, ಅವರ ಮರ್ಮಸ್ಥಳಗಳಿಗೆ ಸರ್ಪಗಳಂತೆ ಭೇದಿಸಲು ಸಮರ್ಥಗಳಾದ ಬಾಣಗಳನ್ನು ಬಿಟ್ಟು ಅವರೆಲ್ಲರೂ ಅತ್ಯಂತ ಮೂರ್ಛೆಹೋಗುವಂತೆ ಮಾಡಿದನು. ಆ ರಾಜಕುಮಾರರೆಲ್ಲರೂ ಮನ್ಮಥನ ಬಾಣಗಳಿಗೆ ಸಿಕ್ಕಿ ತಮ್ಮ ಶರೀರವೆಲ್ಲವೂ ವಿಶೇಷ ಯಾತನೆಗೆ ಒಳಗಾಗಿರಲು ಜ್ಞಾನ ಮತ್ತು ಆಯುಧಶೂನ್ಯರಾಗಿ, ಕಾಮುಕನು ಪ್ರಿಯೆಯನ್ನು ಆಲಿಂಗಿಸುವಂತೆ, ತಮ್ಮ ಸರ್ವಾವಯವಗಳಿಂದಲೂ ಭೂಮಿಯನ್ನು ಆಲಿಂಗಿಸಿ, ಬಾಹ್ಯ ಮತ್ತು ಆಂತರಶೂನ್ಯರಾಗಿ ಬಿದ್ದರು. ತಮ್ಮ ತಂದೆಗಳಾದ

ಪಿತೄನ್ ಶೋಕೇ ಸಮಾಕ್ರಾಂತಾಃ ಪರಿದೇವಿತುಮಾರಭನ್ ।
ಹಾ ತಾತಾಃಸ್ಮಾನ್ಪರಿತ್ಯಜ್ಯ ಕ್ವಗತೋಽನಾಥತಾಂ ಗತಾನ್ ॥೨೧॥

ತವ ತಾತೇ ಚ ಕಿಂ ಬ್ರೂಮೋ ಸೋಽಪಿ ತ್ಯಕ್ಷ್ಯತಿ ಜೀವಿತಂ ।
ವಿನಾ ಭವದ್ಭಿರ್ನಿಮಿಷಮಪಿ ನೋ ಭವಿತಾ ನೃಪಃ ॥೨೨॥

ಏವಂ ವಿಲಪಮಾನಾನ್ ತಾನ್ ದೃಷ್ಟ್ವಾ ಸುಧೃತಿನಂದನಃ ।
ರಣಧೀರಃ ಪ್ರಾಹ ತದಾ ವಚೋ ಮೇ ಶ್ರಣುತಾದರಾತ್ ॥೨೩॥

ಪರಾಕ್ರಮಸ್ಯ ಕಾಲೋಽಯಂ ನ ಚ ವೈ ಪರಿದೇವಿತುಂ ।
ಶತ್ರುರತ್ಯೇತಿ ಸರ್ವಾನ್ ನೋ ಭವೇಚ್ಛೋಕೋ ಹಿ ವೀರ್ಯಹಾ॥೨೪॥

ಯೋದ್ಧವ್ಯಂ ಕ್ಷತ್ರಿಯೈರ್ಯುದ್ಧಂ ಯಾವತ್ಪ್ರಾಣಸ್ಯ ಧಾರಣಂ ।
ತಸ್ಮಾಚ್ಛೋಕಂ ಪರಿತ್ಯಜ್ಯ ಯುದ್ಧ್ಯಾಮೋಽತ್ರ ಯಥಾಬಲಂ ॥೨೫॥

ಶತ್ರುಂಜಯನೇ ಮೊದಲಾದವರೂ ಈ ರೀತಿ ಬಿದ್ದುದನ್ನು ಕಂಡು ಅವರ ಮಕ್ಕಳಾದ ವೀರವಿಕ್ರಮನೇ ಮೊದಲಾದವರು ಬಹಳ ಚಿಂತೆಗೊಳಗಾದರು! ||೧೮-೧೯-೨೦||

ಹೀಗೆ ರಾಜಕುಮಾರರೆಲ್ಲರೂ ತಮ್ಮ ತಂದೆಗಳ ಶೋಚನೀಯ ಪರಿಸ್ಥಿತಿಯನ್ನು ನೋಡಿ ದುಃಖಾಕ್ರಾಂತರಾದರು. ಹಾ! ಓ ತಂದೆಯೇ, ನಮ್ಮನ್ನು ಅನಾಥರನ್ನಾಗಿಮಾಡಿ ನೀನು ಎಲ್ಲಿಗೆ ಹೊರಟುಹೋದೆ? ಈ ಸಮಾಚಾರವನ್ನು ಕೇಳಿದರೆ ನಿಮ್ಮ ತಂದೆಯಾದ ವೀರವ್ರತಧೊರೆಯೂ, ಕೂಡ ಪ್ರಾಣವನ್ನು ಬಿಡಬಹುದು. ನಮ್ಮ ಧೊರೆಯಾದ ಆತನು ನಿಮ್ಮನ್ನು ಬಿಟ್ಟು ಒಂದು ನಿಮಿಷ ಕಾಲವೂ, ಜೀವಿಸಿರಲಾರನು. ಹೀಗೆ ಆಡಿಕೊಳ್ಳುತ್ತಾ ಅಳುತ್ತಿರುವ ರಾಜಕುಮಾರರನ್ನು ಸುಧೃತಿಯ ಮಗನಾದ ರಣಧೀರನು ಸಮಾಧಾನಗೊಳಿಸುತ್ತಾ, ಎಲೈ ರಾಜಕುಮಾರರೇ, ನನ್ನ ಮಾತನ್ನು ವಿಶ್ವಾಸದಿಂದ ಕೇಳಿ, ಎಂದನು. ||೨೧-೨೨-೨೩||

ಇದು ಪರಾಕ್ರಮವನ್ನು ತೋರಿಸುವ ಕಾಲವು. ಶೋಕಮಾಡುವ ಕಾಲವಲ್ಲ. ನಾವು ಹೀಗೆ ಶೋಕಮಾಡುತ್ತಾ ಇದ್ದರೆ ಶತ್ರುವು ನಮ್ಮನ್ನು ನಿರ್ಮೂಲಮಾಡುವನು. ವೀರನು ಹೀಗೆ ಶೋಕಿಸಿದರೆ ಅದು ಅವನ ಪರಾಕ್ರಮವನ್ನೇ ನಾಶಮಾಡುವುದು. ಯುದ್ಧಕಾಲದಲ್ಲಿ ಜೀವಂತರಾಗಿರುವ ವರೆಗೂ ಕ್ಷತ್ರಿಯರು ಯುದ್ಧವನ್ನು

ರಾಜ್ಞೇ ನಿವೇದನಾಯೈಷ ವೀರಸೇನಃ ಪ್ರಯಾತ್ವಿತಃ ।
ಭವತಾಂ ದೇವಿತಂ ದೃಷ್ಟ್ವಾ ಸೈನಿಕಾಃ ಸರ್ವತೋ ದಿಶಂ ॥೨೬॥

ಪ್ರಯಾಂತಿ ಭೀತಾ ಹಾಹೇತಿ ರಟಂತಸ್ತ್ಯಕ್ತಹೇತಯಃ ।
ನಿವರ್ತಯಧ್ವಂ ಶೋಕಾತ್ಸ್ವಂ ಚಿತ್ತಂ ಧೈರ್ಯ ಸಮಾಶ್ರಯಾತ್॥೨೭॥

ನಿಶಮ್ಯೈವಂ ಸುಧೃತಿ ಜವಾಕ್ಯಂ ಧೈರ್ಯಂ ಸಮಾಶ್ರಿತಾಃ ।
ಯುದ್ಧಾಯ ನಿರ್ಯಯುಃ ಸರ್ವೇ ವೀರವಿಕ್ರಮಮುಖ್ಯಕಾಃ ॥೨೮॥

ರಾಜ್ಞೇ ನಿವೇದನಾಯಾಽಽಶು ವೀರಸೇನಃ ಸುನಿರ್ಗತಃ ।
ಶತ್ರುಂಜಯ ಸುತಾಽದ್ಯಾಸ್ತೇ ಕಾಮಸ್ಯಾಽಭಿ ಮುಖೇ ಸ್ಥಿತಾಃ ॥೨೯॥

ಏತಸ್ಮಿನ್ನಂತರೇ ದೇವಾ ದೃಷ್ಟ್ವಾ ಕಾಮಾತ್ಪರಾಭವಂ ।
ಇಂದ್ರಾದೀನ್ಮೋಚಿತುಂ ಸರ್ವೇ ಧೃತಧೈರ್ಯಾಃ ಸಮಾಕ್ರಮನ್॥೩೦॥

ಮಾಡಲೇಬೇಕು. ಆದ್ದರಿಂದ ಶೋಕಿಸುವುದನ್ನು ಬಿಟ್ಟು ನಮ್ಮ ಶಕ್ತಿಗೆ ಅನುಸಾರವಾಗಿ ಯುದ್ಧಮಾಡೋಣ. ಈ ವೀರಸೇನನು ಈ ಸಮಾಚಾರವನ್ನು ತಿಳಿಸಲು ರಾಜನ ಸಮೀಪಕ್ಕೆ ಹೋಗಲಿ. ನೀವು ಹೀಗೆ ಶೋಕಿಸುತ್ತಲೇ ಇದ್ದರೆ ನಮ್ಮ ಸೈನಿಕರೂ ಅಂಜಿಕೆಯಿಂದ ಎಲ್ಲಾ ಕಡೆಗೂ ಓಡಿಹೋಗುವರು. ||೨೪-೨೫-೨೬||

ನಮ್ಮ ಕಡೆಯ ಸೈನಿಕರು ನಾವು ಹೀಗೆ ಶೋಕಿಸುತ್ತಿದ್ದರೆ, ಹಾ ! ಹಾ ! ಎಂದು ಕೂಗುತ್ತಾ ತಮ್ಮ ಕತ್ತಿಗಳೆಲ್ಲವನ್ನೂ ಬಿಸುಟು ಭಯಗೊಂಡು ಚದುರಿ ಹೋಗುವರು. ಆದ್ದರಿಂದ ಶೋಕಿಸುವುದನ್ನು ಬಿಟ್ಟು ಧೈರ್ಯವನ್ನು ಹೊಂದಿರಿ. ಹೀಗೆ ಸುಧೃತಿಪುತ್ರನು ಹೇಳಿದ ಮಾತನ್ನು ಕೇಳಿ ವೀರವಿಕ್ರಮನೇ ಮೊದಲಾದವರು ಧೈರ್ಯವನ್ನು ಹೊಂದಿ ಯುದ್ಧಕ್ಕೆ ತೊಡಗಿದರು. ವೀರಸೇನನು ಈ ಸಮಾಚಾರವನ್ನು ತಿಳಿಸಲು ಶೀಘ್ರವಾಗಿ ಧೊರೆಯ ಬಳಿಗೆ ಹೋದನು. ಇಲ್ಲಿ ಶತ್ರುಂಜಯನೇ ಮೊದಲಾದವರ ಮಕ್ಕಳು ಮನ್ಮಥನ ಎದುರಾಗಿ ಯುದ್ಧಕ್ಕೆ ಸಿದ್ಧರಾದರು. ||೨೭-೨೮-೨೯||

ಈ ಸಂದರ್ಭದಲ್ಲಿ ದೇವತೆಗಳು, ಕಾಮನು ಮಾನವರನ್ನು ಸೋಲಿಸುತ್ತಿದ್ದುದನ್ನು ಕಂಡು, ಧೈರ್ಯವನ್ನು ಹೊಂದಿ ಇಂದ್ರಾದಿಗಳನ್ನು ಬಿಡಿಸಲು ಅವರ ಸಮೀಪಕ್ಕೆ ಬಂದರು. ಆದರೆ ರಣಧೀರನು ಬಾಣಗಳ ಮಳೆಯನ್ನು ಕರೆದು ಅವರೆಲ್ಲ

ರಣಧೀರೋಽಥ ತಾನ್ಸರ್ವಾನ್ ನಿವಾರ್ಯ ಶರವೃಷ್ಟಿಭಿಃ ।
ವಿದ್ರುತಾನಾಹ್ವಯತ್ಸರ್ವಾನ್ ಸೈನಿಕಾನ್ಮರ್ತ್ಯ ಪಕ್ಷಗಾನ್ ॥೩೧॥

ಹೇ ಹೇ ಶೂರಾ ನೋಽಚಿತಂ ವಃ ಪಲಾಯನ ಮಶಂಸಿತಂ ।
ಪಲಾಯ್ಯ ಸಮರಾದ್ಯೂಯಂ ಭರ್ತೃಪಿಂಡ ವಿನಿರ್ಯಯಂ ॥೩೨॥

ಅಕೃತ್ವಾ ಗಚ್ಛಥಾಽತ್ಯಂತ ಮಘಶಂಸನಿಕಾಂ ಗತಿಂ ।
ಭರ್ತೃ ಪಿಂಡಸ್ಯ ನಿರ್ಯೋಗೋ ಯುದ್ಧೇ ದೇಹಸಮರ್ಪಣಂ ॥೩೩॥

ಪಲಾಯ್ಯಾಭ್ಯಾಗತಂ ವೀರಪತ್ನ್ಯಶ್ಚೋಪಾಲಭಂತಿ ವೈ ।
ಅಲಂ ಪ್ರಾಣಪರಿತ್ರಾಣಾಲ್ಲೋಕದ್ವಿತಯ ನಾಶನಾತ್ ॥೩೪॥

ನಿವರ್ತಧ್ವಂ ನಿವರ್ತಧ್ವಂ ಧೈರ್ಯಮಾಲಂಬ್ಯ ಸತ್ವರಂ ।
ಇತಿ ತದ್ವಚನಂ ಶ್ರುತ್ವಾ ನಿವೃತ್ತಾಃ ಸರ್ವ ಏವ ತೇ ॥೩೫॥

ರನ್ನೂ ಹಿಂದಕ್ಕಟ್ಟಿ ಓಡುತ್ತಿರುವ ಮನುಷ್ಯ ಪಕ್ಷದ ಸೈನಿಕರನ್ನು ಹಿಂದಕ್ಕೆ ಬರುವಂತೆ ಕೂಗಿದನು. ಎಲೈ ಶೂರರೇ, ನೀವು ಹೀಗೆ ಸೈನಿಕರಿಗೆ ಅಯೋಗ್ಯವಾದ ರೀತಿಯಲ್ಲಿ ಪಲಾಯನಮಾಡುವುದು ಅತ್ಯಂತ ಅನುಚಿತವು. ನೀವು ನಿಮ್ಮ ಪ್ರಭುವು ನಿಮ್ಮನ್ನು ಸಲಹಿದ್ದಕ್ಕೆ ಪ್ರತಿಸೇವೆಯನ್ನು ಮಾಡದೇ ಹೋಗಬಾರದು. ||೩೦-೩೧-೩೨||

ನೀವು ಯುದ್ಧದಿಂದ ಪಲಾಯನ ಮಾಡಿದರೆ ನಿಮ್ಮ ಪ್ರಭುವಿಗೆ ಕೃತಘ್ನರಾದಂತಾಗುವುದು. ಹಾಗೆ ಮಾಡಿ ಪಾಪಮಯವಾದ ದುರ್ಗತಿಯನ್ನು ಹೊಂದಬೇಡಿ. ನಿಮ್ಮ ಸ್ವಾಮಿಗೆ ಕೃತಜ್ಞತೆ ತೋರಿಸುವುದು ನೀವು ಯುದ್ಧದಲ್ಲಿ ಹೋರಾಡಿ ದೇಹವನ್ನು ಅವಶ್ಯಕವಾದರೆ ತ್ಯಾಗಮಾಡುವುದರ ಮೂಲಕವೇ ಸಾಧ್ಯ. ನೀವು ಪಲಾಯನಮಾಡಿ ಹಿಂದಿರುಗಿದರೆ ನಿಮ್ಮಂಥ ವೀರರ ಪತ್ನಿಯವರೂ ಕೂಡ ನಿಮ್ಮನ್ನು ನಿಂದಿಸುತ್ತಾರೆ. ಇಹಲೋಕ ಮತ್ತು ಪರಲೋಕ ಇವೆರಡನ್ನೂ ಹಾಳು ಮಾಡುವ ಪಲಾಯನವನ್ನು ಮಾಡಿ, ಪ್ರಾಣಸಂರಕ್ಷಣೆಯ ಮಾರ್ಗವನ್ನು ನೀವು ಆಶ್ರಯಿಸಬಾರದು. ಆದ್ದರಿಂದ ಧೈರ್ಯವನ್ನಾಶ್ರಯಿಸಿ ಶೀಘ್ರವಾಗಿ ಖಂಡಿತವಾಗಿ ಹಿಂತಿರುಗಿರಿ. ಎಂದು ರಣಧೀರನಾಡಿದ ಮಾತನ್ನು ಲಾಲಿಸಿ ಆ ಸೈನಿಕರೆಲ್ಲರೂ ಹಿಂತಿರುಗಿದರು. ||೩೩-೩೪-೩೫||

ಪುನಃ ಸಮಭವದ್ಯುದ್ಧಂ ದೇವಮಾನವ ಸೇನಯೋಃ ।
ಮುಹೂರ್ತಮಾತ್ರಮಭವದ್ರಣಃ ಪರಮದಾರುಣಃ ॥೩೬॥

ತದಂತರೇ ತು ಮನುಜಾನ್ ಕಾಮಃ ಸಾಯಕವೃಷ್ಟಿಭಿಃ ।
ವಿಧಮ ನ್ಮಾರುತ ಇವ ಮೇಘವೃಂದಂ ನಭಸ್ತಲೇ ॥೩೭॥

ತೇ ಹನ್ಯಮಾನಾಃ ಸಮರೇ ಕಾಮಸ್ಯ ಶರವೃಷ್ಟಿಭಿಃ ।
ನ ಶೇಕುಃ ಸಂಮುಖೇ ಸ್ಥಾತುಂ ವಾಯೋರಗ್ರೇ ಘನಾ ಇವ ॥೩೮॥

ತದಂತರೇ ಸುಧೃತಿಜಃ ಶತ್ರುಂಜಯಸುತಂ ಬಲೀ ।
ಪ್ರಾಹ ತತ್ಕಾಲ ಸದೃಶಂ ರಣಧೀರೋ ಮಹಾಧೃತಿಃ ॥೩೯॥

ರಾಜಪುತ್ರ ಶೃಣು ವಚೋ ಭ್ರಾತೃಭಿಃ ಸೇನಯಾಽಪಿ ವೈ ।
ಯತಸ್ತ್ವಂ ದೇವಸೇನಾಭ್ಯೋ ರಕ್ಷೇಂದ್ರಾದೀನ್ಪಿತ್ನ್ ನ ಪಿ ॥೪೦॥

ಪುನಃ ದೇವತೆಗಳ ಮತ್ತು ಮಾನವರ ಸೈನ್ಯಗಳಿಗೆ ಬಹಳ ಭಯಂಕರವಾದ ಯುದ್ಧವು ಮುಹೂರ್ತಕಾಲ ಸಂಭವಿಸಿತು. ಈ ಸಂದರ್ಭದಲ್ಲಿ ಮನ್ಮಥನು ಬಾಣಗಳ ಸುರಿಮಳೆಗಳಿಂದ, ವಾಯುವು ಮೇಘಗಳ ಸಮೂಹವನ್ನು ಆಕಾಶದಲ್ಲಿ ಹೇಗೆ ಚದುರಿಸುವುದೋ ಹಾಗೆ, ಮನುಷ್ಯರನ್ನು ಚದುರಿಸಿ ಓಡಿಸುತ್ತಿದ್ದನು. ॥೩೬-೩೭॥

ಯುದ್ಧದಲ್ಲಿ ಮನ್ಮಥನ ಬಾಣಗಳ ಸುಳಿಮಳೆಗಳಿಂದ ಹೊಡೆಯಲ್ಪಡುತ್ತಿರುವ ಮನುಷ್ಯಸೈನಿಕರು ವಾಯುವಿನ ಮುಂದುಗಡೆ ಮೋಡಗಳು ಹೇಗೆ ನಿಲ್ಲಲಾರವೋ ಹಾಗೆ ನಿಲ್ಲಲಾರದೇ ಹೋದರು. ಈ ಸಂದರ್ಭದಲ್ಲಿ ವೀರನಾದ ಸುಧೃತಿಕುಮಾರನೂ, ಮಹಾಧೀರನೂ, ಬಹಳ ಬುದ್ಧಿಶಾಲಿಯೂ, ಆದ ರಣಧೀರನು ಶತ್ರುಂಜಯನ ಮಗನನ್ನು ಕುರಿತು ಎಲೈ ರಾಜಕುಮಾರನೇ, ಕೇಳು. ನೀನು ನಿನ್ನ ತಮ್ಮಂದಿರೊಂದಿಗೂ ಮತ್ತು ಸೈನಿಕರೊಂದಿಗೂ ಕೂಡಿ ದೇವತೆಗಳ ಸೈನ್ಯಗಳು ನಮ್ಮ ವಶದಲ್ಲಿರುವ ಇಂದ್ರಾದಿದೇವತೆಗಳನ್ನೂ ಮತ್ತು ಪಿತೃದೇವತೆಗಳನ್ನೂ ಬಿಡಿಸಿಕೊಂಡು ಹೋಗದಂತೆ ಇವರನ್ನು ರಕ್ಷಿಸುತ್ತಿರು. ನಾನು ಮನ್ಮಥನೊಂದಿಗೆ ಯುದ್ಧಮಾಡಲು ಪ್ರಾರಂಭಿಸುವೆನು. ಈಗ ನನ್ನ ಪರಾಕ್ರಮವನ್ನು ನೋಡುವೆ. ಎಂದು ಆ ಸಮಯಕ್ಕೆ ಯೋಗ್ಯವಾದ ಮಾತನ್ನು ಹೇಳಿದನು. ರಣಧೀರನು ಈ ಮಾತನ್ನು ಕೇಳಿ ಮನ್ಮಥನ ಮುಂದುಗಡೆಗೆ ದೊಡ್ಡ ಧನುಸ್ಸನ್ನು ಸೆಳೆಯುತ್ತಾ ಹೊರಟನು. ॥೩೮-೩೯-೪೦॥

ಅಹಂ ಕಾಮಂ ಯೋಧಯಿಷ್ಯೇ ಪಶ್ಯಮೇಽದ್ಯ ಪರಾಕ್ರಮಂ ।
ಇತ್ಯುಕ್ತ್ವಾ ರಥಮಾರೂಢಃ ಧನು ರ್ವಿಸ್ಫಾರಯನ್ಮಹತ್ ॥೪೧॥

ಕಾಮಸ್ಯ ಸಮ್ಮುಖಂ ಪ್ರಾಗಾತ್ ಸಾಯಕೈರಭಿವರ್ಷಯನ್ ।
ಅಥ ಕಾಮೋಽಪಿ ತಂ ವರ್ಷಂ ಶರಸ್ಯ ಶರವೃಷ್ಟಿಭಿಃ ॥೪೨॥

ವಿನಿವಾರ್ಯ ಸುನಿಶಿತಾನ್ ಪ್ರಾಯುಂಜ ತ್ಸಾಯಕಾನ್ ತದಾ ।
ತಾನ್(ಅ)ಪ್ರಾಪ್ತಾನೇವ ಮಧ್ಯೇ ಚಿಚ್ಛೇದ ಸಾಯಕೈಸ್ತ್ರಿಭಿಃ ॥೪೩॥

ಛಿತ್ವಾ ದ್ರುತಂ ಮುಷ್ಟಿದೇಶೇ ಮನ್ಮಥಸ್ಯ ಮಹೇಷುಣಾ ।
ಜಘಾನ ರಣಧೀರೋಽಪಿ ತದಾ ಕಾಮ ಕರಾ ದ್ಧನುಃ ॥೪೪॥

ಪ್ರಾಪತ(ತ್)ಭುವಿ ತದ್ದೃಷ್ಟ್ವಾ ಶಶಂಸುಃ ಸಾಧುಸಾಧ್ವಿತಿ ।
ಕಾಮೋಽಪಿ ವಿಕ್ರಮಂ ದೃಷ್ಟ್ವಾ ರಣಧೀರಸ್ಯ ಸಂಯುಗೇ ॥೪೫॥

ಸಾಧು ವೀರ ಶ್ಲಾಘ್ಯತಮ ಸ್ತ್ವತ್ವೈವಂ ನಿಶಿತಂ ಶರಂ ।
ಚಾಪಮಾದಾಯ ಸಂಧಾಯ ರಣಧೀರಸ್ಯ ಪಶ್ಯತಃ ॥೪೬॥

ರಣಧೀರನು ಬಾಣಗಳ ಸುರಿಮಳೆಗರೆಯುತ್ತಾ ಮನ್ಮಥನ ಮುಂದುಗಡೆ ಹೋದನು. ಅನಂತರ ಮನ್ಮಥನೂ ಕೂಡ ಆ ಬಾಣಗಳ ಸುರಿಮಳೆಯನ್ನು ಪ್ರತಿಯಾಗಿ ಬಾಣಗಳ ಮಳೆಗರೆದು ಅದನ್ನು ನಾಶಮಾಡಿ ಇನ್ನೂ ಅತಿ ತೀಕ್ಷ್ಣಗಳಾದ ಬಾಣಗಳನ್ನು ಪ್ರತಿಯಾಗಿ ಪ್ರಯೋಗಿಸಿದನು. ರಣಧೀರನು ಕೂಡ ಮನ್ಮಥನ ಬಾಣಗಳು ಮಧ್ಯದಲ್ಲಿ ಬರುತ್ತಿರುವಾಗಲೇ ಮೂರು ಬಾಣಗಳ ಮೂಲಕ ಕತ್ತರಿಸಿ ಒಂದು ದೊಡ್ಡ ಬಾಣವನ್ನು ಶೀಘ್ರವಾಗಿ ಮನ್ಮಥನ ಮುಷ್ಟಿಯ ಪ್ರದೇಶಕ್ಕೆ ಹೊಡೆದನು. ಆಗ ಮನ್ಮಥನ ಕೈಯ್ಯಿಂದ ಧನುಸ್ಸು ಕೆಳಗೆ ಬಿದ್ದು ಹೋಯಿತು. ||೪೧-೪೨-೪೩-೪೪||

ಹೀಗೆ ಮನ್ಮಥನ ಕೈಯ್ಯಿಂದ ಧನುಸ್ಸೇ ಬೀಳುವಹಾಗೆ ಮಾಡಿದ ರಣಧೀರನ ಕುಶಲತೆಯನ್ನು ನೋಡಿ ಎಲ್ಲರೂ ಅವನನ್ನು ಭೇಷ್! ಭೇಷ್! ಎಂದು ಪ್ರಶಂಸೆ ಮಾಡಿದರು. ಯುದ್ಧದಲ್ಲಿ ರಣಧೀರನ ಪರಾಕ್ರಮವನ್ನು ಮನ್ಮಥನೂ ಮನಗಂಡು ಭೇಷ್! ನೀನು ವೀರರಲ್ಲಿ ಅತ್ಯಂತ ಶ್ಲಾಘ್ಯನಾಗಿದ್ದೀಯೆ ಎಂದು ಹೊಗಳಿ ತಾನೂ ಬಿಲ್ಲಿಗೆ ತೀಕ್ಷ್ಣವಾದ ಬಾಣವನ್ನು ಜೋಡಿಸಿ ರಣಧೀರನು ನೋಡುತ್ತಿರುವಾಗಲೇ

ಚಿಚ್ಛೇದ ಚಾಪಂ ಶರೌಘಂ ಲಘುಹಸ್ತಃ ಪ್ರತಾಪವಾನ್ ।
ತೇನ ಕ್ರುದ್ಧಃ ಸುಧೃತಿಜಃ ಚಾಪಮನ್ಯತ್ ಸಮಾದದೇ ॥೪೭॥

ಅಥ ಕಾಮ ಸ್ತಸ್ಯ ರಥಮಶ್ವಾನ್ ಸೂತಂ ಶರಾಸನಂ ।
ಚಿಚ್ಛೇದ ಯುಗಪದ್ಬಾಣೈಃ ಶೀಘ್ರಂ ಲಘುಪರಾಕ್ರಮಃ ॥೪೮॥

ಅಥಾಽಽದಾಯ ಗದಾಂ ಸರ್ವಲೋಹಾಮಶನಿ ಸನ್ನಿಭಾಂ ।
ಪ್ರಾದ್ರವನ್ಮದನಂ ಹಂತುಂ ಕ್ರೋಧೇನಾಽಗ್ನಿರಿವ ಜ್ವಲನ್ ॥೪೯॥

ರಣಧೀರಂ ತಥಾಽಽಯಾಂತಂ ದೃಷ್ಟ್ವಾ ಕಾಮಃ ಸುವೇಗತಃ ।
ಚಕಾರ ವರ್ಷಂ ನಿಶಿತ ಶರಾಣಾಂ ಘನರಾಡಿವ ॥೫೦॥

ರಣಧೀರೋಽಪಿ ತಾಂ ವೃಷ್ಟಿಂ ಸರ್ಪಾನಿವ ಖಗೇಶ್ವರಃ ।
ಗ್ರಸನ್ ಜಘಾನ ಗದಯಾ ಸರ್ವಪ್ರಾಣೇನ ಮನ್ಮಥಂ ॥೫೧॥

ಗದಯಾ ತಾಡಿತೋ ಮೂರ್ಧ್ನಿ ಭ್ರಮನ್ನೇವ ಪಪಾತ ಹ ।
ಗಾಢಮೂರ್ಛಾಮವಾಪ್ತೋಽಥ ರಣಧೀರೋಽಪಿ ತತ್ಕ್ಷಣಂ ॥೫೨॥

ಅವನ ಬಿಲ್ಲನ್ನೂ ಮತ್ತು ಬಾಣಗಳ ಸಮೂಹವನ್ನೂ ಕತ್ತರಿಸಿದನು. ಕೈಚಳಕವುಳ್ಳವನೂ, ಮಹಾ ಪರಾಕ್ರಮಶಾಲಿಯೂ ಆದ ಸುಧೃತಿ ಪುತ್ರನಾದ ರಣಧೀರನು ಇದರಿಂದ ಕೋಪಗೊಂಡವನಾಗಿ ಬೇರೊಂದು ಧನುಸ್ಸನ್ನು ಕೈಗೆ ತೆಗೆದುಕೊಂಡನು. ||೪೫-೪೬-೪೭||

ಅನಂತರ ಮಹಾ ಪರಾಕ್ರಮಶಾಲಿಯಾದ ಮನ್ಮಥನು ರಣಧೀರನ ರಥ, ಕುದುರೆಗಳು, ಸಾರಥಿ, ಬತ್ತಳಿಕೆ, ಇವೆಲ್ಲವನ್ನೂ ಶೀಘ್ರವಾಗಿ ಏಕಕಾಲದಲ್ಲಿ ಕತ್ತರಿಸಿದನು. ಆಮೇಲೆ ಎಲ್ಲಾ ಲೋಹಗಳಿಂದಲೂ ಕೂಡಿದ ಸಿಡಿಲಿಗೆ ಸಮಾನವಾದ ಗದೆಯನ್ನು ತೆಗೆದುಕೊಂಡು ಮನ್ಮಥನಿಗೆ ಹೊಡೆಯಲು ಕೋಪದಿಂದ ಅಗ್ನಿಯಂತೆ ಜ್ವಲಿಸುತ್ತಾ ಅಟ್ಟಿಸಿಕೊಂಡು ಹೋದನು. ಹೀಗೆ ಓಡಿಬರುತ್ತಿರುವ ರಣಧೀರನನ್ನು ಕಾಮನು ನೋಡಿ ಶ್ರೇಷ್ಠಮೋಡದಂತೆ ಅವನ ಮೇಲೆ ಬಹಳ ವೇಗದಿಂದ ತೀಕ್ಷ್ಣ ಬಾಣಗಳ ಮಳೆಯನ್ನು ಸುರಿಸಿದನು. ||೪೮-೪೯-೫೦||

ರಣಧೀರನೂ ಕೂಡ ಆ ಬಾಣಗಳ ಸುರಿಮಳೆಗಳನ್ನು ಗರುಡನು ಸರ್ಪಗಳನ್ನು ಹೇಗೆ ನುಂಗುವನೋ ಹಾಗೆ ನಾಶಮಾಡಿ ತಾನು ಸರ್ವಶಕ್ತಿಯನ್ನುಪಯೋ

ಕಾಮ ಸಾಯಕವರ್ಷೇಣ ಚಾಲನೀ ಭೂತವಿಗ್ರಹಃ ।
ಪಪಾತಮೂರ್ಛಿತೋಽತ್ಯಂತಂ ವಜ್ರಾಹತ ಇವಾಽದ್ರಿರಾಟ್ ॥೫೩॥

ಇತಿ ಶ್ರೀ ತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ಕಾಮೋಪಾಖ್ಯಾನೇ ಏಕೋನವಿಂಶೋಽಧ್ಯಾಯಃ

ಗಿಸಿ ಮನ್ಮಥನನ್ನು ಗದೆಯಿಂದ ಹೊಡೆದನು. ಈ ಗದಾಪ್ರಹಾರದಿಂದ ಮನ್ಮಥನ ತಲೆಗೆ ಬಹಳವಾದ ಪೆಟ್ಟುಬಿದ್ದು ಕಣ್ಣುಗಳು ತಿರುಗುತ್ತಿರಲು ಅವನು ಭೂಮಿಯ ಮೇಲೆ ಅತ್ಯಂತ ಮೂರ್ಛಾಕ್ರಾಂತನಾಗಿ ಬಿದ್ದುಬಿಟ್ಟನು. ಸ್ವಲ್ಪಹೊತ್ತಾದಮೇಲೆ ಚೇತರಿಸಿಕೊಂಡು ಮನ್ಮಥನ ಬಾಣಗಳ ಸುರಿಮಳೆಗಳಿಗೆ ಸಿಕ್ಕಿ ತತ್ಕ್ಷಣದಲ್ಲಿಯೇ ರಣಧೀರನೂ ಕೂಡ ಅಲುಗಾಡದ ಮಂದರಿಯಂತಾದ ಶರೀರವುಳ್ಳವನಾಗಿ, ವಜ್ರಾಯುಧದ ಪೆಟ್ಟಿಗೆ ಸಿಕ್ಕಿದ ಶ್ರೇಷ್ಠಪರ್ವತದಂತೆ, ಅತ್ಯಂತ ಮೂರ್ಛಾಕ್ರಾಂತನಾಗಿ ಕೆಳಗೆ ಬಿದ್ದುಬಿಟ್ಟನು. ॥೫೧-೫೨-೫೩॥

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಕಾಮೋಪಾಖ್ಯಾನದಲ್ಲಿ ಹತ್ತೊಂಬತ್ತನೆಯ ಅಧ್ಯಾಯವು ಮುಗಿದುದು.

॥ ಶ್ರೀಃ ॥

ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ

॥ ವಿಂಶೋಽಧ್ಯಾಯಃ ॥

ಇಪ್ಪತ್ತನೆಯ ಅಧ್ಯಾಯವು

ತದಂತರೇ ವೀರಸೇನೋ ಮಾರ್ಗೇ ರಾಜಾನ ಮೈಕ್ಷತ ।
ಪ್ರಣಮ್ಯ ಚರಣೌ ಮೂರ್ಧ್ನಾ ವಿಮನಾ ಇವ ಸಂಸ್ಥಿತಃ ॥೧॥

ತಥಾವಿಧಂ ಪ್ರಿಯತಮಂ ಪೌತ್ರಂ ರಾಜಾ ನಿರೀಕ್ಷ್ಯತು ।
ಆಶೀರ್ಭಿರನುಯೋಜ್ಯಾಥ ಮೂರ್ಧ್ನ್ಯಾಘ್ರಾಯ ಚಾಽವದತ್॥೨॥

ವತ್ಸ ಕಿಂ ದೀನಭೂತೋಽಸಿ ಕಚ್ಚಿತ್ತೇ ಕುಶಲಂ ತನೌ ।
ನಗರೇ ಭ್ರಾತೃಷು ತಥಾ ಪಿತೃಷು ಸ್ತ್ರೀಗಣೇಷು ಚ ॥೩॥

ಸೇನಾಸು ಭೃತ್ಯವರ್ಗೇಷು ಕೋಶೇಷು ಗುರುಮಂತ್ರಿಷು ।
ವದ ಶೀಘ್ರಂ ಸಮೀಕ್ಷ್ಯ ತ್ವಾಂ ದೀನಂ ಶುಷ್ಯತಿ ನೋ ಮನಃ ॥೪॥

ಈ ಸಂದರ್ಭದಲ್ಲಿಯೇ ವೀರಸೇನನು ಮಾರ್ಗದಲ್ಲಿಯೇ ರಾಜನನ್ನು ನೋಡಿದನು. ಅವನು ರಾಜನ ಕಾಲುಗಳಿಗೆ ನಮಸ್ಕರಿಸಿ ಖಿನ್ನಮನಸ್ಕನಂತೆ ಅವನ ಮುಂದೆ ನಿಂತನು. ಧೊರೆಯು ಹೀಗಿದ್ದ ಅತ್ಯಂತ ಪ್ರಿಯನಾದ ಮೊಮ್ಮಗನನ್ನು ನೋಡಿ ಆಶೀರ್ವಾದಪೂರ್ವಕವಾಗಿ ಕುಶಲಪ್ರಶ್ನೆಮಾಡಿ ಅವನ ತಲೆಯನ್ನು ಮೂಸಿ ಅವನನ್ನು ಕುರಿತು ಎಲೈ ಮಗುವೇ, ಏತಕ್ಕೆ ನೀನು ಖಿನ್ನನಾಗಿದ್ದೀಯೆ? ನೀನು ದೇಹದಲ್ಲಿ ಕ್ಷೇಮವಷ್ಟೇ? ಪಟ್ಟಣದಲ್ಲಿ ನಿನ್ನ ಸೋದರರೂ, ತಂದೆಗಳೂ, ಸ್ತ್ರೀಯರೂ, ಎಲ್ಲರೂ ಕ್ಷೇಮವಾಗಿದ್ದಾರಷ್ಟೇ? ಎಂದು ಪ್ರಶ್ನಿಸಿದನು. ॥೧-೨-೩॥

ರಾಜನು ಅವನನ್ನು ಇನ್ನೂ ವಿವರವಾಗಿ ಪ್ರಶ್ನಿಸುತ್ತಾ ಪಟ್ಟಣದ ಸೈನ್ಯಗಳಿಗೂ, ಸೇವಕರ ಗುಂಪುಗಳಿಗೂ, ಕೋಶಕ್ಕೂ, ಗುರುಗಳಿಗೂ, ಮಂತ್ರಿಗಳಿಗೂ, ಯಾವ ವಿಧವಾದ ತೊಡಕುಗಳೂ ಉಂಟಾಗದೇ ಎಲ್ಲರೂ ಸುಖವಾಗಿದ್ದಾರೆಯೋ?

ಇತಿ ಶ್ರುತ್ವಾ ತದಾ ವೀರಸೇನಃ ಪ್ರಾಂಜಲಿರಬ್ರವೀತ್ ।
ರಾಜಂ ಸ್ತ್ವನ್ನಿರ್ಗಮ ದಿನಾಚ್ಚತುರ್ಥೇಽಹ್ನಿ ಪುರಾ ಶ್ರುತಃ ॥೫॥

ಕಾಮೋ ಗೀರ್ವಾಣಸೇನಾಭಿರಿಂದ್ರಾದ್ಯೈರಪಿ ಸಂವೃತಃ ।
ಸಮಾಗತಃ ಸು ತುಮುಲಂ ಯುದ್ಧಂ ಚಕ್ರುರ್ಬುಧಾ ನರೈಃ ॥೬॥

ಅಥಾಽಸ್ಮಾಭಿಃ ಸುಧೃತಿನಾ ಸೇನಯಾ ಸಹ ಸಂಯುಗೇ ।
ಯುದ್ಧ್ವಾ ವಿನಿರ್ಜಿತಾ ದೇವಾ ಬದ್ಧಾ ಇಂದ್ರ ಮರುನ್ಮುಖಾಃ ॥೭॥

ಅಥ ಕಾಮಃ ಕ್ಷಣೇನೈವ ಮಹಾಬಲ ಪರಾಕ್ರಮಃ ।
ಶತ್ರುಂ ಜಯಾದೀನ್ ಸುಧೃತಿಂ ಪಾತಯಾಮಾಸ ಸಂಯುಗೇ ॥೮॥

ಇವಕ್ಕೆ ಬೇಗನೆ ಉತ್ತರವನ್ನು ಕೊಡು. ನೀನು ಖಿನ್ನವದನನಾಗಿರುವುದನ್ನು ನೋಡಿದರೆ ನನ್ನ ಮನಸ್ಸು ಏಕೋ ಕಳವಳಗೊಂಡಿರುವವುದು. ಎಂಬುದಾಗಿ ಪ್ರಶ್ನೆಮಾಡಿದನು. ||೪||

ವೀರವ್ರತರಾಜನು ಹೇಳಿದ ಈ ಮಾತನ್ನು ಕೇಳಿ, ವೀರಸೇನನು ಕೈಮುಗಿದುಕೊಂಡು ಧೊರೆಯನ್ನು ಕುರಿತು, ಓ ಧೊರೆಯೇ, ನೀನು ಹೋದಮೇಲೆ ನಾಲ್ಕನೆಯ ದಿನದಲ್ಲಿ ಹಿಂದೆ ನೀವು ಹೇಳಿದ್ದ ಆ ಮನ್ಮಥನು ದೇವತೆಗಳ ಸೈನ್ಯ ಮತ್ತು ಇಂದ್ರನೇ ಮೊದಲಾದವರಿಂದ ಕೂಡಿ, ನಮ್ಮೆಡೆಗೆ ಬಂದನು. ಅನಂತರ ದೇವತೆಗಳೂ, ಆ ಮನ್ಮಥನೂ ಮನುಷ್ಯರೊಂದಿಗೆ ದೊಡ್ಡ ತುಮುಲಯುದ್ಧವನ್ನು ಮಾಡಿದರು. ||೫-೬||

ಅನಂತರ ನಾವು ಸುಧೃತಿ ಮತ್ತು ಅವನ ಸೈನ್ಯದೊಡನೆ ಯುದ್ಧದಲ್ಲಿ ದೇವತೆಗಳೆಲ್ಲರನ್ನೂ ಸೋಲಿಸಿದೆವು. ಇಂದ್ರ, ವಾಯು ಮುಂತಾದ ದೇವತೆಗಳನ್ನೂ ಸೆರೆಹಿಡಿದು ಕಟ್ಟಿಹಾಕಿದೆವು. ||೭||

ಅನಂತರದಲ್ಲಿ ಮಹಾಬಲಶಾಲಿಯಾದ ಮನ್ಮಥನು ಒಂದು ಕ್ಷಣಕಾಲದಲ್ಲಿಯೇ ಶತ್ರುಂಜಯ ಮೊದಲಾದವರನ್ನೂ, ಸುಧೃತಿಯನ್ನೂ ಯುದ್ಧದಲ್ಲಿ ಹೊಡೆದು ಬೀಳಿಸಿದನು. ||೮||

ಅಕ್ಷೌಹಿಣೀನಾಂ ಪಂಚಾಶದ್ಧತಾಸ್ತೇನ ದಿನಾರ್ಧತಃ ।
ಭ್ರಾತರೋ ರಣಧೀರೇಣ ತದಾಽಽಶ್ವಸ್ತಾಃ ಸುದುಃಖಿತಾಃ ॥೯॥

ಸಾಂಪ್ರತಂ ಯೋಧಯತ್ಯೇಕೋ ರಣಧೀರಃ ಸ್ವ ಸೇನಯಾ ।
ಮನ್ಯೇ ನಿಪತಿತಃ ಸೋಽಪಿ ಕಾಮೇನ ಸಹ ಸಂಗರೇ ॥೧೦॥

ಸುಧೃತಿ ಪ್ರಮುಖಾ ಯೇನ ಕ್ಷಣಾದ್ಯುದ್ಧೇ ನಿಪಾತಿತಾಃ ।
ತತ್ಕಥಂ ಯೋಧಯೇದೇಕೋ ರಣಧೀರೋ ಮಹಾಬಲಂ ॥೧೧॥

ಇತಿ ಪ್ರೋಕ್ತಂ ಸರ್ವವೃತ್ತಂ ಭವಾನಗ್ರೇ ಪರಾಯಣಂ ।
ತಚ್ಛ್ರುತ್ವಾ ಪೌತ್ರವಚನಂ ಮಾಭೈರಿತಿ ಸಮೀರಯನ್ ॥೧೨॥

ಆಜಗಾಮ ಯುದ್ಧಭುವಿ ಧನುರ್ವಿಸ್ಫಾರಯನ್ಮುಹುಃ ।
ಕ್ಷಣೇನ ತಾವತ್ಕಾಮೋಽಪಿ ಮೂರ್ಛಿತಃ ಪ್ರತ್ಯಬುಧ್ಯತ ॥೧೩॥

ಮನ್ಮಥನು ಐವತ್ತು ಅಕ್ಷೋಹಿಣೀ ಸೈನ್ಯವನ್ನೂ, ಒಂದರ್ಧದಿವಸದಲ್ಲಿಯೇ ನಾಶಮಾಡಿದನು. ರಣಧೀರನು ಬಹಳ ದುಃಖಪಡುತ್ತಿದ್ದ ತನ್ನ ಸೋದರರನ್ನೆಲ್ಲರನ್ನೂ ಸಮಾಧಾನಗೊಳಿಸಿದನು. ||೯||

ಈಗ ರಣಧೀರನೊಬ್ಬನೇ ತನ್ನ ಸೈನ್ಯದೊಡನೆ ಮನ್ಮಥನೊಂದಿಗೆ ಯುದ್ಧ ಮಾಡುತ್ತಿದ್ದಾನೆ.. ಪ್ರಾಯಶಃ ಇಷ್ಟುಹೊತ್ತಿಗೆ ಮನ್ಮಥನು ಅವನನ್ನೂ ಯುದ್ಧದಲ್ಲಿ ಬೀಳಿಸಿರಬಹುದೆಂದು ಊಹಿಸುತ್ತೇನೆ. ಏಕೆಂದರೆ, ||೧೦||

ಸುಧೃತಿ ಮೊದಲಾದವರನ್ನೇ ಒಂದು ಕ್ಷಣಕಾಲದಲ್ಲಿ ಬೀಳಿಸಿರುವ ಮಹಾ ಶೂರನಾದ ಮನ್ಮಥನೊಂದಿಗೆ ರಣಧೀರನೊಬ್ಬನೇ ಹೇಗೆ ಯುದ್ಧಮಾಡಬಲ್ಲನು? ||೧೧||

ಹೀಗೆ ಎಲ್ಲಾ ಸಮಾಚಾರವನ್ನೂ ನಿಮಗೆ ತಿಳಿಸಿದ್ದೇನೆ. ಇನ್ನುಮುಂದೆ ನಡಸಬೇಕಾದ ಕರ್ತವ್ಯವು ತಮಗೆ ಸೇರಿದೆ. ಹೀಗೆ ಹೇಳಿದ ಮೊಮ್ಮಗನ ಮಾತನ್ನು ಕೇಳಿ ಅವನನ್ನು ಕುರಿತು, ಹೆದರಬೇಡ, ಎಂದು ಹೇಳಿ ಧೊರೆಯು ತನ್ನ ಧನುಸ್ಸನ್ನು ಬಾರಿಬಾರಿಗೂ ಸೆಳೆದು ಮಿಡಿಯುತ್ತಾ ಯುದ್ಧಭೂಮಿಗೆ ಬಂದನು. ಮನ್ಮಥನೂ ಕೂಡ ಒಂದು ಕ್ಷಣಕಾಲದಲ್ಲಿಯೇ ಮೂರ್ಛೆಯಿಂದ ತಿಳಿದೆದ್ದನು. ||೧೨-೧೩||

ರಾಜಾನಂ ಪುರತೋ ದೃಷ್ಟ್ವಾ ಕಾಮಃ ಶರಸುವೃಷ್ಟಿಭಿಃ ।
ಅವಾಕಿರನ್ಮೇರುಗಿರಿಂ ಪರ್ಜನ್ಯ ಇವ ವೃಷ್ಟಿಭಿಃ ॥೧೪॥

ರಾಜಾಽಪಿ ಪ್ರತಿವರ್ಷೇಣ ಶರವೃಷ್ಟಿಂ ವ್ಯುದಸ್ಯ ತಾಂ ।
ನೀಹಾರಪಟಲಾನ್ಮುಕ್ತಃ ಚಂಡಾಂಶುರಿವ ಸಂಬಭೌ ॥೧೫॥

ಅಥ ರಾಜಾಽಪಿ ನಿಶಿತೈರ್ಗಿರ್ದೀರ್ಘಪತ್ರೈಃ ಸುತೇಜಿತೈಃ ।
ವಿವ್ಯಾಧ ಮದನಂ ಭೂಯಃ ಸೋಽಪಿ ತಾನ್ಮಧ್ಯ ಆಚ್ಛಿನತ್ ॥೧೬॥

ಆಚ್ಛಿದ್ಯಾಽಽಕರ್ಣಪೂರ್ಣೇನ ರಾಜಾನಂ ತಾಡಯದ್ಭೃಶಂ ।
ರಾಜಾಽಪಿ ತಂ ಶರಂ ಮಧ್ಯೇ ಚಿಚ್ಛೇದಾಽಪ್ರಾಪ್ತಮಾಶುಗೈಃ ॥೧೭॥

ಏವಂ ಯುದ್ಧಮಭೂತ್ಕಾಮ ರಾಜ್ಞೋರತ್ಯಂತ ದಾರುಣಂ ।
ರಾಜಾನಂ ವೀಕ್ಷ್ಯ ಸಂಪ್ರಾಪ್ತಂ ಸೈನಿಕಾಃ ಸಹಸೋತ್ಥಿತಾಃ ॥೧೮॥

ಮನ್ಮಥನು ಮುಂದೆ ನಿಂತಿರುವ ಧೊರೆಯನ್ನು ನೋಡಿ ಬಾಣಗಳ ಸುರಿಮಳೆಯನ್ನು, ಮೇಘವು ಮೇರುಪರ್ವತದ ಮೇಲೆ ಮಳೆಗರೆವಂತೆ, ಸುರಿಸಿದನು. ||೧೪||

ಆ ಧೊರೆಯೂ ಕೂಡ ಪ್ರತಿಯಾಗಿ ಬಾಣಗಳನ್ನು ಸುರಿಸುವುದರ ಮೂಲಕ ಮನ್ಮಥನ ಬಾಣಗಳನ್ನು ನಾಶಮಾಡಿ, ಹಿಮಸಮೂಹದಿಂದ ಬಿಡುಗಡೆಮಾಡಲ್ಪಟ್ಟ ಸೂರ್ಯನಂತೆ, ವಿಶೇಷವಾಗಿ ಪ್ರಕಾಶಿಸಿದನು. ||೧೫||

ಅನಂತರ ರಾಜನೂ ಕೂಡ ಬಹಳ ಚೂಪಾಗಿರುವ ತುದಿಗಳುಳ್ಳ ಬಾಣಗಳಿಂದ ಮನ್ಮಥನನ್ನು ಹೊಡೆದನು. ಮನ್ಮಥನು ಅವುಗಳು ತನ್ನ ಮೇಲೆ ಮಧ್ಯದಲ್ಲಿ ಬರುತ್ತಿರುವಾಗಲೇ ಕತ್ತರಿಸಿದನು. ||೧೬||

ಹೀಗೆ ಮನ್ಮಥನು ಆ ಬಾಣಗಳನ್ನು ಕತ್ತರಿಸಿ ಪುನಃ ತಾನು ಬಾಣಗಳನ್ನು ಜೋಡಿಸಿದ್ದ ಹೆದೆಯನ್ನು ಕಿವಿಯವರೆಗೂ ಎಳೆದು ಬಾಣಗಳನ್ನು ರಾಜನ ಮೇಲೆ ವಿಶೇಷವಾಗಿ ಪ್ರಯೋಗಿಸಿ ಬಿಟ್ಟನು. ರಾಜನೂ ಕೂಡ ಆ ಬಾಣಗಳು ತನ್ನ ಮೇಲೆ ಬೀಳುವಷ್ಟರಲ್ಲೇ ಅವುಗಳೆಲ್ಲವನ್ನೂ ಪ್ರತಿಯಾಗಿ ಬಾಣಗಳನ್ನು ಪ್ರಯೋಗಿಸುವುದರ ಮೂಲಕ ಕತ್ತರಿಸಿಹಾಕಿದನು. ||೧೭||

ಹೀಗೆ ಮನ್ಮಥನಿಗೂ ಮತ್ತು ಧೊರೆಗೂ ಅತ್ಯಂತ ಭಯಂಕರವಾದ ಯುದ್ಧವಾಯಿತು. ರಾಜನು ಬಂದದ್ದನ್ನು ಕಂಡು ಸೈನಿಕರು ಜಾಗ್ರತೆಯಾಗಿ ಚೇತರಿಸಿಕೊಂಡು ಎದ್ದರು. ||೧೮||

ಸುಧೃತಿಪ್ರಮುಖಾಶ್ಚಾಽಪಿ ಮೂರ್ಛಾಮುಕ್ತಾಃ ಸಮಂ ತತಃ ।
ತನ್ವಃ ಪ್ರಾಣಮವಾಪ್ಯೇವ ರಾಜ್ಞಾ ಸರ್ವೇಽಭಿ ಸಂಗತಾಃ ॥೧೯॥

ಪ್ರಣೇಮುಃ ಸರ್ವ ಏವೈತೇ ಶತ್ರುಂಜಯಮುಖಾ ನೃಪಂ ।
ಯುಧ್ಯಮಾನೋ ನೃಪಃ ಪ್ರಾಹ ಸುಧೃತೇ ಶೃಣು ಮದ್ವಚಃ ॥೨೦॥

ಕಾಮೇನ ಯುದ್ಧ್ವಾಽತಿಚಿರಂ ಖಿನ್ನಾಃ ಶ್ರಾಂತಾಶ್ಚ ಸಂಪ್ರತಿ ।
ಇಂದ್ರಾದೀನ್ ರಕ್ಷತ ಭೃಶಂ ಸುರೇಭ್ಯಃ ಸರ್ವತೋ ದಿಶಂ ॥೨೧॥

ಯೋಽದ್ಧಾಽಸ್ಮ್ಯಹಂ ಮನ್ಮಥೇನ ಭವಂತಃ ಪ್ರೇಕ್ಷಕಾ ಮಮ ।
ಇತ್ಯುಕ್ತ್ವಾ ಯುಯುಧೇಽತ್ಯಂತಂ ರಾಜಾ ಕಾಮೇನ ಸಂಯುತಃ॥೨೨॥

ತಯೋರ್ಯುದ್ಧಂ ಸಮಭವತ್ ವಿಷ್ಣುಕೈಟಭಯೋರಿವ ।
ಉಚ್ಚಾವಚೈ ರಸ್ತ್ರಗಣೈಃ ಶಸ್ತ್ರೈರಪಿ ಸುತೇಜನೈಃ ॥೨೩॥

ಸುಧೃತಿಯೇ ಮೊದಲಾದವರೂ ಪುನಃ ಪ್ರಜ್ಞೆಯನ್ನು ಹೊಂದಿ ಮೂರ್ಛೆಯಿಂದ ತಿಳಿದೆದ್ದವರಾಗಿ ಎಲ್ಲ ಕಡೆಗಳಿಂದಲೂ ಬಂದು ರಾಜನೊಂದಿಗೆ ಸೇರಿಕೊಂಡರು. ॥೧೯॥

ಶತ್ರುಂಜಯ ಮೊದಲಾದವರೆಲ್ಲರೂ ಧೊರೆಗೆ ನಮಸ್ಕಾರಮಾಡಿರು. ಯುದ್ಧ ಮಾಡುತ್ತಿರುವ ಧೊರೆಯು ಸುಧೃತಿಯನ್ನು ಕುರಿತು, ಎಲೈ ಸುಧೃತಿಯೇ, ನಾನು ಈಗ ಹೇಳುವ ಮಾತನ್ನು ಕೇಳು ಎಂದನು. ॥೨೦॥

ನೀವು ಮನ್ಮಥನೊಂದಿಗೆ ಬಹಳ ಕಾಲ ಯುದ್ಧಮಾಡಿ ಬಹಳ ಬಳಲಿದ್ದೀರಿ. ಆದ್ದರಿಂದ ಈಗ ನೀವು ದೇವತೆಗಳು ಇಂದ್ರಾದಿ ದೇವತೆಗಳನ್ನು ಒಯ್ಯದ ಹಾಗೆ ಎಲ್ಲಾ ಕಡೆಯಲ್ಲಿಯೂ ಜಾಗರೂಕರಾಗಿ ಅವರನ್ನು ರಕ್ಷಿಸಿರಿ. ॥೨೧॥

ನಾನು ಮನ್ಮಥನೊಂದಿಗೆ ಯುದ್ಧಮಾಡುವವನಾಗಿದ್ದೇನೆ. ಇದಕ್ಕೆ ಪ್ರೇಕ್ಷಕರು ನೀವು. ಹೀಗೆಂದು ರಾಜನು ಹೇಳಿ ಮನ್ಮಥನೊಂದಿಗೆ ದೊಡ್ಡ ಯುದ್ಧವನ್ನು ಮಾಡಿದನು. ॥೨೨॥

ವಿಷ್ಣು ಮತ್ತು ಕೈಟಭ ಎಂಬ ರಾಕ್ಷಸ ಇವರಿಬ್ಬರಿಗೆ ಹೇಗೆ ಹಿಂದೆ ಆಶ್ಚರ್ಯ ಭಯವನ್ನುಂಟುಮಾಡುವ ಯುದ್ಧವು ನಡೆಯಿತೋ ಹಾಗೆ ಮನ್ಮಥ ಮತ್ತು ವೀರವ್ರತಧೊರೆ ಇವರಿಬ್ಬರಿಗೂ ಮಹತ್ತಾದ ಅಸ್ತ್ರಗಳ ಸಮೂಹಗಳ ಪ್ರಯೋಗ

ಅಸ್ತ್ರಾಣ್ಯಸ್ತ್ರೇಣ ಶಸ್ತ್ರಾಣಿ ಶಸ್ತ್ರೇಣ ವಿನಿವಾರ್ಯ ಚ ।
ಚಕ್ರತುರ್ಯುದ್ಧಮತ್ಯಂತಂ ಪರಸ್ಪರ ಜಯೈಷಿಣೌ ॥೨೪॥

ಅಭೇದ್ಯಕವಚೌ ತದ್ವದಚ್ಛೇದ್ಯದೃಢಕಾರ್ಮುಕೌ ।
ಅಕ್ಷಯ್ಯ ತೂಣ ಯುಗಲೌ ಧನುರ್ವಿದ್ಯಾವಿಶಾರದೌ ॥೨೫॥

ಲಾಘವೇನ ಚ ವೀರ್ಯೇಣ ಬಭೂವತು ರತಿಕ್ರಿಯೌ ।
ಏವಂ ತಯೋರ್ವಿಕ್ರಮತೋರತಿಕ್ರಾಂತಂ ದಿನತ್ರಯಂ ॥೨೬॥

ಯುಧ್ಯತೋ ಸ್ತುರ್ಯದಿವಸೇ ಯುದ್ಧಮಾಸೀನ್ಮಹತ್ತರಂ ।
ಅಸ್ತ್ರಾಗ್ನಿಭಿಃ ಸರ್ವಲೋಕಾ ವ್ಯಾಪ್ತಾಃ ಸಮಭವನ್ ತದಾ ॥೨೭॥

ರಾಜಾ ತದಾ ಹೀಯತೇ ಯಚ್ಛಾಂತ್ಯಾ ಕಾಮೋಽಭಿವರ್ಧತ ।
ಜ್ಞಾತ್ವಾ ರಾಜಾ ಹೀಯಮಾನ ಮಾತ್ಮಾನಂ ಶಂಕರಂ ತದಾ ॥೨೮॥

ಗಳಿಂದಲೂ ಬಹಳ ತೀಕ್ಷ್ಣಗಳಾದ ಶಸ್ತ್ರಗಳಿಂದಲೂ ಘೋರಯುದ್ಧವು ನಡೆಯಿತು. ॥೨೩॥

ಮನ್ಮಥ ಮತ್ತು ವೀರವ್ರತರಲ್ಲಿ ಒಬ್ಬರು ಪ್ರಯೋಗಿಸಿದ ಅಸ್ತ್ರಗಳನ್ನು ಇನ್ನೊಬ್ಬರು ಪ್ರತ್ಯಸ್ತ್ರಗಳಿಂದಲೂ ನಾಶಮಾಡುತ್ತಾ, ಶಸ್ತ್ರಗಳನ್ನು ಪ್ರತಿ ಶಸ್ತ್ರಗಳಿಂದಲೂ ಕತ್ತರಿಸುತ್ತಾ, ತಮ್ಮ ತಮ್ಮಲ್ಲಿಯೇ ಪರಸ್ಪರವಾಗಿ ಜಯವನ್ನು ಅಪೇಕ್ಷಿಸುವವರಾಗಿ ದೊಡ್ಡ ಯುದ್ಧವನ್ನು ಮಾಡಿದರು. ॥೨೪॥

ಇವರಿಬ್ಬರೂ ಭೇದಿಸಲ್ಪಡದ ಕವಚವುಳ್ಳವರಾಗಿಯೂ ಮತ್ತು ನಾಶಮಾಡಲಾಗದ ಬಲವಾದ ಬತ್ತಳಿಕೆಗಳುಳ್ಳವರಾಗಿಯೂ ಇದ್ದರು. ॥೨೫॥

ಕೈಚಳಕದಿಂದಲೂ ವೀರ್ಯದಿಂದಲೂ ಇವರಿಬ್ಬರೂ ಅಸಾಧಾರಣ ಸಾಮರ್ಥ್ಯವನ್ನು ತೋರಿಸುತ್ತಿದ್ದರು. ಹೀಗೆ ಇವರಿಬ್ಬರೂ ಯುದ್ಧಮಾಡುತ್ತಿರಲು ಮೂರು ದಿನಗಳು ಕಳೆದುಹೋದವು. ॥೨೬॥

ಹೀಗೆ ಯುದ್ಧಮಾಡುತ್ತಿದ್ದಾಗ ನಾಲ್ಕನೆಯ ದಿವಸದಲ್ಲಿ ಇವರಿಬ್ಬರಿಗೂ ಇನ್ನೂ ಅತ್ಯಂತ ದೊಡ್ಡದಾದ ಯುದ್ಧವು ಸಂಭವಿಸಿತು. ಆಗ ಇವರ ಅಸ್ತ್ರಗಳ ಬೆಂಕಿಯಿಂದ ಎಲ್ಲಾ ಲೋಕಗಳೂ ವ್ಯಾಪಿಸಲ್ಪಟ್ಟವು. ॥೨೭॥

ಆಗ ಧೊರೆಯು ಬಳಲಿಕೆಯಿಂದ ಶಕ್ತಿಹೀನನಾಗುತ್ತಾ ಬಂದನು. ಮನ್ಮಥನಾದರೋ ವೀರ್ಯದಲ್ಲಿ ಅಭಿವೃದ್ಧಿಹೊಂದುತ್ತಾ ಬಂದನು. ತಾನು ಹೀಗೆ ಶಕ್ತಿಹೀನ

ಸಸ್ಮಾರ ಮನಸಾ ಶೀಘ್ರಂ ತದಾ ದೇವಸ್ತ್ರಿಲೋಚನಃ ।
ತ್ರಿಶೂಲಂ ಪ್ರೇಷಯಾಮಾಸ ತದ್ರಾಜ್ಞಸ್ತು ಶರಾಸನೇ ॥೨೯॥

ಸನ್ನಿವಿಷ್ಟಂ ಸಾಯಕವತ್ತದ್ರಾಜಾ ಪಾಣಿನಾಽದದೇ ।
ತಂ ಶರಂ ಸಾರಭೂತಂ ಸ ಮೇನೇ ಗುರುತರಂ ಯತಃ ॥೩೦॥

ನನ್ವೇಷ ಸಾಯಕೋಽತ್ಯಂತಂ ಭಾರಭೂತೋಽಶನಿಪ್ರಭಃ ।
ಕುತ ಏವಂ ನಿಷಂಗೇ ಮೇ ನಾಽಸೀತ್ಪೂರ್ವಂ ಕದಾಚನ ॥೩೧॥

ಅಥವಾಽಹಂ ಶ್ರಾಂತ ಇತಿ ಸ್ಯಾದೇವಮಪಿ ವಾ ಶಿವಃ ।
ಕುಲೇಶಃ ಕಾಮವಿಜಯೇ ಸನ್ನಿಧಾನಂ ಗತೋ ಭವೇತ್ ॥೩೨॥

ಚಿಂತಯನ್ ಚಿಂತಿತಂ ಬಾಣಂ ಕಾರ್ಮುಕೇ ಸಮಯೋಜಯತ್ ।
ತದಾಽರ್ಚಿಷಃ ಸಮುತ್ಪೇತುಃ ಶರಾದಶನಿ ಸನ್ನಿಭಾತ್ ॥೩೩॥

ನಾಗುತ್ತಿರುವುದನ್ನು ದೊರೆಯು ಮನಗಂಡು ಶಿವನನ್ನು ಸ್ಮರಿಸಿದನು. ಕೂಡಲೇ ಮುಕ್ಕಣ್ಣನಾದ ಶಿವನು ತ್ರಿಶೂಲವನ್ನು ಕಳುಹಿಸಿದನು. ಅದು ನೇರವಾಗಿ ರಾಜನ ಬತ್ತಳಿಕೆಯಲ್ಲಿ ಬಂದು ಸೇರಿತು. ದೊರೆಯು ಅದನ್ನು ಗರುತಿಸಿ ಕೈಗೆ ತೆಗೆದು ಕೊಂಡನು. ಏಕೆಂದರೆ ಅವನು ಭಾರದಿಂದ ಅದನ್ನು ಅತ್ಯಂತ ಸಾರಭೂತವಾದ ಬಾಣವೆಂದು ಭಾವಿಸಿದನು. ||೨೮-೨೯-೩೦||

ಇದೇನು ಈ ಬಾಣವು ವಜ್ರಾಯುಧಕ್ಕೆ ಸಮಾನವಾದ ಕಾಂತಿಶಕ್ತಿಗಳುಳ್ಳದ್ದಾಗಿ ಭಾರವಾಗಿದೆ! ಹಿಂದೆ ಯಾವಾಗಲೂ ನನ್ನ ಬತ್ತಳಿಕೆಯಲ್ಲಿ ಇಂತಹ ಬಾಣವು ಇರಲಿಲ್ಲವಲ್ಲಾ! ಅಥವಾ ನಾನು ಈಗ ಶಕ್ತಿಗುಂದಿ ಬಳಲಿರುವುದರಿಂದ ಇದು ಭಾರವಾಗಿರುವಂತೆ ತೋರುತ್ತಿರಬಹುದು. ಅಥವಾ ನಮ್ಮ ಕುಲಕ್ಕೆ ಸ್ವಾಮಿಯಾದ ಶಿವನೇ ನಾನು ಬಳಲಿದ್ದೇನೆಂದು ತಿಳಿದು ನನ್ನ ಸಹಾಯಕ್ಕಾಗಿ ಈ ರೂಪದಲ್ಲಿ ನನ್ನ ನೆರವಿಗಾಗಿ ಬಂದಿರಬಹುದು. ಎಂದು ಆಲೋಚಿಸುತ್ತಾ ಆ ಬಾಣವನ್ನು ಬಿಲ್ಲಿಗೆ ಜೋಡಿಸಿದನು. ಆಗ ವಜ್ರಾಯುಧಕ್ಕೆ ಸಮನಾದ ಆ ಬಾಣದಿಂದ ಬೆಂಕಿಯ ಕಿಡಿಗಳು ವಿಶೇಷವಾಗಿ ಮೇಲಕ್ಕೆ ಹಾರಿದವು. ||೩೧-೩೨-೩೩||

ತದಾಽಪಸವ್ಯಂ ಕಾಮಸ್ಯ ಚಕ್ರುಃ ಶಕುನಯೋ ಮೃಗಾಃ ।
ದಿಶಃ ಪ್ರಜಜ್ವಲು ರ್ಭೂಮಿ ಶ್ಚಕಂಪೇ ರಜ ಆತತಂ ॥೩೪॥

ತದ್ದೃಷ್ಟ್ವಾ ವಿಪರೀತಂ ಸ ಕಾಮಃ ಸಸ್ಮಾರ ಮಾತರಂ ।
ಲಕ್ಷ್ಮೀಂ ಸಾಽಪ್ರೇಷಯತ್ ದೂತಾನ್ ರಕ್ಷಣಾರ್ಥಂ ಮನೋಭುವಃ ॥೩೫॥

ತಾವಚ್ಚಿಕ್ಷೇಪ ರಾಜಾ ತಂ ಶರಮಗ್ನಿ ಶಿಖೋಪಮಂ ।
ಪಶ್ಯತಾಂ ಸರ್ವಲೋಕಾನಾಂ ಶರಃ ಕಾಲಾಗ್ನಿ ಸನ್ನಿಭಃ ॥೦೬॥

ದಹನ್ನಿವ ತ್ರಿಲೋಕೀಂ ಸ ಪಪಾತ ಮದನೋಪರಿ ।
ಹಾಹೇತಿ ಚುಕ್ರುಶುರ್ದೇವಾ ದೃಷ್ಟ್ವಾ ಶರನಿಪಾತನಂ ॥೩೭॥

ಸಂಪ್ರಾಪ್ಯ ಸ ಶರಃ ಕಾಮಂ ದದಾಹಾಽನಲವತ್ತೃಣಂ ।
ಧನುಸ್ತೂಣಯುಗಂ ಶಸ್ತ್ರಂ ಸರ್ವಂ ಭಸ್ಮೀಭವತ್ ಕ್ಷಣಾತ್ ॥೩೮॥

ಆಗ ಮನ್ಮಥನ ಎಡಗೈ ಅದುರಿತು. ಹಕ್ಕಿಗಳೂ ಮತ್ತು ಮೃಗಗಳೂ ವಿಕಾರ ವಾಗಿ ಕೂಗಿದವು. ದಿಕ್ಕುಗಳೆಲ್ಲವೂ ಪ್ರಜ್ವಲಿಸಿದವು. ಭೂಮಿಯು ನಡುಗಿತು. ಧೂಳು ಎಲ್ಲೆಯೂ ಎದ್ದು ಹರಡಿತು. ॥೩೪॥

ಹೀಗೆ ಎಲ್ಲವೂ ವ್ಯತ್ಯಾಸವಾದದ್ದನ್ನು ನೋಡಿ ಮನ್ಮಥನು ತಾಯಿಯಾದ ಲಕ್ಷ್ಮಿಯನ್ನು ಬೆಂಗಾವಲಿಗಾಗಿ ಸ್ಮರಿಸಿದನು. ಆಕೆಯು ಮನ್ಮಥನ ರಕ್ಷಣೆಗಾಗಿ ದೂತರನ್ನು ಅವನಲ್ಲಿಗೆ ಸಹಾಯಕ್ಕಾಗಿ ಕಳುಹಿಸಿದಳು. ॥೩೫॥

ಅಷ್ಟರೊಳಗಾಗಿಯೇ ಧೊರೆಯು ಆ ಬೆಂಕಿಯ ಜ್ವಾಲೆಗೆ ಸಮಾನವಾದ ಬಾಣವನ್ನು ಮನ್ಮಥನ ಮೇಲೆ ಬಿಟ್ಟನು. ಆಗ ಎಲ್ಲಾ ಜನರೂ ನೋಡುತ್ತಿರಲು ಪ್ರಳಯಕಾಲದ ಬೆಂಕಿಗೆ ಸಮನಾದ ಆ ಬಾಣವು ಮೂರು ಲೋಕಗಳನ್ನೂ ಸುಡುತ್ತದೆಯೋ ಎಂಬಂತೆ ಬಂದು ಮನ್ಮಥನ ಮೇಲೆ ಬಿತ್ತು. ಈ ಬಾಣವು ಬೀಳುತ್ತಿರುವುದನ್ನು ನೋಡಿ ದೇವತೆಗಳೆಲ್ಲರೂ ಹಾ! ಹಾ! ಎಂದು ಕೂಗಿದರು. ॥೩೬-೩೭॥

ಬಾಣವು ಮನ್ಮಥನ ಮೇಲೆ ಬಿದ್ದು, ಬೆಂಕಿಯು ಹುಲ್ಲನ್ನು ಸುಟ್ಟು ಬೂದಿಯನ್ನು ಮಾಡುವ ಹಾಗೆ, ಸುಟ್ಟುಹಾಕಿತು. ಆ ಕ್ಷಣದಲ್ಲೇ ಅವನ ಧನುಸ್ಸು ಎರಡು ಬತ್ತಳಿಕೆಗಳು, ಶಸ್ತ್ರ ಇವೆಲ್ಲವೂ ಬೂದಿಯಾದವು. ॥೩೮॥

ಕಾಮೋಽಪಿ ವಿಗತಪ್ರಾಣೋ ದಗ್ಧಾಂಗಾರ ಸಮಾಂಗಕಃ ।
ನಿಪಪಾತ ಕ್ಷಿತಿತಲೇ ಕ್ಷೀಣಪುಣ್ಯೋ ಯಥಾಂಬರಾತ್ ॥೩೯॥

ತದಂತರೇ(ಚ)ತೇ ದೂತಾ ಲಕ್ಷ್ಮ್ಯಾ ಯೇ ಪ್ರೇಷಿತಾಃ ಪುರಾ ।
ಆಗತಾ ದದೃಶುಃ ಕಾಮಂ ಭೂಮೌ ನಿಪತಿತಂ ವ್ಯಸುಂ ॥೪೦॥

ತೇ ಗೃಹೀತ್ವಾ ವಿಸಂಜ್ಞಂ ತಂ ಜಗ್ಮುಃ ಪದ್ಮಾ ಸಮೀಪತಃ ।
ಅಥ ರಾಜ್ಞಾ ಹತಂ ಕಾಮಂ ದೃಷ್ಟ್ವಾ ಸುಧೃತಿ ಮುಖ್ಯಕಾಃ ॥೪೧॥

ಅತ್ಯಂತಂ ಜಹೃಷುಃ ಸರ್ವೇ ಮಹಾರಿಪು ನಿಪಾತನಾತ್ ।
ಸೈನಿಕಾ ಜಯಭೇರ್ಯಾದೀನ್ಯಭಿಜಘ್ನುಃ ಸಮಂ ತತಃ ॥೪೨॥

ಹರ್ಷ ವ್ಯಾಕುಲಿತಾಃ ಸರ್ವೇ ಪ್ರೋತ್ಸಿಕ್ತಾ ಅಬ್ಧಿವಜ್ಜನಾಃ ।
ರಾಜಾನಮಭಿಸಂಗಮ್ಯ ವರ್ಧಯಾಮಾಸು ರುಚ್ಚಕೈಃ ॥೪೩॥

ಮನ್ಮಥನೂ ಕೂಡ ಪ್ರಾಣಬಿಟ್ಟು ಸುಟ್ಟುಹೋದ ಇಜ್ಜಲಿಗೆ ಸಮನಾದ ಅವಯವಗಳುಳ್ಳವನಾಗಿ ಪುಣ್ಯವು ಮುಗಿದುಹೋದಮೇಲೆ ಆಕಾಶದಿಂದ ಕೆಳಗೆ ಬೀಳುವ ಲೋಕವಾಸಿಯಂತೆ ಭೂಮಿಯ ಮೇಲೆ ಬಿದ್ದನು. ॥೩೯॥

ಈ ಸಂದರ್ಭದಲ್ಲಿ ಇಷ್ಟುಹೊತ್ತಿಗೆ ಲಕ್ಷ್ಮಿಯು ಕಳುಹಿಸಿದ್ದ ದೂತರು ಅಲ್ಲಿಗೆ ಬಂದು ಮನ್ಮಥನು ಪ್ರಾಣಬಿಟ್ಟು ಭೂಮಿಯ ಮೇಲೆ ಬಿದ್ದಿರುವುದನ್ನು ಕಂಡರು. ॥೪೦॥

ಆ ದೂತರು ಜ್ಞಾನವಿಲ್ಲದಿದ್ದ ಮನ್ಮಥನನ್ನು ತೆಗೆದುಕೊಂಡು ಲಕ್ಷ್ಮಿಯ ಸಮೀಪಕ್ಕೆ ಹೋದರು. ಅನಂತರ ಸುಧೃತಿಯೇ ಮೊದಲಾದವರೆಲ್ಲರೂ ರಾಜನು ಮನ್ಮಥನನ್ನು ನಾಶಮಾಡಿದ್ದನ್ನು ಕಂಡು ಪ್ರಬಲವಾದ ಶತ್ರುವಿನ ನಾಶದಿಂದ ಬಹಳ ಸಂತೋಷಗೊಂಡರು. ಸೈನಿಕರು ಎಲ್ಲಾ ಕಡೆಯಲ್ಲಿಯೂ ಜಯಭೇರಿಯೇ ಮುಂತಾದ ವಾದ್ಯಗಳನ್ನು ಬಾರಿಸಿದರು. ॥೪೦-೪೧-೪೨॥

ಜನರೆಲ್ಲರೂ ಸಂತೋಷದಿಂದ ಕೂಡಿ, ಸಮುದ್ರದಂತೆ ಉಬ್ಬಿದರು. ಕೆಲವರು ರಾಜನನ್ನು ಸಮೀಪಿಸಿ ಜಯಘೋಷಗಳನ್ನು ಮಾಡಿದರು. ॥೪೩॥

ಪ್ರಣೇಮುರಪರೇ ತತ್ರ ಪರಿರಂಭಂತಿ ಚಾಽಪರೇ ।
ಪಶ್ಯಂತಿ ಸಪ್ರಣಯತೋಽಪ್ಯನ್ಯೇ ಭಾಷಂತಿ ಕೇಚನ ॥೪೪॥

ಏವಂ ಪ್ರವೃತ್ತೇ ಸೇನಾಯಾಂ ಸಮ್ಮರ್ದೇ ಹರ್ಷಸಂಭವೇ ।
ಸುಧೃತಿಂ ಪ್ರಾಹ ನೃಪತಿಃ ಕಾಲೋಚಿತವಚಸ್ತದಾ ॥೪೫॥

ಸುಧೃತೇ ಸತ್ವರಂ ಸೇನಾಂ ಸನ್ನಹ್ಯ ಚತುರಂಗಿಣೀಂ ।
ಪ್ರಯಾಣಂ ನಗರಾಯಾಽದೌ ಕೃತ್ವಾ ಪಶ್ಚಾಚ್ಚ ಸೈನಿಕಾಃ ॥೪೬॥

ಯೇ ಕ್ಷತಾಃ ಶಸ್ತ್ರಘಾತೇನ ತಾನ್ ಭೈಷಜ್ಯೇನ ಯೋಜಯ ।
ಸಾಂಪರಾಯೇಣ ಕೃತ್ಯೇನ ಮೃತಾನಗ್ರಕ್ಷತೇನ ತು ॥೪೭॥

ಪೃಷ್ಠಕ್ಷತಾನ್ನಿಖಾತೇಷು ಸಹ ಪಶ್ವಾದಿಭಿಃ ಕುರು ।
ಇತ್ಯಾಜ್ಞಾಪ್ಯ ಕ್ಷಿತಿಪತಿಃ ಸಮಾರೋಹತ ಸ್ಯಂದನಂ ॥೪೮॥

ಮತ್ತೆ ಕೆಲವರು ಧೊರೆಗೆ ನಮಸ್ಕಾರಮಾಡಿದರು. ಬೇರೇ ಕೆಲವರು ಧೊರೆಯನ್ನು ಆಲಿಂಗಿಸಿದರು. ಮತ್ತೆ ಕೆಲವರು ಅವನನ್ನು ಪ್ರೇಮಪೂರ್ವಕವಾಗಿ ನೋಡಿದರು. ಇತರ ಕೆಲವರು ಅವನೊಡನೇ ಪ್ರೇಮಸಂಭಾಷಣೆಯನ್ನು ಮಾಡಿದರು. ॥೪೪॥

ಹೀಗೆ ಸೈನ್ಯದಲ್ಲಿ ಕೋಲಾಹಲವಾಗುತ್ತಿರಲು ಧೊರೆಯು ಸುಧೃತಿಯನ್ನು ಕುರಿತು ಆ ಕಾಲಕ್ಕೆ ಯೋಗ್ಯವಾದ ಈ ಮಾತನ್ನು ಆಡಿದನು. ॥೪೫॥

ಎಲೈ ಸುಧೃತಿಯೇ, ನೀನು ಚತುರಂಗಸೈನ್ಯವನ್ನೂ ಸೇರಿಸಿಕೊಂಡು ನಗರಕ್ಕೆ ಪ್ರಯಾಣಮಾಡು. ಅನಂತರ ಶಸ್ತ್ರಗಳಿಂದಾದ ಪೆಟ್ಟುಗಳಿಂದ ಗಾಯಗೊಂಡ ಸೈನಿಕರಿಗೆ ಔಷಧೋಪಚಾರಾದಿಗಳನ್ನು ನೆಡೆಸು. ಧೈರ್ಯದಿಂದ ಎದುರಿಸಿ ಮುಂದುಗಡೇ ಪೆಟ್ಟುತಿಂದು ಪ್ರಾಣಬಿಟ್ಟವರಿಗೆ ಪಾರಲೌಕಿಕಸಂಸ್ಕಾರಗಳನ್ನು ನೆರವೇರಿಸು. ಹೇಡಿತನದಿಂದ ಹಿಂತಿರುಗಿ ಓಡುತ್ತಾ ಹಿಂದೆ ಪೆಟ್ಟುತಿಂದು ಮೃತರಾದವರನ್ನೂ ಮೃತವಾದ ಕುದುರೇ ಮುಂತಾದ ಪಶುಗಳೊಂದಿಗೂ ಸ್ಮಶಾನದಲ್ಲಿ ಹೂಳುವಂತೆ ಮಾಡು. ಹೀಗೆ ಧೊರೆಯು ಸುಧೃತಿಗೆ ಅಪ್ಪಣೆಮಾಡಿ ರಥವನ್ನು ಹತ್ತಿದನು. ॥೪೬-೪೭-೪೮॥

ತಾವದ್ಭಟಾಃ ಸೈನಿಕಾಶ್ಚ ನಾಯಕಾ ನಾಯಕಾಧಿಪಾಃ ।
ವಾಹನಾನಿ ವಿಚಿತ್ರಾಣಿ ಸಂರುಹ್ಯ ಹೇತಿಪಾಣಯಃ ॥೪೯॥

ಇಂದ್ರಾದಿ ವಿಬುಧೇಶಾನಾನ್ ಬದ್ಧ್ವಾನಾದಾಯ ಸರ್ವತಃ ।
ಪರಿವಾರ್ಯ ಮಹೀಪಾಲಂ ನಗರಾಯಾಭಿ ಚಕ್ರಮುಃ ॥೫೦॥

ಬಂದಿವೃಂದೈಃ ಸ್ತೂಯಮಾನಃ ಶಸ್ಯಮಾನ ಸ್ತಥಾ ಭಟೈಃ ।
ಪ್ರಯಾತೋ ನಗರಾಯಾಶು ಮಹೀಪಾಲಃ ಶ್ರಿಯಾ ಜ್ವಲನ್ ॥೫೧॥

ಭೂಪತೇರ್ವಿಜಯಂ ಶ್ರುತ್ವಾ ಮಂತ್ರಿಣೋ ನಗರಂ ದ್ರುತಂ ।
ಅಲಂ ಚಕ್ರುಶ್ಚ ವಿಜಯಂ ಘೋಷಯಾಮಾಸುರುಚ್ಚಕೈಃ ॥೫೨॥

ವರ್ಧನೋ ಮಂತ್ರಿರಾಟ್ತತ್ರ ದೂತಾನ್ ಶೀಘ್ರಗಮಾನ್ ಬಹೂನ್ ।
ಆಖ್ಯಾತುಂ ವಿಜಯಂ ರಾಜ್ಞೋ ಬಂಧುಪ್ರಿಯಜನೇಷು ಚ ॥೫೩॥

ಅಷ್ಟರೊಳಗಾಗಿಯೇ ಭಟರೂ, ಸೈನಿಕರೂ, ಸೇನಾನಾಯಕರೂ, ಸೇನಾನಾಯಕರ ಪತಿಗಳೂ, ಎಲ್ಲರೂ ನಾನಾವಿಧಗಳಾದ ವಾಹನಗಳನ್ನೇರಿ ಕತ್ತಿಗಳನ್ನು ಹಿಡಿದುಕೊಂಡು ಕಟ್ಟಿಹಾಕಲ್ಪಟ್ಟಿದ್ದ ಇಂದ್ರನೇ ಮೊದಲಾದ ದೇವತೆಗಳನ್ನೂ ಹಿಡಿದುಕೊಂಡು ಧೊರೆಯನ್ನು ಸುತ್ತುಗಟ್ಟಿಕೊಂಡು ಪ್ರಯಾಣಮಾಡಿದರು. ॥೪೯-೫೦॥

ಹೊಗಳುಭಟರಿಂದ ಸ್ತೋತ್ರಮಾಡಲ್ಪಡುತ್ತಾ, ಸೈನಿಕರಿಂದಲೂ ಹೊಗಳಲ್ಪಡುತ್ತಾ, ಜಯಲಕ್ಷ್ಮಿಯಿಂದ ಶೋಭಿಸುತ್ತಾ, ಧೊರೆಯು ತನ್ನ ರಾಜಧಾನಿಗೆ ಶೀಘ್ರವಾಗಿ ಹಿಂತಿರುಗಿದನು. ॥೫೧॥

ಧೊರೆಯ ವಿಜಯವಾರ್ತೆಯನ್ನು ಕೇಳಿ ಮಂತ್ರಿಗಳು ಶೀಘ್ರವಾಗಿ ನಗರವನ್ನೆಲ್ಲವನ್ನೂ ಶೃಂಗರಿಸುವಂತೆ ಅಪ್ಪಣೆಮಾಡಿದರು. ಇವರು ಈ ವಿಜಯದ ಸುದ್ದಿಯನ್ನು ಎಲ್ಲೆಲ್ಲಿಯೂ ಘೋಷಿಸಿದರು. ॥೫೨॥

ಪ್ರಧಾನಮಂತ್ರಿಯಾದ ವರ್ಧನನು ರಾಜನ ವಿಜಯವಾರ್ತೆಯನ್ನು ಬಂಧು ಮತ್ತು ಪ್ರಿಯಜನರೆಲ್ಲರಿಗೂ ತಿಳಿಸಲು ಶೀಘ್ರವಾಗಿ ಹೋಗಬಲ್ಲ ಅನೇಕಮಂದಿ ದೂತರನ್ನು ಕಳುಹಿಸಿದನು. ॥೫೩॥

ಪ್ರಸ್ಥಾಪ್ಯ ರಾಜಮಾರ್ಗೇಷು ಸಾಕಂ ತೋರಣಬಂಧನೈಃ ।
ಕದಲೀ ಪೂಗವೃಕ್ಷೈಶ್ಚ ದೀಪ ಪಾಂಚಾಲಿಕಾ ಗಣೈಃ ॥೫೪॥

ಸಮಾದಿಶದಲಂ ಕರ್ತುಂ ತಥಾ ದೇವಾಽಽಲಯೇಷು ಚ ।
ಪೂಜನಾಯ ಕುಲಗುರೋಶ್ಚಂದ್ರಮೌಲೀಶ್ವರಸ್ಯ ತು ॥೫೫॥

ವಿಶೇಷೇಣ ಬಹುವಿಧಾ ನುಪಚಾರಾನ್ಪ್ರಕಲ್ಪಯತ್ ।
ಕನ್ಯಾಃ ಸುರೂಪಾಃ ಭೂಷಾಢ್ಯಾಃ ಶ್ವೇತಕೌಶೇಯವಾಸಿನೀಃ ॥೫೬॥

ದಧ್ಯಕ್ಷತ ಕರಾಶ್ಚಾಽನ್ಯಾಃ ಪೂರ್ಣಕುಂಭಫಲಗ್ರಹಾಃ ।
ಅನ್ಯಾ ವಿವಿಧಪಾತ್ರೇಷು ವಿಚಿತ್ರಾ ಇತಿ ದೀಪಕಾನ್ ॥೫೭॥

ಅದದಾನಾಃ ಸಂಘಶಸ್ತಾಃ ಸಮಾದಿಶತ ನೈ ದ್ರುತಂ ।
ವಿದ್ಯಾಪತಿಃ ಕುಲಗುರುಃ ವಿಪ್ರೈರ್ವಿದ್ಯಾವಿಶಾರದೈಃ ॥೫೮॥

ಈ ಮಂತ್ರಿ ಶ್ರೇಷ್ಠನು ರಾಜಮಾರ್ಗಗಳಲ್ಲಿ ತೋರಣಗಳನ್ನು ಕಟ್ಟಿ ಬಾಳೆ ಅಡಿಕೆ ಮುಂತಾದ ಮರಗಳಿಂದಲೂ ದೀಪ ಬೊಂಬೆಗಳ ಸಾಲು ಇವುಗಳಿಂದಲೂ, ಅವನ್ನು ಅಲಂಕರಿಸುವಂತೆ ಅಪ್ಪಣೆಮಾಡಿದನು. ||೫೪||

ವರ್ಧನನು ಹೀಗೆ ನಗರವನ್ನೆಲ್ಲವನ್ನೂ ಅಲಂಕರಿಸಲು ಅಪ್ಪಣೆಮಾಡಿದನು. ಹಾಗೆಯೇ ಇವನು ಕುಲಕ್ಕೆ ಗುರುವಾದ ಚಂದ್ರಮೌಲೀಶ್ವರನ ಆರಾಧನೆಗಾಗಿ ದೇವಸ್ಥಾನದಲ್ಲಿ ವಿಶೇಷವಾಗಿ ಅನೇಕ ವಿಧವಾದ ಉಪಚಾರ ಸಾಮಗ್ರಿಗಳನ್ನು ಸಿದ್ಧಪಡಿಸಲು ಅಪ್ಪಣೆಮಾಡಿದನು. ಅಲ್ಲದೇ ಬೆಳ್ಳಗಿರುವ ರೇಷ್ಮೇ ಬಟ್ಟೆಗಳನ್ನು ಧರಿಸಿರುವ, ಸುಂದರಿಯರೂ, ಅಲಂಕಾರ ಮಾಡಿಕೊಂಡಿರುವವರೂ, ಮೊಸರು ಅಕ್ಷತೆ ಗಳನ್ನು ಕೈಯ್ಯಲ್ಲಿ ಹಿಡಿದುಕೊಂಡಿರುವವರೂ ಆದ ಸ್ತ್ರೀಯರು ಸಿದ್ಧರಾದರು. ಇನ್ನೂ ಅನೇಕ ವಿಧರಾದ ಸ್ತ್ರೀಯರು ಅನೇಕ ಬಗೆಯಾದ ಪಾತ್ರೆಗಳಲ್ಲಿ ದೀಪಗಳನ್ನು ಹಿಡಿದುಕೊಂಡಿದ್ದರು. ||೫೫-೫೬-೫೭||

ವರ್ಧನನು ಈ ಸ್ತ್ರೀಯರು ಗುಂಪು ಗುಂಪಾಗಿ ಮೇಲೆ ಹೇಳಿದ ವಸ್ತುಗಳನ್ನು ಹಿಡಿದುಕೊಂಡು ನಿಂತಿರಲು ಶೀಘ್ರವಾಗಿ ಆಜ್ಞೆಮಾಡಿದ್ದನು. ವಿದ್ಯಾಪತಿಯಾದ ಕುಲಗುರುವು ವಿದ್ಯಾಪಾರಂಗತರಾದ ಬ್ರಾಹ್ಮಣರೊಂದಿಗೆ ಶಾಸ್ತ್ರೋಕ್ತ ಕ್ರಮದಲ್ಲಿ

ಜಯೋಽಭಿಷೇಕೆ ಸಾಮಗ್ರೀಂ ಕಲ್ಪಯದ್ವಿಧಿದೃಷ್ಟತಃ ।
ಪ್ರಕಲ್ಪ್ಯೈವಂ ಮಂತ್ರಿಗಣ್ಯೈಃ ವರ್ಧನ ಪ್ರಮುಖೈರ್ವೃತಃ ॥೫೯॥

ವಿದ್ಯಾಪತಿಃ ಸ್ಯಂದನಂ ಸ್ವಂ ಸಮಾರುಹ್ಯ ಪುರಾದ್ಬಹಿಃ ।
ಜಗಾಮ ಸಹಿತೋ ವಿಪ್ರೈರ್ವರ್ಧನೋ ಹಯಮಾರುಹತ್ ॥೬೦॥

ಗಜಂ ರಥಂ ಸಮಾರೂಢಾಶ್ಚಾಽನ್ಯೇ ಮಂತ್ರಿಮುಖಾ ಯಯುಃ ।
ಕ್ರಮೇಣ ನಿರ್ಗತಾಃ ಸರ್ವೇ ನಗರದ್ವಾರತೋ ಬಹಿಃ ॥೬೧॥

ತದಂತರೇ ಭೂಮಿಪತಿಃ ಕುಲರತ್ನಾಭಿಧಂ ಗಜಂ ।
ಚತುರ್ದಂತಂ ಶ್ವೇತವರ್ಣ ಮೈರಾವತ ಕುಲೋದ್ಭವಂ ॥೬೨॥

ಅಲಂಕೃತಂ ಸಮಾರುಹ್ಯ ನಗರಾಽಭಿಮುಖೋ ಯಯೌ ।
ಶತ್ರುಂಜಯಾಽದ್ಯಾಸ್ತನುಜಾಸ್ತತ್ಪುತ್ರಾಶ್ಚ ಪೃಥಕ್ಪೃಥಕ್ ॥೬೩॥

ಹಸ್ತಿ ಶ್ರೇಷ್ಠಾನ್ ಸಮಾರುಹ್ಯ ರಾಜಾನಮನು ಸಂಯಯುಃ ।
ರಣಧೀರೋ ರಥಾಽಽರೂಢೋ ರಾಜ್ಞ ಆಸೀತ್ಪುರಸ್ಸರಃ ॥೬೪॥

ಜಯಕಾಲದ ಅಭಿಷೇಕಕ್ಕೆ ಬೇಕಾದ ಸಾಮಗ್ರಿಗಳೆಲ್ಲವನ್ನೂ ಸಿದ್ಧಪಡಿಸಿದನು. ಹೀಗೆ ಎಲ್ಲವನ್ನೂ ಸಿದ್ಧಪಡಿಸಿ ವರ್ಧನನು ಮಂತ್ರಿಗಳ ಗುಂಪಿನಿಂದ ಕೂಡಿದ್ದನು. ॥೫೮-೫೯॥

ಕುಲಗುರುವಾದ ವಿದ್ಯಾಪತಿಯು ತನ್ನ ರಥವನ್ನೇರಿ ಇತರ ಬ್ರಾಹ್ಮಣರೊಂದಿಗೆ ಪಟ್ಟಣದ ಹೊರಗಡೆಗೆ ಹೋದನು. ವರ್ಧನನು ಕುದುರೆಯನ್ನೇರಿ ಬಂದಿದ್ದನು. ॥೬೦॥

ಇತರ ಮಂತ್ರಿಗಳೇ ಮೊದಲಾದವರು ಆನೆಗಳು ಮತ್ತು ರಥಗಳನ್ನೇರಿ ಕ್ರಮವಾಗಿ ಪಟ್ಟಣದ ಬಾಗಿಲಿನಿಂದ ಹೊರಗೆ ಹೋದರು. ॥೬೧॥

ಈ ಸಂದರ್ಭದಲ್ಲಿ ದೊರೆಯು ನಾಲ್ಕು ಕೊಂಬುಗಳುಳ್ಳ, ಬಿಳಿಯಬಣ್ಣದ, ಐರಾವತವೆಂಬ ಆನೆಯ ವಂಶದಲ್ಲಿ ಹುಟ್ಟಿದ, ಚೆನ್ನಾಗಿ ಶೃಂಗರಿಸಲ್ಪಟ್ಟ ಕುಲರತ್ನವೆಂಬ ಹೆಸರಿನ ಆನೆಯನ್ನೇರಿ ಪಟ್ಟಣದ ಕಡೆಗೆ ಹೊರಟನು. ಶತ್ರುಂಜಯ ಮುಂತಾದ ಅವನ ಕುಮಾರರು ಬೇರೆ ಬೇರೇ ಶ್ರೇಷ್ಠವಾದ ಆನೆಯನ್ನೇರಿ ರಾಜನ

ನಿರ್ವರ್ತ್ಯ ನೃಪತೇ ರಾಜ್ಞಾಂ ಸೇನಯಾ ಸಹ ಪೃಷ್ಠತಃ ।
ಪ್ರಯಯೌ ದೇವರಾಜಾದೀನ್ಬದ್ಧಾನಾದಾಯ ಸಂಯುತಃ ॥೬೫॥

ಸುಧೃತಿರ್ಗಜಮಾರೂಢೋ ಗದಾಪಾಣಿಃ ಪ್ರತಾಪನಃ ।
ಅವಿದೂರೇ ಪುರದ್ವಾರಾ ದ್ರಾಜಾ ಗುರುಮನ್ವೈಕ್ಷತ ॥೬೬॥

ತತೋಽವರುಹ್ಯ ಕರಿಣೋ ವಿದ್ಯಾಪತಿಮುಪಾಯಯೌ ।
ರಣಧೀರೋ ರಾಜಪುತ್ರಾಶ್ಚಾಽನ್ಯೇ ಸರ್ವೇ ನಿಶಮ್ಯ ತು ॥೬೭॥

ರಾಜಾನ ಮವರೂಢಂ ಸ್ವಾದ್ವಾಹನಾದ್ಗುರು ದರ್ಶನಾತ್ ।
ಅವತೇರುಃ ಸ್ವವಾಹೇಭ್ಯೋ ರಾಜಾನಮನು ಸಂಯಯುಃ ॥೬೮॥

ರಾಜಾ ಗುರುಂ ಸಮಾಸಾದ್ಯ ಪಸ್ಪರ್ಶ ಶಿರಸಾ ಪದಂ ।
ಶತ್ರುಂಜಯಾಽದ್ಯಾಸ್ತದನು ಪ್ರಣೇಮುರ್ಗುರು ಪುಂಗವಂ ॥೬೯॥

ಹಿಂದೆ ಹೊರಟರು. ರಣಧೀರನು ರಥವನ್ನೇರಿ ರಾಜನ ಮುಂದೆ ಹೋಗುತ್ತಿದ್ದನು. ||೬೨-೬೩-೬೪||

ಪ್ರತಾಪಶಾಲಿಯಾದ, ಗದೆಯನ್ನು ಕೈಯ್ಯಲ್ಲಿ ಹಿಡಿದುಕೊಂಡಿರುವ, ಸುಧೃತಿಯು ಆನೆಯಮೇಲೇರಿದವನಾಗಿ ಕಟ್ಟುಹಾಕಲ್ಪಟ್ಟ ದೇವೇಂದ್ರನೇ ಮೊದಲಾದವರನ್ನು ಸ್ವಾಧೀನಪಡಿಸಿಕೊಂಡು ರಾಜನ ಅಪ್ಪಣೆಯನ್ನು ನೆರವೇರಿಸುವವನಾಗಿ ಹಿಂದುಗಡೇ ಸೈನ್ಯದ ಜೊತೆಯಲ್ಲಿ ಹೋಗುತ್ತಿದ್ದನು. ಪಟ್ಟಣದ ಬಾಗಿಲಿನ ಹತ್ತಿರದಲ್ಲಿ ಧೊರೆಯು ತನ್ನ ಕುಲಗುರುವನ್ನು ದರ್ಶನಮಾಡಿದನು. ||೬೫-೬೬||

ಆನಂತರ ರಾಜನು ಆನೆಯಿಂದ ಕೆಳಗಿಳಿದು ವಿದ್ಯಾಪತಿಯ ಸಮೀಪಕ್ಕೆ ಬಂದನು. ರಾಜನು ತನ್ನ ವಾಹನದಿಂದ ಕೆಳಗಿಳಿದನೆಂಬ ಸಮಾಚಾರವನ್ನು ಕೇಳಿ ಗುರುವನ್ನು ನೋಡಿದ್ದರಿಂದ ಎಲ್ಲರೂ ತಮ್ಮ ತಮ್ಮ ವಾಹನಗಳಿಂದ ಕೆಳಗಿಳಿದು ರಾಜನನ್ನು ಅನುಸರಿಸಿಕೊಂಡು ಹೋದರು. ||೬೭-೬೮||

ರಾಜನು ಗುರುವನ್ನು ಸಮೀಪಿಸಿ ತನ್ನ ತಲೆಯನ್ನು ಅವನ ಪಾದಗಳಿಗೆ ಮುಟ್ಟಿಸಿ ನಮಸ್ಕಾರಮಾಡಿದನು. ಶತ್ರುಂಜಯ ಮೊದಲಾದವರೂ, ಶ್ರೇಷ್ಠನಾದ ಗುರುವಿಗೆ ನಮಸ್ಕಾರಮಾಡಿದರು. ||೬೯||

ವಿದ್ಯಾಪತಿಶ್ಚಾಽಪಿ ನೃಪ ಮಾಶೀರ್ಭಿರನುಯೋಜ್ಯ ತು ।
ರಾಜಾನಮುವದತ್ಪಶ್ಚಾತ್ಸರ್ವವಿದ್ಯಾವಿಶಾರದಃ ।೭೦॥

ರಾಜನ್ನಿಮಂ ಮುಹೂರ್ತಂ ವೈ ಪ್ರವೇಶೇ ಹ್ಯವರಂ ವಿದುಃ ।
ವಿಶ್ರಾಮ್ಯಾಽಗ್ರಿಮುಮೌ ಹೂರ್ತೇ ಪ್ರಶಸ್ತೇ ನಗರೇ ವಿಶ ॥೭೧॥

ತಚ್ಛ್ರುತ್ವಾ ಪ್ರಾಹ ನೃಪತಿಃ ನಮಸ್ಕೃತ್ಯ ತಥಾಽಸ್ತ್ವಿತಿ ।
ತತೋಽವತೀರ್ಯ ಸ ಗುರುಃ ಸ್ಯಂದನಾದವಿದೂರತಃ ॥೭೨॥

ತರುಚ್ಛಾಯಾಂ ಸಮಾಶ್ರಿತ್ಯ ನಿಷಸಾದ ಆಸನೇ ಶುಭೇ ।
ತದಾಜ್ಞಯಾ ಕ್ಷಿತಿಪತಿಃ ನಿಷಣ್ಣೋ ನಾತಿದೂರತಃ ॥೭೩॥

ಶತ್ರುಂಜಯಾದ್ಯಾಃ ಸರ್ವೇಽಪಿ ನಿಷೇದುರ್ಗುರ್ವನುಜ್ಞಯಾ ।
ವಿದ್ಯಾಪತಿಸ್ತತೋಽಪಶ್ಯದ್ರಥ ಸಂಸ್ಥಾನ್ದಿವೌಕಸಃ ॥೭೪॥

ಸಕಲ ಶಾಸ್ತ್ರಪಾರಂಗತನಾದ ವಿದ್ಯಾಪತಿಯೂ ಕೂಡ ಧೊರೆಯನ್ನು ಆಶೀರ್ವಾದಪೂರ್ವಕವಾಗಿ ಕುಶಲಪ್ರಶ್ನೆಯನ್ನು ಮಾಡಿ, ಅವನನ್ನು ಕುರಿತು ಈ ರೀತಿಯಲ್ಲಿ ಹೇಳಿದನು. ॥೭೦॥

ಓ ಧೊರೆಯೇ, ಪಟ್ಟಣಪ್ರವೇಶಕ್ಕೆ ಈ ಮುಹೂರ್ತವು ಅಷ್ಟು ಪ್ರಶಸ್ತವಲ್ಲವೆಂದು ಹೇಳುತ್ತಾರೆ. ಆದ್ದರಿಂದ ಸ್ವಲ್ಪಹೊತ್ತು ಇಲ್ಲಿಯೇ ವಿಶ್ರಮಿಸಿಕೊಂಡು ಮುಂದಿನ ಪ್ರಶಸ್ತವಾದ ಮುಹೂರ್ತದಲ್ಲಿ ಪಟ್ಟಣವನ್ನು ಪ್ರವೇಶಿಸು. ॥೭೧॥

ಗುರುವಿನ ಈ ಮಾತನ್ನು ಕೇಳಿ ಧೊರೆಯು ಆತನಿಗೆ ನಮಸ್ಕರಿಸಿ "ಹಾಗೆಯೇ ಆಗಲಿ" ಎಂದು ಹೇಳಿದನು. ಅನಂತರ ಆ ಗುರುವು ರಥವನ್ನಿಳಿದು ಅದರ ಹತ್ತಿರದಲ್ಲೇ ಒಂದು ಮರದ ನೆರಳಿನಲ್ಲಿ ಹಾಕಿದ್ದ ಮಂಗಳಕರವಾದ ಆಸನದಲ್ಲಿ ಕುಳಿತನು. ಅವನ ಅಪ್ಪಣೆಯಂತೆ ಧೊರೆಯೂ ಕೂಡ ಹತ್ತಿರದಲ್ಲೇ ಕುಳಿತನು. ॥೭೨-೭೩॥

ಗುರುವಿನ ಅಪ್ಪಣೆಯ ಪ್ರಕಾರ ಶತ್ರುಂಜಯ ಮೊದಲಾದವರೂ ಕುಳಿತರು. ಅನಂತರ ವಿದ್ಯಾಪತಿಯು ರಥದಮೇಲಿದ್ದ ದೇವತೆಗಳನ್ನು ನೋಡಿದನು. ॥೭೪॥

ದೃಷ್ಟ್ವಾ ಪಪ್ರಚ್ಛ ನೃಪತಿಂ ಕೇ ಇಮೇ ಬಂಧನಂ ಗತಾಃ ।
ಇತಿ ವಾಕ್ಯಂ ಗುರೋಃ ಶ್ರುತ್ವಾ ಪ್ರಾಂಜಲಿಃ ಪ್ರಾಹ ಭೂಮಿಪಃ ॥೭೫॥

ಏತೇ ಶಕ್ರಾದಯೋ ದೇವಾಃ ಶತ್ರುಪಕ್ಷ ಸಮಾಶ್ರಯಾಃ ।
ಸುಧೃತಿ ಪ್ರಮುಖೈರ್ಯುದ್ಧೇ ನಿರ್ಜಿತಾ ಬಂಧನಂ ಗತಾಃ ॥೭೬॥

ತಚ್ಛ್ರುತ್ವಾ ವಚನಂ ರಾಜ್ಞೋ ವಿದ್ಯಾಪತಿರುದಾರಧೀಃ ।
ಅಸಮ್ಯಗಿವ ತನ್ಮತ್ವಾ ವಚನಂ ಪ್ರಾಹ ಭೂಮಿಪಂ ॥೭೭॥

ಹೇ ರಾಜನ್ ಶೃಣು ಮತ್ಪ್ರೋಕ್ತಂ ನೈತದೌಪಯಿಕಂ ತವ ।
ಏತೇ ಹಿ ದೇವಾಃ ಪೂಜ್ಯಾ ನೋ ಮರ್ತ್ಯಾದಿಷ್ಟೈಕ ಹೇತವಃ ॥೭೮॥

ಕಾರಣೇನ ಹಿ ಸಂಬದ್ಧಾ ಸ್ತ್ವಜೇಯಾ ಮಾನವೈಃ ಸದಾ ।
ಮೋಚಯೇಮಾನ್ ಪ್ರಾರ್ಥಯಸ್ವ ಶೀಘ್ರಂ ಪೂಜಯ ಪೂಜನೈಃ ॥೭೯॥

ಅವರನ್ನು ನೋಡಿ ವಿದ್ಯಾಪತಿಯು ಬಂಧನದಲ್ಲಿರುವ ಇವರು ಯಾರು? ಎಂದು ಧೊರೆಯನ್ನು ಕೇಳಿದನು. ಗುರುವಿನ ಈ ಮಾತನ್ನು ಕೇಳಿ ಧೊರೆಯು ಕೈಮುಗಿದುಕೊಂಡು ಈ ರೀತಿಯಲ್ಲಿ ಹೇಳಿದನು. ॥೭೫॥

ಇವರು ಶತ್ರುಪಕ್ಷದವರಾದ ಇಂದ್ರನೇ ಮೊದಲಾದ ದೇವತೆಗಳು. ಸುಧೃತಿಯೇ ಮೊದಲಾದವರು ಯುದ್ಧದಲ್ಲಿ ಇವರನ್ನು ಜಯಿಸಿದ್ದರಿಂದ ಇವರು ಈ ರೀತಿ ಬಂಧನದಲ್ಲಿದ್ದಾರೆ. ॥೭೬॥

ಉದಾರಮನಸ್ಸುಳ್ಳ ವಿದ್ಯಾಪತಿಯು ಧೊರೆಯ ಆ ಮಾತನ್ನು ಕೇಳಿ, ಈ ನಡವಳಿಕೆಯು ಸರಿಯಲ್ಲವೆಂದು ಬಗೆದು ಧೊರೆಯನ್ನು ಕುರಿತು ಹೀಗೆ ಹೇಳಿದನು. ॥೭೭॥

ಓ ಧೊರೆಯೇ, ನಾನು ಈಗ ಹೇಳುವುದನ್ನು ಕೇಳು. ಹೀಗೆ ದೇವತೆಗಳನ್ನು ಬಂಧಿಸಿರುವುದು ನಿಮಗೆ ಯುಕ್ತವಲ್ಲ. ಏಕೆಂದರೆ ಮನುಷ್ಯರಾದ ನಮ್ಮ ಅದೃಷ್ಟ ಫಲಕ್ಕೆ ಕಾರಣರಾದ ಈ ದೇವತೆಗಳು ನಮಗೆ ಪೂಜ್ಯರಾಗಿದ್ದಾರೆ. ॥೭೮॥

ನಮ್ಮ ಅದೃಷ್ಟಫಲಪ್ರಾಪ್ತಿಗೆ ಮೂಲಕಾರಣರಾದ ಈ ದೇವತೆಗಳು ನಮಗೆ ಯಾವಾಗಲೂ ಜಯಿಸಲ್ಪಡಲು ಯೋಗ್ಯರಲ್ಲ. ಆದ್ದರಿಂದ ನೀವು ಕೂಡಲೇ ಇವರನ್ನು ಬಿಡುಗಡೆಮಾಡಿ ಅನೇಕ ಉಪಚಾರಗಳಿಂದ ಸತ್ಕಾರಮಾಡಿ. ॥೭೯॥

ಇತಿಶ್ರುತ್ವಾ ಗುರೋರ್ವಾಕ್ಯಂ ರಾಜಾ ಸುಧೃತಿಮೈಕ್ಷತ ।
ನೃಪತೇ ರಿಂಗಿತಂ ಜ್ಞಾತ್ವಾ ಸುಧೃತಿಃ ಸತ್ವರಂ ಸುರಾನ್ ॥೮೦॥

ವಿಮುಚ್ಯ ರಾಜಸವಿಧಮಾನಯನ್ಮಾನಪೂರ್ವಕಂ ।
ಇಂದ್ರಾऽದೀನಾಗತಾನ್ದೃಷ್ಟ್ವಾ ಪ್ರೋತ್ಥಿತೋ ನೃಪತಿರ್ದ್ರುತಂ ॥೮೧॥

ಕ್ರಮೇಣ ನತ್ವಾ ಶಕ್ರಾದೀನಾಸನಾऽದ್ಯೈಃ ಸಭಾಜಯತ್ ।
ಕ್ರಮೇಣ ಸಂಪೂಜ್ಯ ಸುರಾನ್ ರಾಜ್ಯಂ ಕೋಶಂ ಚ ವಾಹನಂ॥೮೨॥

ಪುತ್ರದಾರಾದಿಕಂ ಸರ್ವಂ ಸ್ವಂಚಾऽಪಿ ವಿನಿವೇದ್ಯ ವೈ ।
ಅಜ್ಞಾನ ಕೃತಮೇ ತನ್ಮೇ ಕ್ಷಮಧ್ವಮಿತಿ ಸೋऽಬ್ರವೀತ್ ॥೮೩॥

ತದ್ದೃಷ್ಟ್ವೇಂದ್ರಮುಖಾ ದೇವಾ ರಾಜ್ಞೋ ದಾಕ್ಷಿಣ್ಯ ಮುತ್ತಮಂ ।
ಪ್ರೋಚುಃ ಶುಭತರಾಂ ವಾಚಂ ತತ್ಕಾಲ ಸದೃಶೀಂ ತದಾ ॥೮೪॥

ಗುರುವಿನ ಈ ಮಾತನ್ನು ಕೇಳಿ ಧೊರೆಯು ಸುಧೃತಿಯ ಕಡೆ ನೋಡಿದನು. ಸುಧೃತಿಯು ರಾಜನ ಅಭಿಪ್ರಾಯವನ್ನು ತಿಳಿದು ಜಾಗ್ರತೆಯಾಗಿ ದೇವತೆಗಳನ್ನು ಬಿಡುಗಡೆಮಾಡಿ, ಗೌರವವಾದ ರೀತಿಯಲ್ಲಿ ರಾಜನ ಸಮೀಪಕ್ಕೆ ಕರೆದುಕೊಂಡು ಬಂದನು. ಇಂದ್ರನೇ ಮೊದಲಾದವರು ಬಂದುದನ್ನು ಕಂಡು ಧೊರೆಯು ಕೂಡಲೇ ಎದ್ದು ಕ್ರಮವಾಗಿ ಅವರನ್ನೆಲ್ಲರನ್ನೂ ನಮಸ್ಕರಿಸಿ ಆಸನವೇ ಮೊದಲಾದವೆಲ್ಲವನ್ನೂ ಕೊಟ್ಟು ಸತ್ಕರಿಸಿದನು. ಅವನು ಇಂದ್ರಾದಿಗಳಿಗೆ ಕ್ರಮವಾಗಿ ಪೂಜಿಸಿ ತನ್ನ ರಾಜ್ಯ ಬಂಡಾರ, ವಾಹನ ಇವೆಲ್ಲವನ್ನೂ ಸಮರ್ಪಿಸಿ ಅರಿಕೆಮಾಡಿಕೊಂಡನು. ||೮೦-೮೧||

ಅಲ್ಲದೇ ರಾಜನು ತನ್ನ ಪುತ್ರರು, ಪತ್ನೀ ಮುಂತಾದ ಎಲ್ಲಾ ತನಗೆ ಸಂಬಂಧಪಟ್ಟವರನ್ನೂ ತನ್ನನ್ನೂ ಅವರಿಗೆ ಸಮರ್ಪಿಸಿ ವರದಿಮಾಡಿಕೊಂಡನು. ||೮೩||

ರಾಜನ ಶ್ರೇಷ್ಠವಾದ ದಾಕ್ಷಿಣ್ಯದ ಈ ನಡೆವಳಿಕೆಯನ್ನು ನೋಡಿ ಇಂದ್ರ ಮೊದಲಾದ ಈ ದೇವತೆಗಳು ಆ ಕಾಲಕ್ಕೆ ಯೋಗ್ಯವಾದ ಮಂಗಳಕರವಾದ ಈ ಮಾತನ್ನು ಅವನನ್ನು ಕುರಿತು ಹೇಳಿದರು. ||೮೪||

ಧನ್ಯೋಽಸಿ ನೃಪತಿಶ್ರೇಷ್ಠ ಯಸ್ಯ ತೇ ಭಕ್ತಿರೀದೃಶೀ ।
ಶ್ರೀಗುರೌ ದುರ್ಲಭಾ ಲೋಕೇ ಕಥಂ ಹಾಸ್ಯತಿ ತೇ ಪ್ರಿಯಂ ॥೮೫॥

ಅನಯೈವ ಹಿ ಭಕ್ತ್ಯಾ ತೇ ಸರ್ವಂ ಸಿಧ್ಯೇತ್ ಸಮೀಹಿತಂ ।
ರಾಜನ್ನಿಷ್ಟಂ ಸಾಧಯಸ್ವ ಸಾಧಯಾಮೋ ವಯಂ ದಿವಂ ॥೮೬॥

ಇತ್ಯುಕ್ತ್ವಾಽಂತರ್ಹಿತಾ ದೇವಾಃ ಶಕ್ರಮುಖ್ಯಾಸ್ತತಃ ಪರಂ ।
ರಾಜಾ ಪ್ರಯಾತೋ ನಗರಂ ಗುರುಣಾ ಸಂಪ್ರಚೋದಿತಃ ॥೮೭॥

ಇತಿ ಶ್ರೀತ್ರಿಪುರಾರಹಸ್ಯೇ ಮಾಹಾತ್ಮ್ಯಖಂಡೇ ಕಾಮೋಪಾಖ್ಯಾನೇ ವಿಂಶೋಽಧ್ಯಾಯಃ

ಎಲೈ ರಾಜಶ್ರೇಷ್ಠನೇ, ಇಂತಹ ಗುರುಭಕ್ತಿಯನ್ನು ತೋರಿಸಿದ ನೀನೇ ಧನ್ಯನು. ಶ್ರೀಗುರುವಿನಲ್ಲಿ ನೀನು ತೋರಿಸಿದಂತಹ ಭಕ್ತಿಯನ್ನು ಲೋಕದಲ್ಲಿ ಇನ್ನೆಲ್ಲಿಯೂ ಕಾಣಲಾರೆವು. ಆದ್ದರಿಂದಲೇ ನಿನ್ನನ್ನು ಶ್ರೇಯಸ್ಸು ಯಾವಾಗಲೂ ಬಿಡಲಾರದು. ॥೮೫॥

ಎಲೈ ದೊರೆಯೇ, ಇಂತಹ ನಿನ್ನ ಗುರುಭಕ್ತಿಯಿಂದಲೇ ನಿನ್ನ ಇಷ್ಟಾರ್ಥಗಳೆಲ್ಲವೂ ಸಿದ್ಧಿಸುವುವು. ಮತ್ತು ಹೀಗೆಯೇ ನಿನ್ನ ಇಷ್ಟಾರ್ಥಗಳೆಲ್ಲವೂ ಸಿದ್ಧಿಸಲಿ. ಎಂದು ಹಾರೈಸುವೆವು. ನಾವಿನ್ನು ಸ್ವರ್ಗವನ್ನು ಕುರಿತು ತೆರಳುವೆವು. ॥೮೬॥

ಹೀಗೆ ಹೇಳಿ ಇಂದ್ರನೇ ಮೊದಲಾದ ದೇವತೆಗಳು ಅಂತರ್ಧಾನವನ್ನು ಹೊಂದಿದರು. ಅನಂತರ ಗುರುವಿನಿಂದ ಪ್ರೇರಿಸಲ್ಪಟ್ಟ ದೊರೆಯು ನಗರವನ್ನು ಪ್ರವೇಶಿಸಿದನು. ॥೮೭॥

ಇಲ್ಲಿಗೆ ಶ್ರೀತ್ರಿಪುರಾರಹಸ್ಯದಲ್ಲಿ ಮಾಹಾತ್ಮ್ಯಖಂಡದಲ್ಲಿ ಕಾಮೋಪಾಖ್ಯಾನದಲ್ಲಿ ಇಪ್ಪತ್ತನೆಯ ಅಧ್ಯಾಯವು ಮುಗಿಯಿತು.

ಕರ್ಣಾಟಾಧಿಪತಿ ಶ್ರೀಮಜ್ಜಯಚಾಮೇಂದ್ರ ಶಾಸನಾತ್ ।
ತ್ರಿಪುರಾರಹಸ್ಯಾರ್ಥಾನುವಾದಂ ಕನ್ನಡಭಾಷಯಾ ॥
ಸುಬ್ಬಮ್ಮಾಂಬಾ ದೇವಯಜ್ವ ತನಯಃ ಚಂದ್ರಶೇಖರಃ ।
ಜನಾನಾಮುಪಕಾರಾಯ ರಚಯಾಮಾಸ ಸಾದರಂ ॥
ವಾಣೀಸೇವಾಂ ರಾಜಸೇವಾಂ ಜನಸೇವಾಂ ಮುದಾ ಕೃತಾಂ ।
ಸ್ವೀಕೃತ್ಯ ತ್ರಿಪುರಾ ಪಾತು ಸಾಂಬೋ ರಾಜಾ ಚ ಭಾರತೀ ॥